ನಾಗವರ್ಮ ವಿರಚಿತ

ಕರ್ಣಾಟಕ ಕಾದಂಬರಿ

ಸಂಪಾದಕರು
ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

ಉಷಾ ಸಾಹಿತ್ಯ ಮಾಲೆ
ಮೈಸೂರು-೧

ನಾಗವರ್ಮ ವಿರಚಿತ

ಕರ್ಣಾಟಕ ಕಾದಂಬರಿ

ಸಂಪಾದಕರು

ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

ಉಷಾ ಸಾಹಿತ್ಯ ಮಾಲೆ
ಮೈಸೂರು-೧

Karnataka Kadambari, of Nagavarma Edited by Sri N. Anantha Rangachar, M.A., B.T. Published by Usha Sahitya Male, Mysore. Page 456+17. First edition 1973 Price Rs. 20.00

ಮೊದಲ ಮುದ್ರಣ ೧೯೭೩

ಬೆಲೆ : ರೂ. ೨೦.೦೦

ಮುದ್ರಕರು
ಆರ್. ಎನ್. ಹಬ್ಬು
ಉಷಾ ಪ್ರೆಸ್, ಮೈಸೂರು-೧

ಪ್ರಕಾಶಕರು
ಹೆಚ್. ಆರ್. ರಮೇಶ್
ಉಷಾ ಸಾಹಿತ್ಯ ಮಾಲೆ, ಮೈಸೂರು-೧

ಪೀಠಿಕೆ

ನಾಗವರ್ಮ ಕವಿಕೃತ ' ಕರ್ಣಾಟಕ ಕಾದಂಬರಿ 'ಯು ಸಂಸ್ಕೃತ ಭಾಷೆಯಲ್ಲಿ ಮಹಾಕವಿ ಬಾಣಭಟ್ಟನಿಂದ ರಚಿತವಾದ ' ಕಾದಂಬರಿ 'ಯ ಅನುವಾದವೆಂದೇ ಹೇಳಬಹುದು. ಕನ್ನಡ ಕವಿಯು ಸಂಸ್ಕೃತ ಗ್ರಂಥಕಾರರನ್ನು ಬಹುಮಟ್ಟಿಗೆ ಅನುಸರಿಸಿರುವುದರಿಂದ ಮೂಲಕವಿ ಮತ್ತು ಕೃತಿಗಳ ಪರಿಚಯ ಹೆಚ್ಚು ಉಪಯೋಗವಾಗಬಹುದು.

ಬಾಣನು ಸಂಸ್ಕೃತ ಸಾಹಿತ್ಯದಲ್ಲಿ ಬಹು ಪ್ರಮುಖಸ್ಥಾನವನ್ನಾಕ್ರಮಿಸಿದ್ದಾನೆ. ಅವನಿಂದ ರಚಿತವಾದ ಕೃತಿಗಳು ಬಹಳ ವಿರಳವಾದ ಸಂಸ್ಕೃತ ಗದ್ಯಗ್ರಂಥಗಳಲ್ಲಿ ಶ್ರೇಷ್ಠಸ್ಥಾನವನ್ನು ಪಡೆದಿವೆ. ಇತರ ಸಂಸ್ಕೃತ ಕವಿಗಳಂತಲ್ಲದೆ ಬಾಣನು ತನ್ನ ಗ್ರಂಥಗಳ (' ಕಾದಂಬರಿ ಮತ್ತು ಹರ್ಷಚರಿತೆ 'ಯ) ಪ್ರಾರಂಭದಲ್ಲಿ ಸ್ವವಿಷಯವನ್ನು ಬಹು ವಿಸ್ತಾರವಾಗಿಯೇ ವರ್ಣಿಸಿದ್ದಾನೆ. ಅದರಿಂದ ಕವಿಯ ಸರ್ವತೋಮುಖವಾದ ವ್ಯಕ್ತಿತ್ವ ಪರಿಚಯಕ್ಕೆ ಸಹಾಯಕವಾಗಿದೆ.

ಅವನು ಪ್ರಖ್ಯಾತವಾದ ವಾತ್ಸ್ಯಾಯನವಂಶದಲ್ಲಿ ಹುಟ್ಟಿದವನು. ಆ ವಂಶದಲ್ಲಿ ಕುಬೇರನೆಂಬ ಬ್ರಾಹ್ಮಣ ಶ್ರೇಷ್ಠನೊಬ್ಬನಿದ್ದನು. ಅವನು ತನ್ನ ಗುಣ ವೈಶಿಷ್ಟ್ಯದಿಂದಲೂ ಪಾಂಡಿತ್ಯದಿಂದಲೂ ಬ್ರಹ್ಮನ ಅವತಾರದಂತಿದ್ದನು. ಅವನ ಮುಖದಲ್ಲಿ ಸಾಕ್ಷಾತ್ ಸರಸ್ವತಿಯೇ ನೆಲಸಿದ್ದಳು. ಅವನ ಮನೆಯಲ್ಲಿದ್ದ ಶುಕಸಾರಿಕೆಗಳೂ ಶುದ್ಧವಾದ ವೇದಮಂತ್ರೋಚ್ಚಾರಣೆಗಳನ್ನು ಮಾಡುತ್ತ ವಿದ್ಯಾರ್ಥಿಗಳ ತಪ್ಪನ್ನೂ ತಿದ್ದುತ್ತಿದ್ದವು. ಅವನಿಗೆ ನಾಲ್ಕುಜನ ಮಕ್ಕಳು. ಅವರಲ್ಲಿ ಕಿರಿಯವನಾದ ಪಾಶುಪತನಿಗೆ ಅರ್ಥಪತಿಯೆಂಬ ತೇಜೋಮಯನಾದ ಮಗನು ಜನಿಸಿದನು. ಅವನು ಅನೇಕರಿಗೆ ವಿದ್ಯಾವ್ಯಾಸಂಗ ಮಾಡಿಸಿದನು. ಅವನಿಗೆ ವಿದ್ವಾಂಸರಾದ ಹನ್ನೊಂದುಜನ ಮಕ್ಕಳು ಹುಟ್ಟಿದರು. ಎಂಟನೆಯವನಾದ ಚಿತ್ರಭಾನುವಿಗೆ ಸರಸ್ವತಿಯೇ ಬಂದು ಶುಶ್ರೂಷೆ ಮಾಡುತ್ತಿದ್ದಳು. ಆತನ ಹೆಂಡತಿ ರಾಜದೇವಿಯೆಂಬ ಸಾಧ್ವೀಮಣಿ. ಈ ದಂಪತಿಗಳ ಒಬ್ಬನೇ ಮಗ ಬಾಣ. ಬಾಣನಿಗೆ ತನ್ನ ವಂಶಕೀರ್ತನೆಮಾಡುವುದು ಬಹು ಹೆಮ್ಮೆಯ ವಿಷಯ. ಬಾಣನ ವಂಶಸ್ಥರು ಶೋಣಾನದಿಯ ದಡದ ಮೇಲಿದ್ದ ಪ್ರೀತಿಕೂಟವೆಂಬ ಸ್ಥಳದಲ್ಲಿ ವಾಸಮಾಡುತ್ತಿದ್ದರು. ಇದು ಶ್ರೀಹರ್ಷನ ರಾಜ್ಯವಾದ ಶ್ರೀಕಂಠಕ್ಕೆ ಸಮೀಪದಲ್ಲಿದ್ದಿತು.

ಬಾಣನು ಹುಟ್ಟಿದ ತಕ್ಷಣವೇ ಅವನ ತಾಯಿ ತೀರಿಕೊಂಡಳು. ಅವನ ತಂದೆಯ ವಿಶೇಷ ಲಾಲನೆ ಪಾಲನೆಗಳಿಂದಲೇ ಅವನು ಬೆಳೆದನು. ಹದಿನಾಲ್ಕಾಗುವಷ್ಟರಲ್ಲಿ ತಂದೆಯೂ ಕಾಲಾಧೀನನಾದನು. ಬಾಣನಿಗೆ ಜೀವನ ನಿರ್ವಹಣಕ್ಕೆ ಸಾಕಾದಷ್ಟು ಪಿತ್ರಾರ್ಜಿತವಾದ ಆಸ್ತಿಯಿತ್ತು. ಸ್ವಭಾವತಃ ಚಂಚಲಚಿತ್ತನೂ ಮಾತುಗಾರನೂ

ಆದ ಅವನಿಗೆ ತನ್ನೂರಿನಲ್ಲಿರಲು ಸಾಧ್ಯವಾಗಲಿಲ್ಲ. ದೇಶಸಂಚಾರಕ್ಕೆ ಹೊರಟನು. ನಾನಾ ದೇಶಗಳಲ್ಲಿ ಬಹುಕಾಲ ಸಂಚಾರಮಾಡಿ ಅನೇಕ ಸ್ನೇಹಿತರನ್ನು ಸಂಪಾದಿಸಿದನು. ಅವರ ಸಹಾಯದಿಂದ ವಿವಿಧ ಕ್ಷೇತ್ರಗಳಲ್ಲಿ ಭಾಗವಹಿಸಿದನು. ಅವನ ಲಘು ಜೀವನವನ್ನು ನೋಡಿ ಜನರು ಅವನನ್ನು ಭುಜಂಗನೆಂದು ಕರೆದರು. ವಾಸ್ತವವಾಗಿ ಬಾಣನು ಕೀಳುಮಟ್ಟಕ್ಕಿಳದಿರಲಿಲ್ಲ. ಸಂಚಾರದಿಂದ ಅವನ ಲೋಕಾನುಭವವೂ ಪಾಂಡಿತ್ಯವೂ ವಿಸ್ತಾರವಾಗಿತ್ತು. ಜನಾಭಿಪ್ರಾಯದಂತೆ ಸ್ವಲ್ಪ ತಿರಸ್ಕಾರಬುದ್ಧಿಯಿಂದ ಕೂಡಿಚ ಹರ್ಷವರ್ಧನನು ಇವನನ್ನು ಕರೆಸಿಕೊಂಡು ಅವನ ಪ್ರತ್ಯಕ್ಷ ಪರಿಚಯದಿಂದ ಅವನಲ್ಲಿ ಪೂಜ್ಯ ಬುದ್ಧಿಯನ್ನು ಬೆಳೆಸಿಕೊಂಡು ತನ್ನ ಆಸ್ಥಾನ ಕವಿಯನ್ನಾಗಿಸಿದನು. ಇದರಿಂದ ಜನರಲ್ಲಿ ಅವನ ವಿಷಯವಾಗಿದ್ದ ಅಪಖ್ಯಾತಿ ಮಾಯವಾಗಿ ಗೌರವವುಂಟಾಯಿತು. ಬಾಣನು ತನ್ನ ಕೃತಜ್ಞತೆಯ ಪ್ರಕಟನಕ್ಕಾಗಿ 'ಹರ್ಷ ಚರಿತೆ' ಯನ್ನು ರಚಿಸಿದನು. ಬಾಣನ ಹೆಂಡತಿಯ ವಿಷಯವಾಗಲಿ ಅವನ ಜೀವನದ ಅಪರ ಭಾಗದ ವಿಷಯವಾಗಲಿ ತಿಳಿಯದು.

ಬಾಣನು ಕ್ರಿ.ಶ. ೬೦೬ ರಿಂದ ೬೪೮ ರವರೆಗೆ ಆಳಿದ ಹರ್ಷವರ್ಧನನ ಕಾಲದವನಾದುದರಿಂದ ಅವನು ೬ನೆಯ ಶತಮಾನದ ಉತ್ತರಾರ್ಧದಲ್ಲಿಯೋ ೭ನೆಯ ಶತಮಾನದ ಪೂರ್ವಭಾಗದಲ್ಲಿಯೋ ಇದ್ದಿರಬೇಕು. ಬಾಣನು 'ಹರ್ಷ ಚರಿತೆ' ಮತ್ತು 'ಕಾದಂಬರಿ' ಎಂಬ ಎರಡು ಗ್ರಂಥಗಳನ್ನು ರಚಿಸಿರುವುದು ನಿರ್ವಿವಾದ. 'ಮುಕುಟ ತಾಡಿತ', 'ಪಾರ್ವತೀ ಪರಿಣಯ' ಮತ್ತು 'ಚಂಡೀಶತಕ'ಗಳು ಆತನವೇ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. 'ಹರ್ಷಚರಿತ'ದ ಎಂಟು ಆಶ್ವಾಸಗಳಲ್ಲಿ ಸ್ಥಾಣೇಶ್ವರದ ಪುಷ್ಪಭೂತಿ, ಪ್ರಭಾಕರವರ್ಧನ ಮತ್ತು ಹರ್ಷವರ್ಧನರ ಚರಿತೆಗಳು ರಾಜಶ್ರೀಯ ಸಂನ್ಯಾಸ ಸ್ವೀಕಾರಾಂತದವರೆಗೆ ವರ್ಣಿತವಾಗಿದೆ. ಇದರ ವಸ್ತು ಐತಿಹಾಸಿಕ. ಸಂಸ್ಕೃತ ಆಲಂಕಾರಿಕರ ಮತದಂತೆ ಇದು ಒಂದು ಆಖ್ಯಾಯಿಕೆ.

ಬಾಣನ ಮತ್ತೊಂದು ಕೃತಿಯಾದ ಕಾದಂಬರಿಯ ವಸ್ತು ಕಲ್ಪಿತ, ಇದು ಒಂದು ಕಥೆ. ಇದಕ್ಕೆ ಪೈಶಾಚಿಭಾಷೆಯಲ್ಲಿ ಗುಣಾಢ್ಯನಿಂದ ರಚಿತವಾಗಿದ್ದ ಕಥೆ ಆಧಾರ. ಕವಿಯು ಆ ವಸ್ತುವನ್ನು ಸ್ವೀಕರಿಸಿ ಅನೇಕ ಮಾರ್ಪಾಟುಗಳನ್ನು ಮಾಡಿಕೊಂಡು ಅಲ್ಲಿಯ ಪಾತ್ರಗಳ ಹೆಸರನ್ನೆಲ್ಲಾ ಬದಲಾಯಿಸಿ ತನ್ನ ಕಾಲಕ್ಕೆ ಹೊಂದುವಂತಹ ಅದ್ಭುತವಾದ 'ರೊಮಾನ್ಸ್' ಒಂದನ್ನು ರಚಿಸಿದ್ದಾನೆ. ಕಾದಂಬರಿಯು ಪೂರ್ವಾರ್ಧ ಉತ್ತರಾರ್ಧವೆಂಬ ಎರಡು ಭಾಗಗಳಾಗಿವೆ. ಪೂರ್ವಾರ್ಧವು ಕವಿಯಿಂದಲೇ ರಚಿತವಾದುದು. ಇದು ಕಾದಂಬರಿಯ ಪ್ರಾರಂಭ ಭಾಷಣವು ಮುಗಿಯುವುದರೊಳಗೆ ಸಮಾಪ್ತಿಯಾಗುತ್ತದೆ. ಇದನ್ನು ರಚಿಸಿ ಬಾಣನು ಕಾಲವಶನಾದನು. ಅವನು ನಿಲ್ಲಿಸಿದ್ದ ಮುಂದಿನ ಭಾಗವನ್ನು ಅವನ ಮಗನಾದ ಭೂಷಣಬಾಣನು ಮುಗಿಸಿದನು.

ಕಾದಂಬರಿಯ ಕಥೆಯು ಗಿಳಿ, ಜಾಬಾಲಿಋಷಿ, ಮಹಾಶ್ವೇತೆ ಮೊದಲಾದ

ವರಿಂದ ವಿವಿಧ ಘಟ್ಟಗಳಲ್ಲಿ ಬೆಳೆದುಬಂದಿದೆ. ಅದರ ಸಾರಾಂಶ ಹೀಗಿದೆ.

ಮಾಳವ ದೇಶದ ರಾಜಧಾನಿಯಾದ ವಿದಿಶಿಯೆಂಬ ಪಟ್ಟಣದಲ್ಲಿ ಶೂದ್ರಕನೆಂಬ ರಾಜನು ರಾಜ್ಯಭಾರ ಮಾಡುತ್ತಿದ್ದನು. ಒದು ದಿನ ಬೆಳಗ್ಗೆ ರಾಜನು ಒಡ್ಡೋಲಗದಲ್ಲಿದ್ದಾಗ ಬಹು ಸೌಂದರ್ಯವತಿಯಾದ ಚಂಡಾಲಕನ್ಯೆಯೊಬ್ಬಳು ಆಸ್ಥಾನವನ್ನು ಒಂದು ಪಂಜರಸ್ಥವಾದ ಗಿಳಿಯೊಡನೆ ಪ್ರವೇಶಿಸಿದಳು. ಅವಳ ರೂಪಲಾವಣ್ಯಾದಿಗಳಿಂದ ರಾಜನೇ ಮೊದಲಾಗಿ ಎಲ್ಲರೂ ದಿಗ್ಭ್ರಾಂತರಾದರು. ಚಂಡಾಲಕನ್ಯೆಯು ಸೂಕ್ತ ಮರ್ಯಾದಾಪೂರ್ವಕವಾಗಿ ಆ ಗಿಣಿಯು ಸರ್ವಶಾಸ್ತ್ರಜ್ಞನೆಂದೂ ಉತ್ತಮ ವಿಮರ್ಶಕನೆಂದೂ ರಾಜನಿಗೆ ಮಾತ್ರ ಯೋಗ್ಯವಾದ ಕಾಣಿಕೆಯೆಂದೂ ತಿಳಿಸಿ ಅವನಿಗೆ ಒಪ್ಪಿಸಿದಳು. ಗಿಣಿಯು ರಾಜನಿಗೆ ಜಯಶಬ್ದಪೂರ್ವಕವಾಗಿ ವಂದಿಸಿ ಒಂದು ಆರ್ಯೆಯ ಮೂಲಕ ಸ್ತೋತ್ರ ಮಾಡಿತು. ಸಂತುಷ್ಟನಾದ ರಾಜನು ಅದರ ವೃತ್ತಾಂತವನ್ನು ತಿಳಿಯಲು ಆಶಿಸಿದನು. ಸ್ನಾನ ಭೋಜನಾನಂತರ ಆ ಗಿಣಿ ತನ್ನ ಕಥೆಯನ್ನು ಹೇಳತೊಡಗಿತು.

ಗಿಣಿಯು ತಿಳಿಸಿದ ಆತ್ಮಕಥೆ:–ವಿಂಧ್ಯಪರ್ವತದ ಸಮೀಪದಲ್ಲಿ ದಂಡಕಾರಣ್ಯವಿದೆ—ಅಲ್ಲಿಯೇ ಅಗಸ್ತ್ಯಾಶ್ರಮವಿದೆ. ಅದರ ಪಕ್ಕದಲ್ಲಿಯೇ ಇರುವ ಪಂಪಾ ಸರೋವರದ ದಡದಲ್ಲಿ ಅದ್ಭುತವಾಗಿ ಬೆಳೆದ ಬೂರಗದ ಮರವೊಂದಿದೆ. ಅದರ ಪೊಟರೆಗಳಲ್ಲಿ ತೊಗಟೆಗಳಲ್ಲಿ ಕೊಂಬೆಗಳ ಇರುಂಬಿನಲ್ಲಿ ಗಿಣಿಗಳು ವಾಸಮಾಡುತ್ತಿದ್ದವು. ಅಂತಹ ಪೊಟರೆಯೊಂದರಲ್ಲಿ ಮುದುಕರಾದ ನನ್ನ ತಾಯಿ ತಂದೆಗಳು ವಾಸಮಾಡುತ್ತಿದ್ದರು. ಅವರಿಗೆ ನಾನೊಬ್ಬನೇ ಮಗ: ನಾನು ಹುಟ್ಟಿದ ತಕ್ಷಣ ನನ್ನ ತಾಯಿ ತೀರಿಕೊಂಡಳು. ನನ್ನ ತಂದೆಯು ನನ್ನನ್ನು ಅತಿ ಮಮತೆಯಿಂದ ಸಾಕಿದನು. ಹೀಗಿರುವಲ್ಲಿ ಒಂದುದಿನ ಕ್ರೂರವಾದ ಬೇಡಪಡೆಯೊಂದು ಪ್ರವೇಶಿಸಿತು. ಅವರಲ್ಲಿ ಒಬ್ಬ ಬೇಡನು ನಾವಿದ್ದ ಮರವನ್ನು ಹತ್ತಿ ಅಲ್ಲಿದ್ದ ಗಿಣಿಗಳನ್ನು ಕೊಂದು ಹಣ್ಣನ್ನು ಕಿತ್ತು ಹಾಕುವಂತೆ ಕೆಳಕ್ಕೆ ಎಸೆದನು. ಭಯಗ್ರಸ್ತನಾದ ನನ್ನ ತಂದೆಯ ಗರಿಯಲ್ಲಿ ಅವಿತುಕೊಂಡಿದ್ದ ನನ್ನೊಡನೆ ತಂದೆಯನ್ನು ಕೆಳಕ್ಕೆಸೆದನು. ದೈವವಶಾತ್ ನಾನು ಅವನಿಗೆ ಕಾಣದುದರಿಂದ ಬದುಕಿಕೊಂಡೆ. ನನಗೆ ವಿಶೇಷ ಬಾಯಾರಿಕೆಯೂ ನಿಶ್ಶಕ್ತಿಯೂ ಉಂಟಾಯಿತು. ಮುಗ್ಗರಿಸುತ್ತ ತೆವಳುತ್ತಿದ್ದೆ. ಮಧ್ಯಾಹ್ನವಾಯಿತು. ಅಗ ನನ್ನ ಅದೃಷ್ಟದಿಂದಲೋ ಏನೊ ಸಹಪಾಠಿಗಳೊಡನೆ ಸ್ನಾನಕ್ಕಾಗಿ ಹೋಗುತ್ತಿದ್ದ ಜಾಬಾಲಿ ಋಷಿಪುತ್ರನು ನನ್ನಲ್ಲಿ ಕನಿಕರಗೊಂಡು ಶುಶ್ರೂಷೆ ಮಾಡಿ ತನ್ನ ತಂದೆಯ ಆಶ್ರಮಕ್ಕೆ ಕರೆದೊಯ್ದನು. ಅಲ್ಲಿಯವರೆಲ್ಲರೂ ನನ್ನ ಸುತ್ತ ನಿಂತು ನೋಡುತ್ತಿರಲು ಜಾಬಾಲಿ ಋಷಿಯು ನನ್ನನ್ನು ನೋಡಿ ಇವನು ಪೂರ್ವಜನ್ಮದ ಅವಿನಯದ ಫಲವನ್ನು ಅನುಭವಿಸುತ್ತಿದ್ದಾನೆಂದು ಹೇಳಿ ಸುಮ್ಮನಾದರು. ಅಲ್ಲಿದ್ದ ಋಷಿಗಳು ಇವನ ವಿಷಯವನ್ನು ತಿಳಿಸಬೇಕೆಂದು ಜಾಬಾಲಿಗಳನ್ನು ಪ್ರಾರ್ಥಿಸಲು ರಾತ್ರಿ ಅವರು ಆ ಕಥೆಯನ್ನು ಹೇಳಲು ಪ್ರಾರಂಭಿಸಿದರು.

ಜಾಬಾಲಿ ಋಷಿಗಳು ಹೇಳಿದ ಕಥೆ: :—ಅವಂತೀದೇಶದ ರಾಜಧಾನಿಯಾದ ಉಜ್ಜಯನಿಯಲ್ಲಿ ತಾರಾಪೀಡನೆಂಬ ರಾಜನಿದ್ದನು. ಅವನಿಗೆ ವಿಲಾಸವತಿಯೆಂಬ ರಾಣಿಯೂ ಶುಕನಾಸನೆಂಬ ಮಂತ್ರಿಯೂ ಇದ್ದರು. ಅವರ ಸಹಾಯದಿಂದ ರಾಜನು ಧರ್ಮದಿಂದ ರಾಜ್ಯವಾಳುತ್ತಿದ್ದನು. ತಾರಾಪೀಡನಿಗೆ ಬಹುಕಾಲ ಮಕ್ಕಳಿರಲಿಲ್ಲ. ದೀರ್ಘವಾದ ವ್ರತಾಚಾರಣೆಯಿಂದಲೂ ಹಿರಿಯರ ಸೇವೆಯಿಂದಲೂ ಚಂದ್ರಾಪೀಡನೆಂಬ ಚಂದ್ರನ ಅನ್ವರ್ಥನಾಮದಿಂದ ಒಬ್ಬ ಮಗನು ಜನಿಸಿದನು. ಅಂದೇ ಶುಕನಾಸನಿಗೆ ವೈಶಂಪಾಯನೆಂಬ ಮಗನೂ ಉದಯಿಸಿದನು. ಇವರಿಬ್ಬರೂ ಬಾಲ್ಯದಿಂದ ಒಡಲೆರಡು ಅಸುವೊಂದೆಂಬಂತೆ ಬಹಳ ಅನ್ಯೋನ್ಯವಾಗಿ ಬೆಳೆದರು. ಯವನೋದ್ಭವವಾಯಿತು. ಅವರು ಸಕಲ ವಿದ್ಯಾಪಾರಂಗತರಾದರು. ರಾಜನು ಮಗನಿಗೆ ಯೌವ್ವರಾಜ್ಯಾಭಿಷೇಕವನ್ನು ಮಾಡಿ ಇಂದ್ರಾಯುಧವೆಂಬ ಸಮುದ್ರದಲ್ಲಿ ಹುಟ್ಟಿದ ಒಂದು ಕುದುರೆಯನ್ನು ಕೊಟ್ಟನು. ರಾಣಿಯು ಪತ್ರಲೇಖೆಯೆಂಬ ಕನ್ಯೆಯನ್ನು ಸೇವೆಗಾಗಿ ಕಳುಹಿಸಿದಳು. ಆಕೆ ಕುಮಾರನ ತಾಂಬೂಲಕರಂಕವಾಹಿನಿಯಾದಳು. ಕೆಲವು ಕಾಲವಾದ ಮೇಲೆ ಯುವರಾಜನು ಆ ಕಾಲದ ಸಂಪ್ರದಾಯದಂತೆ ವಿಜಯಯಾತ್ರೆಗೆ ಹೊರಟನು. ಅನೇಕ ದಿನ ಯಾತ್ರೆಯಲ್ಲಿ ಭಾಗವಹಿಸಿ ಇನ್ನೇನು ಮುಗಿಯಬೇಕು ಎನ್ನುವಷ್ಟರಲ್ಲಿ ಒಂದು ದಿನ ಚಂದ್ರಾಪೀಡನು ಕೈಲಾಸ ಪರ್ವತದ ತಪ್ಪಲಲ್ಲಿ ಬೀಡುಬಿಟ್ಟಿದ್ದಾಗ ಅಲ್ಲಿಯ ಪ್ರಕೃತಿ ಸೌಂದರ್ಯವನ್ನು ನೋಡಬೇಕೆಂದು ಎಂದೂ ಅಗಲದ ವೈಶಂಪಾಯನನ್ನು ಬಿಟ್ಟು ಹೊರಟನು. ಅನತಿದೂರದಲ್ಲಿಯೇ ಅತ್ಯದ್ಭುತವಾಗಿದ್ದ ಕಿನ್ನರ ಮಿಥನವೊಂದು ಕಣ್ಣಿಗೆ ಬಿದ್ದಿತು. ಅದರಿಂದ ಆಕರ್ಷಿತನಾಗಿ ಇಂದ್ರಾಯುಧವನ್ನೇರಿ ಅದರ ಹಿಂದೆ ಹೋದನು. ಆ ಕಿನ್ನರ ಮಿಥನವು ಅವನನ್ನು ಬಹುದೂರ ಕರೆದುಕೊಂಡು ಹೋಗಿ ಕೊನೆಗೆ ಮಾಯವಾಯಿತು. ಇವನ ಉತ್ಸಾಹದಲ್ಲಿ ಕಾಲ ದೂರಗಳ ಅರಿವೇ ಉಂಟಾಗಲಿಲ್ಲ. ಮಧ್ಯಾಹ್ನವಾಗಿದೆ. ಬಹುದೂರ ಬಂದಿದ್ದಾನೆ. ವಿಶೇಷ ದಣಿದಿದ್ದಾನೆ. ಕುದುರೆಯೂ ಬಳಲಿದೆ. ಪಕ್ಕದಲ್ಲಿ ಎಲ್ಲಾದರೂ ಜಲಾಶಯವಿದ್ದರೆ ದಣಿವಾರಿಸಿಕೊಳ್ಳಬಹುದೆಂದು ಹುಡುಕುತ್ತಿದ್ದಾಗ ಅಚ್ಛೋದ ಸರೋವರ ಕಾಣಿಸಿಕೊಂಡಿತು. ಅಲ್ಲಿ ಕುದುರೆಗೆ ನೀರು ಕುಡಿಸಿ ಮೇವುಹಾಕಿ ತಾನೂ ನೀರು ಕುಡಿದು ದಣಿವಾರಿಸಿಕೊಳ್ಳುತ್ತಿರುವಾಗ ಎಲ್ಲಿಂದಲೋ ಆ ನಿರ್ಜನಾರಣ್ಯದಲ್ಲಿ ಭುವನ ಮನೋಹರವಾದ ಗಾನವೊಂದು ಕೇಳಿಸಿತು. ಕುದುರೆಯೂ ತನ್ನ ಕತ್ತನ್ನು ಆ ಕಡೆಯೇ ತಿರುಗಿಸಿ ಆ ನಾದವನ್ನು ಕೇಳುತ್ತಿರಲು ಆ ಕುದುರೆಯು ಸೂಚಿಸಿದ ಮಾರ್ಗದಲ್ಲಿಯೇ ಮುಂದುವರಿಯಲು ಅಲ್ಲಿ ಒಂದು ಸಿದ್ಧಾಯತನವೂ ಅದರೊಳಗೆ ಸ್ವಚ್ಛ ಸ್ಫಟಿಕ ಚತುರ್ಮುಖ ಲಿಂಗವೂ ಅದರ ಮುಂದೆ ಬಹುಭಕ್ತಿಯಿಂದ ತನ್ನ ವೀಣೆಯನ್ನು ನುಡಿಸುತ್ತಿದ್ದ ನವ ಯವ್ವನಶಾಲಿಯೂ ಲಾವಣ್ಯಮಯಿಯೂ ಆದ ತಾಪಸಕುಮಾರಿಯೊರ್ವಳನ್ನು ಕಂಡನು. ಅವಳ ವೀಣಾವಾದನ ಮುಗಿದು ಇವನ ಕಡೆ ದೃಷ್ಟಿ ಪ್ರಸರಣವಾಗುವವರೆಗೆ ಕಾದಿದ್ದು ಅವಳ ಆದರಾತಿಥ್ಯ

ಗಳನ್ನು ಸ್ವೀಕರಿಸಿ ಸ್ವವೃತ್ತಾಂತವನ್ನು ತಿಳಿಸಿ ಆಕೆಯ ವೃತ್ತಾಂತವನ್ನು ಬಹು ನಮ್ರತೆಯಿಂದ ಕೇಳಿದನು. ಅವಳು ಬಹುದುಃಖಮಯವಾದ ತನ್ನ ವಿಷಯವನ್ನು ಅಶ್ರುಧಾರಾಪೂರ್ವಕ ಹೇಳತೊಡಗಿದಳು.

ಮಹಾಶ್ವೇತೆಯ ವೃತ್ತಾಂತ:—ನಾನು ಗಂಧರ್ವರಾಜನಾದ ಹಂಸ ಮತ್ತು ಅಪ್ಸರೆಯಾದ ಗೌರಿಯೆಂಬುವರ ಒಬ್ಬಳೇ ಮಗಳು. ತಂದೆತಾಯಿಗಳು ನನ್ನನ್ನು ಬಹುಪ್ರೀತಿಯಿಂದ ಸಾಕಿದರು. ಯವ್ವನ ಪ್ರಾಪ್ತಿಯಾದ ಮೇಲೆ ಒಂದು ದಿನ ನನ್ನ ತಾಯಿಯು ವಸಂತ ಸಮಯದಲ್ಲಿ ಸ್ನಾನಕ್ಕಾಗಿ ಅಚ್ಛೋದ ಸರಸ್ಸಿಗೆ ನನ್ನನ್ನು ಕರೆದುಕೊಂಡು ಹೋದಳು. ಅಲ್ಲಿ ಒಬ್ಬ ಸುಂದರ ತಾಪಸ ಕುಮಾರನನ್ನು ನೋಡಿ ಅವನ ಸೌಂದರ್ಯದಿಂದ ಮೋಹಪರವಶಳಾದೆನು. ನಮಸ್ಕಾರ ಮಾಡುವ ನೆಪದಲ್ಲಿ ಅವನ ಪಾದವನ್ನು ಮುಟ್ಟಲು ಅವನಿಗೂ ಇಂದ್ರಿಯ ಜಾರಿತು. ಪರಸ್ಪರ ಉಂಟಾದ ಅನುರಾಗದಿಂದ ಅವನು ತನ್ನ ಕಿವಿಯಲ್ಲಿದ್ದ ವನದೇವತೆಯ ಪ್ರಸಾದವಾಗಿ ಬಂದಿದ್ದ ಕುಸುಮಮಂಜರಿಯನ್ನು ನನ್ನ ಕಿವಿಯಲ್ಲಿ ಅಲಂಕಲರಿಸಲು ಪ್ರಯತ್ನಿಸಿದನು. ನನ್ನ ಕೆನ್ನೆಯ ಸ್ಪರ್ಶದಿಂದ ಮೋಹಾವಿಷ್ಟವಾದ ಅವನ ಕೈ ನಡಗಲು ಪ್ರಾರಂಭಿಸಿತು. ಅವನ ಕೈಯ್ಯಲ್ಲಿದ್ದ ಅಕ್ಷಮಾಲಿಕೆ ಜಾರಿ ಕೆಳಕ್ಕೆ ಬಿತ್ತು. ನಾನು ಅದನ್ನು ತೆಗೆದು ಕೊಂಡು ಧರಿಸಿ ಅವನ ಆಲಿಂಗನ ಸುಖವನ್ನು ಅನುಭವಿಸಿದಂತೆಯೇ ಆದೆನು. ಆದರೆ ಆ ಮುನಿಕುಮಾರನಿಗೆ ಮಾತ್ರ ಅದು ತಿಳಿಯಲಿಲ್ಲ. ಅವನ ಸ್ನೇಹಿತನಾದ ಕಪಿಂಜಲ ನಿಂದ ಎಚ್ಚರಿಸಲ್ಪಟ್ಟು ಅಕ್ಷಮಾಲೆಯನ್ನು ಕೊಡೆಂದು ಕೇಳಿದಾಗ ನಾನು ಅಕ್ಷಮಾಲೆಗೆ ಬದಲಾಗಿ ನನ್ನ ಹಾರವನ್ನು ಕೊಟ್ಟೆ. ಅವನು ಅದನ್ನು ಗಮನಿಸದೇ ತೆಗೆದುಕೊಂಡು ನನ್ನನ್ನೇ ನೋಡುತ್ತಾ ಹೊರಟುಹೋದನು.

ನಾನು ಬಹು ಅಸಮಾಧಾನದಿಂದ ಹಿಂತಿರುಗಿದೆ. ನನ್ನ ಸೇವಿಕೆಯಾದ ಮಕರಿಕೆ ಆತನ ಪ್ರೇಮಪತ್ರವನ್ನು ನನಗೆ ತಂದುಕೊಟ್ಟು ಅವನ ದುರವಸ್ಥೆಯನ್ನು ಹೃದಯವಿದ್ರಾವಕವಾಗುವ ಹಾಗೆ ತಿಳಿಸಿದಳು. ಸಾಯಂಕಾಲವಾದ ಮೇಲೆ ಆ ಮುನಿಕುಮಾರನ ಸ್ನೇಹಿತನಾದ ಕಪಿಂಜಲನು ಬಂದು ತನ್ನ ಸ್ನೇಹಿತನ ಮದನಾವಸ್ಥೆ ಯನ್ನು ವರ್ಣಿಸಿ ನಾನು ತಕ್ಷಣ ಬಂದು ಸ್ನೇಹಿತನ ಪ್ರಾಣವನ್ನುಳಿಸಬೇಕೆಂದು ಪ್ರಾರ್ಥಿಸಿದನು. ನಾನು ತಾಯಿಯನ್ನು ಕಣ್ಮರಸಿ ತರಳಿಕೆಯೊಡನೆ ಆ ಮುನಿಕುಮಾರ ನಿದ್ದಡೆಗೆ ಧಾವಿಸಿದೆನು. ದಾರಿಯಲ್ಲಿ ಅಪಶಕುನಗಳಾದುವು. ಎದೆಯೊಡೆಯಿತು. ಮುಂದೆ ನೋಡಲಾಗಿ ಕಪಿಂಜಲನು ಅಳುತ್ತಿದ್ದನು. ಅಲ್ಲಿಗೆ ಹೋಗುವಷ್ಟರಲ್ಲಿ 'ಎಲವೋ ಚಂದ್ರ-ಪಾಪಿ, ನೀನೂ ಪ್ರಿಯಸಮಾಗಮ ಕಾಲದಲ್ಲಿ ಸಾಯಿ' ಎಂಬ ಕಠೋರ ಧ್ವನಿಯು ಕೇಳಿಸಿತು. ಅಲ್ಲಿಗೆ ಹೋಗಿ ಸತ್ತುಬಿದ್ದಿದ್ದ ಪುಂಡರೀಕನ ಮೇಲೆ ಬಿದ್ದು ಅಳುತ್ತಾ ನಾನು ನಿರಾಶೆಯಿಂದ ಸಾಯಲು ಸಿದ್ಧಪಡಿಸಿಕೊಳ್ಳುತ್ತಿದ್ದಾಗ ಅಶರೀರವಾಣಿಯೊಂದು ಕೇಳಿಸಿತು. 'ಎಲೆ ವತ್ಸೆ ಮಹಾಶ್ವೇತೆ, ಸಾಯುವ ಯೋಚನೆ ಮಾಡಬೇಡ. ಪುನಃ ಇವನನ್ನು ಕೂಡುವೆ' ಎಂದು ಹೇಳಿ ಆ ದಿವ್ಯ ಶರೀರವು ಪುಂಡರೀ

ಕನ ಶರೀರವನ್ನು ಎತ್ತಿಕೊಂಡು ಹೋಯಿತು. 'ನನ್ನ ಸ್ನೇಹಿತನನ್ನು ಎಲ್ಲಿಗೊಯ್ಯುವೆ' ಎಂದು ಹೇಳುತ್ತಾ ಕಪಿಂಜಲನೂ ಅವನ ಹಿಂದೆಯೇ ಹೋದನು. ತರಳಿಕೆ ನನ್ನನ್ನು ಸಮಾಧಾನಪಡಿಸಿ ಸ್ನಾನಮಾಡಿಸಿದಳು. ನಾನು ಅವನ ಮೇಲಣ ಪ್ರೀತಿಯಿಂದ ಅವನ ಜಪಮಾಲೆ ವಲ್ಕಲಗಳನ್ನೂ ಧರಿಸಿ ಅವನ ವೇಷವನ್ನೇ ತೊಟ್ಟು ವ್ರತಾಚರಣೆ ಮಾಡುತ್ತ ಎಲ್ಲ ಬಂಧುವರ್ಗವನ್ನು ತೊರೆದು ಅವನ ಪುನರಾಗಮನವನ್ನೇ ನಿರೀಕ್ಷಿಸುತ್ತಿದ್ದೇನೆ ಎಂದು ಹೇಳಿ ತನ್ನ ಕತೆಯನ್ನು ಮುಗಿಸಿದಳು. ಆಗ ಚಂದ್ರಾಪೀಡನು 'ತರಳಿಕೆಯೆಲ್ಲಿ' ಎಂದು ಕೇಳಿದನು. ಮಹಾಶ್ವೇತೆಯು 'ನನಗೆ ಕಾದಂಬರಿಯೆಂಬ ಗೆಳತಿಯಿದ್ದಾಳೆ. ಅವಳು ಚಿತ್ರರಥ ಮತ್ತು ಮದಿರಾದೇವಿಯರ ಒಬ್ಬಳೇ ಮಗಳು. ನನ್ನ ಈ ದುರವಸ್ಥೆಯನ್ನು ನೋಡಿ ನಾನು ನನ್ನ ಪ್ರಿಯನನ್ನು ಪಡೆಯುವವರೆಗೆ ತಾನೂ ಮದುವೆಯಾಗುವುದಿಲ್ಲವೆಂದು ಹಟ ಹಿಡಿಯುತ್ತಿದ್ದಾಳೆ. ಅದರಿಂದ ಅವಳ ತಂದೆ ತಾಯಿಗಳು ದುಃಖಿತರಾಗಿದ್ದಾರೆ. ಅವರು ಹೇಳಿದಂತೆ ಕೇಳು ಎಂದು ಬುದ್ಧಿವಾದ ಹೇಳಲು ತರಳಿಕೆಯನ್ನು ಕಳುಹಿಸಿದ್ದೇನೆ ಎಂದಳು.

ಮುಂದಿನ ಕಥೆ ಜಾಬಾಲಿ ಋಷಿಯಿಂದ ಮುಂದುವರಿಸಲ್ಪಟ್ಟಿತು. ಮಾರನೆಯದಿನ ತರಳಿಕೆ ಹಿಂತಿರುಗಿ ಬಂದು ಕಾದಂಬರಿಯನ್ನು ಅವಳ ನಿರ್ಧಾರದಿಂದ ಕದಲಿಸಲಾಗಲಿಲ್ಲವೆಂದು ತಿಳಿಸಿದಳು. ಮಹಾಶ್ವೇತೆಯು ತಾನೇ ಅಲ್ಲಿಗೆ ಹೋಗಲು ನಿಶ್ಚಯಿಸಿ ಚಂದ್ರಾಪೀಡನನ್ನು ಅಲ್ಲಿಗೆ ಬರುವಂತೆ ವಿನಯದಿಂದ ಪ್ರಾರ್ಥಿಸಿಕೊಂಡಳು. ದಾಕ್ಷಿಣ್ಯಪರನಾದ ರಾಜಕುಮಾರನು ಅದಕ್ಕೆ ಒಪ್ಪಿ ಅವಳ ಹಿಂದೆಯೇ ಹೊರಟನು. ಹೇಮಕೂಟದಲ್ಲಿ ಚಂದ್ರಾಪೀಡನು ಕಾದಂಬರಿಯನ್ನು ಮೊದಲನೆಯಸಲ ಕಂಡ ತಕ್ಷಣವೇ ಅವರಿಗೆ ಪರಸ್ಪರ ಪ್ರೇಮಾಂಕುರವಾಯಿತು. ಮಹಾಶ್ವೇತೆಯ ಪ್ರೇರೇಪಣೆಯಮೇಲೆ ಕಾದಂಬರಿಯು ತನ್ನ ಆದರಾತಿಥ್ಯವನ್ನು ತೋರಿಸಿದಳು. ಅವಳ ತಂದೆ ತಾಯಿಗಳ ಬರವಿನಿಂದ ಪ್ರಥಮ ಸಂದರ್ಶನ ಕೊನೆಗೊಂಡಿತು. ಪುನಃ ರಾತ್ರಿ ಕಾದಂಬರಿ ಮತ್ತು ಚಂದ್ರಾಪೀಡರು ಉಪ್ಪರಿಗೆಯ ಮೇಲೆ ಸೇರಿ ಚಂದ್ರಿಕಾವಿಹಾರದಿಂದ ತಮ್ಮ ಪ್ರೇಮ ಪ್ರಪಂಚವನ್ನು ಅಭಿವೃದ್ಧಿಪಡಿಸಿಕೊಂಡರು. ಕಾದಂಬರಿಯು ಚಂದ್ರಾಪೀಡನಿಗೆ ಶೇಷವೆಂಬ ಮುತ್ತಿನ ಹಾರವನ್ನು ಕಳುಹಿಸಿದಳು. ಚಂದ್ರಾಪೀಡನು ಹೇಮಕೂಟದಲ್ಲಿ ಕಾದಂಬರಿಯೊಡನೆ ಕೆಲಕಾಲ ಸಂತೋಷವಾಗಿ ಕಳೆದು ಮಹಾಶ್ವೇತೆ ಮತ್ತು ಕಾದಂಬರಿಯರ ಅಪ್ಪಣೆ ಪಡೆದು ತನ್ನ ಊರಿಗೆ ಹೊರಟನು. ಅಚ್ಛೋದ ಸರೋವರದವರೆಗೆ ಬರುವಷ್ಟರಲ್ಲಿ ಅವನ ಸೈನ್ಯವು ಅಲ್ಲಿಗೆ ಬಂದಿತ್ತು. ರಾತ್ರಿ ಕಳೆದು ಬೆಳಗಾದ ಮೇಲೆ ಕೇಯೂರಕನೆಂಬುವನು ಚಂದ್ರಾಪೀಡನು ಮರೆತು ಬಂದಿದ್ದ ಶೇಷವೆಂಬ ಹಾರವನ್ನು ತಂದುಕೊಟ್ಟು ಕಾದಂಬರಿಯ ಮದನಾವಸ್ಥೆಯನ್ನು ವರ್ಣಿಸಿ ಅವಳ ಇಚ್ಛೆಯಂತೆ ಚಂದ್ರಾಪೀಡನು ಹೇಮಕೂಟಕ್ಕೆ ಬರಬೇಕೆಂದು ತಿಳಿಸಿದನು. ಚಂದ್ರಾಪೀಡನು ಪತ್ರಲೇಖೆಯೊಡನೆ ಅಲ್ಲಿಗೆ ಹೋಗಿ ಕೆಲವು ಕಾಲವಿದ್ದು ಅವಳಿಷ್ಟದಂತೆ ಪತ್ರಲೇಖೆಯನ್ನು ಅಲ್ಲಯೇ ಬಿಟ್ಟು ತನ್ನ ತಂದೆಯು ಕಳುಹಿಸಿದ ಆದೇಶದಂತೆ ಉಜ್ಜಯನಿಗೆ ಹೊರಡಲು ಕಾದಂಬರಿಯ

ಅಪ್ಪಣೆ ಪಡೆದು ಪತ್ರಲೇಖೆಯನ್ನು ಕರೆತರಲು ಮೇಘನಾದನೆಂಬುವನಿಗೆ ಹೇಳಿ ಸೈನ್ಯವನ್ನು ಕರೆತರಲು ವೈಶಂಪಾಯನನಿಗೆ ತಿಳಿಸಿ ತಾನು ಉಜ್ಜಯನಿಗೆ ಹೊರಟನು.

ಮಗನನ್ನು ನೋಡಿ ತಾಯಿ ತಂದೆಗಳು ಸಂತೋಷಪಟ್ಟರು. ಚಂದ್ರಾಪೀಡನು ಮಾತ್ರ ಸದಾ ಕಾದಂಬರಿಯ ವಿಷಯವಾಗಿ ಚಿಂತಿಸುತ್ತಿದ್ದನು. ಕೆಲವು ದಿನಗಳಾದ ಮೇಲೆ ಪತ್ರಲೇಖೆಯು ಬಂದು ಕಾದಂಬರಿಯ ವಿರಹವೇದನೆಯನ್ನು ತಿಳಿಸಲು ಚಂದ್ರಾಪೀಡನು ಮತ್ತಷ್ಟು ಚಿಂತಾಕ್ರಾಂತನಾದನು. ಇಲ್ಲಿಗೆ ಬಾಣನು ಬರೆದ ಕಥೆಯು ನಿಲ್ಲುತ್ತದೆ ಮುಂದಿನ ಕಥೆಯನ್ನು ಅವನ ಮಗನಾದ ಭೂಷಣ ಭಟ್ಟ ಬಾಣನು ಮುಂದುವರಿಸಿದ್ದಾನೆ.

ಕಾದಂಬರೀ–ಉತ್ತರಭಾಗ :— ಪತ್ರಲೇಖೆ ಮತ್ತು ಕೇಯೂರಕರಿಂದ ಕಾದಂಬರಿಯ ಸ್ಥಿತಿಯನ್ನು ತಿಳಿದ ಚಂದ್ರಾಪೀಡನು ತಾನೇ ಅಲ್ಲಿಗೆ ಬರುವುದಾಗಿ ತಿಳಿಸಲು ಅವರಿಬ್ಬರನ್ನೂ ಅಲ್ಲಿಗೆ ಕಳುಹಿಸಿದನು. ಅನೇಕ ದಿನಗಳು ಕಳೆದುವು. ವೈಶಂಪಾಯನನ ವಿಷಯವೇ ತಿಳಿಯಲಿಲ್ಲ. ಹಿಂತಿರುಗಿ ಬಂದ ಅವನ ಸೈನಿಕರು ವೈಶಂಪಾಯನನ ಸ್ಥಿತಿ ವಿಚಿತ್ರವಾಗಿದೆಯೆಂದೂ ಅವನು ಅಲ್ಲಿಂದ ಬರಲು ಇಷ್ಟಪಡುವುದಿಲ್ಲವೆಂದೂ ತಿಳಿಸಿದರು. ಚಂದ್ರಾಪೀಡನು ಅವನನ್ನು ಕರೆದುತರಲು ತಾನೇ ತಂದೆತಾಯಿಗಳ ಅಪ್ಪಣೆ ಪಡೆದು ಹೊರಟನು.

ಚಂದ್ರಾಪೀಡನು ಇಂದ್ರಾಯುಧವನ್ನೇರಿ ಮಹಾಶ್ವೇತೆಯ ಆಶ್ರಮಕ್ಕೆ ಬಂದು ಅಳುತ್ತಿದ್ದ ಅವಳನ್ನು ನೋಡಿ ಕಾದಂಬರಿಗೇನಾದರೂ ವಿಪತ್ತೊದಗಿರಬೇಕೆಂದು ಬೆದರಿ ಅವಳನ್ನು ಕುರಿತು ಅದರ ಕಾರಣವನ್ನು ಕೇಳಿದನು. ಅವಳು ಈ ರೀತಿ ತಿಳಿಸಿದಳು :–ನೀನು ಉಜ್ಜಯಿನಿಗೆ ಹೋದಮೇಲೆ ಬ್ರಾಹ್ಮಣಯುವಕನೊರ್ವನು ನನ್ನಲ್ಲಿಗೆ ಬಂದು ಮೋಹಗೊಂಡು ಒಂದು ಬೆಳದಿಂಗಳಿನ ರಾತ್ರಿ ಗಂಭೀರವಲ್ಲದ ರೀತಿಯಲ್ಲಿ ಗಿಳಿಯಂತೆ ಗಳಪಲು ಮೊದಲು ಮಾಡಿದನು. ನಾನು ನನ್ನ ಪಾತಿವ್ರತ್ಯ ಭಂಗವಾಗಬಹುದೆಂದು ಹೆದರಿ 'ನೀನು ಗಿಣಿಯಾಗಿ ಹುಟ್ಟು' ಎಂದು ಶಪಿಸಿದೆನು. ಕೂಡಲೆ ಅವನು ಸತ್ತುಬಿದ್ದನು. ಆ ಮೇಲೆ ಅವನು ನಿನ್ನ ಸ್ನೇಹಿತನೆಂದು ತಿಳಿಯಿತು' ಎಂದು ಅವಳು ಹೇಳಿದುದನ್ನು ಕೇಳಿದ ಕೂಡಲೆ ಚಂದ್ರಾಪೀಡನು ನೆಲಕ್ಕುರುಳಿದನು. ಮಹಾಶ್ವೇತೆಯು ಮೂರ್ಛೆ ಹೊಂದಿದಳು. ಆ ವೇಳೆಗೆ ಚಂದ್ರಾಪೀಡನನ್ನು ಹುಡುಕಿಕೊಂಡು ಅಲ್ಲಿಗೆ ಬಂದಿದ್ದ ಕಾದಂಬರಿ ಮತ್ತು ಪತ್ರಲೇಖೆಯರೂ ಮೂರ್ಛೆ ಹೊಂದಿದರು. ಎಚ್ಚೆತ್ತಮೇಲೆ ಕಾದಂಬರಿಯು ಪ್ರಾಣತ್ಯಾಗಮಾಡಿಕೊಳ್ಳಲು ಸಿದ್ಧಳಾಗುತ್ತಿದ್ದಾಗ ದಿವ್ಯಧ್ವನಿಯೊಂದು ಅವರ ಪುನಸ್ಸಮಾಗಮವನ್ನು ಸೂಚಿಸಿ ಚಂದ್ರಾಪೀಡನ ಶರೀರವನ್ನು ಸಂರಕ್ಷಿಸಬೇಕೆಂದು ಆಜ್ಞೆಮಾಡಿತು. ಬಳಿಕ ಪತ್ರಲೇಖೆ ಎದ್ದು ಇಂದ್ರಾಯುಧದೊಡನೆ ಅಚ್ಛೋದಸರೋವರದಲ್ಲಿ ಮುಳುಗಿದಳು. ಅಲ್ಲಿಂದ ಕಪಿಂಜಲನೆದ್ದು ಬಂದು ಮಹಾಶ್ವೇತೆಗೆ ಹೀಗೆ ತಿಳಿಸಿದನು:–' ಪುಂಡರೀಕನು ತಾನು ವಿರಹಾವಸ್ಥೆಯಲ್ಲಿ ನರಳುತ್ತಿದ್ದಾಗ ಹೆಮ್ಮೆಯಿಂದ ನಗುತ್ತಿದ್ದಂತೆ ಕಂಡ ಚಂದ್ರನನ್ನು ನೋಡಿ 'ನೀನು

ಎರಡುಸಲ ಮನುಷ್ಯನಾಗಿಹುಟ್ಟು' ಎಂದು ಶಪಿಸಿದನು. ಕುಪಿತನಾದ ಚಂದ್ರನು 'ನೀನೂ ಆ ಸುಖದುಃಖದಲ್ಲಿ ಭಾಗಿಯಾಗು' ಎಂದು ಪ್ರತಿಶಾಪ ಕೊಟ್ಟನು. ಅನಂತರ ಅವನೇ ಪುಂಡರೀಕನ ಶರೀರವನ್ನೂ ಚಂದ್ರಲೋಕದಲ್ಲಿ ರಕ್ಷಿಸುತ್ತಿದ್ದಾನೆ. ಹಾಗೆಯೇ ಚಂದ್ರನು ನನ್ನನ್ನು ಕುರಿತು ನೀನು ಪುಂಡರೀಕನ ತಂದೆಯಾದ ಶ್ವೇತ ಕೇತುವ್ರತಿಯಲ್ಲಿಗೆ ಹೋಗಿ ಮಗನ ಪ್ರಾಣರಕ್ಷಣೆಗಾಗಿ ಆಯುಷ್ಕಾಮದಾನ ವ್ರತ ಗಳನ್ನು ಆಚರಿಸುವಂತೆ ತಿಳಿಸುವ ಹಾಗೆ ಹೇಳಿ ಕಳುಹಿಸಿದನು. ನಾನು ಬರುವಾಗ ದಾರಿಯಲ್ಲಿ ಒಬ್ಬ ವೈಮಾನಿಕ ದೇವನಿಗೆ ಎಚ್ಚರಿಕೆಯಿಲ್ಲದೆ ಕಾಲನ್ನು ತಗುಲಿಸಲು ಅವನು ಕೋಪಗೊಂಡು 'ವಾಹವಾಗಿ ಹುಟ್ಟು' ಎಂದು ಶಪಿಸಿದನು. ಕುದುರೆ ಯಾದರೂ ಮಿತ್ರನ ಪಕ್ಕದಲ್ಲಿಯೇ ಇರುವಂತೆ ಅನುಗ್ರಹಿಸೆಂದು ನಾನು ಅವನನ್ನು ಕೇಳಿಕೊಳ್ಳಲು 'ನೀನು ಚಂದ್ರಾಪೀಡನಿಗೆ ಇಂದ್ರಾಯುಧವೆಂಬ ಕುದುರೆಯಾಗಿ ಸೇರುತ್ತೀಯೆ' ಎಂದು ಹೇಳಿದನು. ಅದರಂತೆಯೇ ಅವನ ಕುದುರೆಯಾದೆ, ಅವನಲ್ಲಿದ್ದೆ. ಆ ಜನ್ಮ ಕಳೆಯಿತು. ಈಗ ಶ್ವೇತಕೇತುವ್ರತಿಯಲ್ಲಿಗೆ ಹೋಗುತ್ತೇನೆ ಎಂದು ಹೇಳಿ ಹೊರಟು ಹೋದನು. ಆ ವೇಳೆಗೆ ಮಕ್ಕಳನ್ನು ಹುಡುಕಿಕೊಂಡು ತಾರಾಪೀಡ ಶುಕ ನಾಸರು ಪರಿವಾರದೊಡನೆ ಅಲ್ಲಿಗೆ ಬಂದರು. ಹೀಗೆ ಪುಂಡರೀಕನು ಶ್ವೇತಕೇತುವಿಗೆ ಲಕ್ಷ್ಮಿಯಲ್ಲಿ ಮಗನಾಗಿ ಜನಿಸಿ ಕಾಮಪರವಶತೆಯಿಂದ ದೈವತ್ವವನ್ನು ಕಳೆದು ಕೊಂಡು ಶುಕನಾಸನಿಗೆ ವೈಶಂಪಾಯನೆಂಬ ಮಗನಾಗಿ ಹುಟ್ಟಿ ಪುನಃ ಕಾಮಿಯಾಗಿ ಗಿಣಿಯ ಜನ್ಮವನ್ನೂ ತಾಳಿದ್ದಾನೆ ಎಂದು ಜಾಬಾಲಿ ಋಷಿಯೂ ತಿಳಿಸಿದನು.

ಮುಂದಿನ ಕತೆಯನ್ನು ಗಿಣಿಯೇ ಹೇಳಿತು. 'ಆಗ ನನಗೆ ಜ್ಞಾನೋದಯ ವಾಯಿತು. ಹಾಗೆಯೇ ಮಹಾಶ್ವೇತೆಯ ವಿಷಯವಾದ ಮೋಹವೂ ಹೆಚ್ಚಿತು. ಮಹಾ ಶ್ವೇತೆ ಚಂದ್ರಾಪೀಡರೆಲ್ಲಿದ್ದಾರೆಂದು ಜಾಬಾಲಿ ಋಷಿಗಳನ್ನೇ ಕೇಳಿದೆ. ಅವರು 'ಸ್ವಲ್ಪ ಕಾಲ ಸುಮ್ಮನಿರು' ಎಂದು ಹೇಳಿ ಹೊರಟು ಹೋದರು. ಸ್ವಲ್ಪ ಹೊತ್ತಿನಲ್ಲಿಯೇ ನನ್ನ ಮಿತ್ರನಾದ ಕಪಿಂಜಲನು ಬಂದು ಪೂರ್ವವೃತ್ತಾಂತವನ್ನೆಲ್ಲಾ ತಿಳಿಸಿ ನಾನು ಅಲ್ಲಿಯೇ ಸ್ವಲ್ಪಕಾಲ ಇರಬೇಕೆಂದು ತಿಳಿಸಿದನು. ಆದರೂ ಸ್ವಲ್ಪ ರೆಕ್ಕೆ ಬಲಿತ ಮೇಲೆ ಚಂದ್ರಾಪೀಡನನ್ನು ನೋಡಲು ಅವನಿದ್ದೆಡೆಗೆ ಹಾರಲು ಹೊರಟು ಬಳಲಿಕೆಯಿಂದ ಒಂದು ಮರದ ಮೇಲೆ ಮಲಗಿಕೊಂಡೆ. ಎಚ್ಚತ್ತು ನೋಡುವಲ್ಲಿ ಒಬ್ಬ ಚಂಡಾಲನ ಬಲೆಗೆ ಸಿಕ್ಕಿ ಬಿದ್ದಿದ್ದೆ. ಅವನು ನನ್ನನ್ನು ಇವಳಿಗೆ ಕೊಟ್ಟನು. ಇವಳು ನನ್ನನ್ನು ಈ ಪಂಜರದಲ್ಲಿಟ್ಟು ಇಲ್ಲಿಗೆ ತಂದಿದ್ದಾಳೆ' ಎಂದು ಹೇಳಿತು.

ಈ ಮಾತನ್ನು ಕೇಳಿ ರಾಜನು ಚಂಡಾಲ ಕನ್ನಿಕೆಗೆ ಹೇಳಿ ಕಳುಹಿಸಲು ಅವಳು ಬಂದು ಶೂದ್ರಕನೇ ಚಂದ್ರಾಪೀಡನೆಂದೂ ಈಗ ಜನ್ಮಾವಸಾನ ಕಾಲವೆಂದೂ ಗಿಳಿಯೇ ವೈಶಂಪಾಯನನಾಗಿದ್ದ ಪುಂಡರೀಕನೆಂದೂ ತಾನೇ ಲಕ್ಷ್ಮೀದೇವಿಯೆಂದೂ ಹೇಳಿ ಮಿಂಚಿ ನಂತೆ ಗಗನಕ್ಕೆ ಹಾರಿದಳು. ಇದನ್ನು ಕೇಳಿ ರಾಜನು ಪ್ರಾಣತ್ಯಾಗ ಮಾಡುತ್ತಿದ್ದಂ ತೆಯೇ ಕಾದಂಬರೀ ಮಹಾಶ್ವೇತೆಯರ ರಕ್ಷಣೆಯಲ್ಲಿದ್ದ ಚಂದ್ರಾಪೀಡನ ಶರೀರವು

ಕಾದಂಬರೀಕರಸ್ಪರ್ಶನದಿಂದ ಸಚೇತನವಾಗಿ ಹೀಗೆ ಹೇಳಿತು. "ಪ್ರಿಯೆ ಇದೋ ಈಗ ತಾನೆ ನಾನು ಶೂದ್ರಕರಾಜನ ಜನ್ಮವನ್ನು ತ್ಯಜಿಸಿ ಹಿಂದಿನ ರೂಪವಾದ ಚಂದ್ರಾಪೀಡನಾಗಿದ್ದೇನೆ. ಇನ್ನು ಶಾಪದ ಭಯವಿಲ್ಲ. ಇಲ್ಲಿಯೋ ಚಂದ್ರಲೋಕದಲ್ಲಿಯೋ ಇಷ್ಟಬಂದಂತೆ ಬಾಳಬಹುದು. ಸ್ವಲ್ಪದರಲ್ಲಿಯೇ ಮಹಾಶ್ವೇತೆಯೂ ಪ್ರಿಯಸಮಾಗಮನವನ್ನು ಪಡೆಯುತ್ತಾಳೆ" ಎಂದು ಹೇಳುತ್ತಿದ್ದಹಾಗೆಯೇ ವೈಶಂಪಾಯನನು ಗಿಳಿಯ ಜನ್ಮವನ್ನು ತ್ಯಜಿಸಿ ಅಲ್ಲಿಗೆ ಬಂದು ಸೇರಿದನು. ಕಪಿಂಜಲನು ಬಂದು ಶ್ವೇತಕೇತುವು ಊರ್ಧ್ವಲೋಕಕ್ಕೆ ತೆರಳಿದುದನ್ನು ತಿಳಿಸಿದನು. ಮಾತಾಪಿತೃಗಳಾದ ತಾರಾಪೀಡ ವಿಲಾಸವತಿಯರೂ ಶುಕನಾಸ ಮನೋರಮೆಯರೂ ಮಕ್ಕಳನ್ನೂ ಸೊಸೆಯರನ್ನೂ ನೋಡಿ ಸಂತೋಷಗೊಂಡರು. ಹೇಮಕೂಟದಲ್ಲಿ ವೈಭವದಿಂದ ವಿವಾಹಗಳು ನೆರವೇರಿದುವು. ಚಂದ್ರಾಪೀಡನು ಕಾದಂಬರಿಗೆ ಪತ್ರಲೇಖೆಯೇ ರೋಹಿಣೀದೇವಿಯೆಂದೂ ಅವಳು ಚಂದ್ರಲೋಕದಲ್ಲಿದ್ದಾಳೆಂದೂ ತನ್ನ ಜೊತೆಯಲ್ಲಿರುವುದಕ್ಕಾಗಿ ಭೂಮಿಗೆ ಅವತರಿಸಿದ್ದಳೆಂದೂ ತಿಳಿಸಿದನು. ಚಂದ್ರಾಪೀಡನು ಅತ್ತೆ ಮಾವಂದಿರ ಅಪ್ಪಣೆ ಪಡೆದು ಉಜ್ಜಯನಿಗೆ ಬಂದು ಅಲ್ಲಿಗೆ ಪುಂಡರೀಕ ಮಹಾಶ್ವೇತೆಯರನ್ನು ರಾಜರಾಣಿಯರನ್ನಾಗಿ ಮಾಡಿ ತನ್ನ ಉಭಯ ಪತ್ನಿಯರೊಡನೆ ಕೆಲವು ಕಾಲ ಚಂದ್ರಲೋಕದಲ್ಲಿಯೂ ಕೆಲವು ಕಾಲ ಉಜ್ಜಯನಿಯಲ್ಲಿಯೂ ಇರುತ್ತಾ ಸುಖವಾಗಿ ಕಾಲ ಕಳೆಯುತ್ತಿದ್ದನು.

ಕಾದಂಬರಿಯ ಕಥಾಸೂತ್ರವು ಪರಿಚಯವಾದಮೇಲೆ ಅದರ ತೊಡಕೂ ಕಥನ ಕೌಶಲವೂ ಮನದಟ್ಟಾಗದಿರದು. 'ಕಾದಂಬರಿ' ಅನೇಕ ಕಥೆಗಳ ಮೇಳನದಿಂದ ಕೂಡಿದೆ. 'ಕಾದಂಬರಿ'ಯಲ್ಲಿ ಕಾದಂಬರಿ ಚಂದ್ರಪೀಡರ ಪ್ರಣಯ ಕಥೆಯೂ ಮಹಾಶ್ವೇತೆ ಪುಂಡರೀಕರ ಪ್ರಣಯಕಥೆಯೂ ಹಾಸುಹೊಕ್ಕಾಗಿ ಸೇರಿಕೊಂಡಿದೆ. ನಾಯಕಿ ಉಪನಾಯಕಿಯರಾದ ಕಾದಂಬರಿ ಮತ್ತು ಮಹಾಶ್ವೇತೆಯರು ಗಂಧರ್ವ ಮತ್ತು ಅಪ್ಸರೆಯರವಂಶಕ್ಕೆ ಸೇರಿದವರು. ಅವರ ಪತಿಗಳಾದ ಚಂದ್ರಾಪೀಡ ಪುಂಡರೀಕರು ದೈವಾಂಶಸಂಭೂತರಾದರೂ ಮನುಷ್ಯ ಜನ್ಮದಲ್ಲಿರುವವರು. ಇವರಿಬ್ಬರೂ ಶಾಪ ಪ್ರತಿಶಾಪಗಳಿಂದ ಬೇರೆ ಬೇರೆ ಜನ್ಮಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಶಾಪಹೊಂದಿದ ಚಂದ್ರನು ಚಂದ್ರಾಪೀಡನಾಗಿ ಅವತರಿಸಿ ಕಾದಂಬರಿಯ ಪ್ರಣಯಕ್ಕೆ ಪಾತ್ರನಾಗಿ ಆಕೆಯನ್ನು ವಿವಾಹವಾಗುವುದಕ್ಕೆ ಮುಂಚೆಯೇ ದೇಹತ್ಯಾಗಮಾಡುವನು. ಬಳಿಕ ಶೂದ್ರಕನಾಗಿ ಹುಟ್ಟಿ ಶಾಪವಿಮೋಚನಾನಂತರ ಚಂದ್ರಾಪೀಡ ದೇಹವನ್ನು ಹೊಂದಿ ಕಾದಂಬರಿಯನ್ನು ಮದುವೆಯಾಗುವನು. ಪುಂಡರೀಕನು ಚಂದ್ರನ ಶಾಪಕ್ಕೆ ಪಾತ್ರನಾಗಿ ದೇಹತ್ಯಾಗಮಾಡಿ ಅವನು ಚಂದ್ರಪೀಡನಾಗಿದ್ದಾಗ ಅವನ ಪ್ರಿಯಮಿತ್ರನಾದ ವೈಶಂಪಾಯನನಾಗಿ ಜನಿಸುವನು. ಪೂರ್ವಜನ್ಮವಾಸನೆಯಿಂದ ಪ್ರೇರಿತನಾಗಿ ಮಹಾಶ್ವೇತೆಯಲ್ಲಿ ಮೋಹಗೊಂಡು ಗಿಳಿಯ ಜನ್ಮವನ್ನು ತಾಳಿ ಶಾಪವಿಮೋಚನೆಯಾದ ಮೇಲೆ ಪುಂಡರೀಕನ ಶರೀರವನ್ನು ಪಡೆದು ಮಹಾಶ್ವೇತೆಯನ್ನು ವರಿಸುವನು. ಕಾದಂಬರಿ ಕಥೆಯು ಪ್ರಾರಂಭವಾಗುವುದು ಚಂದ್ರಾಪೀಡನು ಶೂದ್ರಕನಾಗಿಯೂ ಪುಂಡ

ರೀಕನು ಗಿಳಿಯಾಗಿಯೂ ಹುಟ್ಟಿದ್ದ ಕಾಲದಲ್ಲಿ. ಈ ಕತೆಯನ್ನು ಕವಿ ತಾನೇ ಹೇಳುವುದಿಲ್ಲ. ಬೇರೆ ಬೇರೆಯವರ ಬಾಯಲ್ಲಿ ಹೇಳಿಸುತ್ತಾನೆ. ಆರಂಭ ಭಾಗವಾದ ಚಂಡಾಲ ಕನ್ಯೆಯು ಗಿಳಿಯನ್ನು ಶೂದ್ರಕನ ಆಸ್ಥಾನಕ್ಕೆ ತರುವವರೆಗೆ ತಾನೇ ಹೇಳುತ್ತಾನೆ. ಆಮೇಲೆ ಜಾಬಾಲಿ ಋಷಿಗಳ ಆಶ್ರಮಕ್ಕೆ ಹೋಗುವವರೆಗೆ ಆತ್ಮಕತೆಯನ್ನು ಗಿಳಿಯೇ ಶೂದ್ರಕನಿಗೆ ಹೇಳುತ್ತದೆ. ಅದರ ಪೂರ್ವವೃತ್ತಾಂತವನ್ನು ಜಾಬಾಲಿಗಳು ಹೇಳುತ್ತಾರೆ. ಅದರಲ್ಲಿಯೂ ಕೆಲವುಭಾಗ ಮಹಾಶ್ವೇತೆಯಿಂದಲೂ ಕೆಲವುಭಾಗ ಕಪಿಂಜಲನಿಂದಲೂ ಉಕ್ತವಾಗಿದೆ. ಮುಂದಿನಕತೆಯನ್ನು ಗಿಳಿಯೇ ಹೇಳುತ್ತದೆ. ಚಂಡಾಲಕನ್ಯೆಯು ತನ್ನ, ಗಿಳಿಯ, ಶೂದ್ರಕನ ಪರಿಚಯ ಮಾಡಿಸುತ್ತಾಳೆ. ಆರಂಭದಂತೆ ಕೊನೆಯ ಭಾಗವನ್ನು ಕವಿಯೇ ಹೇಳಿ ಮುಗಿಸುತ್ತಾನೆ. ಕತೆಯು ಕೊನೆಯಭಾಗದಿಂದ ಪ್ರಾರಂಭವಾಗುವುದರಿಂದ ಕಥಾವಸ್ತುವು ಇಂದಿನ ಕಾದಂಬರಿಗಳಂತೆಯೂ ಚಲನ ಚಿತ್ರಗಳ ಸುರಳಿಯಂತೆಯೂ ಬಿಚ್ಚುತ್ತಾ ಹೋಗಿ ವಾಚಕರಿಗೆ ವಿಶೇಷ ಕುತೂಹಲ ವನ್ನುಂಟುಮಾಡುತ್ತದೆ.

ಬಾಣನ ಕಥಾಸೃಷ್ಟಿಯಂತೆಯೇ ಆತನ ಪಾತ್ರಚಿತ್ರಣ ಮತ್ತು ವರ್ಣನಾ ವೈಖರಿ ಅತ್ಯದ್ಭುತವಾದುದು. ಅತನು ಯಾವ ಪಾತ್ರವನ್ನಾದರೂ ಅದರ ವಿವಿಧ ಮುಖಗಳಲ್ಲಿ, ವಿವಿಧ ಸನ್ನಿವೇಶಗಳಲ್ಲಿ, ವಿವಿಧ ಮನೋಭಾವಗಳಲ್ಲಿ ಚಿತ್ರಿಸಬಲ್ಲ. ಪ್ರತೀಹಾರಿಯಿಂದ ಹಿಡಿದು, ಕಂಚುಕಿ, ಚಂಡಾಲಕನ್ಯೆ, ಚಂದ್ರಾಪೀಡ, ಶುಕನಾಸ, ಶೂದ್ರ ಕನವರೆಗೆ ಎಲ್ಲ ಪಾತ್ರಗಳ ಸುಖದುಃಖ, ಆನಂದ ಉದ್ವೇಗ, ಉಲ್ಲಾಸ ಉನ್ಮಾದ ಆಶೆ ನಿರಾಶೆ, ವಾತ್ಸಲ್ಯಪ್ರೇಮಾದಿಗಳು ಅವನ ಲೇಖನಿಯಲ್ಲಿ ಬಹು ಹೃದಯಂಗಮವಾಗಿ ಚಿತ್ರಿತವಾಗಿವೆ. ಅವನಿಗೆ ಬೇಕಾದದ್ದು ಕಥೆಯಲ್ಲವೇ ಅಲ್ಲ. ವರ್ಣನೆಗಳು. ಅದಕ್ಕೆ ಉಪಷ್ಟಂಬಕವಾಗುವಷ್ಟು ಮಾತ್ರ ಕತೆ. ವ್ಯಕ್ತಿಚಿತ್ರದಂತೆಯೇ ಸನ್ನಿವೇಶ ಚಿತ್ರ, ಪ್ರಕೃತಿ ಚಿತ್ರಗಳು ಬಹು ವಿಜೃಂಭಣೆಯಿಂದ ಕೂಡಿವೆ. ಇದಕ್ಕೆ ಮುಖ್ಯವಾದ ಕಾರಣ ಅತಿ ವಿಶಾಲವಾದ ಅವನ ಲೋಕಾನುಭವ. ಅವನು ಕಾಣದ ವ್ಯಕ್ತಿಯಿಲ್ಲ. ನೋಡಿಲ್ಲದ ಲೋಕವಿಲ್ಲ. ಕಾಣದ ಭಾವಾವೇಶಗಳಿಲ್ಲ. ಆದುದರಿಂದಲೇ ಮುಂದಿನವರು 'ಬಾಣೋಚ್ಛಿಷ್ಟಂ ಜಗತ್ಸರ್ವಂ' ಎಂಬುದಾಗಿ ಉತ್ಕಂಠತೆಯಿಂದ ಹೊಗಳಿದರು. ಆದರೂ ಒಂದು ವಿಷಯ ನಿಜ. ಕೆಲವು ಕಡೆ ಅವನ ವರ್ಣನೆಗಳು ಅತಿಯಾಗಿ ಜಿಗುಪ್ಸೆಯನ್ನು ಉಂಟುಮಾಡಿ ಕಥಾಶರೀರವನ್ನೇ ಮರಸಿಬಿಡುತ್ತದೆ. ಆಗ ಅವನ ಬಾಯಿಗೆ ಕಡಿವಾಣ ಹಾಕಿದ್ದರೆ ಚೆನ್ನಾಗಿತ್ತು ಅನ್ನಿಸುತ್ತದೆ.

ಬಾಣನ ಶೈಲಿಯು ಪಾಂಚಾಲೀ ರೀತಿಗೆ ಸೇರಿದುದು, ಶಬ್ದಾಲಂಕಾರಗಳೂ ಅರ್ಥಾಲಂಕಾರಗಳೂ ಹಿತಮಿತವಾಗಿ ಸೇರಿ ಪದಲಾಲಿತ್ಯದಿಂದ ಕೂಡಿರುವುದು ಪಾಂಚಾಲೀ ರೀತಿಯ ವೈಶಿಷ್ಟ್ಯ. ಈ ದೃಷ್ಟಿಯಿಂದ ಕಾದಂಬರಿಗೆ ಅಗ್ರಸ್ಥಾನ. ಆದುದ ರಿಂದಲೇ 'ಕಾದಂಬರೀ ರಸಜ್ಞಾನಾಂ ಆಹಾರೋಪಿ ನರೋಚತೆ' ಎಂಬಮಾತು ಪ್ರಸಿದ್ಧವಾದುದು. ಬಾಣನ ಕಾದಂಬರಿಯೂ ಇವನ ಸಮಕಾಲೀನರಾದ ದಂಡಿ

ಮತ್ತು ಸಂಬಂಧುಗಳ ಕೃತಿಗಳೂ ಸಂಸ್ಕೃತಗಳಲ್ಲಿರುವ ಉತ್ತಮ ಗದ್ಯಗ್ರಂಥಗಳಲ್ಲದೆ ಮುಂದಿನ ಗದ್ಯ ಗ್ರಂಥಕಾರರಿಗೆ ಆದರ್ಶಗಳೂ ಆದುವು. ಇವುಗಳಲ್ಲೆಲ್ಲ ಸಮಾನವಾದ ಗುಣದೋಷಗಳಿವೆ. ಗಹನವಾದ ಪೂರ್ಣ ಕಥೆಗಳು, ನಾದಮಯವಾದ ಶಬ್ದ ಪ್ರಯೋಗ, ಶಬ್ದಾರ್ಥಗಳ ಮೇಳನ, ಭಾವಪ್ರಖರತೆ, ಸಂದರ್ಭೋಚಿತ ಪದ ಪ್ರಯೋಗ ಇವು ಇವುಗಳ ಗುಣಗಳು, ದೂರಾನ್ವಯ, ಅಪೂರ್ವ ಪದಪ್ರಯೋಗ, ವಿಶೇಷಣ ಪರಂಪರೆ, ದೀರ್ಘಸಮಾಸಗಳು, ಶ್ಲೇಷೆಯ ಪುನರುಕ್ತಿಗಳು, ಸೂಕ್ಷ್ಮ ವಿವರಣೆಯಲ್ಲಿ ಮೋಹ, ಕಥೆಯ ಬೆಳವಣಿಗೆಯನ್ನು ತಡೆಯುವ ವರ್ಣನೆ ಇವು ದೋಷಗಳು. ಆದರೆ ಇವರು ತಮ್ಮ ಗ್ರಂಥಗಳನ್ನು ಆಗ ರೂಢಿಯಲ್ಲಿದ್ದ ಸಂಪ್ರದಾಯಕ್ಕನುಗುಣವಾಗಿ ಪಂಡಿತರ ಮೆಚ್ಚಿಗೆಗಾಗಿಯೇ ಗ್ರಂಥರಚನೆ ಮಾಡಿರುವ ರೆಂಬುದನ್ನು ಮರೆಯಬಾರದು. ಶಿಲ್ಪ, ಸಂಗೀತ ಮೊದಲಾದ ಕಲೆಗಳಲ್ಲಿರುವಂತೆಯೇ ಸಾಹಿತ್ಯದಲ್ಲಿಯೂ ಸೂಕ್ಷ್ಮವಿವರಣೆಯನ್ನು ಅಪೇಕ್ಷಿಸುವುದು ಭಾರತೀಯ ಮನೋ ಧರ್ಮ. ಅದಕ್ಕನುಗುಣವಾಗಿ ಗ್ರಂಥವನ್ನು ರಚಿಸಿರುವುದರಿಂದಲೇ ಮುಂದಿನ ಲಾಕ್ಷಣಿಕರೆಲ್ಲ ಬಾಣನನ್ನೇ ಆಧಾರವಾಗಿಟ್ಟುಕೊಂಡು ಗದ್ಯಲಕ್ಷಣವನ್ನು ನಿರ್ಧರಿಸಿ ದ್ದಾರೆ. ಇವನ ಆಧಾರದಮೇಲೆಯೇ ಮುಂದೆ ಕಲಿಕ, ಮುಕ್ತಕ, ಚೂರ್ಣಿಕಾ ಪದ್ಯ ಗಂಧಿ ಮೊದಲಾದ ಗದ್ಯಪ್ರಬೇಧಗಳೇರ್ಪಟ್ಟದು "[1]

ನಾಗವರ್ಮ :—"ಕರ್ಣಾಟಕ ಕಾದಂಬರಿಯನ್ನು ರಚಿಸಿರುವ ಒಂದನೆಯ ನಾಗವರ್ಮನು (ಕನ್ನಡ ಸಾಹಿತ್ಯದಲ್ಲಿ ಈ ಹೆಸರಿನ ಇತರರೂ ಇರುವುದರಿಂದ ಇವನನ್ನು ಒಂದನೆಯ ನಾಗವರ್ಮನೆಂದು ಕರೆದಿದೆ) 'ಛಂದೋಂಬುಧಿ' ಮತ್ತು 'ಕಾದಂಬರಿ' ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾನೆ. ಛಂದೋಂಬುಧಿಯಲ್ಲಿ ಅವನ ವಿಷಯವಾಗಿ ಈ ಅಂಶಗಳುದೊರಕುವುವು. ವೆಂಗಿವಿಷಯದಲ್ಲಿಯ ಸಪ್ತ ಗ್ರಾಮಗಳಲ್ಲಿ ಮನೋಹರವಾದ ವೆಂಗಿಪಳುವಿನಲ್ಲಿ ಕೌಂಡಿನ್ಯಗೊತ್ರೋದ್ಭವನಾದ ವೆಣ್ಣಮಯ್ಯನೆಂಬ ಬ್ರಾಹ್ಮಣನಿದ್ದನು. ಅವನ ಪತ್ನಿ ಕೌಂಡಿಕಬ್ಬೆ, ಮಗ ದಾಮ ಮಯ್ಯ, ಇವನ ಹೆಂಡತಿ ಕುಂದಕಬ್ಬೆ, ಜೇಷ್ಠಪುತ್ರ ವೆಣ್ಣಮಯ್ಯ, ಇವನ ಹೆಂಡತಿ ಪೋಳಕಬ್ಬೆ, ಜೇಷ್ಠಪುತ್ರ ನಾಗವರ್ಮ. ಈತನಿಗೆ ಕವಿರಾಜಹಂಸ, ಬುಧಾಜ್ಜವನ ಕಳಹಂಸ, ಕಂದಕಂದರ್ಪ, ನೆಗಟ್ಟಿಗೋಜ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಅಲ್ಲದೆ ನಾಕಿ, ಸಯ್ಯಡಿಯಾತ ಎಂಬ ಹೆಸರುಗಳೂ ಇದ್ದಂತೆ ತೋರುತ್ತದೆ. 'ವೀರ ಸಿರಿಯಕ್ಕೆ ಭುಜಾಸಿಗೆ ನಾಗವರ್ಮನಾ' ಎಂದೂ ಕುಂತೀಪುತ್ರಂ ಪೊಣರ್ದ ಗಣ ದೊಳ್ ಎಂದೂ ಹೇಳಿಕೊಂಡಿರುವುದರಿಂದ ಈತನು ಯುದ್ಧವೀರನಾಗಿದ್ದಂತೆಯೂ ತೋರುತ್ತದೆ."[2] ಛಂದೋಂಬುಧಿಯಲ್ಲಿ ಬರುವ

---

1 ಸಾಹಿತ್ಯಭಾರತೀ, ಪುಟ ೭೧.

2 ಕವಿಚರಿತ್ರೆ ಭಾಗ ೧, ಪುಟ ೫೪.

ಅರಸಂ ರಕ್ಕಸಗಂಗಂ
ಗುರುಗಳ್ ನೆಗಟ್ದಜಿತ ಸೇನದೇವರ್ ದಯೆಯಿಂ
ಪೊರವ ನೃಪನಣ್ಣನೆನೆ ಮು
ಚ್ಚಿರಿಸುವರಾರ್ ನಾಕಿಯಿರುಳೊಳೇಂ ಪುಟ್ಟಿದನೇ ‖

ಗಂಡರ ಮೂಕುತಿಯೆನಿಸಿದ
ಮಾಂಡಳಿಕರ ಮಂತ್ರಿ ಸಂಧಿವಿಗ್ರಹಿ ರಾಯಂ
ಕೊಂಡಾಡಿ ಪೊರೆದನೆನೆ ಧರೆ
ಕೊಂಡಾಡದೆ ಕೊಂಡು ಕೊನೆಯದೇ ನಾಕಿಗನಂ ‖

ಎಂಬ ಪದ್ಯಗಳಿಂದ ಈತನು ರಕ್ಕಸಗಂಗನ ಕಾಲದಲ್ಲಿ ಅಂದರೆ ಸುಮಾರು ಹತ್ತನೆಯ ಶತಮಾನದ ಅಂತ್ಯದಲ್ಲಿ ಅಜಿತಸೇನ ದೇವರ ಶಿಷ್ಯನಾಗಿ ಚಾವುಂಡರಾಯನಿಂದ ಪೋಷಿತನಾಗಿದ್ದನೆಂದು ಹೇಳಬಹುದಾಗಿದೆ. ಇವನ ವಿಷಯವಾಗಿ ಮೇಲೆ ಹೇಳಿರುವ ಕಾಲವು ಕಾದಂಬರಿಯ ಕೊನೆಯ ಭಾಗದಲ್ಲಿ ಬರುವ ‘ ಸತ್ಕ್ವತಿಗಿದೌಚಿತ್ಯಮೆಂದಿತ್ತನುತ್ಸವದಿಂ ವಿದ್ವತ್ಸಭಾ ಮಂಡಲಿ ತಣಿವಿನೆಗಂ ಭೋಜರಾಜ ಕ್ಷ್ಮೀತೀಶಂ ’ ಎಂಬ ಪದ್ಯಭಾಗದಿಂದಲೂ ಸಮರ್ಥಿತವಾಗಿದೆ. ಏಕೆಂದರೆ ಧಾರಾನಗರದ ಭೋಜರಾಜನು ಹತ್ತನೆಯ ಶತಮಾನದ ಅಂತ್ಯಭಾಗದಲ್ಲಿ ಆಳುವುದಕ್ಕೆ ಆರಂಭಿಸಿದಂತೆ ತಿಳಿದು ಬರುತ್ತದೆ. ಆದರೆ ಅವನ ಆತ್ಮ ವಿಷಯಗಳಾವವೂ ಕಾದಂಬರಿಯಲ್ಲಿ ಉಕ್ತವಾಗಿಲ್ಲ. ಆದುದರಿಂದ ಭಿನ್ನ ವ್ಯಕ್ತಿಗಳಿರಬಹುದೇ ಎಂಬ ಸಂದೇಹಕ್ಕೂ ಎಡೆಯಿಲ್ಲದಿಲ್ಲ.* ಇವನೂ ಪಂಪರನ್ನಾದಿಗಳಂತೆ ತನ್ನ ಆಶ್ರಯದಾತನಾದ ಚಂದ್ರನೊಬ್ಬನನ್ನು ಚಂದ್ರನೊಡನೆ ಅಭೇದದಿಂದ ಮೊದಲನೆಯ ಪದ್ಯದಲ್ಲಿ ವರ್ಣಿಸಿದ್ದಾನೆ. ಆದರೆ ಈ ಚಂದ್ರನೆಂಬುವನಾರೆಂಬುದು ಇನ್ನೂ ನಿರ್ಧಾರಿತವಾಗಿಲ್ಲ. ಕೆಲವು ಪದ್ಯಗಳಿಂದ ಜೈನನೆಂದು ಕಂಡುಬಂದರೂ ಶೈವ ಬ್ರಾಹ್ಮಣನಾಗಿರಬಹುದೆಂದು ಊಹಿಸುವುದಕ್ಕೂ ಅವಕಾಶವಿದೆ.

ಛಂದೋಂಬುಧಿ:—ಇದು ನಮಗೆ ದೊರೆತಿರುವ ಮೊಟ್ಟಮೊದಲನೆಯ ಕನ್ನಡ ಛಂದಶ್ಶಾಸ್ತ್ರ. ಇದರಲ್ಲಿ ಕವಿಯು ಶಿವನು ಉಮೆಗೆ ಉಪದೇಶಿಸಿದ ಪಿಂಗಳ ಛಂದಸ್ಸನ್ನು ತಾನು ತನ್ನ ಪತ್ನಿಗೆ ಉಪದೇಶಿಸುವಂತೆ ಹೇಳುತ್ತಾನೆ. ಇದರಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಛಂದಸ್ಸುಗಳ ಲಕ್ಷಣವೂ ಉಕ್ತವಾಗಿದೆ. ಇದರ ಆರು ಆಶ್ವಾಸಗಳಲ್ಲಿ ಸಂಜ್ಞೆ, ಸಮವೃತ್ತ ವಿವರಣ, ಅರ್ಧಸಮವೃತ್ತ, ವಿಷಮವೃತ್ತಗಳ ವಿಷಯ, ಮಾತ್ರಾ ಮತ್ತು ಮಾತ್ರಾಗಣಚ್ಛಂದ, ಕನ್ನಡ ಮಾತ್ರಾಗಣ, ಷಟ್ಪ್ರತ್ಯಯಗಳು ಇವು ಕ್ರಮವಾಗಿ ವಿವೃತವಾಗಿವೆ. ಗ್ರಂಥಾಂತ್ಯದಲ್ಲಿ ‘ ಇದು ಸಮಸ್ತ ಸುರಾಸುರೇಂದ್ರ ಮುನೀಂದ್ರಮಣಿ

---

* ಆದುದರಿಂದಲೇ ಶ್ರೀಮಾನ್ ಹೆಚ್. ಚೆನ್ನಕೇಶವಯ್ಯಂಗಾರ್ಯ್ಯರು ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ೧೪ನೆಯ ಸಂಪುಟದಲ್ಲಿ ಛಂದೋಂಬುಧಿ ಮತ್ತು ಕಾದಂಬರಿಯ ಕರ್ತರುಗಳಾದ ನಾಗವರ್ಮರು ಏಕವ್ಯಕ್ತಿಯಲ್ಲ. ಭಿನ್ನವ್ಯಕ್ತಿಗಳೆಂದು ಸಿದ್ಧಾಂತಮಾಡಲು ಪ್ರಯತ್ನಪಟ್ಟಿದ್ದಾರೆ. ಆದರೆ ಇದಮಿತ್ಥಂ ಎಂದು ಸಿದ್ಧಾಂತಮಾಡಲು ಸಾಧ್ಯವಾಗಿಲ್ಲ.

ಮಕುಟಘಟಿತ ಶ್ರೀಮದ್ಭಗವದರ್ಹತ್ಪರಮೇಶ್ವರಚಾರುಚರಣಾರವಿಂದದ್ವಂದ್ವ ಮಕರಂದಮತ್ತಮಧುಕರಾಯಮಾನವಿಬುಧಜನಮನಃಪದ್ಮಿನೀರಾಜಹಂಸ ಶ್ರೀಮತ್ಕವಿರಾಜಹಂಸ ನಾಗವರ್ಮ ನಿರ್ಮಿತಮಪ್ಪ ಛಂದೋಂಬುಧಿಯೊಳ್' ಎಂಬಗದ್ಯವಿದೆ.

ಕಾದಂಬರಿ : — ಮೇಲೆಯೇ ತಿಳಿಸಿರುವಂತೆ ಇದು ಬಾಣನ ಸಂಸ್ಕೃತ ಕಾದಂಬರಿಯ ಅನುವಾದ. ಗದ್ಯಗ್ರಂಥವಾಗಿದ್ದ ಮೂಲವನ್ನು ಕನ್ನಡ ಚಂಪೂ ಕಾವ್ಯವನ್ನಾಗಿ ಮಾರ್ಪಡಿಸಿದ್ದಾನೆ. ಮೂಲವನ್ನು ಬಹುಮಟ್ಟಿಗೆ ಅನುಸರಿಸಿದ್ದರೂ ಆವಶ್ಯಕವಾದೆಡೆಗಳಲ್ಲಿ ಕಥಾಭಾಗವನ್ನು ಸಂಕೋಚಪಡಿಸಿಕೊಂಡು ಸ್ವಂತ ಪ್ರತಿಭಾ ಕುಂಚದಿಂದ ಕೆಲವೆಡೆಗಳಲ್ಲಿ ಹೊಸ ಮೆರಗಿಟ್ಟು ಉತ್ತಮ ಕನ್ನಡ ಚಂಪುವನ್ನಾಗಿಸಿದ್ದಾನೆ. ಇದು ಒಂದು ದೃಷ್ಟಿಯಿಂದ ಅನುಕೂಲವೇ ಆಗಿದೆ. ಅದೆಂದರೆ ವೈವಿಧ್ಯ. ಏಕಪ್ರಕಾರವಾಗಿ ದಂಡಾಕಾರವಾಗಿ ಉಸಿರಾಡುವುದಕ್ಕಾಗದ ಗದ್ಯಕ್ಕೆ ಬದಲಾಗಿ ಮಿತಿಯರಿತ ಪದ್ಯದಲ್ಲಿ ವಿವಿಧ ಛಂದಸ್ಸುಗಳ ಗತಿಯಿಂದ ವೈವಿಧ್ಯ ಉಂಟಾಗುತ್ತದೆ. ಕೆಲವು ಸಲ ಏಳೆಂಟು ಪುಟಗಳವರೆವಿಗೂ ಹರಿಯುವ ವರ್ಣನೆಯು ಹತ್ತಾರು ಭಾಗವಾಗಿಯಾಗಲೇಬೇಕು. ಅಲ್ಲದೆ ದೀರ್ಘಸಮಾಸಗಳು ವಿಭಜನೆಯಾಗದೆ ಸಾಧ್ಯವೇ ಇಲ್ಲ. ನೂರಾರು ವಾಕ್ಯಗಳ ಮತ್ತು ವಾಕ್ಯಪುಂಜಗಳಿಗೆ ಅನ್ವಯಿಸಬೇಕಾದ ಒಂದು ಕ್ರಿಯಾಪದವು ಇಲ್ಲಿ ಹತ್ತಾರು ರೂಪವನ್ನಾದರೂ ತಾಳಬೇಕು. ಈ ಎಲ್ಲ ಸೌಲಭ್ಯಗಳನ್ನೂ ನಾಗವರ್ಮನು ಉಪಯೋಗಿಸಿಕೊಂಡು ಆದಷ್ಟೂ ದೇಶೀಯ ಶೈಲಿಯಲ್ಲಿ ಕೃತಿರಚನೆ ಮಾಡಿದ್ದಾನೆ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಮೂಲದ ಪೂರ್ಣ ಸ್ವಾರಸ್ಯ ಕೆಡದೆ ಪರಿವರ್ತನೆಮಾಡುವುದು ಸುಲಭವಾದ ಕೆಲಸವಲ್ಲ. ಆದರೂ ಕವಿರಾಜಹಂಸನು ಆ ಕಾರ್ಯದಲ್ಲಿ ಕೃತಕೃತ್ಯನಾಗಿದ್ದಾನೆ. ಅವನ ಕೆಲವು ಪದ್ಯಗಳು ಭಾಷಾಂತರಗಳೆಂಬ ಭಾವವನ್ನೇ ಉಂಟುಮಾಡುವುದಿಲ್ಲ. ಮುಂದಿನ ಅಚ್ಛೋದ ಸರಸ್ಸು ಮತ್ತು ಮಹಾಶ್ವೇತೆಯ ವರ್ಣನೆಗಳನ್ನು ನೋಡಬಹುದು. ಅಚ್ಛೋದ ಸರಸ್ಸಿನ ವರ್ಣನೆಯಿದು :—

ಎಲೆ ತಾರಾಗಂ ಹರಂ ಕಣ್ಣಿಡೆ ಕರಗಿದುದಂತಲ್ತು ರುದ್ರಾಟ್ಟಹಾಸಂ
ಜಲಮಾದತ್ತಲ್ತು ಚಂದ್ರಾತಪಮಮೃತರಸಾಕಾರಮಾಯ್ತಲ್ತು ಹೈಮಾ
ಚಲಮಂಭೋರೂಪದಿಂದಂ ಪರಿಣಮಿಸಿದುದಂತಲ್ತು ನೈರ್ಮಲ್ಯಶೋಭಾ
ಕಲಿತಂ ತ್ರೈಲೋಕ್ಯ ಲಕ್ಷ್ಮೀಮಣಿಮುಕುರಮೆನಲ್ ಚೆಲ್ವದಾಯಬ್ಜಷಂಡಂ ॥

ಮಹಾಶ್ವೇತೆಯ ವರ್ಣನೆ :—

ಕಡೆದರೊ ಶಂಖದಿಂ ತೆಗೆದರೋ ನವಮೌಕ್ತಿಕದಿಂ ಮೃಣಾಳದಿಂ
ಪಡೆದರೋ ದಂತದಿಂದೆಸೆಯೆ ಮಾಡಿದರೋ ರುಚಿರೋಜ್ವಲಾಂಗಮಂ
ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ ಪಾರದಂ
ದೊಡೆದರೊ ಪೇೞೆನಲ್ ಕರಮೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ॥

ಒಟ್ಟನಲ್ಲಿ ನಾಗವರ್ಮನ ಭಾಷಾಂತರ ಕಾರ್ಯವು ಬಹುಮಟ್ಟಿಗೆ ತೃಪ್ತಿಯಾಗಿಯೇ ನಡೆದಿದೆಯೆಂದು ಹೇಳಬಹುದು.

ಗ್ರಂಥಸಂಪಾದನೆ:—ಕಳೆದ ಶತಮಾನದ ಅಂತ್ಯದಲ್ಲಿ ಶ್ರೀಮಾನ್ ಬಿ. ಮಲ್ಲಪ್ಪನವರು ಪ್ರಕಟಿಸಿದ ಕರ್ಣಾಟಕ ಕಾದಂಬರಿಯ ಪಾಠವೇ ಪ್ರಸ್ತುತ ಗ್ರಂಥದ ಪಾಠಕ್ಕೆ ಆಧಾರ. ಬೇರೆ ಯಾವ ಕೈಬರಹದ ಪ್ರತಿಗಳು ಉಪಲಬ್ಧವಾಗದುದರಿಂದ ಇದರಲ್ಲಿ ಹೊಸ ಪಾಠಾಂತರಗಳನ್ನಾವುದನ್ನೂ ಕೊಡಲು ಸಾಧ್ಯವಾಗಲಿಲ್ಲ. ಇದನ್ನು ಪರಿಷ್ಕೃತ ಪುನರ್ಮುದ್ರಣವೆಂದು ಕರೆಯಬಹುದು. ಈ ಮುದ್ರಣದಲ್ಲಿ ಹಿಂದಿನ ಗ್ರಂಥದಲ್ಲಿಲ್ಲದೇ ಇದ್ದ ಱ ೞ, ಕುಳಗಳನ್ನು ಸೂಕ್ತ ಸ್ಥಾನಗಳಲ್ಲಿ ಉಪಯೋಗಿಸಿ, ಅಚ್ಚಿನ ತಪ್ಪುಗಳನ್ನು ಸರಿಪಡಿಸಿ ಭಾಷೆಗೆ ಸಂಬಂಧಿಸಿದ ಕೆಲವು ಸ್ಖಾಲಿತ್ಯಗಳನ್ನು ತಿದ್ದಿ ವೃತ್ತಕಂದಗಳನ್ನು ವಾಚನ ಸೌಕರ್ಯಕ್ಕಾಗಿ ನಾಲ್ಕು ಸಾಲುಗಳಲ್ಲಿ ಛಂದೋ ನಿಯಮಕ್ಕನುಗುಣವಾಗಿ ವಿಭಾಗಿಸಿ ಪ್ರಕಟಿಸಿದೆ. ವಾಚಕರ ಉಪಯೋಗಕ್ಕಾಗಿ ಕೊನೆಯಲ್ಲಿ 'ಕಾದಂಬರೀ ದರ್ಪಣ'ವೆಂಬ ಒಂದು ಲಘು ಟಿಪ್ಪಣಿಯನ್ನು ಸೇರಿಸಿದೆ. ಈ ಟಿಪ್ಪಣಿಯನ್ನು ರಚಿಸುವಾಗ ಹಿಂದಿನ ಗ್ರಂಥದ ಪುಟಗಳಡಿಯಲ್ಲಿದ್ದ ಟಿಪ್ಪಣಿಯ ಭಾಗಗಳನ್ನು ಸೂಕ್ತವಿದ್ದಷ್ಟು ಅಳವಡಿಸಿಕೊಂಡಿದೆ. ಹಿಂದಿನ ಮತ್ತು ಈಗಿನ ಮುದ್ರಣ ಗಳ ಸಂಖ್ಯಾ ವಿವರಣಗಳೊಂದಿಗೆ ಕೃತಿಯ ಅಕಾರಾದಿಯನ್ನು ಗ್ರಂಥದ ಕೊನೆಯಲ್ಲಿ ಅನುಬಂಧವಾಗಿ ಕೊಟ್ಟಿದೆ.

ಪ್ರಸ್ತುತ ಮುದ್ರಣದ ಪ್ರಕಾಶನ ಭಾರವನ್ನು ವಹಿಸಿದ ಶ್ರೀ ಹೆಚ್. ಆರ್. ರಮೇಶರವರಿಗೂ ಅಂದವಾಗಿ ಮತ್ತು ಆದಷ್ಟು ಶೀಘ್ರವಾಗಿ ಮುದ್ರಿಸಿದ ಶ್ರೀ ಆರ್. ಎನ್. ಹಬ್ಬು ಅವರಿಗೂ ನನ್ನ ಕೃತಜ್ಞತೆಗಳು ಸಲ್ಲತಕ್ಕದಾಗಿದೆ.

ನೃಸಿಂಹಪ್ರಸಾದಂ
ಸರಸ್ವತಿಪುರಂ
ಮೈಸೂರು-೯
೧–೨–೧೯೭೩

ಎನ್. ಅನಂತರಂಗಾಚಾರ್

ಪರಿವಿಡಿ*

* ವಿ.ಸೂ:—ಈ ರೀತಿಯ ವಿಭಾಗ ಮೂಲದಲ್ಲಿಲ್ಲ. ಹಿಂದಿನ ಕನ್ನಡ ಮುದ್ರಣದಲ್ಲಿಯೂ ಇಲ್ಲ. ವಾಚಕ ಸೌಕರ್ಯಕ್ಕಾಗಿ ಈ ಮುದ್ರಣದಲ್ಲಿ ಈ ರೀತಿ ವಿಭಾಗವಿದೆ.

ಶ್ರೀ:

ನಾಗವರ್ಮ ವಿರಚಿತಂ

ಕರ್ಣಾಟಕ ಕಾದಂಬರಿ

ಕಥಾವತರಣ

ಶ್ರೀಮನ್ನಾಗೇಂದ್ರಭೋಗಸ್ಫುರದರುಣಮಣಿದ್ಯೋತಿಸಂಧ್ಯಾನಿಬದ್ಧ
ಪ್ರೇಮಂ ಪ್ರೋದ್ಯತ್ತರಂಗೋಚ್ಚರದಮರನದೀಶೀಕರೋದಾರತಾರಾ
ರಾಮಂ ಹೇಮಪ್ರಭಾಪ್ರಸ್ಫುರಿತಗಿರಿಶಚಂಚಜ್ಜಟಾಜಾಲಜೂಟ
ವ್ಯೋಮಪ್ರೋದ್ಭಾಸಿ ಚಂದ್ರಂ ತ್ರಿಭುವನಜನಕಾನಂದಮಂ ಮಾಡುಗೆಂದುಂ ೧

ಸತತಗಭೀರವೃತ್ತಿಯಿನುದಾರತೆಯಿಂ ಜಗದೇಕಜೀವನ
ಸ್ಥಿತಿಯಿನತಿಪ್ರಸಾದಗುಣದಿಂ ರಸಭಾವವಿಳಾಸದಿಂ ಕವಿ
ಪ್ರತತಿನಿತಾಂತಸೇವ್ಯತೆಯಿನೊಂದಿ ಸರಸ್ವತಿಯಂದದಿಂ ಸರ
ಸ್ವತಿ ದಯಗೆಯ್ಗೆ ನಮ್ಮೊಳನುಕೂಲತೆಯಿಂದವೆ ನಿರ್ಮಳತ್ವಮಂ ೨

ಬಾಣಂ ವಲ್ಲಭನಕ್ಕುಮೆಂದು ಪಡೆದಾ ವಾಗ್ದೇವಿಗಬ್ಜೋದ್ಭವಂ
ಜಾಣಿಂ ಬಾಣಿಯೆನಿಪ್ಪದೊಂದು ಪೆಸರಂ ಮುನ್ನಿತ್ತನೆಂದಂದು ಪೋ
ಮಾಣಿನ್ನನ್ಯಕವಿಸ್ತುತಿವ್ಯಸನಮಂ ವಾಗ್ಜಾತಚಾತುರ್ಯಗೀ
ರ್ವಾಣಂ ತಾನೆನೆ ಸಂದ ಬಾಣನೆ ವಲಂ ವಂದ್ಯಂ ಪೆಱರ್ ವಂದ್ಯರೇ ? ೩

ಅವಯವದೆರ್ದೆಗೊಳ್ವುದಿದಾ
ರುವನೆಂದೊಡೆ ಬಾಣಕೃತಿ ಪುಳಿಂದನ ಸಂಧಾ
ನವನೆಯ್ದಿದತ್ತು ಮತ್ತಿನ
ಕವಿಕುಳದೆರ್ದೆಗೊಳ್ವುದೆಂಬುದೊಂದಚ್ಚರಿಯೇ ೪

ಸತ್ಕೃತಿ ಸಂಸ್ಕೃತದಿಂದೆ ಜ
ಗತ್ಕೌತುಕಮಾಗಿ ಮತ್ತೆ ಕರ್ಣಾಟದೊಳಂ
ಸತ್ಕವಿ ನಿವಹಂ ಪೊಗೞೆ ಚ
ಮತ್ಕೃತಿಯಂ ಪಡೆದು ಸೊಬಗುವಡೆದತ್ತೀಗಳ್ ೫

ಆ ಕೃತಿ ಮುನ್ನಂ ಚೆಲ್ವಿಂ
ಗಾಕರಮೆನಿಸಿರ್ದು ಮತ್ತೆ ಕನ್ನಡಿಸಿತ್ತಿ
ನ್ನೀ ಕವಿತೆಯಿಂ ಪ್ರಗಲ್ಭತೆ
ಯಾ ಕಾದಂಬರಿಯ ಸೊಬಗದೇನಚ್ಚರಿಯೋ ೬

ಕೃತಿಪತಿ ನರೇಂದ್ರಚಂದ್ರಂ
ಕೃತಿಯಂ ಪೇಳ್ದಂ ಬುಧಾಬ್ಜವನಕಳಹಂಸಂ
ಕೃತಿ ಕಾದಂಬರಿಯೆನೆ ಸ
ತ್ಕೃತಿಕಥಿತಕಥಾವತಾರಮೇಂ ಕೇವಳಮೇ ೭

ಇಳೆಯೊಳದೋರ್ವನಿಂದ್ರನೆನೆ ಸಂದ ಸಮೃದ್ಧಿಯೊಳೊಂದಿ ಕೂಡಿ ತ
ನ್ನೊಳೆ ನೃಪಲಕ್ಷಣಂ ನೆಗೞೆ ದೋರ್ವಲದಿಂ ಚತುರಬ್ಧಿಮೇಖಲಾ
ವಳಯಿತಭೂಮಿಗಾದನೆಱೆಯಂ ನೃಪತಿ ಪ್ರಭುಲೋಕಮಂ ನಿಜೋ
ಜ್ವಳತರ ಕೀರ್ತಿಯಿಂ ನೆಱೆಯೆ ಮುದ್ರಿಸಿ ಶೂದ್ರಕನೆಂಬ ಭೂಭುಜಂ ೮

ಆಕ್ರಮಿಪೆಡೆಯೆಳ್ ಮೂಱುಂ
ವಿಕ್ರಮದಾಯಾಸಮಾಯ್ತು ಮುಂ ಚಕ್ರಿಗೆನು
ತ್ತಾಕ್ರಾಂತಸಮಸ್ತ ಜಗ
ಚ್ಚಕ್ರಂ ನೃಪನೊಂದೆ ವಿಕ್ರಮಂ ನಗುತಿರ್ಕುಂ ೯

ಅರಿಗಳ್ ಪೆಸರ್ಗೇಳ್ದಿರ್ದವೊಡೆ
ವರೆಂಬ ಶೂದ್ರಕನ ವಿಕ್ರಮಾಡಂಬರಮಂ
ದರೆವಾನಿಸಿಕೆಯೊಳೊಂದಿದ
ನರಸಿಂಹಾಡಂಬರಕ್ಕೆ ನಸುನುಗುತಿರ್ಕುಂ ೧೦

ಕಲಿಮಲಿನ ಕುಭೃತ್ಸಂಗದ
ಕಳಂಕಮಂ ಕರ್ಚಿ ಕಳೆಯಲೆಂದಾ ಭೂಮಂ
ಡಳಪತಿಯ ಖಡ್ಗಧಾರಾ
ಜಳದೊಳ್ ಸಾಮ್ರಾಜ್ಯಲಕ್ಷ್ಮಿ ಸಲೆ ನೆಲೆಸಿರ್ಪಳ್ ೧೧

ಪಿರಿದುಂ ದೃಢಕರಮುಷ್ಟಿಯ
ಭರದಿಂ ಮುನ್ನುಂಡ ನೀರನುಗುಳ್ದಪುದೆಂಬಂ
ತರಿಕರಿಮಸ್ತಕಮುಕ್ತೋ
ತ್ಕರದಂತುರಮಸೆವುದಾ ನೃಪಾಲ ಕೃಪಾಣಂ ೧೨

ಕಲಿಗಳುರಃಕವಾಟಕವಚಂಗಳ ಕಟ್ಟಿಲೆಯೊಳ್ ಕರೀಂದ್ರಸಂ
ಕುಳಮದವಾರಿಧಾರೆಗಳ ಪೆರ್ಮೞೆಗಾಲದೊಳ್ ರಣಮೆಂಬ ರಾತ್ರಿಯೊಳ್
ಸಲೆ ಬರುತಿರ್ಪಳೆಂದುಮಭಿಸಾರಿಕೆಯಂದದೆ ರಾಜ್ಯಲಕ್ಷ್ಮಿ ತ
ನ್ನೊಲವಿನೊಳೆಂದೊಡಾ ನೃಪನ ಪೌರುಷಮೇಂ ಪೊಗೞಲ್ಕೆವೇಱ್ಕುಮೇ ೧೩

ಹೃದಯಸ್ಥಿತ ನೃಪರುಮನುರು
ಪಿದಪುದೆನಲ್ ಪತಿವಿಯೋಗ [[1]ಖಿ[1]ದ್ಯದ್ವನಿತಾ]
ಹೃದಯಂಗ[2]ಳೊಳಾವ[2]ಗಮುರಿ
ವುದು ಕಡುಪಿನೊಳಾ ನೃಪಪ್ರತಾಪಜ್ವಲನಂ ೧೪

ಇದು ಕಲಿಭೀತಿಯಿಂ ಕೃತಯುಗಂ ಬಲಿದಿರ್ದಪುದೆಂಬ ಸಚ್ಚರಿ
ತ್ರದಿನೆಸೆದಾವಗಂ ತ್ರಿಭುವನಪ್ರಸವಕ್ಕಿದು ಭೂಮಿಯೆಂಬ ಪೆಂ
ಪೊದವಿರೆ ಪೆರ್ಮೆಯಿಂ ವಿದಿಸೆಯೆಂಬುದು ನಚ್ಚಿನ ರಾಜಧಾನಿಯಾ
ದುದು ಜಗದೊಳ್ ವಿಶೇಷಮೆನಿಸೊಪ್ಪುವ ಮಾಳವ ಮಧ್ಯದೇಶದೊಳ್ ೧೫

ವ॥ ಮತ್ತಮದು ಜಳಕೇಳಿಗೆಂದು ಬಂದೋಲಾಡುವ ಮಾಳವವಿಲಾಸಿನಿಯರ ಪೆರ್ಮೊಲೆಯ ಪೊರ್ಕುೞಿಯೊಳ್ ಪೞಿವೞಿಯಾದ ಪೆರ್ದೆೞೆ[3]ಯೊಳಮವಗಾಹನಕ್ಕೆಂದು ಬಂದ ಸೊಕ್ಕಿದಾನೆಗಳ ಸಿಂದುರಂಬೊರೆದ ಸಲಿಲಂಗಳೊ[3]ಳಮಿಂಚರದಂಚೆವಿಂಡುಗಳಿಂ ಸೊಗಯಿಸುವಿರ್ತಡಿಗಳೊಳವೊಪ್ಪಂಬೆತ್ತ ವೇತ್ರವತಿಯೆಂಬ ನದಿಯಿಂ ಸುತ್ತುಂಗೊಂಡಿರ್ಪುದಾ ರಾಜಧಾನಿಯೊಳ್

ಮಥಿತರಿಪುಭೂಪಾಳಂ ಹೇಳಾವ[4]ಶೀಕೃತಮಂಡಲಂ[4]
ಪ್ರಥಿತ ಪೃಥಿವೀಪಾಲೌಘಾನಮ್ರಮೌಳಿಮಣಿಪ್ರಭಾ
ಗ್ರಥಿತ ಪದಪೀಠಾಗ್ರಂ ಕೇಯೂರಮಂ ತಳೆವಂದದಿಂ
ಪೃಥುಳ ಭುಜದಿಂ ಪೃಥ್ವೀಶಂ ತಾಳ್ದಿದಂ ನೆಲನೆಲ್ಲಮಂ ೧೬

ವ॥ ಅಂತು ವಿಜಿತಾಶೇಷಭುವನಮಂಡಲತೆಯಿನಪಗತರಾಜ್ಯಚಿಂತಾಭಾರ ನಿರ್ವೃತನಾಗಿರ್ಪನಂತುಮಲ್ಲದೆಯುಂ

ಪ್ರಣತರಿಪುನೃಪತಿಚೂಡಾ
ಮಣಿರಂಜಿತಪಾದನಧಿಕಸತ್ವಗುಣೈಕಾ
ಗ್ರಣಿಗಾ ನೃಪಂಗೆ ಮನದೊಳ್
ತೃಣವಲ್ಲಘುವಾದುದಾವಗಂ ಸ್ತ್ರೈಣಸುಖಂ ೧೭

---

1 ವಿ (ಕ) 2 ಳೊಮ್ಮೆವು (ಕ) 3 ಳ ಮಂಜೀರವಲ್ಲದಿಂ (ಕ)
4 ವನಿ ಮಂದಿರಂ (ಕ)

ಕಂತುಗೆ ತಾನೆ ಮೇಲೆನಿಸಿಯುಂ ಪೊಸಜವ್ವನದಿಂದಮೊಂದಿಯುಂ
ಸಂತತಿವೇಟ್ಟುಮೆಂದು ಸಚಿವರ್ ಸಲೆ ಪೇಟಿಯುಮೊಳ್ಪುವೆತ್ತ ಶು
ದ್ಧಾಂತನಿತಂಬಿನೀನಿವಹಮೊಲ್ದೆಳಸುತ್ತಿರೆಯುಂ ಧರಾಂಗನಾ
ಕಾಂತನ ಚಿತ್ತಮೇಕಱಿಯೆಮೊಂದದಣಂ ಸುರತೋಪಭೋಗಮಂ ೧೮

ಅದೊರ್ಮೆ[1]ಕಲ[1]ವಾದ್ಯದಿಂ ಸರಸವಾದಗೀ[2]ತಂಗಳಿಂ[2]
ದದೊರ್ಮೆ ಮೃದುಪಂಚಮಾಂಚಿತ ವಿಪಂಚಿಕಾನಾದದಿಂ
ದದೊರ್ಮೆ ರಸಭಾವ[3]ಕಂಚುಕಿತ[3] ಚಿತ್ರಕರ್ಮಂಗಳಿಂ
ದದೊರ್ಮೆ ವಿವಿಧಪ್ರಕಾರ ಮೃಗಯಾವಿನೋ[4]ದಂಗಳಿಂ[4] ೧೯

ಅದೊರ್ಮೆ ನವಕಾವ್ಯಬಂಧರಚನಾವಿಶೇಷಂಗಳಿಂ
ದದೊರ್ಮೆ ವರವೀರವಿಶ್ರುತಕಥಾಪುರಾಣಂಗಳಿಂ
ದದೊರ್ಮೆ ಮುನಿಮಂಡಳೀಪದಪಯೋಜಶುಶ್ರೂಷೆಯಿಂ
ವಿದಗ್ಧಜನವಲ್ಲಭಂ ಕಳೆವನಿಂತು ಪೊಟ್ತಂ ನೃಪಂ ೨೦

ವ॥ ಅಂತು ವನಿತಾಸುಖಪರಾಙ್ಮುಖಂ ಪೊಟ್ತುಗಳೆವುತ್ತಿರ್ದೊಂದು ದಿವಸಂ ಪ್ರಭಾತಸಮಯದೊಳೊಡ್ಡೋಲಗದೊಳಿರೆ

ತಳೆದೇನಿರ್ದರೊ ತಮ್ಮ ತಮ್ಮ ತಲೆಯೊಳ್ ರಾಜಾಜ್ಞೆಯಂ ಮೂರ್ತಿಗೊಂ
ಡಳನೆಂಬಂತಿರೆ ಭೂಪತಿಪ್ರಕರ ನಾನಾಮೌಳಿಮಾಣಿಕ್ಯಸಂ
ಕುಳದೊಳ್ ಮಾರ್ಪೊಳೆವುತ್ತಮೊಯ್ಯನೆ ಬರುತ್ತಿರ್ದಳ್ ಪ್ರತೀಹಾರಿ ಭೂ
ವಳಯಾಧೀಶ್ವರನಲ್ಲಿಗಾಗಿ ನಯದಿಂ ವಿಜ್ಞಾಪನೋತ್ಕಂಠೆಯಿಂ ೨೧

ವ॥ ಅಂತು ಬಂದು

ಜನತಾಧೀಶ್ವರ ಬಿನ್ನಪಂ ತ್ರಿದಶಲೋಕಕ್ಕೇಱುತಿರ್ದಾ ತ್ರಿಶಂ
ಕುನರಾಧೀಶನ ಲಕ್ಷ್ಮಿ ಶಕ್ರನ ಮಹಾಹುಂಕಾರದಿಂ ಬಿರ್ದಳೆಂ
ಬಿನೆಗಂ ವಿಶ್ರುತದಕ್ಷಿಣಾಪಥದಿನೊರ್ವಳ್ ಕನ್ನೆ ಚಂಡಾಲೆ ದ
ರ್ಶನ ತಾತ್ಪರ್ಯದೆ ರಾಜಕೀರಸಹಿತಂ ಬಂದಿರ್ದಪಳ್ ಬಾಗಿಲೊಳ್ ೨೨

ವ॥ ಎಂದು ಪಡಿಯರಿತಿ ಬಿನ್ನವಿಸೆ ರಾಜಾಧಿರಾಜಂ ರಾಜಲೋಕದ ಮೊಗಮಂ ನೋಡಿ ದೋಷಮೇಂ ಬರ್ಕೆಂಬುದುಂ ಚಂಡಾಲಕನ್ನೆಯುಂ ಪುಗವೇಟ್ದಾಗಳ್

1 ಲಲಿತ (ಕ) 2 ತದಿಂ (ಕ) 3 ಸಂಕುಚಿತ (ಕ)
4 ದದಿಂ (ಕ)

ಕುಳಶೈಳವ್ರಾತದಿಂದಂ ಬಳಸಿದ ಕನಕಾದ್ರೀಂದ್ರಮೆಂಬಂತೆ ಭೂಭೃ
ತ್ಕುಳಮೆತ್ತಂ ಸುತ್ತಿ ರತ್ನಾಭರಣಕಿರಣಜಾಲಂಗಳಿಂದಿಂದ್ರಚಾಪಂ
ಗಳ ತಳ್ಪಿಂದೊಪ್ಪಮಂ ತಾಳ್ದಿದ ಘನಸಮಯಂ ತಾನಿದೆಂಬಂದದಿಂ ಕ
ಣ್ಗೊಳಿಸಿರ್ದಂ ಪಾದಪೀಠಾಂಕಿತಮಣಿಮಯಪರ್ಯಂಕದೊಳ್ ವಿಕ್ರಮಾಂಕಂ ೨೩

ಅಧಿಕತರರಾಗದೀಧಿತಿ
ನಿಧಾನಮೆನಲೆಸೆವ ಚಕ್ರಿಚರಣಾಂಬುಜವಾ
ಮಧುಕೈಟಭಮದಮರ್ದನ
ರುಧಿರಾರುಣಚಕ್ರಿಚರಣಮಂ ನೆನೆಯಿಸುಗುಂ ೨೪

ಕರಗಳ್ ಮಿಳ್ಳಿಸೆ ಚಾಮರಂಗಳೆಲರಿಂದಂ ಮೆಲ್ಪಿನಿಂ ನರ್ತಿಸು
ತ್ತಿರೆ ನೀಳ್ದಿರ್ದ ಸೆಱಂಗು ಚಿತ್ರಿಸಿದ ಹಂಸಾನೀಕದಿಂ ಚೆಲ್ವನಾ
ಳ್ದಿರೆ ದುಗ್ಧಾರ್ಣವಫೇನಪಾಂಡುರತೆಯಂ ಕೆಯ್ಕೊಂಡು ಬೆಳ್ದಿಂಗಳಂ
ತಿರೆ ತೋಱುತ್ತೆಸೆವುತ್ತರೀಯವಸನಂ ರಾಜೇಂದ್ರಚಂದ್ರಾಂಕನಾ ೨೫

ಎಳವಿಸಿಲ ಮುಱುಗಳಿಂ ಕ
ಣ್ಗೊಳಿಸುವ ಕೈಲಾಸದಂತೆ ಕೀರ್ತಿವಿಲಾಸಂ
ಬೆಳಗುವ ಚಂದನದಣ್ಪಿಂ
ತೊಳಗುವ ಕುಂಕುಮದ ತಳ್ಕಿನಿಂ ಕರಮೆಸೆದಂ ೨೬

ತಾರಾವಳಿ ಮುಖಚಂದ್ರನ
ಸಾರೋಲಗಿಸುತ್ತಮಿರ್ದುದೆನೆ ಸಕಳಕಳಾ
ಧಾರನ ಪೇರುರದೊಳ್ ಮಣಿ
ಹಾರಂ ಥಳಥಳಿಸಿ ಪೊಳೆವುತಿರ್ದತ್ತಾಗಳ್ ೨೭

ಕರಮೆಸೆದಿರ್ದುದು ಚಪಳೆಗೆ
ಸಿರಿಗಿಕ್ಕಿದ ನಿಯಮನಿಗಳಮೆನೆ [1]ಭುಜಗಯುಗಂ[1]
ಪರಿವೇಷ್ಟಿಸಿದುದು ಚಂದನ
ಪರಿಮಳಕೆನೆ ನೃಪನ ರತ್ನಕೇಯೂರ ಯುಗಂ ೨೮

ತುಱುಗಿದ ತಾರಾಪುಂಜದೆ
ಮಿಱುಗುತಿರ್ದಪುದೊ ಪಶ್ಚಿಮಾದ್ರೀಂದ್ರಮೆನಲ್
ನಱುಗಂಪುವೊಱೆದ ಜಾದಿಯ
ತುಱುಂಬು ಕಣ್ಗೊಳಿಸೆ ಶೂದ್ರಕಂ ಕರಮೆಸೆದಂ ೨೯

---

1 ಭುಜಯುಗಳಂ (ಕ)

ತಳೆದಳೊ ಪತಿಯಂ ನೆಲವೆಣ್
ಬಳೆದನುರಾಗದೊಳೆ ಹೃದಯದಿಂದೆಂಬಿನೆಗಂ
ಥಳಥಳಿಪ ರತ್ನಕುಟ್ಟಿಮ
ತಳದೊಳ್ ಪೊಳೆದತ್ತು ರೂಪು ಭೂಪೋತ್ತಮನಾ ೩೦

ವ॥ ಅಂತಿರ್ದ ಶೂದ್ರಕಚಕ್ರವರ್ತಿಯನಾ ಚಂಡಾಲಕನ್ಯೆ ಕಂಡು

ಅರುಣದಳೋತ್ಪಲಕೋಮಲ
ಕರತಳದೊಳ್ ತಳೆದದೊಂದು ಸಂಬಳಿಗೋಲಿಂ
ದಿರದೆ ಪಳಂಚಿಸಿದಳ್ ಜ
ರ್ಝರ ರವಮೊಗೆಯಲ್ಕೆ ನೃಪಸಭಾಕುಟ್ಟಿಮಮಂ ೩೧

ವ॥ ಅಂತು ಸಂಬಳಿಗೋಲಿಂ ಸನ್ನೆಗೆಯ್ಯೆ

ಒಗೆದೊಂದು ತಾಳೆದನಿಗೇ
ಳ್ದ ಗಜವ್ರಜದಂದಮಾಗೆ ಸಂಬಳಿಗೋಲಿಂ
ದೊಗೆದೊಂದುಲುಪಿಂಗತ್ತಲೆ
ಮೊಗನಾದುದು ಭೋಂಕನಖಿಳ ರಾಜಕದಂಬಂ ೩೨

ವ॥ ಅಂತು ಚಂಡಾಲಕನ್ಯೆ ಪುಗುತರ್ಪಾಗಳ್

ಜರೆಯಿಂದಂ ಕೂಡಿ ಬೆಳ್ಪಂ ತಳೆಯೆ ತಲೆ ದಳದ್ರಕ್ತನೀರೇಜಮಂ ಪೋ
ಲ್ತಿರೆ ಕಣ್ ವ್ಯಾಯಾಮದಿಂ ಮೆಯ್ ಸಡಿಲದೆಸೆಯೆ ಮಾತಂಗನಾಗಿರ್ದುಮೇಂ ನಿ
ಷ್ಠುರಮಲ್ಲಾಕಾರಮೀತಂಗೆನಿಸಿ ಧವಳವಾಸೋನ್ವಿತಂ ಮತ್ತಮೊರ್ವಂ
ಬರುತಿರ್ದಂ ಬೆನ್ನೊಳಾತ್ಮೋಚಿತಮೆನಿಸಿದ ಚಾತುರ್ಯದಿಂದಾರ್ಯವೇಷಂ ೩೩

ವ॥ ಅಲ್ಲಿಂ ಪೆಱಗೆ

ಅರಗಿಳಿಯ ಪಸುರ್ಪಿಂದಂ
ಮರಕತಮಯಮೆನಿಪ ಪೊನ್ನ ಪಂಜರಮಂ ಪೊ
ತ್ತಿರದೇಳ್ತಂದಂ ಚಂಡಿಕೆ
ವೆರಸಿದ ಚಂಡಾಲಬಾಲಕಂ ಮತ್ತೊರ್ವಂ ೩೪

ವ॥ ಅಂತವರ್ ಬೆರಸು ಬಂದಳಂತುಮಲ್ಲದೆಯುಂ

ದನುಜರ ಕಯ್ಯೊಳಿರ್ದಮರ್ದನಾವಗಮೀಳ್ಕೊಳಲೆಂದು ದೈತ್ಯಮ
ರ್ದನನೆನಿಸಿರ್ದವಂ ಕಪಟದಿಂದೆ ವಿಲಾಸಿನಿಯಾದ ವೇಷಮಂ
ನೆನೆಯಿಸಿದಪ್ಪುದೀ ಪಸಿಯ ಬಣ್ಣಮಿವಳ್ಗಿನೆ ಚೆಲ್ವನಾಳ್ದು ಮೆ
ಲ್ಲನೆ ನಡೆತರ್ಪ ನೀಲಮಣಿಪುತ್ರಿಕೆಯಂದದಿನಾದಮೊಪ್ಪಿದಳ್ ೩೫

ಮುಸುಕಿದ ಮೆಯ್ಯಿಂ ಗುಲ್ಭಾ
ವಸಕ್ತಮೆನಿಸಿರ್ದ ರಕ್ತನವಕಂಚುಕದಿಂ
ಕಿಸುಸಂಜೆಯೊಳ್ ಬಿಸಿಲ್ಪೊರೆ
ದಸಿತೋತ್ಪಲಿನಿಯವೊಲಾಕೆ ಕಣ್ಗೆಸೆದಿರ್ದಳ್ ೩೬

ಪೊಳೆವೊಂದು ದಂತದೋಲೆಯ
ಬೆಳಗಿಂದುಜ್ವಳಿಪ ಕದಪಿನಿಂದಿಂದುವ ಮಂ
ಡಳದಿಂದಮೂವಗಂ ಕ
ಣ್ಗೊಳಿಪ ವಿಭಾವರಿಯನಿನಿಸನನುಕರಿಸಿರ್ದಳ್ ೩೭

ಅತಿಕಪಿಳ ರೋಚನಾರಚಿ
ತ ತಿಳಕಮದು ನೊಸಲ ಕಣ್ಬೊಲೆಸೆದಿರೆ ಗೌರೀ
ಪತಿಯ ಬಿನದಕ್ಕೆ ಭೂಭೃ
ತ್ಸುತೆ ಬೇಡಿತಿಯಾದ ತೆಱನನನುಕರಿಸಿರ್ದಳ್ ೩೮

ಶ್ರೀರಮಣೀಪ್ರಿಯನ ವಿಶಾ
ಲೋರುಸ್ಥಳದಲ್ಲಿ ನಿಂದು ತತ್ಪ್ರಭೆಯಿಂ ಲ
ಕ್ಷ್ಮೀರಮಣಿ ಪುದಿದಳೆನೆ ನೀ
ರೇರುಹದಳನಯನೆ ನಾಡೆ ಕಣ್ಗೆಸೆದಿರ್ದಳ್ ೩೯

ಸ್ಮರರಿಪುಲಲಾಟನೇತ್ರ
ಸ್ಫುರದುರುಹುತವಹನಿನೆಯ್ದೆ ಬೇವುತ್ತಿರ್ದಾ
ಸ್ಮರನ ಪೊಗೆಯಿಂದೆ ಪುದಿದಿ
ರ್ದ ರತಿಯವೋಲ್ ಕಾಂತೆ ಕರಮೆ ಕಣ್ಗೆಸೆದಿರ್ದಳ್ ೪೦

ಸ್ಮರವೇದನೆಯಿಂ ಮಹಿಷಾ
ಸುರನೇಳ್ತರೆ ಮೆಟ್ಟಿ ಕೊಲ್ವ ಪದದೊಳ್ ನೆತ್ತರ್
[1]ಪೊರೆದದ್ರಿ[1]ಕನ್ಯೆಯಡಿಯಂ
ತಿರಲೇನೆಸೆದಿರ್ದುವಡಿಗಳಾ ಕನ್ನಿಕೆಯಾ

1 ಪೊರೆದಿರ್ದ (ಕ)

ಬೆಟ್ಟಿತಿದು ನಾಡೆಯುಂ ಮಣಿ
ಕುಟ್ಟಿಮತಳಮೆಂದು ತಳಿರ್ಗಳಂ ಮೆಲ್ಲಡಿಯಿಂ
ಮೆಟ್ಟಿರ್ದಪಳೆನೆ ಚೆಲ್ವಿಂ
ದಿಟ್ಟಳಮೆನಿಸಿರ್ದುವರುಣಚರಣದ್ಯುತಿಗಳ್ ೪೨

ಅನಲಂ ರೂಪಿನಪಕ್ಷಪಾತದೊಳೆ ತಾನೇಳ್ತಂದು ನೀರೇಜಗ
ರ್ಭನ ಗೆ[1]ಯ್ತುಂಗಡ[1]ಮಪ್ರಮಾಣಮೆನುತಂ ತಜ್ಜಾತಿಸಂಶೋಧನ
ಕ್ಕನುರಾಗಂಬೆರಸಾದಮಪ್ಪಿದನೊ ಪೇಟೀಗಳೆಂತೆಂಬಂದದಿಂ
ದೆನಸುಂ ನೂಪುರರತ್ನಕಾಂತಿ ತನುವಂ ಪರ್ವಿತ್ತು ತನ್ವಂಗಿಯಾ ೪೩

ಸ್ಮರಚಕ್ರೇಶ್ವರಕರಿಕುಂ
ಭರುಚಿರನಕ್ಷತ್ರಮಾಲೆ ರೋಮಲತಾಬಂ
ಧುರತಾಲವಾಲಮೆಂಬಂ
ತಿರಲೆಸಗುಂ ಕಾಂಚಿ ಜಘನದೊಳ್ ಗುರುಕುಚೆಯಾ ೪೪

ಮಂದಾಕಿನಿ ಪರಿದಾ ಕಾ
ಳಿಂದಿಯೆ ಗೆತ್ತಾದಮುಟ್ಟಿಜಿಂದಂ ಕೊರಲಂ
ಬಂದಪ್ಪಿರ್ದಳೊ ಪೇಟಿಡಿಂ
ಬಂದದಿನೆಸೆದತ್ತು ಹಾರಮಾ ಕಾಮಿನಿಯಾ ೪೫

ವ ॥ ಅದಲ್ಲದೆಯುಂ ಮಲಯಮೇಖಲೆಯಂತೆ ಚಂದನಪಲ್ಲವಾವತಂಸೆಯುಂ ನಕ್ಷತ್ರಮಾಲೆಯಂತೆ ಚಿತ್ರಾಶ್ಲೇಷಶ್ರವಣಾಭರಣಭೂಷಿತೆಯುಂ ಲಕ್ಷ್ಮಿಯಂತೆ ಹಸ್ತಸ್ಥಿತ ಕಮಲಶೋಭಿತೆಯುಂ ದಿವ್ಯಕಾಂತೆಯಂತಕುಲೀನೆಯುಂ ನಿದ್ರೆಯಂತೆ ಲೋಚನಗ್ರಾಹಿಣಿಯುಂ ಮೂರ್ಛೆಯಂತೆ ಮನೋಹರೆಯುಂ ಅರಣ್ಯಭೂಮಿಯಂತೆ ಅಕ್ಷತರೂಪಸಂಪನ್ನೆಯುಂ ಅರಣ್ಯಕಮಲಿನಿಯಂತೆ ಮಾತಂಗಕುಲದೂಷಿತೆಯುಂ ಅಮೂರ್ತೆಯಂತೆ ಸ್ಪರ್ಶವರ್ಜಿತೆಯುಂ ಆಲೇ[2]ಖ್ಯಗತೆ[2]ಯಂತೆ ದರ್ಶನಮಾತ್ರಫಲೆಯುಂ ಮಧುಮಾಸಕುಸುಮಸಮೃದ್ಧಿಯಂತೆ ವಿಜಾತಿಯುಂ ಮದನಚಾಪಲತೆಯಂತೆ ಮುಷ್ಟಿಗ್ರಾಹ್ಯಮಧ್ಯೆಯುಂ ಯಕ್ಷಾಧಿಪಲಕ್ಷ್ಮಿಯಂತಳಕೋದ್ಭಾಸಿ[3][ಯುಮೆ][3] ನಿಸಿದೇರುಂಜವ್ವನೆಯ ರೂಪಾತಿಶಯಮನೆಮೆಯಿಕ್ಕದೆ ನೋಡುತ್ತಮತಿವಿಸ್ಮಿತಚಿತ್ತನಾಗಿ ತನ್ನೊಳಿಂತೆಂದಂ

---

1 ಯ್ತುಗಮ (ಕ) 2 ಖ್ಯೆಯಂ (ಕ) 3 ಯೆ (ಕ)

ಇದು ಮೂಲೋಕಕ್ಕಚ್ಚರಿಯೆನಿಸಿದುದಸ್ಥಾನದೊಳ್ ರೂಪಮಂ [1]ಮಾ
ಡಿದ ವಾಣೀಶಪ್ರಯತ್ನಂ[1] ತ್ರಿಭುವನಜನಕ್ಕಾಶ್ಚರ್ಯಮಪ್ಪಂತು ರೂಪಂ
ಪದಪಿಂದಂ ಮಾಡಿಯುಂ ನೋಡಿಯುಮಸದೃಶದೊಳ್ ಗರ್ಹಿತಸ್ಪರ್ಶಸಂಭೋ
ಗದೊಳಿಂತೀ ದುಷ್ಟಚಂಡಾಲರ ಕುಲದೊಳಗೇಗೈದನೋ ದುರ್ವಿವೇಕಂ ೪೬

ಇದನಱಿವೆಂ ಕಮಲಭವಂ
ಮೊದಲೊಳ್ ಮಾತಂಗಿಯೆಂದು ತಾಂ ಮುಟ್ಟದೆ ಮಾ
ಡಿದನಕ್ಕುಂ ಕಯ್ಯೊಳ್ ಮು
ಟ್ಟಿದೊಡಿಂತಗ್ಗಳಿಸಿ ತೋರ್ಕುಮೇ ಲಾವಣ್ಯಂ ೪೭

ವ॥ ಎಂದಾ ರೂಪಿಂಗಚ್ಚರಿವಡುತಿರ್ದ ನೃಪರೂಪಚಂದ್ರನಂ ನೋಡಿ

ಸೊಗಯಿಸುವ ಪಾಲೆಯಿಂ ನಸು
ಜಗುಳುತ್ತಿರೆ ಕರ್ಣಪೂರಪಲ್ಲವಮಾ ಚ
ಕ್ರಿಗೆ ತನ್ನ ವಿನಯದಿಂದಂ
ಪ್ರಗಲ್ಭೆಯೆನಿಸಿರ್ದ ವನಿತೆವೋಲ್ ಪೊಡಮಟ್ಟಳ್ ೪೮

ವ॥ ಅಂತು ಪೊಡಮಟ್ಟು ಮಣಿಕುಟ್ಟಿಮತಳದೊಳ್ ಕುಳ್ಳಿರ್ಪುದುಮೊಡನೆ ಯಾ ಮಾತಂಗಂ ವಿಹಂಗಸಂಗತಪಂಜರಮಂ ಪಿಡಿದು ನರೇಂದ್ರನಂ ದೇವ ಬಿನ್ನಪ ಮೆಂದಿಂತೆಂದಂ

ಇದು ವಿದಿತಾರ್ಥಶಾಸ್ತ್ರನಿದಶೇಷಪುರಾಣಕಥಾಪ್ರವೀಣನಿಂ
ತಿದು ಸಕಲಾಂಗವೇದವಿದನಿಂತಿದು ಕಾವ್ಯಕಲಾಪ್ರಗಲ್ಭನಿಂ
ತಿದು ವಿತತಾದಿವಾದ್ಯವಿದನಿಂತಿದು ಚಿತ್ರಕಥಾಭಿರೂಪನಿಂ
ತಿದು ಗಜವಾಜಿಲಕ್ಷಣವಿಚಕ್ಷಣನೀ ಶುಕನುದ್ಗತಾಂಶುಕಂ ೪೯

ಇದು ನರ್ತನಾವಲೋಕನ
ವಿದನಿದು ಪರಿಹಾಸವಚನನಿಚಯಾಸ್ಪದನಿಂ
ತಿದು ಸಕಲಸುಭಾಷಿತಕೋ
ವಿದನಿದು ಬಹುವಿಧಕಳಾಕಳಾಪಾಭಿಜ್ಞಂ ೫೦

ವ॥ ಅದಲ್ಲದೆಯುಂ

---

1 ಮಾಡಿದಪ್ರಯತ್ನಂ (ಕ)

ವನಿತೆಯರೊಲವಿನ ಕಲಹದ
ಮುನಿಸುಗಳಂ ತಿಳಿಪುವೆಡೆಯೊಳತಿಚತುರಂ ತಾ
ನೆನಿಸಿರ್ದುಂ ವೈಶಂಪಾ
ಯನನೆನಿಪುದು ಪೆಸರೊಳೀ ಶುಕಂ ಭುವನಪತೀ ೫೧

ದೇವರೆ ಭಾಜನಂ ವಿದಿತರತ್ನಚಯಕ್ಕೆ ದಲೆಂದು ತನ್ನ ಸ
ದ್ಭಾವದಿನೆನ್ನನಾಳ್ದನ ಮಗಳ್ ಪದಪಿಂದಮೆ ತಂದಳಿಂತಿದಂ
ದೇವರ ಪಾದಪಂಕರುಹದಲ್ಲಿಗೆ ಕನ್ಯೆಯದೊಂದು ಭಕ್ತಿಯಂ
ಭಾವಿಸಿ ನೀನಿದಂ ನೃಪತಿ ಕೈಕೊಳವೇಟ್ಪುದು ರಾಜಕೀರಮಂ ೫೨

ವ || ಎಂದೊಡನೆಯಾ ಮಾತಂಗಂ ಬಿನ್ನವಿಸಿ ಶುಕಪಂಜರದ ಬಾಗಿಲಂ ತೆಱೆದು ಮುಂದಿರಿಸಲಾ ಶುಕಂ ರಾಜಾಭಿಮುಖನುಮುನ್ನಮಿತ ದಕ್ಷಿಣಚರಣನುಮತಿ ಸ್ಪಷ್ಟವರ್ಣಸಂಸ್ಕಾರಮಪ್ಪವಾಣಿಯಿಂ ಕೃತಜಯಶಬ್ದನುಮಾಗಿ

ತಿರ್ಯಗ್ಜಾತಿಯೊಳೀ ಚಾ
ತುರ್ಯಮಿದೇನೆಂದು ಸಭೆಯ ಚಿತ್ತದೊಳತ್ಯಾ
ಶ್ಚರ್ಯಮೊದವುವಿನಮುರಸಂ
ಗಾರ್ಯಮನೋದಿತ್ತದೊಂದನಾ ಶುಕರತ್ನಂ ೫೩

ಆರ್ಯಾ || ಸ್ತನಯುಗಮಶ್ರುಸ್ನಾತಂ
ಸಮೀಪತರವೃತ್ತಿ ಹೃದಯಶೋಕಾಗ್ನೇಃ
ಚರತಿ ವಿಮುಕ್ತಾಹಾರಂ
ವ್ರತಮಿವ ಭವತೋ ರಿಪುಸ್ತ್ರೀಣಾಂ ||

ವೀರರ ವೀರವಿಮುಕ್ತಾ
ಹಾರಂ ಭವದರಿವಧೂಸ್ತನದ್ವಿತಯಂ ಕ
ಣ್ಣೀರಿಂ ಮಿಂದೆದೆಗಿರ್ಚಿಂ
ದೋರಂತಿರೆ ಬೆಂದು ಚರಿಸುತಿರ್ಪುದು ತಪಮಂ ೫೪

ವ || ಅಂತದನರಸಂ ಕೇಳ್ದು ಚೋದ್ಯಂಬಟ್ಟು ಬಲದ ಕೆಲದೊಳ್ ಮಹಾಹೇಮಾಸನಾಸೀನನುಮುಮರಗುರುಸದೃಶನುಮಖಿಲಮಂತ್ರಿಮಂಡಳಿಕಪ್ರಧಾನನುಮಪ್ಪ ಕುಮಾರಪಾಲಿತನೆಂಬ ಮಂತ್ರಿಮುಖ್ಯನನಿಂತೆಂದಂ

ಗಿಳಿಗೀ ಸ್ಪಷ್ಟಾಕ್ಷರೋಚ್ಚಾರಣಮೆ ನೊದಲೊಳಾಶ್ಚರ್ಯಮೆಂಬಲ್ಲಿ ಮತ್ತ
ಗ್ಗಳಿಸುತ್ತುಂ ವರ್ಣಮಾತ್ರಾಸ್ವರರುಚಿರಮುಮಾದಾರ್ಯೆಯುಂ ವ್ಯಕ್ತದಿಂದ
ಸ್ಖಲಿತಂ ತಾನೆನ್ನನುದ್ದೇಶಿಸಿ ಸುಲಲಿತಮೆಂಬಂದದಿಂವೋದಿ ತೋರ್ದೀ
ಗಿಳಿಗೆಂತೋ ಬುದ್ಧಿಪೂರ್ವಂ ಮನುಜರ ತೆಱದಿಂದೋದುವಾಶ್ಚರ್ಯಮಾಗಲ್ ೫೫

ವ ॥ ಎಂಬುದುಂ ಕುಮಾರಪಾಲನಿಂತೆಂದಂ

ಶುಕಶಾರಿಕಾದಿ ವಿಹಗ
ಪ್ರಕರಂ ಮುಂ ಕೇಳ್ದ ವಚನಮಂ ನುಡಿವುದು ಕೌ
ತುಕಮಲ್ಲದೀಗಳುಂ ಕೌ
ತುಕಮಿಂತಿಂತೇಕೆ ದೇವ ನೀನಱಿಯದುದೇ ೫೬

ಇದು ಪೂರ್ವಜನ್ಮಸಂಸ್ಕಾ
ರದೆ ಮೇಣ್ ಪುರುಷಪ್ರಯತ್ನದಿಂದಂ ಮೇಣಿಂ
ತುದಯಿಸುಗುಮಲ್ತೆ ಸಂಸ್ಕಾ
ರದೊಳತಿಶಯಚಿತ್ರಮಲ್ತು ಭಾವಿಸಿ ನೋಡಲ್ ೫೭

ವ ॥ ಅದಲ್ಲದೆಯುಂ

ನುಡಿ ಮುನ್ನಂ ಸ್ಪಷ್ಟಮಾಗಿರ್ದುದು ಬೞಿಕಮಿದಸ್ಪಷ್ಟಮಾಯ್ತಗ್ನಿಶಾಪಂ
ಗುಡಲಲ್ಲಿಂದಿತ್ತಲಿಂತೀ ಶುಕಸಮಿತಿಗೆ ತಚ್ಛಾಪದಿಂ[1]ದಾನೆಗಳ್ಗಂ
ನುಡಿಯಲ್ಕಾಗಂದಿನಿಂ ನಾಲಗೆ ಮಡಿದುದೆನುತ್ತಿಂತು ಪೇೞುತ್ತಿರಲ್ಕಾ
ಗಡೆ ಪೊಣ್ಮಿತ್ತಲ್ಲಿ ಮಧ್ಯಂದಿನಸಮಯಸಮುದ್ಭೂತ ಶಂಖಪ್ರಣಾದಂ ೫೮

ವ ॥ ಅದಂ ಕೇಳ್ದು ಮಜ್ಜನಕ್ಕುಜ್ಜುಗಂಗೆಯ್ದೊಡ್ಡೋಲಗಮಂ ಪಱಿಯಲ್ವೇಟ್ಟಾಸ್ಥಾನಮಂಟಪದಿಂ ಮಹೀಪಾಲನೇಳ್ವುದುಮನೇಕಾಂಗದಮಕರಿಕಾಪತ್ರಾದಿಗಳಿಂ ಮಿಂಚು ಪೊಣ್ಮೆ ತಮ್ಮೊಳ್ ಪಳಂಚಲೆಯೆಯುಂ ತೋರಮುಯ್ಪುಗಳೊಳೆಸೆವ ಕುಂಕುಮಂಗಳ ಬಂಬಲ ಸೋಂಕಿನೊಳ್ ರಜಂ ನೆಗೆದು ದೆಸೆಗಳ್ ಪೊಂಬಣ್ಣಮಾಗೆಸೆಯೆಯುಂ ತುಂಬಿಗಳ್ ಪೂಗೊಳಂ ಬಿಟ್ಟು ಮೇಗೆ ನೆಗೆಯೆಯುಂ ಕರ್ಣೋತ್ಪಲಂಗಳ್ ಕಪೋಲಬಿಂಬಗಳೊಳ್ ಬಿಂಬಿಸೆಯುಂ ತೋರ ಮುತ್ತಿನಹಾರಂಗಳುರಸ್ಥಲಂಗಳೊಳ್ ಪೊಳೆದಾಡೆಯುಮತಿಸಂಭ್ರಮದಿನೊಡನೇಳ್ವ ಮಹೀಪಾಲರೊಳಂ [2]ಅಂಸಾವಸಕ್ತ ಚಮರೀಜ[2]

1 ತಾನೆಗಳ್ದಾ ನುಡಿಯಲ್ಕಾಗೆಂದಿನಂ (ಕ) 2 ವರಶಾಪಶಕ್ತಿಯರಪ್ಪ ಚಮರಿಜ (ಕ)

ಯರಪ್ಪ ಕಾಂತೆಯರ ಕಮಳ ಮಧುಪಾನದಿಂ ಸೊಕ್ಕಿದ ಮುತ್ತಂಚೆಯ ಧ್ವನಿಗಳಂತೆ ಜರ್ಝರಮಾದ ಪೊಂಗೆಜ್ಜೆಗಳ ಮೆಲ್ಲುಲಿಯೊಳಂ ವಿಳಾಸಿನೀಜನದ ಘನಜಘನಂಗಳೊಳ್ ಪಳಂಚುವ ರತ್ನಮಾಲೆಗಳೊಳಮುಡಿಯಿಡುವ ರಮಣಿಯರ ನೂಪುರರಣಿತಕ್ಕೆಳಸಿಬರ್ಪ ಅಂಚೆವಿಂಡಿನಿಂಚರದೊಳಮುಲ್ಲಸಿತಮಾದ ಕಾಂಚೀಕ್ರೇಂಕಾರಕ್ಕುತ್ಕಂಠಂಗಳಾದ ಸಾರಸಂಗಳ ಕೂಜಿತಂಗಳೊಳಮನುಪಮಪ್ರಾಸಾದಕೂಟಕುಹರಂಗಳೊಳ್ ಮಾರ್ದನಿಯಿಡುವ ಪಡಿಯರರ ಕಳಕಳಂಗಳೊಳರಸುಗಳಿಮಗೆತಮಗೆಂದು ಪೊಡುವಡುವಲ್ಲಿ ಮಣಿಕುಟ್ಟಿಮತಳದೊಳ್ ಪಳಂಚುವ ಮಣಿಮಯ ಕಿರೀಟ ಕರ್ಣಪೂರ ಕೇಯೂರಹಾರರಣಿತಂಗಳೊಳಮೆಡವರಿಯದಡಿಯಿಡುವ ಮಾಮಸಕಕಂಜಿ ಮಣಿಕುಟ್ಟಿಮತಳದ ಪೂವಲಿಯಂ ಬಿಟ್ಟು ಪಾರುವ ಮಧುವಿಹಂಗಂಗಳ ಹುಂಕಾರದೊಳಂ ಮುಂದೆ ಬಂದೋದುವ ಮಂಗಳಪಾಠಕರ ಜಯಜಯಾದಿ ಮಧುರರವಂಗಳೊಳಮತಿಕ್ಷುಭಿತಮಾದಾಸ್ಥಾನಮಂಟಪದಿಂ ಮನುಜೇಂದ್ರಂ ಪೊಱಮಟ್ಟು ಸಕಳರಾಜಲೋಕಮಂ ವಿಸರ್ಜಿಸಿ ಚಂಡಾಲಕನ್ನೆಯಂ ವಿಶ್ರಮಿಸಲ್ವೇೞ್ದು ವೈಶಂಪಾಯನನಂ ಮಹಾದೇವಿಯರರಮನೆಗೆ ಕಳುಪಿ ಮೆಂದಾ ತಾಂಬೂಲಕರಂಕವಾಹಿನಿಗೆ ಬೆಸಸಿ ಕೆಲಬರರಸುಮಕ್ಕಳ್ವೆರಸೊಳಗುಪೊಕ್ಕು

ಭುವನೇಶಂ ಭೂಷಣವೆ
ಲ್ಲವನಾಗಳ್ ಕಳೆದು ನಾಡೆಯುಂ ಕಣ್ಗೆಸೆದಂ
ದಿವಸಕರಚಂದ್ರತಾರಾ
ನಿವಹಂ ತೊಲಗಿರ್ಪ ಗಗನವಿಸ್ತಾರದವೊಲ್ ೫೯

ಪೆಱಗಿವೆ ಪೊಣ್ಮಿದತ್ತಮೃತಬಿಂದುಗಳೆಂಬಿನೆಗಂ ಲಲಾಟದೊಳ್
ತುಱುಗಿದ ಸಿಂಧುವಾರ ನವಮಂಜರಿಯೆಂಬಿನೆಗಂ ಕದಂಪಿನೊಳ್
ಮಿಱುಗುವ ಹಾರಮೆಂಬಿನಮುರಸ್ಥಳದೊಳ್ ಘನಘರ್ಮಬಿಂದುಗಳ್
ಪೊಱಮಡೆ ಮತ್ತಳಂಕೃತನವೋಲೆಸೆದಂ ನೃಪರೂಪಚಂದ್ರಮಂ ೬೦

ವ॥ ಅನಂತರಂ ಕಟ್ಟಿದ ಬೆಳುವಟ್ಟೆಯ ಮೇಲ್ಕಟ್ಟನೊಳಂ ತೀವಿದ ಚೆಂಬೊನ್ನದೋಣಿಗಳೊಳಮಳಂಕರಿಸಿದ ಪಳುಕಿನ ಪಟ್ಟವಣೆಗಳೊಳಂ ಪರಿಮಳಕ್ಕೆಱಗಿ ಮುಸುಱುವ ಮಱಿದುಂಬಿಯ ಬಂಬಲಿಂ ನೀಳಾಂಬರದಿಂ ಬಾಸಣಿಸಿದಂತಿರ್ದ ಗಂಧೋದಕಕಲಶಂಗಳೊಳಮೆಸೆವ ಮಜ್ಜನಪ್ರದೇಶಕ್ಕೆ ಮಜ್ಜನೋಪಕರಣಸಂಪಾದನವ್ಯಗ್ರಪರಿಜನಂ ಬೆರಸು ಬಂದು ನೀರ್ದೋಣಿಯೊಳೋಲಾಡಿ ಮಜ್ಜನಪೀಠಮನಲಂಕರಿಸಿದಾಗಳ್.

ಬಿಗಿದೊಗೆದೊಪ್ಪಿ ತೋರ್ಪ ಕುಚಮಂಡಳಮಂ ರುಚಿರಾಂಚಳಂಗಳಿಂ
ಬಿಗಿದಮರ್ದಂತಿಱುಂಕಿ ನಿಱಿಯಂ ಲುಳಿತಾಳಕಜಾಳಮಂ ಕೊಡಂ
ಕೆಗೆ ತೆಗೆದೇಱಿನೂಂಕಿ ಮಣಿಕಂಕಣಮಂ ಕಳಶೋತ್ಕರಂಗಳಂ
ತೆಗೆದಭಿಷೇಕದೇವತೆಯರಂದದಿನೊಪ್ಪಿದರಂದು ಕಾಂತೆಯರ್ ೬೧

ಕಲಶಮನಾಗಳ್ ನಿಜ ಕುಚ
ಕಲಶದ ಮೇಲಿಟ್ಟು ನೃಪನ ಕೆಲದೊಳ್ ಕೆಲಬರ್
ಕಲಶಸ್ತನೆಯರ್ ನಿಜಕುಚ
ಕಲಶದ ಚೆಲ್ವಿಂಗೆ ಕಲಶವಿಟ್ಟಂತಿರ್ದರ್ ೬೨

ನಳಿನದಳಪುಟದೆ ನೀರಂ
ನಳಿನಿಗಳಿವು ರೂಪುಗೊಂಡು ಸುರಿದಪುವೆನೆ ಕಂ
ಗೊಳಿಪ ಮರಕತದ ಕಳಶಂ
ಗಳ ಜಲಮಂ ಸುರಿದರಮಳಕಮಳಾನನೆಯರ್ ೬೩

ರಜನಿಗಳೈಂದವಬಿಂಬ
ವ್ರಜದಿಂ ಜ್ಯೋತ್ಸ್ನಾಪ್ರವಾಹಮಂ ಪಸರಿಪವೋಲ್
ರಜತಕಳಶಂಗಳಿಂ ಮಳ
ಯಜ ಜಳಮಂ ಸುರಿದರಸಿತನಳಿನೇಕ್ಷಣೆಯರ್ ೬೪

ಸುರುಚಿರ ಶಾತಕುಂಭಕಲಶಂಗಳ ಮಂಗಳಪಲ್ಲವಂಗಳಂ
ತಿರೆ ಕರಪಲ್ಲವಂ ನಖನಿಕಾಯದಿನುಣ್ಮುವ ಕಾಂತಿಜಾಳಮಂ
ಜರಿ ಲುಳಿತಾಂಗುಳಿಪ್ರಕರದಿಂ ಪೊಱಪೊಣ್ಮುವ ವಾರಿಧಾರೆಯಂ
ತಿರೆ ಜಲಯಂತ್ರದೇವತೆಯರಂದದಿನೊಪ್ಪಿದರಂದು ಕಾಂತೆಯರ್ ೬೫

ಕಳಸಮನೆತ್ತಿ ಬಳಲ್ದಾ
ಗಳಂತೆ ಸರ್ವಾಂಗದಿಂದೆ ಪೊಣ್ಮೆ ಬೆಮರ್ ಕೋ
ಮಳೆಯರ್ ಜಳದೇವತೆಯರ
ವಿಳಾಸಮಂ ತಳೆದು ಸುರಭಿಜಳಮಂ ಸುರಿದರ್ ೬೬

ಉದಯಂಗೆಯ್ವಿನಬಿಂಬದಿ
ನುದಯಿಸುವೆಳೆವಿಸಿಲಿದೆಂಬಿನಂ ಮಣಿಮಯ ಕುಂ
ಭದಿನಂದು ಪೊಯ್ದಳೊರ್ವಳ್
ವಿದಳಿತ ಪಂಕರುಹವದನೆ ಕುಂಕುಮಜಳಮಂ ೬೭

ವ॥ ಅಂತು ಮಜ್ಜನಾನಂತರದೊಳ್

ತರುಣೋರಗನವನಿರ್ಮೋ
ಕರುಚಿರಮೆನಿಸಿರ್ದ ಧೌತಧವಳಾಂಬರದಿಂ
ಕರಮೆಸೆದನಭ್ರಗಂಗಾ
ಪರಿವೃತ ಹಿಮವನ್ನಗೇಂದ್ರದಂತೆ ನರೇಂದ್ರಂ ೬೮

ವ || ಅನಂತರಂ [ಸಂಪಾದಿತ]ಪಿತೃತರ್ಪಣನುಮಭಿವಂದಿತಸಹಸ್ರಕಿರಣನುಮ ಭ್ಯರ್ಚಿತ ಭಗವದ್ಭವಾನೀವಲ್ಲಭಚರಣಕಮಳನುಮುಪಚರಿತಲೇಪನಾಳಂಕಾರನು[1]ಮಾಚರಿ [1] ತಾಭ್ಯವಹಾರನುಮುದ್ಗೃಹೀತತಾಂಬೂಲಕರಂಕವಾಹಿನೀಸ್ಕಂಧವಿನ್ಯಸ್ತಹಸ್ತನುಮಾಗಿ ಕತಿಪಯಪದಂಗಳಂ ನಡೆದಿದಿರೊಳ್ ಪೊಳೆವ ಪಳುಕಿನ ಭಿತ್ತಿಯಂತೆ ಸುತ್ತಿದ ನೇತ್ರದುಕೂಲದೊಳಂ ಕಸ್ತೂರಿಯ ಕಂಪಿನಿಂ ಪೊರೆದ ಚಂದನದಣ್ಪಿಂ ಕುಳಿರ್ವಮಣಿಕುಟ್ಟಿಮತಳದೊಳಂ ಗಗನತಳದೊಳ್ ಪೊಳೆವ ತಾರಾವಳಿಯಂತೆ ನೀಲದ ನೆಲಗಟ್ಟಿನೊಳ್ ಪೊರೆದ ಪೂವಲಿಯೊಳಂ ಗೃಹದೇವತೆಯರ್ ಸಂನಿದವಾದರೆನಿಸಿ ರಂಜಿಸುವ ಮಣಿಮಯ ಸಾಲಭಂಜಿಕೆಗಳೊಳಂ ಸುಗಂಧಜಲದೊಳ್ ತೊಳೆಯೆ ಕಂಪುವೆತ್ತು ಪೊಳೆವ ಪಳುಕಿನ ಕಂಬಂಗಳೊಳಂ ಮಂದೈಸಿ ನೆಗೆವಗರುಧೂಪಧೂಮದೊಳಮೆಸೆವಾಸ್ಥಾನಮಂಟಪದೊಳ್ ಸಮುಚಿತಾಮಾತ್ಯರಾಜಪುತ್ರಮಿತ್ರಸಮನ್ವಿತಂ ಬಂದು ಪುಗುವಲ್ಲಿ

ಬಳಸಿರ್ದಭ್ರಾಳಿಯಿಂದಂ ತುಹಿನಗಿರಿಶಿಲಾಪಟ್ಟಮೆಂಬಂತೆ ಚೆಲ್ವಾ
ದ ಲತಾಂತಂ ತಳ್ತ ಶಯ್ಯಾಶ್ರಿತ ಸಿತ ಮೃದುಳಪ್ರಚ್ಛದಚ್ಛನ್ನ ಶಯ್ಯಾ
ತಲದೊಳ್[2]ಕಿಳ್ವಾಳವಳ್ ಮೆಲ್ಲನೆ[2] ಕರತಳಪದ್ಮಂಗಳಿಂ ಪಾದಪದ್ಮಂ
ಗಳನಂದೊತ್ತುತ್ತಿರಲ್ ಶೂದ್ರಕನೃಪತಿ ಸುಖಾಸೀನನಾಗಿರ್ದನಾಗಳ್ ೧೯

ವ || ಅನಂತರಮನತಿದೂರದೊಳಿರ್ದ ದೌವಾರಿಕೆಯಂ ವೈಶಂಪಾಯನನೊಡಗೊಂಡು ಬರ್ಪುದೆಂದು ತದ್ವೃತ್ತಾಂತಾಕರ್ಣನ ಕೌತುಕದಿಂ ಬೆಸಸೆ

ಪಡಿಯರತಿ ವಿನಯವಿನಮಿತೆ
ಪೊಡೆವಟ್ಟಾಕ್ಷಣದೊಳಂತೆ ಮುದದಿಂದಂ ಕ
ನ್ನಡವಕ್ಕಿಯ ಪಂಜರಮಂ
ತಡೆಯದೆ ತಂದನನಿಪತಿಯ ಮುಂದಿಱಿಪುವುದುಂ ೨೦

ಕುಂಚಿತ ಪೂರ್ವಕಾಯನುಪಜಾತಜರಾಧವಳೋತ್ತಮಾಂಗನಂ
ಗಾಂಚಿತ ಕಂಚುಕಂ [3]ವಿಹಗ[3]ಜಾತಿಯ ಕೂರ್ಮೆಯಿನೆಯ್ದೆವರ್ಪ ಮು
ತ್ತಂಚೆಯಿದೆಂಬಿನಂ ಗಿಳಿಯ ಬೆನ್ನನೆ ಮೆಲ್ಲನೆ ಗದ್ಗದಸ್ವನಂ
ಕಂಚುಕಿ ಬಂದು ಕಂಡನನುರಾಗದಿನಾ ಮನುಜೇಂದ್ರಚಂದ್ರನಂ ೨೧

ವ || ಅಂತು ಕಂಡವನಿತಳಕ್ಕೆ ಕರತಳಮನಿಕ್ಕಿ ಪೊಡಮಟ್ಟು ದೇವ ಬಿನ್ನಪಂ ದೇವಿಯರ್ ದೇವರಾಣತಿಯಿಂ ಕೃತಸ್ನಾನನುಮುಪರಚಿತಾಹಾರನುಮಾದೀ ವೈಶಂಪಾಯನನಂ ದೇವರಡಿಯೆಡೆಗೆ ದೌವಾರಿಕೆಯೊಡನೆ ಕಳುಪಿದರೆಂದು ಬಿನ್ನವಿಸಿದರೆನೆ ವೈಶಂಪಾಯನನಂ ನರೇಂದ್ರನಿಂತೆಂದಂ

1 ಮುಚ್ಚರಿ (ಕ) 2 ನೋಳ್ಪಕೀಳ್ವಾಳವಿಲ್ಲಿಲ್ಲೆನೆ (ಕ) 3 ವಿಗತ (ಕ)

ಏನೇನಭಿಮತಮಂ ಪೇಟ್
ನೀನಾಸ್ವಾದಿಸಿದೆ ದೇವಿಯರ ಮನೆಯೊಳಿನ
ಲ್ಕೇನೇನಭಿಮತಮಂ ಕೇ
ಳಾನಾಸ್ವಾದಿಸಿದೆನಿಲ್ಲ ನೃಪಕುಲತಿಲಕಾ ೭೨

ಕಳಕಂಠಲೋಚನಚ್ಛವಿ
ವಿಳಾಸಮಂ ತಳೆದ ನೀಲಪಾಟಳಜಂಬೂ
ಫಳಮಧುರರಸಮನೀಂಟಿದೆ
ನಿಳೇಶ ಪಿರಿದಱ್ತಿಯಿಂ ಮನಂ ತಣಿವಿನೆಗಂ ೭೩

ಹರಿವಿದಳಿತಮದಗಜಕುಂ
ಭರಕ್ತಸಿಕ್ತಾರ್ದ್ರಮೌಕ್ತಿಕಪ್ರಕರದವೋಲ್
ಕರಮೆಸೆವ ದಾಡಿಮೀ ಬೀ
ಜರಾಜಿಯಂ ತೆಗೆದು ರಸವನಾಸ್ವಾದಿಸಿದೆಂ ೭೪

ಆದತ್ತಾಮಳಕಫಳಾ
ಸ್ವಾದನೆಯಿಂ ತೃಪ್ತಿ ದೇವ ಗಱಿಪುತ್ತಿರಲೇಂ
ಆದತ್ತಮೃತಂ ದೇವಿಯ
ರಾದರದಿಂ ತಮ್ಮ ಕಯ್ಯೊಳೂಡಿದರೆನ್ನಂ ೭೫

ವ॥ ಅಂತು ನುಡಿದ ವೈಶಂಪಾಯನನಂ ನರೇಂದ್ರನಿಂತೆಂದಂ

ಎಂತೆಂತು ನುಡಿಯೆ ವಿಸ್ಮಯ
ವಂತಂತೊದವಿಪುದು ಚಿತ್ತದೊಳ್ ಕೇಳಿದನ
ತ್ಯಂತಂ ನಿನ್ನಯ ನಿಜವೃ
ತ್ತಾಂತಮನೆನಗಱಿಯೆ ಪೇೞ್ವುದತಿಕೌತುಕಮಂ ೭೬

ನಿನ್ನಯ ದೇಶಮೆತ್ತಣದು ಪುಟ್ಟಿದೆಯೆಂತಭಿಧಾನಮಾವನಿಂ
ದಂ ನಿನಗಾಯ್ತು ವೇದನಿವಹಸ್ಮೃತಿಶಾಸ್ತ್ರಕಳಾಕಳಾಪಸಂ
ಪಂನತೆಯೆಂತು ಬಂದುದು ಭವಸ್ಮೃತಿ ಪುಟ್ಟಿತೊ ಮೇಣ್ ವರಪ್ರಸಾ
ದೋನ್ನತಿಯಾದುದೋ ಮಱಿಸಲೆಂದು ವಿಹಂಗಮವೇಷಿಯಾದೆಯೋ ೭೭

ದೊರೆಕೊಂಡೆಯೆಂತು ಮುಂ ಪಂ
ಜರಬಂಧನಮಾದುದೆಂತು ನಿನಗೀ ಚಂಡಾ
ಲರ ಸಂಗತಿಯೆಂತಿಲ್ಲಿಗೆ
ಬರವಾಯಿತ್ತೆಂತು ಪೇೞಿದೆಲ್ಲಮನೀಗಳ್ ೭೮

ತನ್ನಯ ಚಿತ್ತದೊಳ್ ಪಿರಿದು ಕೌತಕಮಾಗಲು ತನ್ನನಕ್ಕಱಿಂ
ಮನ್ನಿಸಿ ಭೂಭುಜಂ ಬೆಸಗೊಳಲ್ ನಿಜವೃತ್ತಮನೆಲ್ಲಮಂ ಕ್ಷಣಂ
ತನ್ನೊಳೆ ತಾನೆ ಭಾವಿಸುತಮಿರ್ದ ಶುಕಂ ನುಡಿಗುಂ ನರೇಂದ್ರ ಕೇಳ್
ನಿನ್ನ ಮನಕ್ಕೆ ಕೌತುಕಮಿದಪ್ಪೊಡೆ ಪೇೞ್ವೆನೆ ತತ್ಪ್ರಪಂಚಮಂ ೭೯

ವ॥ ಎಂದು ವೈಶಂಪಾಯನಾಭಿಧಾನ ಶುಕಂ ಪೇೞಲ್ತಗುಳ್ದುದದೆಂತೆನೆ

ಭುವನಪ್ರಸ್ತುತ್ಯವಸ್ತುಪ್ರಕರದ ಪುದುವಿಂ ಮಧ್ಯದೇಶಕ್ಕಳಂಕಾ
ರವೆನಲ್ ಚೆಲ್ವಾಗಿ ಭೂದೇವಿಯ ರುಚಿರ ಕಟೀಸೂತ್ರವೋ ಪೇೞಮೆಂಬಂ
ತೆವೊಲೊಪ್ಪಂಬೆತ್ತು ಪೂರ್ವಾಪರಜಳನಿಧಿವೇಳಾತರಂಗೋಚ್ಚಳದ್ರ
ತ್ನವಿನಿದ್ರಪ್ರಾಂತದೇಶಂ ಸೊಗಯಿಪುದೆನಸುಂ ನೀಳ್ದ ವಿಂಧ್ಯಾಚಳೇಂದ್ರಂ ೮೦

ವ॥ ಅಂತಾ ವಿಂಧ್ಯಾಚಳದ ಪೇರಡವಿಯೊಳ್

[1]ಪಳುವದ[1] ಮದಕರಿಗಳ ಮದ
ಜಳದೊಳ್ ನಿಮಿರ್ದಿರ್ದ ಮರದ ತುದಿಗೊಂಬುಗಳೊಳ್
ಪೊಳೆವುವು ಸಿಲುಕಿದ ತಾರಾ
ವಳಿಗಳಿವನೆ ತೊಳಗಿ ಪೊಳೆವ ಕುಸುಮಾವಳಿಗಳ್ ೮೧

[2]ಕುರರಕುಲತುಂಡ[2]ಖಂಡಿತ
ಮರಿಚಲತಾಪ್ರಚಯರುಚಿರ ನವಪಲ್ಲವದಿಂ
ಕರಿ[3]ಕರವ್ಯದಿತತಮಾಲೋ[3]
ತ್ಕರಕಿಸಲಯಸುರಭಿಗಂಧದಿಂ ಸೊಗಯಿಸುಗುಂ ೮೨

ಚರಿಯಿಪ ವನದೇವತೆಯರ
ಚರಣಾಲಕ್ತಕದೆ ಪೊರೆದುವೆನಿಪುವು ಮಧುವಿಂ
ದುರೆ ಸೊಕ್ಕನಾಳ್ದ ಕೇರಳಿ
ಯರ ಕದಪಿನ ಬಣ್ಣಮಪ್ಪ ಚೆಂದಳಿರ್ದುರುಗಲ್ ೮೩

---

1 ಬೆಳೆವುವು (ಕ) 2 ಕುರವಕನಿಕರದ (ಕ) 3 ಕುರಿಯುಪಮುದ್ಧಿತ ಕಮಲೋ

ವ॥ ಮತ್ತಮಲ್ಲಿ ಗಿಳಿಗಳ ಗೂಡಿಂದುದಿರ್ವ ದಾಳಿಂಬದ ಬಿತ್ತುಗಳಿನೊಸರ್ವ ತನಿರಸದಳಿಪದೊಳಮೆಲರಲೆಪದಿಂದುರುಳ್ದು ಪರೆದೆಸೆವ ಕುಸುಮರೇಣುಗಳೊಳಂ ಪಥಿಕ ಜನಂಗಳಿಂ ಪಸರಿಸಿದ ಲವಂಗಪಲ್ಲವದ ಪಾಸುಗಳೊಳಂ ಕುರವಕದ ವಕುಳದೆಳೆಗೌಂಗಿನ ಹೊಂಗೇದಗೆಯ ಬಳಸಿನೊಳಮೆಲೆವಳ್ಳಿಯ ತಳ್ಕಿನಿಂ ಮನಂಗೊಳಿಪ ಕವುಂಗಿನ ಮರಂಗಳೊಳಂ ಮನಂಗೊಳಿಸುವ ವನಲಕ್ಷ್ಮಿಯ ನಿವಾಸಭವನದಂತಿರ್ದ ಲತಾಮಂಟಪಂಗಳ್ ಮನಂಗೊಳಿಪುವಂತುಮಲ್ಲದೆಯುಂ

ಮದವನ್ಮಾತಂಗ ಕಪೋ
ಲದಿನೊರೆದೊರತೆಯೊಳೆ ಬೆಳೆದುದೆಂಬಿನಮೆತ್ತಂ
ಮದಗಂಧಮೊದವೆ ಕತ್ತುಲಿ
ಪುದು ಪುದಿದೇಲಾಲತಾವನ ಪ್ರೋದ್ಯಾನಂ ೮೩

ಗಗನತಳಂಬರಂ ನೆಗೆದು ಮತ್ತಗಜಂಗಳ ಮಸ್ತಕಕ್ಕೆ ಪಾ
ಯ್ದುಗಿಬಗಿ ಮಾಡುವಲ್ಲಿ ಪೊಳೆವಂಕುಶದಂತಿರೆ ಕೊಂಕುವೆತ್ತ ಕೂ
ರುಗುರ್ಗಳೊಳೆಯ್ದೆ ತೆತ್ತಿಸಿದ ಮುತ್ತಿನ ಲೋಭದೆ ಕೊಲ್ವರೆತ್ತಲುಂ
ಮೃಗಪತಿ ಯೂಥಮಂ ಪಲಬರಾ ಬನದೊಳ್ ಶಬರಾಧಿನಾಯಕರ್ ೮೪

ವ॥ ಮತ್ತಮದು ಸಮರಸಮುದ್ಯತನಂತೆ ವೇಣುಬಾಣಾಸನಾರೋಪಿತಶಿಲೀಮುಖಮುಂ ವಿವಿಕ್ತ ಸಿಂಹನಾದಮುಂ ಯಮಪುರದಂತೆ ಮೃತ್ಯುಭೀಷಣಮುಂ ಮಹಿಷಾಧಿಷ್ಠಿತಮುಂ ಕಾತ್ಯಾಯನೀಕಾಯದಂತೆ ವಿಚಳಿತಖಡ್ಗಭಯಂಕರಮುಂ ವರುಣ ಚಂದನ ಪಲ್ಲವಾಳಂಕೃತಮುಂ ಸಂಧ್ಯಾಕಾಲದಂತೆ ನೃತ್ಯನ್ನೀಲಕಂಠಮುಂ ಪಲ್ಲವಾರುಣಿತಮುಂ ಸಾಮ್ರಾಜ್ಯವಿಭವದಂತೆ ಚಮರೀವಾಲವ್ಯಜನೋಪಶೋಭಿತಮುಂ ಗಜಘಟಾಪರಿಪಾಲಿತಮುಂ ಕಾಮಿನೀಜನದಂತೆ ಮೃಗಮದಪರಿಮಳಾಮೋದಿತಮುಂ ಕೃಷ್ಣಾಗರುತಿಳಕಭೂಷಿತಮುಂ ವಿರಹಿಜನದಂತೆ ವಿವಿಧಪಲ್ಲವಾನಿಲವೀಜ್ಯಮಾನಮುಂ ಮದನಾಕ್ರಾಂತಮುಂ ಬಾಲಗಳದಂತೆ ವ್ಯಾಘ್ರನಖಮಂಡಿತಮುಂ ಗಂಡಕಾಭರಣಮುಂ ಪಾನಪ್ರದೇಶದಂತೆ ಪರಿಗತಮಧುಕೋಶಶತಮುಂ ವಿಕೀರ್ಣವಿವಿಧಕುಸುಮಮುಂ ದಶಮುಖನಗರಿಯಂತೆ ವಾನರಭಜ್ಯಮಾನತುಂಗಸಾಲಮುಂ ಪ್ರಳಯಕಾಲದಂತೆ ಮಹಾವರಾಹಸಮುತ್ಖಾತಧರಣೀಮಂಡಲಮುಂ ವಿವಾಹಗೇಹದಂತೆ ಸಮಿತ್ಕುಶಕುಸುಮಶಮೀಪಲಾಶೋಪಶೋಭಿತಮುಂ ಅಮರಪತಿಗಾತ್ರದಂತೆ ನೇತ್ರಸಹಸ್ರಸಂಕುಳಮುಂ ಅವನಿಪತಿ ಗೃಹದ್ವಾರದಂತೆ ವೇತ್ರಲತಾಶತದುಷ್ಪ್ರವೇಶಮುಂ ವಿರಾಟನಗರಿಯಂತೆ ಕೀಚಕಾವೃತಮುಂ ಅಂಬರದಂತೆ ವ್ಯಾಧಾನುಗಮ್ಯಮಾನ ತರಳತಾರಕಮೃಗಮುಂ ಗೃಹೀತವ್ರತನಂತೆ ದರ್ಭಚೀರಜಟಾವಲ್ಕಲಧಾರಿಯುಂ ಸಪ್ತವರ್ಣೋಪಶೋಭಿತಮುಂ ಕ್ರೂರಸತ್ವಮಾಗಿಯುಂ ಮುನಿಜನಸೇವಿತಮುಮೆನಿಪುದಂತುಮಲ್ಲದೆಯುಂ

ಅದು ನಿಖಿಲ ಭುವನಮಂಡಲ
ವಿದಿತಂ ತಳ್ತೆಸೆವ ದಂಡಕಾರಣ್ಯದೊಳಿ
ರ್ಪುದಗಸ್ತ್ಯಮುನಿಪನಾಶ್ರಮ
ಪದವತಿಪಾವನವಗಣ್ಯಪುಣ್ಯಕ್ಷೇತ್ರಂ ೮೫

ವ॥ ಅದಱೊಳ್ ಸುರಾಸುರಮಕುಟಪತ್ರಭಂಗಕೋಟಿಚುಂಬಿತಚರಣಾರವಿಂದನುಂ ದಕ್ಷಿಣಾಶಾವಧೂಮುಖವಿಶೇಷಕನುಮೆನಿಸಿದಗಸ್ತ್ಯಮಹಾಮುನಿಯಿರ್ಪನಾತನ ಮಹಾಪ್ರಭಾವವಂ ಪೇೞ್ವೊಡೆ

ಕೆಡೆದಂ ಭೋಂಕನೆ ಸಗ್ಗದಿಂದೆ ನಹುಷಂ ಪಾವಾಗಿ ಹುಂಕಾರದಿಂ
ಪೊಡೆಗಿಚ್ಚಿಂದವೆ ಜೀರ್ಣವಾದನಸುರಂ ವಾತಾಪಿ ತನ್ನಾಣೆಯಿ
ಟ್ಟೊಡೆ ಮಾಣ್ದಿರ್ದುದೆ ಮೇರು ಮತ್ಸರದೊಳಾದಂ ನೀಳ್ದ ವಿಂಧ್ಯಾಚಳಂ
ಕಡಲಾಪೋಶನಮಾದುದಾ ಮುನಿಗೆನಲ್ಕೇನೆಂಬೆನಾಶ್ಚರ್ಯಮಂ ೮೬

ಆ ಮುನಿಮುಖ್ಯನ ಸತಿ ಲೋ
ಪಾಮುದ್ರೆ ತನೂಜರಿಂದೆ ಮಿಗೆಲೆನಿಸಿದತಿ
ಪ್ರೇಮದೆ ನಡಪಿದ ವಿಟಪಿ
ಸ್ತೋಮದಿನಾಶ್ರಮಪದಂ ಮನಂಗೊಳಿಸಿರ್ಕುಂ ೮೭

ವ॥ ಮತ್ತಂ ಗೃಹೀತವ್ರತನುಮಾಕಲಿತಶಾಸ್ತ್ರನು ಮುಪರಚಿತಭಸ್ಮ ತ್ರಿಪುಂಡ್ರಕಾಭರಣನು ಮಾಬದ್ಧಮೌಂಜಿಮೇಖಳಾರಂಜಿತನುಂ ಪರ್ಣಪುಟೋಪನೀತಪ್ರತ್ಯುಟಜಭಿಕ್ಷುನುಮೆನಿಸಿದ ತತ್ಪುತ್ರನಪ್ಪಿಧ್ಮವಾಹನಿಂ ಪವಿತ್ರೀಕೃತಮಾಗಿರ್ದುದಂತುಮಲ್ಲದೆಯುಂ

ಪರಿಪೀತಮಾಯ್ತು ರತ್ನಾ
ಕರಮೀ ಕಳಶಜನಿ[1]ನೆಂದವನ ಬೞಿಸಂದಂ[1]
ತಿರೆ ಬದ್ಧವೇಣಿ ಗೋದಾ
ವರಿ ಬಂದವತರಿಸಿದುದು ತದಾಶ್ರಮಪದಮಂ ೮೮

ಗುರುವಿನ ನನ್ನಿಗುರ್ವರೆಯನಿತ್ತನುಜಾತನುಮಾತ್ಮಕಾಂತೆಯುಂ
ಬೆರಸು ತದಾಶ್ರಮಪ್ರಥಿತ ಪಂಚವಟೀಸ್ಥಳದೊಳ್ ಮಹಾಮುನೀ
ಶ್ವರನೆನಿಸಿರ್ದಗಸ್ತ್ಯನಿರಿಸಲ್ ಪಲವುಂ ದಿನಮಿರ್ದನಂದು ಕಂ
[2]ಧರಕುಲಖಂಡನಾಹಿತ[2]ದಶಾನನಲಾಘವನಪ್ಪ ರಾಘವಂ ೮೯

1 ನೆಂದು ಬಳಿಸಂದವೊಲಂ (ಕ) 2 ಕಂಡರತುಳಕಂಡಳಾಹಿತ (ಕ)

ಚೆಲುವೆನಿಸಿರ್ದೀ ಕುಸುಮಾ
ವಳಿಯಂ ಕೊಯ್ದವನಿಸುತೆಯ ಕರತಳ ರಾಗಂ
ಬಳಸಿದುದೆಂಬಿನಮೆಸೆದುವು
ಲಲಿತಲತಾಲುಳಿತ ಪಲ್ಲವಪ್ರಕರಂಗಳ್ ೯೦

ವ॥ ಮತ್ತಂ

ಘನತರು ಶಾಖಾಗ್ರಾವಾ
ಗ್ರನಿಭೃತ ಪಾಂಡುರ ಕಪೋತಪಂಕ್ತಿಪ್ರಕರಂ
ನೆನೆಯಿಪುದು ಶೂನ್ಯಮಾಗಿಯು
ಮನೇಕ ಮುನಿಪಾಗ್ನಿಹೋತ್ರಧೂಮವನಿನ್ನುಂ ೯೧

ವ॥ ಮತ್ತಮಲ್ಲಿ

ಕಿಡೆ ಕೊಲ್ವ ರಾಮಬಾಣದೆ
ಕೆಡೆದ ನಿಶಾಚರರ ನೆತ್ತರೊಳ್ ಬೆಳೆದುವೆನಲ್
ಕಡುಗೆಂಪುವೊರೆದ ತಳಿರ್ಗಳಿ
ನೆಡೆವಿಡದಿಡಿದಡವಿ ಸುತ್ತಿ ಸೊಗಯಿಸಿ ತೋರ್ಕುಂ ೯೨

ಜನಕಜೆ ಕೂರ್ಮೆಯಿಂ ನಡಪಿದಂದಿನ ಜೀರ್ಣಚರನ್ಮೃಗಾಳಿ ಭೋಂ
ಕನೆ ಮುಱಿಗಾಲದೊಳ್ ಮೊಱಗುಗೇಳ್ದು ಜಗದ್ವಿವರಾಂತಮಪ್ಪ ರಾ
ಮನ ಘನಚಾಪದಂಡರವಮಂ ನೆನೆದೆತ್ತಲುಮೀಕ್ಷಿಸುತ್ತೆ ಕಂ
ಬನಿಗಳನಿಕ್ಕಿ ಮೇಪುಗೊಳಲೊಲ್ಲವು ರೂಢಿಯ ಶಾದ್ವಲಂಗಳೊಳ್ ೯೩

ಮೃಗಯೂನಿತಾಂತಹತಿಯಿಂ
ಮಿಗೆ ನೊಂದಟ್ಟಿದುವೊ ನಿಖಿಳ ವನಮೃಗವೆನೆ ಪೊಂ
ಮಿಗವಿರದೊಯ್ದುದು ಸೀತೆಯ
ನಗಲ್ಚಿ ನಿಲಲೀಯದಲ್ಲಿ ದಶರಥಸುತನಂ ೯೪

ಪೊಲ್ಲದುಗೆಯ್ದೆನೆಂದು ನಹುಷಾಜಗರಂ ಪಿರಿದಪ್ಪ ದೈನ್ಯದಿಂ
ಬಲ್ಲಿದನಪ್ಪಗಸ್ತ್ಯಮುನಿಯೊಳ್ ದಯೆಯಂ ಪಡೆಯಲ್ಕೆ ಬಂದವೋ
ಲಲ್ಲಿಯೆ ರಾಘವಂ ತಱಿದ ಯೋಜನಬಾಹುವ ಬೀಲ್ದ[1]ತೋಳ್[1]ದೊಂ
ದೆಲ್ಲರಚಿತ್ತದೊಳ್ ಪಿರಿದುಮೊಂದಭಿಶಂಕೆಯನುಂಟುಮಾಡುಗುಂ ೯೫

---

1 ಳ್ದಿಂ (ಕ)

ವಿರಹದೆ ರಾಮಬಾಣದುಟಜಾಂಗಣರಮ್ಯಶಿಲಾತಲಂಗಳೊಳ್
ಬರೆಯೆ ವಿಚಿತ್ರಮಾಗೆಸೆವ ಸೀತೆಯ ಚಿತ್ರಮನಿನ್ನುಮಲ್ಲಿ ತ
ನ್ನರಸನ ನಿಂದ ತಾಣಮನೆ ನೋಡಲಿದಂ ಪೊಱಮಟ್ಟಳಾಗಳು
ರ್ವರೆಯನಿಳಾತೂಱಿಯೆನುತಂತದನೀಕ್ಷಿಸುವರ್ ವನೇಚರರ್ ೯೬

ವ॥ ಅಂತೀಗಳುಂ ಪ್ರಕಟೋಪಲಕ್ಷ್ಯಮಾಣಪ್ರಮಾಣಪೂರ್ವಮಪ್ಪಗಸ್ತ್ಯಾ ಶ್ರಮಕ್ಕನತಿದೂರಮೆನಿಸಿ

ಕಡಲಂ ಪೀರ್ದನಗಸ್ತ್ಯನೆಂಬ ಪುರುಡಿಂ ಮತ್ತೊಂದನಬ್ಜೋದ್ಭವಂ
ಪಡೆದಂ ಪೆರ್ಗಡಲಂ ಮಹಾಪ್ರಳಯದೊಳ್ ದಿಕ್ಸಂಧಿಗಳ್ ಬಂಧಮಂ
ಬಿಡೆ ಬೀಳ್ದತ್ತಿಳೆಗಾಗಸಂ ಧರಣಿಯುಂ ಪೆರ್ಬಂದಿ ಕೀಳ್ತೆತ್ತಿದೊಂ
ದೆಡೆ ನೀರ್ ತೀವಿತೆನಲ್ಕೆ ಪೆಂಪುವಡೆಗುಂ ಗುಣ್ಪಿಂದೆ ಪಂಪಾಸರಂ ೯೭

ವ। ಮತ್ತಮಲ್ಲಿ ಬಂದೋಲಾಡುವ ಪುಳಿಂದಸುಂದರಿಯರ ಪೆರ್ಮೊಲೆಯ ಪೊರ್ಕುಳಿಯೊ[ಳ್ ಪರಿವರಿಯಾದ ಜಲದೊಳಂ]ಉಳ್ಳಲರ್ದ ಕುಮುದಕುವಲಯ ಕಲ್ಹಾರ ಕುಸುಮಂಗಳೊಳಂ ಅಲರ್ದ ತಾವರೆಯ ತನಿವಂಡಿನ ಪನಿಗಳಿಂ ಪಸರಿಸುವ ಪೀಲಿಗಣ್ಗಳೊಳಂ ಕಾರ್ಗತ್ತಲ್ಕೆಮಸಗೆ ಮುಸುಱುವ ಮಱಿದುಂಬಿಯ ಬಂಬಲೊಳಂ ಎಕ್ಕೆಕ್ಕೆಯಿನುಲಿವ ಜಕ್ಕವಕ್ಕಿಗಳ ಕಳಕಳಂಗಳೊಳಂ ತಾವರೆವಂಡಿನ ತನಿಸೊಕ್ಕಿಂ ಸೊಕ್ಕಿದ ಪೆಣ್ಣಂಚೆಗಳಿಂಚರಂಗಳೊಳಂ ಜಲಚರಂಗಳ ಪೊಳಪಿನೆಸಕದಿಂ ಮುಸಗಿ ಮೊಱೆವ ತೆರೆದುಱುಗಲೊಳಂ ಎಲರಲೆಪದಿ[1] ನೊಗೆದ ತೆರೆಗೊನೆಯು[1] ತೂರ್ಪನಿಯ ತುಂತುಱುಗಳಿಂ ಮಸಗುವ ಮಂಜಿನೊಳಂ ಅಂಜದೆ ಪೊಕ್ಕು ನಡುನೀರೊಳಾಡುವ ವನದೇವಿಯರ ಸೋರ್ಮುಡಿಯಿಂ ಪರೆದರಲ ಬೆರಕೆಗಂಪಿನ ಪೊಂಪುಳಿಯೊಳಂ ಒಂದೊಂದೆಡೆಯೊಳ್ ತಾಪಸರ್ ತೀವುವ ಕಮಂಡಲುಗಳಿನುಣ್ಮುವ ಕಳಕಳಧ್ವನಿಗಳೊಳಮೋರನ್ನಮಾಗಿ ನೆಯ್ದಿಲ್ಪನದೊಳ್ ದನಿಗೈದಾಡುವುದ ಱಿಂ[2]ದಱಿಯಲ್ಪರ್ಪಂಚೆವಿಂಡುಗಳೊಳಮಭಿಷೇಕಕ್ಕೆ ಬಂದಿೞಿದ ಪುಳಿಂದರಾಜಸುಂದರಿಯರ ನೆಲೆವೊಲೆಯ ಸಿರಿಕಂಡದಣ್ಪಿನಿಂ ಪೊರೆದು ಬೆಳರ್ಪನಾಂತ ತೆರೆಗಳೊಳಮುಪಾಂತದೊಳ್ ಪರ್ವಿದ ಪೊಂಗೇದಗೆಯ ರಜದಿಂ ಪುೞಿಲ್ಗಟ್ಟಿದ ಪೆರ್ದಂಡೆಗಳೊಳಂ ಮುನಿಜನಂಗಳೊಗೆದಾರಲಿಕ್ಕಿದ ತಳಿರ್ಗಾಸೆಗಳ ಸೋರ್ದ[3]ಬಣ್ಣದಿಂ ಬೆಳರ್ಗೆಂಪಿಡಿದು ತಡಿಯೊಳ್ ಬೆಳೆದ ಮರಂಗಳ ಚಿಗುರ್ಗಳಿಂದೊಗೆದೆಲರಿಂ ತಣ್ಪುವೆತ್ತಿರ್ಪ ತೀರಜಲಂಗಳೊಳಮೆಡೆವಿಡಿದ ತಮಾಲವೀಥಿಯೊಳೊಗೆದ ಕಟ್ಟಲೆಯಿಂ[3] ಋಶ್ಯಮೂಕ ನಿವಾಸಿಯಪ್ಪ ಸುಗ್ರೀವನಿಂದವ

---

1 ನೊಗೆವಂತೆ ಮೇಗೊನೆಯ (ಕ) 2 ದರಿಯಲ್ ಬಾರದೆಪುಂಚಿರ ಮಲ್ಲವಂಜೆವಿಂಡುಗಳೊಳ ಮಭಿಜೇಕಕ್ಕೆ ಪುಳಿಂದ ರಾಜಸುಂದರಿಯರ ನೆಲೆವೊಲೆಯ ಸಿರಿಕಂಡದ ತಣ್ಪುನಿಂ ಪೊರೆದೂಱುವಿಡಿದು ಪರ್ವಿಹ ಪೊಂಗೇದಗೆಯ ರಜದಿಂ ಪುಳಿಲ್ಗಟ್ಟಿದ ಪೇದೊರ್ರೆಗಳೊಳಂ (ಕಂ) 3 ಬೆಳರ್ವಂಪಿನೊಳಂ ಪೂರದುವೆಂದೆನಿಪ ಕೆಂದಳಿರ್ಗಳೆಲೆಪದಿಂದೆಸೆವ ತಣ್ಣೆಲರ ತಣ್ಪಿನೊಳಂ ತಮಾಲವೀಥಿಯಮುಂದಲೆಯೊತ್ತಿನೊಳಂ (ಕ)

ಲುಪ್ತಫಲಮಾದ ಲತಾವಿತಾನದಿಂ ಮುನಿಜನ ದೇವತಾರ್ಚನೋಪಯುಕ್ತಮಾದ ಕುಸುಮವಿಸರದಿಂ ನೀರ್ವಕ್ಕಿಗಳೆಱಂಕೆಯಿಂದುದಿರ್ದ ಪನಿಗಳಿಂ ನಾಂದು ನುಣ್ಪುವೆತ್ತ ಲತಾಕಿಸಲಯಂಗಳಿಂ ಲತಾಮಂಡಪಂಗಳೊಳ್ ತಾಂಡವಮನೊಡರ್ಚುವ ಶಿಖಂಡಿಮಂಡಲಂಗಳಿಂ ವನದೇವತಾ ನಿಶ್ವಾಸವಾಸಿತಂಗಳೆನಿಪ ಕುಸುಮಪರಿಮಳಂಗಳಿಂ ಮನಗೊಳಿಸುವ ವನರಾಜಿಗಳೊಳಂ ರಂಜಿಸುವುದಂತುಮಲ್ಲದೆಯುಂ

ಮತ್ತಲ್ಲಿ ಮಹಾಂಬುಧಿಯೆ
ಗೆತ್ತು ಮುಗಿಲ್ದುಱುಗಿ ನೀರ ಮೊಗೆವವೊಲಂದೇಂ
ಕತ್ತಲಿಸಿ ಬಂದು ನೀರಾ
ಡುತ್ತಿರ್ದುವು ಸುತ್ತಮಲ್ಲಿ ವನಕರಿನಿವಹಂ ೯೮

ವ॥ ಅಂತಗಾಧಮುಮತರ್ಕ್ಯಮುಮನಂತಮುಮೆನಿಸಿದ ಪಂಪಾಸರೋವರದ ಪಡುವಣ ತಡಿಯೊಳ್ ದಶರಥಸುತನ ಶರಪ್ರಹಾರಜರ್ಝರಿತಮಪ್ಪ ತಾಳತರುಷಂಡ ಸಮೀಪದೊಳ್

ಮರಗಟ್ಟಿಂಬಂತೆ ಸುತ್ತುಂ ಮೊದಲೊಳಜಗರಂ ಸುತ್ತೆ ದಿಕ್ಚಕ್ರವಾಳಾಂ
ತರಮಂ ನೋಡಲ್ಕೆ ನೀಳ್ದಂತಿರೆ ಬೆಳೆದ ಮಹಾಶಾಖೆಗಳ್ ತಾಂಡವಾಡಂ
ಬರದೊಳ್ ನಾನಾವಿಧಂ ನರ್ತಿಪ ನಟನ ಭುಜಾದಂಡಮೋ ಪೇೞಿಮೆಂಬಂ
[1]ತಿರಮೇಯ[1]ಸ್ಕಂಧಮುಂ ಸಂಧಿಸೆ ಜರಠಮಹಾಶಾಲ್ಮಲೀ ವೃಕ್ಷಮಿರ್ಕುಂ ೯೯

ಭಯದೊದವಿಂದೆ ಮಾಣದೆ ನಭಸ್ಥಲದೊಳ್ ಪರಿಯುತ್ತಮಿರ್ಪ ತ
ನ್ನಯ ಪರಿಖೇದದಿಂದೆ ಕಡುಸೇದೆಯನಾಂತ ಪತಂಗ[2]ನೂಥವಾ[2]
ಜಿಯ ಕಡೆವಾಯ್ಗಳಿಂದುಗುವ ಫೇನವಿತಾನದೊಳಾದ[3]ಮೊಂದಿ[3] ಸಂ
ಶಯಮನೆ ಮಾೞ್ಪುವಾತುರದ ತೂಱಿಲಗೊಂಬಿನ ತೂಲರಾಶಿಗಳ್ ೧೦೦

ಪಿರಿದುಂ ತೀಂಟೆತ್ತಿ ಗಂಡಸ್ಥಳಮನನುದಿನಂ ಕಾಡಸೊರ್ಕಾನೆಗಳ್ ಬಂ
ದೊರಸಲ್ ಸುತ್ತಂ [4]ಜಿಗಲ್ತು[4]ಗ್ಗಲಿಸಿದ ಮದದಿಂ ಕಳ್ಗಿ ತದ್ಗಂಧಮಂ ಕ
ವ್ವರೆಗೊಂಡೋರಂತೆ ಸುತ್ತಿರ್ದಳಿಕುಳದೆನಸುಂ ಶೃಂಖಲಾಬದ್ಧಮೆಂಬಂ
ತಿರೆ ಕಲ್ಪಸ್ಥಾಯಿಯಾಗಿರ್ದುದು ಗಿರಿಕಟಕಸ್ಥೂಲಮಾ ವೃಕ್ಷಮೂಲಂ ೧೦೧

ವ॥ ಮತ್ತಮದು ದುರ್ಯೋಧನನಂತುಪಲಕ್ಷಿತ ಶಕುನಿಪಕ್ಷಪಾತಮುಂ ಪದ್ಮನಾಭನಂತೆ ವನಮಾಲೋಪಗೂಢಮುಂ ಜಳದವ್ಯೂಹದಂತೆ ನಭೋವಿಭಾಗ ಪ್ರಭೂತೋನ್ನತಿಯುಮೆನಿಪುದಂತುಮಲ್ಲದೆಯುಂ

1 ತಿರೆಮಾಯ (ಕ) 2 ನಂಶುವಾ (ಕ) 3 ಮೋಡಿ (ಕ)
4 ಬಿಗುಲ್ತ (ಕ)

ಭುವನತ್ರಯಮುಮನತ್ಯು
ತ್ಸವದಿಂದಂ ನೋಡಲಿದುವೆ ದಲ್ ವನದೇವೀ
ನಿವಹಕ್ಕೆ ಮಹಾಪ್ರಾಸಾ
ದವೆನಿಸಿ ತೋಱುವುದು ತನ್ನೊಳಾದುನ್ನತಿಯಿಂ ೧೦೨

ವ॥ ಮತ್ತಮದು ವಿಂಧ್ಯಾಚಳಸೋದರಮುಂ ದಂಡಕಾರಣ್ಯದಧಿಪತಿಯುಂ ವನಸ್ಪತಿಗಳ ನಾಯಕನುಮೆಸಿತದಱಾ

ತಳಿರ್ಗಳಿಱುಂಬಿನಲ್ಲಿ ತುದಿಗೋಡ ಮೊದಲ್ಗಳ ತಾಣದಲ್ಲಿ ನಾ
ರ್ಗಳ ಪೊರೆಯಲ್ಲಿ [1]ಪೋಳ್ಗಳೆಡೆ[1]ಯಲ್ಲಿ ಕವಲ್ಗಣೆಯಲ್ಲಿ ಸುತ್ತಲುಂ
ಗಿಳಿಗಳ ಹಿಂಡುಗಳ್ ನೆರೆದು ಕೂಡಿಯುಮಲ್ಲಿ ಸಹಸ್ರಮುಂ ನಿರಾ
ಕುಳಮನುರಾಗದಿಂ ಪಲವುವೇಶದೊಳಿರ್ಪುವು ಬಂದು ಭೂಪತೀ ೧೦೩

ಪರಿವೃತ ಪಲ್ಲವಾಂತರದೊಳುದ್ಗತ ವಲ್ಕಲಮಧ್ಯದೊಳ್ ನಿರಂ
ತರ ವಿಟಪಾಗ್ರದೊಳ್ ವಿಪುಳ ಕೋಟರ ಸಂಕುಳದೊಳ್ ವಿಶಾಲ ಕಂ
ಧರಗತ ಸಂಧಿಯೊಳ್ ನಿಚಿತ ನೀಡನಿಕಾಯಮನೆಯ್ದೆ ಸುತ್ತಲುಂ
ವಿರಚಿಸಿ ನಿರ್ಭಯಂ ಪಲವುಮಿರ್ಪವು ಕೀರಕುಳಂ ನಿರಾಕುಳಂ ೧೦೪

ಎಲವಂ ಮಡಲ್ತುದೆನೆ ಯೆಲೆ
ಕೆಲಕೆಲವಾಗಿರ್ದುಮೆಲೆಯ ಪುದುವಿಂದವೆ ಕ
ತ್ತಲಿಸಿದವೋಲಿರ್ಪುದಂದ
ಗ್ಗಲಿಸಿದ ಗಿಳಿವಿಂಡುಗಳ ಪೊದಳ್ದ ಪಸುರ್ಪಿಂ ೧೦೫

ಎಲೆ ಕಾಳಿಂದೀಪ್ರವಾಹೋತ್ಕರಮೊ ಸುರಗಜೋನ್ಮೀಲಿತಾಕಾಶಗಂಗಾ
ನಲಿನೀಸಂತಾನಮೋ ಮೇಣ್ ಪರಿಕಿಸೆ ದಿನಕೃದ್ವಾಜಿರಾಜಿಪ್ರಭಾವಮುಂ
ಡಲಮೋ ಸಂಚಾರಿ ಗಾರುತ್ಮತ ರುಚಿರಧಾರಾಭಾಗಮೋ ಶಕ್ರಚಾಪಾ
ವಲಿಯೋ ಪೇೞಿಂಬಿನಂ ಪೋಪುವು ಕುಟಕುಗೊಳಲ್ ನಿಚ್ಚಲುಂ ಕೀರಜಾಳಂ ೧೦೬

---

1. ಪೊಳಲೆಡೆ (ಕ)

ಎಲೆಕಾಳಿಂದೀ ಪ್ರವಾಹ ಪ್ರಸರಮೊ ಗಗನಾಂಭೋಜನೀರಾಜಹಂಸಾ
ವಲಿಯೋ ಶೈವಾಲಮೇಣೀಪ್ರಕರಮೊ ದಿನಕೃದ್ವಾಜಿರಾಜಿಪ್ರಭಾವ ಮಂ
ಡಲವೋ ಸಂಚಾದಿಕಾರತ್ನಕ ರುಚಿರ ತಾರಾಭೋಗಮೊ ಚಕ್ರಚಾಪಾ
ವಲಿಯೋ ಪರ್ವಿತ್ತೆನಲ್ ಪೋಪುವು ಕುಟುಕುಗೊಳಲ್ ನಿಚ್ಚಲುಂ ಕೀರಜಾಲಂ ॥ (ಕ)

ಬಿಸಿಲೆಸಕದಿಂದೆ ಕೊರಗಿದ
ದೆಸೆವೆಣ್ಗಳ ಬಿಸುಪನಾಱಿಪಂತಿರೆ ಗಿಳಿಗಳ್
ಪಸುರೆಱಕೆಯೆಂಬ ಬಾಱಿಯ
ಪೊಸ ಬಿಜ್ಜಣಿಗೆಗಳನೆಸಗಿಪುವು ತಣ್ಣೆಲರಂ ೧೦೭

ಶುಕ ಶಕುನಿಗಳ್ ಕೃತಾಹಾ
ರಕಂಗಳತಿಪಕ್ಷಪಾತದಿಂದಂ ನಿಜ ಶಾ
ಬಕತತಿಯನೆಯ್ದಿ ಚಂಚು
ಪ್ರಕರದೆ ನೀಡುವುವು ಕುಟುಕನುತ್ಕಂಠಂಗಳ್ ೧೦೮

ಅಂತಾ ಶುಕಸಂತತಿ ನಿ
ಶ್ಚಿಂತದಿನಿರ್ದಲ್ಲಿ ಜೀರ್ಣಕೋಟರವಿರಳಾ
ಭ್ಯಂತರದೊಳಿರ್ದುದೊಂದು ಶು
ಕಂ ತನ್ನಯ ಜಾಯೆವೆರಸು ಪರಿಣತವಯಸಂ ೧೦೯

ಆ ವೃದ್ಧ ಶುಕಂಗೊರ್ವನೆ
ದೈವಾಧೀನದೊಳೆ ಪುಟ್ಟಿದೆಂ ಪಾಪಿಯೆನಿ
ನ್ನೇವೇೞ್ವೆಪೆಂ ಪ್ರಸೂತ್ಯ
ದ್ಭಾವದಿನೆಮ್ಮವ್ವೆ ಕೞಿದಳಂತಾ ಕ್ಷಣದೊಳ್ ೧೧೦

ವ॥ ಅಂತು ಕೞಿಯೆ ಜಾಯಾವಿಯೋಗದಿಂ ದುಃಖಿತನಾಗಿಯುಮೆನ್ನ ತಂದೆ [1]ಪುತ್ರಸ್ನೇಹದಿಂದಳವಿಗೞಿದ[1] ಹೃದಯ ಶೋಕಮನಡಂಗಿಸಿರ್ದು ಮತ್ಪ್ರಾಣನ ಪ್ರಯತ್ನ ತತ್ಪರನಾಗಿ

ಕೞಲಲ್ ನಿಜತನುವೊಂದೆರ
ಡುೞಿಯಲ್‌ಗಱಿವೀೞ್ದು ಕುೞಿಯಲಾಕರ್ಣಂ ಜೋ
ಲ್ದಿೞಿಯಲ್ ಮುಯ್ಪುಗಳಾವಗೆ
ನೞಿಯಲ್ ಬಲವಾಱದಂತು ಮುಪ್ಪಿಂ ಪಾಱಲ್ ೧೧೧

ವ॥ ಅಂತು ಮುಪ್ಪಿಂ ಪಾಱಲಾಱದೆ

ಪಕ್ಕಿಗಳಲ್ಲಿ ತಿಂದುೞಿದ ನೆಲ್ಗಳ ನುಚ್ಚುಗಳಂ ಫಲಂಗಳಂ
ಪಕ್ಕದೊಳಿರ್ದ ಗೂಡುಗಳಿನಾಯ್ದೆನಗಿಕ್ಕುವನಕ್ಕಱಿಂದೆ ತಾಂ
ಮಿಕ್ಕುದ[2]ನುಂಡಪಂ ಕಡಿದು ನೆಲ್ಗಳನಂಟದ [2]ತಾೞಿವಣ್ಣ ಬ
ಣ್ಣಕ್ಕೆಣೆಯಾದ ಚಂಚುಪುಟದಿಂದಮೆ ಮಜ್ಜನಕಂ ಮಹೀಪತೀ ೧೧೨

1 ಪುತ್ರಸ್ನೇಹಾಂತರ (ಕ) 2 ನುಂದುನೆಲ್ಲಡಿಸು ಮುಪ್ಪಿನೊಳಂಟದ (ಕ)

ವ॥ ಅಂತಾತನೆನಗೆ ಕುಟಕನಿಕ್ಕಿ ಮಿಕ್ಕುದಂ ತನಗಶನನುಂ ಮಾಡಿ ಜೀವಿಸುತ್ತುಮಿರೆಯಿರೆ

ಅರುಣ ಮರೀಚಿರಕ್ತನಳಿನೀದಳದಿಂದೆಸೆವಭ್ರಪಂಕಜಾ
ಕರತಟದಿಂದಮೀಗಳಪರಾಬ್ಧಿಗೆ ಬರ್ಪ ಜರನ್ಮರಾಳವೋ
ಪಿರಿದುಮೆನಲ್ಕೆ ಮೆಲ್ಲನಿೞಿದತ್ತು ವಿಯತ್ತಳ ಮಧ್ಯಭಾಗದಿಂ
ಪರಿಣತ[1]ರಂಕುರೋಮತತಿ[1] ಪಾಂಡುರಮಂದು ಶಶಾಂಕಮಂಡಲಂ ೧೧೩

ಅದು ಸಂಧ್ಯೋಪಾಸ್ತಿಗೆ ಪೊ
ರ್ದಿದಪುದು ಮಾನಸಸರಕ್ಕಮೀಗಳಿದೆಂಬಂ
ದದಿನುತ್ತರಾಶೆಯಂ ಪೊ
[2]ರ್ದಿದತ್ತು ಸಪ್ತರ್ಷಿ[2] ಮಂಡಲಂ ಕ್ರಮದಿಂದಂ ೧೧೪

ಕರಗಿರ್ದಪುವೋ ತರದಿಂ
ದರಗಿನ ಸರಿಗೆಗಳಿವಲ್ಲವಾನೆಯ ನೆತ್ತರ್
ಪೊರೆದಿರ್ಪುವೊ ಸಿಂಹದ ಕೇ
ಸರಂಗಳೆನಲೊಗೆದವರುಣತರಣಿಕರಂಗಳ್ ೧೧೫

[3]ಹರಿದಶ್ವಂ[3] ಬಂದಪಂ ವಾಹಳಿಗೆನುತರುಣಂ ವ್ಯೋಮವಿಸ್ತೀರ್ಣರಂಗಾಂ
ತರವೀಥೀಚ್ಛನ್ನತಾರಾಸ್ಫಟಿಕ ಶಕಲಮಂ ನೂಂಕುತಂ ಚಾರುಚಾಮೀ
ಕರಯಂತ್ರವ್ರಾತದಿಂ ಕುಂಕುಮ ಘನರಸಮಂ ಸಿಂಪಿಸುತ್ತಿರ್ದನೆಂಬಂ
ತಿರಲೆತ್ತಂ ನೀಳ್ದು ಪೊಣ್ಮಿತ್ತುದಯಸಮಯದೊಳ್ ಶೋಣಸೂರ್ಯಾಂಶುಜಾಲಂ ೧೧೬

ಗಗನಾಂತರ್ಭಾಗದೊಳ್ ತೀವಿದ ನಿಜಕರಸಂದೋಹದಿಂದೆಯ್ದೆ ಮಿತ್ರಂ
ಮಿಗೆ ನೂಂಕಲ್ ತಾರಕಾಸಂಕುಲಮುದಿರ್ದುವೊ ಪೇೞ್ಪಿಂಬಿನಂ ಸಂಪುಟಂ ಪ
ತ್ತುಗೆವಿಟ್ಟೋರಂದದಿಂ ಸಿಂಪುಗಳುಗುೞ್ಪಿ ಸಿಡಿಲ್ತಂದ ಮುಕ್ತಾಫಲಶ್ರೇ
ಣಿಗಳಿಂದಂ ಪಶ್ಚಿಮಾಂಭೋಧಿಯ ಪುಳಿನಚಯಂ ಬೆಳ್ಪನಾಳ್ದಿರ್ದುವಾಗಳ್ ೧೧೭

1 ಹರಿಣಕೃಷಾಂಗರಾಗತರ (ಕ) 2 ಪೊರ್ದಿದುದು ಸಮಸ್ತ ಋಷಿ (ಕ)
3 ಹರಿಶಬ್ದ (ಕ)

ಕಱಿದುವು ಪನಿ ಪುಲ್ಗಳ ಕಣ್
ತೆಱಿದುವು ನವಿಲೆರ್ದು ಕರಿಣಿ ಕರ್ಣಂಗಳನೆ
ಚ್ಚಱಿಸಿದುವಾಗಳ್ ಬಾಯಂ
ತೆಱಿದುವು ಪಿಂಗಳಿಗಳಲ್ಲಿ ಮುನ್ನೇಸಱಿನೊಳ್ ೧೧೮

ಅರುಣಂಗೆ ವನಂ ಪಲ್ಲವ
ಕರಂಗಳಿಂದರ್ಘ್ಯವೆತ್ತುತಿರ್ದಪನೆಂಬಂ
ತಿರೆ ಪನಿವ ಪುಲ್ಲನೀರ್ಗ
ಳ್ಪೆರಸಲರುದುರುತ್ತಮಿರ್ದುವಂತಾಕ್ಷಣದೊಳ್ ೧೧೯

ವನದೇವೀಪ್ರಸಾದಮಿ
[1]ದೆನಿಪಗ[1]ಕುಳದೊಳ್ ಕಪೋತಸಂಹತಿ ನೆಗೆದ
ತ್ತೆನಿಪುವು ಧರ್ಮಪತಾಕೆಗ
ಳೆನಿಸಿದ ಮುನಿಪಾಗ್ನಿ ಧೂಮತತಿ ತದ್ದಿನದೊಳ್ ೧೨೦

ಲತಿಕಾಲಾಸ್ಯೋಪದೇಶವ್ಯಸನಿ ವನಲತಾಂದೋಳಿತಾವೋದ ಸಂತ
ರ್ಪಿತ ಚಂಚಚ್ಚಂಚರೀಕಂ ಕಮಲವನರಜೋರಂಜಿತಾಂಗಂ ಪುಳಿಂದೀ
ರತಘರ್ಮಸ್ವೇದವಿಚ್ಛೇದನಪಟು ಮೃಗಸಂದೋಹರೋಮಂಥಫೇನೋ
ದ್ಗತ ಬಿಂದುಸ್ಯಂದಿ ತೀಡಿತ್ತೆಸಗಿ ಸುರಭಿ ವೈಭಾತಿಕಂ ಮಾತರಿಶ್ವಂ ೧೨೧

ಬೆಳಗಾಯ್ತೆಂಬವಸರದೊಳ್
ನಳಿನವನಶ್ರೀಪ್ರಬೋಧಮಾಗಧಿಯರ್ ಬಂ
ದೆಳಸಿ ಪೊಗಱ್ದಪ್ಪರೆಂಬಿನ
ಮಳಿಸಂಕುಲನಿನದಮೊಗೆದುದಬ್ಜಾಕರದೊಳ್ ೧೨೨

ಡಿಂಡಿಮರವದೊಳ್ ವನವೇ
ತಂಡಮನೆಚ್ಚರಿಸುತಿರ್ಪವೋಲ್ ಸೊಗಯಿಸುಗುಂ
ಗಂಡಸ್ಥಲ ಮದಸೌರಭ
ಮಂಡಳಿತಭ್ರಮರಮಧುರಮಂದ್ರಧ್ವಾನಂ ೧೨೩

1 ದೆನೆಘನ (ಕ)

[1]ಕರಗಿದರಗಿಂ ಪಗಿಲ್ತಂ
ತಿರೆ ತಳ್ತಿಮೆಯ್ಯೆ ಕಿಲೆಲರಿನೆಚ್ಚೆತ್ತಾ ಪೊ
ಳ್ತಿರೆಯೊಳ್ ಕಣ್ದೆರೆದತ್ತೂ
ಷರಶಯ್ಯಾಧೂಮ್ರರೋಮಹರಿಣಸಮೂಹಂ[1] ೧೨೪

ದಿನಮುಖದೊಳ್ ಸಂಚರಿಸುವ
ವನಕರಿಗಳ ಕರ್ಣತಾಳಗಂಭೀರತರ
ಧ್ವನಿಗೆಳಸಿ ರಾಗದಿಂ ಸೋ
ಗೆನವಿಲ್ಗಳ ಪಿಂಡು ನಲಿದು ನರ್ತಿಸಿತಾಗಳ್ ೧೨೫

ವ|| ಅಂತು ನೇಸರ್ ಮೂಡಲೊಡನೆ ಗೂಡುಗಳಿಂ ಗಿಳಿಗಳೆಲ್ಲಂ ಕುಟುಕುಗೊಳಲೆಂದು ಪೋಗೆ ಶಾಬಕನಿಕರಸನಾಥಮಾಗಿಯುಂ ನಿಶ್ಶಬ್ದತೆಯಿಂ ಶೂನ್ಯದಂತಿರ್ದ ಶಾಲ್ಮಲಿವನಸ್ಪತಿಯೊಳ್

ಕುಡುಕುಗೊಳವೋಪ ಶಕುನಿಗ
ಳೊಡವೋಗಲ್ ಜನಕನಾಱದಿರ್ದೊಡಮಾನುಂ
ಮಿಡುಕಲಣಮಱಿಯದಿರ್ದೆಂ
ಪೊಡರದ ಗಱಿಯವನೆ ತನ್ನ ತಂದೆಯ ಕೆಲದೊಳ್ ೧೨೬

ಚಕಿತೋದ್ಯತ್ಪಕ್ಷಿ ಪಕ್ಷಸ್ವನದೊಳಮುರ್ದ ಕೋಳಾಹಳಧ್ವಾನದಿಂ ಕೊ
ರ್ವಿ ಕರೀಂದ್ರೋದ್ಭೂತ ಘೂತ್ಕಾರದೆ ಪುದಿದು ಗುಹಾನೀಕಸುಪ್ತೋತ್ಥಸಿಂಹ
ಪ್ರಕರಪ್ರೋನ್ನಾದದಿಂ ತಳ್ತುಪಗತವನದೇವೀಚಯಸ್ವಾಂತ ಸಂತ್ರಾ
ಸಕರಂ ಪೊಣ್ಮಿತ್ತು ವಿಂಧ್ಯಂ ನಡುಗೆ ಘನರವಸ್ಪರ್ಧಿ [2]ಕೈರಾತಘೋಷಂ[2] ೧೨೭

ಅಂತಶ್ರುತಪೂರ್ವಧ್ವನಿ
ಯಂ ತೊಟ್ಟನೆ ಕೇಳ್ದು ಕೇಳ್ದು ಕಿವಿಯೊಡೆದಪುದೆಂ
ಬಂತಾಗೆ ಘೀಳಿಡಲ್ವೊ
ಕ್ಕೆಂ ತಂದೆಯ ಶಿಥಿಲ ಪಕ್ಷಸಂಪುಟದೆಡೆಯೊಳ್ ೧೨೮

---

1 ಕರಗಿದೆರಗೆನಿಸಿ ಕೊತ್ತಿರ ಮೆಯ್ಗಳ ನೆಲೆಯೈಕಿಲೆಲವುತ್ತಾನುಂ ಪರೆಯೊಳ್ಕಂಡೆಚ್ಚೆತ್ತೊ। ಪರಶಯ್ಯೊದೇಶಮಂ ವರಾಹಸಮೂಹಂ (ಕ) 2 ಘೋರಾಬ್ಧಿಘೋಷಂ (ಕ)

ವ॥ ಅಂತಾ ಸಮಯದೊಳ್

ಇದೆ ಪರ್ವಿತ್ತು ಮತಂಗಜೋಚ್ಚಲಿತಕಂಜಾಳೀರಜಸ್ತೋಮಮಿಂ
ತಿದೆ ತೀಡಿತ್ತು ವರಾಹಸಂಕುಳದಳನ್ಮುಸ್ತೋತ್ಕರಾಮೋದಮಿಂ
ತಿದೆ ಬಂದಿತ್ತಿಭಯೂಥನಾಥದಳಿತೋದ್ಯತ್ಸಲ್ಲಕೀಗಂಧಮಿಂ
ತಿದೆ ತೋಱಿತ್ತು [1]ಮದಾಂಧಸ್ಯೈರಿಭಖುರಪ್ರೋದ್ಧೂತ ರೇಣುವ್ರಜಂ[1] ೧೨೯

ರುರುಗಣಮಿತ್ತಲಿತ್ತ ವಿಚರನ್ಮೃಗಸಂಕುಳಮಿತ್ತಲಿತ್ತ ಸೂ
ಕರಚಯಮಿತ್ತಲಿತ್ತ ವನಸ್ಯೈರಿಭಸಂಕುಳಮಿತ್ತಲಿತ್ತ ಕುಂ
ಜರಕುಳಮಿತ್ತಲಿತ್ತವೆ ಶಿಖಂಡಿಕುಲಸ್ವನಮಿತ್ತಲಿತ್ತ ಕೇ
ಸರಿರವಮಿತ್ತಲಿತ್ತಮೆನುತಿರ್ಪ ರವಂ ನೆಗೆದತ್ತು ಸುತ್ತಲುಂ ೧೩೦

ಇದೆ ಚಳಿತ ಲಾವುಕಸ್ವನ
ಮಿದೆ ಹರಿನಖಭಿನ್ನಕುಂಭಕುಂಜರರವಮಿಂ
ತಿದೆ [2][ಕುರರಕುಲಸ್ವನ][2]ಮಿಂ
ತಿದೆ ಕುಕ್ಕುಟ ರಭಸಮಿದೆ ಕಪಿಂಜಲ[3]ನಿನದಂ[3] ೧೩೧

ನಸು ಮೆಲ್ದಚ್ಚಗಱುಂಕೆ ಸೂಸುತಿದೆ ಪೋದತ್ತಿಲ್ಲಿ ನಾನಾಮೃಗಂ
ಮುಸುಱುತ್ತಿರ್ಪುದು ಗುಂಗುರೀ ಯೆಡೆಯೊಳಂ ಪೋದತ್ತು ಸೊಕ್ಕಾನೆ ಪೆ
ರ್ಗೆಸರಾಗಿರ್ಪುದು ಬಟ್ಟೆ ಪೋದವಿದಱೊಳ್ ಪೆರ್ಬಂದಿಗಳ್ ನೆತ್ತರುಂ
ಬಸಿವುತ್ತಿರ್ಪುದು ಪೋದವಿಕ್ಕಿ ಮಱಿಯುಂ ಪುಲ್ಲಟ್ಟೆಯೊಳ್ ಪುಲ್ಲೆಗಳ್ ೧೩೨

ಬರೆದರೊ ಪತ್ರಮನೆಂಬಂ
ತಿರೆ ಪಜ್ಜೆಗಳೆಸೆಯೆ ನಾಂದು ನೆತ್ತರೊಳಿತ್ತಂ
ಕರಿಮಸ್ತಕಮೌಕ್ತಿಕದಂ
ತುರವೀಧಿಯ ತೋಱುದಪುದು ಮೃಗಪತಿಮಾರ್ಗಂ ೧೩೩

ನಡೆಸಲ್ನಿಲ್ವಿಡು ಸಾರ್ಚಮುರ್ಚು ಮರನಂ ಬಂದೇಱು ಬಿಲ್ವೀಸುತಂ
ಜಡಿ ಸೋಂಕೌಂಕು ತೆರಳ್ಚು ನೋಡು ಕಡುಗೆಯ್ದೇಱಿ ನಿಂದು ಸೀಳ್ನಾಯ್ಗಳಂ
ಬಿಡು ಕೋಲಂ ತುಡು ಸಾರ್ದು ಪೊರ್ದಿಸೆನುತಂ ತಂತಮ್ಮೊಳೋರೋರ್ವರೊಳ್
ನುಡಿವೊಂದಬ್ಬರಮುರ್ಬಿತಾಗಳೆನಸುಂ ವಿಂಧ್ಯಾಟವೀಮಧ್ಯದೊಳ್ ೧೩೪

---

1 ಮದಾಂತಸ್ಯೈರಿಭಕರಪ್ರೋದ್ಧೃತ್ತರೇಣುಬ್ರಜಂ (ಕ) 2 ಕುರವಕನಿಸ್ವನ (ಕ) 3 ನಿಕರಂ (ಕ)

ವ॥ ಅನಂತರಮನೇಕ ಶಬರಸಂಘಾತದಿಂದಱಿಯೆನೊಂದು ಮೃದಂಗಧ್ವಾನ [1][ಧೀರಮಾಗೆ][1]ಬೆಟ್ಟುಗಳ್ ಮಾರ್ದನಿಗುಡೆ ಗಜಱಿ ಗರ್ಜಿಪ ಕಂಠೀರವ ರವಂಗಳೊಳೆ ಬೆದಱಿ ಬೆರ್ಚಿ ಕಡುಪುಗಳಂ ಬಿಟ್ಟು ಪರಿದೊಂದಿ ನಿಂದು ಭೂಮಿತಾಡನಂಗೆಯ್ದು ಮುಗಿಲ್ಗಳ್ ಮೊಱಗುವಂತೆ ಮೊಱಗುವ ಯೂಥಪತಿಗಳ ಬೃಂಹಿತಂಗಳೊಳಂ ಪರಿದು ಪತ್ತಿ ನಾಯ್ಗಳುಲಿದು ತಿನೆ ಜೋಲ್ದು ಕೆಡೆದ ಹರಿಣಂಗಳ ಕೂಜಿತಂಗಳೊಳಂ ಬಱಿಸಲ್ವ ಮಱಿಗಳ್ವೆರಸು ಕಳಕಳಕ್ಕೆ ಕೆಕ್ಕರಿಸಿ ಪರಿವುತಮಾಗಳಾಗಳೆ ಬೀೞ್ದು ನಿಜ ಯೂಥಪತಿಗಳಂ ಕಂಡು ಪೋಗಲಾಱದೆ ಸುಱಿಸುಱಿದು ನಿಲ್ವ ಕರಿಣಿಗಳ ಚೀತ್ಕಾರದೊಳಂ ಆಗಳೆ ಪೆತ್ತ ಮಱಿಗಳಂ ಬಿಟ್ಟು ಬೆದಱಿ ಪೊಗಲಾಱದೆಳಸಿ ನಿಲಲಾಱದೆ ಬಾಯ್ವಿಟ್ಟೊದಱಿ ಪೆಳಱಿ ಪರಿವ ಖಡ್ಗಿಧೇನುಕಂಗಳ ಕರುಣಾಕ್ರಂದನಂಗಳೊಳಂ ಮರತುದಿಗೋಡುಗಳಿಂ ತಱಗೆಲೆಗಳಂತೆ ಬೆದಱಿ ನೆಲಕ್ಕೆ ಬೀೞ್ವ ಪಕ್ಕಿಗಳುಲುಪುಗಳೊಳಂ ಭೂಮಿಕಂಪಮಾಗೆ ಪರಿವ ಮೃಗಯುಗಳ ಚರಣಘಾತಶಬ್ದಂಗಳೊಳಂ ಮಹಿಷಸ್ಕಂಧಪೀಠಪಾತಿತಂಗಳಪ್ಪ ಬಾಳ್ಗಳ ಬಾಯ್ದಾರೆಗಳ ನಿನಾದದೊಳಂ ಎಡೆವಿಡದೆ ಬೆದೆವೆರಸಿದ ಕುರರಕೂಜಿತಂಗಳಂತೊಗೆವ ಸರಳ ಮೊಱೆಪದೊಳಂ ಕೂಡೆ ವಿಂಧ್ಯಾಟವಿಯೆಲ್ಲಂ ಪ್ರಚಲಿತಮಾದಂತಾಗೆ

ಆಂ ಜನಕನೆಱಕೆಯೊಳಗಿ
ರ್ದಂಜುತ್ತಂ ಕೇಳುತಿರ್ದೆನಿರ್ಪನ್ನವರಂ
ಬಿಂಜದಡವಿಯೊಳಗೆಲ್ಲಂ
ನಂಜಿನ ಮುೞಿಗೊಂಡುಬಿಟ್ಟ ತೆಱನಾಯ್ತಾಗಳ್ ೧೩೫

ಅದು ಮೊಱಗು ಮಾಣ್ದ ಕಾರ್ಗಾ
ಲದ ಮುಗಿಲದು ಕಡೆಪಮುಡುಗಿದಂಬುಧಿಯೆಂಬಂ
ದದಿನಡವಿ ಮೂಗುವಟ್ಟಿ
ರ್ದುದು ಬೇಟೆಯೊಳಾದ ಕಳಕಳಂ ಪಿಂಗುವಿನಂ ೧೩೬

ವ॥ ಅಂತಾ ಕಳಕಳರವಮಡಂಗಲೊಡನೆ[2]ಯುದ್ಭೂತವಿಸ್ಮಯನಾಗಿ[2] ತಂದೆಯಿರಿಸಿದ ಪಕ್ಷಸಂಪುಟದೊಳಗಣಿಂ ಪೊಱಮಟ್ಟೆದೇನೆನುತ್ತಮಾಂ ಪೊಟಲೊಳಗಿರ್ದು ಮೆಲ್ಲನೆ ನಿಳ್ಕಿನಿಳ್ಕಿ ದೆಪ್ಪಳಿಸಿ ನೋೞ್ಪನ್ನೆಗಮಲ್ಲಿ

ಇದು ನವಕಾಳಮೇಘಚಯಮಲ್ಲಿದು ಘೋರಮಹಾಂಧಕಾರಮ
ಲ್ಲಿದು ವಿಚರತ್ತಮಾಳವನಮಲ್ಲಿದು ಘೋರಕೃತಾಂತಸೈನ್ಯಮ
ಲ್ಲಿದು ಕಲಿಕಾಲಬಂಧುಕುಲಮಲ್ಲಿದು ದುರ್ಧರ ದಾನವೌಘಮೆಂ
ಬುದನೆನಿಸುತ್ತಮಲ್ಲಿ ಬರುತಿರ್ದುದನಂತಕಿರಾತಸಂಕುಳಂ ೧೩೭

1. ದಿಂಬಧಿರಮಾಗೆ (ಕ) 2 ಯದುಬುಮುಯವಾಗಿ (ಕ)

ವ॥ ಅಂತುತ್ಪಾತವೇತಾಳವಡೆಯಂತೆ ಭಯಂಕರಾಕಾರಮಾದ ಬೇಡವಡೆಯ ನಡುವೆ

ಕರ್ಬೊನ್ನಿಂದಂ ವಿಧಾತ್ರಂ ಸಮೆದನಿವನನೆಂಬೊಂದು ಕಾರ್ಕಶ್ಯದಿಂದಂ
ಸರ್ಬಾಂಗಂ ಕಣ್ಗುರ್ವಂ ಪಡೆಯಲಡವಿಯಂ ಕೂಡೆ ಕಾಳಿಂದಿಯೆತ್ತಂ
ಪರ್ಬಿತ್ತೆಂಬಂತೆ ನೀಳೋತ್ಪಳದಳರುಚಿರಶ್ಯಾಮದೇಹಾಂಶು ಪರ್ಬ
ಲ್ಕೊರ್ಬಂ ಬಂದಂ ಪುಳಿಂದಪ್ರಕರಬಹುಳಸೇನಾಪರೀತಂ ಕಿರಾತಂ ೧೩೮

ವ॥ ಅದಲ್ಲದೆಯುಂ ಯೂಥಪತಿಪ್ರಥ[1]ಮೋದ್ಭಿನ್ನ[1]ದಾನಲೇಖಾನುಕಾರಿಶ್ಮಶ್ರುಲೇಖನುಂ ಗಜಮದಮಳಿನಕೇಸರಿಜಟಾಕುಟಿಳಕುಂತಳಾಪನುಂ ಕಾತ್ಯಾಯನೀತ್ರಿಶೂಲಲಾಂಛನಪ್ರತಿಮತ್ರಿ ತಾಕಭ್ರುಕುಟಿವಿಕಟಲಲಾಟಪಟ್ಟನುಮುತ್ತುಂಗ ಘೋರಘೋಣನುಂ ಕರ್ಣಾಭರಣೀಕೃತ ಫಣಾಮಣಿಪ್ರಭಾರುಣಿತ ವಾಮಪಾರ್ಶ್ವನುಂ ಕಾಳಾಗರುಪರಿಮಳಾಮೋದಿತಮದಕರ್ದಮಕೃತಾಂಗರಾಗನುಂ ಅಂಗರಾಗಪರಿಮಳಪ್ರಬದ್ಧಮಂಡಲಾಳಿರಂಜಿತಮಯೂರಪಿಂಛಾಪತ್ರನುಂ ವಿಂಧ್ಯಾಟವೀಕರತಲಾನುಕಾರಿ ಕರ್ಣಪಲ್ಲವಾಪನೋದಿತ ಕಪೋಲಮಂಡಲೀಸ್ವೇದನುಂ ಅಕಾಲಸಂಧ್ಯಾಪ್ರದಾನಪ್ರವೀಣಲೋಹಿತಲೋಚನನುಂ ಚಂಡಿಕಾರುಧಿರಧಾರಾವಿನಿಹಿತಶಸ್ತ್ರೋಲ್ಲೇಖನವಿಷಮಿತಭುಜಯುಗಳನುಂ ಮೃಗರುಧಿರಶೀಕರರಂಜಿತಸ್ವೇದೋಬಿಂದುಮಾಲಾಲಂಕೃತವಿಶಾಲವಕ್ಷಸ್ಥಳನುಂ ಅನವರತ ಶ್ರಮಾಭ್ಯಾಸಕೃಶೋದರನುಂ ಬದ್ಧಕೌಶೇಯವಸನನುಂ ಇಭಮದಮಲಿನೀಕೃತಾಲಾನಸ್ತಂಭದ್ವಯೋಪಮಾನೋರುಯುಗಳನುಂ ಕಾಳಾಯಸನಿಗಳಬದ್ಧ ವಾಮಪಾದನುಂ ಆರಣ್ಯದಂತೆ ಖಡ್ಗಧೇನುಕಾ[2]ಸಹಿತನುಂ[2] ಅಭಿನವಜಲಧರದಂತೆ ಮಯೂರಪಿಂಛವಿಚಿತ್ರಚಾಪಧರನುಂ [3]ಬಕನಂತೆ[3] ಗೃಹೀತೈಕಚಕ್ರನುಂ ಗರುಡನಂತೆ ಸಮುದ್ಧೃತಾನೇಕನಾಗದಶನನುಂ ನಿದಾಘದಿವಸದಂತಾವಿಷ್ಕೃತಮೃಗತೃಷ್ಣನುಂ ಹಿರಣ್ಯಾಕ್ಷನಂತೆ ಮಹಾವರಾಹವಿಶೀರ್ಣವಕ್ಷಸ್ಥಳನುಂ ರಾಗಿಯಂತೆ ಬಹುವಿಧಪರಿಗ್ರಹನುಂ ಅಭಿನವಯಮ್ವನನಾಗಿಯುಂ ಕ್ಷಪಿತವಯಸನುಂ ಕೃಷ್ಣನಾಗಿಯುಂ ಅಸುದರ್ಶನನುಂ [4]ಕ್ಷಿತಿಭೃತ್ಪಾದಾನುವರ್ತಿಯಾಗಿಯುಂ ರಾಜಸೇವಾನಭಿಜ್ಞನು[4]ಮೆನಿಸಿದನಂತಲ್ಲದೆಯುಂ

ಪೊರೆದರೊ ನೆತ್ತರಿಂದೆನಿಪ ನಾಲಗೆಯಿಂ ಬಿಡೆಕೀಳ್ತ ಸಿಂಹಕೇ
ಸರದವೊಲಿರ್ದ ದಾಡೆಗಳ ಕಾಂತಿಯನಾಂತ ವರಾಹಘಾತಜ
ರ್ಝರತನುಗಳ್ ನಿಜಶ್ರಮುವನೊಯ್ಯನೆ ನಾಲಗೆಯಿಂದೆ ತೋಱುವಂ
ಕಿರೆ ಬೞಸಂದುವಾ ಶಬರನಾಯಕನಂ ಕಿರುನಾಯಕುನ್ನಿಗಳ್ ೧೩೯

---

1 ಮಾಭಿನ್ನ (ಕ) 2 ಸಾದನುಂ (ಕ) 3 ಪೀತಾಂಬರನಂತೆ (ಕ)
4 ಕೃತಸ್ಮೃತಪ್ರರಾವೃತ್ತಿಯಾಗಿಯುಂ ರುಜುಸೇನಾಭಿಜ್ಞನು (ಕ)

ಕಾಯಲ್ವೇಳ್ಪುದು ಸಿಂಹನಿ
ಕಾಯಮನೆಂದಭಯದಾನಮಂ ಬೇಡುವ ಸಿಂ
ಹೀಯೂಥಮೆಂಬಿನಂ ಕೌ
ಳೇಯ ಕುಟುಂಬಿನಿಗಳಿಸೆದುವಾತನ ಕೆಲದೊಳ್ ೧೪೦

ಕರಿದಂತಂಗಳನಾಂತು ಪೀಲಿವೊಱೆಯಂ ತಳ್ಕೈಸಿ ಗಂಧೇಬಬಂ
ಧುರಮುಕ್ತಾಫಳಭಾರಮಂ ತಳೆದು ಮಾಂಸವ್ರಾತಮಂ ಪೊತ್ತು ಕೇ
ಸರಿಚರ್ಮವ್ರಜಮಂ ತೆರಳ್ಚಿ ಚಮರೀವಾಲಂಗಳಂ ತಾಳ್ದು ಬಂ
ದರನೇಕರ್ ಬೞಸಂದು ಕಾಡೊಡೆಯನಂ ಕಾಂತಾರದೊಳ್ ಲುಬ್ಧಕರ್ ೧೪೧

ವ|| ಅಂತನೇಕ ಶಬರಪರಿವೃತನಾಗಿ ಬರುತಿರ್ದನಂತುಮಲ್ಲದೆಯುಂ

[1] ಪಡೆದಂ[1] ವಿಂಧ್ಯನಗೇಂದ್ರ
ಕ್ಕೊಡವುಟ್ಟಿದನಂ[2] ತಕಂಗೆ[2] ನಂಟಂ ಪಾಪ
ಕ್ಕೊಡನಾಡಿ ಕಲಿಗೆನಿಪ್ಪಂ
ಪೊಡವಿಯೊಳಿನ್ನಾತನಿಂ ಭಯಂಕರನಾವಂ ೧೪೨

ಆತನ ಪೆಸರಂ ಕೇಳ್ದಿಂ
ಮಾತಂಗಕನೆಂದು ಬೞಯಮಾ ಶಬರಂ ಸಂ
ಜಾತಶ್ರಮಂ ಕಿರಾತಸ
ಮೇತಂ ಶಾಲ್ಮಲಿ ಮಹೀಜಮಂ ಸಾರ್ತಂದಂ ೧೪೩

ವ|| ಅಂತು ನೆೞಲ್ಗೆವಂದುದ್ದಂಡಮಪ್ಪ ಕೋದಂಡಮಂ ಮರದ ಮೊದಲೊಳ್ ಸಾರ್ಚಿ ಪರಿಜನೋಪನೀತ ಪಲ್ಲವಾಸನದೊಳ್ ಕುಳ್ಳಿರ್ಪುದುಂ

ಕೊಳದೊಳ್ ಪೊಕ್ಕು ನೂಂಕಿ ಸರಸೀಜರಜಂಗಳನಲ್ಲಿ ಚಂದ್ರಮಂ
ಡಳಮೊಱೆದತ್ತು ಮುತ್ತುಗಳೊಸರ್ದುವೆನಿಪ್ಪ ಹಿಮೋದಕಂಗಳಂ
ಕುಳಿರ್ವ ಸರೋಜಪತ್ರಪುಟದಿಂದಮೆ ತೆಕ್ಕನೆ ತೀವಿ ತಂದು ಕೋ
ಮಳ ಬಿಸಕಾಂಡಮಂ ಬೆರಸು ನೀಡಿದನಾಗಳದೊರ್ವ ಲುಬ್ಧಕಂ ೧೪೪

ವ|| ಅಂತು ನೀಡೆ ನೀರನೀಂಟಿ ಶಶಿಕಳೆಗಳಂ ಮೆಲ್ವ ಸೈಂಹಿಕೇಯನಂತೆ ಮೃಣಾಳನಾಳಂಗಳಂ ಮೆಲ್ದು ವಿಗತಪರಿಶ್ರಮನಾಗಿ ಬೞಲ್ಕೆಗಳೆದು ಮಾತಂಗಂ ಬೇಡ ವಡೆವೆರಸು ನಿಜನಿವಾಸಕ್ಕೆ ಪೋದನನ್ನೆಗಮಿತ್ತಲ್

---

1 ಒಡೆಯಂ (ಕ) 2 ತೆಂಕಣ್ಗೆ (ಕ)

ಜರೆಯಿಂದಂ ಪುರ್ಬು ಜೋಲಲ್ ತೆರೆ ತರತರದಿಂದುಣ್ಮಿ ಪೊಣ್ಮಲ್ಕೆ ಗಂಟಲ್
ಮುರಿದತ್ತೊಂದೊಂದಱೊಳ್ ತಳ್ತಿೆಗೆಯೆ ಸೆರೆಗಳೊತ್ತಂಬದಿಂ ಬರ್ಪ ಕೆಮ್ಮಿಂ
ಬಿರಿಯಲ್ ಬೆಟ್ಟಂಗಳಾ ಬಟ್ಟೆಯೊಳಿನಿತಡಗುಂ ತನ್ನ ಕಯ್ಯಾರದೆಂದಾ
ತುರಿಸುತ್ತಂ ಭ್ರಾಂತಿಯಿಂದೆನ್ನಯ ಮರದಡಿಯೊಳ್ ನಿಂದನೊರ್ವಂ ಪುಳಿಂದಂ ೧೪೫

ಬೇಡಿದೊಡೀಯದ್ವೈದೆ ಬಿಯದರ್ ಮೃಗಮಾಂಸವ ರಕ್ತವರ್ಣದಿಂ
ಕೂಡಿದ ಕಣ್ಗಳಿಂ ಶುಕನಿಕಾಯದ ಜೀವಮನೆಯ್ದೆ ಪೀರ್ವವೋಲ್
ಗೂಡುಗಳಂ ತಗುಳ್ದಿಣಿಪವೋಲ್ ವಿಹಗಾಮಿಷಲಾಭಲೋಲುಪಂ
ನೋಡಿದನಾ ಜರಚ್ಛಬರನಾಯಕನಾ ಮರನಂ ಮಹೀಪತೀ ೧೪೬

ವ॥ ಅಂತು ನೋಡುತ್ತಮದನೇಕತಾಳೋತ್ಸೇಧಮುಮಭ್ರಂಕಷಮುಂ ದುರಾ
ರೋಹಮುಮಾದೊಡಂ ಬಗೆಯದೆ ಬಳಸಿದ ಬಳ್ಳಿವಿಡಿದಡರ್ದೇಱಿ

ಜಳಜದ ಮೊಗ್ಗೆಯಂತೆ ಮುಗುಳಂತೆಳೆಯೆಕ್ಕೆಯ ಕಾಯ್ಗಳಂತೆ ಶಾ
ಲ್ಮಲಿ ಕುಸುಮಂಗಳಂತೆ ತರುನೀಡನಿಕಾಯದಿನೆಲ್ಲವಾಗಳಾ
ಗಳೆ ಗಱಿವೊಯ್ಮ ಕಂದೆರೆವ ತುಪ್ಪುಱೊಡರ್ಚುವ ಕೆಂಪನಾಳ್ವ ಕೋ
ಮಳ ಶುಕಶಾಬಕಪ್ರಕರಮಂ ತೆಗೆದಂ ದಯೆಗೆಟ್ಟು ಲುಬ್ಧಕಂ ೧೪೭

ಪಱಿದುವು ಗಱಿ ಚಂಚುಗಳುಂ
ಮುಱಿದುವು ತಲೆ ನಡುಗುತಿರ್ದುವೆನ್ನದೆ ತರದಿಂ
ಬಱಿಗೆಯ್ವುತಿರ್ದ ಮಾಯ್ದಱಿ
ಗುಲಿ ಕರ್ವೇಡನಲ್ಲಿ ಮುದುಗಿಳಿಗಳುಮಂ ೧೪೮

ವ॥ ಅಂತವೆಲ್ಲವನೊಡನೊಡನೆ ಗಂಟಲಂ ಮುಱಿದು ನೆಲಕ್ಕೀಡಾಡುತಿರ್ದ
ಬೇಡನಂ ತೊಟ್ಟನೆ ನೋಡಿ ಪ್ರಾಣಾಪಹಾರಮುಮಪ್ರತೀಕಾರಮುಮಪ್ಪ ಕಷ್ಟಮಂ
ಕಂಡು ಭಯಂಗೊಂಡು

ಬಸವಳಿದು ಕಣ್ಣನೀರಿಂ
ದೆಸೆಗೆಟ್ಟೆಲೆ ಮಗನೆ ನಿನ್ನನಿನ್ನಾರ್ ಕಾಯ
ಲ್ಕೆ ಸಮರ್ಥರೆನುತ್ತಾಗಳ್
ಬಿಸುಸುಯ್ದಂ ನೋಡಿ ಜನಕನೆನ್ನಯ ಮೊಗಮಂ ೧೪೯

ವ॥ ಅದಲ್ಲದೆಯುಂ

ನಿನ್ನಯ ತಾಯನೊಯ್ವ ಪದದೊಳ್ ಜವನಕ್ಕಟ ನೋಡು ಕಂದ ಬಂ
ದೆನ್ನುಮನಂತೆ ಕೂಡಿದೊಡನೊಕ್ಕಲುವೋಗಿಸನೇಕೆ ಬಯ್ತೆ ನಾಂ
ನಿನ್ನನೆ ನೋಡಿ ಶೋಕಮನಡಂಗಿಸಿ ಬಾೞ್ಕೆಯೆ ಲೇಸೆನುತ್ತಮಿ
ರ್ಪನ್ನೆಗಮುಮ್ಮ ನಿನ್ನನೊಡಗೊಂಡು ಮುೞುಂಗುವ ಕಾಲನಾದುದೋ ೧೫೦

ವ || ಎಂದು ಸೈರಿಸಲಾಱದೆ

ಇಱುಕಿ ತೊಡೆಯೆಡೆಯೊಳೆನ್ನಂ
ಪಱಿದೆಱಕೆಗಳಿಂದೆ ಮುಚ್ಚಿ ಮೋಹದೆ ತಾತಂ
ಮಱುಗುತ್ತಿರ್ಪಿನಮೆಯ್ದಿದ
ನಱಗುಲಿ ಕರ್ವೇಡನೆನ್ನ ಪೊೞಲಿಂಗಾಗಳ್ ೧೫೧

ಅಡಸುವ ಕಾಲದಂಡಮೆರೆಗೊಳ್ವಸಿತೋರಗನೆಂಬ ಶಂಕೆ ನೂ
ರ್ಮಡಿಸಿರೆ ಕಾಡಪಂದಿಗಳ ಬಲ್ನೆಣದಿಂ ಪೊಲಸಟ್ಟೆ ನಾರ್ವ ಜೇ
ವಡೆಗಳ ಪುಣ್ಗಳಿಂ ತೊರೆವ ನೆತ್ತರ ಕೆಯ್ ನಡುಗಲ್ಕೆ ನೀಡಿ ಕೀ
ೞಿಡೆಯಿಡೆ ಗಂಟಲಂ ಮುಱಿದನೊರ್ಮೆಯೆ ನಿರ್ಘೃಣನೆನ್ನ ತಂದೆಯಂ ೧೫೨

ಬೆಱ್ತುೞಿದೆನಾಗಿಯುಂ ತನು
ಕಿಱಿದಾಗಿಯುಮತ್ತಮಾಯುಮುಂಟಾಗಿಯು ಮೇ
ಣಱಿಯಂ ಕಾಣಂ ತಂದೆಯ
ಗಱಿಯೊಳಗಿರ್ದವನನೆನ್ನ[1]ನಂದು ನೃಶಂಸಂ[1] ೧೫೩

ವ || ಅಂತು ಜೀವಮಂ ಬಿಟ್ಟು ಗೋಣೆೞಲ್ವೆನ್ನ ತಂದೆಯಂ ಮರದ ಮೇಗಣಿಂ
ನೆಲಕ್ಕೀಡಾಡಲಾನುಂ ತೊಡೆಯೆಡೆಯೊಳಿರ್ದೊಡಸಂದು ಸುಟ್ಟುರೆಯ ತರಗೆಲೆಯಂತೆ
ತಿಱನೆ ತಿರುಗಿ ಬೀೞ್ವಲ್ಲಿಱುಂಕಿದೆಱಂಕೆಯೊಳಗಣಿಂ ಸಿಡಿಲ್ದು ದೈವವಶದಿಂ ಗಾಳಿಯೊಳ್
ಱ
ತೆರಳ್ದು ತಱಗೆಲೆಯ ರಾಶಿಯೊಳ್ ಪೋಗಿ ಬಿರ್ದ

ಕೞಿದಿರ್ದ ತಂದೆಯಂ ಬಿಸು
ಟೆೞಲುಮನಿನಿಸಱಿಯದೆಳವೆಯೊಳ್ ಪಾತಕನೆಂ
ಪೞಿಯ ತರಗೆಲೆಗಳೊಳಗಿ
ರ್ದೞಿದಂ ಖಳನಿೞಿದು ಕಾಣ್ಗುಮೆಂಬೀ ಭಯದಿಂ ೧೫೪

1. ನಾನಿಸ್ತ್ರಿಂಸಂ (ಕ)

ವ॥ ಅನ್ನೆಗಮಿತ್ತಲ್

ಇಱಿದು ಮರದಿಂದಮಾಗಳ್
ಕೆಱಿಗೆಲ್ಲಂ ಪರೆದು ಬಿರ್ದ ಶುಕಸಂತತಿಯಂ
ಗಱಿಗಱಿಸಿ ಕಟ್ಟಿ ನಡುಬೆ
ನ್ನಿಱಿವಿನೆಗಂ ಪೊತ್ತುಪೋದನಾ ಮುದುವೇಡಂ ೧೫೫

ವ॥ ಅಂತಾ ಬೇಡಂ ಬೇಡವಡೆಯಂ ಬಱಿಸಂದು ಪೋಗೆವೋಗೆ

ತಂದೆ ಕಱಿದಱಿಲ ಬೇಗೆಯೊ
ಳಂ ದೂರದೆ ಬಿರ್ದದೊಂದು ಕಡುಸೇದೆಯೊಳಂ
ಬಂದೆನ್ನಂ ಪರವಶತೆಯೊ
ಳೊಂದಿಸಿದತ್ತಾಗಳಾ ಪಿಪಾಸೋದ್ರೇಕಂ ೧೫೬

ವ॥ ಅಂತಾ ಪಿಪಾಸೆ ಪುಟ್ಟಲೊಡಂ

ಅಱಿಯೆಂ ಪಾರಲ್ ಬಾಯುಂ
ಬಱಿಬಱಿ ಬತ್ತಿತ್ತು ಪೋಪೆನೆಂದೇೞ್ವುದುಮಾ
ತಱಿಗೆಲೆ ಗಿಱಿಕೆನೆ ಬೇಡಂ
ಪೊಱಿಗೆಯ್ದಿದನೆಂದು ಭಯದೆ ಮಱಿಗಿದೆನಾಗಳ್ ೧೫೭

ವ॥ ಮತ್ತಂ ಮೆಲ್ಲನೆೞ್ದು ದೆಸೆಗಳೆಲ್ಲಮಂ ನೋಡಿವೊರ್ಬರುಮಂ ಕಾಣದೆರ್ದೆಯಂ ನೀವಿಕೊಂಡು ನೀರ್ದಾಣಕ್ಕೆ ಪೋಗಲುದ್ಯೋಗಂಗೆಯ್ದು

ಗಱಿ ಪಾರಲಿಲ್ಲ ಕಾಲುಂ ಬಲಿಯವು ನಡೆಯಲ್ ಬೆಟ್ಟಿತೆಂಬಂತೆ ಮೂಗಂ
ಮುಱಿವನ್ನಂ ಮುಂದೆ ಮುಗ್ಗುತ್ತೆಡಬಲದೊಳಗಾಂ ಬೀೞುತುಂ ಪಕ್ಕಗೂಡಾ
ಗೊಱಿಗುತ್ತಂ ಪೋಗಿ ಮಧ್ಯಾಹ್ನದ ಬಿಸಿಲೞುರಲ್ ಕಣ್ಮಲರ್ ನಟ್ಟು ಸುಯ್ಗಳ್
ಪೊಱಿಮಟ್ಟೊಂದೊಂದನಟ್ಟುತ್ತಿರೆ ಪಿರಿದುಮಱಲ್ದೆನ್ನೊಳಿಂತೆಂದೆನಾಗಳ್ ೧೫೮

ಬಸವಲ್ತೆಂತುಮೆನಿಪ್ಪವಸ್ಥೆಗಳನೆಯ್ದುತ್ತಿರ್ಪಿನಂ ಜೀವಮಂ
ಬಿಸುಡಲ್ ಜೀವಿಗಪೇಕ್ಷೆ ಪುಟ್ಟಿದು ವಲಂ ಪೋ ಜೀವದಿಂ ಬಿಟ್ಟಪೇ
ಕ್ಷಿಸುವಂತಪ್ಪು[1]ದೆ ಕಾ[1]ಣೆನಿಂತು ಸಲೆ ತಾತಂ ದುಃಖಮೆಯ್ದಿದ್ದುರ್ದಿ
ಲ್ಲಸುವೆನ್ನಿಂ ಕೃಪೆಗೆಟ್ಟನಂ ಪೆಱಿನದೊರ್ವಂ ಸತ್ತವೋಲಿರ್ದನಂ

1 ದುಗಾ (ಕ)

ಎನ್ನಯ ತಾಯಿ ಸತ್ತ್ರ ಬಲಸಾದವಡಂಗಿಸಿ ಮುಪ್ಪಿನೊಳ್ ಮರ
ಲ್ದೆನ್ನನೆ ನೋಡಿ ತತ್ತಿ[1]ವಿಡಿ[1]ದಿಂದುವರಂ ಪಿಡಿದಿರ್ದು ಯತ್ನದಿಂ
ದಂ ನಡಪುತ್ತಮಿರ್ದುದುಮನೊರ್ಮೆಯೆ[3] ದಲ್ ಮಱೆದೀ[2] ಕೃತಘ್ನನ
ಪ್ಪೆನ್ನಸು ನಿರ್ಘೃಣಂ ಬಱಸಲಲ್ಕಣಮಾಱದು ತಂದೆ ಸಾಯೆಯುಂ ೧೬೦

ಅತಿಕಷ್ಟಮುಪ್ಪವಸ್ಥಾ
ತತಿಯಂ ಮಱೆಯಿಸಿ ಜಳಾಭಿಲಾಷೆಯಿನೀ ಜೀ
ವಿತತೃಷ್ಣೆ ಮೂಡಿತೀ ಜೀ
ವಿತಾಶೆಯಂ ಬಿಟ್ಟು ಕಷ್ಟಮಾವುದುಮುಂಟೇ ೧೬೧

ಪೆಱತೇಂ ನಿರ್ಘೃಣನೆಂಬುದ
ನಱಿದೆಂ ಪಿತೃಮರಣ[3]ಜಾತ[3]ದುಃಖಮನೀಗಳ್
ಮಱೆದು ಮನಂ ನೀರ್ಗುಡಿಯಲ್
ಮಱುಗಿದಪುದು ಕುಡಿವೊಡೆನಗೆ ನೀರುಂ ದೂರಂ ೧೬೨

ಅದೆ ದೂರಂ ನಸುಗೇಳಲಾಯ್ತು ಜಳದೇವೀನೂಪುರಾರಾವದಂ
ದದೆ ಹಂಸಸ್ವನ ಪಾರಿ ಬಂದುದದೆ ನಾನಾಸಾರಸೋತ್ತಾರಸಂ
ಮದಕೋಳಾಹಳಮೆಯ್ದಿದತ್ತ[4]ದುವೆ ತಾನುಲ್ಲಾಸಿ[4] ದಿಗ್ದೇವತಾ
ವದನೋತ್ಸರ್ಪಣವಿಪ್ರಕರ್ಷವಿರಳಂ ಪಂಕೇಜಿನೀಸೌರಭಂ ೧೬೩

ವ॥ ಅದಲ್ಲದೆಯುಂ

ಕಡುವೊತ್ತಾದುದು ರವಿಯುಂ
ನಡುವಗಲೊಳ್ ನಿಂದು ಕೆದಱಿದಂ ಕರತತಿಯಿಂ
ಕಿಡಿಗಳನೆನೆ ಬಿಱುವಿಸಿಲುಂ
ಸುಡುತಿರೆ ನೀರಡಿಕೆ ತಿಣ್ಣಮಾದತ್ತಾಗಳ್ ೧೬೪

ಬಟ್ಟೆಯ ದೂಳಿದೂವೆ ನೊದಲಾದುದು ಪೋದಪೆನೆಂಬ ಮೆಯ್ ಜವಂ
ಗೆಟ್ಟು ಪಿಪಾಸೆಯಿಂ ಪೊಡರಲಾರ್ತಪುದಿಲ್ಲಿರ್ದೆಗೆಟ್ಟೆನೀಗಳೀ
ದಿಟ್ಟಿ ಮರಳ್ದು ನಂದಿದಪುದೆನ್ನುಮನಾನಱಿದಪ್ಪೆನಿಲ್ಲ ಪೋ
ಬೆಟ್ಟಿದನಾಗಿ ತಾನೆ ವಿಧಿ ಕೊಂದಪನಾಗಳೆ ಸಾಯದಿರ್ದೊಡಂ ೧೬೫

---

1 ವೊಡೆ (ಕ) 2 ದಲ್ಮರೆದಿ (ಕ) 3 ಶೋಕ (ಕ)
4 ದೆನೆದಿರ್ದೊಲ್ಲಾಸಿ (ಕ)

ವ॥ ಎಂದು ಚಿಂತಿಸುತ್ತಿರೆಯಿರೆ

ಪ್ರತ್ಯಾಸನ್ನದೊಳಿರ್ಪುದು
ಯತ್ಯಾಶ್ರಮಮಲ್ಲಿ ನೆಗಟ್ದ ಜಾಬಾಲಿಗಳಿಂ
ಬತ್ಯುತ್ತಮ ಯತಿಪತಿಗಳ
ಪತ್ಯಂ ಹಾರೀತ[1]ನಾಮ[1]ನಾವನದೊರ್ವಂ ೧೬೬

ಸಮವಯಸರ್ ಕೆಲದೊಳ್ ಮುನಿ
ಕುಮಾರರಿರ್ವರ್ ಬರುತಮಿರೆ [2]ಬಹುವಿದ್ಯಂ[2]
ಕಮಳಾಕರಮುಂ ಮಿೞಯಲ್
ಕುಮರಂ ಬಂದಂ ಸನತ್ಕುಮಾರನ ದೊರೆಯಿಂ ೧೬೭

ಇದು ರವಿಬಿಂಬದಿನೊಗೆದ
ತ್ತಿದು ಮಿಂಚಿನ ಗೊಂಚಲಿಂದೆ ಮೇಣ್ ಮೂಡಿದುದಿಂ
ತಿದು ಕನಕದ್ಯುತಿಯಿಂ ಪೂ
ಸಿದುದೆನೆ ಪೊಳೆದತ್ತು ಮೂರ್ತಿ ತನ್ಮುನಿವರನಾ ೧೬೮

ಎಳವಿಸಿಲೆಱಗಿದುದೋ ಬನ
ದೊಳಗೆನೆ ಮೆಯ್ವೆಳಗು ಬಳಸೆ ಖಾಂಡವಮಂ ತ
ಳ್ತೆಳುಱುತಿರೆ ವಟುಕವೇಷಮ
ನೆಳಸಿದ ಪಾವಕನನಿನಿಸನುಕರಿಸಿರ್ದಂ ೧೬೯

ವ॥ ಅದಲ್ಲದೆಯುಂ

ಬಳೆದು ಪೊಱಮುಯ್ವುವರೆಗಂ
ತಳೆದು ಕನತ್ಕನಕಪಿಂಗರುಚಿಯಂ ತೀರ್ಥಾ
ವಳಿ ಜಲಪೂತಂಗಳ್ ಕ
ಣ್ಗೊಳಿಪುವು ಮುನಿವರನ ಮಿಸುಪ ಕೆಂಜೆಡೆದುಱುಗಲ್ ೧೭೦

ಬಿಸುಟಿಂ ಸಮಸ್ತವಿಷಯದ
ದೆಸೆಯಂ ನಿಶ್ಚಯದೆ ಮೂಱುಸೊಳ್ವರಮೆಂಬಂ
ತೆಸೆದತ್ತು ನಾಡೆಯುಂ ಪೆಱ[3]
ನೊಸಲೊಳ್ ಭಸಿತಪುಂಡ್ರಕಂ ಮುನಿವರನಾ ೧೭೧

1 ಕುಮಾರ (ಕ)   2 ಬರುತಿರ್ದ (ಕ)

ಗಗನಗಮನಕ್ಕೆ ಹಂಸಂ
ಮೊಗಸಿದುದೆನೆ ನಿಮಿರ್ದ ಕೊರಳನೊಳ್ಪೆಳಗಿನ ಗುಂ
ಡಿಗೆ ಮುನಿಯ ಕಯ್ಯೊಳೆಸೆದುದು
ಜಗಕೆಲ್ಲಂ ಸ್ವರ್ಗಮಾರ್ಗಮಂ ತೋಱುವವೋಲ್ ೧೭೨

ಉರದ ಬರಿಯೆಲುವನೆಣಿಸಂ
ತಿರಲೆಲರಿಂ ನಡುಗುತಂ ತಪಸ್ವಿಯ ಕೊರಲೊಳ್
ಕರಮೆಸೆದು ತೋಱಿದುದು ತಾ
ವರೆದಂಟಿನ ಮಿಸುಪನೂಲ ಪೊಸ ಜನಿವಾರಂ ೧೭೩

ಅಗುಳ್ದು ತುದಿಗೊಂಬಿನೊಳ್ ಮೆ
ಲ್ಲಗೆ ಪೊತ್ತಭಿಷೇಕಮೃತ್ತಿಕೆಯನೊಡಸಂದ
ತ್ರಗಲದಿನಿಸುಂ ತಪೋವನ
ಮೃಗಮಾ ಮುನಿವರನೊಳಾದ ಪರಿಚಯದಿಂದಂ ೧೭೪

ವ || ಅದಲ್ಲದೆಯುಂ ಗಿರಿಯಂತೆ ಮೇಖಳಾಳಂಕೃತನುಂ ದ್ರೋಣನಂತಸಹಾಯ ಕೃಪಾನುಗತನುಂ ನಕ್ಷತ್ರಚಕ್ರದಂತೆ ನಾನಾಮೃಗಕೃತ್ತಿಕಾಶ್ಲೇಷೋಪಶೋಭಿತನುಂ ಘರ್ಮಸಮಯದಂತೆ ಕ್ಷಪಿತದೋಷನುಂ ಹರಿಯಂತಪಗತನರಕಭಯನುಂ ನೀತಿಯುಳ್ಳರಸನಂತೆ ಗೂಢಮಂತ್ರಸಾಧನಕ್ಷಯಿತವಿಗ್ರಹನುಂ ವನಚರನಾಗಿಯುಂ [1]ಮಹಾಲಯ ಪ್ರವೇಶನುಂ[1] ಅಸಂಯಮನಾಗಿಯುಂ ಮೋಕ್ಷಾರ್ಥಿಯುಂ ಸಾಮಪ್ರಯೋಗನಾಗಿಯುಂ ಗೃಹೀತದಂಡನುಂ ಸುಪ್ತನಾಗಿಯುಂ ಪ್ರಬುದ್ಧನುಂ ವಿಶಾಲಲೋಚನದ್ವಯನಾಗಿಯುಂ ತ್ಯಕ್ತವಾಮಲೋಚನನುಮೆನಿಸಿದ ಮುನಿಕುಮಾರಂ ಬರುತಿರ್ದ ಬಟ್ಟೆಯೊಳ್ ಕಂಠಗತ ಪ್ರಾಣನಾಗಿರ್ದೆನ್ನಂ ಕಂಡು

ಗುಣಿಗಳ ಮನಮೆಂದುಮಕಾ
ರಣದೊಳೆ ಕರುಣಾರಸಾರ್ದ್ರಮಾರೊಳಮದುಕಾ
ರಣದಿಂದೆ ಮುನಿಕುಮಾರಾ
ಗ್ರಣಿ ಕರುಣಿಸಿ ಕೆಲದ ಮುನಿಕುಮಾರರ್ಗೆಂದಂ ೧೭೫

ಗಿಡುಗಂ ತಂದತ್ತೊ ಮೇಣ್ ಪೆರ್ಮರನ ತುದಿಯಿನೇಱಿ ಬಿರ್ದುದೊ ಸೇದೆಯೊಂದು
ಗ್ಗಡದಿಂದಂ ಸುಯ್ ಪೊದಟ್ಟುಣ್ಮಿದಪುದು ನಡುಗುತ್ತಿರ್ದುವೀ ಕಣ್ಮಲರ್ ಬಾ
ಯ್ಬಿಡುತ್ತಿರ್ದತ್ತಕ್ಕಟಾ ಗೋಣಿನಿಸು ನಿಲಲುಮಾರ್ತಪ್ಪುದಿಲ್ಲೆಯ್ದೆ ಜೀವಂ
ಬಿಡದನ್ನಂ ಬೇಗಮಿಂತೀ ಗಿಳಿಯಮಱಿಯನಬ್ಜಾಕರಕ್ಕೊಯ್ಯಮೀಗಳ್ ೧೭೬

---
1 ಮಹಾರ್ಥಪ್ರವೇಶನುಂ (ಕ)

ವ॥ ಅಂತಾ ಗಿಳಿವೆರಸು ಮುನಿಕುಮಾರಕಂ ಕಮಳಾಕರಕ್ಕೆ ವಂದು ದಂಡಕಮಂಡಲುಗಳನೊಂದೆಡೆಯೊಳಿರಿಸಿ

ಕುಡಿತೆಯೊಳೆ ತಂದು ನೀರಂ
ಪಿಡಿದೊಯ್ಯನೆ ತೆಱೆದು ತಾನೆ ಚಂಚೂಪುಟದಿಂ
ಕುಡಿಯಿಸುತಡಿಯಣ ತಾವರೆ
ಗೊಡೆಯೆಲೆಗಳ ತಳದ ನೆಟಲೊಳಿರಿಸಿದನೆನ್ನಂ ೧೭೭

ವ॥ ಅಂತೆನ್ನಂ ಸಪ್ರಾಣನಪ್ಪಂತು ಮಾಡಿ ಸಕಲಪರಿಶ್ರಮಂಗಳನಾಱಿಸಿ ಮುನಿಕುಮಾರಂ ಕೃತಸ್ನಾನನಾಗಿ ಪ್ರಾಣಾಯಾಮಪೂರ್ವಕಮಘಮರ್ಷಣಕ್ರಿಯೆಗಳಂ ನಿರ್ವರ್ತಿಸಿ ನಳನೀದಳಪುಟದೆ ಕೆಂದಾವರೆಯಲರ್ಗಳಿಂ ದಿವಸಕರಂಗರ್ಘ್ಯಮೆತ್ತಿ ಗೃಹೀತಧವಳವಲ್ಕಲನುಂ ನಿರ್ಧೌತಜಟಾಕಳಾಪನುಂ ಪೂರ್ಣಕಮಂಡಳಾಕಲಿತಕರತಳನುಮಾಗೆನ್ನಂ ಪರ್ಣಪುಟದೊಳ್ ತಳೆದು ನಿರ್ವರ್ತಿತನಿಯಮರಪ್ಪ ಮುನಿಕುಮಾರರ್ ಬೆರಸು ನಿಜಾಶ್ರಮಕ್ಕೆ ಪೋಗೆವೋಗೆ

ತನುವೆರಸೊಯ್ಯಲ್ ಮುನಿಗಳ
ನನಲಂ ಸ್ವರ್ಗಕ್ಕೆ ಸೇತುಗಟ್ಟಿದನೆನೆ ಪಾ
ವನ ಹೋಮಧೂಮಮೊಗೆಯಲ್
ಮುನಿಪಾಶ್ರಮಮೆನಗೆ ಕಾಣಲಾದತ್ತಾಗಳ್ ೧೭೮

ತಿಲಕಾಶೋಕತಮಾಲತಾಳವಕುಳಾಲಂಕಾರಮೇಲಾಲತಾ
ಕುಲಪೂಗದ್ರುಮನಾಳಿಕೇರಬಹುಳಂ ಚೂತಾವನೀಜಾತಲೋ
ದ್ರುಲವಂಗಪ್ರಕರಪ್ರವಾಳರುಚಿರಂ ಪ್ರೋತ್ಫುಲ್ಲನಾನಾಲತಾ
ಲಲಿತಂ ಕಾನನಮೆಯ್ದೆ ಕಣ್ಗೊಳಿಸುಗುಂ ಋಷ್ಯಾಶ್ರಮೋಪಾಂತದೊಳ್ ೧೭೯

ಅಳಿನೀರ್ಝಂಕಾರಸಾರಂ ವಿಲುಳಿತ ಸುಮನೋಮಂಜರೀರಂಜಿತಂ ಕೋ
ಕಿಳಕಾಂತಾಳಾಪರಮ್ಯಂ ನಿಪತಿತವಿವಿಧಾನೇಕಪು[1]ಷ್ಪಂ ಪರಾಗೋ[1]
ಜ್ಜ್ವಳಿತಂ ನೃತ್ಯನ್ಮಯೂರಪ್ರಕರಸುರುಚಿರಂ ಪ್ರೌಢಪೂಗದ್ರುಮಾಬ
ದ್ಧಲತಾಂದೋಳೀವಿಳಾ[2]ಸೋತ್ಸುಕ[2]ವನವನಿತಾನೀಕಕಾಂತಂ ವನಾಂತಂ ೧೮೦

ವ॥ ಮತ್ತಂ ಮಾರೀಚಮಾಯಾಮೃಗಪ್ರಚಾರಭೂಮಿಭಾಗದಿಂ ದಶರಥಸುತಚಾಪಕೋಟಿಕ್ಷತಕಂದಗರ್ತವಿಷಮಿತಸ್ಥಲಂಗಳೊಳಮೆಸೆವ ದಂಡಕಾರಣ್ಯಸ್ಥಳಗಳಿನಾಶ್ರಮಮುಪಾಶ್ರಯುಂಬಡೆವುದಂತುಮಲ್ಲದೆಯುಂ

1 ಷ್ಪೋಪಹಾರೋ (ಕ) 2 ಸೋವಿತ (ಕ)

ಪಿಡಿದು ಸಮಿತ್ಕುಶಕುಸುಮಮು
ನೆಡೆವಿಡದೋದುತ್ತೆ ವಿನಯದಿಂ ಶಿಷ್ಯರ್ ತ
ಮ್ಮೊಡನೆಯೆ ಬರುತಿರೆ ಮುನಿಗಳ್
ಗಡಣದೆ ಪುಗುತಿರ್ದರೆತ್ತಮಾಶ್ರಮ ಪದಮಂ ೧೮೧

ವ॥ ಮತ್ತಮಲ್ಲಿ

ಕಲುಷರಹಿತಂಗಳೆನಿಸುವ
ಕೊಳದೊಳಗಘಮರ್ಷಣಕ್ಕೆ ಋಷಿಸಂಕುಳಮೇಂ
ನೆಲಸಿರ್ದುದೊ ಪೇೞಿನೆ ಕ
ಣ್ಗೊಳಿಪುವು ತೆರೆವಿಡಿದು ಪೊಳೆವ ರವಿಬಿಂಬಂಗಳ್ ೧೮೨

ಮುನಿಜನ[1]ದುಪಾಸ್ತಿಗೆಯ್ಯ
ಲ್ಕೆ ನಿಶಿಯೊಳೇಂ ಗ್ರಹಸಮೂಹ[1]ಮೆಯ್ತಂದುದೊ ಪೇ
ೞೆನಲೆಸೆವ ಕುಮುದ ಕುವಲಯ
ವನದಿಂ ಸೊಗಯಿಪುದು ದೀರ್ಘಿಕಾನಿಕುರುಂಬಂ ೧೮೩

ತಲೆವಾಗುತ್ತಿರ್ದುವೆಂಬಂತೆಱಪ ಲತೆಗಳಿಂದರ್ಚಿಸುತ್ತಿರ್ದುವೆಂಬಂ
ತಲರ್ಗಳ್ ತಳ್ತಲ್ಲುಗುತ್ತಿರ್ದಖಿಳತರುನಿಕಾಯಂಗಳಿಂ ಕೂಡೆ ಬದ್ಧಾಂ
ಜಳಿಯಾಗುತ್ತಿರ್ದುವೆಂಬಂತೆಸೆವ ಕಿಸಲಯಾಬದ್ಧಸಂಛನ್ನಶಾಖಾ
ಕುಲದಿಂ ಚೆಲ್ವಾದ ಋಷ್ಯಾಶ್ರಮದ ರಚನೆಯಂ ನೋಡುತುಂ ಪೋದೆನಾಗಳ್ ೧೮೪

ವ॥ ಅಂತುಟಜಾಂಗಣದೊಳ್ ಪರಪಿದ ಪಲತೆಱದ ಫಲಂಗಳಿಂ ಶ್ರುತಿಮುಖರ ಮುಖಂಗಳಪ್ಪ ಶುಕಶಾರಿಕೆಗಳಿಂ ಮುನಿಕುಮಾರಕರನೆಳಸಿ ಮೆಲ್ಲಮೆಲ್ಲನೆ ನಕ್ಕುವೆಳೆವುಲ್ಲೆಗಳಿಂ ಜರದಂಧತಾಪಸರ ಕಯ್ಯಂಪಿಡಿದೆಡಪಲೀಯದೆ ನಡೆಯಿಸುವ ಚಪಳಮರ್ಕಟಂಗಳಿಂ ಮುನಿಜನಂಗಳ್ಗೆ ಕೋಡುಗಳಿಂ ಕಂದಮೂಲಫಲಂಗಳನಗುಳ್ದು ಕೊಡುವ ವನಹರಿಣಗಳಿಂ ಕರಪುಷ್ಕರಂಗಳಿಂ ತಂದು ಪೂಗಿಡುಗಳ್ಗೆ ನೀರೆಱೆವ ಮಱಿಯಾನೆಗಳಿಂ ಮುನಿಕುಮಾರರ್ಗೆ ಹಂದಿಗೆಡ್ಡೆಯಂ ದಾಡೆಯಿಂದಗುಳ್ದು ನೀಡುವ ವನವರಾಹಂಗಳಿಂ ತಮ್ಮೆಱಂಕೆಯ ಗಾಳಿಯಿಂ ಪೊಗೆಯಂ ನಂದಿಸಲೀಯದೆ ಹೋಮಾನಲಪ್ರಜ್ವಲನಮನೆಸಗುವ ಸೋಗೆನವಿಲ್ಗಳಿಂ ಸೊಗಯಿಸುವುದಂತುಮಲ್ಲದೆಯುಂ

ಚರುಚಾರುಗಂಧದೊಳ್ ಮೆ
ಯ್ವೆರೆದು ಪುರೋಡಾಶಪುಣ್ಯತರ ಪರಿಮಳದೊಳ್
ಪೊರಳ್ದಾಜ್ಯಾಹುತಿರವದೊಳ್
ನೆರೆದೆಸೆವುದು ಪಾವನಂ ತಪೋವನಪವನಂ ೧೮೫

1 ಮುಪಾಸ್ತಿಗೆಯ್ಯಲುಮೆನಿತಾನುಂ ಬ್ರಹ್ಮನಿವಹ (ಕ)

ಜಲರುಹಬೀಜರಾಜಿಗಳನಾಱುಪ ಪರ್ಣಕುಟೀರಕಂಗಳಂ
ನಿಲಿಸುವ ದಂಡವೊತ್ತುವ ಮೃಗಾಜಿನಮಂ ಪೊಲುತಿರ್ಪ ಮುಂಜಮೇ
ಖಲೆಗಳನೊಪ್ಪಮಾಡುವ ಸಮಿತ್ಕುಶಮಂ ತರವೋಪ ಧೌತವ
ಲ್ಕಲಮನಲಂಬುವಕ್ಷಮಣಿಯಂ ಸಮೆವೀ ವ್ಯವಸಾಯಮೆತ್ತಲುಂ ೧೮೬

ಅತಿಥಿಯನಾದರಿಪ್ಪ ಪಿತೃದೈವಮನರ್ಚಿಪ ಧರ್ಮಶಾಸ್ತ್ರಸಂ
ಗತಿಗಳೊಳಿರ್ಪ ಯಜ್ಞವಿಧಿವೇಳ್ವ ಪುರಾಣಮನೋದುವಾಗಮ
ಪ್ರತತಿಗಳಂ ವಿಚಾರಿಸುವ ತತ್ವನಿರೀಕ್ಷಣೆಗೆಯ್ವ ಯೋಗದು
ನ್ನತಿಕೆಯನಪ್ಪುಗೆಯ್ವ ಮುನಿಸಂಘದಿನೊಪ್ಪುವುದಾ ತಪೋವನಂ ೧೮೭

ವ|| ಮತ್ತಮಸುರಾರಿಯಂತೆ ಪ್ರಕಟಿತ ಹರಿವರಾಹಮುಂ ಸಾಂಖ್ಯದಂತೆ ಕಪಿಳಾಧಿಷ್ಠಿತಮುಂ ಉದಯನನಂತಾನಂದಿತವತ್ಸಕುಳಮುಂ ಸಮುದ್ರದಂತೆ ವನಗಹನಮಧ್ಯಸುಪ್ತಹರಿಯುಂ ಮಾತಂಗಕುಳದೂಷಿತಮಾಗಿಯುಮತಿಪವಿತ್ರಮುಮುಲ್ಲಸಿತಧೂಮಕೇತುಶತಮಾಗಿಯುಂ ಪ್ರಶಾಂತೋಪದ್ರವಮುಂ ಪರಿಪೂರ್ಣದ್ವಿಜರಾಜಸನಾಥಮಾಗಿಯುಂ ತರುಗಹನಾಂಧಕಾರಿತಮುಮಪ್ಪುದಂತುಮಲ್ಲದೆಯುಂ

ಆಸವಸದಿಂ ಕಲಿಕಾಲದ
ದೆಸೆಯುಂ ಮೊದಲಾಗಿ ಪೊರ್ದಲಱಿಯದು ಮಱದುಂ
ಪುಸಿಯೆಂತುಂ ಕಂಡಱಿಯದು
ಕುಸುಮಾಸ್ತ್ರಂ ಪೊರ್ದಿಯಱಿಯನಾ ಮುನಿಪದಮಂ ೧೮೮

ವ|| ಮತ್ತಂ ಮಲಿನತೆ ಹೋಮಧೂಮದೊಳ್ ಮುಖರಾಗಂ ಗಿಳಿಗಳೊಳ್ ತೀಕ್ಷ್ಣತ್ವಂ ಕುಶಾಗ್ರಂಗಳೊಳ್ ಸಂಚಳತ್ವಂ ಕದಳೀವನಂಗಳೊಳ್ ನಯನರಾಗಂ ಕೋಕಿಲಂಗಳೊಳ್ ಕಂಠಗ್ರಹಣಂ ಕಮಂಡಲಂಗಳೊಳ್ ಸ್ತನಸ್ಪರ್ಶನಂ ಹೋಮಧೇನುಗಳೊಳ್ ವಸುಸಂಕೀರ್ತನಂ ದಿವ್ಯಕಥೆಗಳೊಳ್ ರಾಮಾನುರಾಗಂ ರಾಮಾಯಣದೊಳ್ ಭ್ರಮಂ ಹೋಮಾಗ್ನಿಪ್ರದಕ್ಷಿಣಂಗಳೊಳ್ ಮುಖಭಂಗವಿಕಾರಂ ಜರೆಯೊಳ್ ಶಕುನಿವಧಂ ಭಾರತದೊಳ್ ವಾಯುಪ್ರಲಪಿತಂ ಪುರಾಣದೊಳ್ ದ್ವಿಜಪತನಂ ವಯಃಪರಿಣತಿಯೊಳ್ ಜಾಡ್ಯಮುಪವನಶ್ರೀಖಂಡತರುಷಂಡಂಗಳೊಳ್ ನೃತ್ಯಪಕ್ಷಪಾತಂ ನವಿಲ್ಗಳೊಳ್ ಗೀತವ್ಯಸನಂ ಮೃಗಂಗಳೊಳ್ ಭೋಗಂ ಭುಜಂಗಂಗಳೊಳ್ ಶ್ರೀಫಳಾಭಿಲಾಷಂ ಕಪಿಗಳೊಳ್ ಅಧೋಗತಿ ಬೇರ್ಗಳೊಳಲ್ಲದೆ ತನ್ನೊಳಿಲ್ಲೆನಿಸಿ ಬೇಱೊಂದು ಬ್ರಹ್ಮಲೋಕದಂತಿರ್ಪುದಂತುಮಲ್ಲದೆಯುಂ

ತಳಿರ್ಗಳಿಱುಂಬಿನೊಳ್ ತರದೆ ಪೇಱಿದ ಕೃಷ್ಣಮೃಗಾಜಿನಂಗಳಿಂ
ಜಳಕಲಶಂಗಳಿಂ ಮುನಿಕುಮಾರಿಯರಿಕ್ಕಿದ ಪಿಷ್ಟಚರ್ಚೆಯಿಂ
ಬಳಸಿಯುಮೇಣಶಾಬತತಿ ನೀರುಣೆ ಕಣ್ಗೊಳಿಪಾಳವಾಳಮುಂ
ಡಳದಿನದೊಂದು ಮುಂದೆಸೆದು ತೋಱಿದುದಾಗಳಶೋಕಭೂರುಹಂ ೧೪೯

ವ|| ಮತ್ತಂ ಗೋಮಯಾವಲಿಪ್ತ ಭೂತಲಮುಂ ಕುಸುಮೋಪಹಾರರಮಣೀಯಮುಂ ವಿಸ್ತೀರ್ಣತರಾವಕಾಶಮುಮೆನಿಸಿದ ರಕ್ತಾಶೋಕ ತರುವಿನ ತಣ್ಣೆಲೊಳ್

ಕುಳಶೈಲವ್ರಾತದಿಂದಂ ಬಳಸಿದ ಕನಕಕ್ಷ್ಮಾಧರೇಂದ್ರಂ ಸಮುದ್ರಾ
ವಳಿಯಿಂ ಸುತ್ತಿರ್ದ ಲೋಕಂ ಹುತವಹತತಿಯಿಂ ವೇಷ್ಟಿಸಿರ್ದಧ್ವರಂ ಪ್ರ
ಜ್ವಳಿತಾರ್ಕಾನೀಕದಿಂದಂ ಬಳಸಿದ ಗಗನಾಭೋಗಮೆಂಬಂದದಿಂ ಕ
ಣ್ಗೊಳಿಸುತ್ತಂ ಯೋಗಿವೃಂದಾರಕರ ನಡುವೆ ಜಾಬಾಲಿಯೋಗೀಂದ್ರನಿರ್ದಂ ೧೫೦

ವ|| ಮತ್ತಂ ಶಾಪಭೀತೆಯಂತೆ ಕಂಪಿತದೇಹೆಯುಂ ಪ್ರಣಯಿನಿಯಂತೆ ವಿಹಿತ ಕೇಶಗ್ರಹೆಯುಂ ಕ್ರುದ್ಧೆಯಂತೆ ಕೃತಭ್ರೂಭಂಗೆಯುಂ ಪ್ರಸಾಧಿತೆಯಂತೆ ಪ್ರಕಟಿತ ತಿಳಕೆಯುಂ ಗೃಹೀತವ್ರತೆಯಂತೆ ಭಸ್ಮಪಾಂಡುರೆಯುಮೆನಿಸಿದ ಜರೆಯಿಂದೆ ಧವಳವಿಗ್ರಹನಾಗಿರ್ದನಂತುಮಲ್ಲದೆಯುಂ

ಯತಿಗಳನನೇಕರಂ ತ
ನ್ನ ತಪದೆ ಗೆಲ್ದೆತ್ತಿ ಪೊಳೆವ ಧರ್ಮಪತಾಕಾ
ತತಿಯಂದದೆ ಸೊಗಯಿಸಿದುವು
ಯತಿಪತಿಯ ಜರಾತಿಧವಳಮೆನಿಸಿದ ಜಡೆಗಳ್ ೧೫೧

ತ್ರಿಪಥಗೆಯ ಮೂಱು ಪೊನಲಿಂ
ದೆ ಪೊಳೆವ ಹಿಮಗಿರಿಶಿಲಾತಳಕ್ಕೆಣೆಯೆನಿಸಿ
ತ್ತುಪರಚಿತ ರುಚಿರ ಭಸ್ಮ
ತ್ರಿಪುಂಡ್ರಲಾಂಛಿತಲಲಾಟಮಾ ಮುನಿವರನಾ ೧೫೨

ಥಳಥಳಿಸಿ ಪೊಳೆವ ಚಂದ್ರನ
ಕಳೆಗಳ್ ಕವಿದಿರ್ದುವೆರಡಿವೆಂಬಿನೆಗಂ ಕ
ಣ್ಗಳ ಮೇಲೆ ಕವಿದು ತೋರ್ಪುವು
ವಳಿಶಿಥಿಲಭ್ರೂಲತಾಯುಗಂ ಮುನಿವರನಾ ೧೫೩

ಪೆಱತೇಂ ಸತ್ಯಪ್ರರೋಹಂ ತುಱುಗಿದಪುದು ವಿದ್ಯಾಗುಣಾನೀಕಮಾದಂ
ಮಿಱುಗುತ್ತಿರ್ದತ್ತು ಕಾರುಣ್ಯದ ರಸದಪೊನಲ್ ಪರ್ವುತಿರ್ದತ್ತಿದೆಂಬೀ
ತೆಱದಿಂ ದಂತಾಂಶುಜಾಳಂ ಪಸರಿಸೆ ಮುಖದಿಂದಭ್ರಗಂಗಾಪ್ರವಾಹಂ
ಪೊಱಪೊಣ್ಮುತ್ತಿರ್ದ ಜಹ್ನುಪ್ರತಿಯ ಮಹಿಮೆಯಂ ತಾಳ್ದಿದಂ ತಾಪಸೇಂದ್ರಂ ೧೯೪

ಆಪೀತ ಸೋಮರಸಗಂ
ಧೋಪೇತಮೆನಿಪ್ಪ ಸುಯ್ಗೆ ಸುೞಿವಳಿನಿಕರಂ
ಶಾಪಾಕ್ಷರ ನಿಕುರುಂಬಂ
ರೂಪಂ ಕಯ್ಕೊಂಡು ಮುಂದೆ ನಿಂದವೊಲೆಸೆಗುಂ ೧೯೫

ಸಿತದೀರ್ಘರೋಮನಿಕರಾ
ನ್ವಿತಮಾದುದು ಕರ್ಣಯುಗಳವಿವರಂ ನಿರ್ಮಾಂ
ಸತೆಯಿಂದೆ ಗಂಡಗರ್ತ
ದ್ವಿತಯಂ ನಿಮ್ನತರಮಾದುದಾ ಮುನಿಪತಿಯಾ ೧೯೬

ಅತಿಚಪಳಮೆನಿಪ್ಪಿಂದ್ರಿಯ
ತತಿಯಂ ತೆಗೆದೊಳಗೆ ಪಿಡಿದು ಕಟ್ಟಿದ ರಜ್ಜು
ಪ್ರತಿತಿಯಿದೆಂಬಿನೆಗಂ ಯತಿ
ಪತಿಗೆಸೆದುವು ಕೊರಲೊಳಮರ್ದ ಸೆರೆಗಳ ತುಱುಗಲ್ ೧೯೭

ಕೊರಲೊಳ್ ಯಜ್ಞೋಪವೀತಂ ಪೊಳೆಯೆ ಬರಿಗಳೊಳ್ ತೋಱುತಿ
ರ್ಪೆಲ್ಲುಗಳೊಳ್ ಪಂ
ಜರಿಸಿರ್ದಂತೆಯ್ದೆ ಬೇರ್ಪಟ್ಟಿರೆ ತೆರೆದುಱುಗಲ್ ಗಾಳಿಯಿಂದಾಡೆ ಯೋಗೀ
ಶ್ವರನಂತಾ ಬೇಗದೊಳ್ ಕೋಮಳಯುಗಳಮೃಣಾಳಂ ಪೊದಳ್ದಿಣ್ಮಿ ತೇಂಕಲ್
ತರದಿಂ ರಂಗತ್ತರಂಗಂ ನೆಗೆಯಲೆಸೆವ ಗಂಗಾಪ್ರವಾಹಂಬೊಲಿರ್ದಂ ೧೯೮

ಆ ಕ್ಷಣದೊಳ್ ಶುದ್ಧಸ್ಫಟಿ
ಕಾಕ್ಷಾವಳಿಯಂ ಮುಗುಳ್ಚೆ ಬೆರಲಿಂ ಭ್ರಾಮ್ಯ
ನ್ನಕ್ಷತ್ರಚಕ್ರಮಧ್ಯದ
ಸಾಕ್ಷಾದ್ಧ್ರುವನೆನಿಸಿದಂ ಮಹಾಮುನಿಮುಖ್ಯಂ ೧೯೯

ಸೆರೆದುಱುಗಲ್ ಮೆಯ್ಯೆಲ್ಲಮ
ನಿರದಡರೆ ಜರಲ್ಲತಾವಿತಾನದಿನೆತ್ತಂ
ಪರಿವೇಷ್ಟಿಸಿರ್ದ ಪರಿಣತ
ಸುರತರುವಂ ಪೋಲ್ತು ಸೊಗಯಿಸಿರ್ದಂ ಮುನಿಪಂ ೨೦೦

ಮಿಸುಗುವ ಚಂದ್ರಮರೀಚಿ
ಪ್ರಸರಂಗಳಿನೆಯ್ದೆ ನೆಯ್ದುವೆಂಬಿನೆಗಂ ಮಾ
ನಸಸಲಿಲಧೌತಮುಮಲಮು
ದೆಸೆದುದು ಮುನಿಪತಿಯ ಪೊಳೆವ ವಲ್ಕಲಯುಗಳಂ ೨೦೧

ಪಳುಕಿನ ಗುಂಡಿಗೆ ಗಂಗಾ
ಜಳದಿಂದಂ ತೀವಿ ತನ್ನ ಪಕ್ಕದೊಳಿರೆ ಕ
ಣ್ಗೊಳಸಿರ್ದನಂಚೆಪದಪಿಂ
ನೆಲಸಿದ ಸಿತಕಮಳವನದವೋಲ್ ಮುನಿಮುಖ್ಯಂ ೨೦೨

ಧರಣಿಗೆ ಧೈರ್ಯಮಂಬುಧಿಗೆ ಗುಣ್ಪು ಸಹಸ್ರಕರಂಗೆ ತೇಜಮಂ
ಬರಕೆ ಮಹತ್ವಮಿಂದುಗುಪಶಾಂತತೆ ಮೇರುಗೆ ಬಿಣ್ಪು ತನ್ನದೊಂ
ದಿರವಿನೊಳಾದುವೆಂಬಿನಮುದಾರಗುಣಪ್ರಕರಂಗಳಿಂದಳಂ
ಕರಿಪ ನಿಜಪ್ರಭಾವಮಹಿಮೋನ್ನತಿಯಿಂದೆಸೆದಂ ಮುನೀಶ್ವರಂ ೨೦೩

ಶಾಂತತೆಯನೆ ತಳೆದುಂ ರೂ
ಪಿಂತಿದು ಕಾರ್ಗಾಲಮಿಂಚಿದೆನೆ ಕಣ್ ಕೋರೈ
ಪಂತಿರೆ ಪೊಳೆಯುತ್ತಿರ್ದಪು
ದೆಂತಕ್ಕುಮೊ ತಪದ ಮಹಿಮೆ ಮುನಿಪುಂಗವನಾ ೨೦೪

ಭುವನಪ್ರಸ್ತುತ್ಯರೋರಂದದೆ ತಪದೊಳೆ ಕರ್ಮಕ್ಷಯಂಗೆಯ್ದು ಮೂಲೋ
ಕವಿದೆಲ್ಲಂ ಕಯ್ಯೊಳಿರ್ದಾಮಳಕಫಳಮೆನಲ್ ಕಾಣ್ಬ ಯೋಗೀಂದ್ರರಿಂತ
ಪ್ಪವರಂ ಕೇಳ್ದೊಂದು ಪುಣ್ಯಂ ಸಮನಿಸಿದೊಡೆ ಪಾಪಕ್ಷಯಂ ಪ್ರಾಣಿಗೆಂದಂ
ದು ವಿಶೇಷಂ ಕಾಣ್ಬ ಪುಣ್ಯೋದಯಮುದಯಿಸಲಾ ನೃಪನಿನ್ನೇನನೆಂಬೆಂ ೨೦೫

ಪಾವನಮಾದತ್ತೊಂದು ತ
ಪೋವನಮೆಂದಲ್ತು ಸಕಳವಸುಧಾತಳಮುಂ
ಪಾವನಮಾದುದು ನಿಖಿಳಧ
ರಾವಳಯಬ್ರಹ್ಮನೆನಿಪ ಮುನಿವರನಿಂದಂ ೨೦೬

ಪರಿಹೃತತೃಷ್ಣಮಾಹಿತರಸಂ ದ್ವಿಜಸನ್ನಿಹಿತಂ ಗಭೀರತಾ
ನಿರತಮತಿಪ್ರಸಾದಸುಭಗಂ ವಿಬುಧವ್ರಜಸೇವ್ಯಮೆಂಬಿನಂ
ಸುರುಚಿರಮಾದ ಸನ್ಮುನಿಯ ಮಾನಸದೊಳ್ ನೆಲಸಿರ್ದ ಹಂಸಿಯುಂ
ತಿರೆ ಮುಖಪದ್ಮದೊಳ್ ನೆರೆವ ಭಾರತಿಯಿಂ ಕೃತಕೃತ್ಯಳಾವಳೋ ೨೦೭

ಕಲಿಕಲುಷಿತವಿದ್ಯಾಸಂ
ಕುಳವಮಾ ಮುನಿ[1]ತಿಳಕನಿಂ[1] ಪ್ರಸಾದವನಾಗಳ್
ತಳೆದೇನೆಸೆವುದೊ [2]ಶಾರದ
ನಳಿನಸರೋವರದ[2] ತೆಱದೆ ನಿಖಿಳಾವನಿಯೊಳ್ ೨೦೮

ಮುನಿಪತಿ ನೆಲಸಿದ ನಿಖಿಳಾ
ವನಿತಳಮಂ ನೋಡಿದಂಬರಕ್ಕೇಂ ಸಪ್ತ
ರ್ಷಿನಿವಾಸನಾದೆ ನಾನೆಂ
ಬಿನಿತೊಂದಭಿಮಾನಮುೞಿಯದಿರ್ಕುಮೆ ಪಿರಿದುಂ ೨೦೯

ಉರಿಯೊಳ್ ದುಗ್ಧಾಂಬುಧಾರಾತತಿ ಹರನ ಜಟಾಜೂಟದೊಳ್ ಗಂಗೆಯೆಂತಂ
ತಿರೆ ನಿರ್ವ್ಯತ್ಫೇನಪುಂಜಪ್ರತಿಮಧವಳೆ ತಾಂ ಭೀತಿಯಂ ಪತ್ತುವಿಟ್ಟೇ
ಜರೆಯುಂ ತಾಂ ಮೇಲೆ ಬೀೞ್ವಿಳ್ ವಿಳಯಸಮಯತೀವ್ರಾಂಶುವೋಲಿರ್ದಯೋಗೀ
ಶ್ವರಪಿಂಗೋದ್ಯಜ್ಜಟಾಮಂಡಳದೊಳೆನಗಿದಾಶ್ಚರ್ಯಮಾದಪ್ಪುದೀಗಳ್ ೨೧೦

ಯತಿಪತಿತಪಃಪ್ರಭಾವೋ
ನ್ನತಿಗಳ್ಕಿದ ತೆಱದೆ ತರಣಿಕಿರಣಚಯಂಗಳ್
ವಿತತ ಬಹುಳಾಜ್ಯಧೂಮ
ಪ್ರತಾನದಿಂ ನುಸುಳವೀ ತಪೋವನದತ್ತಲ್ ೨೧೧

ಇವೆ ಮಂತ್ರಪೂತಮೆನಿಸಿದ
ಹವಿಗಳನಿದಿರೆೞ್ದು ಸಲೆ ಶಿಖಾಂಜಳಿಪುಟದಿಂ
ದವೆ ಸುತ್ತಂ ಕಯ್ಕೊಂಡಿ
ರ್ಪುವು ಹುತವಹನಿವಹಮೆಂದೊಡಿನ್ನೇವೊಗೞ್ವೆಂ ೨೧೨

ವಿಲುಳಿತ ದುಕೂಲವಲ್ಕಾಂ
ಚಳಮೊಯ್ಯನೆ ಭೀತನಂತೆ ಮುನಿಪನ ಸುತ್ತುಂ
ಕೆಲಕೆಲದೊಳ್ ಸುೞಿದಪ್ಪುದು
ಬಲಿಕುಸುಮಾಮೋದಬಂಧುರಂ ಗಂಧವಹಂ ೨೧೩

ತಮ್ಮೊಳ್ ತಿರ್ಯಗ್ಜಾತಿಗ
ಳೊಮ್ಮೆಯೆ ಮಱೆದುಂ ನಿಸರ್ಗವೈರಮನೆಂದುಂ
ತಮ್ಮೊಳ್ ಮತ್ಸರಮಂ ಮಱೆ[3]
ದೊಮ್ಮೆಯುಮನುಭವಿಪುವಾ ತಪೋವನಸುಖಮಂ ೨೧೪

---

1 ನಿಖಿಳವ (ಕ) 2 ಸಾರದ ಮಳಿನಸಲಾಸನದ (ಕ)

ಬಳಸಿಯೆ ನೋಡುತಿರ್ದ ಹರಿಣಂಗಳ ಕಂಗಳ ಕಾಂತಿಯಿಂದೆ ಕ
ಣ್ಗೊಳಿಪೆಳೆವುಲ್ಲ ನುಣ್ಬಸಲೆಯಂ ಪುಗುವಂದದೆ ಶಂಕೆಗೆಟ್ಟು ತ
ಳ್ತಳುರ್ವ ಬಿಸಿಲ್ಗೆ ಸೈರಿಸದೆ ಪೊಕ್ಕಪುದಿಂತಿದೆ ಪಾವು ಪೀಲಿಗ
ಣ್ಗಳ ಪರಭಾಗದಿಂದೆಸೆದು ತೋಱುವ ಸೋಗೆಯ ತಳ್ತ ಸೋಗೆಯಂ ೨೧೫

ಪರಿಹರಿಸಿ ತನ್ನ ತಾಯಂ
ಪರಿಚಯದಿಂ ಕೇಸರಂ[1]ಗಳೊಗೆಯದ ವನಕೇ
ಸರಿಶಿ[1]ಶುಗಳೊಡನೆ ಮೃಗಶಿಶು
ಬರೆತೆಗೆದೂಡಿದುದು ತೊರೆದ ಸಿಂಹೀಸ್ತನಮಂ ೨೧೬

ಎಳವೆಱಿಗಳನಿೞಿಪ ಸಟಾ
ವಳಿಯಂ ಬಿಸವಿಸರಮೆಂದು ಕರಿಕಳಭಂಗಳ್
ಸೆಳೆಯುತ್ತಿರೆ ಸೊಗಯಿಸಿ ಕ
ಣ್ಗಳನರೆಮುಚ್ಚಿರ್ದುದಂತದೊಂದು ಮೃಗೇಂದ್ರಂ ೨೧೭

ಮದಸೌರಭಕ್ಕೆ ಬಂದೆಱಿ
ಗಿದ ಮಱಿದುಂಬಿಗಳ ಬಂಬಲಂ ದಯೆಯಿಂ ಸೋ
ವದೆ ಕರ್ಣತಾಳದಿಂದಂ
ಮದಾಂಧನಾಗಿರ್ದುದಂತದೊಂದು ಗಜೇಂದ್ರಂ ೨೧೮

ವ॥ ಅದಲ್ಲದೆಯುಂ

ಫಲಮೂಲಂಗಳನಾಂತು ವಲ್ಕಲದಿನೊಪ್ಪಂಬೆತ್ತು ಕೃಷ್ಣಾಜಿನಂ
ಗಳನೀ ತಾಪಸಹೋಮಧೂಮತತಿಯಿಂದಂ ತಾಳ್ದಿ ನಿಶ್ಚೇತನಂ
ಗಳುಮಿರ್ದಪ್ಪುವು ಪಾರ್ಶ್ವದೊಳ್ ನಿಯಮಮಂ ತಾಳ್ದಿರ್ದವೋಲ್ ಭೂರುಹಂ
ಗಳಿವೆಂದಂದು ಮುನೀಂದ್ರನುನ್ನತಿಯನಂತಿಂತುಂತೆನಲ್ ಬರ್ಕುಮೇ ೨೧೯

ವ॥ ಎಂದು ತನ್ಮುನಿಪ್ರಭಾವಮನೆ ಮನದೊಳ್ ಪರಿಭಾವಿಸುತ್ತಿರ್ಪನ್ನೆಗಮಾರಕ್ತಾಶೋಕತರುವಿನ ತಣ್ನೆೞಲೊಳ್

ಪರಮತಪೋನಿಧಿಯೆನಿಸಿದ
ಗುರುವಿಂಗಭಿವಂದಿಸುತ್ತೆ ಹಾರೀತಂ ಕು
ಳ್ಳಿರೆ ನಿಮಗಿದೆತ್ತಣಿಂದಂ
ದೊರೆಕೊಂಡಿತ್ತೆಂದು ತಾಪಸರ್ ಬೆಸಗೊಂಡರ್ ೨೨೦

1 ಗಳಿಂ ಸೋಗೆ ನವಿಲ್ಬರೆ(ಕ)

ವ॥ ಅಂತು ಬೆಸಗೊಳ್ವುದಂ ಹಾರೀತಕನೆಂದನಾಂ ಸ್ನಾನಾರ್ಥಂ ಪೋಗುತ್ತಿರೆ ಪಂಪಾಸರೋವರದ ಪಕ್ಕದಡವಿಯ ಪೆರ್ಮರದತುದಿಗೋಡಿನಿಂ ಬಿರ್ದು ದೆಸೆಗೆಟ್ಟು ನಡುವಗಲ ಬಿಸಿಲಳುರೆ ಕಿಡಿಯಿಡುವ ಪುಡಿಯೊಳ್ ಪೊರಳುತ್ತಂ ಕಂಠಗತಪ್ರಾಣನಾಗಿರ್ದುದನೀ ಗಿಳಿಯಂ ಕಂಡು ಕರುಣಿಸಿ ತಂದೆಂ. ನಡಪಿ ಗಱಿಮೂಡಿದ ಬೞಿಕ್ಕಂ ಪಾಱಿಪೋಕುಮಲ್ಲದಂತು ಪರಿಚಯದಿಂ ನಿಲ್ಗೆಂದೆನ್ನ ಸಂಬಂಧಮಂ ನುಡಿವುತ್ತಿರೆ ಜಾಬಾಲಮುನೀಂದ್ರನಾ ಮಾತಂ [1][ಕೇಳ್ದೀಷದಾವಲಿತ][1] ಕಂಧರನಿದೆತ್ತಣಿಂ ಬಂದುದೆಂದು ಪುಣ್ಯ ಜಲದಿಂ ಪ್ರಕ್ಷಾಳಿಸುವಂತೆ ಶಾಂತದೃಷ್ಟಿಗಳಿಂದೆನ್ನಂ ಮುನ್ನಂ ಕಂಡಱಿವನಂತೆ ನೀಡುಂ ಭಾವಿಸಿ ನೋಡಿ

ಈತಂ ಮುನ್ನಿನ ಭವದೊಳ್
ನೀತಿಯನುೞಿದೆಸಗಿ ಮೋಹದಿಂದಂ ತಿರ್ಯ
ಗ್ಜಾತಿಗೆ ಬೞಿಕ್ಕೀರಂದದಿ
ನೀ ತೆಱದಿಂ ಕರ್ಮಫಲಮನುಂಡಪನಲ್ತೆ ೨೨೧

ವ॥ ಎಂದು ಕಾಲತ್ರಯವೇದಿಗಳ್ ನುಡಿಯೆ ಮುನಿಗಳೆಲ್ಲರ್ ವಿಸ್ಮಿತಾಂತಃಕರಣರಾಗಿ ಮುನೀಂದ್ರನನಿಂತೆಂದರ್.

ಮುನ್ನಾವನವಿನಯಮನೀ
ನಂ ನೆಗೞ್ದಿಂ ವಿಹಗಯೋನಿಯೆಂತಾದಂ ಮ
ತ್ತಿನ್ನೇನಾದಪನೆನುತಂ
ಬಿನ್ನವಿಪುತ್ಕಂಠ ಮನದೊಳಾದಪುದೀಗಳ್ ೨೨೨

ವ॥ ಅದುಕಾರಣದಿಂ

ಬೆಸಸಲ್ಕೀಂ ಪೇೞ್ವುದಿಂತೀ ಗಿಳಿಯಮಱಿಯವೃತ್ತಾಂತಮಂ ತಾಮೆನಲ್ ತಾ
ಪಸವೃಂದಕ್ಕಾ ಮುನೀಂದ್ರಂ ಕಥೆ ಪಿರಿದು ಮಹಾಶ್ಚರ್ಯಮೀ ರಾತ್ರಿಯೊಳ್ ಸಂ
ತಸಮಪ್ಪಂತಾಗೆ ತಾಂ ಕೇಳಿಸದಪೆನದಱಿಂದೆೞ್ದು ನೀಮೆಲ್ಲರುಂ ಪ್ರಾ
ರ್ಥಿಸದೀ ಮಧ್ಯಾಹ್ನಕಾಲೋಚಿತಸಮಯದೊಳಾಸಕ್ತಿಯಂ ತಾಳ್ದಿಮೀಗಳ್ ೨೨೩

ಎಂದು ಮುನಿಗಳ್ಗೆ ಬೆಸಸು
ತ್ತಂ ದಿವಸೋಚಿತಮೆನಿಪ್ಪ ನಿಯಮಕ್ಕಿರದ
ಲ್ಲಿಂದೆೞ್ದು ಪೋದನಾ ಮುನಿ
ವೃಂದಂಬೆರಸಾ ಮುನೀಂದ್ರನಂದವನಿಪತೀ ೨೨೪

---
1 ಕೇಳ್ದು ಪಾಕ್ಷರ (ಕ)

ವ॥ ಅಂತು ನಿತ್ಯನಿಯಮವ್ಯಾಪಾರಂಗಳಂ ತೀರ್ಚುತ್ತಮಿರ್ದು

ದಿನಕರಕಿರಣಮನುಷ್ಣಪ
ರೆನಿಸಿದ ಮುನಿಜನದ ಹೋಮಧೂಮಂ ಪೀರ್ದು
ತ್ತೆನಲೊಯ್ಯನೊಯ್ಯನಾಗಳ್
ಇನನಪಗತತೇಜಮುಡುಗಲೊಡರಿಚಿತಾಗಳ್ ೨೨೫

ತನುತನುಗೆತ್ತುವ ಮುನಿಜನ
ಸಮಿತಿಯ ಹರಿಚಂದನಾರ್ಘಸಲಿಲದ್ಯುತಿ ಸಂ
ಕ್ರಮಿಸಿತ್ತೆನಲ್ಕೆ ಪುದಿದರು
ಣಿಮದಿಂದಂ ತರಣಿಬಿಂಬಮೆಸದತ್ತಾಗಳ್ ೨೨೬

ಆದುದು ಸಮಸ್ತಮುನಿನಿವ
ಹೋದಯಮುಂ ಸೋಂಕಲಾಗದವರ್ಗಳನಾನೆಂ
ದಾದಂ ದಿನಾಧಿಪತಿ ನಿಜ
ಪಾದಂಗಳನುಡುಗಿ ಗಗನತಳದಿಂದಿಳಿದಂ ೨೨೭

ಜಲನಿಧಿಶಯ್ಯೆಯೊಳ್ ನೆಲಸಿದಂಬುಜನಾಭನ ನಾಭಿಯಲ್ಲಿ ಕೋ
ಮಳಮಧುಧಾರೆಗಳ್ ನಿಮಿರ್ದು ಕಣ್ಗೊಳಿಪೊಂದರವಿಂದಮೆಂಬಿನಂ
ಪೊಳೆವರುಣಾಂಶುವಿಂದೆಸೆವ ತನ್ನಯ ಮಂಡಳಮಬ್ಧಿಯಲ್ಲಿ ಮಾ
ರ್ಪೊಳೆವಿನೆಗಂ ಸರೋಜಸಖನೊಯ್ಯನೆ ಪೊರ್ದಿದನಸ್ತಶೈಲಮಂ ೨೨೮

ಮುನಿನಿವಹಮಾಱಲಿಕ್ಕಿದ
ತನುತರ ಕಾಷಾಯವಲ್ಕವಸನಂಗಳನಂ
ದೆನಸುಂ ತಾಳ್ದಿದುವೆನೆ ಜೈ
ಗಿನ ಕೆಂಬಿಸಲಳುರಲೆಸೆದುವಾಶ್ರಮತರುಗಳ್ ೨೨೯

ವ॥ ಅನಂತರಂ ದಿವಸಕರನಪರವಾರ್ಧಿಗೆ ಮುಗ್ನನಾಗೆ

ಪವಳದ ಬಳ್ಳಿಯ ತುಱುಗಲ್
ಪವಣಿಲ್ಲದೆ ತಳ್ತು ಬೆಳೆದು ಕುಡಿವಿಟ್ಟಪರಾಂ
ರ್ಣವತಟದೊಳ್ ಪರೆದಪುದೆಂ
ಬವೊಲೆಸೆದತ್ತು ಸಾಂದ್ರಸಂಧ್ಯಾರಾಗಂ ೨೩೦

ವನರುಹಕಾಂತಕುಟ್ಮಳಕಮಂಡಲುರಾಜಿನಿ ಹಂಸಮಾಲಿಕಾ
ತನುಸಿತವಲ್ಕಭಾಜಿನಿ ಮೃಣಾಳಲತಾಲಲಿತೋಪವೀತರಂ
ಜಿನಿ ವಳಿತದ್ವಿರೇಫನಿವಹಾಕ್ಷಸಮಾಜಿನಿ ಶೋಕದಿಂ ಸರೋ
ಜಿನಿ ದಿನಕೃದ್ವಿಯೋಗಿನಿ ತಪಸ್ವಿನಿಯಂತೆವೊಲಾದಮೊಪ್ಪಿದಳ್ ೨೩೧

ಅಂಬರತಳದಿಂದಿನನಪ
ರಾಂಬುಧಿಯೊಳ್ ಬೀೞೆ ನೆಗೆದ ಸೀರ್ಪನಿಗಳೊ ಪೇ
ೞೆಂಬಿನೆಗಂ ತಾರಾನಿಕು
ರುಂಬಂ ಸೊಗಯಿಸಿದುವೆಯ್ದೆ ಗಗನಾಂತರದೊಳ್ ೨೩೨

ತವತವಗೆ ಸಿದ್ಧಕನ್ಯಾ
ನಿವಹಂ ಸಂಧ್ಯಾರ್ಚನಕ್ಕೆ ಸೂಸಿದ ಕುಸುಮಾ
ಳಿವೊಲೆಸೆಯೆ ಪರೆದು ಕಣ್ಗೊ
ಳಿಪುವು ತರದಿಂ ತುಱುಗಿ ಮಿಱುಪ ತಾರಾನಿಕರಂ ೨೩೩

ಮುನಿಜನನಿವಹಂ ಸಾಯಂ
ತನ ಸಮಯದೊಳೆತ್ತುವರ್ಘ್ಯಜಲದಿಂದಂ ಭೋಂ
ಕೆನಲೆಯ್ದೆ ಕರ್ಚಿ ಕಳೆದ
ತ್ತೆನೆ ಪೋದದು ಪರೆದು ನಿಖಿಳಸಂಧ್ಯಾರಾಗಂ ೨೩೪

ಇನನ ಬೞಿಸಂದ ಸಂಧ್ಯಾ
ವನಿತೆಯ ಪಿಂಗಿದ ವಿರಕ್ತಿ ಪುಟ್ಟಿಲ್ ಕೃಷ್ಣಾ
ಜಿನಮಂ ತಾಳ್ದಿದಳೊ ನಿಶಾಂ
ಗನೆಯೆಂಬಿನಮುರ್ಬಿ ಮರ್ಬು ಪರ್ಬಿತ್ತಾಗಳ್ ೨೩೫

ವಳಯೀಭೂತತಮಸ್ತಮಾಳಗಹನಂ ಸಾಷಾಢಸಪ್ತರ್ಷಿಸಂ
ಕುಳಸಂಪೂತನರುಂಧತೀಸ್ತುತಿನುತಂ ಮೂಲಾನ್ವಿತಂ ವ್ಯೋಮಮಂ
ಡಳಮಾಯ್ತಾಶ್ರಮಮೆಂದು ಬಂದೆಳಸಿದಂ ವೈರಾಗ್ಯದಿಂ ಧೌತವ
ಲ್ಕಲಶೋಭಾಂಬರನಂದು ಮಿತ್ರವಿರಹೋದ್ವೇಗಾತುರಂ ಚಂದ್ರಮಂ ೨೩೬

ಸುರನದಿಯುವಗಾಹದೆ ಸಿಂ
ಧುರಮೆಲ್ಲಂ ತೊಳೆದು ಪೋಗೆ ಪೊಳೆವಿಂದ್ರದಿಶಾ
ಕರಿಕುಂಭಮಂಡಳಕ್ಕೇಂ
ದೊರೆಯಾದುದೊ ಮಂಡಳಂ ನಿಶಾಧೀಶ್ವರನಾ ೨೩೭

ಪ್ರಾಲೇಯಾಂಶುವಿಭೂಷಿತಂ ತರಳತಾರಾನೀಕಕಾಪಾಲಮಾ
ಲಾಲಂಕಾರಮೆನಲ್ಕೆ ಸಂದುದಯಶಂಭುವ್ಯೋಮಶೀರ್ಷಾಗ್ರದಿಂ
ಭೂಲೋಕಕ್ಕಿೞಿತಂದುದುಜ್ವಳಿಸುತಂ ದಿಕ್ಚಕ್ರಮಂ ಚಂದ್ರಿಕಾ
ಜಾಳಂ ದೇವನದೀಪ್ರವಾಹದವೊಲತ್ಯಾಶ್ಚರ್ಯಮಪ್ಪನ್ನೆಗಂ ೨೩೮

ಕುಳಿರ್ವಿಂದುವೆಂಬ ತಿಳಿಗೊಳ
ದೊಳಗೊಯ್ಯನೆ ಚಂದ್ರಿಕಾಂಬುವಂ ಕುಡಿಯಲ್ಕೆಂ
ದೊಳವೊಕ್ಕಮರ್ದಿನ ಕೋೞ್ಗ ಸ
ಱಿಕೊಳಟ್ಟುದೆನಸಿತ್ತು ನಿಭೃತಚರಣಂ ಹರಿಣಂ ೨೩೯

ಸುರಿವ ತುಷಾರದೊಳ್ಬೆರೆದರಲ್ವ ಸಿತಾಂಬುಜದಿವ್ಯಗಂಧದೊಳ್
ಪೊರೆದು ಮರಲ್ದು ತೂಂಕಡಿಪ ವನ್ಯಮೃಗಂಗಳ ಮುಗ್ಗುಲೊಳ್ ತೆರಂ
ದಿರಿದು ಹಿಮಾಂಶುರಶ್ಮಿಗಳಿನುಜ್ವಳಿಸಿರ್ದುಟಜಾಂಗಣಂಗಳೊಳ್
ಪರೆದೆಸಗಿತ್ತತಿಪ್ರಮದಕಾರಣನಂದು ನಿಶಾಸಮೀರಣಂ ೨೪೦

ಅಂದಾ ಬೆಳ್ದಿಂಗಳೊಳಾ
ನಂದದಿನಾಂ ಬೆರಸು ಮುನಿಸಮಾಜಸಮೇತಂ
ತಂದೆಯ ಕೆಲಕ್ಕೆ ಮೆಲ್ಲನೆ
ಬಂದಂ ಹಾರೀತನುಚಿತವಿನಯೋಪೇತಂ ೨೪೧

ವ॥ ಆಗಳಾ ಜಾಲಪಾದನೆಂಬ ಶಿಷ್ಯಂ ತಾಳವೃಂತದಿಂ ಬೀಸುತ್ತಿರೆ ಸನ್ನಿಧಿ ಕೃತವೇತ್ರಾಸನರಾಗಿರ್ದ ಗುರುಗಳನೆಂದಂ–ನೀವೀ ವಿಹಂಗಶಿಶುವಿನ ವೃತ್ತಾಂತಮನಿರುಳ್ ಬೆಸಸಿದಪೆವೆಂದುದಱಿಂ ಮುನಿಸಮಾಜಂ ತತ್ಕಥಾಶ್ರವಣತತ್ಪರಮಾಗಿರ್ದುದೆಂಬುದುಂ ಜಾಬಾಲಿಮಹಾಮುನಿಗಳ್ ಪೇೞಲ್ತಗುಳ್ದರದೆಂತೆನೆ—

ಚಂದ್ರಾಪೀಡನ ಜನನ ಮತ್ತು ಬಾಲ್ಯ

ಪ್ರಿಯದಿಂದೆ ಮಹಾಕಾಳಾ
ಹ್ವಯನೀಶಂ ನೆಲಸೆ ನಗರಿಯೊಂದಧಿಕಖ್ಯಾ
ತಿಯಿನೆಸೆದು ತೋರ್ಪುದುಜ್ಜಯಿ
ನಿಯೆಂಬ ಪೆಸರಿಂದವಂತಿವಿಷಯಾಂತರದೊಳ್ ೧

ಇದು ಕೃತಯುಗಕ್ಕೆ ನೆಲೆಯೆನಿ
ಸಿದ ಬೇಱೊಂದವನಿಯೆಂದು ಬಂದಂಬುಧಿ ಸು
ತ್ತಿದುದೆನಿಸಿ ನಗರಿಯಂ ಬಳ
ಸಿದುದು ರಸಾತಳಗಭೀರಪರಿಖಾವಳಯಂ ೨

ಭವನಿಕ್ಕೆದಾಣಮೆಂದೊಂ
ದು ವಿಶೇಷಪ್ರೀತಿಯಿಂದೆ ಕೈಲಾಸನಗೇಂ
[1]ದ್ರವೆ ಬಳಸಿದುದೆಂಬಂತಿರೆ[1]
ಧವಳಪ್ರಾಕಾರಮಲ್ಲಿ ಸೊಗಯಿಸಿ ತೋರ್ಕುಂ ೩

ಜಳಧಿಯನಗಸ್ತ್ಯನೀಂಟಲ್
ತೊಳಗಿದಪುವು ತಳದೊಳಖಿಳ ನಾನಾರತ್ನಂ
ಗಳೆನಲ್ಕೆ ಸಕಲರತ್ನಂ
ಗಳ ಪಸರದಿನೆಸೆದುವಲ್ಲಿ ವಿಪಿಣಿಪದಂಗಳ್ ೪

ಸುರ ದನುಜ ಸಿದ್ಧವಿದ್ಯಾ
ಧರ ಕಿನ್ನರ ಪನ್ನಗೋಪಯುಕ್ತ ವಿಮಾನೋ
ತ್ಕರಮಲ್ಲಿ ಗಗನದಿಂದವ
ತರಿಸಿದುದೆನೆ ಚಿತ್ರಶಾಲೆಗಳ್ ಸೊಗಯಿಸುಗುಂ ೫

ಕ್ಷೀರಸಮುದ್ರಮಂಥನದೆ ಪಾಂಡುರಮಂ ತಳೆದಿರ್ದ ಮಂದರಾ
ಕಾರಮನಾಂತು ಕಾಂಚನಮಯಾಮಳಸಾರಸಶೇಖರಾಗ್ರವಿ
ಸ್ತಾರಿ ಸಿತಧ್ವಜಂಗಳಿಲರಿಂ ನಿಮಿರಲ್ಕನುರಾಪಗಾಪಯಃ
ಪೂರಮನಾಂತ [2]ಹೈಮ[2]ನಗದಂತಿರೆ ದೇವಕುಲಂಗಳೊಪ್ಪುಗುಂ

---

1 ದ್ರವಿದೆಂಬಂತೆನಿಸಿದುದಾ (ಕ)   2 ಹರ್ಮ್ಯ (ಕ)

ವಿತತೋದಂಚತ್ಪತಾಕಾವಸನವಿಲಸಿತಂ ವಿ[1]ದ್ರುಮೋತ್ತಂಭಿತಸ್ತಂ[1]
ಭತತೋದ್ಯಚ್ಚಾಮರೌಘಾಂಚಿತ[2]ಮನಿಲರಣತ್ಕಾಂತ[2]ಸೌಭಾಗ್ಯಘಂಟಾ
ನ್ವಿತಮಾಗಿರ್ದೊಪ್ಪಮಂ ತಾಳ್ದಿದ ಮಕರಪತಾಕಾಳಿಯಿಂ ಕೋದು ದೇವಾ
ಯತನಂಗಳ್ ಸುತ್ತಲುಂ ಕತ್ತಲಿಸುವ ವನದಿಂ ರಂಜಿಸುತ್ತಿರ್ಪುವೆತ್ತಂ ೭

ಮುರಜಧ್ವಾನಗಭೀರಮಪ್ಪ ರವದಿಂದಂ ರತ್ನಧಾರಾಗೃಹೋ
ತ್ಕರಧಾರಾಳಿಗಳಿಂದ್ರಚಾಪಲತಿಕಾಸಂದೋಹಮೆಂಬಂದದಿಂ
ಸುರಿಯಲ್ ಸೋಗೆಯ ಚೆಲ್ವು ಕಣ್ದೆಱೆದುದೋ ಪೇೞೆಂಬಿನಂ ಪೀಲಿಗಳ್
ತರದಿಂ ಕಣ್ಗೊಳಿಸಲ್ಕೆ ನರ್ತಿಸುಗುಮುದ್ಯಾನಂಗಳೊಳ್ ಸೋಗೆಗಳ್ ೮

ಅನಿಮಿಷರಮಣೀಯಂಗಳ್
[3]ವಿನಿದ್ರಕುಮುದಾಯು[3]ತೋಜ್ವಳಂಗಳ್ ಕೇಳೀ
ವನದೊಳ್ ಸರೋವರಂಗಳ್
ನೆನೆಯಿಪುವು ಸಹಸ್ರನೇತ್ರನಯನೋತ್ಕರಮಂ ೯

ಮಿಸುಪ ಕದಳೀವನಂಗಳ
ಪಸುರಿಂ ಬಾಸಣಿಸಿ ದೆಸೆಗೆ ಪೊಸ ನುಣ್ಪೆಳಗಂ
ಪಸರಿಸು[4]ವದಂತವಲಭಿ[4]
ಪ್ರಸರಿಂಗಳಿನೆಸೆದು ನಗರಿ ಸೊಗಯಿಸಿ ತೋರ್ಕುಂ ೧೦

ಪದಪಿಂದಂ ತಾಳ್ದಿ ನಿಂದಳ್ ಗಗನನದಿ ಮಹಾಕಾಳದೇವೋತ್ತಮಾಂಗಾ
ಗ್ರದೊಳೆಂಬೊಂದೀರ್ಷೆಯಿಂದಂ ಭ್ರುಕುಟಿಗಳಿವೆ ಪೊಣ್ಮುತ್ತಮಿರ್ದಪ್ಪವೆಂಬಂ
ದದೆ ಮಾದ್ಯನ್ಮಾಳವೀಪೀವರಕುಚಕಲಶಾಲೋಲಕಲ್ಲೋಲದಿಂದಂ
ಪುದಿದೊಪ್ಪಂಬೆತ್ತ ಶಿಪ್ರಾನದಿ ಬಳಸಿರಲುಜ್ಜೈನಿ ಕಣ್ಗೊಪ್ಪಿ ತೋರ್ಕುಂ ೧೧

ತರದಿಂದಂ ವ್ಯೋಮದಿಂ ಬೆಳ್ಮುಗಿಲೊಗೆದುವೆನಲ್ ತೋರ್ಪ ಸೌಧಂಗಳೊಳ್ ಸುಂ
ದರಿಯರ್ ಪಾಡುತ್ತಿರಲ್ ಸೋಲ್ತುವೊಲೆಳಸಿ ರಥಾಶ್ವವ್ರಜಂ ಮುಂದೆ ಮುಗ್ಗು
ತ್ತಿರೆ ಚಂಚದ್ವೈಜಯಂತೀಪಟವೆಳಲೆ ಮಹಾಕಾಳದೇವಂಗೆ ನಿಚ್ಚಂ
ಪಿರಿದುಂ ಸದ್ಭಕ್ತಿಯಿಂ ಬಂದೆಱಗುವ ತೆಱದಿಂ ತೋರ್ಪನಂಭೋಜಮಿತ್ರಂ ೧೨

---

1 ಮುಸ್ತಂಬಿತಾಸ್ತಂ (ಕ) 2 ಮಣಿನಶಮೋತ್ಕಾಂತ (ಕ)
3 ಮನುದರಕುಮುದಾ (ಕ) 4 ವುದಂತುಧವಳ (ಕ)

ಅಗಲವು ಚಕ್ರವಾಕಮಿಥುನಾವಳಿ ದೀಪನಿಕಾಯಕಾಂತಿಗಳ್
ಮಿಗಿಲೆನೆ ವಾರಕಾಂತೆಯರ ಭೂಷಣಕಾಂತಿಯ ಕೆಂಬಸಿಲ್ಗಳಾ
ವಗಮೆಸೆಯುತ್ತಿರಲ್ ವಿಷಮಬಾಣನ ತೀವ್ರ ಶರಾನಳಾರ್ಚಿಗಳ್
ತಗುಳ್ದವೆನಲ್ಕೆ ತೋರ್ಪುವು ತಮಸ್ವಿನಿಗಳ್ ವಿಧುವಿಪ್ರಲಂಭದಿಂ ೧೩

ತೊಳಗುವ ಮಾಳವೀಮುಖಸರೋರುಹಕಾಂತಿಗೆ ಸೋಲ್ತು ಚಂದ್ರಮಂ
ಡಳದ ಕಳಂಕಮಂ ಕಳೆದಪಳ್ ನಗರೀಲಲಿತಾಂಗಿ ನಿಳ್ಕಿ ತೋ
ಳ್ಗಳಿನೆನೆ ಕೂಡೆ ಕಣ್ಗೊಳಿಸಿ ತೋರ್ಪುವು ಮಂದನಿಶಾಸಮೀರಸಂ
ಚಳನಚಳದ್ದುಕೂಲಪಟಪಲ್ಲವರಾಜಿತಕೇತನಾಳಿಗಳ್ ೧೪

ಎಳವೆಂಡಿರ್ ನೆಲೆವಾಡದೊ
ಳೆಳಸಿರೆ ನಡೆನೋಡಿ ಸೋಲ್ತುವೊಲ್ ಚಂದ್ರಂ ಮಾ
ರ್ಪೊಳೆವ ನೆವದಿಂ ಪೊರಳ್ವಂ
ಮಳಯಜರಸಸಿಕ್ತ ರತ್ನಕುಟ್ಟಿಮತಳದೊಳ್ ೧೫

ವ॥ ಮತ್ತಂ ತರಳತೆ ಹಾರಂಗಳೊಳ್ ದ್ವಂದ್ವವಿಯೋಗಂ ಜಕ್ಕವಕ್ಕಿಗಳೊಳ್ ವರ್ಣಪರೀಕ್ಷೆ ಕನಕಂಗಳೊಳ್ ಚಂಚಲತ್ವಂ ಧ್ವಜಪತಾಕೆಗಳೊಳ್ ಮಿತ್ರದ್ವೇಷಂ ಕುಮುದಂಗಳೊಳಲ್ಲದಿಲ್ಲಮೆಲ್ಲಿಯುಂ

ಸ್ಮರಭಸ್ಮಾಲಂಕೃತಾಂಗಂ ರತಿವಲಯಸಮಭ್ಯರ್ಚಿತಾಂಘ್ರಿದ್ವಯಂ ಭೀ
ಕರಶೂಲೋದ್ದಾರಿತಾಂಧಾಸುರನಗತನಯಾನೂಪುರೋದ್ಘೃಷ್ಟಜೂಟಂ
ಸುರವಂದ್ಯಂ ಸಂದ ಕೈಲಾಸಮುಮನಿಳಿಸಿ ನಿಂದಂ ಮಹಾಕಾಳನಾಮಂ
ಗಿರಿಶಂ ತಾನೆಂದೊಡುಜ್ಜೈನಿಯ ಮಹಿಮೆಯನೇಂ ಬಣ್ಣಿಸಲ್ ಬಲ್ಲನಾವಂ ೧೬

ವ॥ ಅಂತಾ ನಗರಿಯೊಳ್ ನೃಗ ನಹುಷ ಯಯಾತಿ ದುಂದುಮಾರಭಗೀರಥ ಪ್ರತಿಮನುಂ ನಿಜಭುಜಾರ್ಜಿತ ಭೂಮಂಡಲನುಂ ಫಲಿತಶಕ್ತಿತ್ರಯನುಂ ನೀತಿಶಾಸ್ತ್ರಾಭಿಪ್ರಾಯಬುದ್ಧಿಯುಮಧಿಗತಧರ್ಮಶಾಸ್ತ್ರನುಮನೇಕಸಪ್ತತಂತುಪೂತಮೂರ್ತಿಯುಮುಪಶಮಿತಜಗದುಪಪ್ಲವನುಮೆನಿಸಿ ಮಕರಧ್ವಜನಂತೆ ಸದಾಸನ್ನವಿಗ್ರಹನುಂ ದಶರಥನಂತೆ ಸುಮಿತ್ರೋಪೇತನುಂ ನಾಗರಾಜನಂತೆ ಕ್ಷಮಾಗುರುವುಂ ನರ್ಮದಾಪ್ರವಾಹದಂತೆ ಮಹಾವಂಶಪ್ರಭವನುಂ ಧರ್ಮಾವತಾರನುಂ ಪುರುಷೋತ್ತಮಪ್ರತಿನಿಧಿಯುಮೆನಿಸಿದ ಮಹಾನುಭಾವಂ ತಾರಾಪೀಡನಿರ್ಪನಾತನ ಮಹಿಮೆಯಂ ಪೇೞ್ವೊಡೆ

ಬಿಸುಟು ಸರೋಜಿನಿಗಳನೇ
ಳಿಸಿ ಮಾಧವವಿಪುಳವಕ್ಷಮಂ ವೀರನೃಪ
ವ್ಯಸನದಿನಾ ನೃಪನೊಳ್ ಸಂ
ತಸದಿಂದಂ ರಾಜ್ಯಲಕ್ಷ್ಮಿ ಸಲೆ ನೆಲಸಿರ್ಪಳ್ ೧೭

ರಾವಣನೊತ್ತಿ ಕಿಳ್ತ ರಜತಾದ್ರಿಯನಶ್ರಮದಿಂದವಾ ಮಹಾ
ದೇವನದೆಂತು ಮುನ್ನಿರಿಸಿದಂ ಸ್ಥಿರಮಾಗಿರಲಂತಶೇಷದೋ
ಷಾವಿಳಮಪ್ಪದೊಂದು ಕಲಿಕಾಲಮದಾದಮೆ ಕೀಳ್ತ ಧರ್ಮಮಂ
ಭೂವರನಾವಗಂ ನಿಲಿಸಿದಂ ನಿಖಿಳಾವನಿರಕ್ಷಣಕ್ಷಮಂ ೧೮

ಪತಿಯಗಲ್ದ ವೇಗದಿಂ ದುಃ
ಖಿತೆಯಾಗಿರೆ ಕಂಡು ಕರುಣವಗ್ಗಲಿಸಲುಮಾ
ಪತಿ ಪಡೆದಂ ಮತ್ತಂ ರತಿ
ಪತಿಯನೆನುತ್ತಿರ್ಪುದವನಿ ಜಗದಧಿಪತಿಯಂ ೧೯

ದಿನಪೇಂದುಪ್ರಚಯಾದ್ರಿಯಿಂದೆ ಜಳದೇವೀವಂದ್ಯರಾಮಕ್ರಮಾಂ
ಕನಿಕಾಯಾಂಚಿತಸೇತು ಚಕ್ರಧರಕೇಯೂರದ್ವಯೋದ್ಘೃಷ್ಟ ಮಂ
ಥನಂಶೈಲಂ ಧನದಾಂಗನಾಭರಣಲಕ್ಷ್ಮೀಚಂಕನದ್ಗಂಧಮಾ
ದನಮೆಂಬಿಂತಿವು ಮೇರೆಯಾಗೆ ತಳೆದಂ ಭೂಚಕ್ರಮಂ ಭೂಭುಜಂ ೨೦

ಮಂದರ ಗಿರೀಂದ್ರನಿಂದೊಗೆ
ತಂದ ಸುಧಾಸಿಂಧುಲೇಖೆಯೆನೆ ನಿಖಿಳ ಜಗ
ನ್ಮಂಡಳಮಂ ಧವಳಿಸಿದ
ತ್ತಿಂದೂಜ್ವಳಕೀರ್ತಿ ಕೀರ್ತಿನಾರಾಯಣನಾ ೨೧

ವನನಿಧಿಪರೀತವಿಶ್ವಾ
ವನಿಪತಿಯ ಮಹಾಪ್ರತಾಪದಿಂ ಜೀರ್ದಪಳೆಂ
ಬಿನೆಗಂ ಛತ್ರಚ್ಛಾಯೆಯ
ನಿನಿಸಗಲದೆ ರಾಜ್ಯಲಕ್ಷ್ಮಿ ಸಲೆ ನೆಲಸಿರ್ಪಳ್ ೨೨

ವ|| ಅಂತಾ ನರೇಂದ್ರನರಸುತನದೊಳ್ ವಿಪಕ್ಷತೆ ಗಿರಿಗಳೊಳ್ ಪರತ್ವಂ ಪ್ರತ್ಯಯಂಗಳೊಳ್ ಇದಿರಪ್ಪುದು ಕನ್ನಡಿಯೊಳ್ ದುರ್ಗಾಶ್ರಯಂ ಶೂಲಪಾಣಿಯೊಳ್ ಉದ್ವೃತ್ತತೆ ಧ್ವಜಂಗಳೊಳ್ ದುಶ್ಶಾಸನಾಪರಾಧಂ ಭಾರತದೊಳ್ ದಂಡಗ್ರಹಣಂ ವಯಃಪರಿಣತಿಯೊಳ್ ವಕ್ರತೆ ವನಿತಾಕುಚಪತ್ರಂಗಳೊಳ್ ಬಂಧನಂ ಕುಸುಮಂಗಳೊಳ್ ತುಲಾರೋಹಣಂ ಗ್ರಹಂಗಳೊಳ್ ಆಯುತಿಭಂಗಂ ಕೇಶನಖಂಗಳೊಳ್ ಮಲಿನಾಂಬರತ್ವಂ ಜಲದಾಗಮದೊಳ್ ತಾರಕೋದ್ಧರಣಂ ಕುಮಾರಸ್ತುತಿಯೊಳ್ ಗ್ರಹಣಂ ಚಂದ್ರಾರ್ಕರೊಳ್ ಶೂನ್ಯಗೃಹದರ್ಶನಂ ನೇತ್ರದೊಳಲ್ಲದಿಲ್ಲವೆಲ್ಲಿಯುಂ

ಆ ತಾರಾಪೀಡಭೂಭೃತ್ಪತಿಗೆ ಸಕಳಶಾಸ್ತ್ರಾನ್ವಿತಂ ವಿಪ್ರವಂಶ
ಖ್ಯಾತಂ ನೀತಿಪ್ರಯೋಗಪ್ರಭು ನಿಖಿಳ ದಯೋದಾರಗಾಂಭೀರ್ಯನಾಬಾ
ಲ್ಯಾತಿಪ್ರೇಮಾರ್ದ್ರಚಿತ್ತಂ ನಿಶಿತಮತಿ ಮಹಾಸತ್ವವೃತ್ತಂ ತ್ರಿವರ್ಗೋ
ಪೇತಂ ಷಾಡ್ಗುಣ್ಯಶೀಲಂ ವರಬುಧನಿವಹಸ್ತೋತ್ರಪಾತ್ರಂ ಪ್ರಶಸ್ತಂ ೨೩

[ರಾಮಂಗೆ ಕುಶಿಕತನಯಂ
ವೈಮಾನಿಕನಾಯಕಂಗೆ ವಾಚಸ್ಪತಿಯಾ
ಭೀಮಂಗೆ ದಮನನೆನೆ ನಿ
ಸ್ಸೀಮಗುಣಂ ಮಂತ್ರಿಯೆನಿಸಿದಂ ಶುಕನಾಸಂ ||] ೨೪

ನರಕೋಗ್ರಾಸುರ ಶಾತಶಸ್ತ್ರನಿವಹೋದಗ್ರಪ್ರಹಾರಾತಿಭೀ
ಕರಮುಂ [1]ಮಂದರಘರ್ಷಣಾತಿಕಠಿಣೋತ್ತುಂಗಾಂಸಪೀಠಾತಿಬಂ
ಧುರಮುಂ[1] ತಾನೆನಿಸಿರ್ದ ವಿಷ್ಣುವಿನ ವಕ್ಷೋಭಾಗದೊಳ್ ನಿಂದಳಂ
ಸಿರಿಯಂ ತರ್ಪುದದಾವಗಾನಮೆನಿಕುಂ ಪ್ರಜ್ಞಾಬಳಂ ಮಂತ್ರಿಯಾ ೨೫

ವ|| ಅಂತಾ ಮಂತ್ರಿಯೊಳ್ ಸಕಳರಾಜ್ಯಭಾರಮಂ ತಾರಾಪೀಡಂ ನಿಲಿಸಿ ನವಯವ್ವನೋಚಿತ ಸುಖೋನ್ಮುಖನಾದನದೆಂತೆನೆ-

ಪುಳಕನಿತಾಂತಜರ್ಝರಿತ ಕರ್ಣವತಂಸೆಯರಪ್ಪ ಕಾಂತೆಯ
ರ್ಕಳ ದರಹಾಸಚಂದನರಸಾಭಿಷವಂ ಮಣಿಭೂಷಣಾಂಶುಸಂ
ಕುಳಪಟವಾಸರೇಣುತತಿ ಬಾಹುಲತಾದೃಢಬಂಧಮೀಕ್ಷಣೋ
ತ್ಪಳಹರಿ ತನ್ನೊಳೊಪ್ಪೆ ತಳೆದಂ ಮದನೋತ್ಸವಮಂ ಮಹೀಭುಜಂ ೨೬

ಸುರತಸ್ವೇದೋದಬಿಂದುಚ್ಯುತ ಮೃಗಮದಪತ್ರಂ ರದಸ್ಪೃಷ್ಟದಷ್ಟಾ
ಧರಬಿಂಬಂ ಪ್ರಸ್ಖಲತ್ಕಂಕಣರಣಿತ ಕಚಾಕರ್ಷಣೋತ್ಕೀರ್ಣಕರ್ಣಾ
ಭರಣಂ ಕಣ್ಗೊಪ್ಪಿ ಕಾಂತಾತತಿಯೊಳೆಸೆಯೆ ಸಂಭೋಗಮಂ ರಾಗದಿಂ ಬಿ
ತ್ತರಿಪಂ ಪ್ರೇಮಪ್ರಕೋಪಾಹತಿಚರಣತಳಾಲಕ್ತಲೇಖಾಲಲಾಮಂ ೨೭

ವ|| ಅದಲ್ಲದೆಯುಂ

ತರುಣೀಸಂಕುಳಹಸ್ತಯಂತ್ರವಿಗಳತ್ಕಾಶ್ಮೀರಧಾರಾಪರಂ
ಪರೆಗಳ್ ಮನ್ಮಥಮುಕ್ತಹೇಮಮಯನಾರಾಚಾಳಿವೋಲ್ ಚೆಲ್ವನಾ
ವರಿಸಲ್ ಚಂದನವಾರಿಬಿಂದುವಿಲಸತ್ಕಸ್ತೂರಿಕಾಸೌರಭೋ
ತ್ಕರಚಂಚತ್ತನು ಹೇಮಶೃಂಗಜಳಕೇಳೀಲೀಲೆಯಂ ತಾಳ್ದಿದಂ ೨೮

---

1 ಧೈರ್ಯನಾಪಕರಣೋತ್ತುಂಗಾಗಪ್ರಿಯಕ್ಕ ಬಂಧುರಮುಂ (ಕ)

ವ॥ ಮತ್ತಂ

ಲಲನಾಲಕ್ತಕಸಿಕ್ತಹಂಸಯುಗಳಂ ನೈತಂಬವಿಕ್ಷೋಭಸಂ
ಚಳನಮುಚ್ಚಸ್ತನತಾಡನೋದ್ವೇಳನಮುಮಂ ಚಕ್ರಾರ್ಣಪ್ರಾದೋತ್ಪಳಾ
ವಿಳನಮಾಕೀರ್ಣಕಚಪ್ರಸೂನನಿಬಿಳಂ ಮಾಳ್ಪಂ ಸರೋಜಾಕರಂ
ಗಳನಂತಃಪುರಕಾಮಿನೀ ಪರಿವೃತಂ ನೀಡುಂ ಜಳಕ್ರೀಡೆಯೊಳ್ ೨೯

ತತನ್ನೈ ವಂಚಕ ಕೂರ್ತವ್ರೊಲ್ ಕುಜಃಪ್ರನೇಟ್ಟಿಲ್ಲಿರ್ದೆಯೆಂದೊನೋರ್ವಲ್
ನಡುಗುತ್ತುಂ ಪ್ರಣಯಪ್ರಕೋಪಭರದಿಂದೆಯ್ತಂದು ಕಾಂತಾಜನಂ
ಪಿಡಿತಂದೊರ್ಮೆಯೆ ಕಂಕಣಂಗಳುಲಿಯಲ್ ಪೂಮಾಲೆಯಿಂ ಸೋಲೆ ಪೊ
ಯ್ವುದೆವಂ ಕೇಸರದಾಮಬದ್ಧಚರಣಂ ಶೃಂಗಾರಕಾರೋದಯಂ ೩೦

ವ॥ ಮತ್ತಮಶೋಕತರುವಿನಂತೆ ತರುಣೀಪದಪ್ರಹಾರಸಂಕ್ರಾಂತಾಲಕ್ತರಾಗನುಂ ತಾಳ್ದಿಯುಂ ಹಂಸನಂತೆ ರಮಣೀಯನೂಪುರನಿನಾದಾನಂದಿತಮಾನಸಸರೋವರದೊಳ್ ಚರಿಸಿಯುಂ ಭ್ರಮರದಂತೆ ಕುಸುಮಮಂಜರೀರಂಜಿತಲತಾಭವನಂಗಳೊಳ್ ಭ್ರಮಿಸಿಯುಂ ಕಾಮಿನೀಜನದತ್ತ ಸಂಕೇತಸದನಂಗಳೊಳ್ ಬಹುಳನಿಶಾಪ್ರದೋಷಂಗಳೊಳ್ ಭ್ರಮಿಸಿಯುಂ ವಿಘಟಿತಕನಕಕವಾಟವಾತಾಯನಂಗಳಪ್ಪ ಮಹಾಪ್ರಾಸಾದಸದನಂಗಳೊಳ್ ಪುಗುವುಂ ಪರಿಮಿತಾಪ್ತಜನನೊಡನಂತಃಪುರಕಾಮಿನೀಪರಿವೃತನನೇಕವೀಣಾವೇಣುಮುರಜಮನೋಹರಂಗಳಪ್ಪ ಸಂಗೀತಂಗಳಂ ವಿಸ್ತರಿಸಿಯುಂ ಅತಿರಮಣೀಯಮುಖಮತಮವಿರುದ್ಧನೆನಿಸುವಿಷಯಸುಖಾರ್ಣವದೊಳ್ ಮೂಡಿ ಮುಟ್ಟಾಮುತ್ತಮಿರ್ದನಂತುಮಲ್ಲದೆಯುಂ

ಪ್ರತಿಪಾಲಿಸಿ ವಸುಮತಿಯಂ
ಕೃತಾರ್ಥನೆನಲಿಂತು ವಿಷಯತತಿಗೆಳಸಲ್ ಭೂ
ಪತಿಗಳ ಭೂಷಣಮೆನಿಸುಗು
ಮಿತರರ್ಗಾ ವಿಷಯತತಿ ವಿಡಂಬನಮಕ್ಕೇ ೩೧

ಎನಿತೊಳವು ವಿಷಯಸಮುದಯ
ಮನಿತಱೊಳೆಂದಮ ಪರಮಸುಖಮಂ ಪಡೆದಂ
ತನಯಮುಖಾಲೋಕನಸುಖ
ಮನನೊಂದನೆ ಪಡೆದನಿಲ್ಲ ತಾರಾಪೀಡಂ ೩೨

ವ॥ ಅದುಕಾರಣದಿಂ

ಧರಣೀಪಾಲಸಹಸ್ರಸಂಸ್ತೃತನೆನಲ್ ಸಂದಿರ್ದುಮೇಕಾಕಿಯುಂ
ತಿರೆ ಪೃಥ್ವೀವಲಯಾವಲಂಬನನೆನೆ ಸಂದಿರ್ದುಂ ನಿರಾಲಂಬನಂ
ತಿರೆ ಕರ್ಣಾಂತವಿಶಾಲಲೋಚನನೆನಲ್ ಸಂದಿರ್ದುಮಂದಂಧನಂ
ತಿರೆ ತನ್ನಂ ಬಗೆನಂ ತನೂಜರಹಿತಂ ವಿಶ್ವಂಭರಾವಲ್ಲಭಂ ೩೨

ವ॥ ಮತ್ತಮಾ ಧರಾಧೀಶ್ವರಂಗೆ ಹರಜಟಾಕಳಾಪಕ್ಕೆ ಚಂದ್ರಲೇಖೆಯಂತೆ ನಾರಾಯಣವಕ್ಷಸ್ಥಲಕ್ಕೆ ಕೌಸ್ತುಭಪ್ರಭೆಯಂತೆ ದಿಗ್ಗಜಕ್ಕೆ ಮದಲೇಖೆಯಂತೆ ವಸಂತ ಸಮಯಕ್ಕೆ ಕುಸುಮೋದ್ಗಮದಂತೆ ಮಾನಸಸರೋವರಕ್ಕೆ ಹಂಸಮಾಲೆಯಂತೆ ಮಲಯಾ ಚಲಕ್ಕೆ ಚಂದನರಾಜಿಯಂತೆ ವಿಳಾಸವತಿಯೆಂಬಳಂತಃಪುರಪ್ರಧಾನೆಯೆನಿಸಿದ ಮಹಾ ದೇವಿಯರಮನೆಗೆ ದಿನದಿನಂ ತಾರಾಪೀಡ ನರೇಂದ್ರಂ ಬರುತ್ತಮಿರಲನ್ನೆಗಂ

ಪಡಿಯಱಕೆಯ ಸೀಗುರಿವಿಡಿ
ವಡಪದ ಕನ್ನಡಿಯ ಪಡಿಗದಾಕೆಗಳೆಲ್ಲಂ
ಮಿಡುಕಲಣಮಱಿಯದಿರ್ದಿ
ರ್ದೆಡೆಯೊಳ್ ಬೆಱಗಾಗಿ ಮೂಗರಂದದಿನಿರ್ದರ್ ೩೪

ವ॥ ಆಗಳಂತಃಪುರವೃದ್ಧಾಂಗನಾಶ್ವಾಸ್ಯಮಾನೆಯುಮವಿರಳಾಶ್ರುಬಿಂದುಧಾರಾ ದ್ರೀಕೃತದುಕೂಲೆಯುಮನಳಂಕೃತೆಯುಂ ವಾಮಕರತಳವಿನಿಹಿತಮುಖಕಮಳೆಯುಂ ಪರ್ಯಂಕೋಪವಿಷ್ಟೆಯುಮಾಗಳುತ್ತಿರ್ದ ವಿಳಾಸವತಿಮಹಾದೇವಿಯಂ ತಾರಾಪೀಡ ನರೇಂದ್ರಂ ಕಂಡು ಕೃತಪ್ರತ್ಯುತ್ಥಾನೆಯಾದ ನಲ್ಲಳಂ ಮೆಲ್ಲನೆ ಕುಳ್ಳಿರಿಸಿ ತಾನುಂ ಮೆಲ್ಲನೆ ಕುಳ್ಳಿರ್ದಜ್ಞಾತಕಾರಣಂ ಬಾಷ್ಪವಿದೆಂದಾತ್ಮಕರತಳದಿಂದಾ ಕುಟಿಲಾಳಕಿಯ ನಯನಜಲಂ ಗಳಂ ತೊಡೆದು

ನಸುದೆಱೆಯುತ್ತಮಿರ್ದ ಪೊಸಮುತ್ತಿನ ಸಿಂಪಿನ ಸಂಪುಟಂಗಳಿಂ
ನುಸುಳ್ದು ಸುಪಾಣಿಯಾಗಿ ಪೊಱಪೊಣ್ಮುವ ಮುತ್ತಿನಮಾಲೆಯಂದದಿಂ
ಮಿಸುಗಿ ನಿರಂಜನಂಗಳೆನಿಪಕ್ಷಿಪುಟಾಂತರದಿಂದಮೇಕೆ ಪೇಱಿ
ಪಸರಿಸಿ ನೀಳ್ದು ಪೊಣ್ಮಿದುವು ಕಣ್ಬನಿಗಳ್ ತರಳಾಯತೇಕ್ಷಣೆ ೩೫

ಕೆಂದಾವರೆ ಚೆಂಬಿಸಿಲಿಂ
ದೊಂದುವ ತೆಱದಿಂದೆ ನಿನ್ನ ಮೃದುಪದಯುಗಮೆಂ
ದೆಂದಿನವೊಲಲಕ್ತಕರಸ
ದಿಂದಂ ಪೇೞೊಂದಿತಿಲ್ಲಿದೇನಿಂದುಮುಖೀ ೩೬

ಸ್ಮರರಾಜಕೇಳಿಕಮಲಾ
ಕರಕಳಹಂಸಂಗಳೆನಿಸಿ ಸೊಗಯಿಪ ಮಣಿನೂ
ಪುರಯುಗಳಂ ನಿನ್ನ ಪದಾಂ
ಬುರುಹಮನೊಂದಲ್ಕೆ ಪಡೆಯದಿಂದಿನ ತೆಱನೇಂ ೩೭

ಊರುಯುಗಸ್ತಂಭೋದ್ಗತ
ತೋರಣಮೆಂಬಂತೆ ಮಿಸುಗುವುಡಿನೂಲಿಂದೇಂ
ಕಾರಣದಿಂ ಕಟ್ಟಿದು ನೀ
ರೇರುಹದಳನಯನೆ ನಿಜ ನಿತಂಬಸ್ಥಳದೊಳ್ ೩೮

ಮೃಗಲಾಂಛನಮಂಡಳದೊಳ್
ಮೃಗತನು ಮಿಸುಪಂತೆ ನಿನ್ನ ಕುಚಮಂಡಳದೊಳ್
ಮೃಗಮದವಿಚಿತ್ರಪತ್ರಂ
ಮೃಗಲೋಚನೆ ಬರೆಯದಿರ್ದುದಿಂದಿನ ತೆಱನೇಂ ೩೯

ಲಲಿತಲತಾಂಗುಲಿದಳಸಂ
ಕಲಿತಂ ಕರತಳಮಿದೇಕೆ ಕೋಮಳೆ ಕದಪಂ
ತಳೆದು ದರದಳಿತರಕ್ತೋ
ತ್ಪಲದಂದದೆ ಕರ್ಣಪೂರಮಾದತ್ತೀಗಳ್ ೪೦

ಒಗೆತರ್ಪ ಬಹುಳಬಾಷ್ಪಾಂ
ಬುಗಳಿಂದಂ ಧೌತಮಾದುವೇಕೆಯೊ ನಿನ್ನೀ
ಸೊಗಯಿಪ ಕಪೋಲ ಪಾಳೀ
ಯುಗಳದ ಕಾಶ್ಮೀರಮಕರಿಕಾಪತ್ರಂಗಳ್ ೪೧

ಪೊಳೆವೆಳೆವೆಱೆಯಂ ತನ್ನೊಳ್
ತಳೆಯದ ಕಾರಿರುಳ ತೆಱದೆ ಕುಸುಮಾವಳಿಯಂ
ತಳೆಯದ ನಿನ್ನ ಬಳಲ್ಮುಡಿ
ಬಳಯಿಸಿದಪುದೆನ್ನ ಮನಕೆ ಖೇದಮನೀಗಳ್ ೪೨

ಒದವಿದ ನಿಜ ಖೇದಕ್ಕಾ
ವುದು ಕಾರಣಮತಿವಿರಕ್ತಮೆನಿಸಿರ್ದೆನ್ನೀ
ಹೃದಯಂ ನವಪಲ್ಲವದಂ
ದದೆ ಕಂಪಿಸಿದಪುದು ಕಂಡು ನಿನ್ನೀ ತೆಱನಂ ೪೩

ಎನ್ನಿಂದಾದತ್ತೊ ಮೇಣೆನ್ನಯ ಪರಿಜನದಿಂದಾದುದೊ ನೋವು ನೋಟ್ಪಿಂ
ತೆನ್ನೊಳ್ ತಪ್ಪುಪ್ಪೊಡೆಂದುಂ ಸಮನಿಸಿದುದ ನಾನೇನುಮಂ ಕಾಣೆನಿಂತಿ
ರ್ದೆನ್ನೀ ಸಾಮ್ರಾಜ್ಯಮುಂ ಜೀವಮುಮಿವು ನಿನಗಾಯತ್ತಮಾಗಿರ್ದೊಡಂ ಪೇೞ್
ನಿನ್ನೀ ಶೋಕಕ್ಕಿದೇಂ ಕಾರಣಮಱಿದಪೆನಿಲೀಗಳಂಭೋಜನೇತ್ರೆ ೪೪

ವ॥ ಎಂದು ಶೋಕಕಾರಣಮನೆಂತು ಬೆಸಗೊಂಡೊಡಂ ಪೇೞದೆ ವಿಳಾಸವತಿ ಮಹಾದೇವಿ ಬಾಷ್ಪಾಂಬುಸಂತತಿಯನೆ ಸುರಿಯುತ್ತಮಿರ್ಪುದುಂ ಕೆಲದೊಳಿರ್ದ ಸಖೀಕದಂಬದ ಮೊಗಮಂ ನೋಡೆ ಸಂತತಸನ್ನಿಹಿತೆಯಪ್ಪ ತಾಂಬೂಲಕರಂಕವಾಹಿನಿ ಮಕರಿಕೆಯೆಂಬಳಿಂತೆಂದಳ್—

ಅರಸಿಯ ನೆಗೞ್ತ್ತಿ ನೋಡಲ್
ಪಿರಿದುಂ ವಿಸ್ಮಯಮನಾಗಿಪುದು ದೇವ ಮನೋ
ಹರವೆನಿಪ ರಾಜ್ಯವಿಭವದ
ಪರಮಸುಖಂ ತನಗೆ ವಿಫಳಮಾದವೊಲೀಗಳ್ ೪೫

ಮನೆಯೊಳ್ ಮಱುಗುತ್ತಿರೆ ಮ
ಜ್ಜನಭೋಜನಭೂಷಣಂಗಳೆಂಬಿವುಮಂ ಪ್ರಾ
ರ್ಥನೆಗೆಯ್ದು ದೇವ ನಿಚ್ಚಮು
ಮನುವಿಸಿ ನೆಗೞ್ಪುದು ಪರಿಜನಂ ಮಾನಿನಿಯಾ ೪೬

ವ॥ ಅದಲ್ಲದೆಯುಮಿಂದುವರಂ ದೇವರ ಮನಂ ನೊಂದಪುದೆಂದು ಮನಂದೋಱದಿರ್ಪಳಿಂದು ಮಹಾಕಾಳದೇವರಂ ಪೂಜಿಸುತ್ತಮಿರ್ಪಲ್ಲಿ ಭಾರತಕಥಾಶ್ರವಣದೊಳ್ 'ಪುನ್ನಾಮ್ನೋ ನರಕಾತ್ತ್ರಾಯತ ಇತಿ ಪುತ್ರಃ ಅಪುತ್ರಾಣಾಂ ಕಿಲ ಗತಿರ್ನಾಸ್ತಿ ನವಾ ಸಂತಿ ಲೋಕಾಃ ಶುಭಾಃ' ಎಂಬೀವಾಕ್ಯಾರ್ಥಮಂ ಕೇಳ್ದು

ಅಂತು ಮನೆಗಾಗಳೇ ಬಂ
ದಂತಸ್ಸಂತಾಪಮೊದವೆ ಬಾಷ್ಪಾಂಬುವನೋ
ರಂತೆ ಸುರಿಯುತ್ತಮಿರ್ದಪ
ಳೆಂತುಂ ಸಂತೈಸಲಾರ್ತೆನಿಲ್ಲವನಿಪತೀ ೪೭

ಇಲ್ಲಿಂದಿತ್ತಲ್ ದೇವರ್
ಬಲ್ಲಿರೆನುತ್ತುಸಿರದಿರ್ಪುದುಂ ಮಕರಿಕೆ ಭೂ
ವಲ್ಲಭನಱದಾಗಳ್ ನಿಜ
ವಲ್ಲಭೆಯುಂ ನೋಡಿ ದುಃಖದಿಂ ಬಿಸುಸುಯ್ದಂ ೪೮

ನಮಗಿಂತಾದುದು ದೈವಮಾತ್ಮಜಪರಿಷ್ವಂಗಾಮೃತಾಸ್ವಾದಸೌ
ಖ್ಯಮದೆಂತುಂ ದೊರೆಕೊಂಡಿತಿಲ್ಲ ಹೃದಯಕ್ಕೋರಂತೆ ಮುಂ ಪುಣ್ಯಕ
ರ್ಮಮನಂತಾಗಿರೆ ಮಾಡದೀಗಳಟಲಿಂ ಪೇಱಂತಱುತ್ತಿರ್ದಳ
ಕ್ಕುಮೆ ಬೇಡಂಗನೆ ಮಾಣ್ಬುದೆಂದುಸಿರ್ದು ತಾರಾಪೀಡಚಕ್ರೇಶ್ವರಂ ೪೯

ಗುರುಜನದಲ್ಲಿ ಮಾಡಧಿಕಭಕ್ತಿಯನರ್ಚಿಸು ದೇವರಂ ಮುನೀ
ಶ್ವರಪರಿಚರ್ಯೆಯೊಳ್ ಪಿರಿದು[1] [ಮೊದೃತೆ][1] ಯಾಗು ದಿಟಕ್ಕೆ ದಲ್ ಮುನೀ
ಶ್ವರರ್ಗಳೆ ದೈವಮೆಂದವರ ಪಾದಪಯೋರುಹಸೇವೆಯಲ್ಲಿ ತ
ತ್ಪರರೆನಿಪರ್ಗೆ ಪೇೞ್ ಪಡೆಯಲಾಱದುದೇಂ ತರಳಾಯತೇಕ್ಷಣೇ ೫೦

ದನುಜಾರಿರಿಪು ಜರಾಸಂ
ಧನೆಂಬ ಸುತನತಿರಥಂ ಬೃಹದ್ರಥನಾಮಾ
ವನಿಪಂಗೆ ಚಂಡಕೌಶಿಕ
ಮುನೀಂದ್ರನಿಂದಾದನೆಂಬುದಂ ಕೇಳ್ದಱಿಯಾ ೫೧

[2] [ಶರನಿಧಿ][2] ಯಂದದಿಂದತಿಗಭೀರಗುಣೋನ್ನತಿಯಿಂದೆ ಸಂದ ಮಂ
ದರಧರಬಾಹುಗಳ್ ವಸುಮತೀತಳರಕ್ಷಣದಕ್ಷರಪ್ಪ ನಾ
ಲ್ವರುಮವನೀಶರಂ ದಶರಥಂ ಪಡೆದಂ ತನುಜಾತರಂ ವಯಃ
ಪರಿಣತಿಯೊಳ್ ವಿಭಾಂಡಕಮಹಾಮುನಿಮುಖ್ಯವರಪ್ರಸಾದದಿಂ ೫೨

ವ॥ ಎನುತ್ತೆ ವಿಶ್ವಾನಂದಭವನನಪ್ಪಾತ್ಮಸಂಭವನನಾ ಮಹಾನುಭಾವಂ ಬಿಡದೆ ಭಾವಿಸಿ ನಿಜಪ್ರಾಣೇಶ್ವರಿಯ ಮೊಗಮಂ ನೋಡಿ

ಅಮೃತಕರನುದಯಮಾಗಲ್
ಸಮನಿಸೆ ತಳ್ತಿಂದ್ರದಿಗ್ವಧೂಮುಖದೊಳ್ ಬೆ
ಳ್ಪಮರ್ದಂತೆ ಗರ್ಭದಿಂದಂ
ಹಿಮಕರಮುಖಿಮುಖದೊಳಿಂದು ಬೆಳ್ಪಿಸೆದಪುದೋ ೫೩

ನಂದನ ಜನ್ಮೋತ್ಸವದೊದ
ವಿಂದಂ ಪರಿತಂದು ಪೂರ್ಣಪಾತ್ರಮನತ್ಯಾ
ನಂದಮೊದವಲ್ಕೆ ಪರಿಜನ
ಮೆಂದೆಳೆಕುಳಿಗೊಳ್ವ ಸೈಪು ಸಮನಿಸಿದಪುದೋ ೫೪

---

1 ಮರ್ತಿತೆ (ಕ) 2 ವರನದಿ (ಕ)

ಇನಬಿಂಬಂ ಕಣ್ಗಳುಂಬಂ ತೊಳಗಿ ಬೆಳಗೆ ಬಾಲಾತಪಂ ಸುತ್ತಲುಂ ಕಂ
ಪಿನ ಸೊಂಪಂ ಬೀಱೆ ಕಣ್ಗೆಟ್ಟಳವೆನಿಪ ನಭೋಲಕ್ಷ್ಮಿಯೆಂಬಂತಿರುತ್ಸಂ
ಗನಿಷಣ್ಣಂ ನಂದನಂ ಕಣ್ಗೊಳಿಸುತಿರೆ ಹರಿದ್ರಾಂಶುಕಾಲಿಂಗಿತಾಂಗಂ
ತನಗೊಪ್ಪಲ್ಕೆಂದು ಮದ್ವಲ್ಲಭೆ ಮನಕೆ ಮಹೋತ್ಸಾಹಮಂ ಮಾಡಿದಪ್ಪಳ್ ೫೫

ಪನೆಗಳ್ ತೋರದ ಮಂದಹಾಸರುಚಿ ಮುದ್ದಂ ನಾಡೆಯುಂ ಬೀಱಿ ರೋ
ಚನದಿಂ ರಂಜಿಪ ನೂಲರಕ್ಕೆವಣಿಗಳ್ ಚೆಲ್ವಾಗೆ ವಿಸ್ಫಾರಲೋ
ಚನಯುಗ್ಮಂ ಮಿಸುಗಲ್ ಮಱಲ್ದೆಸೆವ ತೂಗುಂದೊಟ್ಟಿಲೊಳ್ ಪಟ್ಟಿಪು
ತ್ರನ ವಕ್ತ್ರೇಂದುವನಂಜನಾಂಕಿತಮನಾನಿನ್ನೆಂದು ಪೇೞ್ ಕಾಣ್ಬೆನೋ ೫೬

ಹೃದಯದೊಳೊದವಿದ ಕತ್ತಲೆ
ಚೆದಱುವಿನಂ ಮಂಗಳಪ್ರದೀಪದವೋಲ
ಭ್ಯುದಯಕರನೆನಿಪ ನಂದನ
ನದೆಂದು ತೊಳಗುವನೊ ಕಾಂತೆಯರ ಕರತಳದೊಳ್ ೫೭

ಸಂಗಡಿಸಿದ ಕಿಱುಜಡೆಗಳ
ತೊಂಗಲ್ಗಳನೊಪ್ಪೆ ಜಾನುಚಂಕ್ರಮಣಂ ಹ
ರ್ಮ್ಯಾಂಗಣದೊಳೆಂದು ಸುೞಿಗುಮೊ
ಸಿಂಗದಮಱಿಯಂತಿರೆಸೆದು ತೋರ್ಪ ಕುಮಾರಂ ೫೮

ಲಲನಾಮಂಜೀರನಾದಕ್ಕೆಳಸುವ ಕಳಹಂಸಗಳಂ ಕಂಡು ಬೆಂಬೆಂ
ನ್ನೊಳೆ ನೀಡುಂ ಪೋಪ ಕಾಂತಾಭವನಹರಿಣಶಾಬಂಗಳೆಟ್ಟಿಂದು ಚಂದ್ರೋ
ಪಳಭಿತ್ತಿಪ್ರಾಂತದೊಳ್ ಮಾರ್ಪೊಳೆಯಲೆನಗಿವಂ ತಂದು ನೀನೀವುದೆಂದಾ
ಗಳುಮಾದಂ ದಾದಿಗಾಯಾಸಮನೊಡರಿಪ ಮುದ್ದಾತ್ಮಜಂಗೆಂದು ತೋರ್ಕುಂ ೫೯

ಮದಲೇಖಾಮಂಡನಂ ಕಣ್ಗೊಳಿಸೆ ಕದಪಿನೊಳ್ ನೀಳ್ದ ಕಸ್ತೂರಿಕಾಪಂ
ಕದಿನಂಗುಲ್ಯಂಕುಶಾಕರ್ಷಣಮುಮರೆ[1][ಶಿರಂದೂಗುತಂತೆ][1] ತ್ತಿ ಕಯ್ಯಂ
ಕೆದಱುತ್ತಂ ಧೂಳಿಯಂ ಪ್ರೀತಿಯನೊದವಿಪ[2][ಗಂಡೋಚ್ಚಲಡ್ಡಿಂಡಿಮಧ್ವಾ
ನದಿನೆಂದೋ ಮುಂದೆ ಮನ್ನಂದನನೆಸೆವ ಗಜಕ್ರೀಡೆಯಿಂದಾಡುತಿರ್ಪಂ][2] ೬೦

1 ಚಿರಂರಾಗದಿಂದೆ (ಕ) 2 ಗಂಧೋಜ್ವಲಂಡಿಮ ಧ್ವಾನದಿನೆಂತೊ ಮುಂತೆ ಮುಂನಂದನೆಗೆವರಜಕ್ರೀಡೆಯಿಂದಾಡುತಿರ್ಪಂ (ಕ)

ತಳರಡಿಯಿಡುತಂ ಕುಟ್ಟಿಮ
ತಳದೊಳ್ ಮಾರ್ಪೊಳೆಯುತಿರೆ ನಿಜಪ್ರತಿಬಿಂಬಂ
ಗಳನೀಕ್ಷಿಸುತುರೆ ಕೌತುಕ
ಚಳನಯನದೆ ತನಯನೆಂದು ಬಟಿಸಂದಪನೋ ೬೧

ಬಾರೆಲೆ ತಂದೆ ಬಾರರಸ ಬಾ ಪೊರೆವಾಟ್ಟನೆ ಬಾಯೆನುತ್ತೆ ವಿ
ಸ್ತಾರಿತದೀರ್ಘಬಾಹುಯುಗಳರ್ ಪರಮೋತ್ಸವದಿಂದಶೇಷ ಧಾ
ತ್ರೀರಮಣರ್ ಮರಲ್ದು ಕರೆಯುತ್ತಿರೆಯುಂ ಮಣಿಭೂಷಣಾಂಶುವಿ
ಸ್ಫಾರಿತನೇತ್ರನೆಂದು ಸುಟಿದಪ್ಪನೊ ಮುಂದೆ ಸಭಾಂತರಾಳದೊಳ್ ೬೨

ವ॥ ಎಂದಿವು ಮೊದಲಾಗಿ ಪಲವುಂ ಮನೋರಥಂಗಳಂ ಚಿಂತಿಸುತ್ತಮಿರ್ದು ಮತ್ತಂ ಪ್ರಿಯಮಧುರಂಗಳುಂ ಶೋಕಾಪನೋದನಿಪುಣಂಗಳುಂ ಧರ್ಮೋಪದೇಶಗರ್ಭಂಗಳುಮಪ್ಪ ವಚನನಿಚಯಂಗಳಿನೆಂತಾನುಂ ಸಂತೈಸಿ ನಿಜಪರಿಜನಂಬೆರಸರಸಂ ಬಿಜಯಂಗೆಯ್ದನಲ್ಲಿಂ ಬಟಿಕ್ಕಂ ವಿಳಾಸವತಿಮಹಾದೇವಿ ದುಃಖಮುಂ ಪತ್ತುವಿಟ್ಟೆಂದಿನಂತಾಭರಣಂಗಳಂ ತೊಟ್ಟು

ಗುರುದೇವದ್ವಿಜಪೂಜಾ
ಪರಿಚರ್ಯೆಯನೆಸಗಿ ಭಕ್ತಿಯಿಂ ಮತ್ತುಂ ಪೇ
ಲ್ದರ ಮಾತೆಲ್ಲಂ ಕೇಳ್ದಾ
ದರದಿಂದಂ ಗರ್ಭತೃಷ್ಣೆಯಿಂದೊಡರಿಸಿದಳ್ ೬೩

ವಿವಿಧನವಪ್ರಸೂನಫಳಪುಣ್ಯನದೀಜಳನೂತ್ನರತ್ನಪ
ಲ್ಲವನಿವಹಂಗಳಿಂದೆಸೆವ ಪೊಂಗಳಸಂಗಳನೆತ್ತಿ ಸುತ್ತುಮು
ತ್ಸವದೊಳೆ ಬಂದು ಗೋಪವನಿತಾನಿಕರಂ ಮಿಸಿಸಲ್ ಸವತ್ಸಧೇ
ನುವಿನಡಿಯೊಳ್ ವಿಲಾಸವತಿ ಮೀವಳನಾಕುಲ ಗೋಕುಲಂಗಳೊಳ್ ೬೪

ಸಲೆ ನಿಲೆ ಬೇವ ಗುಗ್ಗುಳದ ಕರ್ಪೂಗೆಯಿಂದಮುಗುರ್ವನಾಳ್ದು ಕ
ತ್ತಲಿಸುವ ಚಂಡಿಕಾಭವನದೊಳ್ ಧವಳಾಂಶುಕೆ ಶುದ್ಧಮೂರ್ತಿ ನಿ
ಶ್ಚಳತರಮಪ್ಪ ಭಕ್ತಿಯಿನುಪೋಷಿತೆಯಾಗಿ[1][ಕುಶೋಪಧಾನಮುಂ
ಗಳವಸುಧಾತಳೀಶಯನಸುವ್ರತಮಂ][1] ಲಲಿತಾಂಗಿ ತಾಳ್ದಿದಳ್ ೬೫

---

1 ಕುಶೋಪವಾಸಮಂಗಳ ಮಸೃಣಾವಳೀ ವಸನ ಸಂಭೃತಮಂ (ಕ)

ಪತಿಲಿಖಿತಮಂಡಲಸ್ಥಿತೆ
ಕೃತಾಷ್ಟದಿಗ್ದೇವತಾರ್ಚನಪ್ರಕರೆ ದೃಢ
ವ್ರತೆ ಬಹುಳ ಚತುರ್ದಶಿಯೊಳ್
ಚತುಷ್ಪಥಸ್ನಾನವಿಧಿಯನಿರುಳೊಳ್ ತಳೆದಳ್ ೬೬

ತಿಲಪಾತ್ರಪ್ರಕರಂಗಳಂ ಕೊಡುವಳಶ್ವತ್ಥಾದಿ ಭೂಜಂಗಳಂ
ಬಲವರ್ಪಳ್ ಬಲಿಭುಗ್ವ್ರಜಕ್ಕೆ ಬಲಿಯಂ ತಾನಿಕ್ಕುವಳ್ ಮಾತೃಮಂ
ಡಳಮಂ ಪೂಜಿಸುವಳ್ ಪ್ರಸಿದ್ಧಮಿವು ಲೋಕಕ್ಕೆಂಬ ನಾಗಹ್ರದಂ
ಗಳೊಳಾ ಮಾನಿನಿ ಮಂಗಳಾಚರಣದಿಂ ಮೀವಳ್ ಮಹೋತ್ಸಾಹದಿಂ ೬೭

ಬೆಸಗೊಳ್ವಳ್ ಋಷಿಸಂಘಮಂ ನಯದೆ ಸಿದ್ಧಾದೇಶಮಾದಂತೆ ಮ
ನ್ನಿಸುವಳ್ ತಾನೊಲವಿಂ ಸಮಸ್ತಶಕುನಜ್ಞಾನೀಕಮಂ ಕೂಡೆ ನೋ
ಡಿಸುವಳ್ ವೃದ್ಧಪರಂಪರಾಗತರಹಸ್ಯಾಚಾರಮಂ ಮಾಣದಾ
ಗಿಸುವಳ್ ವೇದಸಮೂಹಮಂ ಪದಪಿನಿಂ ಕೇಳ್ವಳ್ ಪುರಾಣಂಗಳಂ ೬೮

ವ॥ ಮತ್ತಂ ಗೋರೋಚನಾರಚಿತ ಭೂರ್ಜಪತ್ರಗರ್ಭರಕ್ಷಾಮಣಿಗಳಂ ತಾಳ್ದಿಯುಂ ಓಷಧಿಸೂತ್ರಚಯಮಂ ತಳೆದುಂ ಉಪಶ್ರುತಿಗಳಂ ಕೇಳ್ದುಮಧ್ವಂಗಳೊಳ್ ಜಂಬುಕಂಗಳ್ಗೆ ಮಾಂಸಬಲಿಸಮನ್ವಿತೋಪಹಾರಂಗಳಂ ಮಾಡಿಸಿಯುಮಿಂತನೇಕವಿಧದಿಂ ವಿಳಾಸವತಿಮಹಾದೇವಿ ಪುತ್ರೋತ್ಪತ್ತಿನಿಮಿತ್ತಂ ಪಲವು ದಿವಸಮಾಚರಿಸುತ್ತಮಿರ್ಪು ದುಮೊಂದುದಿವಸಂ

ಸುರಚಿರ ಸೌಧದೊಳ್ ನೆಲಸಿರಲ್ ನಿಜಕಾಂತೆಯ ವಕ್ತ್ರಬಿಂಬದೊಳ್
ಕರಿಣಿಯ ಸೃಕ್ವಮಂ ಪುಗುವ ನೀರಜಕಾಂಡಮೆನಲ್ಕಿಳಾಮನೋ
ಹರ ಶಶಿಮಂಡಳಂ ಪುಗುವುದಂ ವಸುಧಾಧಿಪನಂದು ಕಂಡನ
ಚ್ಚರಿಯೆನಿಸಿರ್ದುದಂ ನೆನೆಸುವೊಲ್ ಕನಸಂ ಬೆಳಗಪ್ಪ ಜಾವದೊಳ್ ೬೯

ಅರಸನತಿಹರ್ಷವಿಕಸಿತ
ಸುರಚಿರಲೋಚನನಮಾತ್ಯಮುಖ್ಯನನಾಗಳ್
ಕರೆದು ನಿಜಸ್ವಪ್ನಮನಾ
ದರದಿಂ ಪೇಟಲ್ಕೆ ಪುಳಕಿತಾಂಗಂ ಸಚಿವಂ ೭೦

ಪಲಕಾಲಕ್ಕೆ ಮನೋರಥಪ್ರಕರಮಿಂದೆನ್ನೊಂದು ಪುಣ್ಯೋದಯಾ
ವಳಿಯಿಂದಂ ದೊರೆಕೊಂಡುದಿಂದು ಭುವನಕ್ಕಾನಂದಮಾದತ್ತು ಮುಂ
ಕೆಲವಾನುಂ ದಿವಸಕ್ಕೆ ದೇವ ಪಡೆವೈ ಶ್ರೀಮಂಡನಕ್ಷತ್ರಮಂ
ಡಲಮಾರ್ಗೋಚಿತಗಾತ್ರನಂ ಬಹುಕಳಾಸತ್ಪಾತ್ರನಂ ಪುತ್ರನಂ ೭೧

ವ|| ಅದಲ್ಲದೆಯುಂ

ಭುವನಾಧೀಶ ನಿಶಾವಸಾನಸಮಯಪ್ರಾಗ್ಭಾಗದೊಳ್ ಶಾಂತರೂ
ಪವಿನುತ್ಯಂ ವಿಲಸದ್ದುಕೂಲವಸನಾಲಂಕಾರನೊರ್ವಂ ದ್ವಿಜ
ಪ್ರವರಂ ಮೌಕ್ತಿಕಮಾಲಿಕಾವಲಯಮಂ ಪ್ರೋತ್ಫುಲ್ಲಮಂ ಪುಂಡರೀ
ಕವನಂದಲ್ತೆ ಮನೋರಮಾಂಕತಳದೊಳ್ ತಂದಿಕ್ಕಿದಂ ಸ್ವಪ್ನದೊಳ್ ೭೨

ವ|| ಅನುಮೀ ಮಾರ್ಗದೊಳ್ ಕಂಡೆನಂತು ನಿಶಾವಸಾನಸಮಯದೊಳ್ ಕಂಡ ಕನಸುಗಳವಿತಥಂಗಳಪ್ಪುವದುಕಾರಣದಿಂ ನಿಖಿಳರಾಜಋಷಿಪ್ರಮೋದಹೇತುಭೂತನುಂ ರಾಜಮಾಂಧಾತನುಮೆನಿಪ ಜಗತ್ಪ್ರಖ್ಯಾತಂ ಜನಿಯಿಸುಗುಮದಲ್ಲದೆಯುಂ

[1][ನವಕಮಲೋದ್ಗಮದಿಂದು][1]
ತ್ಸವಮಂ ತಾಂ ಗಂಧಗಜಕೆ ಕಮಲಿನಿ ಮಾಳ್ಪಂ
ತೆವೊಲರಸ ನಿನಗೆ ಪರಮೋ
ತ್ಸವಮಂ ಮಾದೇವಿ ಮಾಳ್ಕುಮೀ ಕನಸಿಂದಂ ೭೩

ನಿನ್ನಯ ಸಂತಾನಮವಿ
ಚ್ಛಿನ್ನಂ ಕ್ಷಿತಿಭಾರಧಾರಣೋಚಿತಗುಣಸಂ
ಪನ್ನಮೆನಲ್ ನೆಗಳ್ಗುಂ ಭೂ
ಪೋನ್ನತ ದಿಙ್ನಾಗದಾನದಂದದಿನೆಂದುಂ ೭೪

ವ|| ಎಂದು ತಾರಾಪೀಡನರೇಂದ್ರನ ಕಯ್ಯಂ ಪಿಡಿದಂತಃಪುರಕ್ಕೆ ಪೋಗಿ ವಿಳಾಸವತಿ ಮಹಾದೇವಿಗೆ ತಾವಿರ್ವರುಂ ಕಂಡ ಕನಸುಗಳಂ ಪೇೞ್ದು ಕೇಳ್ದಾನಂದಪರಂಪರೆಯನೆಯ್ದಿ ಕೆಲವಾನುಂ ದಿವಸದೊಳ್

ವಿಲಸತ್ ಪ್ರಭಾಳಿ ಶಶಿಮಂ
ಡಲಮಾ ಕುಮುದಾವಭಾಸಿಯೆನೆ ತಿಳಿಗೊಳದೊಳ್
ನೆಲಸುವ ತೆಱದಿಂ ಗರ್ಭಂ
ನೆಲಸಿದುದು ವಿಳಾಸವತಿಗೆ ಪುಣ್ಯೋದರದೊಳ್ ೭೫

ಅಂತು ಕೆಲದಿವಸದೊಳ್ ನಿಜ
ಕಾಂತಪ್ರತಿಬಿಂಬಮಂ ವಿಳಾಸದೆ ತಳೆದಳ್
ಕಾಂತೆ ಮಣಿದರ್ಪಣಶ್ರೀ
ಯಂತಿರೆ ಸಂಕ್ರಾಂತಮಪ್ಪ ಗರ್ಭದ ನೆವದೊಳ್ ೭೬

1 ನವಕಬಳೋದ್ಧತಮಹದು

ಇನಿಸಿನಿಸಾ ಗರ್ಭಂ ಪ್ರತಿ
ದಿನವೊಯ್ಯನೆ ಬಳೆಯೆ ನಯದೆ ಪುಟವೇಱಿ ನಿತಂ
ಬಿನಿ ಕಾರೊಳೆಸೆವ ಕಾದಂ
ಬಿನಿಯಂದದೆ ಮಂದಮಂದಗಮನದೆ ನಡೆದಳ್ ೭೭

ಅಲಸಿಕೆ ಮೆಯ್ಯಾದುದು ಕ
ಣ್ಮಲರ್ ಮರಲ್ದೆಸೆದುವೊದವಿತಾಗುಳಿಕೆಶತಂ
ಪಲವುಂ ವಸ್ತುಗಳೊಳ್ ತನ
ಗೊಲವರಮಾಯ್ತೆಯ್ದೆ ಕಾಂತೆಗಂದೆಳೆವಸಿಱಿಕೊಳ್ ೭೮

ಮುೞಿಗಾಲದಂತೆ ಕಪ್ಪಂ
ತಳೆದು ಪಯೋಧರಮುಖಂಗಳೆಸೆಯುತ್ತಿರಲಾ
ಲಲನೆ ನವಗರ್ಭಪಾಂಡುರ
ವಿಳಾಸದಿಂ ಕೇತಕೀವಿಳಾಸಮನಾಂತಳ್ ೭೯

ವ॥ ಅಂತಚ್ಚರಿವಟ್ಟಂಗಿತಕುಶಲಯರಪ್ಪ ಪರಿಜನಂಗಳಱಿಯುತ್ತಿರ್ದಲ್ಲಿ

ವನಿತಾರತ್ನದ ಗರ್ಭಚಿಹ್ನಚಯಮಂ ನಿರ್ವ್ಯಾಕುಳಂ ಕಂಡು ಮ
ತ್ತೆನಗಿಂ ಮಾಣ್ದಿರಲೇಂ ಪ್ರಶಸ್ತಮೆನಿಸಿರ್ದೀ ರಾತ್ರಿಯೊಳ್ ಪೋಗಿ ಭೂ
ವನಿತೇಶಂಗಿದನೆಯ್ದೆ ಬಿನ್ನವಿಪೆನೆಂದಾನಂದದಿಂ ವಂಶವ
ರ್ಧನೆಯೆಂಬಾಕೆ ಮಹಾಮಹತ್ತರೆ ನರೇಂದ್ರಾಸ್ಥಾನಮಂ ಪೊರ್ದಿದಳ್ ೮೦

ಉರಗಾಧೀಶಫಣಾಮಣಿಪ್ರಕರದಿಂ ತಳ್ತಿರ್ದ ಲಕ್ಷ್ಮೀಮನೋ
ಹರನೋ ತಾರಕಸಂಕುಳಂ ಬಳಸಿರಲ್ ಚೆಲ್ವಾದ ರಾತ್ರೀಮನೋ
ಹರನೋ ಪೇಱಿಮೆನಲ್ ಪ್ರದೀಪನಿವಹಂಗಳ್ ಸುತ್ತಲುಂ ಕೂಡಿ ತ
ಳ್ತಿರಲಾಸ್ಥಾನದೊಳಿರ್ದನಂದೆಸೆದು ತಾರಾಪೀಡಚಕ್ರೇಶ್ವರಂ ೮೧

ವ॥ ಅಂತಿರ್ದವನಿಪತಿಯಂ ಕಂಡು ಪೊಡವಟ್ಟು 'ವಂಶವರ್ಧನೆ ಕುಳ್ಳಿರ್ದು

ಅವಸರವಂ ಪಡೆದು ವಿಳಾ
ಸವತಿಯೊಳಾದೊಂದು ಗರ್ಭವೃತ್ತಾಂತಮನಾ
ಭುವನಾಧೀಶಂಗಿನಿಸಂ
ಕಿವಿಯತ್ತಲ್ ಸಾರ್ದು ಮೆಲ್ಲನಱಿಪಿದಳಾಗಳ್ ೮೨

ವ॥ ಅಂತಱಿಪಲೊಡನೆ

[1][ಅಗೆವೋದಂತಿರ್ಪಪೂರ್ವಶ್ರುತ][1]ವಚನಸುಧಾಸಾರದಿಂ ಕಂಟಕಂಗಳ್
ನೆಗೆಯಲ್ ವಕ್ತ್ರಾಂಬುಜಾತಸ್ಮಿತಮೆಸೆಯೆ ಮನೋಜಾತಸಂತೋಷಮೆತ್ತಂ
ಮೊಗದೊಳ್ ತೋರ್ಪಂತೆ ದಂತಪ್ರಭೆ ಪಸರಿಸಲಾನಂದಬಾಷ್ಪಾಂಬುಗಳ್ ಕ
ಯ್ಮಿಗಲಾಲೋಲಾಯತಾಕ್ಷಂ ಸಚಿವನ ಮೊಗಮಂ ನೋಡಿದಂ ಭೂಮಿಪಾಲಂ ೮೩

ವ|| ಅಂತು ನೋಱ್ಪುದುಂ ಶುಕನಾಸನಾಮ ಮಂತ್ರಿ ಪೊರ್ದಿ ನರೇಂದ್ರಂಗಿಂತೆಂದಂ

ಮನದನುರಾಗದಿಂದಮಲರ್ದೊಪ್ಪುವ ಕಣ್ಮಲರಾಂತ ವಂಶವ
ರ್ಧನೆಯ ವಚೋಮೃತಶ್ರವಣಕೌತುಕದಿಂದಮೆ ನಿನ್ನ ಲೋಲಲೋ
ಚನಮಿವು ನೀಳ್ದು ಕರ್ಣ್ಗೊಳಿಸಿ ತೋರ್ಪಸಿತೋತ್ಪಳಕರ್ಣಪೂರಮಂ
ನೆನೆಯಿಸಿದಪ್ಪುವಾ ಕನಸಿನೊಳ್ ಕಿರಿದುಂ ದಿಟಮಾಯ್ತೆ ಭೂಪತೀ ೮೪

ಪವಣಿಲ್ಲದದೊಂದೌತ್ಸು
ಕ್ಯವನೊಳಕೊಂಡೆನ್ನ ಮನಮುಪಾರೂಢಮಹೋ
ತ್ಸವಮಂ ಕೇಳಲ್ಪದೆದಪು
ದವನೀಶ ನಿವೇದಿಸೆನಗಿದಂ ಬಿಡದೀಗಳ್ ೮೫

ವ|| ಅಂತು ಶುಕನಾಸಂ ಬೆಸಗೊಳ್ವುದುಂ ದರಹಸಿತವದನಾರವಿಂದನಾಗಿ ನರೇಂದ್ರನಿಂತೆಂದಂ

ಇವಳೀಗಳ್ ಪೇೞ್ದ ಮಾತಾ ಕನಸನವಿತಥಂ ಮಾೞ್ಪ ಮಾತಪ್ಪುವಾಗಿ
ರ್ದುವವಂ ವಿಶ್ವಾಸಿಸಲ್ ಬಂದಪುದೆ ಪಿರಿದುಮಂತಪ್ಪುದಂ ಕೇಳ್ವ ಭಾಗ್ಯಂ
ಸವೆಗೆಂತೀ ಮಾತಸಂಭಾವಿತದವೊಲೆನಗಾದಪ್ಪುದಂತಿಲ್ಲ ಸಂದೇ
ಹವಿದೇಕೇೞರ್ ಪೋಗಿ ನಾವಲ್ಲಿಯೆ ದಿಟಮದು ತಾನೆಂಬುದಂ ನೋಱ್ಪಮತ್ತೆ ೮೬

ವ|| ಎಂದು ನರೇಂದ್ರಂ ರಾಜಲೋಕಮಂ ವಿಸರ್ಜಿಸಿ ತನ್ನ ವಂಶವರ್ಧನೆಗಂಗ
ಚಿತ್ತಮನಿತ್ತು ಶುಕನಾಸಂಬೆರಸಾಸ್ಥಾನಮಂಟಪದಿಂ ಪೊಱಮಡುವಾಗಳ್

ಚಲಿಯಿಸಿದಪುದಸಿತೋತ್ಪಲ
ದಳವೆಲರಲೆಪಂಗಳಿಂದಿದೆಂಬಿನೆಗಂ ಕೆ
ತ್ತಲೊಡರ್ಚಿದತ್ತು ಬಲಗ
ಣ್ಮಲರಾ ಭೂಪತಿಗೆ ಪಿರಿದುಮುತ್ಸವಮಾಗಲ್ ೮೭

1 ಅಗೆವೊತ್ತಪುಷ್ಪಪೂರ್ವಾರ್ಚಿತ (ಕ)

ಕರದೀಪಿಕಾನಿಕಾಯಂ
ತರದಿಂದಂ ಮುಂದೆ ತೊಲಗಿಸುತ್ತಿರೆ ಕಕ್ಷ್ಯಾಂ
ತರ ತಿಮಿರಮಂ ಧರಾಧೀ
ಶ್ವರನೊಯ್ಯನೆ ಪೋಗಿ ಪೊಕ್ಕನಂತಃಪುರಮಂ ೮೮

ವ॥ ಅಂತು ತತ್ಸಮಯಸೇವಾಸಮುಚಿತ ವಿರಳಪರಿಜನಾನುಗಮ್ಯಮಾನಂ ಶುಕನಾಸಂಬೆರಸೊಳಗಂ ಪೊಕ್ಕು ವಸುಕೃತರಕ್ಷಾಸಂವಿಧಾನಮುಂ ನವಸುಧಾನುಲೇಪನಕಲಿತಮುಂ ಪ್ರಜ್ವಲಿತಮಂಗಳಪ್ರದೀಪಮುಂ ಪೂರ್ಣಕಲಶಾಧಿಷ್ಠಿತದ್ವಾರಪಕ್ಷಮುಂ ಪ್ರತ್ಯಗ್ರಲಿಖಿತ ಮಂಗಳಾಲೇಖ್ಯೋಜ್ವಳಭಿತ್ತಿಭಾಗಮುಂ ಉಪರಚಿತವಿತತಸಿತವಿತಾನಪರ್ಯಂತಸಕ್ತಮುಕ್ತಾಗುಣಮುಂ ಮಣಿಪ್ರದೀಪಾವಭಾಸಮುಮೆನಿಸಿದ ನಿವಾಸಭವನದೊಳ್.

ಸತತಾಸನ್ನಸ್ಥ ನಿದ್ರಾ[1][ಕಲಶ ವಿಲ][1]ಸಿತಂ ಭೂತಿ ಸಿದ್ಧಾರ್ಥರಕ್ಷಾಂ
ಕಿತಮಾಕೀರ್ಣಪ್ರವಾಳಾವಳಿಲಲಿತಮಯಃಪಿಪ್ಪಲೀ ಪತ್ರಮಾಲಾಂ
ಚಿತಮುದ್ಯತ್ಪಾದಪೀಠಾನ್ವಿತಮತಿಧವಳಪ್ರಚ್ಛದಾಚ್ಛಾದಿತಂ ವಿ
[2][ಸ್ತೃತಮಾದುತ್ತುಂಗಗರ್ಭೋಚಿತಶಯನ][2]ದೊಳಾ ಕಾಂತೆ ಕಣ್ಗೆಡ್ಡಮಾದಳ್ ೮೯

ಕ್ಷಿತಿಧರಗರ್ಭಿತಾವನಿ ಮೃಗಾಧಿಪಗರ್ಭಿತಮೇರುಮೇಖಳಾ
ಕೃತಿ ಸುರದಂತಿಗರ್ಭಿತಸುರಾಪಗೆ ಪೂರ್ವನಗೋತ್ಥ ಭಾನುಗ
ರ್ಭಿತ ದಿನಲಕ್ಷ್ಮಿ ಪದ್ಮಭವಗರ್ಭಿತ ಪದ್ಮಿನಿ ಚಂದ್ರಬಿಂಬಗ
ರ್ಭಿತವರವಾರ್ಧಿವೀಚಿಯೆನೆ ಕಣ್ಗೆಸೆದಳ್ ಲಲಿತಾಂಗಿ ಗರ್ಭದಿಂ ೯೦

ವ॥ ಅಂತಿರ್ದಳಂ ಕಂಡು ನಿವಾಸಭವನಮಂ ಪುಗುತಪ್ಪಾಗಳ್

ಪರಿಜನವೆಟ್ಟು ಕಯ್ಗುಡೆ ನಿತಂಬಿನಿ ಮೆಲ್ಲನೆ ವಾಮಜಾನುವಂ
ಕರತಳದಿಂದಮೂಱಿ ವಿಚಳನ್ಮಣಿಭೂಷಣಮಂಜುಳಸ್ವನಂ
ಪರೆಯೆ ತರಂಗಿತಾಂಗಮೆಸೆಯಲ್ಕತಿಸಂಭ್ರಮದಿಂದಮೇೞೆ ಬೇ
ಡಿರಿಮಿರಿಮೆಂದು ಕುಳ್ಳಿರಿಸಿದಂ ಪ್ರಿಯೆಯಂ ವಸುಧಾಧಿನಾಯಕಂ ೯೧

ಒಲವಿಂದರಸಂ ಕಾಂತೆಯ
ಕೆಲದೊಳ್ ಕುಳ್ಳಿರೆ ಸಮೀಪದೊಳ್ ಹೇಮಮಯೋ
ಜ್ವಲಪಾದಮಂಡಿತಾಸನ
ದೊಳಲ್ಲಿ ಶುಕನಾಸಮಂತ್ರಿಯುಂ ಕುಳ್ಳಿರ್ದಂ ೯೨

---

1 ಕಳಿತವಿಳ (ಕ) 2 ಶ್ರುತಮಾದುತ್ತುಂಗ ಗರ್ಭೋದಿತಭವನ (ಕ)

ವ॥ ಅನಂತರಮುಪಾರೂಢಗರ್ಭೆಯಪ್ಪ ನಿಜವಲ್ಲಭೆಯಂ ನೋಡಿ ಹರ್ಷನಿರ್ಭರ ಮಾನಸಮರಸಂ ಪ್ರಸ್ತುತಪರಿಹಾಸವಚನದಿನಿಂತೆಂದಂ

ಮನದೊಂದುತ್ಸವದಿಂದೆ ಪೇಟ್ದುೞಿಮಗಿಂದೇನಾನುಮಂ ವಂಶವ
ರ್ಧನೆ ಬಂದಂತುಟಿದಪ್ಪುದಲ್ತೆ ದಿಟಮೆಂದಾನಂದದಿಂ ದೇವಿ ನಿ
ನ್ನನಮಾತ್ಯಂ ಬೆಸಗೊಂಡಪಂ ಬೆಸಸೆನಲ್ ಮಂದಸ್ಮಿತಂ ಪೊಣ್ಮೆ ಮಾ
ನಿನಿ ಲಜ್ಜಾವನತಾಸ್ಯಮಂ ದಶನಕಾಂತಿವ್ಯಾಜದಿಂ ಮುಚ್ಚಿದಳ್ ೯೩

ಮತ್ತೆಯುಮಂತೆ ಪೇೞಿನಲದೇನಱಿಯೆಂ ದಿಟದಿಂ ನರೇಂದ್ರ ಕಾ
ಡುತ್ತಿರಲೇಕೆ ಪೇೞಿನಗೆ ಮಾಣದೆ ಲಜ್ಜೆಯನಿಂತಿರಲ್ಕೆ ಮಾ
ಡುತ್ತಿರಲೆಂದು ಮೆಲ್ಲನುಸಿರುತ್ತಮೆ ಸ್ಪೈರಿಸದಂತೆಗೆಯ್ದು ಭೂ
ಪೋತ್ತಮನಂ ವಿನಮ್ರಮುಖಿ ವಾಮವಿಲೋಚನದಿಂದೆ ನೋಡಿದಳ್ ೯೪

ವ॥ ಅಂತು ನೋಟ್ಪುದುಂ ನರೇಂದ್ರಂ ನಸುನಗುತ್ತಮಿಂತೆಂದಂ

ಆಂ ನುಡಿದೀಗಳೀ ನುಡಿಗೆ ಲಜ್ಜಿಸಿದಪ್ಪೆ ಲತಾಂಗಿ ಮಾಣ್ದೆ ನಾ
ನಿನ್ನದನಂತದಿರ್ಕೆ ವಿಳಸನ್ನವಚಂಪಕಚಾರುಕಾಂತಿಯಿಂ
ದಂ ನೆಱದಿರ್ದು ಕಣ್ಗೊಳಿಪ ಕುಂಕುಮಪಂಕನವಾಂಗರಾಗದೊಳ್
ನಿನ್ನ ತನುಪ್ರಭಾಪ್ರಕರದಿಂದೆ ಬೆಳರ್ಪನದೇಕೆ ಮಾಡಿದೌ ೯೫

ಪಸರಿಸುವ ಗರ್ಭಸಂಪ್ರಾ
ಪ್ತಿಸುಧಾಸೇಚನೆಯೆ ಹೃದಯಶೋಕಾಗ್ನಿಯ ನಂ
ದಿಸೆ ಪೊಣ್ಮುತಿರ್ಪ ಧೂಮ
ಪ್ರಸರಮಿದೆನೆ ಕುಚದೊಳೇಕೆ ಕರ್ಪಂ ತಳೆದೌ ೯೬

ತೊಳಗುವ ತೆಳ್ವಸಿಱಿತೊಳ್ ಶಿಶು
ಬಳಿವಿನಮಭಿಷೇಕವಿಧಿಗೆ ನಿಲಿಸಿದ ನೀಲೋ
ತ್ಪಲಪಿಹಿತಹೇಮಕಲಶಂ
ಗಳಿವೆನಿಸಿದವಲ್ತೆ [1][ನೀಲಮುಖಕುಚ][1]ಯುಗಳಂ ೯೭

ಉದದರಾರ್ಭಕಂಗೆ ಮೇಲೆ
ತ್ತಿದ ಕುಚಯುಗಮೆಂಬ ಪೊನ್ನಮಳ್ಗೊಡೆಯಂ ತಾ
ಳ್ದಿದ ನೀಲದಂಡಮೆಂಬಂ
ದದೆ ಸೊಗಯಿಪ ಬಾಸೆಗರಸಿ ಲಜ್ಜಿಸವೇಡೌ ೯೮

---

1 ನಿನ್ನಕುಚಮುಖಯುಗಳಂ (ಕ)

ನುಡಿವೊಡೆ ನಾಚಿಕೆ ಗಡ ನಿನ
ಗುಡಿನೂಲ್ ಬಿಗಿವಿನೆಗಮೀ ವಳಿತ್ರಯಮೀಗಳ್
ಕಿಡುತಿರ್ಪುದು ಬಡತನಮಂ
ಬಿಡುತಿರ್ಪುದು ನಡುವುಮಿಂತಿದಕ್ಕೇಗೆಯೆವೌ ೯೯

ವ|| ಎಂದು ತಾರಾಪೀಡಂ ಕಾಡುತಿರ್ಪುದುಮಂತರ್ನಿಗೂಢಹಾಸ್ಯಂ ಶುಕನಾಸ ನಿಂತೆಂದಂ

ಇನಿತಾಯಸಮನೇಕೆ ಮಾಡಿದಪೆ ನಾಣ್ಚುತ್ತಿರ್ದಪಳ್ ದೇವಿ ಭೂ
ವನಿತಾಧೀಶ್ವರ ನಿನ್ನ ಮಾತುಗಳಿನೀಗಳ್ ನಾಡೆಯುಂ ವಂಶವ
ರ್ಧನೆ ಪೇಟ್ದಲ್ಲಿಯ ಮಾತ ನೀಂ ಮಱಿಯೆನುತ್ತಲ್ಲಿಂದೆ ನರ್ಮಪ್ರಿಯಾ
ಭಿನುತಾಳಾಪದೆ ನೀಡುಮಿರ್ದು ಬಟಿಯಂ ಪೋದಂ ಪ್ರಧಾನೋತ್ತಮಂ ೧೦೦

ವ|| ಇತ್ತಲ್ ಸನ್ನಿಹಿತ ಗರ್ಭದೋಹದ ಸಂಪಾದನದಿಂ ವಿಳಾಸವತೀಮಹಾದೇವಿಯಂ ಪ್ರಮುದಿತೆಯಪ್ಪಂತು ನೆಗಱುತ್ತುಮಿರೆ ಕೆಲವಾನುಂ ದಿವಸದೊಳ್ ಪ್ರಸವಸಮಯಪುಣ್ಯದಿನಮಾಗೆ ಗಣಕಗಣಂ ಗೃಹೀತಛಾಯಾಮಾನರಾಗಿ ಶುಭಲಗ್ನಮಂ ಪಾರುತ್ತಮಿರ್ಪನ್ನೆಗಂ

ಒದವಲ್ ನಿಜತೇಜಂ ಘನ
ದೊದವಿಂ ನವಮೇಘಮಾಲೆಗುದಯಿಪ ತೆಱದಿಂ
ಹೃದಯಾನಂದಂ ಭುವನದೊ
ಳೊದವಲ್ಕೆ ವಿಳಾಸವತಿಗೆ ಸುತನುದಯಿಸಿದಂ ೧೦೧

ವ|| ಅಂತಾ ಮಹಾತ್ಮಜಾತಜನನೋತ್ಸವದೊಳ್ ಸರಭಸಪ್ರಧಾವಿತ ಪರಿಜನ ಚರಣ ಸಂಕ್ಷೋಭಕ್ಷುಣ್ಣಕ್ಷಿತಿತಳಮುಂ ಭೂಪಾಲಾಭಿಮುಖ ಪ್ರಸೃತ ಕಂಚುಕಿ ಸಹಸ್ರಸಮ್ಮರ್ದನಿಷ್ಪಿಷ್ಯಮಾಣಕುಬ್ಜವಾಮನಗಣಮುಂ ವಿಷ್ಫಾರ್ಯಮಾಣಾಂತಃಪುರಜನಾಭರಣ ಝುಂಕಾರಮನೋಹರಮುಂ ಪೂರ್ಣಪಾತ್ರಹರಣವಿಲುಠ್ಯಮಾನವಸನಭೂಷಣಮುಂ ಸಂಕ್ಷೋಭಿತ ನಗರಮುಮೆನಿಸಿ ಮಹಾಸಂಭ್ರಮಂ ವಿಜೃಂಭಿಸುವುದುಮಂಭೋಧಿಗಂಭೀರದುಂದುಭಿಧ್ವಾನಪುರಸ್ಸರಮಾಗಿ ರಾಜಮಂದಿರದೊಳ್ ಮೃದುಮೃದಂಗಶಂಖಕಹಳಾರಾವನಿರ್ಭರಪಟಹರವಂಗಳೆಸೆಯೆ ಅನೇಕಸಹಸ್ರಜನಸಂಕುಲಂಗಳಿಂ ತ್ರಿಭುವನಮೆಲ್ಲಮಂ ತೆಕ್ಕನೆ ತೀವುವಾನಂದ ಬಹುಳಕೋಲಾಹಲಂ ನೆಗೆಯೆ ಸಮಸ್ತಸಾಮಂತಸಂತತಿಯುಮಶೇಷಾಂತಃಪುರಮುಮುಖಿಳರಾಜಲೋಕಮುಂ ಆಬಾಲಗೋಪಾಲ ಪ್ರಕೃತಿಯೆಲ್ಲಮುಮತಿಹರ್ಷನಿರ್ಭರತೆಯಿಂ ಭೋರ್ಗರೆದಾರ್ದು ನಲಿದು ನರ್ತಿಸುತ್ತಮಿರೆ

ಉದಯಿಸೆ ಚಂದ್ರಂ ನೆಲೆವೆ
ರ್ಚಿದರ್ಣವಂ ಘೂರ್ಣಿಪಂತೆ ಘೋರೆಂದೋರಂ
ದದೆ ಭುವನಮ್ಮೈದೆ ಘೂರ್ಣಿಸಿ
ದುದದೆತ್ತಂ ರಾಜಪುತ್ರಜನನೋತ್ಸವದೊಳ್ ೧೦೨

ವ॥ ಅಂತಾ ಸಮಯದೊಳ್

ಶುಕನಾಸ ಸಮನ್ವಿತನು
ತ್ಸುಕಹೃದಯಂ ನೃಪತಿ ಸುತಮುಖಾಲೋಕನ ಕೌ
ತುಕದಿಂ ಬಂದಂ ಮೌಹೂ
ರ್ತಿಕೋಪದಿಷ್ಟ ಪ್ರಶಸ್ತಲಗ್ನೋದಯದೊಳ್ ೧೦೩

ವ॥ ಆಗಳ್ ಮಣಿಮಯ ಕಲಶವಿಲಸಿತಮುಂ ವಿವಿಧಪುತ್ರಿಕಾವಿಚಿತ್ರಮುಂ
ಪಲ್ಲವನಿವಹನಿರಂತರಮುಂ ಕಾಂಚನಮಯಕಮುಲಮುಸಲಹಲಕಲಿತಮುಂ ಸಿತಕುಸುಮ
ಮಿಶ್ರಿತದೂರ್ವಾಪ್ರವಾಳಾಲಂಕೃತಮುಂ ವ್ಯಾಘ್ರಚರ್ಮಸಾಂದ್ರಮುಂ ವಂದನ
ಮಾಲಾಂತರಾಳಘಟಿತ ಘಂಟಾಗಣಮುಮೆನಿಸಿದ ಸೂತಿಕಾಭವನ ದ್ವಾರದೇಶದೊಳ್
ನಿವಾರಿತಪರಿವಾರನಾಗಿ ಶುಕನಾಸಸಮನ್ವಿತಂ ಪುಗುವಲ್ಲಿ ಉತ್ತಾನವಿನಿಹಿತವರಾಟಕ
ಪ್ರಕರದಂತುರಂಗಳುಂ ವಿವಿಧವರ್ಣರಾಗರುಚಿರ ಕಾರ್ಪಾಸಕುಸುಮಲಾಂಛಿತಂಗಳುಂ
ಕುಸುಂಭಕೇಸರಲವಾಶ್ಲೇಷಲೋಹಿತಮುಖಂಗಳುಮಾಗಿ ರಂಜಿಸುವ ರಂಗವಲ್ಲಿಗಳುಮಂ
ವಿಕಚಪಕ್ಷಮಂಡಿತಶಿಖಂಡಿವಾಹನನುಂ ಆಲೋಲಲೋಹಿತಪಟಪತಾಕನುಂ ಉಲ್ಲಸಿತ
ಶಕ್ತಿದಂಡನುಮೆನಿಸಿದ ಕಾರ್ತ್ತಿಕೇಯನುಮಂ ಅಲಕ್ತಕಪಟಳ ಪಾಟಳರಪ್ಪ ಸೂರ್ಯಾಚಂದ್ರ
ಮಸರುಮಂ ಕುಂಕುಮಪಂಕಪಿಂಜರೀಕೃತಂಗಳುಂ ಊರ್ಧ್ವಪ್ರೋತಕನಕಮಯಯವ
ನಿಕರಂಗಳುಂ ಅವಿರಳಗೌರಸಿದ್ಧಾರ್ಥಪ್ರಕರಂಗಳುಮೆನಿಸಿದ ಮೃಣ್ಮಯಂಗಳಪ್ಪ ಘಟಿಕಾಕ
ದಂಬಂಗಳುಮಂ ಚಂದನರಸಧವಳಿತಭಿತ್ತಿಭಾಗಾಂಚಿತ ಪಂಚರಾಗವಿಚಿತ್ರಚೇಲಕಳಾಪ
ಚಿಹ್ನಂಗಳುಮಂ ವರ್ಧಮಾನಕಪರಂಪರೆಗಳುಮಂ ಇನ್ನುಮನೇಕ ಪ್ರಸವಗೃಹಮಂಡ
ನಂಗಳುಮಂ ಸಂಪಾದಿಸುವ ಪುರಂಧ್ರಿಯರೊಳಂ ಗುಗ್ಗುಳಫಣಿಕಂಚುಕವಿಷಾಣರೇಣು
ಗಳಿಂದೆ ಕರ್ವೊಗೆಯಿಡುವ ಸರ್ವರಕ್ಷಾಧೂಪ ಧೂಮಂಗಳೊಳಂ ಶಾಂತ್ಯುದಕಮುಂ ತಳಿವವ
ನೀವೃಂದಾರಕವೇದಘೋಷಣಂಗಳೊಳಂ ಮಾತೃಗಣಪೂಜಾವಿಧಾನತತ್ಪರರಾದ ಧಾತ್ರೀ
ಜನಂಗಳೊಳಂ ಮಂಗಳಮಂ ಪಾಡುವ ಶುದ್ಧಾಂತವೃದ್ಧಾಂಗನೆಯರೊಳಂ ಕನಕದಂಡಾಗ್ರ
ಮಂಡಿತಮಾಗಿ ಬೆಳಗುವ ಮಂಗಳಪ್ರದೀಪಂಗಳೊಳಂ ಉತ್ಖಾತಾಸಿಲತಾಸನಾಥಪಾಣಿ
ಗಳಪ್ಪ ರಕ್ಷಾಪುರುಷರೊಳಮೆಸೆವ ಸೂತಿಕಾಗೃಹಮಂ ತಾರಾಪೀಡನರೇಂದ್ರಂ ಪುಗುವುದುಂ
ಪ್ರಸವಪರಿಕ್ಷಾಮಪಾಂಡುಮೂರ್ತಿಯಪ್ಪ ವಿಳಾಸವತೀ ಮಹಾದೇವಿಯುತ್ಸಂಗದೊಳ್
ತನ್ನ ಬೆಳಗೆ ಬೆಳಗಾಗೆ

ಉದಯದ ಕೆಂಪಿನಿಂ ಪುದಿದದೊಂದಿನಬಿಂಬಮೊ ಸಂಜೆಗೆಂಪಿನಿಂ
ಪುದಿದ ಸುಧಾಂಶುಮಂಡಳಮೊ ಮೇಣಿದರಲ್ಕೆಯೊಳಾದರಾಗದಿಂ
ಪುದಿದರುಣಾರವಿಂದಚಯಮೋ ತಳಿರ್ಗೊಂಚಲ ತಳ್ತ ಕೆಂಪಿನಿಂ
ಪುದಿದಮರಾವನೀರುಹಮೊ ಪೇೞೆನೆ ಬಾಲಕನಾದಮೊಪ್ಪಿದಂ ೧೦೪

ಎಳವಿಸಿಲಿಂ ಪವಳದ ಕುಡಿ
ದಳಿರಿಂ ಮಾಣಿಕದ ಬೆಳಗಿನಿಂ ನಿರ್ಮಿಸಿದಂ
ನಳಿನಭವನೆಂಬಿನಂ ಕ
ಣ್ಗೊಳಿಸಿರ್ದಂ ಜಿತಕುಮಾರನೆಂಬ ಕುಮಾರಂ ೧೦೫

ಸಹಜ ವಿಭೂಷಣದಂತಿರೆ
ಮಹನೀಯಕ್ಷುಣ್ಣಲಕ್ಷಣಂ ಮಿಸುಗೆ ಶುಭಾ
ವಹನೆನಿಸಿದನಂ ಕಂಡಂ
ಮಹಾತ್ಮನಂ ಸುತನನಕ್ಕಱಿಂದಾ ಮಹಿಪಂ ೧೦೬

ವ|| ಅಂತು ಕಂಡು

ಅಡಿಗಡಿಗಾನಂದಾಶ್ರುಗ
ಳಿಡೆವಿಡದುಣ್ಮುತ್ತಿರಲ್ಕೆ ನಿಡುಗ[1][ಣ್ಮಲರಿಂ][1]
ಪಿಡಿವಂದದೆ ಕುಡಿವಂದದೆ
ನುಡಿವಂದದೆ ಸುತನನಕ್ಕಱಿಂದೀಕ್ಷಿಸಿದಂ ೧೦೭

ವ|| ಆಗಳ್ ಶುಕನಾಸಂ ಕುಮಾರನಂಗಪ್ರತ್ಯಂಗಂಗಳಂ ಪ್ರೀತಿವಿಸ್ತಾರಿತ ಲೋಚನನಾಗಿ ನೋಡಿ ನರೇಂದ್ರಂಗಿಂತೆಂದಂ,

ದೇವ ಪೆಱತಾವುದವ್ಯ
ಕ್ತಾವಯವದೊಳಂ ಕುಮಾರನುನ್ನತಿಕೆಯನು
ದ್ಭಾವಿಸುತಿರ್ದಪ್ಪು[2] [ದಂ ಪರಿ] [2]
ಭಾವಿಸು ನೀಂ ಚಕ್ರವರ್ತಿಚಿಹ್ನೋತ್ಕರಮಂ ೧೦೮

ಪೆಱೆನೊಸಲೊಳ್ ಬಿಸತಂತುವ
ತೆಱದಿಂ [3] [ಮಿಱುಗಿದಪುದೂರ್ಣೆ] [3] ಭವನಾಂತರಮಂ
ನೆಱೆ ಧವಳಿಸುತಿರ್ದಪುದೀ
ತುಱುಗೆಮೆಗಣ್ಬೆಳಗು ಪುಂಡರೀಕೇಕ್ಷಣನಾ ೧೦೯

1 ಜೊಡ್ಡಣರಿಂ (ಕ) 2 ದಿಂತಿದೆ (ಕ) 3 ಮಿಱುಗಿಪುದು ಪೂರ್ಣ (ಕ)

ದರದಳಿತ ಕಮಲಕುಟ್ಮಳ
ಪರಿಮಳವೆನಿಸಿರ್ದ ಸಹಜಮುಖ ಸೌರಭಮಂ
ಬರೆ ಪೀರುತಿರ್ಪುದೆಂಬಂ
ತಿರೆ ನಾಸಿಕ ನೀಳ್ಪವೆತ್ತುದೀ ಬಾಲಕನಾ ೧೧೦

ಅರುಣೋತ್ಪಲದಳ ಲೋಹಿತ
ಕರಂಗಳೊಳ್ ಶಂಖಚಕ್ರ ಚಿಹ್ನಂಗಳನಾಂ
ತಿರೆ ಮುರವೈರಿಯ ಕರದಂ
ತಿರೆ ಕರಮೆಸೆದಪುದು ಕರಯುಗಂ ಬಾಲಕನಾ ೧೧೧

ಕರಿತುರಗಾತಪತ್ರ ಶತಪತ್ರಪರಿಸ್ಫುಟರೇಖೆಗಳ್ ಮನೋ
ಹರತರಮಾಗೆ ಕಲ್ಪತರುಕೋಮಲಪಲ್ಲವದಂತೆ ಮೆಲ್ಪಿನಿಂ
ಪೊರೆದನರೇಂದ್ರವೃಂದಮಣಿಮೌಳಿಕದಂಬಕಚುಂಬನೋಚಿತಂ
ಚರಣಯುಗಂ ಮನಂಗೊಳಿಸುತಿರ್ದಪುದಿಂತಿದೆನಲ್ ಕುಮಾರನಾ ೧೧೨

ನಂದನರುದಿತಂ ಹೃದಯಾ
ನಂದಮನೆನಗೊದವಿಸುತ್ತಮಿರ್ದಪುದಿಂತೀ
ದುಂದುಭಿ ಗಭೀರನಾದದಿ
ನೆಂದಿಂತಾ ಮಂತ್ರಿ ಪೇೞುತಿರೆ ತತ್ಕ್ಷಣದೊಳ್ ೧೧೩

ವ॥ ಅಂತಃಪುರದ್ವಾರದೇಶದೊಳಿರ್ದ ರಾಜಲೋಕಮೆಲ್ಲಮಂ ಸಂಭ್ರಮಂ ಬೆರಸು ತೊಲಗಲೊರ್ವಪುರುಷಂ ಪ್ರಹೃಷ್ಟವದನಂ ತ್ವರಿತಗತಿಯಿಂ ಬಂದು ಪೊಡಮಟ್ಟು ಬಿನ್ನಪಮೆಂದಿಂತೆಂದಂ

ದೈವವಿಧಿರ್ಚಿಬಂದುದು ಜಗಜ್ಜಯಮುಮಂ ತಳೆ ದೇವ ರೇಣುಕಾ
ದೇವಿಗೆ ರಾಮನುತ್ಸವದೆ ಪುಟ್ಟಿದವೋಲ್ ಶುಕನಾಸಮಂತ್ರಿಸಂ
ಭಾವಿತೆಯಪ್ಪ ಪಾರ್ವತಿ ಮನೋರಮೆಗತ್ತ ಭವತ್ಪ್ರಸಾದದಿಂ
ದೀ ವರಲಗ್ನದೊಳ್ ತನಯನತ್ಯಧಿಕೋತ್ಸವಮಾಗೆ ಪುಟ್ಟಿದಂ ೧೧೪

ಅರಸಂ ಕಲ್ಯಾಣಪರಂ
ಪರೆ ಸಮನಿಸಿತೆಂದು ತೆಗೆದು ತಳ್ಕೈಸುತ್ತುಂ
ಸರಭಸಮೊಲವಿಂ ಸಚಿವೋ
ತ್ತರೀಯಮಂ ಪೂರ್ಣಪಾತ್ರಮೆಂದೆ ಕೊಂಡಂ ೧೧೫

ವ|| ಅನಂತರಮೊಸಗೆವಾತಂ ಪೇೞ್ದವಂಗೆ ಮಚ್ಚುಗೊಟ್ಟಲ್ಲಿಂದೆೞ್ದು ಪೊಱ ಮಟ್ಟು ನೋೞ್ಪನ್ನಗಮಲ್ಲಿ ಕ್ವಣಿತಮಣಿನೂಪುರ ಸಹಸ್ರಮುಖರಿತ ದಿಗಂತಮುಂ ಅತಿ ರಭಸೋಪಚಲಿತ ಮಣಿವಲಯಾವಳೀ ವಿಳಸಿತಭುಜಲತಾಪ್ರತಾನಮುಮುತ್ತಾನಕರತಳ ನಳಿನಮುಂ ವ್ಯದಿತ ಕರ್ಣಪೂರಪಲ್ಲವಮುಂ ಅನ್ಯೋನ್ಯಾಂಗದಸಂಘಟ್ಟನಸಂದಷ್ಟಪಾಟಿ ತೋತ್ತರೀಯಮುಂ ನಿಜಾಂಗರಾಗರಂಜಿತವಸನಮುಂ ಅವಶಿಷ್ಟಮಕರಿಕಾಪತ್ರ ಲೇಖಮುಂ ಆಲೋಲಹಾರಲತಾಸ್ಫಾಲಿತಕುಚಕುಂಭಸ್ಥಳಮುಂ ಸಿಂಧೂರತಿಲಕಾರುಣಿತ ಚಿಕುರನಿಕುರಮುಂ ಪಿಷ್ಟಾತಪಾಂಸುಪುಂಜಪಿಂಜರಿತಕೇಶಪಾಶಮುಂ ಪ್ರನೃತ್ತ ಖಂಜ ಮೂಕ ಕುಬ್ಜ ವಾಮನ ಕಿರಾತಜನಪುರಸ್ಸರಮುಮುತ್ತರೀಯಾಂಶುಕಾಕೃಷ್ಟ ಜರ ತ್ಕಂಚುಕಿನಿಕಾಯಮುಂ ವೀಣಾವೇಣು ಮುರಜ ಕಾಂಸ್ಯತಾಳಲಯಾನುಗತಮೆನಿಸಿ ದಂತಃಪುರವಿಳಾಸಿನೀಜನಮುಂ ಪ್ರಚಲನ್ಮಣಿಕುಂಡಲಾಹತ ಗಂಡಮಂಡಲಮುಂ ಘೂರ್ಣ ಮಾನ ಕರ್ಣೋತ್ಪಲಮುಂ ಅಧೋವಿಗಳಿತ ವಿಲೋಲ ಶೇಖರಮುಂ ಡೋಲಾಯಮಾನ ವೈಕಕ್ಷಕಕುಸುಮಮಾಲಮುಂ ಭೇರೀ ಮೃದಂಗ ಮರ್ದಳ ಪಟಹ ಕಹಳಾಶಂಖರವಜನಿತ ರಭಸಮುಮೆನಿಸಿದ ರಾಜಪರಿಜನಮುಂ ನೃತ್ಯಪ್ರವೃತ್ತ ಚಾರಣಗಣಮುಮೊಸಗೆಮುರು ಳ್ಕೊಂಡು ಭೋರ್ಗರೆದು ನಲಿದು ನರ್ತಿಸುತ್ತಮೊಡನೆ ಬರೆವರೆ.

ವಿವಿಧವಿಲಾಸಮಂ ತಳೆದು ಮಂಗಳಕೇಳಿಯನಟ್ಟುವಟ್ಟು ಮಾ
ನವಪತಿ ನೋಡುತಂ ಸಚಿವಮಂದಿರಮಂ ಪುಗುತಂದು ಸೂತಿಕಾ
ಭವನಮನೆಯ್ದಿ ಪೆರ್ಮೆಗನುರೂಪಮೆನಲ್ ನಿಜಮಂದಿರೋದ್ಗತೋ
ತ್ಸವಕಿದು ನಾಡೆಯುಂ ದ್ವಿಗುಣಮೆಂಬಿನಮುತ್ಸವಮಂ ನೆಗೞ್ಚಿದಂ ೧೧೬

ವ|| ಅಂತು ನೆಗೞ್ಚಿ ದಶಮದಿನ ಪುಣ್ಯಸುಮುಹೂರ್ತದೊಳ್ ಸುವರ್ಣಕೋಟಿ ಗಳಂ ದ್ವಿಜೋತ್ತಮರ್ಗಿತ್ತು ತದನಂತರದೊಳ್

ಮೊದಲೊಳ್ ಬಂದೞ್ಕಱಿಂದೀತನ ಜನನಿಯ ವಕ್ತ್ರಾಬ್ಜದೊಳ್ ಚಂದ್ರಮಂ ಪೊ
ಕ್ಕುದನಲ್ತೆ ಕಂಡೆ ನಾಂ ಸ್ವಪ್ನದೊಳೆನುತೆ ಮನಂಗೊಂಡು ತತ್ಸ್ವಪ್ನಸಾದೃ
ಶ್ಯದೆ ಚಂದ್ರಾಪೀಡನೆಂಬೀ ಮೊದಲ ಪೆಸರನಿಟ್ಟಂ ತನೂಜಂಗೆ ಮೂಲೋ
ಕದೊಳಂ ಮಾಂಗಲ್ಯತೂರ್ಯಧ್ವನಿ ಪಸರಿಸಿ ಪರ್ವುತ್ತಿರಲ್ ಸಾರ್ವಭೌಮಂ ೧೧೭

ಮನುಮಾರ್ಗದೊಳೇಕಾದಶ
ದಿನದೊಳ್ ತನಯಂಗೆ ವಿಪ್ರಜನಸಮುಚಿತಮಾ
ಯ್ತೆನೆ ಸಚಿವಂ ವೈಶಂಪಾ
ಯನನೆಂಬೀ ಪೆಸರನಿಟ್ಟನಧಿಕೋತ್ಸವದಿಂ ೧೧೮

ವ॥ ಅನಂತರಮೇಟ್ಟಿವಡೆದ ಪಾಡಿವದ ಚಂದ್ರಮನಂತೆ ಚಂದ್ರಾಪೀಡಂ ಪ್ರತಿದಿನಂ ಪ್ರವೃದ್ಧಮಾನನಾಗೆ ಚೂಡಾಕರಣಾದಿ ಕ್ರಿಯಾಕಲಾಪಮುಮಂ ಮಾಡುತ್ತಮಿರೆ ಶೈಶವಮಂ ಪತ್ತುವಿಡುವುದಂ ಕ್ರೀಡಾವ್ಯಸನಮುಗಲ್ವಂತು ಬಹಿರ್ನಗರದೊಳಮರಮಂದಿರಾನುಕಾರಿಯಪ್ಪ ವಿದ್ಯಾನಿಕೇತನಮಂ ಮಾಡಿಸಿ ನಿಖಿಳ ವಿದ್ಯಾಚಾರ್ಯರುಮಂ ಮಹಾಪ್ರಯತ್ನದಿಂ ನಿಲಿಸಿ ಶುಭದಿನದೊಳ್ ಧವಳಮಂಗಳಪ್ರಸಾಧನಾಲಂಕೃತನುಮಾಚಾರ್ಯಕುಲಪರಿವೃತನುಮಪ್ಪ ನಿಜನಂದನನಂ ವೈಶಂಪಾಯನಂ ಬೆರಸು ವಿದ್ಯಾಧಿಗಮನದೊಳ್ ಸಮರ್ಪಿಸಿ ಪಂಜರಸ್ಥಿತ ಮದಕೇಸರಿಕಿಶೋರಕದಂತೆಗೆಯ್ದಖಿಳ ವಿದ್ಯಾಭ್ಯಾಸಂಗೆಯ್ಸುತ್ತಮಿರೆ

ಪೊಳೆದೆಸೆವ ರತ್ನದರ್ಪಣ
ದೊಳಗೆ ತಳತ್ತಳಿಪ ತರಣಿಕಿರಣಾವಳಿವೊಲ್
ತೊಳಗಿ ಬೆಳಗಿದುವು ವಿದ್ಯಾ
ವಳಿ ನಿಜ[1][ನಂದನನ][1] ವದನಮಣಿದರ್ಪಣದೊಳ್ ೧೧೯

ವ॥ ಅಂತು ಸಕಳಕಳಾಕಳಾಪಮನಪ್ಪುಗೆಯ್ದು ಶಸ್ತ್ರಶಾಸ್ತ್ರದೊಳತ್ಯಂತ ಪರಿಣತನಾಗುತ್ತಮಿರೆಯಿರೆ

ವಿರಳಪರಿವಾರಪರಿವೃತ
ನರಸಂ ಮಾದೇವಿವೆರಸು ನಿಚ್ಚಂ ಬಂದಾ
ದರದಿಂದೆ ನೋಡಿ ಪೋಪಂ
ಗುರುಜನಪರಿವೃತನೆನಿಪ್ಪ ನಿಜನಂದನನಂ ೧೨೦

ಸಕಳಶ್ರಮಂಗಳಿಂದಂ
ವೃಕೋದರನ ತೆಱದಿನಂದು ಶೈಶವದೊಳ್ [2][ಲೋ
ಕಕೆ ಚಿತ್ರಮಪ್ಪಿನಂ][2] ರಾ
ಜಕುಮಾರಂ ತಾಳ್ದಿದಂ ಮಹಾಪ್ರಾಣತೆಯಂ ೧೨೧

ಲೀಲೆಯೊಳೆ ಪಿಡಿದು ನಿಲಿಪಂ
ವ್ಯಾಳೇಭಮನೊಂದು ಪೊಯ್ಲಿನಿಂ[3][ದಮೆ ಕಡಿವಂ
ತಾಳಂಗಳ][3] ನುರ್ಚಿಸುವಂ
ಶೈಲಶಿಲಾತಳಮನೆಳವೆಯೊಳ್ ನೃಪತನಯಂ ೧೨೨

---

1 ದಿಂ ವಿಬುಧ (ಕ) 2 ಲೋಕಿಕವಂತನೆಂಬಿನಂ (ಕ)
3 ಬಳೆಗಳಂವಂತಾಳಂಶವು (ಕ)

ಗುಣಮುಂ ರೂಪುಂ ವಿದ್ಯಾ
ಗುಣಮುಂ ತಳ್ಪೊಯ್ದು ತನ್ನೊಳೆಸೆಯಲ್ ವಿಬುಧಾ
ಗ್ರಣಿಯೆನಿಪ ಕುಮಾರನೊಳಂ
ದೆಣೆಯಾದಂ ಸಚಿವತನಯನಾ ಕ್ರಮದಿಂದಂ ೧೨೩

ಶುಕನಾಸಾರ್ಯಗುರುತ್ವದಿಂದೆ ಸಹಪಾಂಸುಕ್ರೀಡನಾಭ್ಯಾಸದಿಂ
ದೆ ಕಳಾಜ್ಞಾನವಿಶೇಷದಿಂದುಚಿತಸೇವಾಜಾತಚಾತುರ್ಯದಿಂ
ದೆ ಕರಂ ಚಿತ್ತಮನಪ್ಪುಗೆಯ್ದಖಿಳ ವಿಸ್ರಂಭಕ್ಕಮಾವಾಸಮಾ
ಗಿ ಕುಮಾರಂಗೆ ಮಹಾಪ್ರಧಾನತನಯಂ ಮಿತ್ರತ್ವಮಂ ತಾಳ್ದಿದಂ ೧೨೪

ದಿನಪತಿಯುಂ ದಿನಮುಂ ಬಿಡ
ದನುಬಂಧದಿನಗಲದಂತೆವೊಲ್ ಚಂದ್ರಾಪೀ
ಡನುಮಂತಾ ವೈಶಂಪಾ
ಯನನುಂ ಪದಪಿಂದಮೊರ್ವರೊರ್ವರನಗಲರ್ ೧೨೫

ಕಮಲವನಕ್ಕಿನೋದಯವಿರಳ್ಗಮೃತಾಂಶುಸಮುದ್ಗಮಂ ಸುರ
ದ್ರುಮಕೆ ನವಪ್ರಸೂನವಿಭವಂ ನವಿಲಿಂಗೆ ಕಲಾಪವರ್ಣಮಂ
ತಮರ್ದ ಮುಗಿಲ್ಗೆ ಶಕ್ರಧನುವೋಲ್ ಭುವನತ್ರಯಮಂಗಳಾಭಿರಾ
ಮಮಿದೆನೆ ರಾಜಸೂನುಗೆಸೆದತ್ತೆನಸುಂ ನವಯವ್ವನೋದಯಂ ೧೨೬

ಅವಸರಮಿದೆನಗೆನುತ್ತಭಿ
ನವಸೇವಕನಂತೆ ಮೆಲ್ಲಮೆಲ್ಲನೆ ಮದನಂ
ನವಯೌವನವಿಶ್ರುತ ಪೂ
ರ್ಣವಿಳಾಸಮನಂದು ಪೊರ್ದಲುದ್ಯತನಾದಂ ೧೨೭

ಸಿರಿಯೊಡನೊಂದಿ ಬಿತ್ತರಿಸಿದತ್ತುರಸ್ಥಳಮನ್ಯಭೂಮಿಪೋ
ತ್ಕರದೊಡನಾದಮೊಂದಿ ತನುವಾದುದು ಮಧ್ಯಮುದಾರತಾನಿರಂ
ತರತೆಯೊಳೊಂದಿ ನೀಳ್ದುದು ಭುಜದ್ವಿತಯಂ ಭುವನಾವಭಾಸಿ ಸ
ಚ್ಚರಿತದೊಳೊಂದಿ ಚೆಲ್ವನೊಳಕೊಂಡವು ಕಣ್ಮಲರ್ಗಳ್ ಕುಮಾರನಾ ೧೨೮

ತೊಳತೊಳತೊಳಗುವ ಷೋಡಶ
ಕಳೆಯಿಂ ಕಣ್ಗೊಳಿಪ ಚಂದ್ರನಂದದಿನತ್ಯು
ಜ್ವಳತನು ಷೋಡಶವರ್ಷಂ
ಗಳಿಂದೆ ಕಣ್ಗೆಸೆದನಂದು ಚಂದ್ರಾಪೀಡಂ ೧೨೯

ಚಂದ್ರಾಪೀಡನ ಜೈತ್ರಯಾತ್ರೆ

ವ॥ ಅಂತುಪಾರೂಢನವಯೌವನೋದಯನುಂ ಪರಿಸಮಾಪ್ತಸಕಲಕಲಾವಿಜ್ಞಾನನುಮಾದ ನಿಜನಂದನನಪ್ಪ ಚಂದ್ರಾಪೀಡನಂ ತಾರಾಪೀಡ ನರೇಂದ್ರಂ ಬರಿಸಲೆಂದು ಬಲಾಧಿಕೃತನಪ್ಪ ಬಲಾಹಕನೆಂಬನಂ ಬೆಸಸೆ ಬಹುತುರಂಗಪದಾತಿಬಲಪರಿವೃತನಾಗಿ ಬಲಾಹಕಂ ಕುಮಾರನಿರ್ದ ವಿದ್ಯಾನಿಕೇತನಕ್ಕೆವಂದು ದೌವಾರಿಕನಿವೇದಿತಂ ಪೊಕ್ಕು ವಿಬುಧಚಿಂತಾಮಣಿಯುಂ ಕಂಡವನಿತಳನಿಹಿತ ಚೂಡಾಮಣಿಯಾಗಿ ಪೊಡವಟ್ಟು ಸಮುಚಿತಾಸನದೊಳ್ ಕುಳ್ಳಿರ್ದು ವಿನಯಪುರಸ್ಸರಮಿಂತೆಂದಂ

ಎನ್ನ ಮನೋರಥಕ್ಕೆ ಪರಿಪೂರ್ತಿಯನೆಯ್ದಿಸೆ ಶಸ್ತ್ರಶಾಸ್ತ್ರಸಂ
ಪನ್ನತೆಯಿಂ ವಿರಾಜಿಸಿ ನಿರೀಕ್ಷಿಸಲು[1][ತ್ಸುಕೆಯರ್ಕಳಾಱದಪ][1]ರ್
ತನ್ನಯ ತಾಯ್ವಿರೆಂದು ಜನಕಂ ಬೞಿಯಟ್ಟಿದನಕ್ಕಱಿಂ ಪುರ
ಕ್ಕೆನ್ನಡೆತಂದು ದೇವ ಪಡೆ ಪೌರಜನಂಗಳ ಕಣ್ಗೆ ಪರ್ವಮಂ ॥ ೧

ಅದೆ ಪೊಱಗಿಂದ್ರಾಯುಧಮೆಂ
ಬುದೊಂದು ದಿವ್ಯಾಶ್ವಮಟ್ಟಿದಂ ನಿನಗೇಱ
ಲ್ಕದನನಿಲಗರುಡಜವಮೆನಿ
ಸಿದುದಂ ತ್ರಿಜಗಕ್ಕೆ ರತ್ನಮಂ ನಿಜಜನಕಂ ॥ ೨

ಜಳನಿಧಿಜಳದಿಂ ಪೊಱಮ
ಟ್ಟಿಳೆಗವತರಿಸಿದುದಯೋನಿಸಂಭವವೀ ಮುಂ
ಗಳಹಯವೆಂದೋಲೈಸಿದ
ನಿಳಾಧಿನಾಥಂಗೆ ಪಾರಶೀಕಾಧೀಶಂ ॥ ೩

ವ॥ ಅದಲ್ಲದೆಯುಂ ಮೂರ್ಧಾಭಿಷಿಕ್ತ ಪಾರ್ಥಿವಕುಲಪ್ರಸೂತರುಂ ವಿನಯೋಪಪನ್ನರುಂ ಕೋವಿದರುಂ ಕುಲಕ್ರಮಾಗತರುಮಪ್ಪ ರಾಜಪುತ್ರಸಹಸ್ರಮುಮಂ ನಿನಗೆ ಪರಿವಾರಾರ್ಥಮಟ್ಟಿದನವರೆಲ್ಲರುಂ ಪೊಱಗೆ ತುರಗಾರೂಢರ್ ಪ್ರಣಾಮಲಾಲಸರಾಗಿ ಬಾಗಿಲೊಳ್ ಪಾರ್ದಿರ್ಪರೆಂದು ಬಲಾಹಕಂ ಬಿನ್ನವಿಸುವುದುಂ ನೃಪರೂಪಚಂದ್ರಂ ತಂದೆಯಾಜ್ಞೆಯಂ ತಲೆಯೊಳ್ ತಾಳ್ದು ಪೊಱಮಡಲೆಂದಭಿನವ ಜಳಧರಧ್ವಾನ ಗಭೀರ ವಚನದಿನಿಂದ್ರಾಯುಧಮಂ ಪುಗಿಸೆಂದು ಬೆಸಸಿದಾಗಳ್

---

1 ತ್ಸುಕನಾಗುತಿರ್ದಪ (ಕ)

ಎರಡುಂ ಪಕ್ಕಂಗಳೊಳ್ ಕಾಂಚನ ಕಟಕ [1][ಖಲೀ][1] ನಾಗ್ರಸಂಲಗ್ನರೀರ್ವರ್
ಭರದಿಂದಂ ಕೀಲನೇಣಂ ತೆಗೆದುಬರೆ ಮಹೋದಗ್ರದೇಹಪ್ರಮಾಣಂ
ಬರೆಪೀರ್ವಂತೆತ್ತಮಾಕಾಶಮನನಿಲ ಜವೋದ್ರೇಕದಿಂ [2][ಪಾಜಃ ನೀಡುಂ
ಖುರಘಾತೋದ್ಧೂತ ಧಾತ್ರೀರಜಮತಿರುಚಿರಂ][2] ಬಂದುದಿಂದ್ರಾಯುಧಾಶ್ವಂ ೪

ಪಿರಿದೆನಿಪ ಭರದೆ ನಡೆಯಲ್
ಘುರುಘುರಿಸಲ್ ಘೋರಘೋಣವಿವರಂ ಕಿ [3][ಳಿರ
ಬ್ಬರದಿಂ][3] ತೀವಿದುದಾಶಾಂ
ತರಮುಂ ಜವದಿಂದೆ ಗರುಡನಂ ತರ್ಜಿಪವೋಲ್ ೫

ಸುರಚಾಪದಂತೆ ಸುಮನೋ
ಹರವರ್ಣಂ ತನ್ನೊಳೊಪ್ಪುತಿರೆ ರನ್ನದ ಪ
ಕ್ಕರೆಯಿಂದಂ ಕಣ್ಗೊಳಿಸುವ
ಕರಿಕಳಭದ ತೆಱದಿನೆಸೆದುದಾ ದಿವ್ಯಾಶ್ವಂ ೬

ಜಲಧಿಯೊಳಿರ್ದಮರ್ದಿನ ಮು
ಕ್ಕುಳನುಗುಳುತ್ತಿಳಿಗೆವಂದುದೆನಿಸಿ ಖಲೀನ
ಸ್ಖಲನಭವ ಬಹುಳಲಾಲಾ
ಜಲಮುಗುತಿರೆ ತರುಗರತ್ನಮೆಸೆದತ್ತಾಗಳ್ ೭

ತೊಡರ್ದುವು ಸಮುದ್ರದಿಂ ಪೊಱ
ಮಡುವವಸರದಲ್ಲಿ ಮಕೌಕ್ತಿಕಪ್ರಕರಮೆನಲ್
ಕಡುಪಿಂದೆ ರೋಮರೋಮದೆ
ಬಿಡದೆಸೆದುವು ಹರಿಗೆ ಬೆಮರಬಿಂದುಗಳಾಗಳ್ ೮

ಮೊಗದಿಂದಂ ನೇರ್ಪನಾಳ್ದಂತುರದಿನಗಲಿತಾದಂತೆ ಪಾರ್ಶ್ವಂಗಳಿಂ ನೂ
ಲ್ದೆಗೆದತ್ತೆಂಬಂತೆ ಪಾ [4][ಶ್ಚಾತ್ಯದೆ][4] ಸವಡಿಸಿತೆಂಬಂತಿರುದ್ಗ್ರೀವದಿಂಪ
ರ್ವುಗೆವೆತ್ತಂತ್ತುಂಗಕಾಂತಿ ಪ್ರಕರದೆ ಪಸರಿಪ್ಪಂತೆ ಮುಂಗಾಲ್ಗಳಿಂದಂ
ಮುಗಿಲಂ ಮುಟ್ಟಪ್ಪುದೆಂಬಂತತಿಜವಮಿದಿರೊಳ್ ಬಂದುದಿಂದ್ರಾಯುಧಾಶ್ವಂ ೯

---

1 ಮಣೀ (ಕ) 2 ನೂಱುನೂರ್ಘಾಸಿರಮಂ ಮೆಟ್ಟುತ್ತು ಪೊಂಬರೆ ನಿನಮಿದಿರಂ (ಕ)
3 ಕಿಲ್ಪಬ್ಬರದಿಂ (ಕ) 4 ಶ್ಚಾತ್ಸದೆ (ಕ)

[1][ಪಿರಿದೆಂದಾಯಿಂದ್ರನುಚ್ಚೈಶ್ರವಮನೆ][1] ನಡೆನೋಡುತ್ತಮಿರ್ಕೆಂದು ರತ್ನಾ
ಕರಮುಲ್ಲೋಲಂಗಳಿಂದಂ ಮಱಿಯಿಸಿ ಜನಪಂಗಿಂದ್ರಚಾಪಪ್ರಭಾಭಾ
ಸುರಮಂ ತ್ರೈಲೋಕ್ಯಸಾಮ್ರಾಜ್ಯದ ಫಳಮೆನಿಪೀ ವಾಜಿಯಂ ಕೊಟ್ಟನೆಂದಾ
ದರದಿಂದಂ ನೋಡಿದಂ ವಿಸ್ಮಯಮೊದವುವಿನಂ ಚಿತ್ರದೊಳ್ ರಾಜಪುತ್ರಂ ೧೦

ಪರಿಹರಿಸಿದನಿಲ್ಲಿನ್ನುಂ
ಗರುಡನನೇಱುವುದನಜಿತನೆಂದಿಂದೆನಗ
ಚ್ಚರಿಯಾಗುತಿ[2][ರ್ಪುದಿಲ್ಲೀ
ಹರಿಯಂ ತಾನಱಿದನಾ][2] ಗದಿರ್ಕುಮೆ ಪಿರಿದುಂ ೧೧

ಭುವನತ್ರಯದುರ್ಲಭಮೆನಿ
ಸುವ ವಸ್ತುಗಳಿನ್ನುಮೊಳವೆ ಭುವನದೊಳಿಂತ
ಕ್ಕುವೆ ದಿವಿಜರಾಜವಿಭವ
ಕ್ಕವಿದಗ್ಗಳಮೆನಿಸಿದತ್ತು ತಂದೆಯ ವಿಭವಂ ೧೨

ಇದಱ ಮಹಾಪ್ರಾಣತೆಗಿ
ನ್ನಿದಱೊದವಿದ ತೇಜದೇೞ್ಗೆಗಚ್ಚರಿಯಾಗಿ
ರ್ದುದು ದೇವತಾತ್ಮನೋ ಪೇ
ೞದು ದಿಟಮೇಱಲ್ಕೆ ಶಂಕೆ ಪುಟ್ಟಿದುದೀಗಳ್ ೧೩

ವ|| ಮುನ್ನಂ ಸ್ಥೂಳಶಿರನೆಂಬ ತಾಪಸನಿತ್ತ ಶಾಪದಿನಖಿಳ ಲೋಕದೊಳ್ ರೂಪಿಂದಚ್ಚರಿಯಾದಚ್ಚರಿಯಪ್ಪ ರಂಭೆ ಸುರಲೋಕಮಂ ಬಿಟ್ಟು ಮೃತ್ತಿಕಾವತಿಯೆಂಬ ರಾಜಧಾನಿಯೊಳಿರ್ಪ ಶತಧನ್ವನೆಂಬರಸನ ಮನೆಯೊಳ್ ಗೋಳಿಗೆಯಾಗಿ ಪಲವುಕಾಲಮಿರ್ದಳದುಮಲ್ಲದೆಯುಂ ಪಲಬರ್ ಮಹಾತ್ಮರ್ ಮಹಾಮುನಿಜನ ಶಾಪದಿಂ [3][ಪರಿಹೃತಪ್ರಭಾವರಾಗಿ][3] ಪಲವುಮಾಕೃತಿಗಳಂ ತಳೆದು ಮರ್ತ್ಯಲೋಕದೊಳ್ ಚರಿಯಿಸುತಿರ್ಪರೆಂಬುದಮಂ ಕೇಳ್ದುದಿಲ್ಲಕ್ಕುಮೆ ಎನುತ್ತಮಾ ದಿವ್ಯಾಶ್ವಮನಚ್ಚರಿವಟ್ಟು ನೋಡುತ್ತಮಿರ್ದು

ಇದು ಸಾಮಾನ್ಯದ ವಾಜಿಯುಲ್ತು ಪಿರಿದುಂ ನೋಡಲ್ ಮುನೀಂದ್ರೋಗ್ರಶಾ
ಪದಿನೊರ್ವಂ ದಿವಿಜಂ ನಿಜಾಕೃತಿಯನಾದಂ ಬಿಟ್ಟು ದಿವ್ಯಾಶ್ವರೂ
ಪದನೀ ಲೋಕದೊಳಿರ್ದನೆಂದು ಬಗೆಯುತ್ತಲ್ಲಿಂದಮೆಟ್ಟಿಂದನಂ
ದುದಿತಾರ್ಕಪ್ರಭನೇಱಲೆಂದು ಹಯಮಂ ರಾಜಾಧಿರಾಜಾತ್ಮಜಂ ೧೪

---

1 ಪಿರಿದುಂ ದೇವೇಂದ್ರನುಚ್ಚೈಶ್ರವಮನೆ (ಕ) 2 ತಿರ್ದುದಲ್ಲಿಂ ಹರಿಯಂ ತಾಂಹರಿವೊಲಾ (ಕ) 3 ಹರಪ್ರಭರೂಪಾಗಿ (ಕ)

ಕ್ಷಮೆಯಂ ಮಾ[1][ಡಶ್ವ ನೀನಾರ][1]ಱಿಯೆನದಱಿ ನಿಂತೀಮದಾರೋಹಣಾತಿ
ಕ್ರಮಕೆಂದಾಮಂತ್ರಣಂಗೆ[2][ಯ್ವುದಮದು ಬಗೆಗೊಂಡಂತಿರಾಕೇಕರಾಲೋ][2]
ಕಮುಖಂ ನೋಡುತ್ತಮೇಱಿಲ್ ಕರೆವ ತೆಱದೆ ಹೇಷಾರವಂ ಪೊಣ್ಮೆ ಭೂಭಾ
ಗಮನತ್ಯುತ್ಸಾಹದಿಂ ದಕ್ಷಿಣಖುರದೆ ಬೆಱಂಟಿತ್ತು ದಿವ್ಯಾಶ್ವಮಾಗಳ್ ೧೫

ಘನಹೇಷಿತದಿಂ ದತ್ತಾ
ಭ್ಯನುಜ್ಞನಾದಂತೆ ಲಘುತೆಯಿಂದೇಱಿದನಾ
ಸನದೃಢತೆ ರೂಪುವಡೆದ
ತ್ರೈನಲಿಂದ್ರಾಯುಧಮನಂದು ಚಂದ್ರಾಪೀಡಂ ೧೬

ವ॥ ಅಂತದನೇಱಿ ದಿವ್ಯವಾಜಿಯ ಮಹಾಜವಮಂ ಕಂಡು ಭುವನತ್ರಯಮಂ ಪ್ರಾದೇಶಮಾತ್ರಮಾಗಿ ಬಗೆದು ಪೊಱಮಡುವನ್ನೆಗಮಲ್ಲಿ

ಮಿಸುಗುವ ರವಿಬಿಂಬಂಗಳ್
ಮುಸದಲಗುಗಳಂ ಪಳಂಚಿ ಮಿಂಚುವ ಕಾಂತಿ
ಪ್ರಸರದೆ ನೀಲೋತ್ಪಲಕುಮು
ದಸಮಾಜನನಿಱಿಸಿ ಪೊಳೆದುವಂಬರತಳದೊಳ್ ೧೭

ಪಿರಿದೆನಿಪ ಲಯಸಮುದ್ರದ
ತೆರೆಗಳ್ ನೊರೆವೆರೆದು ನೆರೆದು ನೆಗೆದಪುವೆಂಬಂ
ತಿರೆ ಫೇನಪುಂಜಧವಳಿತ
ತುರಂಗಸಂದೋಹಸೈನ್ಯಮೆಸೆದತ್ತಾಗಳ್ ೧೮

ವ॥ ಅಂತು ಚಂದ್ರೋದಯಕ್ಷುಭಿತಸಾಗರದಂತೆ ಬಾಗಿಲೊಳ್ ಘೂರ್ಣಿಸು ತಿರ್ದ ರಾಜಲೋಕಮಹಮಹಮಿಕೆಯಿಂ ಪ್ರಣಾಮಲಾಲಸರಾಗೆ ಬಲಾಧಿಕಾರಿಯಪ್ಪ ಬಲಾಹಕನವರವರ ಪೆಸರ್ಗೊಂಡು ಪೊಡಮಡಿಸೆ

ಎಱಗುವ ನರೇಂದ್ರನಿಕರದ
ಮಿಱುಗುವ ಮಣಿಮೌಳಿ[3][ಮಂಜುಳ][3]ಪ್ರಭೆ ತನ್ನೊಳ್
ತುಱುಗೆ ನೃಪನಂದನಂ ಕೆ
ನ್ನಿಱಿಮುಗಿಲೊಳ್ ಪೊಳೆವ ಚಂದ್ರಮಂಗೆಣೆಯಾದಂ ೧೯

1 ಡೂದನೀನಿನ್ನ (ಕ) 2 ಯ್ದುದು ಬಗೆಗೊಡವೋವಲ್ಕೆ ಕರಾಳೋ (ಕ)
3 ಮಾಣಿಕ (ಕ)

ವ॥ ತದನಂತರಮಾ ನರೇಂದ್ರಚಂದ್ರಮಂ ಯಥಾಕ್ರಮದಿಂ ತುರಂಗಾರೂಢನಪ್ಪ ವೈಶಂಪಾಯನಂಬೆರಸು ಪುರಾಭಿಮುಖನಾಗಿ ಬಿಜಯಂಗೆಯ್ವಾಗಳ್

ಇದು ರಾಜದ್ರಾಜಲಕ್ಷ್ಮೀನಿವಸನವಿಲಸತ್ಪುಂಡರೀಕೋದಯಂ ಮೇ
ಣಿದು ನಾನಾಕ್ಷೋಣಿಪಾಲೇಕ್ಷಣ ಕುಮುದವಿಕಾಸೇಂದುಬಿಂಬೋದಯಂ ಮೇ
ಣಿದು ಭೂಭಾರಾರ್ಪಣಪ್ರೋದ್ಧತಫಣಿಪಫಣಾಮಂಡಲಾಭೋಗಮೆಂಬಂ
ದದೆ ರಾಜೇಂದ್ರಾತ್ಮಜಂಗೆತ್ತಿದದು ಮಣಿಮಯಾದಭ್ರಶುಭ್ರಾತಪತ್ರಂ ೨೦

ಅಲರ್ದಿರ್ದ ಪುಂಡರೀಕದ
ಕೆಲದೊಳ್ ವರ್ತಿಸುವ ಹಂಸಯುಗಮೆನೆ ಭೂಭೃ
ತ್ತಿಲಕನ ಸಿತಾತಪತ್ರದ
ಕೆಲದೊಳ್ ನರ್ತಿಸಿತು ಧವಳಚಾಮರಯುಗಳಂ ೨೧

ಚಮರೀಜಕಾಂತೆಯರ್ ಸಿತ
ಚಮರದ ವಿಕ್ಷೇಪದಿಂದಮೆಸೆದರ್ ಭೂಪೋ
ತ್ತಮವರತನುವಿಂದಮತಿ
ಕ್ರಮಿಸುವ ಲಾವಣ್ಯರಸದೊಳೋಲಾಡುವವೋಲ್ ೨೨

ವ॥ ಅದಲ್ಲದೆಯುಂ ಪಲತೆಱದ ಪಱೆಗಳೆಡೆಯೊಳ್ ಬಾಜಿಸುವ ಪದಿರಪಱೆಗಳುಮೊತ್ತುವ ಸನ್ನೆಗಾಳೆಗಳುಂ ಪೂರಿಸುವ ಶಂಖಂಗಳುಂ ಓದುವ ವಂದಿಮಾಗಧರ ಜಯಜಯಾದಿ ಮಧುರರವಂಗಳುಮೆಸೆಯೆ ರಾಜಧಾನಿಗಭಿಮುಖನಾಗಿ ಮನುಜೇಂದ್ರಚಂದ್ರನೆಯ್ತರ್ಪಾಗಳ್

ಭುವನಜನಮೆಲ್ಲಮೊರ್ಮೆಯೆ
ಕವಿದುದೆನಲ್ ತಮ್ಮತಮ್ಮ ನಿಖಿಳವ್ಯಾಪಾ
ರವ[1][ನುೞಿದ][1]ರಸನ ನೋಡುವ
ತವಕದೆ ಮಿಗೆ ನಗರಲೋಕಮೆಯ್ದಿತ್ತಾಗಳ್ ೨೩

ಸುದತೀರತ್ನ ಕರೀಂದ್ರರತ್ನ ಹಯರತ್ನಾನೀಕರತ್ನಾದಿರ
ತ್ನದಮೇಳಾಪಕದಿಂದವೀಕ್ಷಣಸಮುತ್ಥಾನೇಕಸಂಮರ್ದಸಂ
ಮದಕೋಲಾಹಲದಿಂದಮಾ ನಗರಿ[2][ನಾನಾ][2]ಕ್ಷ್ಮಾಧರಕ್ಷೋಭಮು
ಣ್ಮಿದ ರತ್ನಾಕರಲಕ್ಷ್ಮಿವೋಲ್ ನೃಪವರಂ ಬರ್ಪಾಗಳೇನೊಪ್ಪಿತೋ ೨೪

---

1 ಮೊಲ್ಲ (ಕ) 2 ಹೇಮ (ಕ)

ಶರದಭ್ರಾಕಾರ ಸೌಧಪ್ರಕಟವಿಘಟಿತಾಭ್ಯರ್ಣನಾನಾಗವಾಕ್ಷೋ
ತ್ಕರದಿಂದಂ ನೋಡುವಂತುದ್ಗತ ವಿತತಪತಾಕಾಂಚಲಾನೀಕದಿಂದಂ
ಕರೆವಂತಾಬದ್ಧ ಶೋಣೋಪಲರುಚಿವಿಲಸತ್ತೋರಣಾನೀಕನಿರ್ಯ
ತ್ಕರದಿಂದಾಲಿಂಗಿಪಂತಾ ನಗರಿ ನೃಪವರಂಗೆಡ್ಡಮಾಗಿರ್ದುದಾಗಳ್ ೨೫

ವ॥ ಅಂತೆಸೆವ ನಗರೀರತ್ನರಚಿತೋತ್ತುಂಗ ಮಂಗಳತೋರಣಂಗಳಂ ನುಸುಳುತ್ತುಂ ಬರ್ಪ ರೂಪವಿದ್ಯಾಧರನಂ ನೋಡಲೆಂದು ನೆಲೆಮಾಡಂಗಳನೇಱಿದ ನೀಱೆಯರಲಕ್ತಕ ರಾಗರಂಜಿತಪದಪಲ್ಲವಂಗಳಿ ನವನಿತಳಮೆಲ್ಲಂ ಪಲ್ಲವಿಸಿದಂತೆಯುಂ ಆ ನಿತಂಬಿನಿಯರ ವದನೇಂದುಬಿಂಬನಿಕುರಂಬದಿನಂಬರತಳಂ ಚಂದ್ರಮಂಡಲಮಯಮಾದಂತೆಯುಂ ಆ ಲಾವಣ್ಯವತಿಯರಾತಪಕ್ಕೆತ್ತಿದ ಕೆಂದಳಂಗಳ ಸಂದಣಿಯಿಂ ದಿಕ್ಚಕ್ರಮೆಲ್ಲಂ ಕೆಂದಾವರೆಗೊಳನಲರ್ದಂತೆಯುಮಾ ರಮಣೀಯ ರಮಣಿಯರಾಭರಣಕಿರಣಕಳಾಪಂಗಳಿಂ ತರಣಿಕಿರಣಂಗಳೆಲ್ಲಮಿಂದ್ರಚಾಪಲತಾವಿತಾನದಂತಿರೆಯುಮಾ ಕಾಮಿನಿಯರ ಕಮನೀಯಲೋಚನಮರೀಚಿಗಳಿಂದಂ ದಿನಂ ವಿಕಸಿತನೀಲನೀರಜಾಕರದಂತಿರೆಯುಮತಿಕೌತುಕದಿಂದೀಕ್ಷಿಸುವಲ್ಲಿ

ನೆಲೆಮೊಲೆಯಿಂದಂ ಮೇಲುದು
ತೊಲಗಲ್ ಹಾರಾಂಶುನಂ ನಿಜಾಂಶುಕವೆಂದಂ
ದಲಘುಕುಚೆ ಮೇಲ್ಕೊಳುತ್ತಾ
ಕುಲತೆಯನೆಯ್ತಂದು ನೋಡಿದಳ್ ನೃಪವರನಂ ೨೬

ವ॥ ಮತ್ತಮುಪರಿಸಮಾಪ್ತಪ್ರಸಾಧನೆಯರಾಗಿ ಬಂದು ನೋಡುವಲ್ಲಿ ಮತ್ತಮೊರ್ವಳ್

ಉಡೆ ಜೋಲಲ್ ನೂಲ್ ಸಡಿಲಲ್
ಮುಡಿ ಪರೆಯಲ್ ಹಾರಲತೆಯನಕ್ಷಾವಳಿಯಂ
ಪಿಡಿವಂತೆ ಪಿಡಿದು ತುರಿಪದೆ
ನಡೆತಂದಳ್ ಕಾಮಯೋಗಿನೀವಿಭ್ರಮದಿಂ ೨೭

ಪಿರಿದುಮೆರ್ದೆ ಡವಕೆವಾಜಿಸು
ತಿರೆ ಭಂಗಂಬೆತ್ತು ಹಾರಲತೆ ಘನಕುಚದೊಳ್
ಕರವಿಕ್ಷೇಪದೆ ನರ್ತಿಸೆ
ನರೇಂದ್ರನಂದನನನೊಲ್ದು ನೋಡಿದಳೊರ್ವಳ್ ೨೮

ವ॥ ಮತ್ತಲ್ಲಿ

ಇನಿತಂ ಪಾಱಿಱನ್ನಂ ತ್ವರಿತಗತಿಕೆ
ಪಿಡಿ ಮೇಲುದನೀಗಳ್ ಲಲಿತಲತಿಕೆ
ಸೋರ್ಮುಡಿಯಂ ಸಾವಗಿಸಕ್ಕ ನಿನ್ನ
ಜೋಲ್ದುಡೆಯಂ ನೋಡೆಲೆ ಮರುಳೆ ಮುನ್ನ
ಆವೊಕ್ಕಪುದೆಲೆ ಮದನಾಂಧೆ ಮುಂದೆ
ಮೌಕ್ತಿಕನಿಕರಂ ನಿಜಹಾರದಿಂದೆ
ಕಾಂಚೀದಾಮಮನೋಸರಿಸು ಮುಗ್ಧೆ
ಬಿಡದೆ[1][ನೀನೆನಿಸೀಕ್ಷಿಸುವೆ ವಿದಗ್ಧೆ][1]
ತೊಲಗುತ್ತಿದೆ ಘನಕುಚಯುಗಳದಿಂದೆ
ನೋಡಿದೆ[2][ಸಿಚಯಂ][2] ನಿನ್ನಯ ಮುಂದೆ
ಎರ್ದೆ ಪಡಪಡಪಾರ್ದಪುದೇಕೆ ಕೆಳದಿ
ತೋಳುಗಳಂ ಪಿಡಿ ಮೃದುಹಸ್ತತಳದಿ
ನೆಡಪಿದಪೆ ತನ್ವಿ ಪೂವಲಿಗಳಲರ
ಆಸವ ಮದದಿಂ ನಗಿಸಿದಪೆ ಪಲರ
ನವ[3][ಯೌವನೆ ಮರುಳಾದೆಯೀತಂಗೆ][3]
ಗುಱಿಮಾಡಿದಪೆ ನಿನ್ನ ಮನುಮತಂಗೆ
ಮನದೊಳ್ ಸಂಕಲ್ಪಿತ ಸುರತಸುಖಮ
ನನುಭವಿಸುವೆಯದಱಿಂ ನೋಡು ಮುಖಮ
ನುಸುರಿಕ್ಕುವುದುಮನೇಂ ಮಱೆದೆ ಕಾಂತೆ
ಬಂದಪನದೆ ಮುಂದೆ ಜಯಂತನಂತೆ
ಮುತ್ತಿನ ಬೆಳ್ಗೊಡೆಗಳ ಬಳಗದೊಳಗೆ
ಚಾಮರತತಿ ಕೆಲದೊಳೆ ಮಿಳಿರ್ದು ತೊಳಗೆ
ಸೊಗಯಿಸುತುಂ ಚಂದ್ರಾಪೀಡದೇವ
ನುದಿತಾರ್ಕಸಹಸ್ರಸಮಪ್ರಭಾವ
ನಾನೋಡಿದಪನಿತ್ತ ನೃಪಕುಮಾರ
ನಾ ಲಾವಣ್ಯರೂಪ ಜಿತಕುಮಾರ
ನಾ ವೈಶಂಪಾಯನನೊಡನೆ ನೋಡ
ನಸುನಗೆ ದಶನಪ್ರಭೆಯಿಂದ ಕೂಡ
ಲಾ ದೆಸೆ ಧವಳಿಸಿದವೊಲಾಯ್ತು ರಯ್ಯ

1 ನೀಸಂಭಾವಿಸದಸೆವಿದಗ್ಧೆ (ಕ) 2 ಸಾಚರಿ (ಕ) 3 ಯೌವ್ವನಮನುರಿದೇ ತಂಗೆ (ಕ)

ಸಾ ವೀಳಯಕೆ ನೀಡಿದಪಂ ಕಯ್ಯ
ನೀ ಕಮಳಾಂಕಿತ ಕರತಳಮನಾವ
ಸುಂದರಿ ಪಿಡಿವಳೊ ಧನ್ಯೆಯವಳೀ ವ
ಸುಂಧರೆಯೊಳೆನುತ್ತಂ ರಾಗದಿಂದೆ
ಮೆಯ್ಯಱಿಯದೆ ಪಲರುತ್ಕಂಠೆಯಿಂದೆ
ಸವಿಳಾಸಸೋನ್ಮಾದ ಸಾಭ್ಯಸೂಯ
ಸಸ್ಪೃಹ ಸೇರ್ಷ್ಯಾದಿ ರಸಾನುಮೇಯ
ರಮಣೀಯಾಳಾಪಕಳಾಪದಿಂದ
ಮೆಸೆದುದು ರಮಣೀತತಿ ಚೆಲ್ವಿನಿಂದ ೨೯

ವ॥ ಮತ್ತಲ್ಲಿ,

ಕರೆದಪರೊಲ್ದು ಭೂಷಣಗಣಧ್ವನಿಯಿಂ ನವರತ್ನರಂಜಿತಾ
ಭರಣನಿಕಾಯರಶ್ಮಿತತಿಯಿಂ ಬರೆಸುತ್ತಿಪರಾಕುಲೇಕ್ಷಣೋ
ತ್ಕರಪುಟದಿಂದೆ ಪೀರ್ದಪರೆನಲ್ ನಗರಾಂಗನೆಯರ್ ಮಹೋತ್ಸವಂ
ದೊರೆದುದೆನುತ್ತಲಂಪು ಮಿಗೆ ನೋಡಿದರಾ ಮನುಜೇಂದ್ರಚಂದ್ರನಂ ೩೦

ಒಲವಿಂ ನೋಡುವ ಭಾವಿಪ
ಲಲನಾಸಂಕುಲದ ಹೃದಯದೊಳ್ ನೆಲಸಿದುದು
ಜ್ವಲಮಣಿದರ್ಪಣತಲದೊಳ್
ನೆಲಸುವವೊಲ್ ರೂಪು ರೂಪವಿದ್ಯಾಧರನ! ೩೧

ವ॥ ಮತ್ತಮಾ ಲತಾಂಗಿಯರ್ ಸೂಸುವ ಕುಸುಮಮಿಶ್ರಲಾಜಾಂಜಲಿಗಳನಿದಿರ್ಗೊಳುತ್ತಂಜನಗಿರೀಂ[1] [ದ್ರಮಾಲಾಮಲಿನ][1] ಕುಂಜರಘಟಾಭಿರಂಜಿತಮುಂ ಉದ್ದಂಡಧವಳಾತಪತ್ರಸಂಛನ್ನಮುಮನೇಕದ್ವೀಪಾಂತರಾಗತ ದೂತಸಮಾಕುಳಮುಮಪ್ಪ ರಾಜಭವನದ್ವಾರದೊಳಿಂದ್ರಾಯುಧದಿಂದವನಿತಳಕ್ಕವತರಿಸಿ ವೈಶಂಪಾಯನಕರಕಮಲನಿಹಿತಪ್ರಕೋಷ್ಠನುಂ ಬಲಾಹಕೋಪದಿಶ್ಯಮಾನಮಾರ್ಗನುಮಾಗಿ ಪೊಕ್ಕನೇಕಸಹಸ್ರಜನಸಂಕುಳಮಪ್ಪ ಸಪ್ತಕಕ್ಷ್ಯಾಂತರಗಳನತಿಕ್ರಮಿಸಿ ಬರ್ಪಲ್ಲಿ

ಸುರಚಾಪಾಕಾರ ನಾನಾಮಣಿಮಯ ವಿಲಸತ್ತೋರಣಂ ಚಿತ್ರಚೀನಾಂ
ಬರರಮ್ಯಂ ಚಂದ್ರಶಾಲಾಪ್ರಕರಪರಿವೃತಂ [2][ವೇದಿಕಾ][2] ನೀಕಶೋಭಾ
ಕರಮಾತ್ತೋದಾತ್ತ ಕೂಟಂ ವಿಘಟಿತಮಣಿವಾತಾಯನಾತ್ಯಂತಕಾಂತಂ
ಕರುಮಾಡಂ ನಾಡೆ ಚೆಲ್ವಂ ತಳೆದುದು ಪಲವುಂ ಬಳ್ಳಿಮಾಡಂಗಳಿಂದಂ ೩೨

---

1 ದ್ರಾಗ್ರಾಯಮಾನಮಾದ (ಕ) 2 ಭೂಮಿಕಾ (ಕ)

ಕರುಮಾಡದ ಬಾಗಿಲನೆ
ಯ್ತರೆ ತಂದೆಯ ಕೆಲದೊಳೆಸೆವ ರಾಜಕುಮಾರೋ
ತ್ಕರಮಾ ನರೇಂದ್ರತನಯಂ
ಗಿರದಿದಿರೇಟ್ಟಿ ತ್ತು ರಭಸವೊದವಲ್ಕಾಗಳ್ ೩೩

ಅಹಮಹಮಿಕೆಯಿಂದೆಱಗುವ
ಮಹೀಶಶತಮುಕುಟಕಾಂತಿ ತನ್ನಪದಾಂಭೋ
ರುಹಲಕ್ಷ್ಮಿಯಿಂದೆ ಶೋಭಾ
ವಹಮಾಗೆ ನರೇಂದ್ರನಂದನಂ ಪುಗುತಂದಂ ೩೪

ಲಲನಾಸಂವೀಜನೋದ್ಯಚ್ಚಮರರುಹಚಯೋದ್ಭಾಸಿತಂ ರಾಜಹಂಸೋ
ಜ್ವಲಚೀನಪ್ರಚ್ಛದಾಚ್ಛಾದಿತಶಯನತಲಾಲಂಕೃತಂ ಲೋಲವೀಚೀ
ಲುಳಿತಸ್ವರ್ವಾಹಿನೀವಾರಿಯೊಳಮರಗಜಂ ಕೇಳಿಯಿಂದಿರ್ಪವೊಲ್ ಕಂ
ಗೊಳಿಸಿರ್ದಂ ಚಂಡಬಾಹಾಬಲನಿಭೃತಮಹೀಮಂಡಲಂ ಸಾರ್ವಭೌಮಂ ೩೫

ವ || ಅಂತಿರ್ದ ನಿಜಜನಕನಂ ನಯರತ್ನಾಕರಂ ದೂರದೊಳೆ ಕಂಡವನಿತಳ ನಿಹಿತ ಚೂಡಾಮಣಿಯಾಗಿ ಪೊಡಮಡುವುದುಂ

ಪರಮಾಶೀರ್ವಾದದಿಂದಂ ಪರಸಿ ಮಗನನಾನಂದದಿಂ ಕಂದ ಬಾಯೆಂ
ದಿರದಾನಂದಾಶ್ರುಬಿಂದುಪ್ರತತಿ ಸುರಿಯೆ ರೋಮೋದ್ಗಮಂ ಕೂಡೆ ಪೊಣ್ಮು
ತ್ತಿರೆ ಬಾಹುದ್ವಂದ್ವದಿಂದಂ ಬರೆತೆಗೆದುಱಿ ತಳ್ಕೈಸೆಯುಂ ತಾತಪಾದಾಂ
ಬುರುಹಕ್ಕಾನಮ್ರನಾದಂ ನಿಖಿಳನೃಪಸಭಾಂಭೋಜಿನೀರಾಜಹಂಸಂ ೩೬

ವ || ಅಂತು ವಿನಯೋನ್ನತಿವೆತ್ತ ನಿಜನಂದನನನರ್ಘಾಸನದೊಳಾ ನೃಪಂ ಕುಳ್ಳಿ ರಿಸೆಯುಮೆಂತುಮೊಲ್ಲದಾತ್ಮೀಯತಾಂಬೂಲಕರಂಕವಾಹಕಪ್ರಸಾರಿತಾಂಬರಾಚಲಮು ಮಂ ಚರಣಾಗ್ರದಿಂ ನೂಂಕಿ ಚಂದ್ರಾಪೀಡಂ ನೆಲದೊಳ್ ಕುಳ್ಳಿರೆ

ವಿನಯದಿನಾ ವೈಶಂಪಾ
ಯನನೆಱಗೆ ನರೇಂದ್ರನಟ್ಮಿಱಿಂದಪ್ಪಲ್ಕಾ
ತನುಮಾಗಳ್ ತಾರಾಪೀ
ಡನರೇಂದ್ರಾತ್ಮಜನ ಪಕ್ಕದೊಳ್ ಕುಳ್ಳಿರ್ದಂ ೩೭

ಅಡಿಗಡಿಗಾತ್ಮನಂದನನ ಮುಖೇಂದುವನುತ್ಸವದಿಂದೆ ನೋಡುತಂ
ನುಡಿಯುತಮಾ ನೃಪಂ ಕರಸರೋರುಹದಿಂ ಚುಬುಕಾಗ್ರಭಾಗಮುಂ
ಪಿಡಿದು ನಿಜಾಂಬಿಕಾಪದಪಯೋಜಮನೀಕ್ಷಿಸು ಪೋಗು ಸಂತಸಂ
ಬಡಿಸು ವಿಲೋಕನೋತ್ಸುಕೆಯರಂ ವಿನಯಾರ್ಣವ ನಿನ್ನ ತಾಯ್ವಿರಂ ೩೮

ವ॥ ಎಂದು ನಿಜಜನಕಂ ಬೆಸಸಲಂತೆಗೆಯ್ವೆನೆಂದು ವೈಶಂಪಾಯನದ್ವಿತೀಯನುಂ ಅಂತಃಪುರಪ್ರವೇಶಯೋಗ್ಯಪರಿಮಿತಪರಿಜನೋಪದಿಶ್ಯಮಾನಮಾರ್ಗನುಮಾಗಿ ಶುದ್ಧಾಂತ ಕಾಂತಾಪ್ರಧಾನೆಯಪ್ಪ ನಿಜಾಂಬಿಕೆಯ ಮನೆಯಂ ಪುಗುವಲ್ಲಿ ವಸನಾಭರಣಕುಸುಮಪಟ ವಾಸತಾಂಬೂಲತಾಳವೃಂತಾಂಗರಾಗಭೃಂಗಾರುಧಾರಿಣಿಯರಪ್ಪವಾರವಿಳಾಸಿನಿಯರೊಳಂ ಉಭಯಪಾರ್ಶ್ವೋದ್ಧೂತಧವಳಚಾಮರೆಯರಪ್ಪ ಜಮರೀಜಕಾಂತೆಯರೊಳಂ ಪುರಾಣ ಕಥಾಕಥನತತ್ಪರಪರಿವ್ರಾಜಕಾಸಮೂಹದೊಳನುಪಾಸ್ಯಮಾನೆಯಾಗಿರ್ದಳಂತು ಮಲ್ಲ ದೆಯುಂ

ಎರಡುಮಚಲಂಗಳೆಡೆಯೊಳ್
ಪರಿವಮರನದೀಪ್ರವಾಹದಿಂದೆಸೆವ ವಸುಂ
ಧರೆಯಂದದಿನಲಘುಪಯೋ
ಧರವಿಲಸಿತಹಾರಲತಿಕೆ ಸತಿ ಸೊಗಯಿಸಿದಳ್ ೩೯

ಪೊಳೆವ ರವಿಬಿಂಬದೊಳ್ ಬಂ
ದೊಳಪೊಕ್ಕಮೃತಾಂಶುಬಿಂಬಮೆನೆ ನಿಜಶಯ್ಯಾ
ತಳನಿಹಿತ ರತ್ನದರ್ಪಣ
ತಳದೊಳ್ ಮಾರ್ಪೊಳೆದುದಾನನಂ ಮಾನಿನಿಯಾ ೪೦

ವ॥ ಅಂತಿರ್ದಳಂ ಗೆಂಟೆನೊಳ್ ಕಂಡು ವಿನಯರತ್ನಾಕರಂ ಸಾಷ್ಟಾಂಗಪ್ರಣತ ನಾಗೆ

ಅರಸಿ ನಲವರಕೆಯಿಂದಂ
ಪರಸುತ್ತಿಂದೆನ್ನ ತಂದೆ ಬಂದನೆನುತ್ತಂ
ತೊರೆದೆನಸುಂ ಮೊಲೆವಾಲುಗು
ತರೆ ತನಯನನಪ್ಪುಕೆಯಿಂದವಪ್ಪಿದಳಾಗಳ್ ೪೧

ವ॥ ಅನಂತರಂ ವೈಶಂಪಾಯನನುಮನಪ್ಪುಕೆಯಿಂ ತಳ್ಕೈಸಿ ವಿಳಾಸವತಿಮಹಾ ದೇವಿ ಕುಳ್ಳಿರ್ದು ವಿನಯದಿಂ ನೆಲದೊಳ್ ಕುಳ್ಳಿರ್ದ ವೈಶಂಪಾಯನನುಮಂ ಮಗುಳೆ ಮಗುಳೆ ತೆಗೆದು ತಳ್ಕೈಸುತಮಿರ್ದು

ವಿನಯದೆ ನಿನ್ನ ತಂದೆಯ ಪ್ರಸಾದದಿನಿಂತು ಸಮುಸ್ತಸತ್ಕಳಾ
ವನಿತೆಯರೊಳ್ ಮಹೋತ್ಸವದೆ ಕೂಡಿದಿರಿಂತಿರೆ ಬೇಗದಿಂ ವಧೂ
ಜನದೊಡಗೂಡಿಮೆಂದು ಪಿರದಪ್ಪುಕೆಯಿನೊಳ್ ಪರಸುತ್ತಮಾತ್ಮನಂ
ದನ ಶುಕನಾಸನಂದನನನಾ ಸತಿ ಕಣ್ಮಲರಾರೆ ನೋಡಿದಳ್ ೪೨

ವ || ತದನಂತರಂ ಸಮಸ್ತಜನನಿಯರುಮಂ ಯಥಾಕ್ರಮದಿನಭಿವಂದಿಸಿ ರಾಜಮಂದಿರಮಂ ಪೊಱಮಟ್ಟು ಸಕಲರಾಜಲೋಕಂಬೆರಸು ಮಹಾಮಾತ್ಯ ಶುಕನಾಸನರ ಮನೆಗೆ ವಂದು

ತಂದೆಗೆ ತಾಯ್ಗೆ ಮಹೋತ್ಸವ
ದಿಂದಂ ಪೊಡಮಡುವ ತೆಱದೆ ಸಚಿವಂಗಂ ತ
ತ್ಸುಂದರಿ ಮನೋರಮೆಗಮಾ
ನಂದದೆ ಪೊಡಮಟ್ಟನಂದು ಚಂದ್ರಾಪೀಡಂ ೪೩

ವ || ಅಂತು ಪೊಡವಟ್ಟು ಪರಮಾಶೀರ್ವಾದಂಗಳನಾಂತು ತದನಂತರದೊಳ್ ಪೊಱಮಟ್ಟು ಬರ್ಪಾಗಳ್

ತನಗೆಂದು ಬೇಱಱ ಮುನ್ನಮೆ
ಜನಕಂ ಮಾಡಿಸಿದ ನೆಲೆಯ ಕರುಮಾಡಂ ಕಾಂ
ಚನಕಲಶತತಿಯಿನೆಸೆದುದು
ಕನಕಾದ್ರಿಯನಲ್ಲಿ ಕಡೆದು [1][ತಂದಿರಿ][1] ಸಿದವೋಲ್ ೪೪

ವ || ಅದಲ್ಲದೆಯುಮಾಬದ್ಧ ಚಂದನಮಾಲಾಭಿರಂಜಿತಮುಮುದ್ಗತಸಿತಪತಾಕಾಸಹಸ್ರಸಂಕುಳಮುಮಭ್ಯಾಹತಮಂಗಳಪಟುಪಟಹರವಾಪೂರಿತಮುಂ ಉಪಪಾದಿತಾಶೇಷಗೃಹಪ್ರವೇಶಮಂಗಳುಮುಮಪ್ಪ ನಿಜಮಂದಿರಮಂಪೊಕ್ಕು ನರೇಂದ್ರಚಕ್ರಮಂ ಯಥಾಕ್ರಮದಿಂ ಮನ್ನಿಸಿ ಮಜ್ಜನಭೋಜನಾದಿ ದಿವಸವ್ಯಾಪಾರಮಂ ತೀರ್ಚಿ

ಭುವನತ್ರಯಮುಂ ಕೈಸಾ
ರ್ದುವಿದಱಿಂನೆಂಬಂತೆ ತನ್ನ ಮಣಿಮಯಶಯ್ಯಾ
ಭವನಾಂತರಾಳದೊಳ್ ಕ
ಟ್ಟವೇಟ್ದಿನಿಂದ್ರಾಯುಧಾಶ್ವಮಂ ನೃಪತನಯಂ ೪೫

ವ || ಅಂತು ತುರಂಗರತ್ನಮನೆ ನೋಡಿ ಪೊೞ್ತುಗಳೆಯುತ್ತಮಿರ್ಪುದುಂ

ದಿನಲಕ್ಷ್ಮೀಕಾಂತೆ ಮೆಯ್ವೆಟ್ಟೞಿದು ಗಗನರಂಗಾಗ್ರದಿಂ ವಾರುಣೀಸೇ
ವನೆಗೆಯ್ತರ್ಪಲ್ಲಿ ಕಾಲಿಂ ನವಮಣಿಮಯ ಮಂಜೀರಕಂ ನುಣ್ಚುತಂ ತೀ
ವಿ ನಿಜಪ್ರದ್ಯೋತದಿಂ ಪಶ್ಚಿಮಶಿಖರಿಶಿರೋಭಾಗದೊಳ್ ಬೀೞ್ದುದೆಂಬಂ
ತಿನಬಿಂಬಂ ರಂಜಿಸಿತ್ತಸ್ತಮಯಸಮಯದೊಳ್ ಮುಕ್ತಪಾದಾವಲಂಬಂ ೪೬

---

1 ಕಂಡರಿ (ಕ)

ಇನನ ರಥಚಕ್ರಮಾರ್ಗವ
ನನುಸರಿಸಿ ಜಲಪ್ರವಾಹಮೇ ಪರಿದಪುದೆಂ
ಬಿನಮೆಸೆದತ್ತಪರದಿಶಾಂ
ಗನೆಯತ್ತಲ್ ರಾಗರುಚಿರ ದಿವಸಾಲೋಕಂ ೪೭

ನಳಿನೀ ಪರಿಮಳ ಪರಿಚಿತ
ಲುಳಿತ ಭ್ರಮರಾಳಿ ಕಾಲಪಾಶಂಗಳವೋಲ್
ಬಳಸೆ ಕೊರಲಂ ರಥಾಂಗಂ
ಗಳಗಲ್ದುವು ವಿರಹತಾಪವಿಹ್ವಲಿತಂಗಳ್ ೪೮

ತೆಗೆದಂಬುಜಮಧುರಸಮಂ
ಪಗಲೆಲ್ಲಂ ಕರಪುಟಂಗಳಿಂ ಪೀರ್ದುದನಾ
ಗಗನಪಥಶ್ರಮದಿಂ ರವಿ
ಮಗುಳ್ಚಿದಂತಾಯ್ತು ಮಿಸುಪ ಕೆಂಬಿಸಲುಗಳುಂ ೪೯

ರವಿಮಂಡಲಂ ಪ್ರತೀಚೀ
ಯುವತೀಕರ್ಣಾವತಂಸರಕ್ತೋತ್ಪಲದಂ
ತೆವೊಲಿರೆ ಚೆನ್ನೈದಿಲ್ಗೊಳ
ದವೊಲಾಯ್ತು ಸಂಜೆಗೆಂಪಿನಿಂ ಗಗನತಳಂ ೫೦

ಇನನಿನಿಯನೆನಿಪನಗಲಲು
ಮನಿತಜಿಃಕೂಳಂ ಪುಗಿಸಿ ಮುಚ್ಚಿ ಮಧುಕರನೊಳ್ ಪ
ದ್ಮಿನಿ ನೆರೆದಳೆಂದೊಡೇಂ ಕಾ
ಮಿನಿಯೊಲವಂ ನಚ್ಚುವವನೆ ಗಾವಿಲನಲ್ತೆ ೫೧

ವ॥ ತದನಂತರಂ ಕೃಷ್ಣಾಗರುಪಂಕಲತೆಗಳಂತೆ ತಿಮಿರರೇಖೆಗಳ್ ನಿಮಿರೆಯುಂ ಪ್ರಾಸಾದಲಕ್ಷ್ಮಿಯ ಕರ್ಣೋತ್ಪಲಂಗಳಂತೆ ವಾತಾಯನವಿವರಂಗಳೊಳ್ ಪಾರವತಂಗಳೆಸೆಯೆಯುಂ ಚಂಪಕದೊಳ್ಪಾರಂಗಳಂತೆ ದೀಪಿಕಾಸಹಸ್ರಂಗಳ್ ಮಣಿಬದ್ಧಭೂಮಿಭಾಗಂಗಳೊಳ್ ಮಾರ್ಪೊಳೆಯೆಯುಂ ರವಿವಿರಹಾರ್ತನಳಿನೀವಿನೋದನಾಗತಬಾಲಾತಪಂಗಳಂತೆ ದೀಪಿಕಾಲೋಕಂಗಳ್ ಭವನದೀರ್ಘಿಕೆಗಳೊಳ್ ಪ್ರಜ್ವಳಿಸೆಯುಂ ಯಾಮಿಕನಂತಾರೋಪಿತಚಾಪನಾಗಿ ಕುಸುಮಚಾಪನಂತಃಪುರಮಂ ಪೊಕ್ಕು ತೊಳಲೆಯುಂ ನವಪಲ್ಲವಂಗಳಂತೆ ಸರಾಗಂಗಳಾದ ದೂತೀವಚನಂಗಳ್ ಕಾಂತಾಜನಕ್ಕೆ ಕರ್ಣಪೂರಂಗಳಾಗೆಯುಂ ಆ ನಿಶಾಸಮಯದೊಳ್ ನೃಪರೂಪಚಂದ್ರಂ ಸಂಧ್ಯಾಸಮಯೋಚಿತನಿಯಮಮಂ ನಿರ್ವರ್ತಿಸಿ ಮಣಿಮಯಮಂಟಪದೊಳ್ ವೈಶಂಪಾಯನದ್ವಿತೀಯನೋಲಗದೊಳಿರೆ

ಗುಣನಿಧಿಯಂ ನೋಡಲ್ಕಾ
ಫಣೀಂದ್ರನುತ್ಕಂಠನಾಗೆ ತಲೆದೋರ್ಪ ಫಣಾ
ಮಣಿರುಚಿಗಳಂತೆ ಪೊಳೆದುವು
ಮಣಿಭೂಮಿಯೊಳೆಸೆವ ದೀಪಿಕಾಪ್ರಕರಂಗಳ್ ೫೨

ವ॥ ಅಂತಾ ಸಮಯದೊಳ್

ಉದಿತೇಂದುಪ್ರಭೆ ರಾಹುವಿಂಗಗಿದು ಕಾಂತಾರೂಪಮಂ ತಾಳ್ದಿ ಬಂ
ದುದೊ ಮೇಣ್ ರಾಜಕುಲಾಧಿದೇವತೆಯೆ ಬಂದಳ್ ಮೂರ್ತಿಗೊಂಡೆಂಬಿನಂ
ಸುದತೀರತ್ನಮದೋರ್ವಳೆಟ್ಟಿರುತಮಿರ್ದಳ್ ಸುತ್ತಲುಂ ನಾಡೆ ಪೊ
ಣ್ಮಿದ ಲಾವಣ್ಯದೆ ಕಾಂಚನಾಕರರಜೋವಿಸ್ತಾರವಂ ಮಾಳ್ಪವೋಲ್ ೫೩

ಲಲಿತ ರಣನ್ಮಣಿನೂಪುರ
ವಿಲಸಿತ ಪದಯುಗಳದಿಂದೆ ಸುಂದರಿ ಕೂಜ
ತ್ಕಲಹಂಸಾಕುಲಕಮಲಾ
ಕಲಿತಸರೋಜಿನಿಯ ತೆಱದಿನೆಟ್ಟಿರುತಿರ್ದಳ್ ೫೪

ಲಲಿತಾಂಗಿ ಮೆಲ್ಲಮೆಲ್ಲನೆ
ನಳಿತೋಳಂ ಬೀಸೆ ಮಿಸುಗುವಸಿಯುಗುರ್ಗಳ ನು
ಣ್ಬೆಳಗು ನಿಮಿರ್ದೆಸೆದುವೊಗೆದ
ಗ್ಗಲಿಸುವ ಲಾವಣ್ಯರಸದ ಧಾರಾವಳಿವೋಲ್ ೫೫

ಮಿಸುಗುವ ಬೆಳ್ದಿಂಗಳ್ ದೆಸೆ
ದೆಸೆಯೊಳ್ ಪಸರಿಸುವ ತೆಱದೆ ಹಾರಮರೀಚಿ
ಪ್ರಸರಂ ಬಳಸುತ್ತಿರೆ ಬ
ರ್ಪಸಿಯಳ್ ಪಾಲ್ಗಡಲೊಳೆಸೆವ ಸಿರಿಯಂ ಪೋಲ್ತಳ್ ೫೬

ಗಿರಿರಾಜಂ ಗೌರಿಯನಾ
ಹರಂಗೆ ಶುಶ್ರೂಷೆಗೆಯಿಸಲೊಡಗೊಂಡೊಯ್ವಂ
ತಿರೆ ಸತಿಯ ಪೆಱಗೆ ಕಿಱಿದಂ
ತರದೊಳ್ ಕೈಲಾಸನೆಂಬ ಕಂಚುಕಿ ಬಂದಂ ೫೭

ವ॥ ಅಂತಾ ಕಾಂತೆವೆರಸು ಕಂಚುಕಿ ಬಂದು ಪೊಡವಟ್ಟು ಕಯ್ಗಳಂ ಮುಗಿದು ದೇವಾ ಬಿನ್ನಪಮೆಂದಿಂತೆಂದಂ

ಮುನಿಸಿಂ ತ್ವಜ್ಜನಕಂ ಕುಳೂತಪುರಮಂ ನಿರ್ಮೂಲಿಸಂದಾ ಕುಳೂ
ತನರೇಂದ್ರಂ ಭಯದಿಂ ಕಳತ್ರಸಹಿತಂ ಪೋಗಲ್ ಕುಳೂತೇಶನಂ
ದನೆಯಂ ಮತ್ತಮನೇಕರಂ ಸೆಱೆಗೆ ತಂದಿಟ್ಟಲ್ಲಿ ತದ್ರಾಜನಂ
ದನೆಯಂ ಕನ್ನೆಯನಟ್ಟಿಱಿಂ ನಡಪಿದಳ್ ಮಾದೇವಿ ಕಾರುಣ್ಯದಿಂ ೫೮

ವ॥ ಅಂತು ನಡಪುತಮಿರ್ದು

ಪಿರಿದುಂ ಮನ್ನಿಸಿ ನಡಪು
ತ್ತಿರೆ ಪರಮರಹಸ್ಯಭೂಮಿಯೆನಿಸಿದಳಿಂತೀ
ಪರಿಚಾರಿಕೆ ತನಗೆಂದಾ
ದರದಿಂ ನಿಜಜನನಿ ಬೆಸಸಿಯಟ್ಟಿದಳೀಗಳ್ ೫೯

ಧರೆಯೊಳ್ ನೆಗೞ್ದ ಕುಳೂತೇ
ಶ್ವರನ ಮಗಳ್ ಪತ್ರಲೇಖೆಯೆಂಬುದು ಪೆಸರಿಂ
ಪರಿಜನಸಾಮಾನ್ಯದೆ ನೀಂ
ಪರೀಕ್ಷಿಸಲ್ವೇಡ ಸತಿಯನೀ ಗುಣವತಿಯಂ ೬೦

ವ॥ ಎಂದು ಪೊಡವಡಿಸೆ ಪತ್ರಲೇಖೆಯ ವಿಚಿತ್ರರೂಪನಾ ಕ್ಷತ್ರಿಯಪುತ್ರಂ ವಿಸ್ಮಯಾಕ್ಷಿಪ್ತಚಿತ್ತನಾಗಿ ನೋಡುತಿರ್ದು ದೇವಿಯರ್ ಬೆಸಸಿದಂತೆ ನೆಗೞ್ವೆನೆಂದು ಕಂಚುಕಿಯಂ ಕೞಿಪಲಿತ್ತ ಪತ್ರಲೇಖೆಯಭಿನವ ಸಮುಪಜಾತ ಸೇವಾರಸದಿನೊಂದು ಪೊತ್ತಗಲದೋಲಗಿಸುತ್ತಿರಲಾಕೆಯ ಶೀಲಾಚಾರವಿನಯಮುಮಂ ಕಂಡು ತಾಂಬೂಲ ಕರಂಕವಾಹಿನಿಯಂ ಮಾಡಿ ನೃಪರೂಪಚಂದ್ರಂ ನಿಜಜನನೀಜನಕರನೋಲಗಿಸುತ್ತಿರ್ದ ನನ್ನೆಗಮತ್ತಂ

ಯುವರಾಜಪಟ್ಟಬಂಧೋ
ತ್ಸವಮಂ ಮಾಡಲ್ಕೆವೇೞ್ಕುಮಿನ್ನಿರದೆ ವಿಲಾ
ಸವತೀಸುತಂಗೆನುತ್ತಂ
ದವನೀಶಂ ಸಚಿವನೊಳ್ ಸಮಾಲೋಚಿಸಿದಂ ೬೧

ವ॥ ಅಂತಾ ಮಹಾಮಾತ್ಯನೊಳ್ ಸಮಾಲೋಚಿಸಿ ತತ್ಕಾರ್ಯನಿಶ್ಚಯಂಗೆಯ್ದು ಗೃಹಮುಹತ್ತರರಂ ಕರೆದಲ್ಲಿಗೆತಕ್ಕ ಮಂಗಳೋಪಕರಣಂಗಳಂ ಸಮಕಟ್ಟಿಮೆಂದು ಬೆಸಸಿದಾಗಳವರಂತೆಗೆಯ್ವೆವೆಂದವರ್ಗಳ್ ನೆಗೞುತ್ತಮಿರ್ದರ್. ಇತ್ತಯುವರಾಜಾಭಿಷೇಕಂ ಸಮೀಪಮೆನಲ್ಕೆಂದಿನಂದದಿನೋಲಗಿಸಲೆಂದು ಬಂದ ವಿನಯರತ್ನಾಕರನನಟ್ಟಿಱಿಂ ತೆಗೆದು ತಳ್ಕೈಸಿ ಕೆಲಕ್ಕೆ ಕರೆದು ಕುಳ್ಳಿರಿಸಿ

ವಿನಯಾರ್ಣವನಂ ಮುಂದಾ
ಕಿನಿ ಕೂಡಿದುದೆನಿಸಿ ವಿಶದದಶನದ್ಯುತಿ ತ
ಳ್ತನವರತಂ ಬೆಳಗಲ್ ಮಂ
ತ್ರನಿದಾನಂ ನುಡಿದನಾ ನರೇಂದ್ರಾತ್ಮಜನಂ ೬೨

ವ॥ ಅದೆಂತೆನೆ ವಿದಿತವೇದಿತವ್ಯನುಮಧೀತಸಕಲಶಾಸ್ತ್ರನುಮೆನಿಪ್ಪ ನಿನಗುಪದೇಶಿಸಲ್ವೇಟ್ಟಿದೊಂದುವಿಲ್ಲದೊಡಂ

ಕಯ್ದೀವಿಗೆಗಳ ಬೆಳಗಿಂ
ಕಾಯ್ದೆಸೆವ ಸಹಸ್ರಕಿರಣನಿಂ ಭೇದಿಸಲೇ
ಗೆಯ್ದುಂ ಬಾರದು ದಲ್ ತವೆ
ಮಾಯ್ದೀ ಜವ್ವನದೊಳೊಡಲೊಳಿಡದಿರ್ದ ತಮಂ ೬೩

ಸಿರಿಯೆಂಬ ಸೊರ್ಕು ತಿಳಿಯದು
ಪರಿಣಾಮದಿನಂಜನಂಗಳಿಂದಮದೆಂತು
ಪರಿಹರಿಸಲರಿದೆನಿಪ್ಪುದ
ಪರಮೈಶ್ವರ್ಯಪ್ರಭೂತ ತಿಮಿರಾಂಧತ್ವಂ ೬೪

ಶಿಶಿರೋಪಚಾರದಿಂದಂ
ವಶಮಲ್ಲದು ತೀವ್ರಮಪ್ಪ ದಾಹಜ್ವರಮುಂ
ಕುಶಸಾಧ್ಯಮಲ್ಲದಿಂದ್ರಿಯ
ದಿಶಾಗಜಪ್ರಕರಮೆಂದುಮವಿನಯನಿಯತಂ ೬೫

ವಿಷಮವಿಷಂಗಳ್ಗಂ ಪ್ರತಿ
ವಿಷಮೆನಿಸುವ ಮಂತ್ರನಿಚಯದೊಳಮಾರ್ಗೆಂದುಂ
ವಿಷಯಮೆ ಮಾಣಿಸಲಿಂತೀ
ವಿಷಯವಿಷಾಸ್ವಾದಮೋಹಮುಂ ನಿರ್ವಿಷಯಂ ೬೬

ಅರಸಾಗಲೊಡಂ ಮೆಯ್ಮಱಿ
ದು ರಾಜ್ಯಸುಖಸನ್ನಿಪಾತನಿದ್ರೆಯ ಕಯ್ಕೊಂ
ಡಿರುಳುಂ ಪಗಲುಂ ಜಾಡ್ಯದೆ
ಮರವಟ್ಟೆಚ್ಚಱುವರಲ್ಲಮೆಂತುಂ ಭೂಪರ್ ೬೭

ವ॥ ಅದಲ್ಲದೆಯುಂ

ಪಿತೃಗಳುಪಾರ್ಜಿಸಿಟ್ಟ ಸಿರಿ ಜವ್ವನದೇೞ್ಗೆ ಪೆಱಂಗಿದಿಲ್ಲೆನಿ
ಪ್ಪತಿಶಯರೂಪು ಶಕ್ತಿಗಳಿವಲ್ಲವೆ ಹಾನಿಯ ಬಳ್ಳಿವಳ್ಳಿ ನಿ
ಶ್ಚಿತಮಿವನೊಂದನೊಂದನೆ ವಿಚಾರಿಪೊಡುಳ್ಳ ವಿನೀತಿಗೆಲ್ಲಮಾ
ಯತನಮೆನಿಪ್ಪುದೋರ್ವನೊಳಿವೆಲ್ಲಮಿರಲ್ ಬೞಿಕೇನನೆಂಬುದೋ ೬೮

ಇರದೊಯ್ವುದು ತನ್ನಿಚ್ಛೆಗೆ
ವರಯುವ್ವನದಂದು ಪುರುಷನಂ ಪ್ರಕೃತಿ ರಜಂ
ಬೊರೆದು ತಿರುಪುತ್ತೆ ಸುಟ್ಟುೞಿ
ತೆರಳ್ಚಿ ತಱಗೆಲೆಯನುಯ್ವ ತೆಱದಿಂದೆತ್ತಂ ೬೯

ವಿಷಮುಮೆನಿಪುಪ್ಪುನೀರುಂ
ಕಷಾಯಿತಾಸ್ಯಂಗೆ ಮಧುರತರಮಪ್ಪಂತಾ
ವಿಷಯಂಗಳಿ ನವಯೌವನ
ಕಷಾಯಿತಾತ್ಮನ ಮನಕ್ಕಮತಿಮಧುರಂಗಳ್ ೭೦

ಮಿಗೆ ತೃಷ್ಣೆ ಪುಟ್ಟಲಿಂದ್ರಿಯ
ಮೃಗಂಗಳಂ ಭೋಗಮೆಂಬ ಮೃಗತೃಷ್ಣಿಕೆ ಮೆ
ಯ್ದೆಗೆಯಲ್ಕೆ ಬಾರದಂತಿರೆ
ತೆಗೆದೊಡಗೊಂಡೊಯ್ವುದೆಂಬುದೊಂದಚ್ಚರಿಯೆ ೭೧

ಅಱಿವುಗೆಡಿಸುತ್ತುಮೆಲ್ಲಾ
ತೆಱದಿಂ ದೆಸೆಗೆಡಿಸದಿರದು ವಿಷಯಸಮೂಹ
ಕ್ಕೆಱಗಿ ಬಿಡದಂತೆ ಪತ್ತುವ
ಮಱುಕಂ ದಿಙ್ಮೋಹದಂದದಿಂ ಮೂನಿಸರಂ ೭೨

ವ|| ಆದಱಿಂ ಸದುಪದೇಶಂಗಳ್ಗೆ ನಿನ್ನೊಂದಿಗರೆ ಭಾಜನಪ್ಪರದೆಂತೆನೆ

ತೊಳಗುವ ಚಂದ್ರಾಂಶುಗಳಾ
ಪಳುಕಿನ ಶಿಲೆಯೊಳಗೆ ಪೊಳೆದು ಪುಗುವಂತಿರೆ ನಿ
ರ್ಮಳ ಹೃದಯದೊಳಗೆ ಪುಗುಗುಂ
ವಿಲಸಚ್ಛಿಷ್ಯೋಪದೇಶ ಗುಣನಿವಹಂಗಳ್ ೭೩

ವ|| ಅದಲ್ಲದೆಯುಂ

ಗುರುಗಳ ವಚನಂ ನಿರ್ಮಳ
ತರಮಾಗಿಯುಮುಚ್ಚಸಲಿಲದ[1]ಂತಿರೆ ಭವ್ಯೇ
ತರನ[1]ಪ್ಪನ ಕಿವಿಯೊಳ್ ಪುಗೆ
ಪಿರಿದೆನಿಸುವ ಕರ್ಣಶೂಲೆಯಂ ಪುಟ್ಟಿಸುಗುಂ ೭೪

ವಿನಯಮನಾಗಿಸಲ್ ನೆಱೆಯದನ್ವಯಮುಂ ಶ್ರುತಮುಂ ಸ್ವಭಾವದು
ರ್ಜನನೆನಿಪಂಗದಂತುಟೆ ವಲಂ ಶಿಶಿರೈಕನಿಧಾನಮಪ್ಪ ಚಂ
ದನದೊಳೆ ಪುಟ್ಟಿ ಕಿಚ್ಚು ಸುಡದಿರ್ಪುದೆ ತತ್ಪ್ರಶಮೈಕಕಾರಣಂ
ವನನಿಧಿಯಾದೊಡೇನುರಿಯದಿರ್ಪುದೆ ದಳ್ಳಿಸಿ ಬಾಡಬಾನಲಂ ೭೫

ಜನಪತಿಗಳ್ ನುಡಿಯಲ್ ಮಾ
ರ್ದನಿಯಂತನುವದಿಸಿ ಬರ್ದುಕಲೊಲ್ಲದೆ ಮೂರ್ಕೊಂ
ಡನುಚಿತಮಿದೆಂದು ಮಾಣಿಪ
ಮನುಜೋತ್ತಮರೆಲ್ಲಿಯಾನುಮಿರ್ಪರ್ ಜಗದೊಳ್ ೭೬

ವ॥ ಎತ್ತಲಾನುಮುಪದೇಶಿಸುವರುಳ್ಳೊಡೆ

ಅಲರಂಬಿಂ ಬಿರಿದೆರ್ದೆಯೊಳ್
ನಿಲಲಱಿಗುಮೆ ಸದ್ಗುರೂಪದೇಶಾಮೃತಮೇಂ
ಸಲೆ ತೀವುತಿರ್ದೊಡಂ ಪೇೞ್
ನಿಲಲಱಿಗುಮೆ ಭಿನ್ನಭಾಂಡದೊಳ್ ನೀರಿನಿತುಂ ೭೭

ವ॥ ಅದಱಿನೇಗೆಯ್ದೊಡಂ ಕೇಳ್ವರಲ್ಲಂ

ಮೊಱೆದು ಹಿತೋಪದೇಶಮನೆ ಕೇಳಲೊಡಂ ಸಿಡಿಲೇಟ್ಗೆಯೆರ್ದು ಮೆ
ಯ್ಮಱುಗಿ ನಯಂ ಕಿಡಲ್ಗಜನಿಮೀಲನದಿಂದವಧೀರಿಸುತ್ತೆ ತ
ಮ್ಮಱಿತಮಿದೇತಕೆಂದು ಗುರುಸಂಕುಳಮಂ ಮಱೆದಿಂತು ಮುಮ್ಮಲಂ
ಮಱುಗಿಪರಲ್ತೆ ತಮ್ಮ ನಿಜಗರ್ವದೆ ಮಾಯ್ದ ನೃಪರ್ ಧರಿತ್ರಿಯೊಳ್ ೭೮

ಸ್ಥಿರೆಯಲ್ಲದವಳನತಿನಿ
ಷ್ಠುರೆಯಂ ಭಟಖಡ್ಗಮಂಡಲೋತ್ಪಲವನದೊಳ್
ತಿರುಪಾಱಿಡಿಯಂ ನಚ್ಚಿನ
ಸಿರಿಯಂ ಭಾವಿಪುದು ಮುನ್ನಮೇ ಶುಭಕಾಮಂ ೭೯

1 ತರಭವ್ಯೋತ್ತರಮ (ಕ)

ವ॥ ಅದೆಂತೆಂದೊಡೆ

ಸುರೆಯಿಂ ಸೊರ್ಕಂ ಸುರೋರ್ವೀರುಹಕಿಸಲಯದಿಂ ರಾಗಮಂ ಕೌಸ್ತುಭಪ್ರ
ಸ್ತರದಿಂ ಸೈಷ್ಠ್ಯರ್ಯಮಂ ದುರ್ವಿಷಮುವಿಷದಿನುನ್ಮೋಹಮಂ ಮುಗ್ಧದೋಷಾ
ಕರನಿಂ ವಕ್ರತ್ವಮಂ ದುಶ್ಚ್ಯವನನ ಹಯದಿಂ ವೇಗಮಂ ತಾಳ್ದಿ ನೀರಾ
ಕರದಿಂದೇಟ್ರ್ತಿಂದಳಂತಾ ಸಿರಿ ಸಹಭವರಂ ಪೋಲ್ವುದೇಂ ಚೋದ್ಯಮಾಯ್ತೆ ೮೦

ವಾರಿಧಿಯೊಳ್ ಮಂದರಗಿರಿ
ಭೋರೆನೆ ತಿರುಗುತ್ತಿರಲ್ಕೆ ಪುಟ್ಟಿದ ಬಹುಸಂ
ಸ್ಕಾರಮುದಿನ್ನುಂ ಬಿಡದವೊ
ಲೋರಂತಿರೆ ಕೂಡೆ ಲಕ್ಷ್ಮಿ ತಿಱ್ರನೆ ತಿರುಪಳ್ ೮೧

ಶ್ರುತಮಂ ಕಯ್ಕೊಳ್ಳಳಾಚಾರಮನವಧರಿಸಳ್ ಸತ್ಯಮಂ ಬಾರ್ತೆಗೆಯ್ಯಳ್
ಮತಿಯಂ ಬಿಪ್ಪಂಡಿಪಳ್ ಲಕ್ಷಣಮನೆಳಿಸಳೌದಾರ್ಯಮಂ ಚಿಂತಿಸಳ್ ಸಂ
ಗತಿಯಂ ವಿಶ್ವಾಸಿಸಳ್ ಸುಂದರತರವಪುವಂ ನೋಡಳೆಂತುಂ ವಿಶೇಷ
ಜ್ಞತೆಯಂ ತಾನೇತಕೆಂಬಳ್ ಸಿರಿಯನಱಿವುತಂ ಬಣ್ಣಿಪಂ ಗಾಂಪನಲ್ತೇ ೮೨

ವ॥ ಅಂತುಮಲ್ಲದೆಯುಂ

ಅಕ್ಕರ:-ಧೀರನಪ್ಪನುಮಂ ಹಾಸ್ಯಂ ಮಾೞ್ಪಳ್ ಮರುಳೆಂಬಿನಂ ಪಾವೆಂದು ದಾಂಟುವಳ
ಭಿಜಾತನಂ
ವೀರನರಿಗುವೆಂದೊಲ್ಲಳುದಾರನಪ್ಪನಂ ಗಟಿಪನೆಂದಿಟಿಪಳ್ ಪುರುಡಿಂ
ಭಾರತೀಶನಂ ಸೋಂಕಳ್ ದಾನಿಯಂ ಮುಟ್ಟಳಸ್ಪೃಶ್ಯನೆಂದು ವಿನೀತನಂ
ದೂರದಿಂ ನೋಡಿ ಪಾತಕನಿವನೆಂದು ತಿಳಿದು ಪೋಗಳೆಂದಿರೆ ನಂಬದಿರ್ ೮೩

ವ॥ ಮತ್ತಂ ಪಯೋರಾಶಿಯೊಳ್ ಪುಟ್ಟಿಯುಂ ತೃಷ್ಣಾಕರೆಯುಂ ಅಮರ್ದಿನೊಡವುಟ್ಟಿಯುಂ ಕಟುವಿಪಾಕೆಯುಂ ಪುರುಷೋತ್ತಮರತೆಯಾಗಿಯುಂ ದುರ್ಜನಪ್ರಿಯೆಯುಮೆನಿಸಿ ಪರಸ್ಪರವಿರೋಧಿಯಪ್ಪ ನಿಜಚರಿತ್ರಮಂ ಇಂದ್ರಜಾಲಮಂ ತೋರ್ಪಂತೆ ಮೆಱೆಯುತ್ತಿರ್ಪಳಂತುಮಲ್ಲದೆಯುಂ

ಎಂತೆಂತು ತೊಳಗಿ ಬೆಳಗುವ
ಳಂತಂತತಿ[1]ಮಲಿನ ಕಜ್ಜಳೋಪಮಕರ್ಮ[1]
ಭ್ರಾಂತಿಯ ಮಾೞ್ಪಳ್ ಲಕ್ಷ್ಮೀ
ಕಾಂತೆ ಕರಂ ಚಪಳೆ ಸೊಡರ ಕುಡಿ[2]ಯುಂ ಪೋಲ್ವಳ್[2] ೮೪

---

1 ಜಪಲಕಜ್ಜಳೋಚಿತಚಲಮಂ (ಕ) 2 ಯೋಲ್ ಮಾಳ್ಪಳ್ (ಕ)

ವ॥ ಅದಲ್ಲದೆಯುಂ

ಪಿರಿಯಕ್ಕರ॥ ಎಸೆವ ಗುಣಮೆಂಬ ಕಳಹಂಸನಿಕರಕ್ಕಕಾಲದ ಪೆರ್ಮುಗಿಲ್ ವಿಷಮೇಂದ್ರಿಯ
ಪ್ರಸರಮೆಂಬ ಮೃಗಪ್ರಕರಕ್ಕೆ ಗೋವಿಯದನಿ ಸಚ್ಚರಿತ್ರಂಗಳೆಂಬ
ಮಿಸುಪ ಚಿತ್ರಕ್ಕೆ ಕಂದಿಪ ಕರ್ವೊಗೆ ಧರ್ಮಮೆಂಬಿಂದುಮಂಡಲಕ್ಕೆ
ಮುಸುಕುವ ಕಾಳರಾಹುವಿನ ನಾಲಗೆಯೆನಿಪ ಸಿರಿಯಂ ಬಣ್ಣಿಪಂ ಗಾಂಪನಲ್ತೇ ೮೫

ಲಲಿತರಗಳೆ॥ ಗಂಧರ್ವನಗರಲೇಖೆಯ ತೆಱದೆ ಕಂಡಂತೆ
ಕಾಣಲ್ಕೆ ಬಾರಳಿರ್ದಾ ಯೆಡೆಯೊಳಿರ್ದಂತೆ
ವಿಷಯವಿಷವಲ್ಲಿಯಂ ಪೆರ್ಚಿಸುವ ಜಳಧಾರೆ
ಸಾಧುತ್ವಮಂ ಕೆಡಸಿ ನಡಸುವ ದುರಾಚಾರೆ
ಕಪಟನಾಟಕತತಿಗೆ ತಾನೆ ನೆಲೆಯೆನಿಸುವಳ್
ಕೋಪಗ್ರಹಾವೇಶಜನ್ಮನಿಧಿಯೆನಿಸುವಳ್
ಶಾಸ್ತ್ರದೃಷ್ಟಿಗೆ ತಿಮಿರಪಟಲತತಿಯೆನಿಸುವಳ್
ದೋಷಮೆಂಬಾಶೀವಿಷಕ್ಕೆ ಪುತ್ತೆನಿಸುವಳ್
ಚಿತ್ರಗತಿಯಾಗಿಯುಂ ನೋಡೆ ಸಂಚರಿಸುವಳ್
ಕರುವಿಟ್ಟೊಡಂ ನಿಲಿಸಲರಿದೆನಿಸಿ ಚಿದಱುವಳ್
ಕಂಡರಸಿದೊಡಮಲ್ಲಿ ನಿಲಲಾಱಳೆನಿಸುವಳ್
ಕೇಳ್ದೊಡಂ ತನ್ನನನುಭವಿಪುದರಿದೆನಿಸುವಳ್
ಒಲ್ದು ಜಾನಿಸಿದೊಡಂ ತತ್ಕ್ಷಣದೆ ವಂಚಿಪಳ್ ೮೬

ವ॥ ಇಂತು ಚಂಚಲೆಯಪ್ಪ ಸಿರಿ ತಮಗೆ ವಿಧಿವಶದಿನೆತ್ತಲಾನುವಪ್ಪುದುಂ
ಮೊದಲೊಳ್ ರಾಜ್ಯಾಭಿಷೇಕಪ್ರಬಲಜಲಮೆ ಕರ್ಚಿತ್ತು ದಾಕ್ಷಿಣ್ಯಮಂ ಹೋ
ಮದ ಧೂಮಂ ಚಿತ್ತದೊಳ್ ತೊಟ್ಟನೆ ಮಲಿನತೆಯಂ ಪೊರ್ದಿಸಿತ್ತೊಪ್ಪಿರಲ್ ಕ
ಟ್ಟಿದ ಪಟ್ಟಂ ಬರ್ಪ ಮುಪ್ಪಂ ಮಱಿಯಿಸಿತಧಿಕಕ್ಷಾಂತಿಯಂ ವಿಪ್ರವರ್ಗಾ
ಸ್ಪದ ದರ್ಭಾನೀಕಸಮ್ಮಾರ್ಜನಿ ಕಳೆದುದೆನಲ್ ದುಷ್ಕರಪ್ಪರ್ ನೃಪಾಲರ್ ೮೭

ಪರಲೋಕಾಲೋಕನಮಂ
ಪರಿಹರಿಸಿದೆವಲ್ತೆ ನೋಡಿಮೆಂದೀಗಳುದಾ
ಹರಿಸುವ ತೆಱದಿಂ ಪಿಡಿಯಿಪ
ರರಸುಗಳೆಡೆವಿಡದೆ ಮೇಘಡಂಬರತತಿಯಂ ೮೮

ಪಡೆವಳ್ಳರ್ ನೃಪಗುಣಮಂ
ಬಿಡೆ ನಾಲ್ಗಡಿಗಳಿವ ತೆಱದೆ ನಡೆನಡೆಯೆಂಬರ್
ಜಡಿವರ್ ಸಾಧೂಕ್ತಿಗಳಂ
ನುಡಿವವರಂ ಮಾಣಿಪಂದದಿಂ ಪಡಿಯಾಱರ್ ೮೯

ಬಿಡೆ ಬಿಡಿಸುವಂತೆ ನೃಪರೊ
ಳ್ನುಡಿಯಂ ಬೀಸುವುದು ಚಾಮರಾವಳಿ ಜಸಮಂ
ತೊಡೆವಂತೆ ವೈಜಯಂತಿಗ
ಳಿಡೆವರಿಯದೆ ಮುಂದೆ ಮಿಳಿರ್ದು ಮೇಳಿಸಿ ತೋರ್ಕುಂ ೯೦

ವ॥ ಮತ್ತಂ

ಪಲತೆಱದ ವಿಷಯದತ್ತಲ್
ತಲೆವಟ್ಟಿರ್ದಿಂದ್ರಿಯಂಗಳೈದಾಗಿರ್ದುಂ
ಸಲೆ ಶತಸಹಸ್ರಸಂಖ್ಯೆಯ
ನಲೆಯದೆ ಮಾಣ್ದಪುವೆ ಮಾಯ್ದ ಸಿರಿಯುಳ್ಳವರಂ ೯೧

ಕನಗೆಡೆವಿಡದತಿಚಪಲಂ
ಮನಮದು ನೋಡೊಂದೆ ನೂಱು ನೂರ್ಚ್ಚಾರ್ಸಿರಮಾ
ಯ್ತೆನೆ ಬಿಡದೆ ಪಿಡಿದು ನೃಪರಂ
ಕನಲ್ಚಿ ತನ್ನಿಚ್ಚೆಗೊಯ್ವುದೊಂದಚ್ಚರಿಯೇ ೯೨

ಪಿರಿದುಮಧರ್ಮದೆ ಗತಿಗೆ
ಟ್ಟರಸುಗಳಿಲೆ ಪೆಳವುಗೊಂಡರೆಂಬಂತೆ ವಲಂ
ಕರವಿಡಿದು ಸಾರ್ಚುವೆತ್ತುವ
ತುರಿಪದೆ ಕಯ್ಗುಡುವುದಕ್ಕೆ ಲಜ್ಜಿಸರರೆಬರ್ ೯೩

ಇರದೀಗಳ್ ಸತ್ತಪರೆನಿ
ಪರವೋಲ್ ನಂಟರುಮನಱಿವರಲ್ಲರ್ ಭೂಪರ್
ಪಿರಿದುಂ ಕಣ್ಗಾಣದರಂ
ತಿರೆ ಕಾಣಲ್ಕಾಱರಲ್ತೆ ತೇಜಸ್ವಿಗಳಂ ೯೪

ಪುಸಿ[1]ನುಡಿಯ ವಿಷ[1]ವಿಪಾಕದ
ಮುಸಕದೆ ಮುಖರೋಗಮಾದವೋಲಿನಿತಾನುಂ
ಬಸವಲ್ಲದುಸಿರ್ವರೆಂದುಂ
ಪೊಸಸಿರಿಯಿಂ ಮೈಮೆವೆತ್ತ ಮಾಯ್ದ ಮನುಷ್ಯರ್ ೯೫

1 ಯಸಿ ಸುಡಿವ (ಕ)

ಪೊಡೆದುದು ಗರವತಿಕೋಪದೆ
ಪಿಡಿದುದು ಪುಲಿ ಗಾಳಿ ಸೋಂಕಿದತ್ತು ಪಿಶಾಚಂ
ತೊಡರ್ದುದು ಭೂತಂ ಬನ್ನಂ
ಬಡಿಸಿದುದೆನೆ ಸಿರಿಯೊಳರಸುಗಳ್ ಮೆಯ್ಯಱಿಯರ್ ೯೬

ಜನಪತಿಗಳ್ ನೋಡಲ್ಕತಿ[1]
ಮನೋಹರಾಕೃತಿಗಳಾಗಿಯುಂ ನಾಡೆ ಜಗ
ಜ್ಜನಸಂಕುಲಕ್ಕೆ ಪಿರಿದುಂ
ವಿನಾಶಹೇತುಗಳಕಾಲಫಲಕುಸುಮದವೊಲ್ ೯೭

ವ॥ ಅಂತು ಗರ್ವಪರ್ವತಾರೂಢರಪ್ಪುರ್ವರಾಧೀಶ್ವರರ ಸರ್ವಸ್ವಮಂ ವಂಚಿಸಿ ಕೊಳಲೆಂದವರ್ಗಳ ಸಮೀಪದೊಳಗಾಮಿಷಕ್ಕೆಱಗುವ ಪರ್ದುಗಳುಮಾಸ್ಥಾನಮೆಂಬ ಕೊಳದೊಳಗೆ ಪಾರ್ವ ಬಕಂಗಳುಮೆನಿಪಂತಿರ್ದು ತಮ್ಮ ಕಜ್ಜಕ್ಕೆ ಕೆಲರ್ ಧೂರ್ತರರಸುಗಳಂ ಪ್ರತಾರಿಸುತಿರ್ಪರದಂತೆನೆ.

ಪಿರಿಯಕ್ಕರ॥ ಗುರುವನಿದಿರಿಪುದೆ ನಿಜಪ್ರಭುತೆ ಜೂದು ವಿನೋದಂ ಕಳ್ಗುಡಿವುದೆ ವಿಲಾಸಂ
ಪಿರಿದು ಬೇಂಟೆಯಾಡುವುದೆ ಶಕ್ತಿಗೆ ಹೇತು ಕುಲವಧೂತ್ಯಾಗಮೆ ನಿರ್ವ್ಯಸನಂ
ನೆರೆದು ಪರದಾರಮಂ ಕಲಿವುದೆ ಚತುರತ್ವಂ ಸೊಕ್ಕುವುದೆ ಬಂಟುತನವನ್ಯರ್
ಪರಿಭವಿಸಿದೊಡಂಜುವುದೆ ಸ್ಥೈರಣೆ ತರಳತೆಯೆ ನೋಡುತ್ಸಾಹಮೆಂಬರ್
ಧೂರ್ತರ್ ೯೮

ವ॥ ಅದಲ್ಲದೆಯುಂ ಪಲವುಂ ದೋಷಂಗಳಂ ಗುಣಂಗಳಾಗೇಱಿಸಿ ತಮ್ಮೊಳ್ ಕೈವೊಯ್ದು ನಗುತ್ತಂ ಪ್ರತಾರಣಕುಶಲರಪ್ಪ [2]ವಂಚನಾಕರರಮಾನುಷೋಚಿತ[1]ಮಪ್ಪ ಪೊಗೞ್ತೆಯಿಂ ಪೊಗೞುತ್ತಮಿರಲದನವಿತಥಮೆಂದು ಬಗೆದು ಮಿಥ್ಯಾಮಾಹಾತ್ಮ್ಯಗರ್ವನಿರ್ಭರರಾಗಿ

ಮುನಿದೊಡೆ ಭಸ್ಮವಾದಪುದು ಲೋಕಮೆನಲ್ ನೊಸಲೊಳ್ ತೃತೀಯ ಲೋ
ಚನಮೆಮಗುಂಟು ತೋಳಮಱಿಯಿಂದದು ತೋಱುಪುದಿಲ್ಲೆನುತ್ತಮೀ
ಮನುಜರ ಗೆಯ್ತಮಂ ಬಿಸುಟು ದೇವರೆಮೆಂಬಭಿಮಾನಮೇಱಿ ಮು
ಯ್ವೊನೆಗಳ ನೋಟ್ಪರಿನ್ನೆರಡು ತೋಳೊಳವೆಂಬವೋಲುರ್ವರೇಶ್ವರರ್ ೯೯

---

1 ನುಡಿಯಲ್ಕದು (ಕ) 2 ಮಂಚನಾಯ್ಕರಮಾನಸನ್ಮಾನ (ಕ)

ಮೊದಲೊಳ್ ತಮ್ಮನೆ ನೋಡಲಿತ್ತ ಪದದೊಳ್ ಕೈಕೊಂಡವರ್ ತಾಮೆ ನೋ
ಡಿದೊಡೋರಂತುಪಕಾರವಂ ಮೆಱೆದವರ್ ಮಾತಾಡಿದಂದರ್ಥರಾ
ಜ್ಯದ ಪೆಂಪಂ ದಯೆಗೆಯ್ದವರ್ ಬೆಸಸಿದಂದಾಗಳ್ ವರಂಗೊಟ್ಟವರ್
ಪದಪಿಂ ಮುಟ್ಟಿದರೆಯ್ದೆ ರಕ್ಷಿಸಿದವರ್ ಭೂಪರ್ ಧರಾಚಕ್ರದೊಳ್ ೧೦೦

ವ॥ ಅಂತುಮಲ್ಲದೆಯುಂ

ಗುರುಗಿದಿರೇಳ್ವರೆ ಪೊಡವಡು
ವರೆ ದೇವರನರ್ಚಿಸುವರೆ ಪಾರ್ವರನಱಿದಾ
ದರಿಪರೆ ಮಾನ್ಯರ ಮನ್ನಿಸು
ವರೆ ಪೂಜ್ಯರ ಪಿರಿದೆನಿಸುವ ಗರ್ವದೆ ಭೂಪರ್[1] ೧೦೧

ಮಱೆಯದಹೋರಾತ್ರಂ ಕ
ಯ್ಮಱೆದಿಲ್ಲದ ಗುಣಮನಂತೆ ಬಿಡದೇಱಿಸಿ ಪೊ
ಚ್ಚಱಿಸುತ್ತಮಿರ್ಪ ಷಿಡ್ಗ
ರ್ಗೆಱಗುವರಱಿವಿಲ್ಲದವನಿಪಾಲರ್ ಜಗದೊಳ್ ೧೦೨

ಅವರನೆ ಪೊರೆವರ್ ಪೆರ್ಚಿಪ
ರವರನೆ ಸಾರಿಪರವರನವರೊಳೆ ನುಡಿ ನೋ
ಡವರ್ಗಳೆ ನಂಟರ್ ಕೂಡುವ
ರವರೊಳೆ ಮನ್ನಿಪುದುಮವರನವರೊಳೆ ಕೂಟಂ ೧೦೩

ವ॥ ಅಂತೆನಿಸಿದರಸುಮಕ್ಕಳ್ಗತಿನೃಶಂಸಮಪ್ಪ ಕೌಟಲ್ಯಶಾಸ್ತ್ರಪ್ರಮಾಣದಿನು ಪಾಂಶುವಧೋಪದೇಶಮಂ ಮಾಳ್ಪ ನಿಪುಣನೇ ಪರಮ ಪಂಡಿತನೆನಿಸುಗುಂ, ಅಭಿಚಾರ ಕ್ರಿಯಾಕ್ರೂರಪ್ರಕೃತಿಯಪ್ಪ ಪುರೋಹಿತನೆ ಗುರುವೆನಿಸುಗುಂ, ಪರದಾರಾಭಿಗಮನಮಂ ನಿಯೋಜಿಸುವ ದುಷ್ಟನೇ ವಿಶ್ವಾಸಭೂಮಿಯೆನಿಸಿದ ಮಿತ್ರನೆನಿಸುಗುಂ, ಸ್ನೇಹಾರ್ದ್ರ ಹೃದಯ ನಿರ್ಮಲರುಮಪ್ಪ ಸಹೋದರರುಮಂ ನಿನಗವರ್ ಪಗೆವರೆಂದವರ್ಗೆ ಭಂಗಮ ಮಾಡಿ ಕೊಳ್ವು ಕಳೆಯಿಸುವ ಮಹಾಪಾತಕನೇ ಸಚಿವೋತ್ತಮನೆನಿಸುಗುಂ, ಅದಱಿ ನಿಂತಪ್ಪ ದುಷ್ಟ ಚೇಷ್ಟಾಸಹಸ್ರದಾರುಣಮಪ್ಪ ರಾಜ್ಯತಂತ್ರದೊಳೆಂತಪ್ಪನುಂ ಮೋಹಿಸ ದಿರನದು ಕಾರಣದಿಂ

1 ಜಿಪರೆಸುಗರ್ವದಿಂ ದುರ್ವೀಶರ್ (ಕ)

ಬೆಸನಂಗಳ್ ತನುವಿಚ್ಚೈಗೊಯ್ವುವದಱಿಂ ಲಕ್ಷ್ಮೀವಿಡಂಬಂ ವಿಡಂ
ಬಿಸದಂತಾಗಿರ ಮಾನ್ಯರೆಲ್ಲ ತೆಱದಿಂದಂ ಪೊಕ್ಕು ನಿನ್ನಂ ಚಟೂ
ರಿಸದಂತಾಗಿರೆ ಕಾಮಿನೀತತಿ ವಿಲಾಸಾಪಾಂಗದಿಂದಂ ಪ್ರತಾ
ರಿಸದಂತಾಗಿರಲಾತ್ಮವಂತನೆನಿಸೆಂದುಂ ರಾಜವಿದ್ಯಾಧರಾ ೧೦೪

ವ॥ ಆದಲ್ಲದೆಯುಂ ಯುವರಾಜ್ಯಾಭಿಷೇಕಮಂ ಕಯ್ಕೊಂಡು ಕುಲಕ್ರಮಾಗತ ರಾಜ್ಯಭಾರಧೌರೇಯನಾಗಿ ಸಕಲದಿಗ್ವಿಜಯೋದ್ಯೋಗಂಗೆಯ್ದು ಸಪ್ತದ್ವೀಪಾಲಂಕಾರೆಯಪ್ಪ ವಸುಂಧರೆಯನೇಕಚ್ಛತ್ರಮಪ್ಪಂತಿರಾಳ್

ನಗದಂತು ಜಗಂ ಗುರುಗಳ್
ಪೊಗಟ್ಟಂತನುಜೀವಿಗಳ್ಗೆ ಶುಭಮಪ್ಪಂತು
ಬ್ಬೆಗಮಾಗದಂತು ನಂಟ
ರ್ಗಗಣಿತಗುಣನೆ[1] ನಿಸಿ ನಿಲ್ವುದಾಕಲ್ಪಾಂತಂ[1] ೧೦೫

ವ॥ ಎಂದು ನುಡಿದ ಶುಕನಾಸೋಪದೇಶವಚನಾಮೃತನಿಚಯದಿಂ ಪ್ರಕ್ಷಾಳಿತನಾದಂತೆಯುಂ ಕಣ್ದೆಱೆದಂತೆಯುಮಲಂಕೃತನಾದಂತೆಯುಂ ಪ್ರವಿತ್ರೀಕೃತನಾದಂತೆಯುಮತಿಪ್ರೀತಹೃದಯನಾಗಿ ಕೆಱೆದು ಬೇಗಮಿರ್ದು ನಿಜಮಂದಿರಕ್ಕೆ ಚಂದ್ರಾಪೀಡಂ ಪೋಪುದುಮಿತ್ತಲ್ ಗೃಹಮಹತ್ತರರ್ ಮುನ್ನಮೆ ಸಮಕಟ್ಟಿದ ಮಣಿಕುಟ್ಟಿಮದ ನಟ್ಟನಡುವೆ ಪೊಳೆವಪಟ್ಟವಣೆಯ ನಾಲ್ದೆಸೆಯೊಳೆಸೆವ ರತ್ನಭೃಂಗಾರುಘಟಂಗಳಿಂ ಪಸುರ್ಪೆಸೆದು ನಿಮಿರ್ದ ಜಾಗರಗಳಿಂ ತೊಳಗುವ ಮಣಿದರ್ಪಣಾಲಂಕೃತಂಗಳಪ್ಪ ಕಾಂಚನದ್ರೋಣಿಗಳಿಂ ಸುರಭಿಸಲಿಲಪರಿಮಳಕ್ಕೆಱೆಪ ಮಱಿದುಂಬಿಯ ಬಂಬಲಿಂ ನೀಲಾಂಬರದಿಂ ಬಾಸಣಿಸಿದಂತಿರ್ದ ಶಾತಕುಂಭಕಲಶಂಗಳಿನಭಿಷೇಕವಿಲಾಸಮಂ ನೋಡಲಿಂದಿೞಿತಂದ ವಿಧ್ಯಾಧರವಿಳಾಸವತಿಯರೆನಿಪ ವಾರವಿಳಾಸಿನಿಯರಿಂ ಬಳಸಿದ ಗಾಯಕವಾದಕವಾಂಶಿಕವೈಣಿಕವೈತಾಳಿಕವಾಗ್ಮಿಕನಿಕಾಯದಿಂದೆಸೆವಭಿಷೇಕಮಂಟಪದೊಳ್ ಸಕಲರಾಜಲೋಕಮುಂ ಮಂತ್ರಿಮಂಡಳಮುಂ ಸಾಮಂತನಿಕಾಯಮುಂ ಪಶೌಹೂರ್ತಿಕಪ್ರಕರಮುಂ ನೆಱೆದಿರೆ

ತಾರಾಪೀಡಂ ನರೇಂದ್ರಪ್ರಕರಪರಿವೃತಂ ಯೌವರಾಜ್ಯಾಭಿಷೇಕ
ಪ್ರಾರಂಭಪ್ರೀತಿಯಿಂದಟ್ಟಿದ ಬೞಿಗೆ ಮಗಂ ಬರ್ಪುದುಂ ಮಂಗಳವ್ಯಾ
ಪಾರಂ ಪಾರ್ದಿರ್ಪುದುಂ ತಂದೆಯ ಪದಯುಗಮಂ ಬಂದು ಕಂಡಂ ಮನೋಜಾ
ಕಾರಂ ಮುಗ್ಧಾಂಗನಾಪೀವರಕುಚವಿಲಸತ್ತಾರಹಾರಂ ಕುಮಾರಂ ೧೦೬

---

1 ಸನಲ್ಪಕಲ್ಪಾಯುವರಂ (ಕ)

ವ॥ ಅಂತು ಬಂದ ನಿಜನಂದನನಂ ಶುಭಲಗ್ನೋದಯದೊಳನೇಕಮಂಗಳ ಭೇರೀಮೃದಂಗಪಟಹಪಟುರವಂಗಳೆಸೆಯೆ ನೃಪೇಂದ್ರಂ ಮಜ್ಜನಪೀಠಮನಲಂಕರಿಸಿ ದಾಗಳ್

ನವರತ್ನವ್ರಾತಸರ್ವೌಷಧಿಫಲಮಿಳಿತಾಂಭೋಧಿತೀರ್ಥಾಪಗಾವಾ
ರಿವಿರಾಜಚ್ಚಂದ್ರಕಾಂತೋಪಲಕಲಶಮನಂದೆತ್ತಿ ಭೂಪಾಲಕಂಠೀ
ರವನಾನಂದಾಶ್ರುಧಾರಾತತಿ ನಿಮಿರ್ವಿನೆಗಂ ಯೌವರಾಜ್ಯಾಭಿಷೇಕೋ
ತ್ಸವಮಂ ಪುತ್ರಂಗಮಾತ್ಯಪ್ರಕರಪರಿವೃತಂ ಮಾಡಿದಂ ಸಾರ್ವಭೌಮಂ ೧೦೭

ಮರದಿಂ ಮರಕ್ಕೆ ದಾಂಗುಡಿ
ವರಿವೆಳಲತೆಯಂತೆ ನೀತಿಮಾಂಧಾತನೊಳಾ
ವರಿಸಿರ್ದುದು ರಾಜವಿದ್ಯಾ
ಧರನಲ್ಲಿಗೆ ರಾಜ್ಯಲಕ್ಷ್ಮಿ ನಿಲುಕಿದಳಾಗಳ್ ೧೦೮

ಪುದಿದೆಳೆಮಿಂಚುಗಳ್ ಪೊಳೆದವೋಲ್ ಸುಲಿಪಲ್ಗಳಕಾಂತಿ ಪೊಣ್ಮೆ ಪೂ
ಸಿದ ಸಿರಿಕಂಡಮುಜ್ಜ್ವಳಿಪ ಲೋಚನಮುಟ್ಟ ಸಿತಾಂಬರಂ ತುಱುಂ
ಬಿದ ನವಮಾಲಿಕಾಕುಸುಮವಿಕ್ಕಿದ ಮುತ್ತಿನ ಲಂಬಣಂ ತೊಡ
ರ್ಚಿದ ಕುಸುಮಾವತಂಸಮುಮರಲ್ಚೆಸೆದಂ ನೃಪರೂಪಚಂದ್ರಮಂ ೧೦೯

ಜನತಾಶೀರ್ವಾದಮುಂ ಮಂಗಳಪಟಹರವಾಟೋಪಮುಂ ವಿಪ್ರವೇದ
ಧ್ವನಿಯುಂ ಭೋರೆಂದು ಪೊಣ್ಮುತ್ತಿರೆ ನಿಜಜನಕಾದೇಶದಿಂ ಬಂದು ಸಿಂಹಾ
ಸನದೊಳ್ ಕುಳ್ಳಿರ್ದನಾನಂದಿತಗುರುನಿಕರಂ ತರ್ಪಿತಾಶೇಷವಿದ್ವ
ಜ್ಜನವತ್ಯುತ್ಸಾಹಿತೋರ್ವೀಭುವನಪತಿಸಭಾಂಭೋಜಿನೀರಾಜಹಂಸಂ ೧೧೦

ವ॥ ಅಂತು ಕಿಱಿದುಬೇಗಮಿರ್ಪುದುಂ ಆಗಳ್ ದಿಗ್ವಿಜಯ ಪ್ರಯಾಣ ಸೂಚಕಮುಮರಿಕುಲಪ್ರಳಯನಿವೇದಕಮುಮೆನಿಸಿ

ಪೊಡೆದತ್ತುರ್ವರೆಯುಂ ಯುಗಾಂತದ ಸಿಡಿಲ್ಮೇಘಂ[1] ತಟದ್ದಂಡದಿಂ
ಬಡಿದುತ್ತಾದಿವರಾಹಘೋಣಹತಿಯಿಂ[2] ಪಾತಾಳಗರ್ಭಂ ಸಿಡಿ
ಲ್ದೊಡೆದತ್ತಬ್ಧಿಯೊಳಿಂದು ಮಂದರನಗಂ ಬಿರ್ದತ್ತೆನಲ್ ಲೋಕದೊಳ್
ಬಿಡದುಣ್ಮಿತ್ತು ಸುವರ್ಣಕೋಣಹತಿಯಿಂ ಪ್ರಸ್ಥಾನಭೇರೀರವಂ ೧೧೧

ವ॥ ಅಂತಾ ತ್ರೈಲೋಕ್ಯಕ್ಷೋಭಕಾರಿಯಪ್ಪ ಭೇರೀರವಂ ಪೊಣ್ಮಲೊಡನೆ

1 ತದಿರ್ವಂದರಿಪಿಂ (ಕ) 2 ನೊಂದುಗತಿಯಿಂ (ಕ)

ದೆಸೆದೆಸೆಯೊಳ್ ಭೇರೀರವ
ಮೆಸೆವುತ್ತಿರೆ ರತ್ನರಚಿತಸಿಂಹಾಸನದಿಂ
ವಸುಧಾಧಿಪನೆಟ್ದಿಂ ರಿಪು
ವಸುಧಾಧಿಪತತಿಯ ಲಕ್ಷ್ಮಿಯೊಡನೇೞ್ವಿನೆಗಂ ೧೧೨

ವ॥ ಅಂತೇೞ್ವಿದುವಾಗಳ್ ಸರಭಸದಿಂದೊಡನೇೞ್ವ ರಾಜಲೋಕದ ಪರಸ್ಪರ ಸಂಘಟ್ಟನದಿಂ ವಿಘಟಿತವಾಗಿ ದಿಗ್ವಿಜಯದೊಳ್ ಸೂಸುವ ಮಂಗಳಲಾಜಾವರ್ಷದಂತೆ ಹಾರನಿಕರಂಗಳಿಂದುಚ್ಚಳಿಸುತ್ತುಮಲ್ಲೊಗುವ ಮೌಕ್ತಿಕನಿಕಾಯದ ನಡುವೆ

ಬಿಳಿಯ [1]ಮುಗುಳ್ಗಳಂ ಸುರಿವ[1] ಕಲ್ಪಮಹೀರುಹಮಾಲೆ ಸುತ್ತಿ ಕ
ಣ್ಗೊಳಿಸುವ ಪಾರಿಜಾತಮೆನೆ ಸೀಕರಮುಣ್ಮುವ ದಿಗ್ಗಜವ್ರಜಂ
ಬಳಸಿದ ದಿವ್ಯದಂತಿಯೆನೆ ನೀರ್ವನಿಯಂ ಸುರಿವಂಬುದಾಳಿ ಮಂ
ಡಳಿಸಿದ ಮೇಘಕಾಲಮೆನೆ ಕಣ್ಸೆಸೆದಂ ನೃಪರೂಪಚಂದ್ರಮಂ ೧೧೩

ವ॥ ಅನಂತರಂ ನಿಜ ಜನನೀಜನಕರ ಚರಣಕಮಲಂಗಳ್ಗೆಱಗಿ ಪರಮಾಶೀರ್ವಾದಂಗಳನಾಂತು ಪತ್ರಲೇಖಾ[2]ಸಮಧ್ಯಾಸಿ[2]ತಾಂತರಾಸನೆಯುಂ ಪ್ರಸ್ಥಾನೋಚಿತ ಮಂಗಳಾಲಂಕಾರೆಯುಮಪ್ಪ ಪಿಡಿಯಂ ಚಂದ್ರಾಪೀಡನೇಱಿದಾಗಳ್

ಮಂದರದಿಂ ಕಡೆದಿಂಗಡ
ಲಿಂದುಣ್ಮಿದ ಸುಟಿಯಿದೆನೆ ದಶಾಸ್ಯನ ಕರದೊಳ್
ನಿಂದ ರಜತಾದ್ರಿಯೆನೆ ನೃಪ
ನಂದನಧವಳಾತಪತ್ರಮೆಸೆದತ್ತಾಗಳ್ ೧೧೪

ವ॥ ಅಂತು ಬಿಜಯಂಗೆಯ್ವುತ್ತಮಿರೆ ರಾಜಮಂದಿರದ್ವಾರದಿಂ ಪೊಱಗೆ

ಭುವನಾಧೀಶಪ್ರತಾಪಾನಲಬಹಳಶಿಖಾಜಾಲಮೋ ವೈರಿನಾಶೋ
ದ್ಭವಸರ್ವವ್ಯಾಪಿದಿಗ್ದಾಹಮೊ ನೃಪವರನಾನಂದದಿಂ ಬರ್ಪದೊಂದು
ತ್ಸವದಿಂ ಭೂಕಾಂತೆ ರಾಗಾತ್ಮಿಕೆಯೆನಿಸಿದಳೋ ಪೇೞಿಮೆಂಬಂತೆ ಭೂಭೃ
ನ್ನಿವಹವ್ಯಾಕೀರ್ಣನಾನಾಮುಕುಟಮಣಿಗಣದ್ಯೋತಿ ಪರ್ವಿತ್ತುದಾಗಳ್ ೧೧೫

ವ॥ ಅನಂತರಂ ನರೇಂದ್ರನಂದನಪ್ರಕರಂ ಚಂದ್ರಾಪೀಡಂಗಹಮಹಮಿಕೆಯಿಂ ಪ್ರಣಾಮಲಾಲಸರಾಗೆ

---

1 ಮುಗಿಲ್ಗಳಲ್ಲೊಗೆವ (ಕ) 2 ಸಮುತ್ಥಾಸಿ (ಕ)

ವಿನಯದಿನೆಱಗುವ ಭೂಪಾ
ಲನಿಚಯಚೂಡಾಮಣಿಪ್ರಭಾಮಂಡಳಮಂ
ದಿನಮಂಡಲಸಮುದಯದಿಂ
ದೆ ನಿಮಿರ್ವ ಕೆಂಗದಿರ್ಗಳಿಸಕವಂ ಮುಸುಳಿಸುಗುಂ ೧೧೬

ವ॥ ಅಂತೆಱಗಿದ ನರಪತಿಸಹಸ್ರಮಂ ನಿಮ್ಮ ನಿಮ್ಮ ವಾಹನಂಗಳನೇಱಿಮೆಂದು ಬೆಸಸಿ ಬಿಜಯಂಗೆಯ್ವಲ್ಲಿ ಪೆಱಗೆ ಢಕ್ಕಾರವದಿಂ ಬಧಿರಿತದಿಗಂತರಾಳಮೆನಿಸಿ ಬರುತ್ತಂ

ಎಳವಿಸಿಲಿಂದಲಂಕರಿಸಿ ಬಾಂದೊಱೆಯೊಳ್ಪೊನಲಿಂದವೊಂದಿ ಮಂ
ಡಳಿಸಿದ ಧಾರೆಯಿಂ ತೊಳಪ ಶೃಂಗದಿನೊಪ್ಪುವ ಮೇರುವಿಲ್ಲಿ ಬಂ
ದೆಳಸಿತೆನಲ್ಕೆ ಸಿಂಧುರದ ಹಾರದ ಮಾಲೆಯ ಕಾಂತಿ ತಳ್ತು ಪ
ಜ್ಜಳಿಸುವ ಕುಂಭಮಂ ತಳೆದು ಪಿಂತೆಸೆದಿರ್ದುದು ಗಂಧಸಿಂಧುರಂ ೧೧೭

ವ॥ ಅದಲ್ಲದೆಯುಂ

ತೊಳಗುವ ರತ್ನಾಭರಣಂ
ಗಳ ರುಚಿ ನಿಜರೋಮಕಾಂತಿಯೊಳ್ ತಳ್ತು ತೆಱಂ
ಬೊಳೆಯಲ್ಕಿಂದ್ರಾಯುಧಮೇಂ
ಪೊಳೆದುದೊ ನೃಪಸುತನ ಮುಂದೆ ತೆಗೆದುಬರುತ್ತಂ ೧೧೮

ವ॥ ಅನಂತರಮೆರಡನೆಯ ಯುವರಾಜನಂತೆ ಪಿಡಿಯನೇಱಿ ಬಲಗೆಲದೊಳಿರ್ದ ವೈಶಂಪಾಯನಂ ನಾಲ್ದೆಸೆಯೊಳಂ ಮದಗಜಾರೂಢರಾಗಿ ಪರಿವೇಷ್ಟಿಸಿರ್ದನರಪತಿಸಹಸ್ರಂಬೆರಸು ನೃಪರೂಪಚಂದ್ರಂ ಚಂದ್ರಾಪೀಡದೇವಂ ಪಿಡಿಯನೇಱಿ ಇಂದ್ರದಿಶಾಭಿಮುಖನಾಗೆ

ಎಡವಿಡದೆ ನೂಂಕಿ ಗಜಘಟೆ
ನಡೆಯಲ್ ಮೇಲೆಸೆದುವಾಂತ ಬೆಳ್ಗೊಡೆಗಳ್ ಪೆ
ರ್ಗಡಲ ತೆರೆದುಱುಗಲೊಳ್ ನೂ
ರ್ಮಡಿಯೆನೆ ಮಾರ್ತೊಳಗುವಿಂದುಮಂಡಲತತಿವೊಲ್ ೧೧೯

ತುರಗಮಯಂ ನೆಲಂ ಚಮರಜಾಲಮಯಂ ದಿನಮಾತಪತ್ರಪಾಂ
ಡುರಮಯಮಂತರಿಕ್ಷಮಿಭಯೂಥಮಯಂ ದೆಸೆ ಸೃಷ್ಟಿಭೂತಳೇ
ಶ್ವರಮಯಮಾತಪಂ ಮಣಿಕಿರೀಟಮಯಂ ಭುವನತ್ರಯಂ ಜಯ
ಸ್ವರಮಯಮಂಬರಂ ಧ್ವಜಮಯಂ ಮಧಗಂಧಮಯಂ ಸಮೀರಣಂ ೧೨೦

ವ|| ಆಗಳಾ ನರೇಂದ್ರನಂದನನ ಮುಂದೆ ಪರಿವ ಪಲತೆಱದ ಪಡೆಯ ಬಹಳ ಕೋಲಾಹಲಂಗಳುಂ ಎಡೆಯೆಡೆಯೊಳೆಸೆವ ಬಹುವಿಧಕಹಳಾರವಂಗಳುಂ ತಮ್ಮ ನೆೞಲ್ಗೆ ತಾವೆ ಪೆಳಱ ಬೆರ್ಚಿ ಪೊಳೆದುಚ್ಚಳಿಸುವ ತುರಂಗಮಂಗಳ ಹೇಷಾರವಂಗಳುಂ ಕುಲಪರ್ವತಂಗಳೆನಿಪ ಗಜಂಗಳ ಬೃಂಹಿತಂಗಳುಂ ಗತಿವಶದಿನುಣ್ಮುವ ಘಣಘಣಾಯಮಾನ ಘಂಟಾರವಂಗಳುಂ ಜಯಘಂಟಾರವಸಮ್ಮಿಳಿತ ಢಕ್ಕಾರವಂಗಳುಂ ಪಾಂಚಜನ್ಯಾನುಕಾರಿಶಂಖರವಸಂವರ್ಧಿತಪ್ರಯಾಣಪಟಹರವಂಗಳುಮೊಂದೊಂದಱೊಳ್ ತಳ್ತು ಸಕಲ ಭುವನಮುಂ ಶಬ್ದಾತ್ಮಕಮಾದಂತಿರ್ದುದಾಗಳ್

* ಒಂದೆಡೆ ಜೀರ್ಣಮೀನತನುಧೂಮ್ರಮದೊಂದೆಡೆ ರಲ್ಲಕಾಭಮಂ
ತೊಂದೆಡೆಯೂರ್ಣತಂತುಪರಿಪಾಂಡುರಮುಷ್ಟ್ರಸಟಾವಭಾಸಿ ಮೇ
ಣೊಂದೆಡೆ ಮತ್ತಮೊಂದೆಡೆ ಜರತ್ಕಪಿಕೇಸರಜಾಲ ಪಿಂಗಮಾ
ಗಂದೊಗೆದತ್ತನೇಕವಿಧವರ್ಣಧರಾತಲರೇಣುಸಂಚಯಂ || ಮತ್ತಂ ೧೨೧

ಕ್ಷೀರೋದಫೇನಮಾಲಾ
ಗೌರಕ್ಷಿತಿರೇಣುಗಣದಿನಿಡಿದಂಬರಮೇಂ
ರಾರಾಜಿಸಿದುದೊ ವಿಕಸಿತ
ಕೈರವವನದಂತಿರೀಕ್ಷಿಪರ್ಗಿರದಾಗಳ್ ೧೨೨

ವ|| ಇಂತೊಗೆದು ಪರೆದ ಪಾಂಸುಪಟಲಂ ಕರಿಕರಾಗ್ರಶೀಕರಾಸಾರದೊಳನೊಸರ್ವ ದಾನಧಾರೆಯೊಳಮೊಕ್ಕ ಕುದುರೆಗಳ ಲಾಲಾಜಲಜಾಲಕದೊಳಂ ಪರಿಪಡಲೊಡಂ ಕಡಲನಡುವಿಂದೊಗೆತಂದಂತಿರಳವಿಗಟಿದದಳಮುನವಲೋಕಿಸಿ ವಿಸ್ಮಯಂಬೆತ್ತು ವೈಶಂಪಾಯನಂ ಚಂದ್ರಾಪೀಡಂಗಿಂತೆಂದಂ

ಆಡಲದೇಂ ನರಪತಿಕುಲ
ಚೂಡಾಮಣಿಯೆನೆ ನೆಗೞ್ತೆವೆರಸಿದ ತಾರಾ
ಪೀಡಂ ನೀಡುಂ ಜೈಸದ
ನಾಡೊಳವೆ ಆದಾವ ನಾಡ ಗೆಲಲಾಟಿಸುವೈ ೧೨೩

ಮಣಿಯದ ಮಾನವಾಧಿಪರದಾರ್ ತಲೆಯೊಳ್ ತಳೆದಬ್ಜಕುಟ್ಮಲ
ಕ್ಕೆಣೆಯೆನೆ ರಂಜಿಪಂಜಲಿಯ ಸೇವಿಸದಿರ್ಪರಸಕ್ಕರ್ಳಾರ್ ಶಿಖಾ
ಮಣಿಗಣಮಂ ತ್ವದಂಘ್ರಿಯುಗಪೀಠದೆ ಸಾಣೆಯನಿಕ್ಕದಿರ್ದ ಧಾ
ರಿಣಿಯೆರೆಯರ್ಕಳಾರೊಳರಿಳಾತಳದೊಳ್ ಯುವರಾಜಶೇಖರಾ ೧೨೪

* ಇಲ್ಲಿಂದ ಮುಂದಿನ ೧೧ ಪದ್ಯಗಳು ಕಥಾಸಂದರ್ಭದ ಪರಿಪೂರ್ಣತೆಗಾಗಿ ಆಸ್ಥಾನ ಕವಿಗಳಾದ ಬಸಪ್ಪ ಶಾಸ್ತ್ರಿಗಳಿಂದ ರಚಿಲ್ಪಟ್ಟು ಇಲ್ಲಿ ಸೇರಿಸಲ್ಪಟ್ಟವೆ.

ಉಸಿರಲ್ಕರಿದೆನೆ ಪತ್ತುಂ
ದೆಸೆಗಳನಾವರಿಸಿ ಮುಸುಗುವೀ ನೃಪಸೇನಾ
ಪ್ರಸರಂ ತಳ್ತೋಲಗಿಸುಗು
ಮೆಸಕಂ ಮಿಗೆ ನಿನ್ನನವನಿಪಾಲಲಲಾಮ ೧೨೫

ಕುಲಶೈಲಸಂಧಿಬಂಧಂ
ಕಳಚದುದುಂ ಸೈನ್ಯಭರದಿನಿಳಿದಳಿದಾ ಕುಂ
ಡಲಿಪನ ವಿಪುಲಫಣಾಮುಂ
ಡಲಿ ಬಿರಿಯದುದುಂ ಸಮಂತು ಚಿತ್ರಮಿದಲ್ತೆ ೧೨೬

ಬಲಭರ ಸಂಕ್ಷೋಭಭಯಂ
ದಳೆದಂಬರಕೊಗೆದ ನದಿಗಳೆನೆ ನಿಖಿಲದಿಶಾ
ಕುಲಮುಂ ಬಾಸಣಿಸುಗುಮು
ತ್ಪಲಬಾಂಧವಧವಳಮೆನಿಸಿದೀ ಧ್ವಜಪಟಲಂ ೧೨೭

ವ || ಇಂತುಸಿರ್ದುದನಾಲಿಸುತ್ತಮೆ ಸಮುಚ್ಛ್ರಿತತೋರಣಮುಮನೇಕಪಟಮಂಟಪೋಪಶೋಭಿತಮುಮಪ್ಪ ನಿವಾಸಭೂಮಿಯಂ ಪೊಕ್ಕರಸುಗಜ್ಜಮಂ ತೀರ್ಚಿ ಪಿತೃವಿಯೋಗಖಿನ್ನಮಾನಸಂ ಚಂದ್ರಾಪೀಡನಮಾತ್ಯನರಪತಿಗಳ್ವೆರಸು ಬಿನದಂ ಮಿಗೆ ಪಗಲಂ ಕಳೆದಾಯಿರುಳೆಡೆವಟ್ಟಿರ್ದವೈಶಂಪಾಯನನೊಳಂ ಪತ್ರಲೇಖೆಯೊಳಂ ಜನನೀಜನಕರ ಸಂಬಂಧಿಯಪ್ಪಾಲಾಪಂಗೆಯ್ಯುತ್ತಮಿರ್ದು ಕಿಱಿದುಂ ನಿದ್ರೆಗೆಯ್ದು ಬೆಳಗಪ್ಪುದುಮೆೞ್ದು

ಧರೆಯಂ ಪೊಳ್ಳಾಗಿಸುತ್ತಂ ನಡುಗಿಸುತಮಗವ್ರಾತಮಂ ತುಳ್ಕಿಸುತ್ತಂ
ತೊರೆಯಂ ದುರ್ಗಂಗಳಂ ಪಾೞಿಗೊಳಿಸುತಮಟವೀವ್ರಾತಮಂ ಚೂರ್ಣಿಸುತ್ತಂ
ನೆರಪುತ್ತಂ ನಿಮ್ನಮಂ ನಿಮ್ನಮ ತೆಮರನೊಡರ್ಚುತ್ತಮಾತ್ಮೀಯಸೈನ್ಯೋ
ತ್ಕರದಿಂದಂ ರಾಜವರ್ಗಂ ಬೆರಸಿರೆ ಪೊಱಮಟ್ಟಂ ಮಹೀಭೃನ್ಮಹೇಂದ್ರಂ ೧೨೮

ದುರುಳರನೊಕ್ಕಲಿಕ್ಕಿ ಮಱೆವೊಕ್ಕರ ರಕ್ಷಿಸಿ ದೇಶದೇಶದೋ
ಳರಗುವರರ್ಗೊಡರ್ಚಿ ನೃಪಪಟ್ಟವನಾರ್ಜಿಸಿ ರತ್ನರಾಶಿಯಂ
ನಿರವಿಸಿ ನಾಡನೇರ್ಪಿ ನಿಜಮುದ್ರೆಯನೇಱಿಸಿ ಶಾಸನಂಗಳಂ
ಬರಸಿ ಬುಧರ್ಗೆ ಬಿತ್ತರಿಸಿದಂ ಜಸಮಂ ಯುವರಾಜಚಂದ್ರಮಂ ೧೨೯

ನೆಲನೆಲ್ಲಂ ಬಲವಂದು ಗೆಲ್ದಖಿಲಧಾತ್ರೀನಾಥರಂ ತನ್ನದೋ
ರ್ಬಲದಿಂ ಪೂರ್ವಸಮುದ್ರತೀರದೆ ನಿವಾಸಂಗೆಯ್ದರಂ ವ್ಯಾಧರಂ
ಪಲರಂ ಪೊಂದಿಸಿ ತತ್ಸುವರ್ಣಪುರಮಂ ಕೈಲಾಸಶೈಲಾಂತರ
ಸ್ಥಲದೊಳ್ ಶೋಭಿಸುತಿರ್ಪುದಂ ನೃಪಸುತಂ ಕೈಕೊಂಡನುತ್ಸಾಹದಿಂ ೧೩೦

ಜಲನಿಧಿಪರಿವೃತಧಾತ್ರೀ
ತಲಮಂ ಬಲವಂದು ಪಿರಿದುವಾಸತ್ತ್ರ ಬಲಂ
ನಿಲವೇೞ್ಕುಮೆಂದು ನೃಪಕುಲ
ಲಲಾಮನಂತಲ್ಲಿ ಪಲವುದಿವಸಮನಿರ್ದಂ ೧೩೧

ಮಹಾಶ್ವೇತೆಯ ಸಂದರ್ಶನ

ವ॥ ಅಂತಿರುತ್ತುಮೊಂದು ದಿವಸಂ ಯುವರಾಜನಿಂದ್ರಾಯುಧಮುಮನೇಱಿ ಬೇಂಟೆಯ ವಿನೋದದಿಂ ತೊಳಲುತ್ತುಮಿರೆಯಿರೆ

ಪಿರಿದಪ್ಪಾಶ್ಚರ್ಯಪರಂ
ಪರೆ ಸಮನಿಸಲದ್ರಿಶಿಖರದಿಂದಿೞದಾಡು
ತ್ತಿರೆಯಿರೆ ನಿಜೇಚ್ಛೆಯಿಂ ಕಿ
ನ್ನರಮಿಥುನಮುಮನವನಿಪಾಲತನಯಂ ಕಂಡಂ ೧

ವ॥ ಆಗಳ್ ಸಮುಪಜಾತಕುತೂಹಲಂ ವಿಸ್ಮಯಕ್ಷಿಪ್ತಚಿತ್ತನಾಗಿ

ಜಗದೊಳಗಪೂರ್ವಮೆಂಬೀ
ಬಗೆಯಿಂ ತಾಂ ಪಿಡಿವ ತವಕದಿಂ ಭೋಂಕನೆ ಬಂ
ದಗಣಿತ ಜವಮುಂ ಕಿನ್ನರ
ಯುಗದ ಸಮೀಪಕ್ಕೆ ಬಿಟ್ಟನಿಂದ್ರಾಯುಧಮಂ ೨

ವ॥ ಆಗಳ್ ತಮ್ಮೆಡೆಗೆಯ್ತರ್ಪುದಂ ಕಂಡದೃಷ್ಟಪೂರ್ವಮಪ್ಪುದಱಿಂ ಕಿನ್ನರದ್ವಯಮತಿಭೀತಿಯಿಂ ಪರಿಯೆ

ಪಿಡಿದಪನೀಗಳಾ ಪಿಡಿಯಲೆಯ್ದಿದನಾ ಪಿಡಿದಪ್ಪನೀಗಳಾ
ಪಿಡಿದನೆ ಕಿನ್ನರದ್ವಯಮನೆಂಬಿನೆಗಂ ಬೞಸಂದು ತನ್ನ ಸಂ
ಗಡದವರುಂ ಪರಿಗ್ರಹಮುಮೆಯ್ತರಲಾಱದೆ ಪಿಂದೆ ನಿಲ್ವಿನಂ
ಕಡುಪಿನೊಳಂದು ಬಿಟ್ಟನತಿಶೀಘ್ರದೆ ವಾಜಿಯನಾ ನೃಪೋತ್ತಮಂ ೩

ಮಡದಲಿ ನೂಂಕೆ ವಾಜಿ ಗರುಡಂ[1]ಗಮ[1]ದಿರ್ಮಡಿ ವಾಯುವಿಂಗೆ ಮೂ
ರ್ಮಡಿಯೆನಿಪೊಂದು ತನ್ನ ಜವದಿಂ ಪರಿಯಲ್ಕೆ ಮುಹೂರ್ತಮಾತ್ರದೊಳ್
ಗಡಪದಿನೈದುಯೋಜನಮನೊರ್ವನೆ ಸಂಧಿಸಿ ಪೋದನಂದು ಪೇ
ರಡವಿಯೊಳಾ ತುರಂಗವದನರ್ಕಳ ಬೆಂಬೞಯಂ ಮಹೀಭುಜಂ ೪

1 ಗೆಪ (ಕ)

ಛಲದಿಂದರಸಂ ತಾಂ ಬೆ
ನ್ನೊಳೆ ಪರಿದೆಟ್ಟಿಬಿಟ್ಟ ಪಿಡಿಯಲನುಗೆಯ್ವುದುಮ
ಸ್ಖಲಿತಂ ಮುಂದಣತಾರಾ
ಚಲಶಿಖರಮನೇಱಿದತ್ತು ಕಿನ್ನರಮಿಥುನಂ ೫

ಏಕೆ ನಿರರ್ಥಕಂ ಮಗುವಿನಂದದೆ ಕೋಟಲೆಗೊಂಡೆನಕ್ಕಟಂ
ತೇಕೆಯೊ ಕಿನ್ನರದ್ವಯದ ಬೆಂಬೞಿಯಂ ತಗುಳುತ್ತೆ ಬಂದೆನಿಂ
ತೇಕೆಯೊ ಮೂರ್ಖನಂತೆ ಮತಿಗೆಟ್ಟೆನಿದಂ ಪಿಡಿದಲ್ಲಿ ಬರ್ಪುದೇಂ
ವ್ಯಾಕುಲನಾಗುತಂ ಪಿಡಿಯದಿರ್ದೊಡೆ ಪೇೞ್ ಕಿಡುವೊಂದು ವಸ್ತುವೇಂ ೬

ಏನಾನೊಂದನೆ ಮಾಡಿದೆಂ ಮಗುವಿನಂತೇನಾನುಮೊಂದಕ್ಕೆ ಪೇ
ೞೇನೋ ಕೌತುಕದಿಂದ ಬಂದೆನೆನಗೀ ದುರ್ಮೋಹದುದ್ಯೋಗಮಿಂ
ತೇನಾನೊಂದನೊಡರ್ಚಿತಿಂತಿದೆನುತಂ ತದ್ವೇಗದಿಂ ವಿಸ್ಮಯ
ಧ್ಯಾನಾಧೀನಮನಸ್ಕನೊಂದಿನಿಸು ಬೇಗಂ ನಿಂದನುರ್ವೀಶ್ವರಂ ೭

ವ || ಅಂತು ನಿಂದು

ಪಿರಿದು ಜವಮುಳ್ಳುದಱಿನೀ
ಹರಿ ನಿಮಿಷಕೆ ಪಿರಿದುವರಿಗುಮನಿತಱಿತೂಳೆನಿತಂ
ತರಮನೆಡೆವರಿಗುಮೋ ಚೆ
ಚ್ಚರದಿಂ ಬೞಿಸಂದು ಮಱುಗಿ ಬರ್ಪೆನ್ನಬಲಂ ೮

ತಱಿಗೆಲೆ ಬಳ್ಳಿಯೆಂಬಿವಱ ತಿಂತಿಣಿಯೊಳ್ ತುರುಗಾತಿವೇಗದಿಂ
ದೞಿಯಲೆ ಬಂ[1]ದುದಿಲ್ಲ ಪಥಮುಂ[1] ಬರುತಂ ಮಗುೞ್ವಂದಮೆಂತೊ ಮೇ
ಣ್ಮಱಿದುವರಣ್ಯದೊಳ್ ಸುೞಿವನಿಲ್ಲ ನರಂ ಸರದೋಱುವನ್ನನೇ
ತೆಱದೊಳಮೆಂತು ಪೋಪೆನೊ ಸುವರ್ಣಪುರಕ್ಕೆನುತಂ ನರಾಧಿಪಂ ೯

ವ || ಅಂತು ಚಿಂತಿಸುತಮಿರ್ಪುದುಂ

ವಸುಧೆಯ ಬಡಗಣ ದೇಶ
ಕ್ಕೆ ಸೀಮೆಯೆನಿಪುದು ಸುವರ್ಣಪುರಮತ್ತಲ್ ಮಾ
ನಿಸರಿಲ್ಲದಡವಿ ಬೞಿಕ
ತ್ತೆಸೆವುದು ಕೈಲಾಸಮೆಂಬುದಾ ನಗಮಿದಿರೊಳ್ ೧೦

---

1 ತುಪಥಮಿಂ (ಕ)

ಅದಱಿಂದೋರ್ವನೆ ತೆಂಕಲಾವುದೆನುತಂ ನೋಡುತ್ತಮಿಂ ಪೋಗವೇ
[1]ಟ್ಟುದಿ[1]ದಂತಲ್ಲದೆ ಬೇಱುಪಾಯಮುಣಮಿಲ್ಲಂತಲ್ತೆ ತಂತಮ್ಮ ಮಾ
ಡಿದುದಂ ತಾಮುಣವೇಟ್ಕುಮೆಂದು ಪಿರಿದೊಂದುದ್ವೇಗದಿಂದಂ ಮಗು
ೞ್ಚಿದನಿಂದ್ರಾಯುಧಮಂ ನೃಪಾಲತನುಜಂ ರಾಜಾಧಿರಾಜಾತ್ಮಕಂ ೧೧

ವ॥ ಅಂತು ಕುದುರೆಯಂ ಮಗುೞ್ಚಿ ಮತ್ತಮಿಂತೆಂದಂ

ದಿನಲಕ್ಷ್ಮೀರಸನೈಕಮಧ್ಯಮಣಿಯಾದಂ ಭಾಸ್ಕರಂ ಶ್ರಾಂತಿಯುಂ
ಘನಮಾದತ್ತು ತುರಂಗಮಕ್ಕದಱಿನಾಂ ನೀರ್ದಾಣಮಂ ನೋಡಿ ಮೆ
ಲ್ಲನೆ ಸಾರ್ದಲ್ಲಿ ಬೞಲ್ಕೆಯುಂ ಕಳೆದು ಪೋಪೆಂ ಬೞಿಕ್ಕೆಂದು ವಾ
ರಿನಿವಾಸಂಗಳನಲ್ಲಿ ನಾಲ್ದೆಸೆಗಳೊಳ್ ನೋಟ್ಕುಂ ಮಹೀವಲ್ಲಭಂ ೧೨

ವ॥ ಅಂತು ನೋಡುತ್ತುಮಿರೆಯಿರೆ

ಕೊಳದಿಂದಂ ತೆಗೆದೊಟ್ಟಿಕೊಂಡ ಕುಮುದಾಂಭೋಜಾತಕಲ್ಹಾರಕು
ಟ್ಮಲಶಾಲೂಕಮೃಣಾಳಜಾಲಮನಿಡುತ್ತೀಡಾಡುತಂ ಪಾದಪಂ
ಗಳ ಪುಷ್ಪಸ್ತಬಕಂಗಳಂ ಮುಱಿವುತಂ ಪೋಗಲ್ ಮಥೇಭಂಗಳಾ
ಗಳದೇಂ ತೀಡಿದುದೋ ಸುಗಂಧಬಹುಳಂ ಬಂದೊಂದು ಮಂದಾನಿಲಂ ೧೩

ವ॥ ಅಂತು ನಿರೀಕ್ಷಿಸುತ್ತಂ ಬಂದ ಸುರಭಿಗಂದವಹಸೂಚ್ಯಮಾನ ಗಜಯೂಥ ಮಾರ್ಗಂಬಿಡಿದನೇಕಚಮತ್ಕಾರಿಯಪ್ಪ ಕೈಲಾಸತಟದೊಳ್ ಪೋಗೆವೋಗೆ

ಗಿರಿಶಾದ್ರೀಂದ್ರದ ಪೂರ್ವೋ
ತ್ತರದಿಶೆಯೊಳ್ ಕಾರ್ಮುಗಿಲ್ಗಳೆಱಗಿದುವೆನೆ ಕಾ
ರಿರುಳೆಳಸಿತೆನೆ ಕಱಂಗಿದ
ತರುಷಂಡಮನವನಿಪಾಲತನಯಂ ಕಂಡಂ ೧೪

ವ॥ ಅಂತು ನಿರೀಕ್ಷಿಸುತ್ತಂ ಪೋಗೆವೋಗೆ

ಕುಮುದರಜಂಗಳೊಳ್ ಪೊರೆದು ವಾಃಕಣಜಾಲಮನಾಂತು ಕೂಡೆ ವಿ
ಶ್ರಮಿಸಿ ತರಂಗಮಾಲಿಕೆಗಳೊಳ್ ಕಲಹಂಸನಿ[2]ನಾದಬ[2]ಭ್ರಮ
ದ್ಭ್ರಮರರವಂಗಳೊಳ್ ಬೆರಸಿ ಮಾರುತನೊಯ್ಯನೆ ಬಂದು ತೀಡಿದ
ತ್ತಮರ್ದೊಸೆದಪ್ಪಿಕೊಂಡು ಕರೆವಂತೆವೊಲಾ ಮನುಜೇಂದ್ರಚಂದ್ರನಂ ೧೫

1 ಡಿದು (ಕ) 2 ಕಾಯಜ (ಕ)

ವ॥ ಅಂತಾ ತರುಷಂಡಮಂ ನೋಟ್ಪನ್ನೆಗಮಲ್ಲಿ

ಎಲೆ ತಾರಾಗಂ ಹರಂ ಕಣ್ಣಿಡೆ ಕರಗಿದುದಂತಲ್ತು ರುದ್ರಾಟ್ಟಹಾಸಂ
ಜಲಮಾದತ್ತಲ್ತು ಚಂದ್ರಾತಪಮಮೃತಾರಸಾಕಾರಮಾಯ್ತಲ್ತು ಹೈಮಾ
ಜಲಮಂಭೋರೂಪದಿಂದಂ ಪರಿಣಮಿಸಿದುದಂತಲ್ತು ನೈರ್ಮಲ್ಯಶೋಭಾ
ಕಲಿತಂ ತ್ರೈಲೋಕ್ಯಲಕ್ಷ್ಮೀಮಣಿಮುಕುರಮೆನಲ್ ಚೆಲ್ವದಾಯ್ತಬ್ಜಷಂಡಂ ೧೬

ವ॥ ಅದಲ್ಲದೆಯುಂ

ವಸುಧೆಯ ಚಂದ್ರಕಾಂತಮಣಿಭೂಗೃಹಮೆನ್ನದೆ ಘೂರ್ಣಿತಾರ್ಣವ
ಪ್ರಸವಸಮುಗ್ರನಿರ್ಗಮನಮಾರ್ಗಮಿದೆನ್ನದೆ ನೋಡೆ ಪರ್ವಿದಾ
ಗಸದವತಾರಮೆನ್ನದೆ ಜಗತ್ರಯಸಂಚಿತ ಪುಣ್ಯಸಂಚಯಂ
ರಸಮಯಮಾದುದೆನ್ನದೆ ಸರೋವರಮಂ ಪೆಱತೇನನೆಂಬುದೋ ೧೭

ವ॥ ಮತ್ತಮದು ತೆಕ್ಕನೆ ತೀವಿಯುಮತಿನಿರ್ಮಲತೆಯಿಂ ರಿಕ್ತಮಾದಂತಿರ್ಪು
ದಂತುಮಲ್ಲದೆಯುಂ

ಎಸಗುವ ಮಂದಾನಿಲನಿಂ
ಕುಸುಮರಜಂಬೊರೆದು ಪೊಣ್ಮುವಳಿದೆರೆಗಳಿನೇ
ನೆಸೆದುದೊ ಸುರಚಾಪಂಗಳ್
ಪಸರಿಸದಂಬರಮೆನಲ್ ಸರೋವರಮಾಗಳ್ ೧೮

ಪ್ರತಿಬಿಂಬದ ನೆವದಿಂ ವನ
ತತಿ ಶೈಲಗ್ರಹನಿಕಾಯ ತಾರಾಂಕ ಜಗ
ತ್ರಿತಯಮುನಬ್ಜೋದರನಾ
ಕೃತಿಯಂ ತನ್ನೊಳಗೆ ತಳೆದು ತಿಳಿಗೊಳನೆಸೆಗುಂ ೧೯

ತಡಿವಿಡಿದೊಪ್ಪಿ ತೋಱುವ ತಮಾಲವನಂಗಳ ಮರ್ವು ಪರ್ವಿ ಕ
ರ್ಮುಡುಗಳೊಳೆಯ್ದೆ ಮಾರ್ತೊಳಗೆ ನೀಲಸರೋಜವನಂಗಳಲ್ಲಿ ತ
ಳ್ತಿಡಿದಿರೆ ಕಾಳಗತ್ತಲೆ ತಗುಳ್ದಿರುಳಾದುದೆ ಗೆತ್ತು ತಮ್ಮೊಳಿ
ರ್ದೆಡೆಯಿನಗಲ್ವವಂಜಿ ಕೆಲವುಂ ಪೊಣರ್ವಕ್ಕಿಗಳಬ್ಜಷಂಡದೊಳ್ ೨೦

ವ॥ ಅಂತುಮಲ್ಲದೆಯುಂ

ಆದೊಂದೆಡೆ ಜಲೇಶಹಂಸಮು[1] ಖದಾರಿ[1] ತಾಂಭೋಜಮಂ
ತದೊಂದೆಡೆ ದಿಶೇಭಜರ್ಝರಿತನೀಲನೀರೇಜಮಂ
ತದೊಂದೆಡೆ ವೃಷಾಂಕಪುಂಗವವಿಘಟ್ಟಿತೋತ್ತೀರಮಂ
ತದೊಂದೆಡೆ ಕೃತಾಂತಸ್ಯೈರಿಭವಿಕೀರ್ಣಫೇನೋತ್ಕರಂ ೨೧

ವ || ಅಂತುಮಲ್ಲದೆಯುಂ

ವಿರಹಿಗಳಂತೆ ಮೃಣಾಳೋ
ತ್ಕರವಲಯಾಂಕಿತವರೇಣ್ಯದಂತೆ ವಿಜೃಂಭೋ
ದ್ಧುರಪುಂಡರೀಕಸಂಕುಳ
ಮುರಗಾನ್ವಯದಂತನಂತಪದ್ಮೋಪೇತಂ ೨೨

ದಿವಿಜರಗೇಂದ್ರದಿಂ ಕಡೆದ ಪಾಲ್ಗಡಲಂತಿರೆ ನೀಲಕಂಠಪೀ
ತವಿಷಮನಂಗಕೇತನದವೊಲ್ ಮಕರಾಂಕಿತಮುರ್ವರೇಶ್ವರಾಂ
ಘ್ರಿವೊಲನಿಮೇಷಕೂರ್ಮಲಲಿತಂ ಮಲಯಾದ್ರಿನಿಕುಂಜದೇಶದಂ
ತೆವೊಲತಿಸೌರಭಾಕಲಿತಚಂದನ ಶೀತವನಂ ಸರೋವರಂ ೨೩

ಆವುವುಱದೆಡೆಗಳಿಂದು ಸ
ರೋವರಮಂ ನೋಡುತಿರ್ಪ ಬಗೆಯಿಂ ಕೈಲಾ
ಸಾವಾಸಮಂ ಬಿಡಂ ಗೌ
ರೀವಲ್ಲಭನೆಂದೊಡಾರಿದಂ ನೆಱೆ ಪೊಗೞರ್ ೨೪

ಅಳವಱಯದೆ ತುರಗಮುಖ
ರ್ಕಳ ಬಱವಱಯನೆ ತಗುಳ್ದು ಬಂದುದುಮೀಗಳ್
ಫಳಮಾದತ್ತೊಂದಱೊಳೀ
ಕೊಳನಂ ಕಂಡುದಱೊಳೆನುತೆ ಮತ್ತಂ ಭೂಪಂ ೨೫

ವ || ಆಗಳುಮಾವಲ್ಲಭಪದಪದ್ಮಮುದ್ರಾಂಕಿತಮುಂ ದಿವಿಜರಾಜಗಜಗಂಡಸ್ಥಳಗಳಿತಮದಜಲಸಿಕ್ತಮುಂ ಭಗವತೀಸಿಂಹಾವತರಣಮಾರ್ಗಮುಮಪ್ಪ ದಕ್ಷಿಣತೀರದ ಕುಸುಮಲತಾಮಂಟಪದ ಮುಂದೆ ತುರಂಗದಿಂದವನಿತಳಕ್ಕವತರಿಸಿ ಪಲ್ಲಣಮಂ ಬಿಟ್ಟು ತದನಂತರದೊಳ್

1 ಖಂಸಿ (ಕ) 2 ದ್ಯಾನ್ವೀ (ಕ)

ಮಹಿತಳ ಲುಠಿತೋತ್ಥಿತನುಂ
ಗೃಹೀತಕತಿಪಯತೃಣಾಂಕುರಗ್ರಾಸಮನಾ
ಮಹಿಪಂ ಪೀತಾಂಬುವನಂ
ದು ಹಯವನಾಸನ್ನವಿಟಪಿಯೊಳ್ ನಿಯಮಿಸಿದಂ ೨೬

ಲಲಿತ ನಿಜಕನಕಮಯ ಶೃಂ
ಖಲೆಯಿಂ ಹರಿಚರಣಯುಗಳಮಂ ನಿಯಮಿಸಿ ಶಾ
ಡ್ವಲತೃಣತತಿಯಂ ಖಡ್ಗದಿ
ನಿಳಾಧಿಪಂ ಕೊಯ್ದು ಮುಂದೆ ಸಾರ್ಚಿದನಾಗಳ್ ೨೭

ವ॥ ಅನಂತರಮಾ ವಿಬುಧಕಮಳಾಕರರಾಜಹಂಸನಾ ಕಮಳಾಕರದೊಳ್ ಕರಚರಣವದನಪ್ರಕ್ಷಾಲನಂಗೆಯ್ದು ಚಾತಕನಂತೆ ಕೃತಜಲಾಹಾರನಾಗಿ ಚಕ್ರಾಹ್ವಯದಂತೆ ಮೃಣಾಳನಾಳಂಗಳಂ ಮೆಲ್ದು ವಿಯೋಗಿಯಂತೆ ನಳಿನದಳಂಗಳನುರದೊಳೊತ್ತಿಕೊಂಡು ತನ್ನೊಳಿಂತೆಂದಂ

ಅಂಚೆಗಳಿಂಚರದಿಂ ತ
ಣ್ಪಿಂ ಚೆಲ್ವಿಂ ಸವಿಯಿನಬ್ಜಘನಸೌರಭದಿಂ
ಕಾಂಚನಕಮಳಾಕರಮಿದು
ಪಂಚೇಂದ್ರಿಯಸುಖಮನೆನಗೆ ಪಡೆದಪುದೀಗಳ್ ೨೮

ವ॥ ಎನುತಮಲ್ಲಿಂ ಪೊಱಮಟ್ಟು

ಲಲಿತಲತಾಗೃಹದಿಂದೂ
ಪಲಮಂ ಸಾರ್ದುಂಡೆಸುತ್ತಿ ಮೇಲುದನಾಗಳ್
ತಲೆಗಿಂಬುಮಾಡಿ ನೃಪಕುಲ
ತಿಲಕಂ ಪಟ್ಟಿರ್ದನಿರ್ಪುದುಂ ತತ್ಕ್ಷಣದೊಳ್ ೨೯

ಮುರಿದ ಕೊರಲ್ ಬಟಿಲ್ದೆಳಪಲಾಟಿಪ ಮೆಯ್ ಕಡೆವಾಯ ಲೋಳೆಯೊಳ್
ಪೊರೆದುಗುತರ್ಪ ಪಚ್ಚಪಸಿಯಚ್ಚಗಱುಂಕೆ ಮರಲ್ದ ದಿಟ್ಟಿ ಕ
ತ್ತರಿಮೊನೆಗೊಂಡೆಲ್ವ ಕಿವಿ ಸೂಚಿಸಿದಪ್ಪುದು ಸೋಲ್ತಭಾವಮಂ
ತುರಗಮಿದೇನನಾಲಿಸುತಮಿರ್ದಪುದೆಂದು ನರೇಂದ್ರಚಂದ್ರಮಂ ೩೦

ವ॥ ಅಂದದನಚ್ಚರಿವಟ್ಟು ವೀಣಾವಿದ್ಯಾಧರಂ ಭಾವಿಸಿನೋಡುತ್ತಮಿರ್ದನನ್ನೆಗಂ

ಎಲೆ ಪೆಣ್ದುಂಬಿಯ ಗಾವರಂಬೊರೆದು ಪೊಣ್ಮುತ್ತಿರ್ದಪುಷ್ಪಾಸ್ತ್ರಚಾ
ಪಲತಾಜ್ಯಾರವದಂತಮಾನುಷಮೆನಿಪ್ಪೊಂದೋಜೆಯೊಳ್ ಸಂದ ಕಾ
ಕಲಿಯಿಂದಂ ಪುದಿದೊಯ್ಯನೊಯ್ಯನೆ ವಿಪಂಚೀನಾದಮೀಗಳ್ ಪಳಂ
ಚಲೆವುತ್ತಿರ್ದಪುದಲ್ತೆ ಸಾಲ್ವುದಿದೆ ತದ್ಗಂಧರ್ವರಂ ಸೋಲಿಸಲ್ ೩೧

ಇದು ಮನುಜರ್ಗಗೋಚರಮೆನಿಪ್ಪ ಹರಾದ್ರಿಯತಪ್ಪಲಲ್ಲಿಗೇ
ಯದ ದನಿ ನುಣ್ಪುವೆತ್ತೆಸೆಯುತಿರ್ದಪುದೀಗಳೆ ಪೋಗಿ ನೋಟ್ಪೆನಾ
ನಿದನೆನುತಂ ಕುತೂಹಲಿತಮಾನಸನಂದು ನರೇಂದ್ರನಂದನಂ
ಕುದುರೆಯ ಬೆಂಗೆವಂದು ನಡೆದಂ ಮೃಗಸೂಚಿತ ಗೇಯಮಾರ್ಗದಿಂ ೩೨

ವ || ಅಂತು ಪೋಗೆವೋಗೆ

ಗಿರಿಜಾಕರ್ಣಾವತಂಸೋತ್ಪಲಮನಲೆಯುತಂ ಪಾರಿಜಾತಪ್ರಸೂನೋ
ದರದಿವ್ಯಾಮೋದಮಂ ಬೀಱುತುಮಭವವೃಷಾಧೀಶರೋಮಂಥ ಫೇನೋ
ತ್ಕರದೊಳ್ ತಳ್ಪೊಯ್ಯುತಂ ಧೂರ್ಜಟಿ[1]ನಿಬಿಡ[1]ಜಟಾಹೀಂದ್ರಪೀತಾವಶೇಷಂ
ಪರಮಾನಂದಾವಹಂ ಬಂದೆಸೆಗಿದುದಭವಾದ್ರೀಂದ್ರಚಾರಂ ಸಮೀರಂ ೩೩

ವ || ಅಂತು ಬಂದ ಮಂದಮಾರುತನಂ ನರೇಂದ್ರನಂದನನಿದಿರ್ಗೊಂಡು ಪೋಗೆವೋಗೆ ತದ್ಗಿರೀಂದ್ರಚಂದ್ರಪ್ರಭಮೆಂಬುಪಾಂತಪರ್ವತದ ಪಶ್ಚಿಮಪ್ರಾಂತದೊಳ್ ವಿಕೀರ್ಯಮಾಣ ಬಹುಳಕುಸುಮಂಗಳಪ್ಪ ಕನಕಕೇತಕೀವ್ರಜಂಗಳೊಳಂ ಮತ್ತಮಧುಕರಝೇಂಕಾರಂಗಳಪ್ಪ ಸಹಕಾರಂಗಳೊಳಂ ಪರಿವೇಷ್ಟಿತಮಧುವ್ರತಂಗಳಪ್ಪ ತಮಾಲಂಗಳೊಳಂ ಅನ್ಯೋನ್ಯಕಲಹಕುಪಿತ ಕಪೋತಪೋತಪಾತಿತಂಗಳಪ್ಪ ಪೂಗೊಳೊಳಂ ನಯನಾನಂದಂಗಳಪ್ಪ ಚಂದನಂಗಳೊಳಂ ಶುಕನಿಕರಾವೃತಂಗಳಪ್ಪ ಫಲಭರಿತ ದಾಡಿಮೀನೀಡಂಗಳೊಳಂ ವಸಂತಸಾಮಜಘಟಾಪಿನದ್ಧ ಕದಳಿಕಾನಿಕಾಯಾಯಮಾನಂಗಳಪ್ಪ ಕದಳೀವನಂಗಳೊಳಂ ಹರಿದ್ವಿತಾನೋಪಮಾನಂಗಳಪ್ಪ ಲತಾಪ್ರತಾನಂಗಳೊಳಂ ನಿಜಸೌರಭಾಕೃಷ್ಟಮಧುಕರಕುಲಂಗಳಪ್ಪ ವಕುಳಂಗಳೊಳಂ ಕೃತಪುಲಕಂಗಳಪ್ಪ ತಿಲಕಂಗಳೊಳಂ ಕಂಗೊಳಿಪ ಕೈಲಾಸತರಂಗಿಣೀತರಂಗಿತ ಕಾಂಚನಸಿಕತಿಲಭೂಭಾಗದೊಳ್ ಸೂರ್ಯಕಾಂತಮಣಿಮಯ ಶೂಲಪಾಣಿದೇವಾಯತನಮಿರ್ದುದದನನತಿದೂರದೊಳೆ ನೋಡಿ

ಇದು ಸಿದ್ಧಾಯತನಂ ಮನಂಗೊಳಿಸಿ ತೋಱುತ್ತಿರ್ಪುದಿಲ್ಲಿಂದೆ ಬಂ
ದುದು ವೀಣಾಧ್ವನಿ ತಪ್ಪದೀಯೆಡೆಯೊಳಿರ್ದಾರ್ ಬಾಜಿಸುತ್ತಿರ್ದಪರೆಂ
ಬುದನಾಂ ನೋಡುವೆನೀಗಳೆಂದು ಮನದೊಳ್ ನಿಶ್ಚೈಸುತಂ ಮೆಲ್ಲನೆ
ಯ್ದಿದನಾಸ್ಥಾನಮನಂದನಂತಮಹಿಮಂ ಭೂಪಾಲವಿದ್ಯಾಧರಂ ೩೪

1 ನಿಕಟ (ಕ)

ವ॥ ಅಂತದನೆಯ್ದಿ ನೋಟ್ಪನ್ನೆಗಮಲ್ಲಿ

ಹರಹಾಸಾವಯವಂಗಳಂತಿರಲನಂತಾನಂತಭೋಗಂಗಳಂ
ತಿರೆ ಪೂರ್ಣೇಂದುಕಲಾಳಿಯಂತಿರೆ ಸಿತಾಬ್ಜಾನೀಕಮೊಪ್ಪಲ್ ಶಿಖಾಂ
ತರದೊಳ್ ನಿರ್ಮಲ ದಿವ್ಯಮೌಕ್ತಿಕಶಿಲಾಲಿಂಗಂ ಚತುರ್ವಕ್ತ್ರಸುಂ
ದರಮಲ್ಲಿರ್ದುದು ರತ್ನಪೀಠಘಟಿತಂ ದೇದೀಪ್ಯಮಾನಪ್ರಭಂ ೩೫

ವ॥ ಅಂತಿರ್ದ ಚರಾಚರಗುರುವಪ್ಪ ಶೂಲಪಾಣಿದೇವರಂ ಕಾಣ್ಬುದುವಾ ಪರಮೇಶ್ವರನ ಸಕಳಜಗದಭೀಷ್ಟಫಲದಾಯಕನುಪ್ಪ ದಕ್ಷಿಣಾಮೂರ್ತಿಯನಾಶ್ರಯಿಸಿ

ಅಮೃತಾಂಭೋರಾಶಿಪೂರಪ್ರತಿಮ ನಿಜತಪಸ್ಸಂಚಯಂ ಪರ್ವಿತೋ ಲೋ
ಕಮನೆಂಬಂತಿರ್ದ ದೇಹಾಂಶುಗಳ ಬಳಗದಿಂ ಕಾನನಾನೀಕಮುಂ ದಂ
ತಮಯಂ ಮಾಟ್ಪಂತೆ ತಾರಾಚಳಮನಸದಳಂ ನುಣ್ಪಿಪಂತೋರ್ವಳತ್ಯು
ತ್ತಮ ದಿವ್ಯಾಕರೆ ಕುಳ್ಳಿರ್ದತನುಹರನನಾರಾಧಿಸುತ್ತಿರ್ದಳಾಗಳ್ ೩೬

ವ॥ ಅಂತುಮಲ್ಲದೆಯುಂ

ತಳತಳಿಸಿ ಪೊಳೆವ ಪಳುಕಿನ
ನಿಲಯದೊಳಮೃತಾಬ್ಧಿ ಜಲದೊಳಭ್ರಕಪಟಲಂ
ಗಳ ಮಱೆಯೊಳಿರ್ದಳೆನೆ ಮೆ
ಯ್ವೆಳಗಿಂ ನೆಱೆಯಱಿಯಲಾದುದಿಲ್ಲಂಗನೆಯಂ ೩೭

ಸೊಗಯಿಸವೆಂದು ಪೃಥಿವ್ಯಾ
ದಿಗಳೆನಿಸುವ ಪಂಚಭೂತಮೆಲ್ಲವನುಱದಾ
ವಗಮುಜ್ಜ್ವಳಾಂಗಿಯಂ ಧವ
ಳ ಗುಣದೆ ನಿರ್ಮಿಸಿದನಾಗವೇಟ್ಕುಂ [1]ಧಾತ್ರಂ[1] ೩೮

ವ॥ ಅಂತುಮಲ್ಲದೆಯುಂ

ಪತಿಯನೆ ಬೇಡಿ ರುದ್ರನ ಸಮೀಪದೊಳುಗ್ರತಪಕ್ಕೆ ನಿಂದಳೋ
ರತಿ ಶಶಿಲೇಖೆಯಂ ನೆನೆದು ಬಂದಳೋ ಮೇಣಮೃತಾರ್ಣವಾಧಿದೇ
ವತೆ ಶಿತಿಕಂಠಕಂಠತಮಮುಂ ಕಳೆವಾಗ್ರಹದಿಂದೆ ಬಂದಳೋ
ಕ್ಷಿತಿಗಮೃತಾಂಶುಮೂರ್ತಿ[2]ಯೆನಲೇನೆ[2]ಸೆದಿರ್ದುದೊ ರೂಪು ಕಾಂತೆಯಾ ೩೯

---

1 ಪ್ರೋಕ್ತಂ (ಕ) 2 ಯನೆಂಗೆ (ಕ)

ಹರಹಾಸದ್ಯುತಿ ಮೂರ್ತಿಗೊಂಡುದೊ ವಿರಿಂಚಖ್ಯಾತಿ ಲೋಕಂಗಳೊಳ್
ಪರಿದಾಯಾಸದೆ ನಿಂದುದೋ ಕಲಿಯುಗಂ ನಿರ್ಮೂಲಿಸಲ್ ಧರ್ಮನುಂ
ಪಿರಿದುಂ [1]ಶೋಕದೊಳಾ ತ್ರಯೀವಧು ವನಂಬೊ[2]ಕ್ಕಿರ್ದಳೋ ಪೇೞಿಮ
ಚ್ಚರಿಯೆಂಬಂತಿರೆ ದಿವ್ಯಸುಂದರಿ ಮನಕ್ಕಾನಂದಮಂ ಮಾಡಿದಳ್ ೪೦

ಬರಲಿರ್ದ ಕೃತಯುಗದ ಬೀ
ಜರುಚಿರಕಳೆ ಪೆಣ್ಣರೂಪದಿಂದಿರ್ದುದೊ ಭಾ
ಸುರ ಶೇಷದೇಹರುಚಿ ತಾಂ
ಧರೆಗವತರಿಸಿರ್ದುದೆನೆ ಕರಂ ಸೊಗಯಿಸಿದಳ್ ೪೧

ದಶವದನೋನ್ಮೂಲನಭಯ
ವಶದಿಂ ಕೈಲಾಸಲಕ್ಷ್ಮಿ ಬಂದಳೊ ಬಳಭ
ದ್ರ ಶರೀರಕಾಂತಿ ಮಧುಮದ
ವಿಶೇಷಘೂರ್ಣನದಿನಲ್ಲಿ ಬಂದಿರ್ದಪಳೋ ೪೨

ದ್ವೀಪಾಂತರಮುಂ ಶ್ವೇತ
ದ್ವೀಪಸ್ತ್ರೀ ನೋಡಲೆಂದು ಬಂದಳೊ ಭುವನ
ವ್ಯಾಪಿ ಸಿತಪಕ್ಷಸಂತತಿ
ರೂಪಂ ಕೈಕೊಂಡು ನಿಂದುದೆನೆ ಸೊಗಯಿಸುಗಗುಂ ೪೩

ಕಡೆದರೊ ಶಂಖದಿಂ ತೆಗೆದರೋ ನವಮೌಕ್ತಕದಿಂ ಮೃಣಾಳದಿಂ
ಪಡೆದರೊ ದಂತದಿಂದೆಸೆಯೆ ಮಾಡಿದರೋ ರುಚಿರೋಜ್ವಲಾಂಗಮಂ
ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ ಪಾರದಂ
ದೊಡೆದರೊ ಪೇೞಿನಲ್ ಕರಮೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ ೪೪

ಪೊಳೆವ ರಜತಾಭ್ರಕದ್ಯುತಿ
ಗಳಿನಮೃತರಸಪ್ರವಾಹದಿಂದಭಿಷವಮು
ಗ್ಗಳಿಸೆ ತಳತಳಿಸಿ ತೊಳಗುವ
ಪಳುಕಿನ ಪುತ್ಥಳಿಕೆಯಂತೆ ಕರಮೆಸೆದಿರ್ದಳ್ ೪೫

ಪೊಳೆವೆಳನೇಸಱಿಂ ತೆಗೆದ ರಶ್ಮಿಗಳಂತೆ ಮಡಲ್ತು ಕಾಂತಿಯಂ
ತಳೆದೆಳಮಿಂಚಿನೊಳ್ದಳಿರ್ಗಳಂತೆ ಕವಲ್ತು ಮೃಗಾಂಕಮೌಳಿ ನಿ
ರ್ಮಳಪದಭಸ್ಮರೇಣುಗಳಿನಲ್ ನವಮಜ್ಜನ ವಾಃಕಣಂಗಳಂ
ತಳೆದು ಪೆಗಲ್ವರಂ ಬಳೆದು ರಂಜಿಸುಗುಂ ಜಡೆಗಳ್ ಮೃಗಾಕ್ಷಿಯಾ ೪೬

1 ಕೌತುಕಮಾದಮಾವಧುಮನಂ ಪೊ (ಕ)

ಶಿವನಾಮಾಂಕಿತಮಂ ರ
ತ್ನವಿರಚಿತಮನುತ್ತಮಾಂಗದೊಳ್ ಪಾದೊಯು
ಗ್ಮವನೆಸೆಯೆ ತಳೆದು ಭಕ್ತಿಯೆ
ಭವಸನ್ನಿಧಿಯಲ್ಲಿ ರೂಪುಗೊಂಡಂತಿರ್ದಳ್ ೪೭

ತೊಳಗುವ ತಾರಾಚೂರ್ಣೋ
ಜ್ವಳ ಭಸಿತಲಲಾಮದಿಂದೆ ಪೆಱೆವೆರಸು ತಳ
ತ್ತಳಿಸುವ ಹೇಮಾಚಳಮೇ
ಖಳೆಯಂತಿರೆ ಕಾಂತೆ ಕಣ್ಗೆ ಕರಮೆಸೆದಿರ್ದಳ್ ೪೮

ಪಿರಿದೆನಿಪ ಭಕ್ತಿಭರದಿಂ
ದರಲ್ದು ಸಿರಿ ನೆಲಸಿತೋರ್ಪ ಕಣ್ಮಲರ್ಗಳ್ ನ
ಟ್ಟಿರೆ ಮಗುೞೆ ದೇವನಂ ಪುಂ
ಡರೀಕಮಾಲೆಗಳಿನರ್ಚಿಪಂ[1]ತೆಸೆ[1]ದಿರ್ದಳ್ ೪೯

ರಸವೊಸರ್ವಂತು ಪಾಡುತಿರೆ ಶುದ್ಧಮನೋಮಣಿದೀಪ್ತಿ ಪೊಣ್ಮಿ ರಾ
ಜಿಸಿದಪುದೋ ಸ್ತುತಿಪ್ರಕರನಿರ್ಮಳ ವರ್ಣಸಮೂಹಮೊತ್ತುಗೊಂ
ಡೆಸೆವುದೊ ಪೇೞ್ವಿನಲ್ ಪೊಳೆವ ದಂತಮರೀಚಿಗಳಿಂ[2]ದಮೀಶ್ವರಂ
ಗೊಸದ[2]ಭಿಷೇಕಮಂ ಮಗುೞೆ ಮಾಡುವವೊಲ್ ಬಗೆಗೊಪ್ಪಿ ತೋಱಿದಳ್ ೫೦

ವನರುಹನಾಭನಾಭಿಸಿತಪಂಕಜಬೀಜಮೊ ಪದ್ಮಗರ್ಭನಾ
ನನದೆ ಪೊದಲ್ದ ವೇದವಿಮಳಾಕ್ಷರಮಾಲೆಯೊ ಕಯ್ಯ ಸೋಂಕು ಪಾ
ವನತರಮೆಂದು ಸಪ್ತಮುನಿಮಂಡಲಮಿರ್ಪುದೊ ಬಂದು ಪೇೞ್ವಿನಲ್
ವನಿತೆಯ ವಸ್ತ್ರಕ್ಷವಲಯಂ ಕೊರಲೊಳ್ ಕರವೊಪ್ಪಿ ತೋಱುಗುಂ ೫೧

ತೊಳಗುವ ಮೋಕ್ಷದ್ವಾರದ
ಕಳಸಂಗಳಿವೆನಿಸಿ ತೋರ್ಪ ಕುಚಯುಗದಿಂ ಕೋ
ಮಳೆ ಹಂಸಮಿಥುನದಿಂದಂ
ವಿಳಸಿತಮಾದಮರನದಿಯನನುಕರಿಸಿರ್ದಳ್ ೫೨

ಎಳವೆಱೆಯೊಳ್ಗದಿರ್ಗಳ್ ಬಂ
ದೆಳಸಿದವೀಶ್ವರನ ಸನ್ನಿಧಾನದೊಳೆಸೆವೀ
ಲಲಿತಾಂಗಿಯನೆಂಬಿನೆಗಂ
ಪೊಳೆಯುತ್ತಂ ಬ್ರಹ್ಮಸೂತ್ರಮೇನೊಪ್ಪಿದುದೋ ೫೩

---

1 ತೊಳಿ (ಕ) 2 ದುವರಂಗೆಸೆವ (ಕ)

ಸತಿ ಪದ್ಮಾಸನದೊಳಿರ
ಲ್ಕತಿರುಚಿರೋತ್ತಾನ ಚರಣತಳರುಚಿಯಿಂ ಲೋ
ಹಿತಮಾದ ದುಗುಲದಿಂದಂ
ನಿತಂಬವಿಸ್ತಾರಮೇಂ ಮನಂಗೊಳಿಸಿದುದೋ ೫೪

ವ|| ಮತ್ತಂ ಹಾರಲತೆಯಂತೆ ಕಂಠಯೋಗ್ಯಮುಂ ಗ್ರಹಪಂಕ್ತಿಯಂತೆ ಧ್ರುವ ಪ್ರತಿಬದ್ಧಮುಂ ಮತ್ತನಂತೆ ಘೂರ್ಣಿತಮಂದ್ರತಾರಮುಂ ಮೀಮಾಂಸೆಯಂತೆ ಭಾವ ನಾನುಬದ್ಧಮುಮಪ್ಪ ಗೀತೆಯಿಂ ವೀಣೆಯಂ ಬಾಜಿಸುತ್ತಿರ್ದಳಂತುಮಲ್ಲದೆಯುಂ

ಪಳುಕಿನ ಭಿತ್ತಿಗಳೊಳ್ ಮಾ
ರ್ತೊಳಗುವ ನಿಜತನುಗಳಿಂದೆ ತನ್ನಂದದ ಕೋ
ಮಳೆಯುರ್ವೆರಸೀಶನ ಪದ
ನಳಿನಮನಾರಾಧಿಪಂತೆ ಸತಿ ಸೊಗಯಿಸಿದಳ್ ೫೫

ಒದವಿದ ಭಕ್ತಿಯಿನೀಶನ
ಹೃದಯದೊಳಿರ್ದಪಳೆನಲ್ಕೆ ನವಮೌಕ್ತಿಕಲಿಂ
ಗದ ನಡುವೆ ರೂಪು ಮಾರ್ತೊಳ
ಗಿದುದೆತ್ತಂ ವಿಮಲ ಕಮಲದಳಲೋಚನೆಯಾ ೫೬

ದಿವಿಜತೆಯಿಂ ದಿವಸಂಗಳ
ಪವಣಱಿಯಲ್ಬಾರದಾದೊಡಂ ಸೊಗಯಿಸಿ ತೋ
ರ್ಪವಯುವದಿಂದಂ ಪದಿನೆಂ
ಟ್ಬರಿಸದಾಕೃತಿಯಿನಬ್ಜಮುಖಿ ಕಣ್ಗೆಸೆದಳ್ ೫೭

ವ|| ಅಂತು ವಿರೂಪಾಕ್ಷದೇವರನಾರಾಧಿಸಿತ್ತಮಿರ್ದ

ಅತಿಗಂಭೀರೆಯನೂರ್ಜಿತ
ಮತಿಯಂ ನಿರ್ಮಳೆಯನಮಳ ಧೈರ್ಯಾದಿಗುಣಾ
ನ್ವಿತೆಯಂ ದೃಢಪಾಶುಪತ
ವ್ರತೆಯಂ ಕನ್ಯಕೆಯನಂದು ಕಂಡಂ ಕ್ಷಿತಿಪಂ ೫೮

ವ|| ಅಂತು ಕಂಡವನಿತಳಕ್ಕವತರಿಸಿ ತುರಂಗಮನೊಂದು ತರುಶಾಖೆಯೊಳ್ ಕಟ್ಟಿ ಭಗವದಿಂದುಮೌಳಿಯ ಪುರೋಭಾಗದೊಳ್ ನಿಂದು ಪೊಡಮಟ್ಟು ದಿವ್ಯಕಾಂತೆಯ ರೂಪಸಂಪತ್ತಿಗಂ ಕಾಂತಿಗಮುಪಶಾಂತಿಗಂ ವಿಸ್ಮಯಂಬಟ್ಟು ನೋಡುತ್ತಮಿರ್ದು

ಕಿನ್ನರಯುಗ್ಮಮೆತ್ತ ವನಮೆತ್ತ ಸರೋರುಹಷಂಡಮೆತ್ತ ಗೀ
ತಂ ನಯದಿಂದ ಬಂದೆಸವುದೆತ್ತ ಭವಾಲಯಮೆತ್ತ ಭೋಂಕನೀ
ಕನ್ನೆಯ ಕಾಣ್ಕೆಯೆತ್ತ ಮನುಜಂಗೆನಗೆಂದು ನರೇಂದ್ರನಂದನಂ
ತನ್ನೊಳೆತಾನೆ ವಿಸ್ಮಯದೆ ಭಾವಿಸುತಿರ್ದನದೊಂದು ಜಾವಮಂ ೫೯

ವ॥ ಅಂತು ಭಾವಿಸುತ್ತಮಿರ್ದು

ಮನುಜನನೆನ್ನನೀಕ್ಷಿಸಿ ಭವಾದ್ರಿಯನೇಱದೆ ನಾಡೆ ನೋಡಿ ತೊ
ಟ್ಟನೆ ಕೊಳೆ ಮಾಯವಾಗದೆ ನಭಕ್ಕೊಗೆದಾಗಳೆ ಪೋಗದಿರ್ದೊಡೊ
ಯ್ಯನೆ ಬೆಸಗೊಳ್ವೆನಾರ್ಗೆ ಸತಿ ನೀಂ ಪೆಸರೇಂ ನಿನಗಿಂತು ತೋರ್ಪ ಜ
ವ್ವನದೊಳಗೀ ತಪಕ್ಕೆ ಗುಱಮಾಡಿಸಿದುಬ್ಬೆಗಮಾವುದೆಂಬುದಂ ೬೦

ವ॥ ಎಂದು ಭಾವಿಸುತ್ತಮಾ ರಮಣೀಯ ದೇವಾಯತನನೂತ್ನ ಸ್ತಂಭಮಂ ನೆಮ್ಮಿ ನಿಂದಿರ್ದು ತದಂಗನಾಗೀತಾವಸಾನಸಮಯಮಂ ಪಾರುತ್ತಮಿರ್ಪುದುಂ

ಮೃದುಮಧುರ ವಲ್ಲಕೀ ಗೇ
ಯದ ದನಿ ಮಾಣಲ್ಕೆ ಗೀತದವಸಾನದೊಳು
ನ್ಮದ ಮಧುಕರಸ್ವನಂ [1]ಮಾ
ಣ್ದಿ[1]ದ ಕುಮುದಿನಿಯಂತೆ ಕಾಂತೆ ಕಣ್ಗೆಸೆದಿರ್ದಳ್ ೬೧

ವ॥ ಅನಂತರಮಾ ತ್ರೈಲೋಕ್ಯರಕ್ಷಾಮಣಿಯಂ ಪ್ರದಕ್ಷಿಣೀಕರಣ ಪೂರ್ವಕಂ ನಮಸ್ಕರಿಸಿ

ಒಸೆದಾಶ್ವಾಸಿಸುವಂತೆ ಪುಣ್ಯತತಿಯಿಂದಂ ಮುಟ್ಟುವಂತಚ್ಛತೀ
ರ್ಥಸಮೂಹಾಂಬುಗಳಿಂದವಂದಭಿಷವಂ ಮಾಳ್ಪಂತೆ ಪೂತತ್ವಮಂ
ಪಸರಿಪ್ಪಂತೆ ಬರಂಗಳಂ ಪದಪಿನಿಂದೀವಂತೆ ದೃಕ್ತೃಪ್ತಿರಾ
ಜಿಸೆ ದಿವ್ಯಾಂಗನೆ ನೋಡಿದಳ್ ತಗುಳ್ದು ಚಂದ್ರಾಪೀಡ ಭೂಪಾಲನಂ ೬೨

ಸ್ವಾಗತಮೇ ನಿನಗೆ ಮಹಾ
ಭಾಗನೆ [2]ಮದ್ಭೂಮಿಗೆಂತು[2] ಬಂದಯ್ ನೀನ
ಭ್ಯಾಗತನಾಗಲ್ವೇೞ್ಕುಂ
ದಾಗಳ್ ನೃಪಸುತನನಲ್ಕಱಿಂ ಸತಿ ನುಡಿದಳ್ ೬೩

1 ಪೊಣ್ಮೃ (ಕ) 2 ಭವದ್ಭೂಮಿಗೆಯ್ಯೆ (ಕ)

ವ|| ಅಂತು ನುಡಿದನಿತಱಿೞೊಳೆ ಕೃತಾರ್ಥನಾದೆನೆಂದು ಬಗೆಯುತ್ತಂ ದೇವಿಯರ್ ಬೆಸಸಿದಂತೆಗೆಯ್ವನೆಂದು ಆ ಕಾಂತೆಯ ಬೆಂಬೞಿವಿಡಿದು ನಡೆವ ಶಿಷ್ಯನಂತೆ ಪೋಗೆವೋಗೆ ಕಿಱಿದಂತರದೊಳ್

ಕಾಲದ ಮುರ್ಪು ಪರ್ವಿದವೊಲಿರ್ದ ತಮಾಲವನಂಗಳಿಂದೆ ಭೃಂ
ಗಾಳಿಯ ಗಾವರಂ ಪುದಿದ ಪುಷ್ಪಲತಾಗೃಹದಿಂದೆ ಚಂದ್ರಿಕಾ
ಜಾಲದವೊಲ್ ಕೆಂಬಿಡಿದು ಘೋರ್ಗರೆಯಲ್ ಸುರಿತರ್ಪ ನಿರ್ಝರಾ
ಸ್ಫಾಲನ ಶೀಕರಪ್ರಸರದಿಂದೆಸೆದತ್ತು ಬೃಹದ್ಗುಹಾಂಗಣಂ ೬೪

ವ|| ಅಂತಾ ಗುಹಾಂಗಣದ ಮುಂದೆ ನಿಂದು ನೋೞ್ಪಲ್ಲಿ

ಅದು ಸುರಭೂಜವಲ್ಕವಸನದ್ವಯಮಂತದು ದಂಡಮಲ್ಲಿ ನೇ
ಲಿದುದದು ಜೋಗವಟ್ಟಿಗೆ ಕಮಂಡಲಮಂತದು ಭಸ್ಮಶಯ್ಯೆಯಂ
ತದು ಶಶಿಮಂಡಲಾಕೃತಿವೊಲಿರ್ದುದು ಶಂಖದ ಪಾತ್ರೆಯೆಂದು ನೋ
ಡಿದನತಿವಿಸ್ಮಯಂಬೆರಸು ತದ್ಗುಹೆಯಂ ನೃಪರೂಪಚಂದ್ರಮಂ ೬೫

ವ|| ಅನಂತರಮಾ ದಿವ್ಯತಪಸ್ವಿನಿ ಮಾೞ್ಪತಿಥಿಪೂಜೆಯಂ ವಿನಯಪುರಸ್ಸರಂ ಕಯ್ಕೊಂಡು ದರ್ಭಾಸನದೊಳ್ ಕುಳ್ಳಿರಲಾ ನಿತಂಬಿನಿ

ರಕ್ಷಾಂಕಿತ ತನು ಮೆಲ್ಲನೆ
ವೃಕ್ಷಂಗಳ ಕೆಳಗೆ ಪೋಗಿ ನಿಂದಿರ್ದಾಗಳ್
ಭಿಕ್ಷಾಂ ದೇಹಿಯೆನಲ್ಕಂ
ತಾ ಕ್ಷಣದೊಳ್ ತೀವಿದತ್ತು ಭಿಕ್ಷಾಪಾತ್ರಂ ೬೬

ವ|| ಅಂತು ತೀವಿದ ಭಿಕ್ಷಾಪಾತ್ರದ ಪಣ್ಬಲಂಗಳಂ ತಂದುಕುಡೆ ನಿರ್ಝರ ಜಲಂಗಳೊಳ್ ಮಿಂದು ಅಮೃತರಸಾಸ್ವಾದಂಗಳಪ್ಪ ತತ್ಫಲಂಗಳಂ ಮೆಲ್ದು ನೀರಂ ಕುಡಿದೊಂದುದೆಸೆ ತೊಲಗಿರ್ಪುದುಮಾ ಕನ್ನಿಕೆಯುಂ ಕೃತಫಲಜಲಾಹಾರೆಯಾಗಿ ಬಂದೊಂದು ಶಿಲಾತಳದೊಳ್ ಕುಳ್ಳಿರ್ದು ನೋಡುತ್ತುಮಿರ್ಪುದುಮಾ ಗಾಂಭೀರ್ಯರತ್ನಾಕರನುಮನತಿ ದೂರಮಪ್ಪ ಶಿಲಾತಲದೊಳ್ ವಿಶ್ರಮಿಸಿ ತನ್ನ ಬಂದ ವೃತ್ತಾಂತಮನೆಲ್ಲಮಂ ನೆಱೆಯೆ ಪೇೞ್ದು ಮತ್ತಮಾ ದಿವ್ಯಕಾಂತೆಯನಿಂತೆಂದಂ

ಪಿರಿದೆನಿಸಿರ್ದ ನಿಮ್ಮಯ ಪ್ರಸಾದಮನಾಂ ಪಡೆದೊಂದು ಗರ್ವದಿಂ
ಪರಿಚಿತನಂತೆ ಬಿನ್ನವಿಪಲುಂ ಬಗೆದಂದಪೆನಂತುಟಲ್ತೆ [1]ಬಿ
ತ್ತರಿಪೊ[1]ಡಧೀರರಪ್ಪ ಮನುಜರ್ ಪ್ರಭುಗಳ್ ದಯೆಯಿಂದೆ ತಮ್ಮನಾ
ದರಿಸಿದೊಡಾಗಳೆ ಗಱಿಪಲ್ ಬಗೆದಪ್ಪುದಿದಾವ ವಿಸ್ಮಯಂ ೬೭

1 ನಿಸ್ತರವ (ಕ)

ಮನುಜಂಗೆ [1]ಕೌತುಕಾ[1]ವಹ
ಮಿನಿತೊಂದಾಶ್ಚರ್ಯಮದಱಿಂ ಬೆಸಗೊಳ್ವ
ಲ್ಕನುಗೆಯ್ಯುತ್ತಿರ್ದಪುದೀ
ಮನಮನನುಗ್ರಹಿಸಿ ದೇವಿ ಪೇೞಲ್ವೇೞ್ಕುಂ ೭೮

ಸುರಮುನಿಸಿದ್ಧಖೇಚರರೊಳಾವಕುಲಂ ನಿಜಜನ್ಮದಿಂದಲಂ
ಕರಿಸಿತೊ ಪಂಚಭೂತಮಯಮಾಗಿಯುಮೀ ತನುವಿಂದುಕಾಂತಿಯಂ
ತಿರೆ ಪೊಳೆಯುತ್ತಮಿರ್ದಪುದಿದೇಂ ಪೊಸಜವ್ವನದೇೞ್ಗೆಯೊಳ್ ತಪ
ಶ್ಚರಣಮಿದೇಂ ಪೊದೞ್ದಿಡಿದ ಕಾನನದೊಳ್ ಬಿಡದೊರ್ಬಳಿರ್ಪುದೇಂ ೭೯

ವ|| ಎಂದು ಬೆಸಗೊಳ್ವುದುಂ ಕಿಱಿದು ಬೇಗಂ ತನ್ನೊಳ್ ತಾನೆ ಭಾವಿಸಿ

ಪೊಳೆವಲರ್ಗಂಗಳಿಂ ಮಿಳಿರ್ವ ಬೆಳ್ಪು ರಸಾತ್ಮಕಮಾಗಿ ಗಂಡಮಂ
ಡಳತಳದಿಂದಮುಂದಿೞಿಯುತಿರ್ದುದೆನಲ್ ನಯನಾಂಬುಲೋಚನಂ
ಗಳನಿರದುಣ್ಮೆ ಶಬ್ದಮಣಮಿಲ್ಲದೆ ತೊಟ್ಟನೆ [2]ಕಣ್ಮಗುಳ್ದಳ
ಗ್ಗಳಿಪಳ[2]ವಿಂದೆ ಮಾನಿನಿ ಮನಕ್ಕತಿವಿಸ್ಮಯಮಾಗೆ ಭೂಪನಾ ೮೦

ವ|| ಅಂತಾ ಕಾಂತೆ ಶೋಕಾಕ್ರಾಂತೆಯಾಗಿ

ರಸೆಯಂ ತಾಂ ತಾಂಕಿ ಕಲ್ಪಾಂತದ ಬಱಸಿಡಿಲೆಯ್ತಂದು ಪೊಯ್ಯಲ್ ನೆಲಂ ಕಂ
ಪಿಸುವಂತತ್ಯಂತಶೋಕಾಕುಲತೆಯಿನೞುತಿರ್ದಪ್ಪಳೋರಂದದಿಂ ಮಗ್ಗ
ಲಿಸಲಿನ್ನಾರ್ಪರೀ ಶೋಕಮನೆನುತೆ ಭಯಂಗೊಂಡಿದೆತ್ತೆತ್ತಲೀಗಳ್
ಬೆಸಗೊಂಡೆಂ ಕೆಮ್ಮನೆಂದುಮ್ಮಳಿಸಿ ಪಿರಿದುಮಂದಾ ನೃಪಂ ವ್ಯಗ್ರನಾದಂ ೮೧

ವ|| ಅಂತು ನೃಪತಿ ವ್ಯಗ್ರನಾಗಿ ಮುಖಪ್ರಕ್ಷಾಳನಾರ್ಥಂ ಪೇರಡಿವಿಯೊಳಂ ಜಳಿಯಿಂ ಜಲಮಂ ತಂದು ದೇವಿಯರವಧಾರಿಸುವುದೆಂದು ಭೂಪನಿಳಿಂಪನುಪರೋಧಿಸುತ್ತ ಮೆಱೆಯೆ

ಅಳವಿಲ್ಲದೞುತ್ತಿರೆ ಕೆಂ
ಪೆಳಸಿದ ಬಾಷ್ಪಾಂಬುಪೂರ್ಣಲೋಚನಮಂ ತ
ಜ್ಜಳದಿಂದೆ ಕರ್ಚಿ ವಲ್ಕ್ಯಾಂ
ಚಲದಿಂ ನಿಜವದನಬಿಂಬಮಂ ಸತಿ ತೊಡೆದಳ್ ೮೨

1 ವಿಸ್ಮಯಾ (ಕ)   2 ತಳ್ತಗುಳ್ದಳಗ್ಗಳಿಪಳಿ (ಕ)

ವ|| ಅಂತಾ ಕಾಂತೆ ಶೋಕಾಕ್ರಾಂತೆಯಾಗಿರ್ಪುದಂ ಕಂಡಿಂತಪ್ಪವರುಮಟು ವಂದ[1]ಮದ್ಭುತಮೆಂ[1]ದು ಮನದೊಳ್ ಭಾವಿಸುತ್ತಮಿರೆ

ಉರಗಮುಖೋಗ್ರದಂಷ್ಟ್ರಸಹಜಾತೆಯನೂರ್ಜಿತಕಾಲಪಾಶನಿ
ಷ್ಠುರತರರೂಪೆಯಂ ಸಹಜಶಾಕಿನಿಯಂ ವಿಷಕನ್ಯಕಾಸಹೋ
ದರಿಯನಪಾರಘೋರದುರಿತಾರ್ಣವ[2]ಜಾತೆ[2]ಯನಾತ್ಮವಲ್ಲಭಾಂ
ತರಿತೆಯನೆನ್ನನಣ್ಣ ಬೆಸಗೊಳ್ವುದೆ ಪೇಟ್ವೆನೆ ತತ್ಪ್ರಪಂಚಮಂ ೭೩

ಗತಭಾಗ್ಯೆಯೆನಿಪ ಪಾಪಾ
ನ್ವಿತೆಯಂ ಪತಿದುಃಖಭಾಜನೆಯ ವೃತ್ತಾಂತ
ಸ್ಥಿತಿಯನದೇಂ ಕೇಳ್ದಪೆ ನೃಪ
ಸುತ ಕೌತುಕಮೆಂಬೆಯಪ್ಪೊಡುಸಿರ್ದಪೆನೀಗಳ್ ೭೪

1 ಭಿಭಾವಿಸವಪ್ಪುಕಂ (ಕ) 2 ದುಗ್ಧಿ (ಕ)

ಮಹಾಶ್ವೇತೆಯ ವೃತ್ತಾಂತ

ವ॥ ಅದೆಂತೆಂದೊಡೆ

ತ್ರಿದಿವದೊಳಚ್ಚರಿಸಿಯರಿ
ರ್ಪುದು ವಿಧಿತಂ ನಿಮಗಮಂತವರ ವಂಶಂಗಳ್
ಪದಿನಾಲ್ಕೆನೆ ಪೆಸರಿಂ ನೆಗ
ೞ್ದುದಯಿಸದುವು ಬೇಱೆಬೇಱೆ ನೃಪಕುಲತಿಲಕಾ ೧

ವ॥ ಅದೆಂತೆನೆ

ಧರೆಯಿಂ ಕಡಲಿಂ[1]ದೆಲರಿಂ[1]
ಹರಿಯಿಂ[2]ದಮುರ್ದಿಂದೆ[2] ಮೃತ್ಯುವಿಂದಬ್ಜಜನಿಂ
ಸ್ಮರನಿಂ ಜಲದಿಂ ವೇದೋ
ತ್ಕರದಿಂ ವಿದ್ಯುನ್ನಿಕಾಯದಿಂ ಹುತವಹನಿಂ ೨

ವ॥ ಅದಲ್ಲದೆಯುಂ ದಕ್ಷಪ್ರಜಾಪತಿಗೆ ಪುಟ್ಟಿದ ಮುನಿಯುಮರಿಷ್ಟೆಯುಮೆಂಬೀರ್ವರ್ ಕನ್ನೆಯರಿಂ ಗಂಧರ್ವಕುಲಮುದಯಿಸಿದುದಲ್ಲಿ ಚಿತ್ರಸೇನಾದಿಗಳಪ್ಪ ಪದಿನ್ನೈವರಿಂ ಪಿರಿಯನೆನಿಸಿ

ಚಿತ್ರರಥನೆಂಬನೊರ್ವಂ
ಪುತ್ರಂ ಗಂಧರ್ವರಾಜನಮರೇಂದ್ರಂಗಂ
ಮಿತ್ರನೆನೆ ಪೆಂಪುವಡೆದು ಜ
ಗತ್ರಯವಿಖ್ಯಾತಕೀರ್ತಿ ಮುನಿಗುದಯಿಸಿದಂ ೩

ವ॥ ಅಂತಾ ಚಿತ್ರರಥನಿಂ ಚೈತ್ರರಥಮೆಂಬ ಬನಮುಮಚ್ಛೋದಮೆಂಬ ಸರೋವರಮುಮಾದುದಲ್ಲದೆಯುಂ ತುಂಬುರಪ್ರಭೃತಿಗಳಪ್ಪಱುವರಿಂ ಪಿರಿಯನೆನಿಸಿ

ಪುರುಷಾರ್ಥನಿಧಿ ಪುರಂದರ
ಪರಮಪ್ರಿಯಮಿತ್ರನೊರ್ವನುದಯಿಸಿದಂ ಸುಂ
ದರರೂಪನರಿಷ್ಟೆಗೆ ಚಿ
ತ್ರರಥಾನನ[3]ಪುಂಡರೀಕ[3]ಹಂಸಂ ಹಂಸಂ ೪

---

1 ಗಡಲಿಂ (ಕ) 2 ದಂಮುತ್ತ್ಯುಕ (ಕ) 3 ವನಜವಿಕಚ (ಕ)

ವ|| ಅದಲ್ಲದೆಯುಮಲ್ಲಿಗನತಿದೂರದೊಳ್ ಹೇಮಕೂಟಮೆಂಬ ನಗೇಂದ್ರಂ ಕಿಂಪುರುಷಾವಾಸಸ್ಥಾನಮಾಗಿರ್ಪುದಲ್ಲಿ

ಅತ್ರುಯಶರ್ ಗಂಧರ್ವಕು
ಲೋತ್ತಮರಾ ತಮ್ಮುತಿರ್ವರುಂ ನಿಖಿಲಗುಣೋ
ದಾತ್ತರೆನಲ್ ರಾಜ್ಯಂಗೆ
ಯ್ಯುತ್ತಂ ಸುಖಸಂಕಥಾವಿನೋದದಿನಿರ್ಪರ್ ೫

ವ|| ಮತ್ತಮಾ ಸೋಮಮಯೂಖಸಂಭವೆಯರಪ್ಪಚ್ಚರಸಿಯರೊಳಗೆ

ಅಮೃತಕರ ಭಾಸುರೋದ್ಯ
ತ್ಕಮನೀಯ[1]ಕಲಾಕಲಾಪಲಾವಣ್ಯರುಚಿರೀ
ಸಮುದಿತೆಯೆನಲ್ಕೆ[1]ಪುಟ್ಟಿದ
ಳಮೃತಾಂಶುನಿಭಾಸ್ಯೆ ಗೌರಿಯೆಂಬಳ್ ಪೆಸರಿಂ ೬

ಇಂಗಡಲಿಂಗಮರನದೀ
ಸಂಗಂ ಸಂಘಟಿಪ ತೆಱದೆ ಗಂಧರ್ವಕುಲೋ
ತ್ತುಂಗನೆನಲ್ ನೆಗಟ್ದಾ ಹಂ
ಸಂಗಾದುದು ಗೌರಿಯೊಳ್ ವಿವಾಹೋತ್ಸಾಹಂ ೭

ಸಮವಂಶದೆ ಸಮರೂಪದೆ
ಸಮವಿಭವದೆ ಸಮವಯೋವಿಲಾಸದೆ ಸಮಸ
ತ್ವಮನದೆ ಸಮಾನುರಾಗದೆ
ಸಮಸಂದತ್ತವರ್ಗೆ ಸಮವಯೋಯೋಗಸುಖಂ ೮

ನಿನಗೇಂ ಪೇಟ್ದಪೆ ನಾಂ ಮಹಾತ್ಮರೆನಿಸಿರ್ದಾ ತಂದೆಗಂ ತಾಯ್ಗಮೋ
ರ್ವನೆ ಸೌಭಾಗ್ಯನಿವಾಸೆಯೆಂ ನಿಖಿಲಪಾಪಾಕಾರೆಯೆಂ ದುಃಖಭಾ
ಜನೆಯೆಂ ಪುಟ್ಟಿದೆನೆನ್ನನೀಕ್ಷಿಸಲೊಡಂ ತಾತಂ ಮಹಾಶ್ವೇತೆಯೆಂ
ದನುರಾಗಂಬೆರಸಿಟ್ಟನೆನ್ನ ಪೆಸರಂ ಗಂಧರ್ವಚಕ್ರೇಶ್ವರಂ ೯

ವ|| ಅಂತು ನಿಜಜನನೀಜನಕರ್ ಪಲಕಾಲಮನಪತ್ಯರಪ್ಪುದಱಿಂ ಪುತ್ರನಿಂದ ಗ್ಗಳಮಪ್ಪ ಪರಮಪ್ರೀತಿಯಿಂ ನಡಪುತ್ತಮಿರೆ ಕೆಲವು ದಿವಸದೊಳವಿದಿತಸ್ನೇಹಶೋಕಾಯಾಸಮಪ್ಪ ಶೈಶವಂ ಪತ್ತುವಿಡುವುದುಂ

1 ಕಲಾಪವೆತ್ತಲಾವಣ್ಯರುಚಿಸ್ಸಮುದಯಮೆಸೆಯಾಲ್ (ಕ)

ಎಸೆವ ವಸಂತವಮಾಸದೆ ವಸಂತಮನಾಂತ ಕುಜಾತಪಲ್ಲವ
ಪ್ರಸರದಿನಾ ವಸಂತಸಮಯಂ ಕುಸುಮಾವಳಿಯಿಂದೆ ಪಲ್ಲವಂ
ಮಿಸುಪಳಿಮಾಲೆಯಿಂ ಕುಸುಮಮಂಜರಿ ರಂಜಿಸುವಂತಿರಲ್ ವಿಜೃಂ
ಭಿಸಿದುದು ಯವ್ವನೋದಯವಿಲಾಸಮನುಕ್ರಮದಿಂ ಮದಂಗದೊಳ್ ೧೦

ವ॥ ತದನಂತರಂ

ಸ್ಮರರಾಗಾಂಧತ್ವದಿಂದಂ ಪಗಲೊಳಮಸತೀಕೇಳಿ ಪೊಣ್ಮಲ್ ವಿಯೋಗಾ
ತುರಜೀವಾಹಾರದಿಂದಂ ರತಿಪತಿ ತಣಿಯಲ್ ಪುಷ್ಪಚಾಪಾಸ್ತ್ರಟಂಕಾ
ರರವೋದ್ಭಿನ್ನಪ್ರಪಾಂಥಪ್ರಕರಹೃದಯರಕ್ತಾಂಬುಗಳ್ ಕೂಡೆ ಮಾರ್ಗಾಂ
ತರದೊಳ್ ಸೂಸುತ್ತಿರಲ್ ಬಂದುದು ಶಿಶಿರನೃಪೋದ್ಯತ್ಯತಾಂತಂ ವಸಂತಂ ೧೧

ವ॥ ಅಂತು ಬಂದ ವಸಂತದೊಳುಳ್ಳಲರ್ದ ನವನಳಿನಕುಮುದ ಕುವಲಯ ಕಲ್ಹಾರಂಗಳಿಂ ಕಂಗೊಳಿಪಚ್ಛೋದಸರಸಿಗೆ ಜನನಿವೆರಸು ಮಜ್ಜನಕ್ಕೆಂದು ನಡೆತಂದು ನೋಟ್ಪಲ್ಲಿ ಶಿಖರಿರಾಜನಂದಿನಿ ಪೂಜಿಸಲೆಂದು ತಟಶಿಲಾತಲದೊಳ್ ಬರೆದ ಮೃಡನ ಪಡಿವರಿಜಂ ಕಂಡು ಕುಂಬಿಟ್ಟಾ ಸರಸ್ತೀರದೇಶದಲ್ಲಿ

ಇದು ಮದಭೃಂಗಕೀರ್ಣಕುಸುಮೋತ್ಕರರಮ್ಯಲತಾವಿತಾನಮಿಂ
ತಿದು ಪಿಕತುಂಡಖಂಡಿತಗಳದ್ರಸಕೋಶರಸಾಲಸಾಲಮಿಂ
ತಿದು ಶಿಖಿನಾದಭೀತಫಣಿವರ್ಜಿತಚಂದನಭೂಜರಾಜಿಯೆಂ
ದೊದವಿದ ರಾಗದಿಂದವನಭೀಕ್ಷಿಸುತಾಂ ಚರಿಸುತ್ತಮಿರ್ಪಿನಂ ೧೨

*ಇಳಿಕ್ಕೈದುಱಿದಲರ್ಗಳ ಪರಿ
ಮಳಮಂ ಘ್ರಾಣೈಕತರ್ಪಣಂ ಮಿಳದಳಿಸಂ
ಕುಳಮೇನೆಸಗಿತ್ತೊ ವನಾ
ನಿಳನೀತಂ ಕುಸುಮಗಂಧಮೋರೊಂದೆಡೆಯಿಂ ೧೩

ವ॥ ಅಂತು ಬಂದಮಾನುಷಕುಲೋಚಿತಮುಮನಾಘ್ರಾತಪೂರ್ವಮುಮೆನಿಪ ಕುಸುಮಗಂಧಮನಾಘ್ರಾಣಿಸುತಮಿದೆತ್ತಣದೆಂದು ಕೌತುಕಂ ಮಿಗಲದಱಿ ಬೞಿವಿಡಿದು

*ಅರಸಂಚೆಗಳೊಡವರೆ ನೇ
ವುರದಿಂಚರಕೊಲ್ದು ಪೋಗಲಾಂ ಕಿಱಿದೆಡೆಯಂ
ಸರಸಿಗೆ ಮೀಯಲ್ಕೆಂದೈ
ತರುತಿರ್ದಂ ಮುಂದೆ ಮುನಿಕುಮಾರಕನೋರ್ವಂ ೧೪

---

* ಈಗುರುತಿನ ಪದ್ಯಗಳು ಆಸ್ಥಾನಕವಿಗಳಾದ ಬಸಪ್ಪಶಾಸ್ತ್ರಿಗಳಿಂದ ರಚಿಸಲ್ಪಟ್ಟುವು. ಮೂಲದವಲ್ಲ.

*ಗಿರಿಶನಯನಾನಲಾರ್ಚಿಯಿ
ನುರಿದಂ ಸ್ಮರನೆಂದು ದಂದುಗಂ ಮಿಗೆ ತಪಮಂ
ಚರಿಯಿಪ್ಪ ವಸಂತನವೊಲ್
ಕರಮೆಸೆದಂ ರಮ್ಯಗಾತ್ರನಾ ಮುನಿಪುತ್ರಂ ೧೫

ವ॥ ಮತ್ತಂ

*ಪರಿಪೂರ್ಣಬಿಂಬದೊಂದ್ಯೆ
ಸಿರಿಯಂ ಪಡೆಯಲ್ಕೆ ಬಯಸಿ ಪಿರಿದುಂ ವ್ರತಮಂ
ಧರಿಸಿದ ಗಿರಿಶಶಿರಶ್ಯೇ
ಖರೇಂದುವೆನೆ ಮೆಱೆದನಾ ಮುನೀಂದ್ರಕುಮಾರಂ ೧೬

ವ॥ ಅಂತುಮಲ್ಲದೆಯುಂ

ಜ್ವಲದನಲಶಿಖಾಂತರದೊಳ್
ಪೊಳೆವ ತಟಿಲ್ಲತೆಯೊಳುಷ್ಣಕರಮಂಡಳದೊಳ್
ಪೊಳೆದಪನೆನೆ ದೇಹದ್ಯುತಿ
ಬಳಸಿರೆ ನೆಱೆಯಱಿಯಲಾದುದಿಲ್ಲಾ ಮುನಿಯಂ ೧೭

ಸೊಡರಂ ಪರ್ಚಿಸಿದಂತಿರೆ
ಬೆಡಂಗುವಡೆದೆಸೆವ ಮುನಿಯ ದೇಹದ್ಯುತಿಯಂ
ಕಡುಗವಿಲಮಾಗಿ ಕಾಂಚನ
ದಡವಿಯನನುಕರಿಸಿ ತದ್ವನಂ ಸೊಗೆಯಿಸುಗುಂ ೧೮

ಎಸೆವಂತಿರೆ ಗೋರೋಚನ
ರಸದಿಂದಂ ತೊಯ್ದ ನೇತ್ರಸೂತ್ರದ ತೆಱದಿಂ
ಮಿಸುಗುವ ಕೆಂಜೆಡೆಗಳ್ ರಂ
ಜಿಸುತಿರ್ದುವು ಭಾವಿಸಲ್ಕೆ ತನ್ಮುನಿವರನಾ ೧೯

ಮೊದಲೊಳ್ ವಾಗ್ದೇವಿಯನೊಲಿ
ಸಿದ ತಿಲಕಂ ತಾನಿದೆನಿಪ ತಿಲಕಂ ನವಭ
ಸ್ಮದಿನೆಸೆಯಲದು ಪುಟ್ಟಿಲ್ಲ
ಟ್ಟದ ಗಂಗೆಯ ಪೊನಲನಿನಿಸನನುಕರಿಸಿರ್ದಂ ೨೦

* ಈ ಗುರುತಿನ ಪದ್ಯಗಳು ಆಸ್ಥಾನಕವಿಗಳಾದ ಬಸಪ್ಪಶಾಸ್ತ್ರಿಗಳಿಂದ ರಚಿಸಲ್ಪಟ್ಟುವು, ಮೂಲದವಲ್ಲ.

ವನಹರಿಣಕುಲಂ ನಿಜಲೋ
ಚನ ಶೋಭಾಸಂವಿಭಾಗಮಂ ಕೊಟ್ಟುದೊ ಲೋ
ಚನಮಾಲೆ ನಿವಿಡ್ರ್ದುದೊ ಮೇ
ಣೆನೆ ಮುನಿಪನ ದೀರ್ಘಲೋಚನದ್ವಯಮೆಸೆಗುಂ ೨೧

ನವಯವ್ವನರಾಗಂ ಚಿ
ತ್ರವನೆಂದುಂ ಪುಗಲೆ ಪಡೆಯದಿರ್ದುದೊ ಪೊಱಗೆಂ
ಬವೊಲೆಸೆದು ಪಕ್ವಬಿಂಬ
ಚ್ಛವಿಯಂ ಮಾರ್ಕೊಳ್ವುದಧರಮಣಿ ಮುನಿವರನಾ ೨೨

ಮೊಗಮೀಸೆ ಬಾರ[1]ದಿರ್ದು೦[1]
ಸೊಗಯಿಪ ತನ್ಮುನಿಕುಮಾರ ವದನಾಬ್ಜಂ ದಿ
ಟ್ಟಗೆ ಚೆಲ್ವುವೆತ್ತು ಮಱಿದುಂ
ಬಿಗಳೆಱಗದ ಕನಕಕಮಲಮಂ ನೆನೆಯಿಸುಗುಂ ೨೩

ಅದು ಮದನಚಾಪಗುಣಮಂ
ತದು ಪರಮತಪಸ್ತಟಾಕಕಮಲಿನಿಯೊಳಗು
ಣ್ಮಿದ ನವಮೃಣಾಳಮೆನಲೆಸೆ
ದುದು ಮುನಿಗತ್ಯಂತಧವಳಮೆನಿಪುಪವೀತಂ ೨೪

ಕರತಳವೊಂದಱೊಳ್ ಮಣಿಕಮಂಡುಲು ನಾಳಸಮೇತಮಪ್ಪಕೇ
ಸರಫಲದಂತಿರಿರ್ದುದು ಮನೋಜವಿನಾಶ[2]ದಿನಟ್ಟಿ[2] ತನ್ಮನೋ
ಹರಿಯ ಪೊದಟ್ಟ ಕಣ್ಬನಿಗಳಂತಮಲಸ್ಫಟಿಕಾಕ್ಷಮಾಲೆ ಸುಂ
ದರತರಮಾದುದೊಂದು ಕರಪಲ್ಲವದೊಳ್ ಮುನಿಪಾಗ್ರಗಣ್ಯನಾ ೨೫

ನಿರವದ್ಯನಿಖಿಲವಿದ್ಯಾ
ತರಂಗಿಣೀ ಸಂಗದಲ್ಲಿ ತೋಱುವ ಸುೞಿಯಂ
ತಿರೆ ಸುರುಳ್ದ ಮುನಿಕುಮಾರನ
ಸುರುಚಿರ ಗಂಭೀರನಾಭಿಮಂಡಲಮೆಸೆಗುಂ ೨೬

ಇಂಬಾಗಿರೆ ಬಾಂದೊಱೆಯೊಳ
ಲುಂಬಿದ ಮಂದಾರವಲ್ಕವಿರಚಿತ ನವದಿ
ವ್ಯಾಂಬರವಾ ಮುನಿವರನೊಳ್
ಬಿಂಬಿಸಿತು ಜರಚ್ಚಕೋರಲೋಚನರುಚಿರಂ ೨೭

---

1 ನಿತ್ತಂ (ಕ) 2 ವೆನಿಪ್ಪ (ಕ)

ವ॥ ಅಂತುಮಲ್ಲದೆಯುಂ ಬ್ರಹ್ಮಚರ್ಯಕ್ಕಲಂಕಾರಮುಂ ಧರ್ಮಕ್ಕೆ ನವಯವ್ವನಮುಂ ಸರಸ್ವತಿಗೆ ಲೀಲಾವಿಲಾಸಮುಂ ವಿದ್ಯಾಪ್ರತತಿಗೆ ಸ್ವಯಂವರಪತಿಯುಂ ಸಮಸ್ತಶ್ರುತಿಗಳಿಗೆ ಸಂಕೇತನಿಕೇತನಮುಮೆನಿಸಿದನಲ್ಲದೆಯುಂ

ತನಗನುರೂಪಮೆಂಬಿನೆಗನೊರ್ವ ಕುಮಾರತಪಸ್ವಿ ದೇವತಾ
ರ್ಚನೆಗೆ ವನಕ್ಕೆ ಬಂದು ಪೊಸವೂಗಳನರ್ತಿಯೊಳಾಯ್ದು ಕೊಯ್ದು ಬೆ
ನ್ನನೆ ಬರಲೀ ವನಾಂತರ ಸರೋವರದಲ್ಲಿಗೆ ಮೀಯಲೆಂದು ಮೆ
ಲ್ಲನೆ ಬರುತಿರ್ದ ತನ್ಮುನಿಕುಮಾರನ ನಾಂ ಬಿಡೆನೋಡಿದೆಂ ನೃಪಾ ೨೮

ವ॥ ಅಂತು ನೋಟ್ಪನ್ನೆಗಂ

ಸ್ಮರಕಾಂತಾರತಘರ್ಮಬಿಂದುಚಯಮೋ [1] ಮೀನಾಂಕಮತ್ತೇಭಚಾ
ಮರಮೋ[1] ನಂದನಲಕ್ಷ್ಮಿಯೊಳ್ನಗೆಯೊ ತಾಂ ಮಂದಾನಿಲಂ ತೆಂಕಣಿಂ
ಬರೆ ಚೈತ್ರಂ ಕುಡುವರ್ಘ್ಯಲಾಜತತಿಯೋ ಪೇಟ್ಟೆಂಬಿನಂ ಪುಷ್ಪಮಂ
ಜರಿಯಂ ತನ್ಮುನಿಕರ್ಣಪೂರಕಮನತ್ಯಾಶ್ಚರ್ಯದಿಂ ನೋಡಿದೆಂ ೨೯

ಗುಂಜನ್ಮದಾಳಿಮಾಲಾ
ಮಂಜರಿ ಬೆನ್ನಟ್ಟಬಂದ ನವಸೌರಭಮಂ
ರಂಜಿಸಿ ತೋಱುವ ಸುಮನೋ
ಮಂಜರಿಯಿಂ ಬಂದುದೆಂದು ಪರಿಭಾವಿಸಿದೆಂ ೩೦

ವ॥ ಅಂತು ಭಾವಿಸುತ್ತುಂ ಆ ಮುನಿಕುಮಾರವದನೇಂದುಬಿಂಬಮಂ ನೋಡಿ

ಸಿರಿ ನಲವಿಂದಮಿರ್ಪ ನೆಲೆ ಕಣ್ಗಳ ಪರ್ವಮೆನಿಪ್ಪ ಪಂಕಜೋ
ತ್ಕರಮುಮನಿಂದುಮಂಡಲಮುಮಂ ಮೊದಲೊಳ್ ಸಮೆದಬ್ಜಜಂ ಮನೋ
ಹರಮೆನೆ ಮಾಡಿದೀ ಮೊಗದ ಪೋಲ್ವೆಗೆ ಮುನ್ನೆಗಟಲ್ ತಗುಳ್ದಿ ಬಿ
ತ್ತರಿಸಿದನಲ್ಲದಿಂತು ಸಮವಸ್ತುಗಳಂ ಪಡೆವಂತು ಗಾಂಪನೇ ೩೧

ವ॥ ಮತ್ತಂ

ಕೇಳಿ ಸುಷುಮ್ನೆಯೆಂಬ ಕರದಿಂ ಗಡ ಚಂದ್ರಕಲಾಕಲಾಪಮಂ
ಕಾಲದೊಳಂಶುಮಾಲಿ ತೆಗೆದೀಂಟುವನೆಂಬುದಸತ್ಯಮಾ ಪ್ರಭಾ
ಜಾಲಕಮೆಲ್ಲಮೀ ತನುವಿನೊಳ್ ಪುಗುತಿರ್ಪುದು ತಪ್ಪದಲ್ಲದಿಂ
ತೀ ಲಲಿತಾಂಗಮೀ ತಪದೊಳಿಂತಿರೆ ಕಾಂತಿಯನಪ್ಪುಕೆಯ್ಗುಮೇ ೩೨

---

1 ಮೇಣಾರಿತೇಕಾಶುನಿರ್ಝರವೊ (ಕ)

ವ॥ ಎಂದು ರೂಪೈಕಪಕ್ಷಪಾತಮುಂ ಭಾವಿಸುತ್ತಮಿರ್ಪುದುಂ

ನವಯವ್ವನದೊಳ್ ಗುಣದೋ
ಷವಿಚಾರಮನಿಂತು ನೋಡಲೀಯದ ಭಾವೋ
ದ್ಭವನಿಂ ಪರವಶೆಯಾದೆಂ
ನವಕುಸುಮಾಸವದೆ ಸೊಕ್ಕಿದಳಿನಿಯ ತೆಱದಿಂ ೩೩

ವ॥ ಅನಂತರಮುಸಿರೊಡನೆಮೆಯಿಕ್ಕುವುದಂ ಮಱೆದು ಪರಿದುಪತ್ತಲವ್ವಳಿಸಿ ಕಳವಳಿಸಿ ಕೊಂಕಿ ಬಳಸುವೆಳಸುವಲರ್ಗಂಗಳಿಂ ತದ್ರೂಪಲಾವಣ್ಯರಸಮನಟ್ಕಿಱಿಂ ಬರೆ ಪೀರ್ವಂತೆ ನಿನಗೊಳಗಾದೆನೆಂಬಂತೆ ಮನಮನಂಗಯ್ಯಲ್ಲಿಕ್ಕಿತೋರ್ಪೆನೆಂಬಂತೆ ತನ್ಮಯಮಾಗಲೊಡರಿಪೆನೆಂಬಂತೆ ಮದನನಲೆದಪಂ ಕಾಯೆನ್ನನೆಂಬಂತೆ ಶರಣ್ಬುಗುವೆನೆಂಬಂತೆ ಮನದೊಳೆಡೆಗುಡೆಂದಳುಪಂ ತೋಱುವಂತೆ ಕುಲಹೀನಕನ್ಯಕಾಜನೋಚಿತಮತಿಲಜ್ಜಾಕರಮನೋರಥವಿದೆನಗೆತಕ್ಕುದಲ್ಲದುದಂ ನೆಗೞ್ದಿನೆಂದಱಿವೆನಾಗಿಯುಂ ಅತ್ಯಾಸಕ್ತಿಯಿಂ ಮಱವಟ್ಟರಂತೆಯುಂ ಚಿತ್ರಿಸಿದರಂತೆಯುಂ ಮೂರ್ಛೆವೋದರಂತೆಯುಂ ಆರಾನುಂ ಪಿಡಿಕೆವೆತ್ತರಂತೆಯುಂ ಮಿಡುಕದೆ ನೋಡುತಿರ್ದೆನನ್ನೆಗಂ

ಪೂಗಣೆ ನಾಂಟಿದಂತೆ ತನು ಕಂಪಿಸುತಿರ್ದುದು ಘರ್ಮವಾರಿಯಿಂ
ದಾಗಳೆ ಕರ್ಚಿದಂತೆ ನೆಱೆ ಪೋದುದು ಲಜ್ಜೆ ಮುರಳ್ದು ತನ್ಮಹಾ
ಭಾಗನ ರೂಪನೀಕ್ಷಿಸುವವೋಲ್ ಪುಳಕಂ ತಲೆದೋಱಿದತ್ತು ಕಾ
ಮಾಗಮನಕ್ಕೆ ಪಕ್ಕುಗೊಡುವಂತೆವೊಲಿರ್ದುದು ಸುಯ್ ನಿರಂತರಂ ೩೪

ಇವು ಮೊದಲಾಗೊಮ್ಮೆಯೆ ಮದ
ನವಿಕಾರಂ ಪಲವುಮಾಗಳಾಗುತ್ತಿರೆ ಮು
ನ್ನವನನಱಿಯದವಳೆನತ್ಯಭಿ
ನವಸಾಧ್ವಸಮಾಗಲಳ್ಕಿ ತಳವೆಳಗಾದೆಂ ೩೫

ವ॥ ಅಂತು ಬೆಗಡುಗೊಂಡು

ನಿಯತೇಂದ್ರಿಯನೊಳ್ ತೇಜೋ
ಮಯನೊಳ್ ರೂಪೈಕಪಕ್ಷಪಾತದೆ ನೆಱೆ ನೀ
ತಿಯನುೞಿದು ಮುನಿಪನೊಳ್ ನಿ
ರ್ಭಯನಂಗಜನೆನ್ನ ನಿಂತಿರಲ್ ಸೋಲಿಕುಮೇ ೩೬

ಕೂರ್ತಂಗನೆಯರ್ ನೀತಿಯ
ವಾರ್ತೆಯುಮಂ ಬಿಸುಟು ಪತ್ತುವರ್ ಪತ್ತಲೊಡಂ
ಧೂರ್ತೆಯಿವಳೆಂಗುಮೋ ಎಂ
ತಾರ್ತಪೆನಿಲ್ಲಾವ ತೆಱದೊಳಂ ನಿಲೆ ಪಿಡಿಯಲ್ ೩೭

ಪಲಬರ್ ಕಾಂತೆಯರೊಲ್ದು ಪೋದರೊಳರೆಂತುಂ ಕಾಂತರೊಳ್ ಬೇಟವ
ಗ್ಗಲಿಸಲ್ ಕಾಣದೆ ಲಜ್ಜೆಗೆಟ್ಟರೊಳರಿಂತೀ ಲೋಕದೊಳ್ ರೂಪುಗಾ
ಣಲೊಡಂ ತೊಟ್ಟನೆ ಲಜ್ಜೆಗೆಟ್ಟಱಿವುಗೆಟ್ಟೆನ್ನಂತೆ ಕಣ್ಗೆಟ್ಟು ಪೇ
ಟಿಯೊಲವಿಂದಿಂತೆರ್ದೆಗೆಟ್ಟರಾರೆನುತುಮತ್ಯೌತ್ಸುಕ್ಯಮಂ ತಾಳ್ದಿದೆಂ ೩೮

ವ|| ಅಂತಾಶ್ಚರ್ಯಮಂ ತಳೆದು ನನ್ನ ನಾನೆ ಸಂತೈಸಿ

ಎನ್ನೆವರಂ ಸಚೇತನೆಯೆನೆನ್ನೆವರಂ ಲಘುವಾಗದಿರ್ಪೆನೋ
ಅನ್ನೆಗಮೀಗಳೀಯೆಡೆಯಿನಾಂ ತೊಲಗಿರ್ಪುದು ಕಜ್ಜಮಲ್ಲದಂ
ದೆನ್ನಯ ಮನ್ಮಥೋಚಿತವಿಕಾರಮನೀಕ್ಷಿಸಿ ಸೋಲ್ತುಳಕ್ಕಟಾ
ಎನ್ನದೆ ಶಾಪಮಂ ಕುಡುವನಂತುಟೆ ಕೋಪಿಗಳಲ್ತೆ ತಾಪಸರ್ ೩೯

ವ|| ಎಂದು ಪೋಗಲುದ್ಯೋಗಂಗೆಯ್ದು ನಿಖಿಳಜನಪೂಜಾರ್ಹರನವಜ್ಞೆಗೆಯ್ಯ
ಲಾಗದೆಂದು

ತೊಳಗುವ ಚೆನ್ನಪೂಗಳಲಕಾವಳಿಯೊಳ್ ಮಿಱುಗಲ್ ಕಪೋಲಮಂ
ಡಳತಳದೊಳ್ ತೀಱಂಬೊಳೆಯೆ ಕೋಮಲಪಲ್ಲವಕರ್ಣಪೂರಮುಂ
ಜುಳಮಣಿಕುಂಡಲಂ ಪೆಗಲೊಳಾಡೆ ಮರಳ್ದೆವೆಯಿಕ್ಕದಾಂ ಮನಂ
ಗೊಳಿಪ ಮುನೀಂದ್ರನಾನನಮನೀಕ್ಷಿಸುತಂ ಪೊಡೆವಟ್ಟೆನಕ್ಕಱಿಂ ೪೦

ವ|| ತದನಂತರಂ

ಮದನಂ ದುರ್ಜಯನಿಂದ್ರಿಯಂಗಳನಿವಾರ್ಯಂಗಳ್ ವಸಂತಂ ಮದ
ಪ್ರದನಾಸ್ಥಾನವತೀವರಮ್ಯಮೆನಗಂ ದುಃಖಂಬರಲ್ವೇೞ್ಕುಮು
ಪ್ಪುದಱಿಂ ಭಾವಿಸಿ ಮದ್ವಿಕಾರಮನೆ ನೋಡುತ್ತಿರ್ಪುದುಂ ಗಾಳಿಗೊ
ಡ್ಡಿದ ದೀಪಾಂಕುರದಂತೆ ತನ್ಮುನಿಯುಮಂ ಕಾಮಂ ಚಲಂ ಮಾಡಿದಂ ೪೧

ವ|| ಅಂತು ಮಾಡೆ

ಮನಮೆನ್ನಂ ಮುಂಬರಲ್ ಮುಂದುವರಿವುದನೆ ತೋರ್ಪಂತೆ ನೀಳ್ದತ್ತು ಸುಯ್ ಭೋಂ
ಕೆನಲಂತೆಯ್ತುರ್ಪ ಕಾಮಂಗೊಲವಿನೊಳಿದಿರೇಟ್ಟಿಂತೆ ರೋಮೋದ್ಗಮಂ ತೊ
ಟ್ಟನೆ ಮೆಯ್ದೋಱತ್ತು ವೀರವ್ರತವಱದಪುದಿನ್ನೆಂದು ನಟ್ಟಂಜಿದಂತಾ
ತನ ಕಯ್ಯೊಳ್ ರಂಜಿಪಕ್ಷಾವಳಿ ನಡುಗಿದುದತ್ಯಂತಮಾಶ್ಚರ್ಯಮಾಗಲ್ ೪೨

ವ॥ ಅಂತುಮಲ್ಲದೆಯುಂ

ಕರಮೆಸೆದು ತೋಱತಿರ್ದಪು
ದೆರಡನೆಯ ವಸಂತಕುಸುಮಮಂಜರಿಯೆಂಬಂ
ತಿರೆ ತತ್ಕಪೋಲದೊಳ್ ಬಿ
ತ್ತರಿಸಿದುವು ಕೊನರ್ತ ಬೆಮರಬಿಂದುಗಳಾಗಳ್ ೪೩

ಮನದೊಂದಟ್ಟಿಱೊಳಿನ್ನನೊಲ್ದಡರೆ ನೋಡುತ್ತಿರ್ಪುದುಂ ಕಣ್ಣ ಬೆ
ಳ್ಪಿನ[1]ಗುರ್ವಾ[1]ಸ್ಥಳಮಂ ಸಿತಾಬ್ಜಮಯಮೆಂಬಂತಾಗೆಯುಂ ಮಾಡಿ ಭೋಂ
ಕ್ಕನಲಚ್ಛೋದಸರೋಂಬುವಂ ಕುಮುದಷಂಡಂ ಬಿಟ್ಟು ತಳ್ತತ್ತು ಮೇ
ಲೆ ನಭೋಭಾಗಮನೆಂಬಿನಂ ಪಸರಿಸಿತ್ತಾಗಳ್ ದಿಶಾಚಕ್ರಮಂ ೪೪

ವ॥ ಅಂತೆಯ್ದೆ ಮತ್ತಮೆನ್ನೊಳ್ ಸಂಭೋಗಲೀಲಾನರ್ತನಕ್ಕೋಜನಪ್ಪ ಮನೋಜಂ ವಿಲಾಸೋಪದೇಶಕ್ಕೋಜನಾಗಲೆವೇೞ್ಕುಮಲ್ಲದಂದು ರತಿರಸಾಸ್ವಾದನಂ ಗಳನಱಯದನ ದಿಟ್ಟಿಗಮರ್ದನುಗುಳ್ವಿಂತೆಗೆಯ್ವಂದಮುಂ ಒಸೆದು ಪರಿದಪ್ಪುದೆನಿಪ ರತಿರಸಮುಮಾನಂದಬಾಷ್ಪಪ್ರಸರಮುಂ ರಸಭಾರದಿಂ ನಡಗುವಂತೆ ಸಂಚಳಿಸುವಂಗಮುಂ ಇನಿಸಪ್ಪೊಡಂ ಪೊಡರ್ಪನಪ್ಪುಕಯ್ಯದಿಱಯೆ ಪೂದಳೆದುದೆನಿಪ ಪುರ್ಬಿನಕುಡಿವೆರಸು ತೂಕಡನೊಳಕೊಂಡ ಜಾಡ್ಯಮುಂ ಸೊಕ್ಕು ಮುಕ್ಕುಳಿಸಿದಂತಿರ್ದಿರವುಂ ಬಱಲ್ದಂತೆ ಜೋಲ್ದಂದಮುಂ ಮುನ್ನಮಭ್ಯಾಸಮಿಲ್ಲದುದರ್ಕೆಂತು ದೊರೆಕೊಳ್ಗುಮೆಂದು ಭಾವಿಸಿ ನೋಡುತ್ತಾತನೊಳವಸರಂಬಡೆದು ಮೆಲ್ಲನೆಯ್ದೆವಂದು

ಪೆಸರೇನಾರ್ಗೀತನೀ ಜವ್ವನಿಗ ತವಸಿ ತೊಟ್ಟಿರ್ಪ ಕರ್ಣಾವತಂಸಂ
ಪೊಸತೀ ಲೋಕಕ್ಕಿದಾವಂಘ್ರಿಪದ ಪೊಳೆವ ಪೂಗೊಂಚ[2]ಲಿಂದಾದು[2]ದೋ ನೀಂ
ಬೆಸಸಲ್ವೇೞ್ಕುಂತಿದಂ ಕೌತುಕಮನೆನಗೆನುತ್ತಂ ನಮಸ್ಕಾರಪೂರ್ವಂ
ಬೆಸಗೊಂಡೆಂ ತನ್ಮುನೀಂದ್ರಾನುಚರಮುನಿಯ ನಾನಂದತಿಪ್ರೀತಿಯಿಂದಂ ೪೫

ವ॥ ಅಂತು ಬೆಸಗೊಳೆ

1 ಪೂರ್ವಂ (ಕ) 2 ಲಿಂತಿದಂ (ಕ)

ಬೆಸಗೊಳ್ವುದಱಿಂದಿದನು[1]
ದ್ದೆಸವಾವುದು ತರುಣಿ ನಿನಗೆ ಕೌತುಕಮೆನೆ ಕೇ
ಳುಸಿರ್ದಪೆನೆಂದಾ ಮುನಿಪಂ
ನಸುನಗುತಂ ಪೇೞಲಾಗಳುದ್ಯತನಾದಂ ೪೭

ವ|| ಅದೆಂತೆನೆ ಸಕಲಮುನಿವೃಂದವಂದಿತಚರಣನುಮಖಿಲ ಮುನಿಜನಾನಂದ ನನುಂ ವಿದಿತನಿರವದ್ಯವಿದ್ಯಾಕಲಾಪನುಮಪ್ರತಿಮರೂಪನುಮಪ್ಪೊರ್ಬ ಶ್ವೇತಕೇತು ವೆಂಬ ಮಹಾಮುನಿಯಮರಲೋಕದೊಳಿರ್ಪನಾತನೊಂದು ದಿವಸಂ ಪುಂಡರೀಕಮೆಂಬ ಸರೋವರಮಂ ಮೀಯಲೆಂದು ಬಂದಿರೆ

ಅರವಿಂದಾಕರಸಾಂದ್ರಪದ್ಮವನಮಧ್ಯೋದ್ದೇಶದೊಳ್ ಲಕ್ಷ್ಮಿ ಭಾ
ಸುರವಿಸ್ತೀರ್ಣಸಿತಾಬ್ಜದಲ್ಲಿ ಪದಪಿಂ ಪ್ರತ್ಯಕ್ಷಮಿರ್ಪಳ್ ನಿರಂ
ತರಮಾ ಕೋಮಳೆ ಪದ್ಮಸದ್ಮತಟದೊಳ್ ನಿಂದಿರ್ದ ಸರ್ವಾಂಗಸುಂ
ದರನಂ ದಿವ್ಯಮುನೀಂದ್ರನಂ ಪಿರಿದುಮೊಂದಾಸಕ್ತಿಯಿಂ ನೋಡಿದಳ್ ೪೮

ವ|| ಅಂತು ನೋಡೆ

ನೋಡಲೊಡಂ ರತಾಂತಸುಖಮಾಗೆ ನಿಜಾಸನಪುಂಡರೀಕದೊಳ್
ನೋಡೆ ಕೃತಾರ್ಥೆಯಾದಳದಱತ್ತಣಿನಾಗಳೆ ಗಾಡಿ ನಾಡೆ ಕ
ಣ್ಗೂಡಿರಲೊರ್ವನುದ್ಭವಿಸೆ ಕಂಡು ನಿಜಾತ್ಮಜನೀತನೆಂದವಳ್
ನೀಡಿದಳಾ ಕುಮಾರಕನನಾ ಮುನಿಪಂಗೆ ಮನೋನುರಾಗದಿಂ ೪೯

ವ|| ಆಗಳಾತಂ ಯೋಗದೃಷ್ಟಿಯಿಂ ನೋಡಿ ತತ್ಕುಮಾರನಂ ಕೈಕೊಂಡು ಬಾಲಜನೋಚಿತಕ್ರಿಯೆಗಳಂ ಮಾಡಿ ಜನ್ಮಾನುರೂಪಮಾಗೆ ಪುಂಡರೀಕನೆಂದು ಪೆಸ ರನಿಟ್ಟು ಶೈಶವಮಂ ಪತ್ತುವಿಡಲೊಡಮಖಿಳ ವಿದ್ಯಾಕಲಾಪದೊಳ್ ಪರಿಣತನಂ ಮಾಡಿ ಯತಿತ್ವಮಂ ಕೈಕೊಳಿಸೆ ತದನುಷ್ಠಾನಪರಾಯಣನಾದ ಮಹಾನುಭಾವನೀತಂಗೀ ವ್ರತ ವಿರುದ್ಧಮಪ್ಪ ಕುಸುಮಮಂಜರಿಯೆಂತುಬಂದುದೆಂಬೆಯಪ್ಪೊಡೆ

ಇಂದು ಚತುರ್ದಶಿಯಪ್ಪುದ
ಱಿಂದಂ ಕೈಲಾಸವಾಸಿಯಂ ಕಾಣಲ್ಕಾ
ನಂದದೆ ದಿವದಿಂದಿರ್ಬರು
ಮೊಂದಾಗಿ ಬರುತ್ತಮಿರ್ಪುದುಂ ತತ್‌ಕ್ಷಣದೊಳ್ ೫೦

---

1 ಳ್ವುದುಮಾಮುನಿಯಿ (ಕ)

ಕುಸುಮವಿಭೂಷಣಾನ್ವಿತೆ ನವಪ್ರಸವಾಸವಪಾನಮತ್ತೆ ರಂ
ಜಿಸುವ ವಸಂತಲಕ್ಷ್ಮಿಯ ಕರಾಗ್ರಮೊಳಿಕ್ಕಿ ನಖಾಂಶುಜಾಲಮಂ
ಪಸರಿಸುತಿರ್ಪ ತನ್ನ ಕರಮಂ ವನದೇವತೆ ಪಾರಿಜಾತಮೊಂ
ದೆಸೆವಲರ್ಗೊಂಚಲಂ ಪಿಡಿದು ನಂದನದೊಳ್ ಬರುತೊರ್ವಳೊಪ್ಪಿದಳ್ ೫೧

ವ॥ ಅಂತು ಬಂದು ಪೊಡವಟ್ಟು ಭುವನತ್ರಯಾಭಿರಾಮಮಪ್ಪ ನಿನ್ನ ಸೌಕುಮಾರ್ಯಕ್ಕೆ ತಕ್ಕಲಂಕಾರಮೀ ದಿವ್ಯಕುಸುಮಮಂಜರಿಯನವತಂಸಂ ಮಾಡಿ ಪಾರಿಜಾತಜನ್ಮಮಂ ಸಫಲಂಮಾಳ್ಪುದೆಂದು ಬಿನ್ನವಿಸೆ ನಿಜರೂಪಸ್ತುತಿಗೆ ಲಜ್ಜಿಸಿ ಕೇಳದಂತೆ ಪೋಗೆ ಮತ್ತಂ ಬೆನ್ನನೆ ಪತ್ತಿ ಬರುತಿರ್ಪುದುಮಾಂ ಕಂಡು ಕಾರುಣ್ಯದಿಂದೀ ಕಾಂತೆಗೆ ಸಂತೋಷಂಮಾಡಿಮೆನಲಿದೇಕೆ ಬೇಡವೇಡೆನೆಯುಂ ಕಿವಿಯೊಳ್ ತೊಡರ್ಚಿ ಪೋದಳೀ ಕುಸುಮಮಂಜರಿಯನೆಂದು ಸಹಚರಮುನಿ ಪೇೞೆ ಪುಂಡರೀಕಂ ದರಹಸಿತಾಧರ ಕಪೋಲತಲನಾಗಿ

ಎಳಸುತ್ತಿರ್ದಪೆ ಪುಷ್ಪಮಂಜರಿಗೆ ಕೊಳ್ಳೀ ಸುತ್ತಿದೇಕೆಂದು ಸಂ
ಚಳಿಸುತ್ತಂ ನಿಜಕರ್ಣದಿಂ ತೆಗೆದು ಸೋಲ್ತೆಂ ಕೂಡು ನೀನೆನ್ನೊಳಿಂ
ದಳಿಮಾಲಾರವದಿಂದೆ ಪೇೞ್ವ ತೆಱದಿಂ ಮತ್ಕರ್ಣದೊಳ್ ತಾರಕೋ
ಜ್ವಳಮಂ ರಂಜಿಪ ಪುಷ್ಪಮಂಜರಿಯನತ್ಯೌತ್ಸುಕ್ಯದಿಂದಿಕ್ಕಿದಂ ೫೨

ಇಂ ಪೇೞ್ವುದೇನನೆನ್ನ ಕ
ದಂಪಿನ ನಸುಸೋಂಕಿನೊಂದು ಸುಖದಿಂದಾದಂ
ಕಂಪಿಸುತಿರೆ ಕರತಳದಿಂ
ದಂ ಪೋದತ್ತಕ್ಷಮಾಲೆ ನಾಣ್ಚೆರಸಾಗಳ್ ೫೩

ವ॥ ಅಂತು ಪೋದೊಡಮಱಿಯದಿರೆ

ತೊಳಗುವ ಹಾರಮನಾಗಳ್
ತಳೆವಂತಿರೆ ನೆಲಕೆ ಬೀೞ್ವನಂ ಪಿಡಿದಕ್ಷಾ
ವಳಿಯಂ ಕೊರಲೊಳ್ ತಳೆದಾಂ
ತಳೆದೆಂ ಮುನಿಪತಿಯ ತೋಳ ತಳ್ಕಿನ ಸುಖಮಂ ೫೪

ವ॥ ಅಂತಾ ವ್ಯತಿರೇಕಮೊಳೆನ್ನ ಛತ್ರಧಾರಿಣಿ ನೋಡಿ

ತಡೆದಿರಲಾಗದಿನ್ನು ಮೊಗಮಜ್ಜನಮಂ ನೆಱೆಮಾಡಿ ದೇವಿಯರ್
ನಡೆಗೊಳಲಿರ್ದಪರ್ ಮನೆಗೆ ಮಜ್ಜನಕೇಗಳೆ ರಾಜಪುತ್ರಿ ನೀಂ
ನಡೆವುದೆನುತ್ತಮಿಚ್ಛೆಯಣಮಿಲ್ಲನೊಡಂ ತೆಗೆದಳ್ ಕರಂ ಮನಂ
ಕಿಡೆ ಪೊಸತಪ್ಪುದೊಂದು ಪಿಡಿಗಂಕುಶಮಿಟ್ಟು ಮದಳ್ಪುವಂದದಿಂ ೫೫

ವ॥ ಅಂತವಳೆನ್ನನೆಂತಾನುಂ ತೆಗೆಯೆ

ಮದನಾಸ್ತ್ರಾವಳಿಯಿಂದೆ ಕೀಲಿಸಿದುದೋ ತದ್ವಕ್ತ್ರಲಾವಣ್ಯಪಂ
ಕದಿನಾಲ್ದಿತ್ತೊ ಕಪೋಲಕಂಟಕನಿಕಾಯಾಗ್ರಂಗಳಿಂ ಕೂಡೆ ನಾಂ
ಟಿದುದೋ ಮೇಣ್ ಸುಭಗತ್ವವೆಂಬ ಗುಣದಿಂ ಪೊಲ್ದತ್ತೊ ಮೇಣಿಂಬಿನಂ
ಪದಪಿಂ ನಟ್ಟಿರೆ ದಿಟ್ಟಿಯಂ ತೆಗೆದೆನೆಂತೆಂತಾನುಮುದ್ವೇಗದಿಂ ೫೬

ವ॥ ಅಲ್ಲಿಂ ತಳರ್ವುದುಮತ್ತಲೊಡನೆಯೆ ಕುಮಾರನಾತನ ಧೈರ್ಯಸ್ಖಲನೆಯಂ ನೋಡಿ

ಎನಗನುರೂಪಮಲ್ತಿದು ನಿಕೃಷ್ಟಜನೋಚಿತಮಾರ್ಗಮೆಂಬಿದಂ
ಮನದೊಳಣಂ ವಿಚಾರಿಸದೆ ಸ್ವೈರಣೆಗೆಟ್ಟೞೆವೆತ್ತವೋದುದೆಂ
ಬಿನಮೆರ್ದೆಗೆಟ್ಟು ಮೆಯ್ಯೞಿಯದಂತಿರಲಕ್ಕುಮೆ ಪುಂಡರೀಕ ಭೋಂ
ಕನೆ ನಿನಗೀಗಳಿಂದ್ರಿಯದ ಡಾವರವೆತ್ತಣಿನೆತ್ತ ಬಂದುದೋ ೫೭

ಎಲ್ಲಿತ್ತೊ ಧೈರ್ಯಮುಪಶಮ
ಮೆಲ್ಲಿತ್ತೊ ಜಿತೇಂದ್ರಿಯತ್ವಗುಣಮೆಲ್ಲಿತ್ತೋ
ಎಲ್ಲಿತ್ತೊ ನಿನ್ನ ಶೌರ್ಯಮ
ದೆಲ್ಲಿತ್ತುಪಭೋಗರಾಗವಿಷಯದ್ವೇಷಂ ೫೮

ಎಲ್ಲಿತ್ತೊ ವೇದಸಮುದಯ
ಮೆಲ್ಲಿತ್ತೊ ಬ್ರಹ್ಮಚರ್ಯವೞಿವೆಲ್ಲಿತ್ತೋ
ಎಲ್ಲಿತ್ತೊ ಯತಿವರತ್ವಮ
ದೆಲ್ಲಿತ್ತೋ ಯೌವನಾನುಶಾಸನಮೀಗಳ್ ೫೯

ವ॥ ಎಂದು ಮಾಣದೆ

ಅತಿಶಯದಿಂ ವಿಷಯಾಸ
ಕ್ತತೆ ನಿನ್ನನ್ನರುಮನಿಂತುಮಾಡಿತ್ತೆನಲಿಂ
ಮತಿ ನಿಷ್ಫಲಮಾಗಮುಸಂ
ತತಿ ನಿರ್ಗುಣಮುಞವು ನಿಷ್ಪ್ರಯೋಜನಮಲ್ತೇ ೬೦

ವ॥ ಅಂತುಮಲ್ಲದೆಯುಂ

ಎಂತು ಗಡ ನಿನ್ನ ಕಯ್ಯಿಂ
ದಂ ತೊಟ್ಟನೆ ಬಿಟ್ಟ ಜಪದಮಣಿಯುಮನೆಲೆ ಮುಂ
ದಂತೊಯ್ಯಲಱಿಯೆನೆನಲಿ
ನ್ನಿಂತಿರೆ ನಿನ್ನಂತೆ ವಿಗತಚಿತ್ತರುಮೊಳರೇ? ೬೧

ವ॥ ಅದಱಿನಿನ್ನಾದೊಡಂ ನಿನ್ನ ಮನಮಂ ನೀಂ ನಿಲಿಸಿಕೊಳ್ಳೆಂದು ನುಡಿಯೆ ಲಜ್ಜಿತನಾದಂತೆಗೆಯ್ದು

ಬೆಸೆದು ಕಪಿಂಜಲ ನೀಂ ಭಾ
ವಿಸಿದಿರ್ ಬೇಱೊಂದು ತೆಱನನವಳೆನ್ನಂ ವಂ
ಚಿಸಿದಪರಾಧಮನಾಂ ಸೈ
ರಿಸುವೆನೆ ನೋಡೆನುತಮೆಟ್ಟಿ ಪುಸಿ ಮುಳಿಸಿಂದಂ ೬೨

ಸಿರಿದುಂ ಪ್ರಯತ್ನದಿಂದಮೆ
ವಿರಚಿಸೆ ಕಣ್ಗೆಸೆವ ಭೀಷಣಭ್ರುಕುಟಿ ಪೊದ
ಱ್ದಿರೆ ಚುಂಬನಾಭಿಲಾಷ
ಸ್ಫುರಿತಾಧರನಾ ಕುಮಾರತಾಪಸನೆನ್ನಂ ೬೩

ಕುಡು ಚಪಳೆ ಜಪದ ಮಣಿಯಂ
ಕುಡದಿನ್ನೊಂದಡಿಯನಪ್ಪೊಡಂ ಪೋಗದಿರೆಂ
ದೊಡೆ ಕೇಳ್ದು ಜಪದ ಮಣಿಗೆ
ತ್ತೊಡನೆಯೆ ಹಾರಮನೆ ತೆಗೆದೆನೆನ್ನಯ ಕೊರಲಿಂ ೬೪

ವ॥ ಅಂತು ಮಕರಧ್ವಜಲಾಸ್ಯಾರಂಭಲೀಲಾಪುಷ್ಪಾಂಜಲಿಯೆನಿಸಿದೇಕಾವಳಿಯಂ ತೆಗೆದು ಕುಡುವುದುಮಾತನುಂ ಮನ್ಮುಖಾಸಕ್ತ ದೃಷ್ಟಿಯಿಂ ಮೆಯ್ಯಱಿಯದಕ್ಷಾವಳಿಗೆತ್ತು ಕಳೆದುಕೊಳ್ವುದುಮೂನಾಗಳಲ್ಲಿಂ ತಳರ್ದು

ಕಳವಳಿಸಿ ಬೆಮರ್ತಾಗಳ್
ಕೊಳದೊಳ್ ಮೀಯಲ್ಕತಿಪ್ರಯತ್ನದಿನೊಯ್ದರ್
ಕೆಳದಿಯರೆಂತಾನುಂ ತೆಗೆ
ದಳವಿಲ್ಲದೆ ಬಂದ ನದಿಯನಿದಿರೇಱುವವೋಲ್ ೬೫

ವ॥ ಅಂತೊಯ್ಯಲ್ ನಿಜಜನನಿಯೊಡನೆಂತಾನುಮರಮನೆಗೆ ಬಂದು ಮದೀಯ ಮಂದಿರಮಂ ಪೊಕ್ಕು ತದ್ವಿಯೋಗದೊಳ್ ಮೆಯ್ಯಱಿಯದೆ

ಮನೆಗೇಂ ಬಂದೆನೊ ಬಾರೆನೋ ಸಖಿಯರೊಳ್ ಕೂಡಿರ್ದೆನೋ ಕೂಡದಿ
ರ್ದೆನೊ ಮೇಣ್ ನಿದ್ರೆಯೊಳಿರ್ದೆನೋ ಪಿರಿದುಮೆಚ್ಚತ್ತಿರ್ದೆನೋ ಪಠೌನವಿ
ರ್ದೆನೊ ಮಾತಾಡುತಿರ್ದೆನೋ ವ್ಯಸನದೊಳ್ ಸಂದಿರ್ದೆನೋ ರಾಗವಿ
ರ್ದೆನೊ ಪೇೞಾಂ ನಗುತಿರ್ದೆನೋ ಮನದೊಳಂದಾಸತ್ತ್ತುೞುತ್ತಿರ್ದೆನೋ ೬೬

ಇದು ದಿವಮೋ ರಾತ್ರಿಯೊ ಮೇ
ಣಿದು ದುಃಖವೊ ರುಜೆಯೊ ಕಳವಳವೊ ಪೇೞದು ಪೊ
ಲ್ಲದೊ ತಾನಿದೊಳ್ಳಿತೋ ಮೇ
ಣಿದೆಂಬುದಂ ಬಗೆಯಲಾರ್ತೆನಿಲ್ಲಾ ಕ್ಷಣದೊಳ್ ೬೭

ಅದಾವೆಡೆಗೆ ಪೋಪುದಿ[1]ನ್ನು ಡಿವುದಾರೊಳಿನ್ನಟ್ಕಿಱಂ[1]
ದದಾವುದನೆ ಕೇಳ್ವೆನಿಂ ಪಡೆದು ನೋೞ್ಪೆದಿನ್ನೇನ ನಿ
ನ್ನದಾರ್ಗಿದನೆ ಪೇೞ್ವೆನಿನ್ನೆನಗೆ ಬಾೞ್ಕೆ ಪೇೞಾವುದೆಂ
ದದೇನುಮಱಿಯಲ್ಕೆ ಬಾರದೆ ಮನೋಭವೋದ್ರೇಕದಿಂ ೬೮

ವ || ಅನಂತರಂ ಸಖೀಜನಮುಮನಶೇಷಪರಿಜನಮುಮಂ ಬಾಗಿಲೊಳ್ ನಿಲಿಸಿ
ಕನ್ಯಾಂತಃಪುರಪ್ರಾಸಾದಮನೇಱಿ ತದೀಯಮಣಿಗವಾಕ್ಷನಿಕ್ಷಿಪ್ತಮುಖಿಯೆನಾಗಿ

ಅದು ಪೀಯೂಷಪಯೋಧಿಪೂರಲಹರೀಸಂತಾನದಿಂ ಚೆಲ್ವವೆ
ತ್ತುದೊ ಮಾಣಿಕ್ಯನಿಧಾನದಿಂ ಸಮೆದು ತೋಱುತ್ತಿರ್ದುದೋ ಚಂದ್ರಬಿಂ
ಬದಿನೊಪ್ಪಂಬಡೆದತ್ತೊ ಮೇಣ್ ಪಸದನಂಗೊಂಡಿರ್ದುದೋ ಪೇೞಿನಲ್
ಪದೆದಾಂ ನೋಡಿದೆನಾತನಿರ್ದ ದೆಸೆಯಂ ನಟ್ಟಾಲಿ ಬೀೞ್ವನ್ನೆಗಂ ೬೯

ವ || ಅದಲ್ಲದೆಯುಂ

ಆ ದೆಸೆಯಿಂ ಬರ್ಪೆಲರುಮ
ನಾ ದೆಸೆಯಿಂದೆಸೆವ ಕುಸುಮಪರಿಮಳಮುಮನಂ
ತಾ ದೆಸಿಯಿನೆಸೆವ ವಿಹಗನಿ
ನಾದಮುಮಂ ವಾರ್ತೆಗೇೞಲಾನೊಡರಿಸಿದೆಂ ೭೦

ವ || ಮತ್ತಮಾತಂ ಕೈಕೊಂಡುದಱಿಂ ಋಷಿವೇಷಕ್ಕಗ್ರಾಮ್ಯತೆಯುಂ ಆತನಂ ಪೊರ್ದಿದ ಜವ್ವನಕ್ಕೆ ಸೌಂದರ್ಯಮುಂ ಆತನ ಕಿವಿಗವತಂಸಮಾದ ಪಾರಿಜಾತಕುಸುಮ ಮಂಜರಿಗೆ ಮನೋಹರತೆಯುಮಾತನಿರವಿಂದಮೆ ಸುರಲೋಕಕ್ಕೆ ರಮಣೀಯತೆಯು ಮಾತನ ರೂಪಸಂಪತ್ತಿಯಿಂ ಕುಸುಮಾಯುಧಂಗೆ ದುರ್ಜಯತ್ವಮುಮಾದುದೆಂದು ಬಗೆ ಯುತ್ತಮಾ ಸೌಭಾಗ್ಯನಿಧಿಯ ವಿಯೋಗದಿಂ ಜೀವವಿಯೋಗಮಾಗದಿರ್ಕೆಂದು ತಗುಳ್ಚಿದ

1 ನ್ನಳಿವುದಾವಡೊಳಕ್ಕಱಿಂ (ಕ)

ರಕ್ಷಾವಳಿಯಂತೆ ಕೊರಲೊಳಿಕ್ಕಿರ್ದಕ್ಷಾವಳಿಯುಂ ಆತನ ರಹಸ್ಯಾಲಾಪದಂತೆ ಕಿವಿಗೆವಂದು ರಾಜಿಸುವ ಪಾರಿಜಾತಕುಸುಮಮಂಜರಿಯುಮಾತನ ಕರತಲಸ್ಪರ್ಶಸುಖದಿಂ ಕಪೋಲತಲ ಕದಂಬಮುಕುಳಕರ್ಣಪೂರದಂತುಣ್ಮಿರ್ದ ಪುಳಕಮುಂ ಬೆರಸು ಗದ್ಗದಚಿತ್ತೆಯೆನೇಕಾಕಿಯಾಗಿರ್ಪುದುಮನ್ನೆಗವೆನ್ನ ತಾಂಬೂಲಕರಂಕವಾಹಿನಿ ಮಕರಿಕೆಯೆಂಬಳ್ ಪೆಱಗೆ ಕಿಱಿದು ಬೇಗಂ ಮೀಯಲೆಂದು ನಿಂದನಂತರಂ ಮತ್ಸಮೀಕ್ಕೆ ಬಂದು ಮೆಲ್ಲನಿಂತೆಂದಳ್

ತೊಡಸಿದನಾವನೀ ಕುಸುಮಮಂಜರಿಯಂ ನಿನಗಾತನಕ್ಕ ತ
ನ್ನೊಡವರುತಿರ್ದ ತಾಪಸಕುಮಾರನನಾಗಳೆ ವಂಚಿಸಲ್ಕೆ ತ
ಳ್ತಿಡಿದ ಲತಾಪ್ರತಾನದೊಳಪೊಕ್ಕುಱಿದೊಯ್ಯನೆ ಸಾರ್ದು ಮೆಲ್ಪೊಡಂ
ಬಡೆ ಬೆಸಗೊಂಡನೆನ್ನನನುರಾಗದಿನೆಯ್ದೆ ಭವತ್ಪ್ರಪಂಚಮಂ ೭೧

ವ॥ ಅದೆಂತೆನೆ

ಈ ಕನ್ನೆಯಾರ್ಗೆ ಪೆಸರೇ
ನೇಕಿಲ್ಲಿಗೆ ಬಂದಳಾರ ಮಗಳೆಸೆವಲರ್ದ
ಬ್ಜಾಕರದಿನೆತ್ತಪೋದಪ
ಳೀಕೆಯೆನಲ್ ಮುನಿಕುಮಾರಕಂಗಿಂತೆಂದೆಂ ೭೨

ವ॥ ಅದೆಂತೆಂದೊಡೆ ದಿನಕರಮರೀಚಿಯಿಂದಾದಪ್ಸರಸಿಯೊಳುದಿಸಿದ ಗೌರಿಗಂ ಗಂಧರ್ವಲೋಕಾಧಿಪತಿಯಪ್ಪ ಹಂಸಂಗಂ ಮಗಳಾಗಿ ಮಹಾಶ್ವೇತೆಯೆಂಬ ಪೆಸರಿಂ ನೆಗೞ್ತೆವೆತ್ತಳದಲ್ಲದೆಯುಂ ಇಂದು ಜನನಿಯೊಡನೀ ಸರೋವರಮಂ ಮೀಯಲೆಂದು ಬಂದಾತ್ಮನಿವಾಸಮಪ್ಪ ಹೇಮಕೂಟಾಚಲಕ್ಕೆ ಪೋಗುತ್ತಿರ್ದಪಳೆಂಬುದುಂ ಕಿಱಿದು ಬೇಗಮೇನಾನುಮಂ ತನ್ನೊಳೆ ಬಗೆಯುತ್ತಮಿರ್ದನಂತರಮೆನ್ನನಿಂತೆಂದಂ

ಎಳವಿಯೊಳಂ ಗಾಂಭೀರ್ಯಮ
ನೊಳಕೊಂಡ ಭವತ್ಸ್ವರೂಪಮಂ ಕಂಡೀ ಕೋ
ಮಳೆಯಂ ಪ್ರಾರ್ಥಿಸಿದೊಡೆ ನಿ
ಷ್ಫಲಮಾಗದೆನುತ್ತೆ ಬಂದೆ ನಾನಿಂದುಮುಖೀ ೭೩

ವ॥ ಎಂದು ನುಡಿಯಲಾನಾಗಳಾದರಂಬೆರಸು ಕೈಗಳಂ ಮುಗಿದು

ಬೆಸಸುವುದಂತದಿರ್ಕೆಮ ಭವದ್ವಿಧರಪ್ರತಿಮಪ್ರಭಾವರೀ
ಕ್ಷಿಸುವರೆ ಮುನ್ನ ಮದ್ವಿಧರನೆನ್ನವೊಲಾದಮೆ ನೋಂತಳಾವಳಿಂ
ನ್ನು ಸಿರ್ಪುದು ನನ್ನಿಯಂ ನುಡಿಯ ಕಾರ್ಯವನೆನ್ನವಳೀಕೆಯೆಂದು ಭಾ
ವಿಸಿ [1]ಕೃತಕೃತ್ಯೆಯಪ್ಪೆನೆನಲಾಗಳೆ[1] ಸಂತಸಮಂ [2]ನೆಗೞ್ಚಿದಂ[2] ೭೪

---

1 ಕೃತಕೃತ್ಯಮಾಳ್ಪುದೆನಲಾಗಳೆ (ಕ) 2 ತನೆಯ್ದಿದಂ (ಕ)

ವ॥ ಅಂತುಮಲ್ಲದೆಯುಂ

ಕೆಲದೊಳಳುರ್ತು ಕಾರ್ಮುಗಿಲೆ ಪರ್ವಿದುದೆಂಬಿನೆಗಂ ಕಱಂಗಿ ಕ
ತ್ತಲಿಪ ತಮಾಲಪಾದಪದ ಪಲ್ಲವಮಂ ಹಿಳಿದೊಂದು ನಿರ್ಮಲೋ
ಪಲತಲದಲ್ಲಿ ತದ್ರಸದಿನಾಗಳೆ ನೋಡಿ ನಿಜೋತ್ತರೀಯುವ
ಲ್ಕಲವಸನೈಕದೇಶಮನೆ ಸೀಳ್ದದಱಿಳೊಳ್ ಬರೆದಂ ತಳೋದರೀ ೭೫

ವ॥ ಅನಂತರಂ

ಏಕಾಂತದೊಳೀ ಲೇಖಮ
ನಾ ಕನ್ನೆಗೆ ಪೋಗಿ ಕುಡುವುದೆಂದಟ್ಟಿದನೆಂ
ದಾಕೆ ನುಡಿವುತ್ತಮಂದ
ಪ್ರಾಕಟವದನಡಪದೊಳಗಣಿಂ ತೆಗೆದಾಗಳ್ ೭೬

ಅದು ಶಬ್ದಾತ್ಮಕಮಾಗಿಯುಂ ಪಿರಿದುಮಂದಂತರ್ಗತಸ್ಪರ್ಶಸೌ
ಖ್ಯದವೊಲ್ಮಾಡುತಮಾಗಳಂತೆ ಕಿವಿವೊಕ್ಕುಂ ಮೆಯ್ಯೊಳಂತೆಯ್ದೆ ಪೊ
ಕ್ಕುದನುದ್ಯತ್ಪುಳಕಂಗಳಿಂದಱಯಿಸುತ್ತಂ ಮನ್ಮಥಾವೇಶಮಂ
ತ್ರದವೋಲಾತನ ವಾರ್ತೆ ಮೆಯ್ಯಱಯದಿರ್ಪಂತೆನ್ನನೇಂ ಮಾಡಿತೋ ೭೭

ವ॥ ಅನಂತರಮಾ ಲೇಖನಮಂ ಕಳೆದುಕೊಂಡು ನಿಮಿರ್ಷಿ ನೋಟ್ಪಿನ್ನೆಗಮಲ್ಲಿ

ದೂರಂ ಮುಕ್ತಾಲತಯಾ । ಬಿಸಸಿತಯಾ ವಿಪ್ರಲೋಭ್ಯಮಾನೋ ಮೇ
ಹಂಸ ಇವ ದರ್ಶಿತಾಶೋ । ಮಾನಸಜನ್ಮಾ ತ್ವಯಾನೀತಃ ೭೮

ಎನಗಾಸೆದೋಱ ಬಿಸಸಿತ
ಮೆನಿಸುವ ನಿಜತಾರಹಾರಲತೆಯಿಂದಂ ಹಂ
ಸನವೊಲ್ಮಾನಸಸಂಭವ
ಮೆನಿಪ ಮದೀಯಾಭಿಮಾನಮಂ ಕಟ್ಟೊಯ್ದೌ ೭೯

ವ॥ ಎಂಬೀ ಆರ್ಯೆಯಂ ಭಾವಿಸಿ ನೋಡೆ

ಮೊದಲೊಳ್ ಸೊಕ್ಕಿದವಂಗೆ ಕಳ್ ವಿಷದಿನಳ್ಕಿರ್ದಂಗೆ ದುರ್ನಿದ್ರೆ ಕಾ
ಣದವಂಗುರ್ವಿದ ಮರ್ವು ದಿಗ್ಭ್ರಮೆ ಪದಂಗೆಟ್ಟಂಗೆ ಪೈಶಾಚಕಂ
ಗೆ ದುರಾವೇಶಮಧಾರ್ಮಿಕಂಗೆ ಕುಮತಂ ತತ್ವಪ್ರಮೂಢಂಗೆ ಬೀ
ಸಿದ ಕಣ್ಮಾಯದ ಕುಂಚದಂತಿರೆನಗಾದತ್ತಾಗಳೇನೆಂಬುದೋ ೮೦

ವ॥ ತದನಂತರಂ

ಆಮರ್ದಂ ಪೀರ್ದಳೊ ಮೇಣ್ಪರಂಬಡೆದಳೋ ಪುಣ್ಯೋದಯಂ ತನ್ನೊಳೀಂ
ಸಮಸಂದಿರ್ದುದೊ ನಾಕಲೋಕಸುಖಮಂ ಕೈಕೊಂಡಳೋ ದೈವವೀ
ರಮಣೀರತ್ನದಮೇಲೆ ಮೇಣ್ ನೆಲಸಿತೋ ತ್ರೈಲೋಕ್ಯರಾಜ್ಯಾಭಿಷೇ
ಕಮೆ ಕೈಸಾರ್ದುದಿವಳ್ಗೆನುತ್ತೆ ಪದಪಿಂದಾನಾಕೆಯಂ ನೋಡಿದೆಂ ೮೧

ವ॥ ಅಂತು ನೋಡಿ ಪಿರಿದುಮುಟ್ಕಿಱಿಂ ಕೆಲಕ್ಕೆ ಕರೆದು ಕುಳ್ಳಿರಿಸಿ

ಪರೆದಿರ್ದ ಕುರುಳ್ಗಳನೋ
ಸರಿಸಿ ಕದಂಪುಗಳನೊಯ್ಯನೆಳೆವುತ್ತಂದಾ
ಳರಸೆಂಬ ಭೇದಮೆಮ್ಮಿ
ರ್ಬರೊಳಂ ಪಲ್ಲಟಿಸಿತೆಂಬಿನಂ ಮನ್ನಿಸಿದೆಂ ೮೨

ವ॥ ಅಂತಾದರಿಸುತಮಿರ್ದು

ಎಂತೆಂತು ಕಂಡೆ ಕಣ್ಬರಿ
ವೆಂತೆಂತೇನೆಂದು ನುಡಿದನಾತನ ಕೆಲದೊಳ್
ನೀಂ ತಡೆದ ಬೇಗವೆನಿತೆನಿ
ತಂತರಮಂ ಬರುತಲಿರ್ದನೆಮ್ಮಯ ಬೞಯಂ ೮೩

ವ॥ ಎಂದು

ಒಡನೆಯವರೆಲ್ಲರುಮನುಱ
ದಡಪದವಳುಮಾನುಮೊಂದು ಮಾಡದ ಮೇಲಿ
ರ್ದಡಿಗಡಿಗೆ ಮಗುಳ್ದು ಮಗುಳ್ದಾ
ನುಡಿಯನೆ ಕೇಳುತ್ತೆ ಕಳೆದನಂತಾ ಪಗಲಂ ೮೪

ವ॥ ಅನ್ನೆಗಂ

ಮದನಾತುರೆಯಪ್ಪೆನ್ನೀ
ಹೃದಯದ ರಾಗವನೆ ಪರ್ಚುಗೊಂಡಂತಿರೆ ಕೆಂ
ಪೊದವಿದ ಪಡುವಣ ದೆಸೆಗೆ
ಯ್ದಿದನರುಣರುಚಿಪ್ರಕಾಶನಪ್ಪ ದಿನೇಶಂ ೮೫

ಕೆಂದಾವರೆಗಳ್ ಮಧುಕರ
ವೃಂದಮನೊಳಕೊಂಡು ಮುಗಿಯೆ ರವಿವಿರಹದ ನೋ
ವಿಂದರವಿಂದಿನಿ ಮೂರ್ಛೆಗೆ
ಸಂದಿರ್ದೆ ಕತ್ತಲಿಸಿದಂದಮಂ ಪ್ರಕಟಿಸುಗುಂ ೮೬

ಇಂದುಕಳಾಮರೀಚಿ ರುಚಿರೋಜ್ಜ್ವಲ ಬಾಲಮೃಣಾಳಮಂ ಮರು
ಳ್ದೊಂದನೆ ಕರ್ಚಿ ತದ್ವಿವರದಿಂದೆರಡುಂ ಬರೆಪೀರ್ದವೊಲ್ ನೆಗ
ೞ್ದೊಂದಳಿ ಚಿತ್ರಮಂ ತೆಗೆದುಕೊಂಡು ವಿಯೋಗದಿನಾದದೊಂದು ಕಿ
ಚ್ಚಂದದೞುರಲ್ಕಗಲ್ದುವು ರಥಾಂಗಯುಗಂಗಳನಂಗತಾಪದಿಂ ೮೭

ವ॥ ಆಗಳೆನ್ನ ಕೊಡೆವಿಡಿದವಳ್ ಬಾಗಿಲಿಂ ಪರಿತಂದು

ಕೊಳನ ತಡಿಯಲ್ಲಿ ಕಂಡಾ
ಗಳಿರ್ಬರೊಳೊರ್ಬ ಮುನಿಕುಮಾರಂ ಭೂಭೃ
ನ್ನಿಳಯದ ಬಾಗಿಲೊಳಕ್ಷಾ
ವಳಿಯಂ ಬೇಡಲ್ಕೆ ಬಂದು ನಿಂದಿರ್ದಪ್ಪಂ ೮೮

ವ॥ ಎಂದವಳ್ ಬಂದು ಪೇೞ್ವುದುಂ

ನಿನಗೇವೇೞ್ದಪೆ ನಾಂ ಭೋಂ
ಕೆನಲಾ ತಾಪಸಕುಮಾರವೆಸರ್ಗೊಳ್ವುದುಮಾ
ತನೆಗೆತ್ತು ಬಾಗಿಲೊಳ್ ತೊ
ಟ್ಟನೆ ಬಂದಿರ್ದಂತಿರಾದೆನಿರ್ದಂತಿರ್ದುಂ ೮೯

ವ॥ ಆಗಳೊರ್ವ ಕಂಚುಕಿಯಂ ಕರೆದು ಬೇಗನೊಡಗೊಂಡು ಬಾಯೆಂದು ಪೇೞಲೊಡನೆ

ಎಳವಿಸಿಲೊಲವಿಂ ಬೆಳ್ದಿಂ
ಗಳ ಬೞಿಯಂ ಬರುತಮಿರ್ದುದೆಂಬಂತೆ ಕಪಿಂ
ಜಳನಾಗಳಾ ಜರಾನಿ
ರ್ಮಳನೆನಿಸಿದ ಸೌವಿದಲ್ಲನೊಡವರುತಿರ್ದಂ ೯೦

ವ॥ ಅಂತು ರೂಪಿಂಗೆ ಯವ್ವನಮುಂ ಯವ್ವನಕ್ಕೆ ಕಾಮನುಂ ಕಾಮಂಗೆ ವಸಂತಸಮಯಮುಂ ವಸಂತಸಮಯಕ್ಕೆ ತಂಬೆಲರುಮೆಂಬಂತೆ ಪುಂಡರೀಕಂಗೆ ಸಹಾಯನಪ್ಪ ಮುನಿಕುಮಾರನಂ ಕಂಡೆನನ್ನೆಗಂ ಮುನಿಪಂ ವ್ಯಾಕುಲನಂತೆ ಶೂನ್ಯನಂತೆ ದುಃಖಿತನಾಗಿರ್ದಂತೇನಾನುಂ ಪ್ರಾರ್ಥಿಪನಂತೆ ಬರುತಿರ್ದನಿರ್ಪುದುಂ ತತ್ಕ್ಷಣದೊಳ್

ಇದಿರೆದ್ದು ಪೊಡವಡುತ್ತೇ
ಱಿದ ಕನಕಾಸನಮನಿತ್ತು ಬೇಡೆನೆಯೆನೆ ತ
ತ್ಪದಯುಗಮಂ ಕರ್ಚಿ ಪದಾ
ಬ್ಜದಿರ್ಪ ನಾಂ ತೊಡೆದೆನುತ್ತರೀಯಾಂಶುಕದಿಂ ೯೧

ನುಡಿಯಲ್ ಮುನಿಪಂ ಬಗೆದೆ
ನ್ನಡಪದವಳ್ ಕೆಲದೊಳಿರ್ದೊಡಾಕೆಯ ದೆಸೆಯಂ
ಕಡೆಗಣ್ಣಿಂ ನೋೞ್ಪುದುಮಾ
ಗಡೆ ಲಜ್ಜಿಸಿದಪ್ಪನೆಂದು ನೋಟದಿನಱಿದೆಂ ೯೨

ವ॥ ಆಗಳಱಿದಿವಳೆನ್ನ ಶರೀರದಿಂ ಬೇಱಲ್ಲಳ್ ಮುನಿಶಂಕರಾ ನೀಂ ಬೆಸಸಿಮೆಂಬುದುಂ

ನುಡಿವೊಡೆ ಲಜ್ಜಿಸಿ ನಾಲಗೆ
ಪೊಡರ್ದಪುದಿಲ್ಲಕ್ಕು ಬಿಕ್ಕೆಯಂ ಬೇರುಮನುಂ
ಡಡವಿಯೊಳಗಿರ್ಪ ಮುನಿಗಳ
ನಡೆವಳಿಯೆತ್ತೆತ್ತ ಯುವತಿಜನದನುರಾಗಂ ೯೩

ವ॥ ಅದಲ್ಲದೆಯುಂ

ನಗೆಗೆಡೆಯಾಗೆ ದೈವವೆನಗೇನನೊಡರ್ಚಿಸಿತೀಗಳಕ್ಕ ರಾ
ಗಿಗಳ ನಿಕೃಷ್ಟಚೇಷ್ಟೆಗನುಗೆಯ್ದಪೆನೆಂತಿದ ನಿನ್ನ ಮುಂದೆ ಪೇೞ್
ಬಗೆವೊಡೆ ಕಟ್ಟದೀ ಜಡೆಗೆ ತಕ್ಕುದೊ ಮೇಣ್ ಪೊದೆದಿರ್ದ ನಾರಸೀ
ರೆಗೆ ದೊರೆಯೋ ತಪಕ್ಕಿದನುರೂಪವೊ ಮೇಣ್ ಸುಕೃತಕ್ಕುಪಾಯವೋ ೯೪

ವ॥ ಆದೊಡಂ

ಪೇೞಲೆವೇಡಿದಪ್ಪುದು ಶರಣ್ ಪೆಱತಾವುದುಮಿಲ್ಲ ಕೇವಲಂ
ಪೇೞದಿರಲ್ಕನರ್ಥಮುದಱಿಂದಸುವಂ ನೆಱೆ ಬಿಟ್ಟುಮೀಗಳಾಂ
ಪಾಲಿಸವೇೞ್ಕುಮೆನ್ನಯ ಸಹಾಯನ ಜೀವಮನೊಂದು ಲಜ್ಜೆಯಂ
ಪಾಲಿಸದೆಯ್ದೆ ಪೇೞಲನುಗೆಯ್ದಪೆನುತ್ಸವಲೋಲಲೋಚನೇ ೯೫

ವ॥ ಅದೆಂತೆನೆ

ಒದವಿದ ಮುನಿಸಿಂದಂ ನಿ
ನ್ನಿದಿರೊಳ್ ಬಿಡೆನುಡಿದು ಬಿಟ್ಟು ಮುನಿಪನ ಪೂಗೊ
ಯ್ವುದಮಂ ಬಿಸುಟ್ಟು ನಿಲಲಾ
ಱದೆ ಮತ್ತೊಂದೆಡೆಗೆ ಪೋದೆನುಬ್ಬೆಗದಿಂದಂ ೯೬

ವ॥ ಅನ್ನೆಗಂ ನೀಮುಂ ನಿಜನಿವಾಸಕ್ಕೆವಂದಿರಾಗಳಾನೇಕಾಕಿಯಾಗಿರ್ದು ಮೇಗೆಯ್ಯುತ್ತಿರ್ದಪನೆಂದು ಕುತೂಹಲಂಬೆರಸು ಮುನ್ನಿನೆಡೆಗೆ ಬಂದುನೋಡಿ ಕಾಣದೆ ವ್ಯಗ್ರಮನನಾಗಿ

ತರುಣಿಯ ಬೆನ್ನೊಳಂಗಭವನಾಡಿಸಿದಂದದೊಳಾಡಿ ಗೋರಿಗೊಂ
ಡೆರಳೆವೊಲಾಗಿ ಪೋದನೊ ಭಯಂಬೆರಸೆನ್ನ ಮೊಗಕ್ಕೆ ನಾಣ್ಚಿ ಮೆ
ಯ್ಗರೆದನೊ ಕೋಪದಾಗ್ರಹದಿನೆನ್ನನಗಲ್ದನೊ ಕಾಣದೆನ್ನನೆ
ಲ್ಲಿರದಱಸುತ್ತಮಿರ್ದಪನೊ ಬಾಲತಮಾಲವನಾಂತರಾಳದೊಳ್ ೯೭

ವ॥ ಎಂದು ವಿಕಲ್ಪಿಸುತ್ತಮಿರ್ದು

[1]ಕಿಱಿದೊಂದು ಪೊೞ್ತುಗಲ್ದಿರ[1]
ಲಱಿಯದನಂ ಕ್ಷಣಮುಗಲ್ದು ನಿಲಲಾಱದೆ ಮೆಯ್
ಮಱುಗಿ ಮದೀಯ ವಯಸ್ಯನ
ನಱಸುತ್ತುಂ ಮಗುೞ್ಚಿ ಮನದೊಳಾಂ ಚಿಂತಿಸಿದೆಂ ೯೮

ಮದನಮದೋದ್ರೇಕದಿನೆ
ನ್ನಿದಿರೊಳ್ ಧೃತಿಗೆಟ್ಟು ಸಿಗ್ಗಿನಿಂ ತನ್ನೊಳ್ ಪೊ
ಲ್ಲದನೆತ್ತಾಚರಿಸುಗುಮೋ
ಒದವಿದ ಸಿಗ್ಗಿಂದಮಾರುಮೇನನೊಡರ್ಚರ್ ೯೯

ವ॥ ಎಂದಱಸಿ ನೋಡುತ್ತಮೆಂತೆಂತು ಕಾಣದಿರ್ಪೆನಂತಂತೇನುಮಂ ಮನದೊಳ್ ಭಾವಿಸುತ್ತಮಿರ್ದು

ಇರಿಪುದಯುಕ್ತಮಿನ್ನೆನಗರಣ್ಯದೊಳೊರ್ವನನೆಂದು ಶಂಕೆಯಿಂ
ತರುತಳದೊಳ್ ತಮಾಲವನದೊಳ್ ಘನಚಂದನವೀಧಿಯೊಳ್ ನಿರಂ
ತರ ಲತಿಕಾಗೃಹಂಗಳೊಳನೇಕಲತಾಭವನಂಗಳೊಳ್ ಸರೋ
ವರತಟದೊಳ್ ತೊೞಲ್ದಱಸಿ ನೋಡಿದೆನುತ್ಪಲಲೋಲಲೋಚನೆ ೧೦೦

ವ॥ ಅಂತು ನೋಡುತಿರ್ಪನ್ನೆಗಮೊಂದು ಸರಸ್ಸಮೀಪದೊಳ್ ವನನಿರಂತರತೆಯಿಂ ಕುಸುಮಮಯಮುಂ ಪರಭೃತಮಯಮುಂ ಮಯೂರಮಯಮುಮಾಗಿ ವಸಂತಜನ್ಮಭೂಮಿಯುಮಾದಂತಿರಲತಿಮನೋಹರಮಾದ ಲತಾಗಹನದೊಳುತ್ಸೃಷ್ಟಸಕಲವ್ಯಾಪಾರನುಂ ವಿಗತನಿಮೇಷನುಮೆನಿಸಿ ಬರೆದನಂತೆಯುಂ ಕಂಡರಿಸಿದನಂತೆಯುಂ ಮಱುವಟ್ಟನಂತೆಯುಂ ಯೋಗಸಮಾಧಿಸ್ಥಿತನಂತೆಯುಮುಪರತವಶನಾದಂತೆಯುಮಿರ್ದನಲ್ಲದೆಯುಂ

ಹೃದಯದೊಳಿರ್ದ ವಲ್ಲಭೆಯನೀಕ್ಷಿಸಲೆಂದೊಳಪೊಕ್ಕು ಮೆಯ್ಗೆ ಪ
ರ್ಬಿದ ಮದನಾನಲಂಗಿದು ಭೋಂಕನೆ ಮೆಯ್ಗರೆದಿರ್ದುವೆಂಬಿನಂ
ಕದಡಿದ ಚಿತ್ತಮೆಂಬ ಕಡಲೊಳ್ ಪೊಡರಲ್ಕಣಮಾಱದಿರ್ದಡಂ
ಗಿದುವು ಶರೀರದೊಳ್ ವಿರಹದಿಂದಖಿಳೇಂದ್ರಿಯಮಾ ಮುನೀಂದ್ರನಾ ೧೦೧

1 ಕಿಱಿಯಂದುತೊಟ್ಟಗಲ್ದಿರ (ಕ)

ವ॥ ಅದಲ್ಲದೆಯುಂ

ಒಳಗೊಳಗಳುರ್ವ ಮನೋಜಾ
ನಳಧೂಮಸ್ತೋಮಮೆಯ್ದೆ ಸುತ್ತಿದುದೋ ಕ
ಣ್ಗಳನೆನೆ ತಳ್ತಿಮೆದುಱುಗಲಿ
ನಿಟಿಲದುವು ಮಿಗೆ ಬಾಷ್ಪವಾರಿ ಧಾರಾಪೂರಂ ೧೦೨

ಹೃದಯದೊಳಗುಣ್ಮಿ ಪೊಣ್ಮಿದ
ಮದನಾಗ್ನಿ ಜ್ವಾಲೆಯೆನಿಸಿದಧರಾಂಶುಗಳಿಂ
ಪುದಿದ ಬಿಸುಸುಯ್ಗಳಿಂ ಕೊರ
ಗಿದುವು ಲತಾಕುಸುಮಕೇಸರಪ್ರಸರಂಗಳ್ ೧೦೩

ಒದವಿದ ಚಿಂತಾಭಾರದೆ
ಕದಪಿನೊಳಿಕ್ಕಿರ್ದ ಮುನಿಯ ಕರನಖರುಚಿಗಳ್
ಪುದಿದಡರ್ದು ಬೆಳಗಿದುವು ಪೂ
ಸಿದ ಚಂದನರಸಲಲಾಮದಂತಿರೆ ನೊಸಲೊಳ್ ೧೦೪

ತೊಳಗುವ ಪಾರಿಜಾತದಲಗೊಂಚಲಿನೊಪ್ಪುವ ಕರ್ಣಪೂರಮಂ
ಕಳೆದೊಡಮಲ್ಲಿ ಸಂಕ್ರಮಿಸಿ [1]ಪೋಗದ ಕಂ[1]ಪನುಣಲ್ಕೆ ಕರ್ಣದ
ತ್ತೆಳಸಿ ಜಿನಂಗುತಿರ್ಪ ನೆವದಿಂ ಸ್ಮರಮಂತ್ರಮನೋದುವಂತೆ ಕ
ಣ್ಗೊಳಿಪಳಿಸಂಕುಳಂ ನೆನೆಯಿಸಿತ್ತಸಿತೋತ್ಪಳಕರ್ಣಪೂರಮಂ ೧೦೫

ವಿರಹಜ್ವರದಿಂ ಪುಳಕೋ
ತ್ಕರವೊಗೆದುವು ರೋಮಕೂಪಮೆನಿತನಿಱತೊಳಂ
ಸ್ಮರನ ಸರಲ್ಗಳ್ ನಾಂಟಲ್
ಶರೀರಮಂ ಪತ್ತಿನಿಂದ[2] ಪುಂಖಂಗಳ[2]ವೋಲ್ ೧೦೬

ಪುಳಕಂಗಳ್ ದಕ್ಷಿಣಕರ
ತಳಸ್ಪರ್ಶನದಿನೊಗೆದುವೆನೆ ಕೆದಱುವ ನು
ಣ್ಬೆಳಗಿಂ ಮುಕ್ತಾವಳಿ ಕ
ಣ್ಗೊಳಿಸಿದುದಂಗಜಪತಾಕೆಯಂದದಿನುರದೊಳ್ ೧೦೭

---

1 ಪೋಗರಕಂ (ಕ) 2 ಪುಂಬಾಯ್ದು (ಕ)

ಪೊಗೆ ಪರ್ಬಲ್ ಕಾಯ್ದ ಪುಣುಂ
ಬುಗಳಂ ಕುಸುಮಾಸ್ತ್ರನಿಸುತಮಿರ್ದಪನೆನೆ ಸಂ
ಪಗೆಯ ಮುಗುಳ್ಗಳ್ ಮೇಲ
ಲ್ಲುಗುತಿರ್ದುವು ಬಳಸಿದಳಿಕುಳಂಬೆರಸಾಗಳ್ ೧೦೮

ವ॥ ಅದಲ್ಲದೆಯುಂ ಮದನವಶೀಕರಣಚೂರ್ಣದಂತೆ ಮೇಲೆ ಕೆದಱುವ ಕುಸುಮರೇಣುಗಳುಂ ಆತ್ಮರಾಗಮಂ ಸಂಕ್ರಮಿಸುವಂತೆ ಮೇಲಲೆವ ರಕ್ತಾಶೋಕ ಪಲ್ಲವಮುಂ ವನಲಕ್ಷ್ಮಿಯೊಡರ್ಚುವ ರತಾಭಿಷೇಕದಂತೆ ಸುರಿವ ಪುಷ್ಪಸ್ತಬಕಶೀಕರಂಗಳುಂ ಅತಿಬಹುಳವನಾಮೋದಮತ್ತಮಧುಕರಝಂಕಾರಂಗಳೊಳ್ ಪೊರೆದ ದಕ್ಷಿಣಾನಿಲನುಂ ವಸಂತಜಯಶಬ್ದಕೋಲಾಹಲಂಗಳಂತೆ ಕಳಕಳಿಪ ಕೋಗಿಲೆಗಳುಮತ್ಯಾಕುಲತೆಯಂ ಮಾಡೆ ಜನ್ಮಾಂತರೋಪಗತನಾದಂತೆಯುಂ ರೂಪಾಂತರಮಂ ಕೈಕೊಂಡತೆಯುಂ ಮನ್ಮಥಾವೇಗದಿಂದಱಿಯಲ್ಕೆ ಬಾರದಾಕಾರಮಂ ಭಾವಿಸಿ ನೋಡಿ

ಏನಂ ವಿಧಿ ಮಾಡಿದನೋ
ತಾನಿಲ್ಲಿಗುಪಾಯಮೆಂತು ಭೋಂಕನೆ ಬಱಿದೀ
ಜ್ಞಾನನಿಧಿ ಸೂರೆವೋದಪು
ದಾನಿನ್ನೇಗೆಯ್ವೆನೆಂದು ತಳವೆಳಗಾದೆಂ ೧೦೯

ವ॥ ಅದಲ್ಲದೆಯುಂ

ಗುಣಿಯೆನಿಸಿದ ಚಾತುರ್ಯದ
ಕಣಿಯೆನಿಸಿದ ಮುನಿಕುಮಾರಕಪ್ರತತಿಯೊಳ
ಗ್ರಣಿಯೆನಿಸಿದ ಮತ್ಸಖನಂ
ಕ್ಷಣಮಾತ್ರದಿನಿಂತಿರೆಟಿದು ಪೊಸಗುಮೆ ಮದನಂ ೧೧೦

ವ॥ ಎಂದಾತನಿರ್ಪ ಲತಾಮಂಟಪದೊಳಗಣ ಚಂದ್ರಕಾಂತಶಿಲಾತಳಕ್ಕೆ ಬಂದು

ಪೊರೆಯೊಳ್ ಕುಳ್ಳಿರ್ದೊಯ್ಯನೆ
ಕರತಳದಿಂದೆಳವಿ ತನುವನೀಗಳ್ ನೀನಿ
ರ್ಪಿರವಿನ ಪರಿಯೇನೆಂದಾಂ
ಸರೋಜಮುಖಿ ಮುಕುಳಿತಾಕ್ಷನಂ ಬೆಸಗೊಂಡೆಂ ೧೧೧

ವ॥ ಅಂತು ಬೆಸಗೊಳ್ವುದುಮಾಗಳೆಡೆವಿಡದೆ ಮುಚ್ಚಿ ಬೆಚ್ಚಂತಿರ್ದ ಕಣ್ಗಳ ನೆಂತಾನುಂ ತೆಱೆದು

ಬಸವಲ್ಲದಟ್ಟಿ ಕೆಂಪೊಡ
ರಿಸೆ ತೀವಿರೆ ಬಾಷ್ಪಸಲಿಲಮುಚ್ಛಾಂಬುಗಳಿಂ
ಮುಸುಕಿದ ರಕ್ತಾಂಭೋರುಹ
ದೆಸಳಂ ಪೋಲ್ತೆಸೆವ ಕಣ್ಗಳಿಂದೀಕ್ಷಿಸಿದಂ ೧೧೨

ವ॥ ಅಂತು ಕಿಱುದುಬೇಗಮೆನ್ನಂ ಭಾವಿಸಿ ನೋಡಿ

ನೀಂ ತಿಳಿದಿರ್ದುಂ ಮದ್ವೃ
ತ್ತಾಂತಮನೇನೆಂದು ಕೆಳೆಯ ಬೆಸಗೊಂಡಪೆಯೆಂ
ದಿಂತದನುಸಿರ್ದಂ ಲಜ್ಜೆಯಿ
ನೆಂತಾನುಂ ಶೀರ್ಯಮಾಣ ವಿರಳಾಕ್ಷರದಿಂ ೧೧೩

ವ॥ ಎಂಬುದುಮದು ನೀನೆಂದಂತೆ ನಿಶ್ಚಯಮಪ್ಪುದಾದೊಡಂ

ಇನಿತನೆ ಪುಂಡರೀಕ ಬೆಸಗೊಂಡಪೆನಿಂತಿದು ಧರ್ಮಶಾಸ್ತ್ರಸಂ
ಜನಿತರಹಸ್ಯಮೋ ಯಮಮೊ ಪೇೞ್ ಪೆಱತೇನಪವರ್ಗಮಾರ್ಗಮೋ
ಮನದೊಳಣಂ ವಿಚಾರಿಸದೆ ಸ್ವೈರಣೆಗೆಟ್ಟೞಿವೆತ್ತಪೋದುದೀ
ಮನಸಿಜನೆಂಬ ಪಾತಕನಿನಿಂತಪಹಾಸ್ಯಮನೆಯ್ದಲಕ್ಕುಮೇ ೧೧೪

ವ॥ ಅದಲ್ಲದೆಯುಂ

ಅಗರುವ ಧೂಪಧೂಮಲತೆಯೆಂದಸಿತಾಹಿಗೆ ಸಾರ್ವ ನೆಯ್ದಿಲೊ
ಳ್ಮುಮುಗುಳಿನಮಾಲೆಯೆಂದಸಿಯನಪ್ಪುವ ಮಾಣಿಕಮೆಂದು ಕೆಂಡಮಂ
ನೆಗಪುವ ಪುಣ್ಯಮೆಂದು ವಿಷವಲ್ಲಿಗೆ ನೀರೆಱೆವೆಗ್ಗನಂತೆ ಕೆಂ
ಮಗೆ ಸುಖಮೆಂದಸದ್ವಿಷಯಸೌಖ್ಯದೊಳಿಂತೆಱಗಲ್ಕೆ ತಕ್ಕುದೇ ೧೧೫

ವ॥ ಅದಲ್ಲದೆಯುಮತಿಬಹುಳರಜದೊಳ್ ಪೊರೆದ ಪೊನಲ್ಗಳಂತುನ್ಮಾರ್ಗದಿಂ ಪರಿವಿಂದ್ರಿಯಂಗಳಂ ನಿವಾರಿಸದೆಯುಂ ಕದಡಿದ ಮನಮಂ ನಿಯಾಮಿಸದೆಯುಂ ಇಂತಿ ರ್ಪುದುಚಿತಮಲ್ಲಮನಂಗನೆಂಬ ದುರಾಚಾರನಂ ನಿವರ್ತಿಸಲ್ವೇೞ್ಕುಮೆಂಬುದವಾಕ್ಷೇಪಂ ಗೆಯ್ದೆಮೆದುಱುಗಲಿನಿೞಿವ ತೋರಕಣ್ಬನಿಗಳಂ ಬಸಿಯುತ್ತಮೆನ್ನನಿಂತೆಂದಂ

ಅಪರಿಮಿತೋಕ್ತಿಯೊಳೇಂ [1]ಸ
ತ್ವಪರೀತನೆ[1] ಮದನದಾವದಹನಂ ತಳ್ತಿ
ರ್ದಪುದಿಲ್ಲ ನಿನ್ನನದಱಿಂ
ದುಪದೇಶಂಗೆಯ್ಯುತಿರ್ದಪುದಿದು ಸುಖಮಲ್ತೇ ೧೧೬

1 ಸ್ವಸ್ತಪನೀತನೆ (ಕ)

ಆವಂಗಿಂದ್ರಿಯವರ್ಗಮುಂಟು ಮನಮುಂಟಾವಂ ದಿಟಂ ಕಾಣ್ಬನಿ
ನ್ನಾವಂ ಕೇಳ್ವನದಂತೆ ಕೇಳ್ದ ನುಡಿಯಂ ಕೈಕೊಳ್ವನಂತಲ್ಲದಿ
ನ್ನಾವಂ ಪೊಲ್ಲದಿದೊಳ್ಳಿತೆಂದಱಿವನಾತಂ ಕೇಳ್ದಪಂ ನಿನ್ನ ಸ
ದ್ಭಾವಂಬೆತ್ತುಪದೇಶಮಂ ಕೆಳೆಯ ಪೇೞಿನ್ನಂದಿಗಂ ಕೇಳ್ವನೇ ೧೧೭

ಪೆಱತೇ[1]ನಾನಿರ್ಪ[1]ವಸ್ಥಾಂತರದೊಳೆನಗೆ ನಿನ್ನನ್ನರಾರ್ ಬಂಧುಗಳ್ ನೀಂ
ಪೊಱಗಾಗೀ ಮಾರ್ಗದಿಂದಂ ನಿಯಮಿಸುವವರಾರೆನ್ನನೇಗೆಯ್ವೆ[2]ನಾನಿ[2]
ನ್ನಱಿಯೆಂ ನೋಡೆನ್ನ ನಾಂ ಸಂವರಿಸಲಣಮುಮಾರ್ತಪ್ಪೆನಿಲ್ಲೀಗಳಿಂತೀ
ತೆಱನಂ ಕಂಡಿರ್ದು ನೀನೀಯೆಡೆಗಿದುಚಿತವೆಂಬಂತುಟಂ ನೀನೆ ಬಲ್ಲೈ ೧೧೮

ವ|| ಅದೆಂತೆಂದೊಡೆ ಕಲ್ಪಾಂತೋದಿತದ್ವಾದಶದಿನಕರಕಿರಣಾತಪ ತೀವ್ರಮಪ್ಪ ಮದನಸಂತಾಪಕ್ಕುಪಶಮನೋಪಾಯಮನಾಂ ಪ್ರಾಣಂಬೆರಸೆನಿತುಬೇಗಮಿರ್ಪೆನನ್ನೆವರಮಪೇಕ್ಷಿಸದಪ್ಪೆನಲ್ಲದೆಯುಂ

ಆಡುವಂತಾದಪುದೀಗಳೆನ್ನವಯವಂಗಳ್ ಕೂಡೆ ಕಣ್ಣಾಲಿಗಳ್
ಸುಡುವಂತಾದಪುದೇವೆನೆಯ್ದೆ ಹೃದಯಂ ಬೇವಂತುಟಾದಪ್ಪುದೀ
ಮೊಡಲೋರಂತುರಿವಂದವಾದಪುದಿದಂ ನೀಂ ಮಾಣಿಸಲ್ಕಾರ್ಪೆಯ
ಪ್ಪೊಡೆ ದಲ್ ಮಾಣಿಪುದೆಂಬಿದಂ ನುಡಿದು ಮಾತಂ ಮಾಣ್ದನಬ್ಜಾನನೇ ೧೧೯

ವ|| ಅಂತುಸಿರದಿರೆ ಮತ್ತಮಾನಾತನಂ ಸಂಬೋಧಿಸಲೆಂದು

ಎನಿತು ಪುರಾಣೋಕ್ತಿಗಳಿಂ
ದೆನಿತಾಗಮವಿಷಯವಚನದಿಂದೆನಿತು ನಿದ
ರ್ಶನದಿನನುನಯದೆ ಪೇೞ್ದನ
ದನಿತುಂ ಕಿವಿವೊಕ್ಕುದಿಲ್ಲ ತನ್ಮುನಿವರನಾ ೧೨೦

ವ|| ಅಂತು ಮೆಯ್ಯಱಿಯದಿರ್ದನಂ ಕಂಡು ಭಯಂಗೊಂಡುಪದೇಶಕ್ಕೆಡೆಯಿಲ್ಲದೆ ಪ್ರಾಣರಕ್ಷಣೋಪಾಯಮನಾದೊಡಂ ಮಾೞ್ಪೆನೆಂದಲ್ಲಿಂದಮೆೞ್ದಚ್ಛೋದಸರೋವರಮಂ ಪೊಕ್ಕು ಸರಸಮೃಣಾಳನಾಳಂಗಳುಮಂ ಜಲಲವಲಾಂಛಿತಂಗಳಪ್ಪ ನಳಿನೀದಳಂಗಳುಮಂ ಪರಾಗಪರಿಮಳಮನೋಹರಂಗಳಪ್ಪ ಕುಮುದಕುವಲಯಂಗಳುಮಂ ತಂದಾ ಲತಾಮಂದಿರದೊಳಗಣ ಚಂದ್ರಕಾಂತಶಿಲಾತಲಂಗಳೊಳ್ ಪಲವುಮನಲ್ಪತಲ್ಪಂಗಳುಮಂ ಮಾೞ್ಪುದುಮಾತನಲ್ಲಿಗೆ ಮೆಯ್ಯನೀಡಾಡಿ ಕೆಲದೊಳಿರ್ದ ಚಂದನಪಲ್ಲವದೆಳದಳಿರ್ಗಳಂ ಕರತಳದಿಂ ಪಿೞಿದು ನಿಸರ್ಗಪರಿಮಳಮಂ ತಳೆದ ಹೈಮದಂತೆ ಕುಳಿ

1 ನೀನಿರ್ದ (ಕ) 2 ನೇನೆ (ಕ)

ಕೊರ್ಱೆಡುವ ತದ್ರಸದಿಂ ಲಲಾಟಂಮೊದಲಾಗಿ ಚರಣತಳಂಬರಂ ಅಂಗಚರ್ಚೆಯನೆಡೆ ವಿಡದೊಡರ್ಚಿಯುಂ ಅಭ್ಯರ್ಣಪಾದಪಸ್ಫುಟಿತ ವಲ್ಕಲಂಗಳೊಳಂ ಕಟ್ಟಿದ ಕರ್ಪೂರ ರಜದ ಪೊಟ್ಟಣಂಗಳೊಳಂ ಸ್ವೇದಪ್ರತೀಕಾರಮನನವರತಂ ಮಾಡಿಯುಂ ತಿಳಿನೀರ ತುಂತುರ್ವನಿಗಳಿಂ ಪೊರೆದೆಳವಾೞೆಯ ಸುೞಿಯ ಬಿಜ್ಜಣಿಗೆಗಳಿನಡಿಗಡಿಗೆ ಬೀಸಿಯುಂ ಮತ್ತಮನೇಕ ಶಿಶಿರೋಪಚಾರಂಗಳಂ ಮಾಡಿಯುಮುವೆಲ್ಲಮುಂ ಪುಂಡರೀಕಂಗುದ್ದೀಪ ಪಿಂಡದಂತೆ ಕೇವಲಂ ಸಂತಾಪಮಂ ಮಾೞ್ಪುದುಮೆನ್ನೊಳಿಂತೆಂದೆಂ

ಜನಕಂ ಗಂಧರ್ವರಾಜಂ ತನಗೆನಿಸಿದ ವಿಖ್ಯಾತಿಯಂ ತಾಳ್ದಿ ಕಾಂತಾ
ಜನರತ್ನಂ ತಾನೆನಲ್ ಸಂದತಿಚತುರೆ ಮಹಾಶ್ವೇತೆ ತಾನೆತ್ತಮೆಂದುಂ
ವನವಾಸೈಕಾಗ್ರಚಿತ್ತಂ ಮೃಗಶಿಶುವಿನವೋಲ್ ಮುಗ್ಧನಪ್ಪೀತನೆತ್ತಂ
ಬಿನಿತಂ ತಾಂ ನೋಡದೇಂ ಮಾಡಿದನೊ ವಿರಹಸಂತಾಪಮಂ ಪುಷ್ಪಚಾಪಂ ೧೨೧

ವ॥ ಅಂತು ದುರ್ಯಶಃಪದಮುಂ ದುಷ್ಕರಮುಂ ದುಸ್ಸಾಧ್ಯಮುಂ ದುರ್ಘಟ ಮುಮೆನಿಪೆಡೆಯೊಳಿರ್ದೆಗೆಟ್ಟದೊಂದವಜ್ಞೆಯಿಂದೆಸಗಿದಪಂ ವಿಷಮಾಸ್ತ್ರನದು ಕಾರಣದಿಂ

ಆವುದು ಮಾೞ್ಪುದೋ ಶರಣಮಾವುದೊ ಪೋಪೆಡೆಯಾವುದಿಲ್ಲಿಗಿ
ನ್ನಾವುದೊ ಕೌಶಲಂ ನೆರವದಾವುದುಪಾಯಮುದಾವುದೋವೊ ತಾ
ನಾವುದೊ ಬುದ್ಧಿ ಮತ್ಸಖನ ಜೀವಮನಾಂ ಪಿಡಿವಂದಮಾವುದಿ
ನ್ನೇವೆನೆನುತ್ತಮಿಂತಿರೆ ವಿಕಲ್ಪಿಸಿದೆಂ ಪಲವುಂ ಪ್ರಕಾರಮಂ ೧೨೨

ವ॥ ಅಂತು ಚಿಂತಿಸುತ್ತಮಿರ್ದುಮೆನ್ನೊಳಿಂತೆದೆಂ

ದೆಸೆಗೆಟ್ಟೀಸಾನುಮಂ ಚಿಂತಿಸುತಿರೆ ಫಲಮೇಂ ಪೊಲ್ಲದಿನ್ನೊಳ್ಪಿತೆಂಬು
ದ್ದೆಸಮಂ ಮಾಣ್ದೀಗಳಿಲ್ಲಂದದೊಳಮೆನಗೆ ಮಾತೇಂ ಸುಹೃತ್ಪ್ರಾಣಮಂ ರ
ಕ್ಷಿಸವೇೞ್ಕುಂ ಬೇಗಮಾಂ ರಕ್ಷಿಸುವ ತೆಱನುಮೆಂತೆಂದೊಡಂ ನಿಶ್ಚಯಂ ಭಾ
ವಿಸಿ ನೋೞ್ಪಂದಾಕೆಯಂ ತರ್ಪುದನುೞಿಯೆ ಬೞಿಕ್ಕಿಲ್ಲ ಬೇಱೊಂದುಪಾಯಂ ೧೨೩

ಅಱಿಯಂ ಕೇಣದಿನೇನುಮಂ ಮುನಿಕುಮಾರಂ ಪೆಂಡರಿಂತೆಂದು ಬಾ
ಯ್ದೆಱೆಯಲ್ ನಾಣ್ಚುವನೊಂದು ಮಾತನವಳತ್ತಲ್ ಸಾರ್ದು ಮಾತಾಡಲ
ಟ್ಟಿಱುವಿತ್ತಲ್ ವಿಷಮೇಷು ಕೊಂದಪನಿದಂ ಕಂಡಿರ್ದು ಮತ್ತೀಗಳಾಂ
ಪೆಱತೇಂ ಭಾವಿಪೆನೆನ್ನ ಮಿತ್ರನಸುವಂ ಕಾಯಲ್ಕೆವೇೞ್ಕುಂ ದೃಢಂ ೧೨೪

ವ॥ ಆದಱಿಂದಿನ್ನಾಕೆಯಲ್ಲಿಗೆಂತಾದೊಡಂ ಪೋಗೀತನವಸ್ಥಾತರಮಂ ಪೇೞ ಲ್ವೇಡಿದಪ್ಪುದೆಂದು ಮತ್ತಂ

ಎನಗಂ ಕೃತ್ಯಮಿದಲ್ಲದಿರ್ದೊಡಮವಶ್ಯಂ ಪೋಪೆನೆಂತಾನುಮೆ
ನ್ನನಿವಂ ಕುತ್ಸಿತವೃತ್ತಿ ಕಷ್ಟಮಿದು ಬೇಡೆಂದೆಂಗುಮೋ ಲಬ್ಧಚೇ
ತನನೆಂದಾತನ ಪಕ್ಕದಿಂದುಸಿರದಿರ್ದಾನಾಗಳೇನಾನುಮೊಂ
ದು ನೆವಂ ಮಾಡಿ ಮಹೋತ್ಕಟತ್ವದೆ ದಿಟಂ ಬಂದೆಂ ಚಕೋರೇಕ್ಷಣೇ ೧೨೫

ಇದು ಮನ್ಮಿತ್ರನವಸ್ಥೆ ತದ್ವಿರಹಸಂತಾಪಾನುರಾಗಕ್ಕೆ ತ
ಕ್ಕುದನಾಂ ಬಂದೆಡೆಗಂ ಮೃಗಾಕ್ಷಿ ನಿನಗಂ ಪೋಲ್ವಂತುಟಂ ನೀನೆ ಬ
ಲ್ಲೆ ದಲಿಂದಿಂತಿದಕೇನನೆಂದಪಳೊ ಕೇಳ್ವೆಂ ಮಾತನೆಂದೇನುಮೆ
ನ್ನದೆ ಮದ್ವಕ್ತ್ರಮನಾ ಕಪಿಂಜಳಕನಾಗಳ್ ನೋಡುತಿರ್ದಂ ನೃಪಾ ೧೨೬

ಅದನಾಂ ಕೇಳ್ದು ಸುಖಾಮೃತಾರ್ಣವದೊಳಟ್ದಿಂತಾನುಮಂತೆಯ್ದೆ ಕೂ
ಟದೊಳಾದೊಂದನುರಾಗಮುಂ ಪಡೆದೆನೆಂಬಂತಾನುಮಂತೆಯ್ದೆ ಸ
ಮ್ಮದಸಂದೋಹಮನಾನೆ ಪೆತ್ತನಿದನೆಂಬಂತಾನುಮಂ[1]ತೆಯ್ದೆ ದೋ
ಹದ[1]ಮೆಲ್ಲಂ ನೆಱೆ ಬಂದು ಕೂಡಿತು ಗಡೆಂಬಂತಾನುಮಾದೆಂ ನೃಪಾ ೧೨೭

ವ॥ ಅಂತತೀಂದ್ರಿಯಸೌಖ್ಯಪರಮಕೋಟಿಯನೆಯ್ದಿ ನಾಣೆಱಕದಿಂದಿನಿತು ಬೇಗಂ ತಲೆಯಂ ಬಾಗಿರಲೆಮೆಯಂ ಕಪೋಲತಲಮುಮಂ ಮುಟ್ಟದೊಂದಱ ಪಿಂದೊಂದಡಸಿ ಗುಡುಗುಡನೆ ಸುರಿವಾನಂದಜಲಬಿಂದುಗಳೆನ್ನ ನಿರತಿಶಯ ಹರ್ಷಮಂ ಪ್ರಕಟಿಸುತ್ತಿರಲೆನ್ನೊಳಿಂತೆಂದೆಂ

ಎನಗೆಂತಂತಿರೆ ದೈವದಿಂ ಪ್ರಿಯನೊಳಂ ಸಂತಾಪಮಂ ಮಾಡಿ ತ
ನ್ನನುಕೂಲತ್ವವನೊಂದು ಮೆಯ್ಯ್ವೊಳೆನಗೀಗಳ್ ತೋಱಿದಂ ನೆಟ್ಟನಾ
[2]ತನೆ ಮುಂ ತಾನಿನಿ[2]ತೊಂದವಸ್ಥೆಗೊಳಗಾಗಲ್ ಕಾಮನಂ ಬಿಟ್ಟು ಮ
ತ್ತೆನಗಾರ್ ಬಂಧುಗಳಾರ್ ಸಹಾಯರುಪಕಾರಂಗೆಯ್ವರಾರಿರ್ದಪರ್ ೧೨೮

ಕನಸಿನೊಳಮೀ ಕಪಿಂಜಲ
ಮುನಿವದನದೊಳನೃತಭಾಷೆ ಪೊಱಮಡದದಱಿಂ
ದೆನಗಾವುದಿಲ್ಲಿಗುತ್ತರ
ಮೆನುತುಂ ಬಗೆವುತ್ತಮಿರ್ದೆನಿರ್ಪನ್ನೆವರಂ ೧೨೯

ವ॥ ಆಗಳೊರ್ವಳತಿಸಂಭ್ರಮಂಬೆರಸು ದೌವಾರಿಕೆ ಬಂದು ಪೊಡಮಟ್ಟು, ರಾಜಪುತ್ರಿ ನೀನಸ್ವಸ್ಥಶರೀರಿಣಿಯಾಗಿರ್ದುದಂ ಪರಿಜನದಿಂ ಕೇಳ್ದು ಮಹಾದೇವಿಯರ್ ನಿನ್ನಲ್ಲಿಗೆ ಬಿಜಯಂಗೆಯ್ದಪರೆಂಬುದಂ ಕಪಿಂಜಲಂ ಕೇಳ್ದು ನೆರವಿ ಕವಿತರ್ಪುದೆಂದಂಜಿ ಬೇಗಮೆಟ್ದು

---

1 ಮೇಣಲ್ಲದಾಹ್ರದ (ಕ) 2 ತನುಮೆಂತಾಗಿನಿ (ಕ)

ತಡದಿರಬಾರದು ನೇಸರ್
ಪಡುತಂದುದು ಪೊೞ್ತುಪೋಯ್ತು ಪೋದಪೆನೆಂತಾ
ದೊಡಮೆನ್ನ ಕೆಳೆಯನಸುವಂ
ಪಿಡಿವುದು ಸೆಱಗೊಡ್ಡಿಬೇಡಿದೆಂ ಮೃಗನಯನೇ ೧೩೦

ವ॥ ಎಂದು ನುಡಿದು ಮಱುಮಾತುಗುಡಲವಸರಮಿಲ್ಲದಿರೆ ಮದೀಯಾಂಬಿಕೆಯ ಮುಂದೆ ಪರಿತರ್ಪ ದೌವಾರಿಕೆಯರಿಂ ಸಹವಾಸಿಗಳಿಂ ಚಾಮರದಡಪದ ಕನ್ನಡಿಯ ಪರಿಚಾರಿಕೆಯರಿಂ ಕೂಡೆ ಸಂದಣಿಸಿದ ಬಾಗಿಲೊಳೆಂತಾನುಂ ನುಸುಳ್ದು ಪೋದನನ್ನೆಗಮಿತ್ತಲ್

ದೀನಾಸ್ಯೆ ಜನನಿ ಬಂದೆನಿ
ತಾನುಂ ಪೊೞ್ತಿರ್ದು ಮನೆಗೆ ಪೋದಳ್ ಗಡ ತಾ
ನೇನೆಂದಳದೇಗೆಯ್ದಳ
ದೇನಾಯ್ತೆಂದಱಿಯೆನಾಗಳಿರ್ದೆಗೆಟ್ಟವಳೆಂ ೧೩೧

ವ॥ ಅನ್ನೆಗಮಿತ್ತಲಂಭೋಜಿನೀಜೀವಿತೇಶ್ವರನಸ್ತಂಗತನಪ್ಪುದುಂ ಪಾತಾಳ ಪಂಕಕಲುಷಿತ ಮಹಾಪ್ರಳಯಜಳಧಿಗಳ್ ಮೇರೆದಪ್ಪಿ ಕವಿದು ಭುವನಂಗಳೆಲ್ಲಮನೊಳಕಯ್ಯುಲುಕ್ಕಿದುವೆಂಬಂತಿಡಿದಡರೆಗೊಂಡು ಕೞ್ತಲೆ ಕವಿಯೆ ಕಿಂಕರ್ತವ್ಯತಾಮೂಢೆಯೆನಾಗಿ ತರಳಿಕೆಯನಿಂತೆಂದೆಂ

ಮನಮುಮಖಿಳೇಂದ್ರಿಯಂಗಳು
ಮಿನಿಸಪ್ಪೊಡಮೆನ್ನವಲ್ಲಮೇಗೆಯ್ವೆನೊ ಪೇ
ೞಿನಗೀಗಳಾ ಕಪಿಂಜಲ
ಮುನಿ ನಿನ್ನಯ ಮುಂದೆ ನುಡಿದು ಪೋದುದನಱಿಯಾ ೧೩೨

ವ॥ ಎಂದು ತಾನಿತರಕನ್ಯಕೆಯಂತೆ ನಾಣ್ಗೆಟ್ಟು ಸ್ವೈರಣೆಯಂ ಬಿಟ್ಟು ವಿನಯಮನೊಕ್ಕು ಜನಾಪವಾದಮಂ ಮಿಕ್ಕು ನಿಜಾಚಾರಮಂ ಮಱೆದು ಶೀಲಮಂ ತೊಱೆದು ಕುಲಕ್ರಮಮಂ ಪಾಲಿಸದೆ ರಾಗಾಂಧೆಯನಾಗಿ

ಗುರುಜನಮೀಯದೆಯುಂ ಮು
ನ್ನೆರೆವಾತನನೆ[1]ಯ್ದಿಯ್ದೆಯು[1]ಪ್ಪೊಡೆ ದೋಷಂ
ಪರಿಭಾವಿಸಲೆನಗಿನ್ನದ
ಪರಿಹಾರ್ಯಮೆನಿಪ್ಪುದೊಂದು ಮರಣಂ ಶರಣಂ ೧೩೩

1 ಯ್ದಿನೆಯ್ದಿನ (ಕ)

ಮನಗೆ ಬರಲ್ ಕಪಿಂಜಲಮಹಾಮುನಿಗಂ ಮಱುವಾತನಿತ್ತೆನಿ
ಲ್ಲೆನಗದಱಿಂದಮಿಂ ಪ್ರಣಯಭಂಗಮದಾವುದೊ ಕೆಟ್ಟನತ್ತಲೋ
ಪನುಮಿದನಿಂತೆ ಕೇಳ್ದೊಡೆ ನಿರಾಶೆಯೊಳಕ್ಕಟ ಸಾಗುಮಂತಱಿಂ
ಮುನಿವಧದೋಷಮಾವತೆಱದಿಂ ಕಳೆಗುಂ ಕಮಲಾಯತೇಕ್ಷಣೇ ೧೩೪

ವ || ಎಂದು ನುಡಿವುತ್ತಮಿರ್ಪನ್ನೆಗಂ

ಮುಳಿದು ತಿಮಿರೇಭಕುಂಭ
ಸ್ಥಳಮಂ ಶಶಿಸಿಂಹವೊತ್ತಿ ಸೀಳಲ್ ಮುಕ್ತಾ
ವಳಿ ಮೇಗೆ ನೆಗೆದುವೆನೆ ಕ
ಣ್ಗೊಳಿಸಿದುವತಿವಿಮಲತರಳತಾರಾನೀಕಂ ೧೩೫

ಕುಸುಮರಜದಿಂದೆ ಸೊಗಯಿಪ
ವಸಂತವನರಾಜಿಯಂತೆ ಚಂದ್ರೋದಯಮಿ
ನ್ನೆಸೆದಪುದೆನೆ ನಸುವೆಳಗಿಂ
ಮಸಗಿದುದಿನಿಸಿಂದ್ರದಿಗ್ವಧೂಮುಖಬಿಂಬಂ ೧೩೬

ವ || ತದನಂತರಂ

ಇಳೆಯಂ ನೋಡಲ್ಕೆ ರಸಾ
ತಳದಿಂ ಪೊಱಮಡುವ ನಾಗರಾಜನ ಪೆಡೆಯೊಳ್
ಪೊಳೆವರುಣಕಿರಣಮಣಿಮಂ
ಡಳದಂದದಿನೆಸೆದುದಿಂದುಮಂಡಳಮಾಗಳ್ ೧೩೭

ಪು[1]ರುಡಿಂ[1] ಕಾಯ್ದೊದೆಯಲ್ಕೆ ರೋಹಿಣಿಯ ಪಾದಾಲಕ್ತಕಂ ಮೆಯ್ಯೊಳಾ
ವರಿಸಿತ್ತೋ ವಿಕಟಾಬ್ಧಿವಿದ್ರುಮಮಯೂಖಂ ತಳ್ತುದೋ ಪೂರ್ವಭೂ
ಧರಸಿಂಹಂ ಪೊಯೆ ನೊಂದುದೋ ಹರಿಣನೆಂಬಂತಾಗಳತ್ಯಂತಸುಂ
ದರಮಾಗಿರ್ದುದು ಕಣ್ಗೆ ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ ೧೩೮

ವ || ಅಂತಭಿನವೋದಯರಾಗರಂಜಿತನಪ್ಪ ರಜನಿಕರನಂ ನೋಡಲೊಡಮತ್ಯು
ಜ್ವಲಮದನಾನಲಜ್ವಾಲಾಕಲಾಪೆಯಾಗಿಯುಮಂಧಕಾರಹೃದಯೆಯೆನೆನ್ನೊಳಿಂತೆಂದಂ

---

1 ರದಿಂ (ಕ)

ಇತ್ತ ವಸಂತನಿತ್ತ ಮಲಯಾನಿಲನಿತ್ತ ಮಧುವ್ರತಾಳಿ ಮ
ತ್ತಿತ್ತ ಮದೋತ್ಕಕೋಕಿಲಕದಂಬಕವೆಯ್ದೆ ವಿಜೃಂಭಿಸಿತ್ತು ತಾ
ನಿತ್ತಲಡರ್ದು ಚಂದ್ರಹತಕಂ ತಲೆದೋಱಿದನೋವೊ ಕೆಟ್ಟೆ ನೀ
ಚಿತ್ತಜತಾಪವಗ್ಗಲಿಸಿದಪ್ಪುದು ಮದ್ಧೃದಯಾಂತರಾಳದೊಳ್ ೧೩೯

ಉದಯಿಸಲಿಂದು ಚಂದ್ರಹತಕಂ ವಿಷಮುಜ್ವರಿತಂಗೆ ಮತ್ತೆ ಕೆಂ
ಡದ ಮಱಿ ಕೊಂಡುದಗ್ಗಲಿಸಿದೈಕಿಲವಂಗೆ ಹಿಮಪ್ರಪಾತಮಾ
ದುದು ಪಿರಿದಪ್ಪ ನಂಜುಪುಗುಳುರ್ಬಿದವಂಗಸಿತಾಹಿದಂಶಮಾ
ದುದು ದಿಟವೆಂದು ತಲ್ಲಣದಿನಾಗಳೆ ಭೋಂಕನೆ ಮೂರ್ಛೆವೋಪುದುಂ ೧೪೦

ವ॥ ಆಗಳತಿಸಂಭ್ರಮಂಬೆರಸು ತರಳಿಕೆ ತಂದ ಚಂದನದ ಚರ್ಚೆಗಳಿಂ ಮತ್ತ ಮನೇಕಶಿಶಿರೋಪಚಾರಂಗಳಿಂದುಪಚರಿಸಲದಱೆಂತಾನುಂ ಮೂರ್ಛೆಯಿಂದೆಚ್ಚತ್ತು

ಅಱಲಗ್ಗಳಿಸಲ್ ಕಣ್ಣೀರ್
ಗಱಗಱಿಸಿ ಕಪೋಲಯುಗಳದಿಂ ಪೆರ್ಮೊಲೆಗಾ
ಗಿಱಿತರ್ಪಿನಮೆನ್ನಂ ಪಿಡಿ
ದಱುತಿರ್ದಳನಿನಿಸು ನೋಡಿದೆಂ ತರಳಿಕೆಯಂ ೧೪೧

ವ॥ ಅಂತು ನೋೞ್ಪುದುಂ ಚಂದನಪಂಕಾರ್ದ್ರಂಗಳಪ್ಪ ಕರಕಮಲಂಗಳಂ ಮುಗಿದು

ಇನಿತಂ ಪ್ರಾರ್ಥಿಪೆನಕ್ಕ ನಿನ್ನನುಱಿ ನೀಂ ಲಜ್ಜಾಭರಾವೇಶಮಂ
ನಿನಗೀ ತಂದೆಯ ತಾಯೊಳಪ್ಪ ಭಯಮೇಕೇೞ್ ಪೋಪಮಾನಾಱಿನಿ
ನ್ನೆನಿತಂ ನೋಡುತಮಿರ್ಪೆ ನೀನಕರುಣಂ ಮೇಣ್ ಪೋಗು ನೀನೆಂದು ಪೇೞ್
ಮನದಿಂ ಮುನ್ನಮೆ ಪೋಗಿ ನಿನ್ನಿನಿಯನಂ ತಂದಪ್ಪೆನಬ್ಜಾನನೇ ೧೪೨

ವ॥ ಎಂದು ತರಳಿಕೆ ನುಡಿಯೆ

ಇದನೇನೆಂದಪ್ಪೆ ನಾಣೇಂ ಗುರುಗಳುಮೆನಗಿನ್ನೇಕೆ ಪೇೞ್ ಮೃತ್ಯು[1]ವೋಲ್ ಮೂ
ಡಿದನಲ್ತೇ ಚಂದ್ರನುಂ ತಾ[1]ನಿರದೆ ಕರುಣದಿಂದೊಯ್ವೊಡೇೞ್ ಪೋಪಮೀ ದೇ
ಹದೊಳಿಂದೀ ಪ್ರಾಣಮುಳ್ಳನ್ನೆಗಮೆ ತಡೆಯದಾತ್ಮೇಶನಂ ಕಾಣ್ಬೆನೋ ಪು
ಣ್ಯದಿನೆಂದಾಂ ಚೇಷ್ಟೆಗೆಟ್ಟಂದವಳನೆ ಪಿಡಿದಲ್ಲಿಂದಮೆಂತಾನುಮೆೞ್ದಿಂ ೧೪೩

ವ॥ ಅಂತೇೞಲೊಡನೆ

---

1 ಗಳ್ಳೂಡಿದನಲ್ತೆಂಚಂದ್ರನೆತ್ತಾ (ಕ)

ಬಿದಿ ಮತ್ತೇನನಿದಂ ತೋ
ಱುದಪನೊ ಪಾತಕಿಗೆನುತ್ತೆ ಭಯಮಂ ಚಿತ್ತ
ಕ್ಕೊದವಿಸಿ ಬಲಗಣ್ ಕೆತ್ತಲ್
ಮೊದಲಿಕ್ಕಿತು ದುರ್ನಿಮಿತ್ತಸೂಚಕಮಾಗಳ್ ೧೪೪

ಅದನೇವೇೞ್ವೆನನಂತರಂ ತ್ರಿಭುವನಪ್ರಾಸಾದರಮ್ಯಪ್ರಣಾ
ಳದವೋಲ್ ಕಣ್ಗೆಸೆವಿಂದುಮಂಡಲದಿನೇಂ ಗಂಗಾಪ್ರವಾಹಂಗಳು
ಣ್ಮಿದುವೋ ಚಂದನವಾರಿಪೂರಮಿೞಿದತ್ತೋ ಕ್ಷೀರವಾರಾಶಿ ಪೊ
ಣ್ಮಿದುದೋ ಪೇೞ್ವೆನೆ ಲೋಕದೊಳ್ ಕವಿದು ಪರ್ವಿತ್ತಂದು ಚಂದ್ರಾತಪಂ ೧೪೫

ವ॥ ಅಂತು ಪರ್ವಿದ ಬೆಳ್ದಿಂಗಳೊಳಖಿಳಜನಮೆಲ್ಲಂ ಶ್ವೇತದ್ವೀಪದೊಳಿರ್ದಂತಿರಲಾ ರಾತ್ರಿಯೊಳ್ ಮದನವಿಹ್ವಲತೆಯಿಂ ಮೂರ್ಛೆವೋದೆನ್ನನೆಚ್ಚಱಿಸಲೆಂದು ನೊಸಲೊಳಿಕ್ಕಿದಮಂದವಪ್ಪ ಚಂದನದಣ್ಪಿನಿಂ ಪತ್ತಿ ಪಗಿಲ್ತು ಬೆಳ್ಕರಿಸಿದಳಕನಿಕರಮುಂ ಮುನ್ನಮೆ ಕೊರಳೊಳಿಕ್ಕಿರ್ದಕ್ಷಾವಳಿಯುಂ ಕಿವಿಯೊಳಿಕ್ಕಿರ್ದ ಪಾರಿಜಾತಕುಸುಮಮಂಜರಿಯುಂ ಪದ್ಮರಾಗಮಣಿಕಿರಣದಂತಿರ್ದ ರಕ್ತಾಂಶುಕಮುಮೆನ್ನೊಳಳವಡೆ ಗೃಹೀತವಿವಿಧಕುಸುಮತಾಂಬೂಲರಾಶಿಯುಮಪ್ಪ ತರಳಿಕೆವೆರಸು ಮದೀಯ ಪರಿಚಿತಪರಿಜನಮುಮಱಿಯದಂತು ಕರುಮಾಡದಿಂದವನಿತಳಕ್ಕವತರಿಸಿ

ಶ್ರವಣನತಪಾರಿಜಾತ
ಸ್ತವಕೋದ್ಗತಪರಿಮಳಕ್ಕೆ ನಂದನ ಭೃಂಗೀ
ನಿವಹಂ ಕವಿದೆನ್ನ ಮುಸುಂ
ಕುವಿನಂ ಪೊಱಮಟ್ಟೆನಾಗಳತಿ ಸಂಭ್ರಮದಿಂ ೧೪೬

ವ॥ ಅಂತು ತರಳಿಕೆವೆರಸು ಪ್ರಮದವನಪಕ್ಷದ್ವಾರದಿಂ ಪೊಱಮಟ್ಟು ಪೋಗುತ್ತುಂ ಪರಿಜನವಿರಹಿತೆಯೆನೆನ್ನೊಳಿಂತೆಂದೆಂ

ಸರಭಸವಾಗಳೇಱಿಸಿದ ಬಿಲ್ವೆರಸಂಗಜನೆನ್ನ ಪಕ್ಕದೊಳ್
ಬರುತಿರೆ ಲಜ್ಜೆ ಪಿಂದೆ ನಿಲೆ ಮುಂದೆ ಮದಿಂದ್ರಿಯವರ್ಗಮಾವಗಂ
ಪರಿಯೆ ನಿಶಾಕರಂ ನಿಜಕರೋತ್ಕರದಿಂ ಪಿಡಿದೊಯ್ಯೆ ಬೇಱೆ ಪೇೞ್
ಪರಿಜನಮೇವುದಿಂ ಮಱಸಿ ಪೋಪೆನಗಿಂತುೞಿದಲ್ ಪರಿಗ್ರಹಂ ೧೪೭

ವ॥ ಎಂದೆನ್ನೊಳ್ ಚಿಂತಿಸುತ್ತುಂ ತರಳಿಕೆಯನಿಂತೆಂದೆಂ

ಎಂತೀಗಳೆನ್ನನೊಯ್ದಪ
ನಂತೋವದೆ ಕರಕಚಗ್ರಹಂಗೆಯ್ದು ನಿಶಾ
ಕಾಂತಂ ತಡೆಯದೆ ನಮಗಿದಿ
ರೇಂ ತರ್ಕುಮೆ ಜೀವಿತೇಶನಂ ತರಳಾಕ್ಷೀ ೧೪೮

ವ॥ ಎಂಬುದುಂ ತರಳಿಕೆ ಮುಗುಳ್ನಗೆ ನಗುತ್ತಮೆನ್ನನಿಂತೆಂದಳ್

ಎಲೆ ಮುಗ್ಧೆ ಚಂದ್ರನುಂ ಕಾ
ದಲನಂ ತಂದಪನೆ ತಾನೆ ಮುನ್ನಿನ್ನಂ ಕಾ
ಣಲೊಡಂ ಮನ್ಮಥಶರವಿ
ಹ್ವಲಿತನವೋಲ್ ನೋಡ ನೆಗೞುತಿರ್ದಪನಲ್ತೇ ೧೪೯

ವ॥ ಅದೆಂತೆಂದೊಡೆ

ಪ್ರತಿಬಿಂಬವ್ಯಾಜದಿಂ ನಿನ್ನಯ ಕದಪುಗಳಂ ಚುಂಬಿಸುತ್ತಂ ಕಲಾಪಾಂ
ಚಿತರತ್ನಾನೀಕಮಂ ಸೋಂಕುತಮೆಸೆವ ಕುಚಾಭೋಗದೊಳ್ ನಿಂದು ಮೇಲ್ವಾ
ಯುತ ಮುದ್ಯತ್ಕಾಂತಿ ಚಂಚನ್ನಖಗತತನುವೆಂತುಂ ಬಿಡಂಪತ್ತಿ ಕಾಲಂ
ಸತಿ ಬೀೞ್ದಿರ್ದಪ್ಪನಿಂತೀತನ ತೆಱನನಿದಂ ಕಾಣೆ ನೀನುತ್ಪಲಾಕ್ಷೀ ೧೫೦

ವ॥ ಅದಲ್ಲದೆಯುಂ ವಿರಹವಿಹ್ವಲತೆಯಿಂ ಚಂದನಾನುಲಿಪ್ತನಾದಂತೆ ಬೆಳರ್ಪಿನಾವರಿಸಿಯುಂ ಮಾತೆರ್ೞಳಪ ನೆವದಿಂ ಪಳುಕಿನ ಪಾಸರೆಗಳೊಳ್ ಮೆಯ್ಯನೀಡಾಡಿಯುಂ ನೆಯ್ದಿಲ್ಗೊಳಂಗಳೊಳೋಲಾಡಿಯುಮೊಸರ್ವ ಚಂದ್ರಕಾಂತಶಿಲಾತಳಂಗಳೊಳ್ ಕರಂಗಳನೆಳವಿಯುಂ ವಿಘಟಿತಚಕ್ರವಾಕಂಗಳಪ್ಪ ಕಮಲವನಂಗಳೊಳ್ ಪಾಯ್ದುಮಿಂತು ಪಲತೆಱದೆ ಕೋಟಲೆಗೊಳುತಿರ್ದಪನಿಂತಿವು ಮೊದಲಾಗಿ ತತ್ಕಾಲೋಚಿತವಚನಂಗಳಂ ನುಡಿಯುತ್ತಮಿರಲಾಕೆವೆರಸಾ ಪ್ರದೇಶಮನೆಯ್ದಿವರ್ಪಾಗಳ್

ಮೊದಲೊಳೆ ಕೆತ್ತಿದತ್ತು ಬಲಗಣ್ಣೆನಗೇನನೊಡರ್ಚಲಿರ್ದುದೋ
ಬಿದಿಯೆನುತುಂ ಭಯಂಬೆರಸು ಮುನ್ನಮೆ ಶಂಕಿಸುತಿರ್ದೆನೊವೋ ಮ
ತ್ತಿದು ಪೆಱತೇನೆನುತ್ತಮಿರ್ದೆ ಪವ್ವನೆಪಾಱಲದೊಂದು ಕೇಳಲಾ
ದುದು ಪುರುಷಪ್ರಲಾಪರುದಿತಸ್ವನಮಾ ಗಹನಾಂತರಾಳದೊಳ್ ೧೫೧

ವ॥ ಅದೆಂತೆಂದೊಡೆ

ಉರಿದೆಂ ಬೆಂದೆನಿದೇನನಿಂತು ನೆಗಟ್ದೈ ನಿಸ್ತ್ರಿಂಶ ಪುಷ್ಪಾಸ್ತ್ರ ನಿ
ಷ್ಠುರ ಪೇಟ್ ಪೊಲ್ಲದನೇನನಾಚರಿಸಿದಳ್ ನಿನ್ನೊಳ್ ಮಹಾಶ್ವೇತೆ ಭೀ
ಕರ ದೋಷಾಕರ ಕೂಡಿತೇ ಬಗೆದುದುಂ ಚಂಡಾಳ ತಂಗಾಳಿ ಪೇಟ್
ಪಿರಿದೊಂದುತ್ಸವಮಾಯ್ತೆ ಕೇಡನಱಿದೈ ಹಾ ಶ್ವೇತಕೇತುಪ್ರತೀ ೧೫೨

ಶರಣಾರೊ ತಪಮೆ ಭುವನಾಂ
ತರದೊಳ್ ಕೈಕೊಳ್ವರಾರೊ ಧರ್ಮಮೆ ನಿನ್ನಂ
ಸುರಲೋಕಮೆ ಪಾಟಿದ್ದೈ
ಸರಸ್ವತೀದೇವಿ ರಂಡೆಯಾದೌ ಸತ್ಯಂ ೧೫೩

ಪರಿಚಯಮಿಲ್ಲ ಕಂಡಱಿಯೆಯೋ ಸಖ ತೊಟ್ಟೆನಲಿಂತು ಬಿಟ್ಟುಪೋ
ಪರೆ ಕರಿನಾತ್ಮನಾದೆ ನೆರೆವಾರೆನಗಿರ್ದಪರೆತ್ತವೋಪೆನೊ
ರ್ಬರುಮೆನಗಾಸೆಯಿಲ್ಲ ದೆಸೆ ಪಾಟ್ಸಗಿರ್ದಪುದಂಥನಾದೆನಾರ್
ಶರಣೆನಗೆನ್ನ ಬಾಟ್ಕೆಯೆ ನಿರರ್ಥಕಮೆಂದೆನುತಂ ಪಲುಂಬುತಂ ೧೫೪

ಉಸಿರದೆ ನೀನಿರಲ್ ನುಡಿವೆನಾರೊಡನಾಟಮನಾಡುತಿರ್ಪೆ ನೀ
ಪುಸಿಮುಳಿಸೇಕೆ ಪೇಟ್ ಕೆಳೆಯ ನಿನ್ನಯ ಕೂರ್ಮೆಯದತ್ತವೋಯ್ತು ನೋ
ಯಿಸದಿನಿಸೆಟ್ದು ನೋಡಿ ನುಡಿಯೆಂದೆನಿತುಂ ತೆಱದಿಂ ಕಪಿಂಜಲಂ
ದೆಸೆದೆಸೆಗಂದು ಬಾಯ್ವಿಡುತಮಿರ್ದುದನಾಲಿಸಿದೆಂ ಮಹೀಪತೀ ೧೫೫

ಅದನಾಂ ಕೇಳ್ದೆರ್ದೆಗೆಟ್ಟು ಮೆಯ್ಮಱಗಿ ಸತ್ತಂತಾಗಿ ಕಣ್ಣೀರ ಪೂ
ರದಗುರ್ವಿಂ ದೆಸೆಗಾಣದಂದೆಡಪುತಂ ತಾಗುತ್ತಮೋರಂತೆ ಮೇ
ಲುದಱೊಳ್ ಗುಲ್ಮಲತಾಳಿಗಳ್ ತೊಡರಲೊರ್ವಂ ನೂಂಕಿ ಕೊಂಡೊಯ್ವಮಾ
ರ್ಗದೆ ಪೋದೆಂ ಬಟಿಕಾತನಿರ್ದೆಡೆಗೆ ಹಾಹಾಕ್ರಂದನಂಗೆಯ್ವುತಂ ೧೫೬

ವ॥ ಅಂತು ಯಥಾಶಕ್ತಿತ್ವರಿತಗತಿಯಿಂ ಪೋದೆನನ್ನೆಗಂ

ಕೊಳದ ತಡಿಯಲ್ಲಿ ಸೀರ್ಪನಿ
ಗಳ ತುಱುಗಲನುಗುಳ್ವ ಚಂದ್ರಕಾಂತದ ಶಿಲೆಯೊಳ್
ಪೊಳೆವೆಳೆದಳಿರ್ಗಳಬಳಗದ
ಕುಳಿರ್ವಲರ್ದಲರೆಸಳ ಪಸೆಯಮೇಲೊಱಗಿರ್ದಂ ೧೫೭

ಪೊಳಿವಿಂದುಗಳ್ಕೆ ಬೆಂಗುಡೆ
ವೊಳಿದುವು ಬೆನ್ನಿಂದಮೆರ್ದೆಗೆ ಕದಿರ್ದುಱುಗಲೆನಲ್
ತೊಳಗಿದುವು ಮದನಶಿಖಿವಿ
ಹ್ವಳಹೃದಯನ್ಯಸ್ತನಖದೀತಿಗಳ್ ೧೫೮

ಪದೆದಾಂ ಬರುತ್ತಮಿರೆ ಮ
ತ್ಪದಶಬ್ದಮನಾಲಿಸುತ್ತಮಿರ್ದನೊ ತನ್ನೊಳ್
ಮದನಪರಿತಾಪಮಂ ಕೋ
ಪದೆ ಮಱೆಸಿ ಕಿಱಿದು ಸುಖದೆ ಮಱೆದೊಱಗಿದನೋ ೧೫೯

ಎನ್ನಿಂ ಪ್ರಿಯತರಮುಪರಜ
ನಂ ನಿನಗಾದತ್ತು ಮತ್ತಮಿರ್ಪೆನೆ ಪೇೞಾ
ನಿನ್ನೆಂದು ಮುನಿದ ತೆಱದಿಂ
ಮುನ್ನಮೆ ಪೋದತ್ತು ಪುಂಡರೀಕನ ಜೀವಂ ೧೬೦

ತನಗೆ ಮದನವ್ಯಥಾಯಾ
ಸನಬಂಧನವಸುಗಳಿಂದಿವಂ ತನ್ನಿಂ ತಾಂ
ತನುವಿಂದೆ ಬಿಟ್ಟು ನಿಶ್ಚೇ
ತನಸೌಖ್ಯಮನನುಭವಿಪ್ಪ ತೆಱದಿಂದಿರ್ದಂ ೧೬೧

ವ॥ ಅದಲ್ಲದೆಯುಂ

ಕಾಣುತ್ತೆ ಮದಾಗಮನ
ಪ್ರೀಣಿತಪ್ರಾಣಮನೆ ಮುಚ್ಚುಗೊಟ್ಟವೊಲಿರ್ದಂ
ಜಾಣಂ ಪ್ರಾಣಪ್ರಿಯಗಾ
ಪ್ರಾಣಮನೊಲಿದೀವುದೆಂಬುದೊಂದಚ್ಚರಿಯೇ ೧೬೨

ವ॥ ಮತ್ತಮನಂಗರಚಿತಚಂದನಲಲಾಟಿಕಾತ್ರಿಪುಂಡ್ರನುಂ ಸರಸಬಿಸಸೂತ್ರ ಯಜ್ಞೋಪವೀತನುಂ ಅಂಸಾವಸಕ್ತಬಾಲಕದಳೀದಳೋತ್ತರಿಯನುಂ ಏಕಾವಳೀವಿಶಾಲಾಕ್ಷಮಾಲನುಂ ಅವಿರಳಕರ್ಪೂರಪರಾಗಭಸ್ಮಪಾಂಡುರನುಂ ಅಬದ್ಧಮೃಣಾಳರಕ್ಷಾಪ್ರತಿಸರನುಮಾಗಿ ಮನೋಭವವ್ರತವೇಷಮಂ ಕೈಕೊಂಡು ಮತ್ಸಮಾಗಮಮಂತ್ರಮಂ ಸಾಧಿಸುತಿರ್ದನಂತುಮಲ್ಲದೆಯುಂ

ಸುರಿದುವು ಬಾಷ್ಪಮೆಯ್ದೆ ಪೆಱಗಿಂ ಸುರಿದಪ್ಪುದು ನೇತ್ರರಂಬಿನಿಂ
ಪರೆದಿರೆ ಕೆಂಪು ಕಂತುಶರಭೇದದ ವೇದನೆಗಳ್ಕಿದಂತೆ ಕ
ಣ್ಣರೆ ಮುಗುಳಿರ್ದುವಾಂ ಬಱಸಲಲ್ ನಡೆನೋಡಲಿಕಾರ್ತೆನಿಲ್ಲ ನಿ
ಷ್ಠುರೆ ತೊಲಗೆಂದಲಂಪನೊಳಕೊಂಡಱಲಿಂ ಮುಳಿದೀಕ್ಷಿಸಂದದಿಂ ೧೬೩

ನಸುದೆಱೆದಿರೆ ಬಾಯ್ದೆಱೆ ಬಂ
ದಸುವಂ ಕೊಳಲೆಂದು ಪೊಕ್ಕ ರಜನಿಕರಾಂಶು
ಪ್ರಸರಂ ಪೊಱಮಟ್ಟಪ್ಪುದೆನೆ
ದೆಸೆಯಂ ಧವಳಿಸಿದುವೆಸೆವ ದಂತದ್ಯುತಿಗಳ್ ೧೬೪

ಬಳಸಿ ನಿಜಕಿರಿಣಪಾಶದೆ
ಮುೞುಗಿಸಿ ಲೋಕಾಂತರಕ್ಕೆ ಚಂದ್ರಂ ಪಿಡಿದೇ
ನೆೞೆದಪನೊ ಪೇೞಿಮೆನೆ ಕ
ಣ್ಗೊಳಿಸಿದುದು ಮೃಣಾಳನಾಳವಲಯಂ ಕೊರಲೊಳ್ ೧೬೫

ಪ್ರಾಣಸಮೆ ಹೃದಯದಿಂ ಮ
ತ್ಪ್ರಾಣದೊಳೊಡಗೂಡಿ ಪೋಗಲಾಗೆಂದೆನ್ನಂ
ಮಾಣಿಪವೋಲ್ ಕಯ್ ಸುಮನೋ
ಬಾಣಾಗ್ನಿಸ್ಫುರಿತಹೃದಯದೊಳ್ ಸೊಗಯಿಸುಗುಂ ೧೬೬

ಒಸರ್ದಪುದಿದಲ್ತೆ ಚಂದನ
ರಸಮೆನೆ ಮಿಂಚುಗುರ ಮಿಸುಪ ನುಣ್ಬೆಳಗೆನಸುಂ
ಪಸರಿಸೆ ಮರಲ್ದ ಕರಮೊಂ
ದೆಸೆದುದು ಚಂದ್ರಾತಪಕ್ಕೆ ಮಱೆಯೊಡ್ಡಿದವೋಲ್ ೧೬೭

ಅಸು ಪೋದುದೀಗಳೆಂತೆ
ನ್ನ ಸಹಾಯನನುೞಿದೆನುತ್ತೆ ತನ್ಮಾರ್ಗಮನೀ
ಕ್ಷಿಸುವಂತೆ ನಿಮಿರ್ದ ಕೊರಲಿಂ
ದೆಸೆದುದು ಶಶಿಕಾಂತಮಣಿಕಮಂಡಲು ಕೆಲದೊಳ್ ೧೬೮

ಘೞಿಲನೆ ಬರ್ಪೆನ್ನಂ ಕಂ
ಡೞಲಿರ್ಮಡಿಯಾಗೆ ಪತ್ತಿ ಕೆಳೆಯನ ಕೊರಲಂ
ಪೞವಿಸಿ ಕಪಿಂಜಳಂ ಬಾ
ಯೞಿದಬ್ರಹ್ಮಣ್ಯಮೆಂದು ಬಿಡೆ ಪುಯ್ಯಲ್ಚಲ್ ೧೬೯

ವ॥ ಆಗಳ್ ತತ್‌ಕ್ಷಣವಿಗತಜೀವಿತನಾಗಿರ್ದ ನಿಷ್ಪಾಪನೆನಿಪ ಮಹಾನುಭಾವನಂ ಮಹಾಹತಕಿಯೆನಿಪ ಮಂದಭಾಗ್ಯೆಯೆಂ ಭೋಂಕೆನೆ ಕಂಡು ಮೂರ್ಛೆವೋಗಿ ಬಿಟ್ಟು ಪಾತಾಳತಲವಿವರಮಂ ಪೊಕ್ಕಂತೆ ಮಹಾಂಧಕಾರಂ ಕವಿಯೆ

ಏನಾದೆನೆಲ್ಲಿ ಬೀೞ್ದಿನ
ದೇನಂ ಬಾಯೞಿದು ಪೞವಿಸುತ್ತಿರ್ದೆನೊ ಪೇ
ೞೀನನೊಡರ್ಚಿದೆನೆತ್ತಣಿ
ನಾನಾರ್ಗೆಂದೇನುಮಱಿಯೆನಂತಾ ಕ್ಷಣಮೊಳ್ ೧೭೦

ಪಲವು ಭವಂಗಳೊಳ್ ನೆರಪಿದೆನ್ನಯ ಪಾಪವೊ ಮೇರೆಗೆಟ್ಟ ಕೋ
ಟಲೆಗಳನುಣ್ಬೆನೆಂಬೞಲ ಸ್ವೈರಿಣಿಯೋ ಕಡುಪಿಂ ತಗುಳ್ದು ನ
ಟ್ಟಲೆವಸಮಾಸ್ತ್ರವಕ್ರತೆಯೊ ದೈವಿಕವೋ ನಿನಗೇನನೆಂಬೆನ
ಗ್ಗಲಿಸಿಯೆ ನಿಂದುದೆಂತುಮಸು ಪೋಗದೆ ಕಲ್ಲೆರ್ದೆಯೆಂ ಮಹೀಪತೀ ೧೭೧

ಇನಿಸಂ ಮೂರ್ಛೆಯಿನೆೞ್ಚೆ
ತ್ತನಂತರಂ ದೀರ್ಘಶೋಕವುಂ ಬಿಡೆಸುಡೆ ಕಿ
ಚ್ಚಿನ ಕಿಡಿಯಂದದೆ ನೆಲದೊಳ
ಗಿನಿಸುಂ ಮಿಡುಮಿಡನೆ ಮಿಡುಕುವೆನ್ನಂ ಕಂಡೆಂ ೧೭೨

ವ॥ ಅಂತೆನ್ನ ಸಾವಿಲ್ಲದುದಮಾತನಸಾವುಮದವೞಲನೊದವಿಸೆ ಬಾಯೞಿದು ಮೆಯ್ಯಱಿಯದವಳಿಂ

ಪರಿಹರಿಸಿ ಪೋಗಲಕ್ಕುಮೆ
ಕರುಣಿಸದೊರ್ವಳನನಾಥೆಯಂ ಭಕ್ತೆಯನಾ
ತುರೆಯಂ ದುಃಖಿತೆಯಂ ಸ್ಮರ
ಪರಿಭೂತೆಯನನ್ಯಗತಿಕೆಯಂ ಬಾಲಕಿಯಂ ೧೭೩

ತರಳಿಕೆ ಸಕ್ಕಿಯಲ್ತೆ ಬೆಸಗೊಳ್ ಯುಗಕೋಟಿವೊಲಾದುದಾಗಳಾ
ವಿರಹದೆ ಬೆಂದಿವಳ್ಗೆ ಪಗಲೆಂಬುದನೀ ಮುಳಿಸೇಕೆ ನಿನ್ನ ತೊ
ಳ್ತಿರೊಳಿನಿತೇಕೆ ಭಕ್ತಜನವತ್ಸಲ ನಿರ್ದಯನಾದೆ ನಾಥ ನೀಂ
ಕರುಣದಿನೊರ್ಮೆ ಕಣ್ದೆಱೆದು ತೀರ್ಚು ಮದೀಯ ಮನೋರಥಂಗಳಂ ೧೭೪

ಕರುಣಿಸು ದೈವಮೆ ಪಾಲಿಸು
ಹರಾದ್ರಿ ರಕ್ಷಿಸೆಲೆ ರಾತ್ರಿ ಶರಣಾಗು ಸರೋ
ವರಮೆ ವನದೇವಿಯರಿರಾ
ನೆರೆದೆಲ್ಲರುಮೆನಗೆ ಪುರುಷಭಿಕ್ಷಮನಿಕ್ಕಿಂ ೧೭೫

ಆವ ತೆಱದಿಂದಮಾರುಂ
ಕಾವರುಮಂ ಕಂಡೆನಿಲ್ಲ ನಾಂ ಬರ್ಪಿನಮೆ
ಕ್ಕಾವಳಿ ನೀನುಂ ವಲ್ಲಭ
ಜೀವಮನೇನಿನಿಸು ಪಿಡಿಯಲಾರ್ತೆಯುಮಿಲ್ಲಂ ೧೭೬

ವ॥ ಎಂದು ನಾಣದೆ ಮತ್ತಮೀತನನೆತ್ತಮೇೞ್ಕುಮೆಂದು ಕಪಿಂಜಲಮಹಾಮುನಿಯಡಿಯೊಳಡಿಗಡಿಗೆ ಪೊರಳ್ದುಮದವಟಲೊದವೆ ತರಳಿಕೆಯನಪ್ಪಿ ಪಲತೆಱದೆ ಪಲವಿಸಿ ಪಲುಂಬಿ ಪಂಬಲಿಸಿಯುಂ ಆ ಮನೋಹರನ ಮಂದ್ಯೆಸಿ ನಿಂದ ಚಂದನದಣ್ಬಿನಿಂ ಪಗಿಲ್ತು ಪತ್ತಿ ಬೆಳ್ಕರಿಸಿ ರಂಜಿಸುವ ಕೆಂಜಡೆಯ ಮೊದಲಿಂ ಬೆಡಂಗುವಡೆದು ಮಿಱುಪ ಪೆಱೆನೊಸಲೊಳಂ ಕವಿವ ಜಡೆಯತೊಂಗಲಿಂ ಸಂಗಳಿಸಿ ಬೆಡಂಗನೊಳಕೊಂಡ ಗಂಡಮಂಡಲಂಗಳೊಳಂ ಕೋಮಲಮೃಣಾಳೋತ್ತಂಸಿತಂಗಳಪ್ಪಂಸದೇಶಂಗಳೊಳಂ ಮಲಯಜರಸಲುಳಿತ ನಳಿನೀ[1]ದಳಾವಕುಂಠಿತ[1]ಮಾದ ಮೆಲ್ಲೆರ್ದೆಯೊಳನೋರೊರ್ಮೆ ಕಳವಳಿಸಿ ಕರತಳದಿನೆಳವಿಯುಂ ಪುಂಡರೀಕನ ಪಕ್ಕದಿಂ ತೆರಳದೆಯುಂ ನಿಷ್ಕರುಣಿಯಾದೆಯೆಂದೋರೋರ್ಮೆ ಸಂಭ್ರಮದಿನುಪಾಲಂಭನಂ ಮಾಡಿಯುಂ ಕೊರಲಂ ತಟ್ಟೈಕಿಸಿಯುಂ ಬಿಡದಳವಿಲ್ಲದೆಡೆಯುಡುಗದಟ್ಟುಮೆಂದುಮನುಪದಿಷ್ಟಂಗಳುಮದೃಷ್ಟಪೂರ್ವಂಗಳುಮತಿಕೃಪಣಂಗಳುಮಪ್ಪ ಚಾಟುಸಹಸ್ರಂಗಳೊದವೆ ಕಣ್ಣೀರಪೂರದಿಂ ತೇಂಕಾಡುತ್ತಮಶ್ರುಪ್ರವಾಹಜನ್ಮಭೂಮಿಯುಂ ಪ್ರಲಾಪಶಿಖರಸಹಸ್ರಸಂಭೂತೆಯುಂ ದುಸ್ಸಹದುಃಖಪ್ರಸೂತೆಯುಮಾದೆನೆಂದಾತ್ಮೀಯ ವೃತ್ತಾಂತಮನಾತಂಗೆ ನಿವೇದಿಸುತ್ತಮಿರ್ಪುದುಂ

ಪಿಂತಾದ ದುಸ್ಸಹಾವ
ಸ್ಥಾಂತರ ಸಂತತಿಯನಾಗಳನುಭವಿಸುತಮಿ
ರ್ಪಂತಿರ್ದಳ ಚೈತನ್ಯಮ
ನಂತಾಗಳೆ ಹರಿಯಿಸಿತ್ತು ಮೂರ್ಛಾವೇಗಂ ೧೭೭

ವ॥ ಅಂತು ಮೂರ್ಛೆವೋಗಿ ಬೀೞ್ವುದುಂ

ಒದವಿದ ತಲ್ಲಣಂಬೆರಸು ಚೆಚ್ಚರದಿಂ ಪಿಡಿದೆತ್ತಿ ಶಂಕೆಯಿಂ
ಸುದತಿಯ ಪಾಂಗಿದೇನೆನುತಮಾಕೆಯ ಕಣ್ಮಲರಿಂದಮುಣ್ಮಿ ಮಾ
ಣದೆ ಸುರಿಯುತ್ತಮಿರ್ಪ ಜಲಧಾರೆಗಳಿಂದಮೆ ನಾಂದದೊಂದು ಮೇ
ಲುದಟಿ ಸೆಱಂಗಿನಿಂ ನಯದೆ ಬೀಸಿದನಾ ಮನುಜೇಂದ್ರಚಂದ್ರಮಂ ೧೭೮

ವ॥ ಅಂತು ಬೀಸಿ ಮೂರ್ಛೆಯಿಂದೆಚ್ಚಱಿಸಿ

---

1 ದಳಂಗಳೊಳಂ ಮಿನಿಳೆಯ (ಕ)

ಇನಿವಿರಿದೊಂದವಸ್ಥೆಯುಮನೆಯ್ದಿಸಿದಂ ಬೆಸಗೊಂಡ ಪಾಪ ಕ
ರ್ಮನೆನದಱಿಂದಮೀ ಕಥೆಯೆ ಮಾಣ್ಗಿದು ಕೇಳಲಸಹ್ಯ[1]ಮೆಂಬುದೇಂ
ಮನಕತಿ[1]ದುಸ್ಸಹಂಗಳೆನಿಸಿರ್ದ ಸುಹೃಜ್ಜನದುಃಖಸಂಕುಲಂ
ನೆನೆ[2]ದೊಡಮಂತೆ ಕೇಳ್ದೊಡೆ ನವ[2]ವ್ಯಥೆಯಂ ನೆಱಿ ಮಾಡದಿರ್ಕುಮೇ ೧೭೯

ವ॥ ಅದಲ್ಲದೆಯುಂ ಮತ್ತಮಾ ಕಾಂತೆಗಿಂತೆಂದಂ

ಎಂತಾನುಂ ನಿಲೆಪಿಡಿಯಸು
ಸಂತತಿಯಂ ಸ್ಮರಣಶೋಕಶಿಖಿಗಿಂಧನವ
ಪ್ಪಂತೆಸಗಲಾಗದಿವನೆಂ
ದಿಂತುಸಿರ್ದಂ ಕರುಣದಿಂದಮುಗೆ ಕಣ್ಬನಿಗಳ್ ೧೮೦

ವ॥ ಎನುತ್ತಂ ನುಡಿಯೆ ನಿಡುಸುಯ್ದುಂ ಗುಡುಗುಡನೆ ಸುರಿವ ಕಣ್ಬನಿಗಳಂ ಮಿಡಿವುತ್ತಂ ಮತ್ತಮಿಂತೆಂದಳ್

ಇದನೇನೆಂದಪ್ಪೆ ಲಜ್ಜಾಕರಮನರಸ ಪೋದಾ ಮಹಾರಾತ್ರಿಯೊಳ್ ಪೋ
ಗದ ಮತ್ಪ್ರಾಣಂಗಳಿಂ ಪೋದಪುವೆ ಕೊಲುತಮಿರ್ಪಂತಕಂ ನೋಡಲುಂ ಪೇ
ಸಿದನೆನ್ನಂ ಕಷ್ಟೆಯಂ ಕಲ್ಲೆರ್ದೆಯವಳುಮನೆಂದಂದು ಪೇೞಿ ಸಾವುಮೆಲ್ಲಿ
ರ್ಪುದು ಮತ್ತಂ ನಿಸ್ತ್ರಪಾಗ್ರೇಸರೆಯೊಡನುಡಿವಲ್ಲಿಂದಮೇಂ ಕಷ್ಟಮುಂಟೇ ೧೮೧

ಆ ವಜ್ರಪಾತದಿಂ ಮೇ
ಲೇವೇಳ್ದಪೆನಱಿದು ಪೇೞಲುಂ ಕೇಳಲುಮಿ
ನ್ನಾವಂಗಮೆನಲ್ಕಾಕಷ್ಟ
ಯರ್ಮವಹಮೊಂದಾದುದಾಗಳದನುಸಿರ್ದಪ್ಪೆಂ ೧೮೨

ವ॥ ಅದಲ್ಲದೆಯುಂ

ಒದವಿದ ಕೋಟಲೆಗಳ ಬಾ
ೞಿಮ್ಮದಲೆನಿಸಿದ ಬಾರ್ತೆಗೆಟ್ಟ ಕೃತಮುಱಿಯದ ಮಾ
ಯದ ನನ್ನೀವೊಡಲಂ ನಿಲಿ
ಸಿದುದರ್ಕೇನಾನುಮೊಂದು ನೆಪಮುಸಿರ್ದಪ್ಪೆಂ ೧೮೩

ವ॥ ಅದೆಂತೆಂದೊಡಂತೀಯವಸ್ಥಾಂತರದೊಳೆಡೆವಿಡದಱುತ್ತಿರ್ದಡಪದವಳ ಮೊಗಮಂ ನೋಡಿ

---

1 ಮೆಂಬಿನಂಮೆನಗೞ (ಕ) 2 ದಡೆಮುಂದೆ ಕೇಳ್ದ ಭವ (ಕ)

ತರಳಿಕೆ ಮಾಣದಿನ್ನೆನಸನಟ್ಟಿಪೆ ಸಂಗಡಿಸಿಂಧನಂಗಳಂ
ವಿರಚಿಸು ಬೇಗಮಿಂ ಚಿತೆಯ[1]ನೇಂ ತಡವೀಕ್ಷಣಮೆನ್ನ[1] ಜೀವಿತೇ
ಶ್ವರನೊಡವೋಗವೇೞ್ಕುಮೆನಗೆಂಬುದುಮೊರ್ಮೆಯೆ ಚಂದ್ರಮಂಡಲಾಂ
ತರದೊಳದೊರ್ವನಂದು ಪೊಱಮಟ್ಟೆಱೆತಂದನಮರ್ತ್ಯಮಾರ್ಗದಿಂ ೧೮೪

ವ|| ಅದೆಂತೆಂದೊಡೆ ತರಳತರಹಾರಾಲಂಕೃತನುಂ ವಿಶಾಲವಕ್ಷಸ್ಥಲನುಂ ಕೇಯೂರಕೋಟಿಲಗ್ನ ಪವನತರಳತರಧವಳೋತ್ತರೀಯಾಂಶುಕನುಂ ಕಾಮಿನೀಕುಚ ಕುಂಕುಮಪತ್ರಲತಾಲಾಂಛಿತಾಂಸದೇಶನು ಮುಭಯ ಕರ್ಣಾಂದೋಳಿತ ಮಕರಕುಂಡಲ ಮಣಿಪ್ರಭಾರಕ್ತಗಂಡಮಂಡಲನುಂ ಅಳಿಕುಲನೀಲಕುಟಿಲಕುಂತಳ ವಿಕಟಮೌಳಿಯುಂ ಉತ್ಫುಲ್ಲಕುಮುದಕೃತಕರ್ಣಪೂರನುಂ ದುಕೂಲಪಲ್ಲವಕಲ್ಪಿತೋಷ್ಣೀಷನುಂ ಕುಮುದ ಧವಳದೇಹನುಂ ಮಹಾಪ್ರಮಾಣಪುರುಷನುಂ ಮಹಾಪುರುಷಲಕ್ಷಣೋಪೇತನುಂ ದಿವ್ಯಾಕಾರನುಮೆನಿಸಿದ ಮಹಾನುಭಾವಂ

ಧವಳಾಂಗಪ್ರಭೆ ದೆಸೆಯಂ
ಧವಳಿಸೆ[2]ತನಿಗಂಪನಾ ಕಡುದಣ್ಪೆನಸುಂ[2]
ಕವಿತರೆ ನೀಡಿದನಾಗಳ್
ದಿವಿಜೇಭಕರಾನುಕಾರಿ ನಿಜಕರಯುಗನುಂ ೧೮೫

ವ|| ಅಂತತಿಶೀತಲಸ್ಪರ್ಶಂಗಳಪ್ಪ ಮೃಣಾಲಕೋಮಲಂಗಳೆನಿಪ ಕರಾಂಗುಳಿಗಳಿನೆನ್ನ ಮುಂದುಪರತನಾದ ಪುಂಡರೀಕನನೆತ್ತಿಕೊಂಡು

ಬಗೆಗೆಟ್ಟು ಸಾವಬಗೆಯಂ
ಮಗಳೆ ಮಹಾಶ್ವೇತೆ ಬಗೆಯದಿರ್ ಕೂಡುವೆ ನೀಂ
ಮಗುೞೆಯುಮೀತನನೆನುತಂ
ಮಗುೞ್ದಾತಂ ಬೆರಸು ಗಗನಮಾರ್ಗಕ್ಕೊಗೆದಂ ೧೮೬

ವ|| ಅಂತಾ ವ್ಯತಿಕರದೊಳೆನಗತಿಸಂಭ್ರಮಮುಂ ವಿಸ್ಮಯಮುಂ ಕೌತುಕಮುಮೊಗೆಯೆ ಪಿರಿದುಮಂಜಿ ಕಪಿಂಜಲನನಿದೇನೆಂದು ಬೆಸಗೊಳೆಯುಮಾತನೆನಗೆ ಮಱುಮಾತುಗುಡದುನ್ಮುಖನಾಗಿ

ಎನಗಂ ಪೇೞದೆಯುಂ ಭೋಂ
ಕೆನಲೆನ್ನಯ ಸಖನನೆತ್ತವೊಯ್ದಪೆ ಮಾಣೆಂ
ದೆನುತಂ ಕೋಪದಿನಾ ಪುರು
ಷನ ಪೆಱಗನೆ ತಾನುಮಂತರಿಕ್ಷಕ್ಕೊಗೆದಂ ೧೮೭

---

1 ದೇತಡವೀಕ್ಷಣ ತಂಗಿ (ಕ) 2 ತನಿಗಂಪನಾಳ್ದು ಕಡುಗೆಂವೆನಸುಂ (ಕ)

ವ॥ ಅಂತು ಮೂವರುಂ ನೋಡೆನೋಡೆ ಚಂದ್ರಮಂಡಲಮಧ್ಯದೊಳ್ ಪುಗೆ ಕಪಿಂಜಲನ ಪೋಗಿಂಗೆ ಶೋಕವಿರ್ನುಡಿಯಾಗೆ ಕಿಂಕರ್ತವ್ಯತಾಮೂಢೆಯೆನಾಗಿ

ತರಳಿಕೆ ಪೇಱು ದೇನಱುವೊ ನೀನೆನಲೆನ್ನವೊಲಾಗಳಳ್ಕಿನಿಂ
ಪರವಶೆಯಾಗಿ ನಿಂದುಮವಳೆನ್ನಯ ಸಾವಿನೊಳಾದ ಶಂಕೆಯಿಂ
ಕರುಣಮನಪ್ಪುಕಯ್ದು ಸಿರ್ದಳಾನಱು ಯೆಂ ಸತಿ ಬಂದು ತಂದೆಯುಂ
ತಿರೆ ಪದೆದಾ ಮಹಾಪುರುಷನಾಱಿಸಿದಂ ಭವದೀಯ ಶೋಕಮಂ ೧೮೮

ಇನ್ನರ ನುಡಿ ಕನಸಿನೊಳಂ
ನನ್ನಿಯೆನಲ್ ಕೇಳ ದಿವ್ಯಪುರುಷಂ ಪ್ರತ್ಯ
ಕ್ಷಂ ನಿನ್ನ ಮುಂದೆ ನುಡಿಯ
ಲ್ಕಿನ್ನುಮದೇನೆಂಬೆ ಸಂದೆಗಕ್ಕೆಡೆಯುಂಟೇ ೧೮೯

ನಿನ್ನಯ ಜೀವಿತೇಶ್ವರನ ಜೀವಮನಿಂ ಪಡೆದಟ್ಟಲೆಂದೆ ಲೋ
ಕೋನ್ನತನಪ್ಪ ದಿವ್ಯಪುರುಷಂ ವಿಗತಾಸುವನೊಯ್ದನಟ್ಟಿಱಿಂ
ನಿನ್ನುಮನೀಗಳಾಱಿಸಿದನಂತಿದಱಿಂದಿದು ನನ್ನಿಯಪ್ಪುದ
ಱ್ತೆನ್ನದೆ ಮಾಣ್ಬುದರ್ಕೆ ಪೆಱತೇಂ [1]ಮರಣವ್ಯವಸಾಯಮೆಂಬುದಂ[1] ೧೯೦

ನಿಸದಂ ಕಪಿಂಜಲಂ ಜೀ
ವಿಸುತಿರೆ ನಿನ್ನಲ್ಲಿಗೆಯ್ದಿದಿರನದಱಿಂ ರ
ಕ್ಷಿಸವೇೞ್ಕುಮಾವತೆಱದಿಂ
ದಸುವಂ ನಿನ್ನಲ್ಲಿಗಾತನೆಯ್ತುರ್ಪಿನೆಗಂ ೧೯೧

ವ॥ ಎಂದವಳ್ ಕಾಲಮೇಲೆ ಬೀೞ್ವುದುಂ

ಪಿರಿದುಮಿದಿಂತುಟೆಂದು ಬಗೆದುಂ ನೆಱೆ ಬಾೞ್ಕೆಯೊಳಾದ ತೃಷ್ಣೆಯಂ
ಪರಿಹರಿಸಲ್ಕಮಾರ್ಗಮಱದಾಗಿಯುಮುಕ್ಕೆವದಿಂದಮಂತೆ ಪೆಂ
ಡಿರ ಬಗೆ ಸಾಜದಿಂ ಕುಟಿಲಮಾಗಿಯುಮಿಂತು ದುರಾಸೆಯಿಂದಮೋ
ಸರಿಸದೆ ನನ್ನ ನಾನೆ ಬಿಡಲಾಱದ ಪಾತಕಿಯೆಂ ಮಹೀಪತೀ ೧೯೨

ವ॥ ಅನಂತರಮಾ ಸರೋವರದ ತೀರದೊಳೆಡೆವಿಡದೆ ಪೊರಳುತವೆ ಪರೆದ ಮುಡಿಯೊಳ್ ಪೊರೆದು ಕಣ್ಣನೀರಿಂ ನಾಂದು ಕದಂಪಿನೊಳ್ ಪಗಿಲ್ತು ಪತ್ತಿದುತ್ತರೀಯೆಯೆಂ ಆಕ್ರಂದನದಿಂ ಗಂಟಲೊಡೆದು ದನಿ ಕಿಡೆ ತರಳಿಕೆವೆರಸು ಬಿಡದೞುತ್ತಮಿರಲಾ ಪಾಪ

1 ಣಾಬ್ಯವಸಾಯಮೊಂದುಮಂ (ಕ)

ಕಾರಿಣಿಯಪ್ಪ ಕಾಳರಾತ್ರಿಪ್ರತಿಮೆಯೆನಿಸಿದ ಮಹಾರಾತ್ರಿಯಾಗಲ್ ಶೋಕೋದ್ರೇಕದಿಂ ಯುಗಸಹಸ್ರಾಯಮಾನವಾಗೆ

ಅಱುವೆನ್ನಂ ತರಳಿಕೆ ಮೆ
ಯ್ವಱಯಿಂ ಪಿಡಿದೊಯ್ಯನೆತ್ತಿ ಮೆಲ್ಲನೆ ತಡಿಗಾ
ಗಿಱತಂದೀ ಕೊಳದೊಳ್ ನೀ
ರಿಱಯಿಸೆ ನೀರಿೞದೆನಿಲ್ಲಿ ಬೆಳಗಪ್ಪಾಗಳ್ ೧೯೩

ವ॥ ಅಂತು ನೀರಿೞದು ತದನಂತರಂ

ಆತನ ಪರಮಪ್ರೀತಿಯಿ
ನಾತನ ವಲ್ಕಲದಿನಾತನಕ್ಷಾವಳಿಯಿಂ
ದಾತನ ಕಮಂಡಲುವಿನಿಂ
ದಾತನ ವೇಷಮನೆ ತಾಳ್ದಿ ತಳೆದಂ ವ್ರತಮಂ ೧೯೪

ವ॥ ಅಂತು ತಳೆದು ಮದೀಯ ಮಂದಭಾಗ್ಯತೆಯುಮಂ ದೈವದ ದಾರುಣತೆಯುಮಂ ಶೋಕೋದ್ರೇಕಮುಮಂ ದುಃಖದದುಃಸಹತೆಯುಮಂ ಪದಾರ್ಥದನಿತ್ಯತೆಯುಮಂ ಭಾವಿಸಿ ನೋಡಿ

ಮನಮಂ ನಿಗ್ರಹಿಸುತ್ತಸದ್ವಿಷಯದತ್ತಲ್ ಪೊರ್ದದಂತಾಗೆಮಾ
ಡಿ ನಿರುದ್ಧೇಂದ್ರಿಯೆಯಾಗಿ ಬಂಧುಜನಮಂ ತಾಯ್ತಂದೆಯಂ ಪತ್ತುವಿ
ಟ್ಟಿನಗಿನ್ನೊರ್ವರುಮೇವರೆಂಬ ಬಗೆಯಂ ನಿಶ್ಚೈಸಿ ಲೋಕೈಕನಾ
ಥನ ನಾನಾಗಳನಾಥೆಯೆಂ ಶರಣೆನುತ್ತಾಶ್ರೈಸಿದೆಂ ಸ್ಥಾಣುವಂ ೧೯೫

ಜನನೀ ಜನಕರ್ ಬಾಂಧವ
ಜನಸಹಿತತ್ತಱತೆ ಬಂದು ನಾನಾವಿಧ ಸಾಂ
ತ್ವನ ವಚನ[1]ಸಹಿತಮುಸಿರ್ದ[1]ರ್
ಮನೆಗೊಡಗೊಂಡೊಯ್ಯಲೆಂಬ ಬಗೆಯಿಂದೆನ್ನಂ ೧೯೬

ಅಂತೆರವುಗೊಂಡಿದೇನಿವ
ಳೆಂತುಂ ಪೋ ಬಾರಳೇವೆನೆನುತಂ ದುಃಖಾ
ಕ್ರಾಂತಂ ಪಲವುಂ ದಿನಮಿ
ರ್ದೆಂತಾನುಂ ಮನೆಗೆ ಪೋದನೆನ್ನಯ ಜನಕಂ ೧೯೭

1 ಸನುತಿ ನುಸಿರ್ದುರ್ಂಮನೆ (ಕ)

ವ॥ ಅಂತು ಪೋಗೆ

ಜಪದಿಂ ತಪದಿಂದೊಡಲಂ
ಕ್ಷಪಿಯಿಸಿದಪೆನೆಂಬೊಡದು ಕೃತಜ್ಞತೆ ಗಡ ಚೀ
ಜಪವೆಣಿಸುವ ನೆಪದಿಂದಂ
ನೃಪ ತದ್ಗುಣಗಣಮನೀಗಳೆಣಿಸುತ್ತಿರ್ಪೆಂ ೧೯೮

ಅಯಶಕ್ಕೀಡಾದ ನಿರ್ಲಕ್ಷಣೆಯನಶುಭೆಯಂ ನಿಷ್ಫಲೋತ್ಪನ್ನೆಯಂ ನಿ
ರ್ದಯೆಯಂ ನಿಸ್ನೇಹೆಯಂ ನಿಸ್ತ್ರಪೆಯನಸುಖೆಯಂ ನಿಂದ್ಯೆಯಂ ನಿಷ್ಫಲಪ್ರಾ
ಣೆಯನಾದಂ ಕ್ರೂರೆಯಂ ಬ್ರಾಹ್ಮಣಹನನಮಹಾಪಾಪಮಂ ಗೆಯ್ದ ನಿಸ್ತ್ರಿಂ
ಶೆಯನೆನ್ನಂ ಪಾಪೆಯಂ ನೀಂ ಬೆಸಗೊಳೆ ಫಲಮೇಂ ಪೇೞ್ ಮಹೀಪಾಲಚಂದ್ರಾ ೧೯೯

ಸೊಗಯಿಪ ಸಸಿ ಶರದದ ಬೆ
ಳ್ಮುಗಿಲೊಳ್ ಪೊರೆಯಿಂದಮೆಯ್ದೆ ಮುಸುಕಿರ್ದುದೆನಲ್
ಸೊಗಯಿಪ ದುಗುಲದ ಸೆಱಗಂ
ಮೊಗಕ್ಕೆ ತೆಗೆದಾಗಳಿರದೆ ಗೋಳಿಟ್ಟಿತ್ತಿಳ್ ೨೦೦

ವ॥ ಅಂತೞುತಿರ್ದಳನೆಂತಾನುಂ ಸಂತೈಸಿ

ಮೊದಲೊಳ್ ಗೌರವಮಂ ಮಾ
ಡಿದುದಲ್ಲದೆ ತನ್ನ ವಾರ್ತೆಯಂ ಸದ್ಭಾ
ವದಿನಾದ್ಯಂತಂ ಸತಿ ಪೇ
ೞ್ದುದರ್ಕೆ ಹೃತಹೃದಯನಾಗಿ ಚಂದ್ರಾಪೀಡಂ ೨೦೧

ಇನಿಸೊಗೆತರ್ಪ ಕಣ್ಬನಿಗಳಿಂದಮೆ ನೇಹಮನುಂಟುಮಾಡುವಂ
ಗನೆಯರೊಳೀನಪಾರಭವಭೋಗಮನಿಂತಿರೆ ಪತ್ತುವಿಟ್ಟು ಕಾ
ನನದೊಳೆ ನಟ್ಟು ನಿಂದು ಸುಕುಮಾರಮೆನಿಪ್ಪ ಶರೀರಮಂ ಕಱು
ತ್ತಿನಿವಿರಿದೊಂದು ಘೋರತಪಕೊಡ್ಡಿದೆ ನಿನ್ನ ವೊಲಾರ್ ಕೃತಜ್ಞೆಯರ್ ೨೦೨

ಸತ್ತವರೇೞ್ವರೆ ಪೇೞಿಕೊಡ
ಸತ್ತರೆ ತಮ್ಮಱಲಿನಳವಿಯಂ ಮುೞ್ಗಿಸಲೆಂ
ದುತ್ತವಳಿಕೆಯೊಳೆ ಸಾವರ್
ಸತ್ತವರವರ್ಗಾವ ಹಿತಮನಾಚರಿಸುವರೋ ೨೦೩

ಅವರವರ್ಗಾದ ಕರ್ಮಫಲಮಿರ್ಪಡೆ ಬೇಱದಱಿಂದ ಮೇಲೆ ಕೂ
ಡುವರೊಡಸತ್ತವರೆಂಬೊಡದು ಕೂಡದು ಕೇವಲಮಾತ್ಮಘಾತದೋ
ಷವೆ ಪೆಱತಿಲ್ಲ ಸತ್ತರೊಡಸಾಯದೆ ನಿಂದೊಡೆ ಮಾಡಲಕ್ಕುಮಿ
ತ್ರವರ್ಗೆ ಜಲಾಂಜಲಿಪ್ರಭೃತಿ ದಾನವಿಶೇಷಮಹೋಪಕಾರಮಂ ೨೦೪

ಸತ್ತಳೆ ಕಾಮದೇವನ ಪರೋಕ್ಷದೊಳಾ ರತಿ ಪಾಂಡು ಸತ್ತೊಡಂ
ಸತ್ತಳೆ ಕುಂತಿ ಮತ್ತಮಭಿಮನ್ಯುಕುಮಾರಕನಂದು ಸತ್ತೊಡೇ
ನುತ್ತರೆ ಸತ್ತಳೇ ನೆಗೞ್ದ ಸಿಂಧುನೃಪಾಲಕನಂದು ಸತ್ತೊಡಂ
ಸತ್ತಳೆ ದುಶ್ಶಳಾವನಿತೆಯಿಂತಿವು ನೀವಱಿದಂದವಲ್ಲವೇ ೨೦೫

ವ॥ ಅಂತುಮಲ್ಲದೆಯುಂ

ಆನಾಶ್ವಾಸಿಸಿದನಿತಱಿಂ
ಳೇನಾ ಚಂದ್ರಮನೆ ನಿನ್ನನಾಶ್ವಾಸಿಸಿದಂ
ತಾನೆಂದೊಡದೇನೆಂಬುದೊ
ಮಾನಿನಿ ತದ್ವಿಧರ ವಚನಮವಿತಥಮೆ ವಲಂ ೨೦೬

ವ॥ ಆದಱಿನನಿಂದ್ಯಮಪ್ಪ ನಿಜಚರಿತಮಂ ನಿಂದಿಸಲಾಗದೆಂದನೇಕ ಪುರಾಣ ಕಥಾಪ್ರಕಥನದೊಳಂ ಬಹುಪ್ರಕಾರಸಾಂತ್ವವಚನದೊಳಮೆಂತಾನುಮರಸಂ ಸಂತೈಸಿ

ವಿನಯದೊಳೆ ಮತ್ತಮಂದೊ
ಯ್ಯನೆ ನಿರ್ಝರವಾರಿಯಂ ನಿಜಾಂಜಲಿಯಿಂ ತಂ
ದನುವಿಸಿ ವದನಪ್ರಕ್ಷಾ
ಳನಮಂ ಮಾಡಿಸಿದನಂದು ಚಂದ್ರಾಪೀಡಂ ೨೦೭

ಅವಧರಿಸಿ ಮಹಾಶ್ವೇತಾ
ಪ್ರವೃತ್ತಿಯಂ ಶೋಕಭಾರಮಂ ತಾಳ್ದಿದವೋಲ್
ರವಿಯುಂ ದಿವಸವ್ಯಾಪಾ
ರವೆಲ್ಲಮಂ ಪತ್ತುವಿಟ್ಟಧೋಮುಖನಾದಂ ೨೦೮

ವ॥ ಅನಂತರಂ ರವಿಬಿಂಬಮಪರಾಂಭೋಧಿಗೆ ವಿಲಂಬಿಸುವುದುಂ

ಜಳಜಭವಾಂಡಂ ಜಂಬೂ
ಫಳರಸದಿಂ ತೀವಿತೆಂಬಿನಂ ಜಗಮಂ ಕೋ
ಕಿಳನಯನರುಚಿರರುಚಿ ಕ
ಣ್ಗೊಳಿಸಿರೆ ಪರ್ವಿದುದು ಸಾಂದ್ರ ಸಂಧ್ಯಾರಾಗಂ ೨೦೯

ವ॥ ಆ ಸಂಧ್ಯಾಸಮಯದೊಳ್

ಬಟುಕೆ ಪದನುಂ ಕಮಂಡಲು
ಜಳದಿಂದಂ ಕರ್ಚಿ ತೀರ್ಚಿ ಸಂಧ್ಯಾನಿಯಮಮಂ
ಗಳನೆಯ್ದಿ ಭಸ್ಮಶಯ್ಯಾ
ತಳದೊಳ್ ಬಿಸುಸುಯ್ದು ಮೆಯ್ಯನಿಕ್ಕಿದಳಾಗಳ್ ೨೧೦

ವ॥ ಇತ್ತ ಕೃತಸಂಧ್ಯಾವಂದನಂ ನರೇಂದ್ರನಾತ್ಮೀಯಪ್ರಕಲ್ಪಿತಲತಾಪಲ್ಲವ ಶಯನದೊಳ್ ಕುಳ್ಳಿರ್ದು ಮನೋಭವವಿಜೃಂಭಿತಂಗಳಂ ಮನದೊಳ್ ಭಾವಿಸುತ್ತಂ ವಿಸ್ಮಯಾಕ್ಷಿಪ್ತಚಿತ್ತನಿಂತೆಂದಂ

ತರಳಿಕೆಯೆಂಬಳ್ ನಿಮ್ಮಯ
ಪರಿಚಾರಿಕೆಯೆತ್ತವೋದಳೆಲ್ಲಿರ್ದಪಳೆಂ
ದರಸಂ ಬೆಸಗೊಳ್ವುದುಮಾ
ದರದೆ ಮಹಾಶ್ವೇತೆ ಪೇಟಲುದ್ಯತೆಯಾದಳ್ ೨೧೧

ವ॥ ಅದೆಂತನೆ

ಕಾದಂಬರಿಯ ಪ್ರಥಮ ಸಂದರ್ಶನ

ಮೊದಲೊಳ್ ನಿನಗಾಂ ಪೇಳ್ದಿಮೃ
ತದಿನುದಯಿಸಿದಪ್ಸರಾಂಗನಾನ್ವಯದೊಳ್ ಪು
ಟ್ಟಿದಳಲ್ಲಿ ಮದನಮುದವತಿ
ಮದಿರೇಕ್ಷಣೆ ಮದಿರೆಯೆಂಬ ಕನ್ಯಾರತ್ನಂ ೧

ಆ ಕನ್ನೆಯ ಕೈವಿಡಿದಂ
ಸ್ವೀಕೃತಗಂಧರ್ವರಾಜ್ಯಮಹಿಮೋದಯನ
ಪ್ರಾಕೃತನಿಜವಿಭವಕೃತಾ
ರ್ಥೀಕೃತ ಬುಧಜನಮನೋರಥಂ ಚಿತ್ರರಥಂ ೨

ಆ ವಿಭುಗಂತಃಪುರಕಾಂ
ತಾವಿಭವಮದೆಂತುಮುಳ್ಳೊಡಂ ತನಗೆ ಮಹಾ
ದೇವಿವೆಸರೆಸೆಯೆ ಮದಿರಾ
ದೇವಿಯೆ ಪಟ್ಟಕ್ಕೆ ತಾನೆ ಮೊದಲೆನಿಸಿರ್ದಳ್ ೩

ಆ ದಂಪತಿಗಧಿಕಪ್ರೇ
ಮೋದಯಮೊದವಲ್ಕೆ ಪುಟ್ಟಿದಳ್ ಭುವನಜನಾ
ಹ್ಲಾದಂ ಜನಯಿಸುವಿನೆಗಂ
ಕಾದಂಬರಿಯೆಂಬ ಪೆಸರ ಕನ್ಯಾರತ್ನಂ ೪

ಒಡನುಂಡೊಡನಿರ್ದೊಡನಳಿ
ದೊಡನಾಡಿಗಳಾಗಿ ನೃತ್ಯಗೀತಂ ಮೊದಲಾ
ಗೊಡನೊಡನೆ ಕಲ್ತು ಕಲೆಗಳ
ನೆಡೆವಿಡದಿರ್ವರ್ಗಮಾಯ್ತು ಪರಮಪ್ರೇಮಂ ೫

ವ॥ ಅನಂತರಂ ಶೈಶವಮಂ ಪತ್ತುವಿಟ್ಟೆರ್ಪುದುಮಾ ಕಾದಂಬರೀದೇವಿಯುಂ ಮದೀಯ ಹತವೃತ್ತಾಂತಮಂ ಕೇಳ್ದತ್ಯಂತಶೋಕಾಕ್ರಾಂತೆಯಾಗಿ

[1]ಇರಲಿಂತಪ್ಪೊಂದು[1] ಶೋಕಾಕುಲತೆಯೊಳ್ ಮಹಾಶ್ವೇತೆ ಮತ್ತೊರ್ವನಂ ತಾಂ
ನೆರೆ[1]ದೇನಾನಿಂತು ಕನ್ಯಾವ್ರತದೊಳೆ ಕಳೆವೆಂ ಕಾಲಮಂ ತಂದೆಯಿಂತಾ
ನಿರದಾವಂಗೆನ್ನನೀಯಲ್ ಬಗೆದು ಮನದೊಳಂತುಜ್ಜುಗಂ ಗೆಯ್ದೊಡಂ ಚೆ
ಚ್ಚರಮೆನ್ನೀ ಪ್ರಾಣಮಂ ತಾಂ ಬಿಡದಿರೆನೆನುತಂ ನಿಶ್ಚಯಂಗೆಯ್ದಳಾಗಳ್ ೬

---

1 ಇದವಿಪ್ಪೊಂದು (ಕ)

ವ॥ ಅಂತುಪಾರೂಢಯವ್ವನೆಯಪ್ಪ ಮಗಳ ನಿಶ್ಚಯಮಂ ಮದಿರಾಮಹಾದೇವಿಯುಮರಸುಚಿತ್ರರಥನುಂ ಕರ್ಣಪರಂಪರೆಯಿಂ ಪರಿಜನದತ್ತಣಿಂ ಕೇಳ್ದು ಪಿರಿದುಮಲ್ಲು ಕ್ಷೀರೋದನೆಂಬ ಕಂಚುಕಿಯಂ ಕರೆದೆನ್ನಲ್ಲಿಗಟ್ಟಿದೊಡಾತಂ ಬಂದು

ತನ್ನ ಮಹಾವ್ಯತಿಕರದೊಳ್
ಮುನ್ನವೆ ಬೆಂದವರ್ಗೆ ಮತ್ತೆ ಕಾದಂಬರಿಯಿಂ
ದಂ ನೋವು ಬಂದುದಱಿಂ
ದಿನ್ನನುವಿನೊಳಾನೆ ಶರಣಮಾ ವ್ಯತಿಕರದೊಳ್ ೭

ವ॥ ಎಂದು ಜನನೀಜನಕರಟ್ಟಿದರೆಂದು ನುಡಿಯೆ

ಗುರುಗಳ್ ತಾವೇನನೊಂದಂ ಬೆಸಸಿದರದನೇ ಕೊಳ್ವುದಿನ್ನೆನ್ನ ಜೀವಂ
ಬೆರಸಾನಿಂತಿರ್ಪುದಂ ತಾಂ ಬಯಸುವ ಬಗೆಯೆಂತೆಂದೊಡೆಂದಿಂತು ಕಾದ
ಬರಿಗಾದಂ ಬುದ್ಧಿವೇೞ್ದಟ್ಟದೆ ನಿರವಧಿಕಪ್ರೇಮದಿಂ ಸೌವಿದಲ್ಲಂ
ಬೆರಸತ್ತಲ್ ಪೋದಳಂತಾಗಳೆ ತರಳಿಕೆಯುಂ ನೀವುಮೆೞ್ತಂದಿರೀಗಳ್ ೮

ವ॥ ಎಂದು ಪೇೞ್ದಿಳನ್ನೆಗಮಿತ್ತ ಲಾಂಛನಚ್ಛಲದಿಂ ಶೋಕಾನಲದಗ್ಧಮಪ್ಪ ಮಹಾಶ್ವೇತಾಹೃದಯಮಂ ವಿಡಂಬಿಸುವಂತೆಯುಂ ಮುನಿಕುಮಾರವಧಮಹಾಪಾತಕಮಂ ತಾಳ್ದಿದಂತೆಯುಮಾಗಿ

ಇನಿಸಂ ಮುಚ್ಚಿರೆ ಕೃಷ್ಣಾ
ಜಿನಮವಿರಳಭಸ್ಮಧವಳವಗಜಾರಾಮಾ
ಸ್ತನಮಂಡಳಮೊಪ್ಪಿದುದೆಂ
ಬಿನಮುದಯಿಸಿದುದು ಮೃಗಾಂಕಮಂಡಲಮಾಗಳ್ ೯

ವ॥ ಅಂತು ನಿಖಿಲಲೋಕನಿದ್ರಾಮಂಗಲಕಲಶದಂತೆ ಕುಮುದಿನೀಭಾಂಧವಂ ಗಗನಾಂಗಣದೊಳೆಸೆಯೆ ಸುಪ್ತೆಯಾದ ಮಹಾಶ್ವೇತೆಯಂ ನೋಡಿ ಚಂದ್ರಾಪೀಡಂ ಪಲ್ಲವಶಯನತಲದೊಳ್ ಮೆಯ್ಯನಿಕ್ಕಿ ಬೇಡಂ ನೆನೆದು

ಈಯವಸರದೊಳ್ ವೈಶಂ
ಪಾಯನನುಂ ಪತ್ರಲೇಖೆಯುಂ ಭೂಪರುಮಾ
ನೀಯಂದದಿನಗಲಲ್ಕೆನಿ
ತಾಯಸಮಂ ಪಡುವರೆಂದು ಚಿಂತಿಸುತಿರ್ದಂ ೧೦

ವ || ಅಂತು ಚಿಂತಿಸುತಿರ್ದಿರಳುಂ ಕಳೆದು ಬೆಳಗಪ್ಪುದುಂ ಕೃತಪ್ರಾಭಾತಿಕ ನಿಯಮನಾಗೆ ಮಹಾಶ್ವೇತೆಯುನುಘಮರ್ಷಣ ನಿಯಮ ಜಪಂಗಳಂ ಮಾಡುತಿರ್ದಳನ್ನೆಗಮಿತ್ತ ಷೋಡಶವರ್ಷ ವಯಸ್ಕನುಂ ಉದಾತ್ತಾಕಾರನುಂ ವಿಭಕ್ತಮಧ್ಯಾಕಾರನುಂ ವಿಮಲ ವಕ್ಷಸ್ಥಲನುಂ ದೀರ್ಘಾಯತಬಾಹುಯುಗಳನುಂ ಪರ್ಯುಷಿತ ಚಂದನಾಂಗರಾಗ ಧೂಸರೋರುದಂಡನುಂ ಕುಂಕುಮಾಂಗರಾಗಪಿಂಜರ ರೂಪನುಂ ಚಾಮೀಕರಶೃಂಖಲಾ ಕಲಾಪನುಂ ನಿಬಿಡನಿಯಮಿತ ಕಕ್ಷಬಂಧಾತಿರಿಕ್ತಪ್ರೇಂಖದ್ದುಕೂಲಪಲ್ಲವನುಂ ವಾಮ ಪ್ರಕೋಷ್ಠಡೋಲಾಯಮಾನಮಾಣಿಕ್ಯವಲಯನುಂ ಕರ್ಣಾಭರಣವಿಕೀರ್ಯಮಾಣ ಕಿರಣೇಂದ್ರಚಾಪಪ್ರಭಾಜಾಲನುಂ ಅನವರತತಾಂಬೂಲಬದ್ಧರಾಗಾನುಕಾರಿ ಬಂಧುರಾಧರನುಂ ದೀರ್ಘಧವಳಲೋಚನನುಂ ಕನಕಪಟ್ಟಗ್ರಥಿತ ಪೃಥುಲಲಲಾಟಪಟ್ಟನುಮಳಿಕುಲನೀಲಕುಟಿಲಕುಂತಳನುಂ ಅಗ್ರಾಮ್ಯಾಕೃತಿಯುಂ ರಾಜಕುಲಸೇವನಾತಿಚತುರನುಮಪ್ಪ ಕೇಯೂರನೆಂಬ ಗಂಧರ್ವಕುಮಾರಂಬೆರಸು ತರಳಿಕೆ ಮಹಾಶ್ವೇತೆಯಲ್ಲಿಗೆ ಬಂದೀರ್ವರುಂ ದೂರಾವನತೋತ್ತಮಾಂಗರಾಗಿ ಪೊಡಮಟ್ಟು ಕುಳ್ಳಿರ್ದು

ನಾಡಾಡಿಯಲ್ತು ರೂಪಿನ
ಗಾಡಿಯಿದೆಲ್ಲಿರ್ದು ಬಂದುದೆನುತಂ ಚಂದ್ರಾ
ಪೀಡನನತಿ ವಿಸ್ಮಯದಿಂ
ನೀಡುಂ ನೋಡುತ್ತಮಿರ್ದನಾ ಕೇಯೂರಂ ೧೧

ವ || ಆಗಳ್ ಮಹಾಶ್ವೇತೆಯುಂ ನಿರ್ವರ್ತಿತಾನುಷ್ಠಿತೆಯಾಗಿ ತರಳಿಕೆಯ ಮೊಗಮಂ ನೋಡಿ

ನುಡಿದಾನಟ್ಟಿದುದನೊಡಂ
ಬಡಿಸಿದೊ ಮತ್ಸಖಿಯನೆಂದೊಡೀತಂಗೀಗಳ್
ನುಡಿ ಪೋಗು ನೀನೆನುತ್ತೆ
ನ್ನೊಡನಟ್ಟಿದಳಲ್ತೆ ತನ್ನ ವೀಣಾಧರನಂ ೧೨

ವ || ಎಂಬುದುಮಾತನಂ ಬೆಸಗೊಳೆ

ಮನಮಂ ನೋಡಲಿದೇಕೆ ತನ್ನ ಮನಮಂ ತಾಂ ನೋಡಲೇನಾಂ ತಪೋ
ವನದೊಳ್ ಕೋಟಲೆಗೊಂಡು ದುಃಖದೆ ತಪಂಗೆಯ್ವುತ್ತಿರಲ್ ಮತ್ತೆಯುಂ
ಮನದೊಳ್ ತಾಂ ಸುಖದಿಂದಮಿರ್ಪಳಿವಳೆಂಬುದ್ವೇಗದಿಂದಕ್ಕನಿಂ
ತಿನಿತೊಂದಂ ನುಡಿದಟ್ಟಿದಳ್ ಪಿರಿದುಮುಂತೇನಟ್ಟಲೇಂ ತಕ್ಕುದೋ ೧೩

ವ || ಎಂದಿವು ಮೊದಲಾಗಿ ಕಾದಂಬರಿ ನುಡಿದ ನುಡಿಗಳಂ ಕೇಯೂರಕಂ ಬಿನ್ನವಿಸಲದಂ ಕೇಳ್ದು ತನ್ನೊಳಿ ತಾನೆ ಭಾವಿಸಿ

ಬಂದಾನೆ ಪೇೞ್ದಪೆಂ ನಯ
ದಿಂದಲ್ಲಿಗೆ ತಕ್ಕುದೆಲ್ಲಮಂ ಮುನ್ನೀಂ ಪೋ
ಗೆಂದು ಕೞುಪಲ್ಕೆ ಪೋದಂ
ಮುಂದಾ ಕೇಯೂರಕಂ ಸುವಿಲುಳಿತ ಹಾರಂ ೧೪

ವ|| ಅಂತಾತಂ ಪೋಗೆ ಚಂದ್ರಾಪೀಡನನಿಂತೆಂದಳ್

ಇದೆ ಸಾರಿರ್ಪುದು ರಾಜಧಾನಿ ಪಿರಿದುಂ ಚಿತ್ರಾವಹಂ ಬಂದು ನೋ
ೞ್ಪುದು ನೀನೆನ್ನೊಡಸಂದು ಮತ್ಸಖಿಗಮೆಂತುಂ ಬುದ್ಧಿವೇೞಲ್ಕೆವೇ
ೞ್ಪುದು ಮತ್ಪ್ರಾಣಸಮಾನೆಯಾಕೆ ನಿಜದಿಂದಸ್ವಸ್ಥೆ ಗಂಧರ್ವಲೋ
ಕದೊಳಿಂದಕ್ಕೆ ಭವದ್ವಿಲೋಕನಸುಖಂ ಭೂಪಾಲವಿದ್ಯಾಧರಾ ೧೫

ವ|| ಅದಲ್ಲದೆಯುಂ ಮದೀಯ ಪ್ರಾರ್ಥನೆಯಂ ನಿರರ್ಥಕಂಮಾಡದಿಂದು ಬಂದಲ್ಲಿ ವಿಶ್ರಮಿಸಿ ನಾಳೆ ಬೀಡಿಂಗೆ ಬಿಜಯಂಗೆಯ್ವುದೆಂದು ಮತ್ತಮಿಂತೆಂದಳ್

ನಿನ್ನನಕಾರಣಭಾಂಧವ
ನಂ ನೋಡಿಯೆ ಶೋಕವಾಱಿದುದು ಸುಜನರ ಲೋ
ಕೋನ್ನತರ ಪರಹಿತರ ನಿ
ಮ್ಮನ್ನರ ಬರವಾರ್ಗೆ ಸುಖಮನುತ್ಪಾದಿಸದೋ ೧೬

ವ|| ಎಂದು ನುಡಿದೊಡೆ

ಇನಿತಂ ಪ್ರಾರ್ಥಿಸಲೇಂ ನೀ
ನಿನಿತೆಸಗುವುದೆಂದು ಬೆಸಸುವುದು ಸಾಲ್ಗುಂ ನೀ
ಮೆನಗೆಂದು ವಿನಯದೊಳ್ ಕಾ
ಮಿನಿ ಪಿಂತನೆ ನಡೆದನಂದು ಚಂದ್ರಾಪೀಡಂ ೧೭

ವ|| ಅಂತು ಬರುತ್ತಂ ಹೇಮಕೂಟಮನೆಯ್ದಿ ವಿಚಿತ್ರಮೆನಿಸಿದಚಿತ್ರರಥರಾಜಧಾನಿಯಂ ಪೊಕ್ಕು ಸಪ್ತಕಕ್ಷ್ಯಾಂತರಗಳ ಕಾಂಚನಮಯ ತೋರಣಂಗಳಂ ನುಸುಳ್ದು ಕನ್ಯಾಂತಃಪುರದ್ವಾರಮನೆಯ್ದಿದವರ್ಗಳ್

ಪರಿತಂದು ಮಹಾಶ್ವೇತಾ
ನಿರೀಕ್ಷಣೋತ್ಸುಕದೊಳಿಮುಗೆ ತಮಗೆನುತಂ ತ
ಚ್ಚರಣಸರಸಿರುಹಯುಗದೊಳ್
ಸರಭಸಮಿದಿರೆಱಗಿದರ್ ಪ್ರತೀಹಾರಕಿಯರ್ ೧೮

ವ ॥ ಆಗಳರಸನುಂ ತೃತೀಹಾರಿಕಾ ಜನೋಪದಿಶ್ಯಮಾನಮಾರ್ಗನಾಗಿ ಪೊಕ್ಕು ನೋಟ್ಪಿನ್ನೆಗಮಲ್ಲಿ

ಇದು ನಾರೀಮಯಮುಪ್ಪಲೋಕಮಿದು ಬೇಱಿತೊಂದಂಗನಾದ್ವೀಪಮಿಂ
ತಿದು ನಿಷ್ಪೂರುಷಜೀವಲೋಕಮಿದು ಸರ್ಗಕ್ಕೆಂದು ಪದ್ಮೋದ್ಭವಂ
ಸುದತೀರತ್ನಸಮೂಹಮಂ ಪದಪಿನಿಂ ಬೈಚಿಟ್ಟ ಭಂಡಾರಮು
ಪ್ಪುದೆನಲ್ ಸಂದಣಿಸಿರ್ದ ಸುಂದರಿಯರಂ ಕಂಡಂ ನರೇಂದ್ರಾತ್ಮಜಂ ೧೯

ಭುವನಾಂತರಮಂ ಸಿಂಪಿಸು
ವವೊಲಾಶಾವನಿತೆಯರುಮನೋಲಾಡಿಸುವಂ
ತವೊಲಿಸೆದರಂಗನೆಯರು
ಣ್ಮುವ ನಿಜಲಾವಣ್ಯರಸದ ಪೆರ್ಪೊನಲಿಂದಂ ೨೦

ವ ॥ ಅಂತು ವದನದ್ಯುತಿಯಿನಿಂದುಬಿಂಬವೃಷ್ಟಿಸುರಿವಂತೆಯುಂ ಅಪಾಂಗವಿಕ್ಷೇಪಂಗಳಿಂ ಕುವಲಯವನವಿಕಾಸಮಾದಂತೆಯುಂ ಕಪೋಲತಲಂಗಳ ಬೆಳಗುಗಳಿಂ ಮಣಿದರ್ಪಣಂಗಳ್ ಪೊಳೆವಂತೆಯುಂ ಭ್ರೂಲತಾವಿಭ್ರಮಂಗಳಿಂ ಕಾಮಕಾರ್ಮುಕವಿಸರಂ ಪಸರಿಸಿದಂತೆಯುಂ ಕೇಶಕಲಾಪಾಂಧಕಾರದಿಂ ಕಾರಿರುಳ್ ಕವಿದಂತೆಯುಂ ಸುರಭಿನಿಶ್ವಾಸಂಗಳಿಂ ಮಲಯಮಾರುತಂ ತೀಡಿದಂತೆಯುಂ ಮುಗುಳ್ನಗೆಯ ಬೆಳಗುಗಳಿಂ ವಸಂತಸಮಯ ಮಾದಂತೆಯುಂ ಕರತಲರಾಗದಿಂ ಕೆಂದಾವರೆಗಳಲರ್ದಂತೆಯುಂ ಕರರುಹಕಿರಣಂಗಳಿಂ ಕುಸುಮಾಯುಧಶರಶತಂಗಳ್ ಸುರಿವಂತೆಯುಮಾದುದಂತುಮಲ್ಲದೆಯುಂ

ಮಣಿಮಾಲಾರಂಜಿತ ಭೂ
ಷಣರುಚಿ ರುಚಿರೇಂದ್ರಚಾಪಲತೆಗಳ್ ಗಗನಾಂ
ಗಣದೊಳ್ ಪೊಳೆಯಲ್ ಸುತ್ತುಂ
ಕುಣಿವುವು ನಲಿದಾಡಿ ಗೃಹಮಯೂರನಿಕಾಯಂ ೨೧

ಕಡೆಗಣ್ ಕರ್ಣಾವತಂಸಂ ಕರತಲರುಚಿ ಲೀಲಾರವಿಂದಂ ಕುಚಂ ಕ
ನ್ನಡಿ ಪಾದಾಂಭೋಜರಾಗಂ ಮಿಸುಪಲತೆಗೆ ಮಂದಸ್ಮಿತಂ ಚಂದನಂ ಮೆ
ಲ್ನುಡಿ ವೀಣಾನಾದಮಂಗಪ್ರಭೆ ಪೊಸದುಗುಲಂ ಪಕ್ವಬಿಂಬೋಷ್ಠರಾಗಂ
ಕಡು ಚೆಲ್ವಾದಂಗರಾಗಂ ಚರಣನಖಮಯೂಖಾಳಿ ಪುಷ್ಪೋಪಹಾರಂ ೨೨

ಲಲನೆಯರ್ಗಂಗರಾಗಮದು ದುರ್ವಹಮಂಶುಕ ಭಾರಮಂಗ ಸಂ
ಚಲತೆಗೆ ಕಾರಣಂ ಕುಸುಮಮಾಲಿಕೆಯುಂ ಪೊಱೆ ಪುಷ್ಪದಾಮ ಮೇ
ಖಲೆ ನಡೆಗಡ್ಡಿ ಕಣ್ಮಲರ್ಗೆ ಕಾಡಿಗೆ ಬಿಣ್ಣಿತು ಪಾದಪಂಕಜ
ಕ್ಕಲತೆಗೆ ಭಾರಮೆಂದೊಡಱಿಯೆಂ ಪೊಗೞಲ್ ಸುಕುಮಾರವೃತ್ತಿಯಂ ೨೩

ಹಾರದ ಭಾರಮನದನೇಂ
ಸೈರಿಸುವುದೆ ತನು ಲತಾಂಗಿಯರ್ಕಳ ಕಬರೀ
ಭಾರಕ್ಕಂ ಘನಕುಚಯುಗ
ಭಾರಕ್ಕಂ ಬಳ್ಕಿ ಕರಮೆ ಬಡನಡು ನಡುಗಲ್ ೨೪

ಕಲಲೆಂದತಿಕೌತುಕದಿಂ
ದಲರ್ಗಟ್ಟುವೆನೆಂಬದೊಂದು ಸಾಹಸಮಂತಿ
ರ್ಕಲರಾಯ್ವ ಪದದೊಳಿರಡನೆ
ಯಲರ್ಗಂ ಕೈನೀಡಿ ಸೇದೆವಡುವರ್ ಸತಿಯರ್ ೨೫

ವ॥ ಮತ್ತಮತ್ತಿತ್ತ ಪುಗುತರ್ಪಲ್ಲಿ ಲವಲಿಕೆಯಂ ಕೇತಕೀಧೂಳಿಯೊಳಾಲವಾಲಮಂ ಸಮೆಯಲುಂ ಸಾಗರಿಕೆಯಂ ಗಂಧೋದಕಕನಕದೀರ್ಘಿಕೆಗಳೊಳ್ ರನ್ನದ ಮಳಲ್ಗಳಂ ಸುರಿಯಲುಂ ಮೃಣಾಳಿಕೆಯಂ ಕೃತ್ರಿಮಕಮಲಿನಿಯೊಳಾಡುವ ಜಕ್ಕವಕ್ಕಿಗಳ ಮೇಲೆ ಕುಂಕುಮರಜಮಂ ಕೆದಱಲುಂ ಮಕರಿಕೆಯಂ ಗಂಧಪಾತ್ರಂಗಳೊಳ್ ಕರ್ಪೂರರಸಮೂಡಿ ವಾಸಿಸಲುಂ ರಜನಿಕೆಯಂ ತಮಾಲವೀಥಿಯನಮರ್ದಕತ್ತಲೆಯೊಳ್ ಮಾಣಿಕದ ಸೊಡರ್ಗಳಂ ಬೆಳಗಲುಂ ಕುಮುದಿಕೆಯಂ ಗಿಳಿ ಪಾಯದಂತು ದಾಡಿಮೀ ಫಲಂಗಳ ಮೇಲೆ ಮುತ್ತಿನ ಝುಂಪಾಳಂಗಳಂ ಕವಿಯಲುಂ ನಿಪುಣಿಕೆಯಂ ಮಣಿಸ್ತಂಭಂಗಳೊಳ್ ರಂಜಿಸುವ ಸಾಲಭಂಜಿಕೆಯ ಕುಚಂಗಳೊಳ್ ಕುಂಕುಮರಸದಿಂ ಪತ್ರಭಂಗಂಗಳಂ ಚಿತ್ರಿಸಲುಂ ಉತ್ಪಲಿಕೆಯಂ ಕದಳೀಗೃಹಮರಕತವೇದಿಯಂ ಕಮಲದಳಂಗಳಿಂ ತೊಡೆಯಲುಂ ಕೇಸರಿಕೆಯಂ ವಕುಳಕುಸುಮಮಾಲಾಮಂಟಪಂಗಳಂ ಮದಿರಾರಸದಿಂ ಸಿಂಪಿಸಲುಂ ಮಾಲತಿಕೆಯಂ ಕಾಮದೇವಗೃಹದೋಲಗಶಾಲೆಯಂ ಸಿಂಧೂರ ರೇಣುಗಳಿಂ ಬೆಳರ್ಗೆಂಪಂ ಮಾಡಲುಂ ನಳಿನಿಕೆಯಂ ಭವನಕಲಹಂಸಂಗಳ್ಗೆ ಕಮಲಮಧುರಸವನೆಱೆಯಲುಂ ಕದಳಿಕೆಯಂ ಧಾರಾಗೃಹಕ್ಕೆ ಗೃಹಮಯೂರಂಗಳನೊಯ್ಯಲುಂ ಕಮಲಿನಿಯಂ ಜಕ್ಕವಕ್ಕಿಗಳಂ ಮೃಣಾಳ ಕ್ಷೀರರಸಮಂ ಕುಡಿಯಿಸಲುಂ ಚೂತಲತಿಕೆಯಂ ಪಂಜರದ ಗಂಡು ಕೋಗಿಲೆಗಳ್ಗೆ ಚೂತಾಂಕುರದ ಕುಟುಕನಿಕ್ಕಲುಂ ಪಲ್ಲವಿಕೆಯಂ ಭವನ ಹರಿಣಂಗಳ್ಗೆ ಮರೀಚಪಲ್ಲವದಳಂಗಳಂ ನೀಡಲುಂ ಲವಂಗಿಕೆಯಂ ಚಕೋರಪಂಜರಂಗಳೊಳ್ ಪಿಪ್ಪಲೀತಂಡುಲಂಗಳ ಕುಟುಕಂ ಸೂಸಲುಂ ಮಧುಕರಿಕೆಯಂ ಪೂದೊಡಿಗೆಯಂ ಮಾಡಲುಂ ಮಯೂರಿಕೆಯಂ ಕಿನ್ನರ ಮಿಥುನಂಗಳಂ ಸಂಗೀತಶಾಲೆಗೆ ಕಳುಪಲುಂ ಕಂದಳಿಕೆಯಂ ಜೀವಂಜೀವಕ ಮಿಥುನಂಗಳಂ ಕ್ರೀಡಾಪರ್ವತಮನೇಱಸಲುಂ ಹರಿಣಿಕೆಯಂ ಶುಕಸಾರಿಕೆಗಳನೋದಿಸಲುಂ ಪೆಸಿರ್ವೆಸರೊಳೆ ಕರೆದು ಪೇಟ್ವ ಮನೋಹರಾಲಾಪಂಗಳಂ ಕೇಳುತ್ತಂ ಪೋಗೆವೋಗೆ

ಒದವಿದ ನಿರ್ಭರಯವ್ವನ
ಮದದಿಂ ಮೆಯ್ಮಱೆದು ಕಂಭಮೆಂದು ಮಣಿಸ್ತಂ
ಭದ ರುಚಿಯನಲಘುಕುಚಭಾ
ರದೆ ಜೋಲ್ದು ಮಲಂಗಿ ನಗಿಸಿದರ್ ಕೆಳದಿಯರಂ ೨೬

ಪಳುಕಿನ ಬಿತ್ತಿಯೊಳ್ ಪೊಳೆವುತಿರ್ದ ನಿಜಪ್ರತಿಬಿಂಬದೊಳ್ ಮನಂ
ಗೊಳೆ ನುಡಿದೇಕೆ ಪೇೞ್ ನಗಿಸುವಯ್ ವಚನಾಂಚಲನೆಂದು ಮೌಕ್ತಿಕಾ
ವಳಿಗಳ ಕಾಂತಿಯಂ ತೆಗೆದಿದೇನೆ ಬೞಲ್ವೆ ಗವಾಕ್ಷರಂಧ್ರದೊ
ಳ್ವೆಳಗನಿನಾಂಶವೆಂದು ಬಗೆದೇಕೆ ಕರಾಬ್ಜಮನಡ್ಡವೊಡ್ಡುವಯ್ ೨೭

ಪಿರಿದುಂ ಬೞಲ್ಕೆಯಿಂ ಚಾ
ಮರಮದು ಕರದಿಂದೆ ನುಣ್ಚೆಯುಂ ನಖಕಿರಣೋ
ತ್ಕರಮನೆ ಚಾಮರಮೆಂದೆಲೆ
ಸರೋಜಮುಖಿ ಬೀಸಿ ನಗಿಸಿದರ್ ಕೆಳದಿಯರಂ ೨೮

ವ॥ ಎಂದಿವು ಮೊದಲಾಗಿ ಪರಿಹಾಸಜಲ್ಪಿತಂಗಳಂ ಕೇಳುತ್ತಂಪೋಗಲುಪವನ ಲತೆಗಳಿಂದುದಿರ್ದಲರ ಧೂಳಿಯಿಂ ಪುೞಲ್ಗಟ್ಟಿದಂತೆಯುಂ ಕೋಗಿಲೆಗಳೆಡೆವಿಡದುಗುರ ಮೊನೆಯೊಳಳ್ಳಿಱಿಯೆ ಸುರಿವ ಸಹಕಾರಫಲರಸದ ಸೋನೆಗಳಿಂ ದುರ್ದಿನಂ ಮಸಗಿದಂತೆ ಯುಂ ವಕುಳದ ಮರಂಗಳೆಲರಲೆಪದಿಂ ಕೆದಱಿದ ಸೀಧುಧಾರಾಪ್ರಸರದಿಂ ತುಂತು ರ್ಮಸಗಿದಂತೆಯುಂ ಪೂವಲಿಗೆದರ್ದ ಸಂಪಗೆಯೆಸಳಪ್ರಸರದಿಂ ಸುವರ್ಣದ್ವೀಪದಂತೆ ಯುಂ ಎಡೆಯಾಡುವೆಳವೆಂಡಿರ ಮೆಲ್ಲಡಿಗಳಲತೆಗೆಗಳಿಂ ರಾಗಸಾಗರಂಕವಿದಂತೆಯುಂ ಅಂಗರಾಗಾಮೋದಂಗಳಿಂ ಪಾರಿಜಾತಜನ್ಮದಿನದಂತೆಯುಂ ತೊಳಗುವ ಮುತ್ತಿನ ತೊಡ ವುಗಳ ಬೆಳಗುಗಳಿಂ ಬೆಳ್ದಿಂಗಳಾದಂತೆಯುಂ ಕೃಷ್ಣಾಗರುಪತ್ರಭಂಗಂಗಳಿಂ ನೀಲಾಯ ಮಾನಮುಂ ಕರ್ಣಪೂರಾಶೋಕಪಲ್ಲವಂಗಳಿಂ ಲೋಹಿತಾಯಮಾನಮುಂ ಚಂದನಲೇ ಪಂಗಳಿಂ ಧವಳಾಯಮಾನಮುಂ ಶಿರೀಷಕುಸುಮಾಭರಣಂಗಳಿಂ ಹರಿತಾಯಮಾನಮು ಮಪ್ಪಮಾರ್ಗಮಂ ನೋಡುತೆ ಬರ್ಪನ್ನೆಗಮಲ್ಲಿ

ಎರಡುಂ ಪಕ್ಕದೊಳೋಲಗಕ್ಕೆ ಪದಪಿಂ ಬಂದಿರ್ದ ಕಾಂತಾಜನೋ
ತ್ಕರ ರತ್ನಾಭರಣಪ್ರಭಾಪ್ರಸರವಾದಂ ತಳ್ತು ತದ್ವೀಥಿಕಾಂ
ತರದೊಳ್ ಪೆರ್ಬೊನಲಂದದಿಂ ಪರಿಯೆ ಕಂಡಂತಾಪ್ರಭಾಪೂರದೊಳ್
ಭರದಿಂ ತಾಸಿದಿರೀಸುವಂತೆ ನಡೆದಂ ಭೂಪಾಲವಿದ್ಯಾಧರಂ ೨೯

ರಾಮಾಭಿರಾಮಮಂ ಜಗ
ತೀಮಂಡನಮಂ ಮಣಿಪ್ರಭಾಪ್ರೇಂಖಿತ ರ
ಥ್ಯಾಮಂಡನಮಂ ಕಂಡಂ
ಶ್ರೀಮಂಟಪಮಂ ವಿಚಿತ್ರ ರತ್ನಾತಪಮಂ ೩೦

ವ|| ಆ ಮಣಿಮಯ ಮಂಟಪಮಧ್ಯಭಾಗದೊಳನೇಕ ಕನ್ಯಕಾಪರಿಜನವೃತೆಯಾಗಿ

ಪೊಳೆಯುತ್ತಿರ್ಪ ಮಹಾವರಾಹವದನೋದ್ಯದ್ದಂಷ್ಟ್ರಮಂ ನೆಮ್ಮಿ ನಿಂ
ದಳೊ ಭೂಕಾಂತೆಯೆನಲ್ಕೆ ನೀಲವಸನಪ್ರಚ್ಛನ್ನ ಪರ್ಯಂಕಮಂ
ಡಳದೊಳ್ ಬೆಳ್ಪೆಸೆದಿರ್ದ ಕೌಳುಡೆಯನೊಂದಂ ನೆಮ್ಮಿ ಕುಳ್ಳಿರ್ದ ಕೋ
ಮಳೆಯಂ ದೂರದೆ ನೋಡಿ ಕಂಡನರಸಂ ಕಾದಂಬರೀದೇವಿಯಂ ೩೧

ಉರಗನಿಕಾಯ ದಿಕ್ಪತಿನಿಕಾಯ ನಿಲಿಂಪನಿಕಾಯಮೆಲ್ಲಮಾ
ದರದೊಳೆ ತಮ್ಮ ತಮ್ಮ ನಿಳಯಕ್ಕಿರದೊಯ್ದು ಪರೊಲ್ದು ಕನ್ನೆಯಂ
ಪಿರಿದುಮೆನಲ್ಕೆ ಹರ್ಮ್ಯ ಮಣಿಕುಟ್ಟಿಮಭಿತ್ತಿಸಮೂಹಮಂಟಪೋ
ಪರಿಮತಲಂಗಳೊಳ್ ಸೊಗಯಿಸಿರ್ದುದು ರೂಪಮೃತಾಂಶುವಕ್ತ್ರೆಯಾ ೩೨

ಮಂಡಪದುಪರಿಮತಲದೊಳ್
ಕಂಡರಿಸಿದ ಖಚರಮಂಡಲಂ ಪಡೆದಬಲಾ
ಮಂಡಲಮಂ ಗಗನಕ್ಕೊಡ
ಗೊಂಡೊಯ್ದಪುದೀಗಳೆಂಬಿನಂ ಸೊಗಯಿಸುಗುಂ ೩೩

ಭುವನತ್ರಯಮಂ ನೋಡ
ಲ್ಕವತರಿಸಿದುದಾಗವೇಟ್ಟುಮೀ ಕಾಂತೆಯನೆಂ
ಬವೊಲೆಸೆದು ತೋಱುದುದು ಮಣಿ
ಭವನಾಂತರದೊಳ್ ವಿಚಿತ್ರಚಿತ್ರಪ್ರಕರಂ ೩೪

ಹೃದಯದೊಳಗಿಟ್ಟುಕೊಂಡುದೊ
ಪದಪಿಂ ಕಾಮಿನಿಯನೆನೆ ಮಣಿಸ್ತಂಭಸಮೂ
ಹದೊಳೆಲ್ಲಮೆಯ್ದೆ ಮಾರ್ತೊಳ
ಗಿದುದಾಗಳ್ ರೂಪು ಚಿತ್ರರಥನಂದನೆಯಾ ೩೫

ಕೂಡಿ ಮಣಿಭೂಷಣಧ್ವನಿ
ಗಾಡುವ ಸೋಗೆಗಳ ಪರೆದ ಪೀಲಿಯು ಕಣ್ಣಿಂ
ನಾಡವೆ ಕನ್ಯಕೆಯಂ ನಡೆ
ನೋಡಲ್ ಕಣ್ಗೆಱೆದುದೆಂಬಿನಂ ಸೊಗಯಿಸುಗುಂ ೩೬

ರಮಣೀರತ್ನಮನಾಗಳೆ
ಎಮೆಯಿಕ್ಕದೆ ನೋೞ್ಪ ಬಯಕೆಯಿಂ ಪಡೆದರೊ ತಾ
ಮೆಮೆಯಿಕ್ಕದ ಕಣ್ಗಳನೆನ
ಲೆಮೆಯಿಕ್ಕದೆ ನೋಡುತಿರ್ದುದಬಲಾನೀಕಂ ೩೭

ಪಿರಿದುಂ ನಖವಿವರದೆ ನೆ
ತ್ತರನೆತ್ತಂ ಕಾರಿದಪುವೊ ಮೆಲ್ಲಡಿಗಳ್ ಬಿ
ತ್ತರಿಸಿದಪುವೊ ವಿದ್ರುಮರಸ
ತರಂಗಿಣಿಯನೆನಿಸಿ ಕೆದಱುದುವು ಕೆಂಬೆಳಗಂ ೩೮

ಚರಣಾಲಕ್ತಕರಾಗಪಾಟಲಿತ ಲಾವಣ್ಯಾಂಬುಧಾರಾಳಿಯೋ
ಚರಣಾಂಭೋರುಹಯುಗ್ಮನಿರ್ಗಳಿತ ರಾಗೋದ್ಯನ್ಮಯೂಖಾಳಿಯೋ
ಚರಣಾಲಂಕರಣಸ್ಫುರದ್ರುಚಿರಮಾಣಿಕ್ಯಾಂಶುಲೇಖಾಳಿಯೋ
ಪಿರಿದುಂ ತಾನೆನಲೇಂ ಪದಾಂಗುಳಿಗಳೊಪ್ಪಂಬೆತ್ತುವೋ ಕಾಂತೆಯಾ ೩೯

ಇಳೆಯಂ ಪೊಸನುಣ್ಬೆಳಗಿನ
ಬಳಗದೆ ಬಾಸಣಿಸುತಿರ್ದವಗ್ಗಲಿಸಿ ಧರಾ
ತಳತರಳತಾರಕಾವಳಿ
ಗಳಿವೆನಲಾ ಚಂದ್ರಮುಖಿಯ ಚರಣನಖಂಗಳ್ ೪೦

ಪದೆದಪ್ಪಿದುದೊ ಪೆಱರ್ ನೋ
ಡದಂತು ಮುಸುಕಿದುದೊ ಪುಳಕಮಂ ಸೋಂಕಿಂ ತಾ
ಳ್ದಿದುದೆನೆ ನುಣ್ಗದಿರ್ಗಳಿನೆಸೆ
ದುದು ಮಣಿಮಯ ಕಾಂಚಿ ಜಘನದೊಳ್ ಘನಕುಚೆಯಾ ೪೧

ಬಿಡದಡರಿ ಕೊರ್ಬಿ ಕುಚಯುಗ
ವೆಡೆಗಿಱಿದಿರೆ ಮುದ್ದುಮೊಗಮನೆಂದುಂ ನೋಡಲ್
ಪಡೆಯದೆ ಬಡವಾದಂತಿರೆ
ಬಡನಡು ಸೊಗಯಿಸುವುದಾ ಸರೋಜಾನನೆಯಾ ೪೨

ವಿರಚಿಸಿ ಸುಕುಮಾರತೆಯಂ
ಪಿರಿದುಂ ಬೆರಳಿಂದವಂಟೆ ನೋಡಿದನೋ ಪೇ
ಚಿರವಿಂದೋದ್ಭವನೆನಲಾ
ತರುಣಿಯ ಗಂಭೀರನಾಭಿಮಂಡಲಮೆಸೆಗುಂ ೪೩

ಅನುರೂಪಮಪ್ಪಿನಂ ತ್ರಿಭು
ವನ ವಿಜಯಪ್ರಶಸ್ತಿವರ್ಣಾವಳಿಯಂ
ಮನಸಿಜನೆ ಬರೆದನೆನಲಾ
ವನಿತೆಯ ನವರೋಮರಾಜ ರಂಜಿಸಿ ತೋರ್ಕುಂ ೪೪

ಮೊಗಸಿದಪುದೆತ್ತಲುಂ ಬಿಗಿ
ದೊಗೆದ ಕುಚಾಭೋಗವೆಂದು ಚುಬುಕಮನಾದಂ
ನೆಗಪಿದಪುವೆಂಬಿನಂ ತ
ಳ್ತೊಗೆದುವು ಘನಕುಚೆಯ ರುಚಿರ ಹಾರ ಕರಂಗಳ್ ೪೫

ತೊಳಗುವ ಕರ್ಣಾಭರಣಂ
ಗಳಿನಿಟಿಱದ ಮಯೂಖಮಾಲೆ ಲಾವಣ್ಯರಸೋ
ಜ್ವಳಮೃದುಮೃಣಾಳಲತೆಯೆನ
ಲೆಳೆಯಳ ನಳಿತೋಳ್ಗಳೇಂ ಮನಂಗೊಳಿಸಿದುವೋ ೪೬

ಸುರಿದಪುವೊ ರತ್ನವಲಯದ
ಭರದಿಂದೆ ಬಟಿಲ್ದು ಬೆಮರನೆನಲೆಳವೆಳಗಂ
ಸುರಿವ ನಖನಿಕರದಿಂದಂ
ಕರಮೆಸೆದುವು ಕಮಳಮುಖಿಯ ಕರಕಮಲಂಗಳ್ ೪೭

ನವಯವ್ವನ ರಾಗರಸಾ
ರ್ಣವದೊಳ್ ತಳತಳಿಸಿ ಪೊಳೆವುತಿರ್ದುವು ಮುತ್ತುಂ
ಪವಳಮುಮೆನೆ ಕಣ್ಗೊಳಿಪುವು
ಯುವತಿಯ ಸುಲಿಪಲ್ಲುಮೆಸೆವ ಬಿಂಬಾಧರಮುಂ ೪೮

ಮನಸಿಜ ಕಾಂತಾ ಪರಿವಾ
ದಿನಿಯ ಕನದ್ರತ್ನಕೋಣಮೋ ಪೇಟಿಱಮಿದೆಂ
ಬಿನೆಗಂ ಕಣ್ಗೊಳಿಸಿದುದಾ
ವನರುಹಲೋಚನೆಯ ರುಚಿರ ನಾಸಾವಂಶಂ ೪೯

ಕಿವಿಗವತಂಸಂ ಪೆಱವೇ
ಕಿವೆ ನೀಳ್ದುವೆಂಬಿನಂ ಮುಖಶ್ರೀಗೆ ನಿವಾ
ಸವೆನಿಪ್ಪಿಂಗಡಲೆಂಬುದು
ಕುವಲಯಲೋಚನೆಯ ರುಚಿರ ಲೋಚನಯುಗಳಂ ೫೦

ಪುದಿದಿರ್ದ ಚೆಲ್ವು ಕಣ್ಡಿಱಿ
ದುದು ಮನ್ಮಥಗಂಧಸಿಂಧುರಂ ತಿಲಕಿತಮಾ
ದುದೆನಲ್ ಮೃಗಮದತಿಲಕಾಂ
ಕದಿನೆಸೆದುದು ಮಿಱುಪ ಪೆಱೆನೊಸಲ್ ಕೋಮಲೆಯಾ ೫೧

ನಿಮಿರ್ದುವು ಕರ್ಣೋತ್ಪಲದಿಂ
ದಮ ಮಧುಧಾರೆಗಳೆನಿಪ್ಪ ಪಾಲೆಗಳೊಳದೇ
ನಮರ್ದೆಸೆದುದೊ ಮಿಸುಗುವ ಪ
ತ್ರಮಕರಮಾಣಿಕ್ಯಕುಂಡಲಂ ಕಾಮಿನಿಯಾ ೫೨

ಮದಿರಾರಸದಿಂದಂ ಬಾ
ರ್ಚಿದರೋ ಪೇೞೆನಿಸಿ ಪೊಳೆವ ತಲೆದುಡಿಗೆಯ ರ
ನ್ನದಿನೊಸರ್ವ ರಾಗರುಚಿಯಂ
ಪುದಿದೆಸೆದುದು ಕೇಶಪಾಶಮಾ ಕಾಮಿನಿಯಾ ೫೩

ಒಸೆದೊಲವಿಂದೆ ತನ್ನುರಮನೇಱಿಸಿದೊರ್ವಳೆ ಲಕ್ಷ್ಮಿಯೆಂಬ ಸಂ
ತಸದೊಳೆ ಬೀಗುವಂಬುರುಹನಾಭನ ಗರ್ವಮನೀಗಳಿಂತೆ ಮಾ
ಣಿಸುವೆನೆನುತ್ತನೇಕ ಶತಲಕ್ಷ್ಮಿಗಳಂ ಕಮಳಾಯತಾಕ್ಷಿ ಪು
ಟ್ಟಿಸುವವೊಲಿರ್ದಳೊರ್ಮೆಯೆ ನಿಜ ಪ್ರತಿಬಿಂಬ ಕದಂಬಕಂಗಳಿಂ ೫೪

ಹರನೊರ್ವಂ ಮನ್ಮಥನುಮ
ನಿರದುರುಪಿದನೆಂದದರ್ಕೆಮುಳಿದಂತೆವೊಲೆ
ಲ್ಲರ ಹೃದಯಂಗಳೊಳೋರಂ
ತಿರೆ ಮನ್ಮಥಶತಮನಾಕೆ ಪುಟ್ಟಿಸುತಿರ್ದಳ್ ೫೫

ಎಳವೆಱೆಯೊಂದನೆ ತಲೆಯೊಳ್
ತಳೆದನನಿಱುಕಯ್ಯಲೆಂದು ಲೀಲಾಸ್ಮಿತದಿಂ
ದೆಳೆವೆಱೆಯ ಬಳಗಮಂ ಕೋ
ಮಳೆ ದೆಸೆದೆಸೆಗಂದು ಪಸರಿಪಂತೆವೊಲೆಸೆದಳ್ ೫೬

ಪರಿಚಿತ ಚಕ್ರವಾಕಮಿಥುನಂಗಳನೊಯ್ಯನೆ ನಿದ್ರೆಗೆಯ್ಸುವಳ್
ವಿರಹದೆ ನಿದ್ರೆಯಂ ಪಡೆದುವಿಲ್ಲಿರುಳಲ್ಲಿಯುಮಿಂತಿವೆಂದು ತಾ
ವರೆಯ ರಜಂಗಳೆಂಬ ಪೊಸನುಣ್ಮಳಲಿಂದೆ ಪುಳಿಲ್ಗಳಂ ಮನೋ
ಹರಕೃತಕ ಪ್ರವಾಹಿನಿಯೊಳಂಗನೆ ಮಾಡಿಸುತಿರ್ದಳರ್ಥಿಯಿಂ ೫೭

ವ॥ ಮತ್ತಮೆಡೆಯಾಡುವೆಳವೆಂಡಿರ ನೂಪುರದನುಣ್ಬರಕ್ಕೆಳಸಿ ಪರಿವ ವಲ್ಲಭ ಹಂಸನಂ ಮೃಣಾಳಲತೆಯ ಸಂಕೊಲೆಯೊಳಿಕ್ಕೆಂದು ಹಂಸಪಾಲಿಕೆಯಂ ಬೆಸಸುತ್ತಮಾ ಭರಣದೊಳಗುರ್ಚಿದ ಪಚ್ಚೆಯ ಪಸರಿಸಿದ ಪಸುರಂ ಪಸುರೆಲೆಗೆತ್ತೆಳಸುವ ವಲ್ಲಭಹರಿಣ ಶಾಬಕಂಗಳ್ಗೆ ಕೆಳದಿಯರ ಕಯ್ಯಲ್ಲಿರ್ದ ಯವಾಂಕುರಗಳಂ ನೀಡುತ್ತಂ ದೇವಿ ನೀಂ ನಡೆ ಪಿದೆಳಲತೆ ನನೆದೋಱೆತೆಂದು ಬಿನ್ನವಿಸಿದ ಬಾಲಕಿಯರನಾಭರಣಪ್ರದಾನಾತಿಸನ್ಮಾನಂ ಗಳಿಂ ಸಂತೋಷಂಬಡಿಸುತಿರ್ದಳಂತುಮಲ್ಲದೆಯುಂ

ನಱುಸುಯ್ಗೆ ತುಂಬಿಗಳ್ ಬಂ
ದೆಱಗೆ ಕರಾಂಬುಜದೆ ಕಮಳಮುಖಿ ಸೋವುತ್ತುಂ
ಮಿಱುಗುವ ನೀಲದ ಬಟ್ಟಂ
ತಿಱೆಕಲ್ಗಳನಾಡುವಂತೆ ಕಣ್ಗೆಸೆದಿರ್ದಳ್ ೫೮

ಅರಗಿಳಿಗಳ ರವಮಂ ಪಂ
ಜರದೊಳಗಿರ್ದೊಸಗೆವೇೞ್ದ ಮಾಣಿಸೆನುತ್ತುಂ
ಚರಣಗ್ರಾಹಿಣಿಯಂ ಸುಂ
ದರಿ ಲೀಲಾಂಬುಜದೆ ನಸುನಗುತ್ತಂ ಪೊಯ್ದಳ್ ೫೯

ವ॥ ಮತ್ತಂ ಮಹಾಶ್ವೇತೆಯತ್ತಣಿಂ ಬಂದ ನೃಪರೂಪಚಂದ್ರಮನ ರೂಪಾತಿಶಯ ಗುಣಂಗಳಂ ಬಿನ್ನವಿಸುತಿರ್ದ ಕೇಯೂರಕನ ಮೊಗಮಂ ನೋಡಿ

ಬರವಿದು ಚೋದ್ಯಮಾರತನಯಂ ಪೆಸರಾವುದು ರೂಪದೆಂತಟೋ
ಹರೆಯಮದಿನ್ನೆಗಂ ತಡೆದೆ ನೀಂ ನುಡಿಯಾದುದೆ ನಿನ್ನೊಳಾತನೊಳ್
ಪರಿಚಯಮೆಂತು ಸಂಗಳಿಸಿತಿಲ್ಲಿಗೆ ಬಂದಪನೇ ಎನುತ್ತಮಾ
ತರುಣಿ ನಿರಂತರಂ ಬೆಸಗೊಳ್ಳುತ್ತಿರಲಾ ಮನುಜೇಂದ್ರಚಂದ್ರನಂ ೬೦

ವ॥ ಎಂದು ಮಗುೞ್ದುಮಗುೞ್ದು ಬೆಸಗೊಳುತಿರ್ದ ಗಂಧರ್ವರಾಜನಂದನೆಯ ನತಿದೂರದೊಳ್ ವಿಸ್ಮಿತಾಂತರಂಗನಾಗಿ ನೋಡಿ

ಇವಳಂ ನೋಡಲ್ ಪಡೆದೆ
ನ್ನ ವಿಲೋಚನಮಾವ ನೋಂಪಿಯಂ ನೋಂತುವೊ ಮಾ
ಯ್ದ ವಿಧಾತ್ರನೇಕೆ ವಿರಚಿಸ
ನೊ ವಿಲೋಚನಮಯಮೆನಲ್ ಮದಿಂದ್ರಿಯಚಯಮಂ ೬೧

ಇವಳಂ ಸಮೆದಂದಬ್ಜೋ
ದ್ಭವಕರಸಂಸ್ಪರ್ಶಖೇದದಿಂದಾದಂ ಸಂ
ಭವಿಸಿದ ಬಾಷ್ಪಾಂಬುಗಳಿಂ
ಕುವಲಯ ಕುಮುದಂಗಳಾದುವಾಗಲೆವೇಟ್ಕುಂ ೬೨

ಬಗೆಯೊಳ್ ಪಿರಿದುಂ ಕೌತುಕ
ಮೊಗೆಯಲ್ಕನ್ಯೋನ್ಯಮೊಲ್ದು ನೋಡುತ್ತಿರ್ಪ
ನ್ನೆಗಮೊರ್ಮೊದಲಿರ್ವರ ದಿ
ಟ್ಟಿಗಳುಂ ಸಮುದಿಟ್ಟಿಯಾದುವಂತಾಕ್ಷಣದೊಳ್ ೬೩

ವ || ಅಂತು ನೋಡಿ

ಈತಂ ಕೇಯೂರಂ ಪೇ
ೞ್ದಾತಂ ಪುಗುತರ್ಪನೆಂದೆನುತ್ತಂ ತದ್ರೂ
ಪಾತಿಶಯಕ್ಕಚ್ಚರಿವ
ಟ್ಟಾ ತರುಣಿಯುಮಂತೆ ಬಿಡದೆ ನೋಡುತ್ತಿರ್ದಳ್ ೬೪

ಒದವೆ ಪುಳಕಾಂಕುರಂಗಳ್
ಮೊದಲೊಳ್ ಭೂಷಣದ ರವಮೆರಡನೆಯ ಸೂೞಿನ್ ಮು
ನ್ನಿದಿರೇೞೆ[3] ತಾಂ ಬೞಿಕ್ಕಿರ
ದಿದಿರೆೞ್ದಳ್ ತರಳನಯನೆ ಸಂಭ್ರಮದಿಂದಂ ೬೫

ವ || ಅನಂತರಮನಂಗಶರಪರವಶತೆಯಿಂ ಬಿಂದುಬಿಡುವ ಬೆಮರನಿದಿರೆೞ್ದು ಬೞಿಲ್ಕೆಗೇಱಿಸಿಯುಂ ತೊಡೆ ದಡದಡಿಸೆ ನಡೆಗೆಟ್ಟು ಕ[1]ಡ[1]ಲುಲಿಗೆ ಬ[2]ೞಿಸಲ್ವ[2] ಕಳಹಂಸಮಂಡಲಕ್ಕಯಶಮಂ ಮಾಡಿಸಿಯುಂ ನಿಡುಸುಯ್ಯೆಲರಿಂ ಮೇಲುದು ತೊಲಗೆ ಚಾಮರದೆಲರ್ಗೆ ನಿಮಿತ್ತತೆಯನೊಡರ್ಚಿಯುಂ ಅಂತಃಪ್ರವಿಷ್ಟಚಂದ್ರಾಪೀಡಸ್ಪರ್ಶಲೋಭದಿಂದಮೆನೆ [3]ಕಡುಪಾರ್ವ[3] ಮೆಲ್ಲೆರ್ದೆಯೊಳ್ ಕಯ್ಯನಿಕ್ಕಿ ಕುಚಯುಗಾಚ್ಛಾದನದಮೇಲೆ ನೆವ

1 ೞ (ಕ) 2 ೞಿಲುವ (ಕ) 3 ಗಂಡುವಾಯ (ಕ)

ಮಿಕ್ಕಿಯುಂ ನುಡಿಯಲುಜ್ಜುಗನುಂ ಲಜ್ಜೆ ಮಾಣಿಸೆ ಮುಖಸೌರಭಕ್ಕೆ ಜಗುವ ಮಱಿ ದುಂಬಿಯಮೇಲೆ ದೂರನುತ್ಪಾದಿಸಿಯುಂ ಕುಸುಮಾಯುಧನಿಸೆ ನೊಂದು ಸೀತ್ಕಾರ ಮೊಗೆಯೆ ಪೂವಲಿಗೆದಱಿದ ಪೊಂಗೇದಗೆಯ ಗಱಿಯ ಕಿರುಮುಳ್ಗೆ ಬಱಿದೆ ಬೈಗುಳಂ ಮಾಡಿಯುಂ ಎಡವಿಡದೆ ಕೈನಡುಗೆ ನೆಲನುಗ್ಗಡಿಪ ಪಡಿಯಱಿತಿಯರಂ ನಿವಾರಿಸಿದಪ್ಪಳೆ ನಿಸಿಯುಂ ಇಂತು ಮದನವಿಕೃತಂಗಳಂ ಪಲತೆಱದೆ ಮಱಿಸಿಯಿಸುತ್ತಿರೆಯೆಂತಾನುಂ ತತ್ಕಾಂತೆ ಒಂದೆರಡಡಿಯನಿಡುವಲ್ಲಿ

ವನಿತಾಮಂಡನರತ್ನಕಾಂತಿ ಮಱಿಯಾದತ್ತೆಂದು ತದ್ಭೂಷಣ
ಧ್ವನಿ ಸಂಭಾಷಣಮೆಂದು ಕಾಂತೆ ಹೃದಯಾಂತರ್ಲಗ್ನೆ ತಾನಾಗಿರ
ಲ್ಕೆನಗಿನ್ನೇನೊಳಗಾದಳೆಂದೆಸೆವ ದೇಹಚ್ಛಾಯೆ ಮೊಯ್ವೊರ್ದೆ ಕಾ
ಮಿನಿ ತಳ್ತಪ್ಪಿದಳೀಗಳೆಂದು ಬಗೆದಂ ಭೂಪಾಲವಿದ್ಯಾಧರಂ ೬೬

ವ॥ ಅಂತಾ ಕಾಂತೆಯೆಂತಾನುಂ ಕತಿಪಯ ಪದಂಗಳಂ ನಡೆದು

ಪಲವು ದಿವಸಕ್ಕೆ ಕಂಡೊಗೆ
ದೊಲವಿಂ ಬಿಗಿಯಪ್ಪಿದಳ್ ಮಹಾಶ್ವೇತೆಯನಾ
ಲಲನೆ ಮಹಾಶ್ವೇತೆಯುಮಾ
ಲಲನೆಯನನುರಾಗದಿಂದಮಪ್ಪಿದಳಾಗಳ್ ೬೭

ವ॥ * ಅನಂತರಂ ಮಹಾಶ್ವೇತೆ ಕಾದಂಬರಿಯನಿಂತೆಂದಳ್ :—ಚಂದ್ರಾಪೀಡ ನೆಂಬೀ ಮಹಾನುಭಾವಂ ಭಾರತವರ್ಷದ ರಾಜನುಂ ತುರಗಖುರಮುಖೋಲ್ಲೇಖದತ್ತ ಚತುಸ್ಸಮುದ್ರಮುದ್ರನುಂ ಕ್ಷಪಿತಪ್ರಜಾಪೀಡನುಮೆನಿಸಿದ ತಾರಾಪೀಡನರೇಂದ್ರಂಗೆ ನಂದನನುಂ ನಿಜಭುಜಶಿಲಾಸ್ತಂಭವಿಶ್ರಾಂತವಿಶ್ವವಿಶ್ವಂಭರಾಪೀಡನುಮೆನಿಸಿ ದಿಗ್ವಿಜಯ ಪ್ರಸಂಗದಿಂ ಬಟಿಸಂದೀ ಪ್ರದೇಶಕ್ಕೆ ಬಂದನಲ್ಲದೆಯುಂ ಪರಿತ್ಯಕ್ತಸಕಲಸಂಗೆಯಾಗಿ ಕಲ್ಲೆರ್ದೆಯಳೆನಿಸಿದೆನ್ನಂ ಕಾಣಲೊಡನೆ ಸ್ವಭಾವಸರಳತೆಯನಪ್ಪುಕೆಯ್ದು ನಿಜಗುಣದಿಂ ನಿಷ್ಕಾರಣ ಬಂಧುವುಂ ನಿರ್ನಿಮಿತ್ತಮಿತ್ರನುಮೆನಿಸಿದನಂತುಮಲ್ಲದೆಯುಂ

---

* ಅಂತು ಕಾದಂಬರಿ ಕೃತಪ್ರಣಮೆಯಾಗಿ ಪರಸಿಮಿಂತೆಂದಳೀ ಮಹಾನುಭಾವಂ ಚಂದ್ರಾ ಪೀಡನೆಂಬಂ ಭಾರತವರ್ಷಣ ತುರಗಖುರಮುಖೋಲ್ಲೇಖದತ್ತ ಚತುಸ್ಸಮುದ್ರಮುದ್ರಿತನುಂ ರಕ್ಷಿತಪ್ರಜಾಪಾಲನನುಂದೊನಿಸಿದ ತಾರಾಪೀಡನರೇಂದ್ರನಂದನನೆನಿಸಿ ನಿಜಭೋಜಶಿಲಾಸ್ತಂಭವಿ ಶ್ರಾಂತನೆನಿಸಿ ದಿಗ್ವಿಜಯಪ್ರಸಂಗದಿಂ ಲಳಿಸಂದೀದೇಶಕ್ಕೆ ಬರವಾದುದಲ್ಲದೆಯುಂ ಪರಿತ್ಯಕ್ತಸಕಲ ಸಂಗೆಯಾಗಿ ಕಲ್ಲೆರ್ದೆಯೆನಿಸಿದೆನ್ನೆಗಂ ಕಾಣಲೊಡನೆ ಸ್ವಭಾವಕರತ್ವತೆಯನಪ್ಪುಕೆಯ್ದುಂ ನಿಜ ಗುಣದಿಂ ನಿಷ್ಕಾರಣಬಂಧುವುಂ ನಿರ್ನಿಮಿತ್ತ ಮಿತ್ರನುಮೆನಿಸಿದನಂತು ಮಲ್ಲದೆಯುಂ (ಕ)

ಒದವಿದ ದಾಕ್ಷಿಣ್ಯಕ್ಕಂ
ವಿದಗ್ಧವೃತ್ತಿಗಮಪಾರಗಾಂಭೀರ್ಯಕ್ಕಂ
ಮೊದಲೆನಿಸಿದ ಸಕಲಗುಣಾ
ಸ್ಪದರಂ ಜಗದೊಳಗೆ ಪಡೆವುದಸದಳಮತ್ತೆ ೬೮

ವ|| ಅದುಕಾರಣದಿಂ ಪ್ರಜಾಪತಿಯ ರೂಪನಿರ್ಮಾಣಕೌಶಲಮುಮಂ ಎಡೆವಱಿಯದೆ ನಿಂದ ಲಕ್ಷ್ಮಿಯ ವಿವೇಕಮುಮಂ ವಸುಂಧರೆಯ ಸದ್ಭರ್ತೃತಾಸುಖಮುಮಂ ಮರ್ತ್ಯಲೋಕದ ಸಫಲತೆಯುಮಂ ಕಲಾಕಲಾಪಕದ ಮೇಳಾಪಕಮುಮಂ ಸೌಭಾಗ್ಯದ ಭಾಗ್ಯಮುಮಂ ಮನುಷ್ಯರಗ್ರಾಮ್ಯತೆಯುಮಂ ನೀನುಂ ಕಾಣ್ಬೆಯೆಂದೆಂತಾನುಮಿಲ್ಲಿಗೊಡಗೊಂಡು ಬಂದೆಂ

ಅರಸನನಾಂ ಕಂಡಱಿಯೆಂ
ಪರಿಚಯಮಿಲ್ಲೆನ್ನೊಳೆಂದು ಮಿಗೆ ತಾಂ ನಾಣ್ಚು
ತ್ತಿರದಿಂದೆನ್ನೊಳದೆಂತಂ
ತಿರೆ ನೀಂ ನೆಗಟ್ಟುದು ನಿರಂತರಂ ಕಮಲಮುಖೀ ೬೯

ವ|| ಎಂದು ಮಹಾಶ್ವೇತೆ ಕಾದಂಬರಿಗಱುಪುವುದುಂ ಚಂದ್ರಾಪೀಡನುಂ ಕಯ್ಗಳಂ ಮುಗಿಯೆ ಸರ್ವಾಂಗಪುಳಕಮಂ ತಳೆದು

ಪಿರಿದೊಂದಟ್ಕಱಿಂದೊಳೊಲ್ದು ನೋಟ್ಪವಳ ದೀರ್ಘಾಪಾಂಗದೇಶಕ್ಕೆ ಚ
ಚ್ಚರಮಾಗಳ್ ಪರಿತಂದ ಸೇದೆಯೊದವಲ್ ಘರ್ಮೋದಬಿಂದೂತ್ಕರಂ
ಸುರಿವುತ್ತಿರ್ಪುದು ಕಣ್ಣ ಪಾಪೆಗೆಲೆ ನೋಡೆಂಬಂದದಿಂ ಸ್ನೇಹನಿ
ರ್ಭರವಾ ಕಾಂತೆಗೆ ಭೋಂಕೆನಲ್ ಸುರಿದುವಾನಂದಾಶ್ರುಬಿಂದೂತ್ಕರಂ ೭೦

ಚರಣಾಂಗುಷ್ಠದೆ ನೆಲನಂ
ಬರೆವೀ ನೆವದಿಂದೆ ತನಗೆ ಬರೆತೆಗೆದಳೊ ಪೇ
ೞರಸನನೆನಲವಳ ನಖಾಂ
ತರದೊಳ್ ಪೊಳೆದತ್ತು ರೂಪು ಭೂಪೋತ್ತಮನಾ ೭೧

ನಡೆನೋಡುವ ಕನ್ನಿಕೆಯರ
ಕಡೆಗಣ್ಣಂ ಸಾರ್ದು ಪರಿವ ಕರಿಯಾಲಿಗಳೊ
ಗ್ಗಡಿಸಿದವತಂಸ ಮಧುಕರ
ದೊಡನಾಡುವ ಮಧುಕರಂಗಳೆನಿಸಿದವಾಗಳ್ ೭೨

ವ॥ ಅನಂತರಂ ಪರಿಜನಂ ಸಂಭ್ರಮಂಬೆರಸು ತಂದು ಶಯನತಳಶಿರೋಭಾಗದೊಳಿಕ್ಕಿದ ಧವಳಾಂಶುಕ ಪ್ರಚ್ಛದಚ್ಛನ್ನ ಹೇಮಪದಾಂಕಿತಾಸನದೊಳರಸಂ ಕುಳ್ಳಿರೆ ಕಾದಂಬರಿ ಮಹಾಶ್ವೇತೆಯೊಡನೆ ನಿಜಪರ್ಯಂಕದೊಳ್ ಕುಳ್ಳಿರ್ಪುದುಂ ಮಹಾಶ್ವೇತೆಯ ಕಣ್ಣಱಿದು ವೇಣುರವಂಗಳುಮಂ ವೀಣಾನಾದಂಗಳುಮಂ ಗೀತಸ್ವನಂಗಳುಮಂ ಮಾಗಧಿಯರ ಜಯಶಬ್ದಂಗಳುಮಂ ಪ್ರತೀಹಾರಿಯರ್ ನಿವಾರಿಸುತ್ತಮಿರ್ದರನ್ನೆಗಂ

ಪ್ರಿಯದಿಂ ಕಾಂತೆ ಮಹಾಶ್ವೇ
ತೆಯ ಕಾಲಂ ತಾನೆ ಕರ್ಚಿ ಪದಪಿಂದೆ ನಿಜ
ಪ್ರಿಯಸಖಿಯೆನಿಸಿದ ಮದಲೇ
ಖೆಯೆಂಬಳಿಂ ನೃಪನ ಕಾಲ್ಗಳಂ ಕರ್ಚಿಸಿದಳ್ ೭೩

ವ॥ ಆಗಳಾ ಕಾದಂಬರಿಯೊಡನೆ ಕುಳ್ಳಿರ್ದ ಮಹಾಶ್ವೇತೆ

ಕರದಿಂದಂ ಕರ್ಣಭೂಷಾರುಚಿರುಚಿರಮೆನಿಪ್ಪಂಸವಂ ಮುಟ್ಟುತಂ ಷ
ಟ್ಚರಣವ್ಯಾಲೋಲಕರ್ಣೋತ್ಪಲಮನನುರೆ ಸ್ಫೈತಿಕ್ಕುತಂ ಸಂಚಲಚ್ಚಾ
ಮರಸಂಜಾತಾನಿಲಾಂದೋಳನ ಚಲದಳಕಾನೀಕಮಂ ಮೆಲ್ಲನಂದೋ
ಸರಿಸುತ್ತಂ ತಂಗಿ ಪೇೞ್ ಭವ್ಯವೆ ನಿನಗೆನಲಾ ಕಾಂತೆ ನಾಣ್ಚುತ್ತಮಾಗಳ್ ೭೪

ವನವಾಸಾಯಾಸದಿನ
ಕ್ಕನಿಂತಿರಲ್ ಮನೆಯೊಳಿರ್ದೆ ನಾನೆಂದು ಕರಂ
ಮನದೊಳ್ ತೊಟಲುತ್ತಂ ತಾಂ
ಮನವೊಲ್ಲದೆ ತನಗೆ ಸೇವಮೆಂದೆನುತೊರೆದಳ್ ೭೫

ವ॥ ಆಗಳುಪಜಾತಶೋಕೆ ಮಹಾಶ್ವೇತಾಮುಖನಿರೀಕ್ಷಣೆಯಾಗಿಯುಂ ಮಾರೋಪಿತಚಾಪನಪ್ಪ ಕುಸುಮಚಾಪಂಗೆ ಪಕ್ಕುಮಾಡಿದ ಚಂದ್ರಾಪೀಡನನಪಾಂಗ ವಿಕ್ಷೇಪತರಳತರತಾರಶಾರೋದರನಯನಂಗಳಿಂದಡಿಗಡಿಗೆ ನೋಡುತ್ತಮಿರ್ದು

ಸುರಚಿರ ಸಾಲಭಂಜಿಕೆ ಬೆನುತ್ತುರದೊಳ್ ಪೊಳೆಯುತ್ತಿರಲ್ಕೆ ಮ
ತ್ಸರಿಸಿದಳಂಗನಾಜನಘನಸ್ತನದೊಳ್ ಪ್ರತಿಬಿಂಬಿಸುತ್ತಿರಲ್
ಪುರುಡಿಸಿದಳ್ ಮನೋಹರನನೀಕ್ಷಿಸಲಿತ್ತಪುದಿಲ್ಲ ಹರ್ಷದಿಂ
ದಿರದುಗುತರ್ಪ ಬಾಷ್ಪಮೆನಗೆಂದು ಲತಾಂಗಿ[1]ಯಟಲ್ದು ಬಾಡಿದ[1]ಳ್ ೭೬

1 ಕಸಲ್ದು ಬರ್ದಿದಳ್ (ಕ)

ವ || ಅನಂತರಂ ತಾಂಬೂಲಪ್ರದಾನೋದ್ಯತೆಯಾದ ಕಾದಂಬರೀದೇವಿಯಂ ಮಹಾಶ್ವೇತೆಯಿಂತೆಂದಳ್.

ಭುವನಾಧೀಶ್ವರಸುತನಭಿ
ನವಾಗತಂ ಮಾನ್ಯನಪ್ಪನಾರಾಧ್ಯನೆ ದಲ್
ನವಗೆಲ್ಲ ತೆಱದಿನದಱಿಂ
ದವೀವುದರಸಂಗೆ ಮುನ್ನ ಮೀ ತಂಬುಲಮಂ ೭೭

ವ || ಎಂದು ನುಡಿಯೆ

ಆನಕ್ಕ ನಾಣ್ಚುವೆಂ ಪಿಡಿ
ನೀನೆ ನೃಪಂಗಿಕ್ಕು ತಂಬುಲಮನಱಿವೆನೆ ಪೇ
ೞೀನುಮನಾನೆಂದತಿಲ
ಜ್ಜಾನತಮುಖಿಯಾಗಿ ಕಾಂತೆ ಮೆಲ್ಲನೆ ನುಡಿದಳ್ ೭೮

ವ || ಅಂತು ನುಡಿಯೆ ಮಹಾಶ್ವೇತೆ ಮತ್ತಮಾಗ್ರಹಿಸೆ ತಂಬುಲಂಗೊಡಲುಜ್ಜು ಗಂಗೆಯ್ದು

ಬೆಮರಿಂ ಮುೞುಗಿದಪೆಂ ಸಂ
ಭ್ರಮದಿಂ ಬಿದ್ದಪ್ಪೆನರಸ ಕೈಗುಡು ನೀಂ ಬೇ
ಗಮೆನಿಪ್ಪ ತೆಱದೆ ತಾಂಬೂ
ಲಮಿಳಿತನುಂ ಕಾಂತೆ ನೀಡಿದಳ್ ನಿಜಕರಮಂ ೭೯

ವ|| ಆಗಳ್ ವಿಜಯಗಜಕುಂಭಾಸ್ಫಾಲನದೊಳೊಂದಿದ ಸಿಂಧೂರದಿಂ ರಂಜಿಪಂತೆ ಬೆಳರ್ಗೆಂಪನಾಂತತಿರಭಸದಿಂ ಮುಂದುಱುಳಿವರಿವಂತೆ ನಖಮಯೂಖಂಗಳ್ ನಿಮಿರೆ ಸೋಂಕುವಾಸೆಯೊಳನುರಕ್ತಂಗಳಾಗೆ ಪಂಚೇಂದ್ರಿಯವೃತ್ತಿಗಳ್ ಬೇಱಬೇಱೆ ರೂಪಂ ದಳೆದುವೆನಿಪಂಗುಳಿಗಳಿಂ ಮನಂಗೊಳಿಸುವ ಕರಕಮಲಂಗಳಂ ಚಂದ್ರಾಪೀಡಂ ನೀಡೆ

ಎನಸುಂ ಮುಂದೆ ನಖಾಂಶು ನಿಳ್ಕೆ ನೃಪಹಸ್ತಾನ್ವೇಷಣಂಗೆಯ್ವವೊಲ್
ನಿನಗೆನ್ನಂ ಬಿಡದುಣ್ಮುದೀ ಬೆಮರೆ ಕೈನೀರಾಗಿರಲ್ ತೋರ್ಕೆಗೊ
ಟ್ಟೆನನಂಗಾ ಪಿಡಿ ನಿನ್ನ ಕೈಯೆಡೆಯನೊಂದಿರ್ದಪ್ಪುದಿನ್ನೆನ್ನ ಜೀ
ವನವೆಂಬಂದದಿನಿಕ್ಕಿದಳ್ ನಡುಗುತಂ ತನ್ವಂಗಿ ತಾಂಬೂಲಮಂ ೮೦

ವ || ಅನಂತರಂ ಮಹಾಶ್ವೇತೆಗಂ ತಾಂಬೂಲಂಗೊಟ್ಟಳನ್ನೆಗಂ

ಸುರುಳನೆ ಸುತ್ತಿದಂತೆ ಕೊರಲೊಳ್ ಮಿಱುಗುತ್ತಿರೆ ಮೂಱು ರೇಖೆಗಳ್
ಮರಕತಕಾಂತಿಯಂ ತಳೆದು [1]ನುಣ್ಗಱಿಗಳ್ ಮಿನುಗಲ್ಕೆ[1] ವಿದ್ರುಮಾಂ
ಕುರದವೊಲೊಪ್ಪೆ ಚಂಚುಪುಟಮೊಯ್ಯನೆ ಬಂದುದು ಕನ್ಯಕಾಸಭಾಂ
ತರದೊಳಗೊಂದು ಶಾಡ್ವಲಿತ ಹರ್ಮ್ಯಮಣಿಪ್ರವರಾಂಶುಕಂ ಶುಕಂ ೮೧

ವ|| ಅಂತು ಮಂದಗತಿಯಂ ಬರ್ಪರಗಿಳಿಯ ಮುಂದೆ

ವಿಕಸಿತ ನೀಲನೀರಜದಳಂಬೊಲಿರಲ್ ಗಱಿ ಚಂಚು ಚಾರುಚಂ
ಪಕಮುಕುಳಂಬೊಲೊಪ್ಪೆ ಚರಣಂ ನವಕೇಸರದೊಂದು ದೇಸಿಯಂ
ಪ್ರಕಟಿಸೆ ಪೂವಿನಿಂ ಸಮೆದ ಪಕ್ಕಿಯಿದೆಂಬಿನಮಾಗಳೊಂದು ಸಾ
ರಿಕೆ ಪರಿತಂದುದಗ್ಗಲಿಪ ತಾಪದೆ ಗದ್ಗದಕಂಠೆಯಾಗುತಂ ೮೨

ವ|| ಅಂತು ಪರಿತಂದು ಕಾದಂಬರೀಪಾದಾಸನ್ನೆಯಾಗಿ

ಬಿಸನಕ್ಕಾಗರಮಾದಳೀಕಸೊಬಗಿಂ ಕೂರ್ತಂದದಿಂ ಮತ್ತೆ ಪ
ತ್ರಿಸಲೆಂದಾಟಿಸಿ ಬಂದಪಂ ಬಱಿದೆಯುಂ ಬೂತಾಟವಿನ್ನೇಕೆ ಮಾ
ಣಿಸು ಬನ್ನಕ್ಕೆಡೆಯಾದೆನೀ ವಿಹಗನಿಂ ನಿನ್ನಾಣೆ ನೀನಿನ್ನುಪೇ
ಕ್ಷಿಸಿದಂದೆನ್ನಯ ಜೀವಮಂ ಬಿಡದಿರೆಂ ಗಂಧರ್ವರಾಜಾತ್ಮಜೆ ೮೩

ವ|| ಎಂದು ನುಡಿಯೆ ಕಾದಂಬರಿ ಮಂದಸ್ಮಿತವದನೆಯಪ್ಪುದುಮವಿದಿತ ವೃತ್ತಾಂತೆಯಪ್ಪ ಮಹಾಶ್ವೇತೆಯಿದೇತಱಿಂ ನುಡಿದಪ್ಪುದೆಂದು ಮದಲೇಖೆಯಂ ಬೆಸಗೊಳ್ವುದುಮಾಕೆಯಿಂತೆಂದಳ್.

ಪರಿಹಾಸನೆಂಬುದಾಯಿ
ರ್ಪರಗಿಳಿ ಕಾಳಿಂದಿಯೆಂಬುದೀ ಸಾರಿಕೆಯಿಂ
ತೆರಡಕ್ಕಂ ಕಡುಕೂರ್ಮೆಯಿ
ನರಸಿಯೆ ತಾಂ ಮಾಡಿದಳ್ ವಿವಾಹೋತ್ಸವಮಂ ೮೪

ವ|| ಅಂತು ಪರಸ್ಪರರಾಗಮನಪ್ಪುಕೆಯ್ದು ಸುಖದಿಂದಮಿರಲಿಂದು ಬೆಳಗಪ್ಪಾಗಳ್ ಕಾದಂಬರೀದೇವಿಯ ತಾಂಬೂಲಕರಂಕವಾಹನಿಯಪ್ಪ ತಮಾಲಿಕೆಯೊಡನೀ ಶುಕನೇಕಾಂತದೊಳೇನಾನುಮಂ ಗಱಪುತ್ತಿರ್ದುದಂ ಕೇಳ್ದು

ಒದವಿದ ಪುರುಡಿಂದಂ ನೋ
ಡದು ನುಡಿಯದು ಪೊರ್ದದೆನಿತು ಕಾಲ್ವಿಡಿದೊಡಮೊ
ಲ್ಲದು ಕಿನಿಸಿ ಕಡುಪಿನಿಂದಂ
ನದುಗಿದಪುದು ತಿಳಿಯದೆಂತುಮಾರ್ ತಿಳಿಪಿದೊಡಂ ೮೫

1 ನುಣ್ಪೊಲೆಗಳ್ ನಸುಸೊಂಕೆ (ಅ)

ವ|| ಎಂಬುದುಮದಂ ಕೇಳ್ದು ನರೇಂದ್ರನಂದನಂ ಮಂದಸ್ಮಿತ ವದನನಾಗಿ

ಪರಿಹಾಸಕನೆಂದೆಂಬೊಂ
ದರಗಿಳಿ ಸೋಲ್ತರಸಿಯಡಪದಾಕೆಗೆ ಪಿರಿದುಂ
ವಿರಹದೆ ಬೆಂದಪುದೆಂಬುದು
ಪರೆದತ್ತಲ್ಲಿಡೆಯೊಳಂ ಪರಂಪರೆಯಿಂದಂ ೮೬

ಪರಿಹರಿಸಿ ಕಳತ್ರಮನೀ
ಪರಿಹಾಸಂ ಲಜ್ಜೆಗೆಟ್ಟು ಮಾಣದೆ ಮತ್ತಂ
ಪರಿತರೆಯುಂ ಬಾರಿಸರೆನೆ
ಪಿರಿದುಂ ದೇವಿಯರುಪೇಕ್ಷೆಯಾಗಲೆವೇಟ್ಕುಂ ೮೭

ಲೋಲಂಗೀ ವಿಹಗಂಗೀ
ಬಾಲೆಯನೀ ಮುಗ್ಧೆಯಂ ವಿಚಾರಿಸದೆಯುಮಿಂ
ತಾಲೋಕಿಸದೆಯುಮೀವುದೆ
ಕಾಳಿಂದಿಗೆ ದೇವಿ ಕೂಡಳಾಗಲೆವೇಟ್ಕುಂ ೮೮

ಸನತಿಯರೆಂಬರಲ್ತೆ ಮುಳಿಸಿಂಗುರು ಕಾರಣಮಿನ್ನವಪ್ಪಬ
ನ್ನವನವರಾರೊ ಸ್ವೈರಿಸುವರಿನ್ನೆವರಂ ಪೆಱತಾದೊಡಾಗಳೇ
ತವೆಜವದಿಂದೆ ಕಿಚ್ಚುವೊಗಲಣ್ಮದೆ ನಂಜುದಿನಲ್ಕೊಡರ್ಚಿದಿ
ರ್ಕುವೆ ಪೆಱತೇನೊ ಭಾವಿಸುವೊಡಿಂತಿದಱಿಂ ಪಿರಿದಪ್ಪ ಲಾಘವಂ ೮೯

ವ|| ಅಂತುಮಲ್ಲದೆಯುಂ

ಇಂತಪ್ಪಪರಾಧಂಗೆ
ಯುದ್ದಂ ತಾನಲ್ಲದವೊಲೆಸೆವುದೀ ಶುಕನೊಳ್ ಮ
ತ್ತಂತೊಡರ್ದು ನಿಂದುದಪ್ಪೊಡಿ
ದಂ ತೊಱೆಯದೆ ನಿಲಿಸಲಕ್ಕುಮೇ ಸಾರಿಕೆಯುಂ ೯೦

ವ|| ಎಂದು ನುಡಿಯೆ ಪರಿಹಾಸನರಸನ ಮೊಗಮಂ ನೋಡಿ

ಒಳದೊರ್ಡೆ ಪರಿಹಾಸದ ನುಡಿ
ಗಳಿವೆಂಬುದನಱಿವಳಲ್ತೆ ಸಾರಿಕೆ ಬಲ್ಲಳ್
ಮುಳಿವ ತಿಳಿವೆಡೆಯುಮಂ ಮೇ
ಣೊಳಗಾಗಳ್ ವಕ್ರಭಣಿತಿಗಳ್ಗವನಿಪತೀ ೯೧

ವ॥ ಎಂದು ನುಡಿವುತ್ತಿರ್ಪನ್ನೆಗಮೊರ್ವಂ ಕಂಚುಕಿ ಬಂದು ಗಂಧರ್ವರಾಜನುಂ ಮದಿರಾಮಹಾದೇವಿಯುಂ ನಿಮ್ಮಂ ನೋಡಲುತ್ಕಂಠಿತರಾಗಿ ಕರೆಯಲಟ್ಟಿದರೆಂಬುದಂ ಮಹಾಶ್ವೇತೆ ಪೋಗಲುದ್ಯೋಗಗೆಯ್ದ ರಸಂಗಿಕ್ಕೆದಾಣಮಾವುದೆಂದು ಕಾದಂಬರಿಯಂ ಬೆಸಗೊಳ್ವುದುಮಾಕೆಯಿಂತೆಂದಳ್.

ಮೊದಲೀಯರಸನನಾಂ ಕಾ
ಣ್ಬುದುಮೆನ್ನಯ ತನುವುಮೆನ್ನದಲ್ತೆನೆ ಮನೆಯಾ
ರದು ನೃಪತಿಗೆಲ್ಲಿ ಬಗೆಬ
ರ್ಪುದಾವೆಡೆ ಭವನ್ಮನೋಜ್ಞಮಲ್ಲಿಯೆ ನಿಲಿಸಿಂ ೯೨

ವ॥ ಎಂಬುದುಂ ಮಹಾಶ್ವೇತೆ ನಿಜಪ್ರಾಸಾದಸಮೀಪವರ್ತಿಯಪ್ಪ ಪ್ರಮದವನ ಕೇಳೀಶೈಲದ ರತ್ನಭವನದಲರಸನಿರ್ಕೆಂದು ಪೇಟ್ದು ಚೈತ್ರರಥನಂ ಕಾಣಲ್ಕೆ ಪೋದಳಿತ್ತಲಾ ಕಾಂತೆಯ ಪಿಂತನೆ ಚಂದ್ರಾಪೀಡಂ ವಿನೋದಾರ್ಥಂ ಕಾದಂಬರಿಯ ಬೆಸದಿಂ ಪ್ರತೀಹಾರಪ್ರೇಷಿತೆಯರಪ್ಪ ವೇಣುವೀಣಾವಾದ್ಯನಿಪುಣೆಯರುಂ ಗೀತಕಲಾಕುಶಲೆಯರುಂ ದುರೋದರಕ್ರೀಡಾರಾಗಿಣಿಯರುಂ ಚಿತ್ರಕರ್ಮಚತುರೆಯರುಂ ಸುಭಾಷಿತಪಠಣಪರಿಣತೆಯರುಂ ಎನಿಸಿದ ಕನ್ನಿಕೆಯರೊಡನೆ ಕೇಯೂರಕೋಪದಿಶ್ಯಮಾನಮಾರ್ಗನಾಗಿ ಕೇಳೀಶೈಲಮಣಿಭವನಕ್ಕೆ ಬಿಜಯಂಗೆಯ್ದನನ್ನೆಗಮಿತ್ತಲ್ ಗಂಧರ್ವರಾಜಪುತ್ರಿ ವಿಸರ್ಜಿತ ಸಕಲಸಖೀಜನೆಯುಂ ಪರಿಮಿತಪರಿಚಾರಕಾನುಗಮ್ಯಮಾನೆಯುಮಾಗಿ ತನ್ನ ಕನ್ನೆಮಾಡಮನೇಱಿ ಶಯ್ಯಾತಳದೊಳ್ ಮೆಯ್ಯನಿಕ್ಕಿ ತನ್ನಂ ತಾನಱಿಯದಲೆ ಚಪಲೆ ನೀನಿದಾವಕಜ್ಜಕುಜ್ಜುಗಂಗೆಯ್ದೆಯೆಂದು ಲಜ್ಜೆಯಿಂ ತರ್ಜಿತೆಯಾದಂತೆಯುಂ ಗಂಧರ್ವರಾಜನಂದನೆ ನಿನಗಿದಾವಯುಕ್ತಮೆಂದು ವಿನಯಮೆ ತನ್ನನುಪಾಲಂಭನಂಗೆಯ್ವಂತೆಯುಂ ಬಾಲೆ ನಿನ್ನ ಬಾಲಭಾವಮೆತ್ತವೋದುದೆಂದು ಮುಗ್ಧತೆಯೆ ತನ್ನಂ ಹಾಸ್ಯಮಾಡಿದಂತೆಯುಂ ಕುಲಕನ್ನೆಯರ್ಗಿದನ್ನೆಯಮೆಂದು ಮಹತ್ವಮೆ ಗರ್ಹಿಪಂತೆಯುಂ ದುರ್ವಿನೀತೆ ವಿನಯಂಗೆಟ್ಟೆಯೆಂದಾಚಾರಮೆ ತನ್ನಂ ಜಡಿವಂತೆಯುಂ ಮೂಢೆ ಮದನನಿಂ ಲಘುವಾದೆಯೆಂದಾಭಿಜಾತ್ಯಮೆ ತನ್ನನನುಶಾಸಿಪಂತೆಯುಂ ನಿನಗೆ ತರಳತೆಯಿದೆತ್ತಣಿಂ ಬಂದುದೆಂದು ಧೈರ್ಯಮೆ ಧಿಕ್ಕರಿಸುವಂತೆಯುಂ ಅತಿಲಜ್ಜಿತೆಯಾಗಿ ತನ್ನೊಳಿಂತೆಂದಳ್.

ಮನಮಱಿಗುಂ ನರೇಂದ್ರಸುತನೆಂದಿನಿಸಳ್ಕಿನೆ ಸುತ್ತಲುಂ ಸಖೀ
ಜನಮಿರೆಯುಂ ವಿಚಾರಿಸೆನೆ ದುಃಖದೊಳಕ್ಕನಿರಲ್ಕೆ ಲಜ್ಜೆಗಾ
ಯೆನೆ ಗುರುಗಳ್ಗೆ ಬೆಳ್ಕಱಿನೆ ಚೇಟಿಕೆಯರ್ ನೆರೆದಿರ್ದರೆಂಬಿದಂ
ನೆನೆಯೆನೆ ಕೆಟ್ಟೆನೇನನಿರದಿಂತುಟು ವಿಭ್ರಮದಿಂದೊಡರ್ಚಿದೆಂ ೯೩

ಕಿಱುಗೂಸುಗಳುಂ ಮೊದಲಾ
ಗಱಿಂದಪರಿನೆ ಮದನಹತಕನಿಂದಂ ನೆಱೆ ಮು
ನ್ನಱಿವೋದಕ್ಕಂ ತಾಂ ಪೇ
ಟಿಱಿಯಳೆ ಮುನ್ನಮೆ ಮದೀಯ ಧೈರ್ಯಚ್ಯುತಿಯಂ ೯೪

ಏನೆಂಬರೊ ತಾಯ್ತಂದೆಯ
ರೇನಂ ಗಂಧರ್ವಲೋಕಮೆಂಗುಮೊ ಕೇಳ್ದಂ
ತೇನೆಂಬೆನದೇಗೆಯ್ದಪೆ
ನೇನೆವದಿಂ ಮಱಿಸಿದಪ್ಪೆನೆನ್ನಯ ತಪ್ಪಂ ೯೫

ತನುವಂ ತೆಯ್ದಪ್ಪಳಕ್ಕಂ ಬ್ರತದೊಳೆನುತೆ ಕನ್ಯಾಬ್ರತಕ್ಕಂತೆ ಪೂಣ್ದೆ
ರ್ದನದಂ ಕೇಳ್ದಿರ್ದರಂತೆನ್ನಯ ಕೆಳದಿಯರಾಮಾರ್ಗದಿಂದಂತೆ ಕೇಯೂ
ರನ ಕೆಯ್ಯೊಳ್ ಮುಂ ಮಹಾಶ್ವೇತೆಗೆ ಮಿಗೆ ನುಡಿದಾನಟ್ಟಿಯುಂ ಮತ್ತಿದೇನೆಂ
ಬೆನೊ ಬಂದತ್ತೆತ್ತಣಿಂದೆಂದಱಿಯೆನೆನಗೆ ಮತ್ಪಾಪದಿಂ ವಿಪ್ರಲಂಭಂ ೯೬

ಪೆಱತಂತಿರ್ಕೆಂದುಂ ಕೇ
ಳ್ದಱಿಯೆಂ ಕಂಡಿಱಿಯೆನರಸನೆಂದಾರೆಂದಾ
ನಱಿಯೆಂ ನಾಣ್ಗೆಡುವಿನಮೀ
ತೆಱದಿಂದೆನ್ನಂ ವಿಡಂಬಿಸಲ್ಕೊಡರಿಕುಮೆ ೯೭

ಮುನಿಸಿಂ ಮನ್ಮಥನಸ್ತ್ರಪಂಜರದೊಳಿಟ್ಟೆನ್ನಂ ನೃಪಂಗೊಪ್ಪುಗೊ
ಟ್ಟನೊ ತದ್ದರ್ಶನಮಾತ್ರದಿಂ ಗುಣಪಣಕ್ಕಾನಾವಗಂ ಮಾಱುವೋ
ದೆನೊ ರಾಗೋದಯಮೆನ್ನನೋವದೆಳದೊಯ್ದೇಂ ತೊಳ್ತುಗೊಟ್ಟೆತ್ತೊ ಭೋ
ಕೆನಲೆನ್ನಿಂದ್ರಿಯಸಂಕುಲಂ ಪಿಡಿದು ತಂದೇಂ ಕಟ್ಟಿ ಮುಂದಿಟ್ಟುದೋ ೯೮

ನೋಡಿದನಿತಱೊಳೆ ಚಂದ್ರಾ
ಪೀಡಂ ಸಂತಾಪದೊದವನೆನಗಿಂತೀಗಳ್
ಮಾಡಿದನಾತನ ದೆಸೆಯಂ
ನೋಡಲ್ಕಂಜುವೆನೆನುತ್ತೆ ಚಿಂತಿಸುವಿನೆಗಂ ೯೯

ವ॥ ನೀನಿಂತು ಪುಸಿಸ್ವೈರಣೆಯನೊಡರ್ಚುವೊಡಿಂ ಪೋದಪೆನೆಂದಂತರ್ಗತನಪ್ಪ ಚಂದ್ರಾಪೀಡನಿಂ ಪರಿಹಸಿತೆಯಾದಂತೆಯುಂ ಆತನಂ ಪ್ರಕ್ಷಾಳಿತಲೋಚನೆಯಾಗಿ ಮಗುೞೆ ನೋಡಿ ಕೃತಾರ್ಥೆಯಾಗೆಂದು ಬಾಷ್ಪದಿಂದಭಿಹಿತೆಯಾದಂತೆಯುಂ ನಿನ್ನ ಧೈರ್ಯಾವಲೇಪಮಂ ಪ್ರಾಣಂಬೆರಸು ತೆಗೆಯದೆ ಮಾಣೆನೆಂದು ಮನೋಭವನಿಂ ನಿರ್ಭರ್ತ್ಸಿತೆ

ಯಾದಂತೆಯುಂ ಯುವರಾಜಾಭಿಮುಖಹೃದಯೆಯಾಗಿ ಮನಂಗೊಟ್ಟತಿಪ್ರೇಮವಶದಿ ನಸ್ವತಂತ್ರೀಕೃತೆಯುಂ ಪರವಶೀಭೂತೆಯುಮೆನಿಸಿ ಭೋಂಕನೆಟ್ಟು ಮಣಿಮಯಗವಾಕ್ಷ ನಿಕ್ಷಿಪ್ತಮುಖಿಯಾಗಿ ನೃಪರೂಪಚಂದ್ರನಿರ್ದ ಕೇಳೀಪರ್ವತಮನೆ ನೋಡುತಿರ್ದು

ಆನಂದಾಶ್ರುಜಲವ್ಯವ
ಧಾನಕ್ಕುಮ್ಮಳಿಸಿದಂತೆವೊಲ್ ಕಣ್ಮಲರಿಂ
ದಾ ನೃಪನಂ ನೋಡದೆ ಕಮಲಾ
ನನೆ ನೆನಪಿನೊಳೆ ಪದೆದು ನೋಡುತ್ತಿರ್ದಳ್ ೧೦೦

ಬೆರಲ ಬೆಮರಿಂದೆ ನಾಂದಪು
ದಿರದಿನಿಸೆಂಬಂತೆ ಚಿತ್ರತೂಲಿಕೆಯಿಂದಂ
ಬರೆಯದೆ ಕಾಮಿನಿ ವಿದ್ದಂ
ಬರೆದಳ್ ಚಿಂತೆಯೊಳೆ ಮನುಜಮಕರಧ್ವಜನಾ ೧೦೧

ಪುದಿದ ಪುಳಕಂಗಳಡ್ಡೈ
ಸದಿರವೆನುತ್ತಂಜಿದಂತೆ ನಳಿತೋಳ್ಗಳಿನ
ಪ್ಪದೆ ಕಾಂತೆ ಹೃದಯದಿಂದ
ಪ್ಪಿದುಳುತ್ಸುಕೆಯಾಗಿ ಮನುಜಮಕರಧ್ವಜನಾ ೧೦೨

ತಡವಾದಪುದುಟೀಂದರನೀ
ಯೆಡೆಗೆ ನಿಯೋಜಿಸಲಿಕೆಂಬವೊಲ್ ನೃಪವರನಿ
ರ್ದೆಡೆಗೆ ನಿಯೋಜಿಸಿದಳ್ ಬಿಡ
ದೆಡೆಯಾಡುವ ಬೆಸಕೆ ಕನ್ನೆ ತನ್ನಯ ಮನಮಂ ೧೦೩

ವ॥ ಇತ್ತಲ್ ಚಂದ್ರಾಪೀಡಂ ಕ್ರೀಡಾಪರ್ವತದ ಮಣಿಮಯಭವನದೊಳ್

ಅಡಿಯೊತ್ತಲ್ ಕೇಯೂರಕ
ನೆಡೆಯಱಿದೋಲೈಸೆ ಕನ್ಯಕಾಸಂಕುಳಮಂ
ದಡಕಿಲ್ಗೊಂಡೊಪ್ಪುವ ಕೌ
ಳುಡೆಯಿಂ ಸೊಗಯಿಸುವ ಪಾಸಿನೊಳ್ ಪಟ್ಟಿರ್ದಂ ೧೦೪

ವ॥ ಇಂತು ಗಂಧರ್ವರಾಜನಂದನೆಯ ನೆಗಟ್ಚಿಗೆ ಡೋಲಾಯಮಾನಚಿತ್ತನಾಗಿ ತನ್ನೊಳಿಂತೆಂದಂ

ಕುಸುಮಶರಾಸ್ತ್ರಪುಷ್ಪರಜದಿಂ ಪೊರೆದಂತಿರೆ ಬಾಷ್ಪವಾರಿಗಳ್
ಪಸರಿಸೆ ರಾಗವಗ್ಗಲಿಸೆ ಚಾರುಚಲನ್ನಯನತ್ರಿಭಾಗದಿಂ
ಕುಸಿಕುಸಿದೆನ್ನನೀಕ್ಷಿಸುವಳಾನಿನಿಸೀಕ್ಷಿಸಲಾ ಲತಾಂಗಿ ಲ
ಜ್ಜಿಸಿ ತನುವಂ ನಿಜಸ್ಮಿತಸಿತಾಂಶುಕಪಲ್ಲವದಿಂ ಮುಸುಂಕುವಳ್ ೧೦೫

ವ || ಮತ್ತಮಾ ಕಾಂತೆ ಲಜ್ಜಾನತವದನೆಯಾಗಿ ಪ್ರತಿಬಿಂಬಮಾದೊಡಂ ನೆಲಸುಗೆಂಬಂತೆ ಕಪೋಲಮಣಿದರ್ಪಣಮಂ ಸಮರ್ಪಿಸಿಯುಮೆನಗೆ ತಂಬುಲಂಗೊಡಲುಜ್ಜುಗಂಗೆಯ್ವಲ್ಲಿ ನಡುಗುವ ಕೆಂದಳಮಂ ಚನ್ನೈದಿಲ್ಗೆತ್ತೆಱಗುವ ಮಱಿದುಂಬಿಯ ಬಂಬಲಿಂ ತಮಾಲಪಲ್ಲವಮಂ ಪಿಡಿದು ತನ್ನ ಬಿಂದುವಿಡುವ ಮೊಗದಬೆಮರಂ ಬೀಸುವಂತೆಯುಮಿರ್ದಳಿವೆಲ್ಲವೇನೆಂದು ತನ್ನೊಳಗೆ ಬಗೆಯುತ್ತಮಿಂತೆಂದಂ

ಉದಕಾಂತಃಪಾತಿವೊಲ್ ಸ್ನೇಹದ ಲವಮೆನಸುಂ ಪರ್ವಿ ಮದ್ಯೌವನೋದ್ಯ
ನ್ಮದದೊಳ್ ತೋಱುತ್ತಮಿರ್ದಪ್ಪುದು ಕನಸಿನವೋಲೆನ್ನ ತತ್ಕಾಂಕ್ಷೆ ಕೈಸಾ
ರದುದಂ ತೋಱುತ್ತಮಿರ್ದತ್ತೆನಗೆ ಪಿರಿದುಮೀ ಚಿತ್ರದೊಂದಾಸೆ ದಲ್ ಮಾ
ಯದ ಕುಂಚಂಬೊಲಸಂಭಾವ್ಯಮನೆ ದಿಟಮೆನಲ್ ತೋಱುತಿರ್ದಪ್ಪುದೀಗಳ್ ೧೦೬

ಪಸರಿಸಿ ಮಿಥ್ಯಾಸಂಕ
ಲ್ಪಸಹಸ್ರದಿನಾಸೆವಡಿಸುತಿರ್ಪುದು ಕಿಱುವಾ
ನಿಸಿಕರ್ಕಳಲ್ಲಿ ಸಾಜದೊ
ಳೆ ಸುಲಭಮೆನಿಸಿರ್ದ ಮದನಲಾಘವಮೀಗಳ್ || ೧೦೭

ವ || ಎಂದು ಭಾವಿಸುತ್ತಮಿರ್ದು

ಎನಿಗಿನಿತು ಚಿಂತೆಯೇಕೆ ಗ
ಡೆನಗದೆ ದಿಟಮಪ್ಪುದಾದೊಡಪ್ರಾರ್ಥಿಮಾ
ವನಿತೆಯ ಮನಮಂ ಪ್ರಕಟಿಸಿ
ಮನೋಭವಂ ತಾನೆ ಕಳೆದಪಂ ಸಂದೆಯಮಂ || ೧೦೮

ವ || ಎಂದವಧಾರಿಸಿ ಶಯನತಳದೊಳ್ ಕುಳ್ಳಿರ್ದು ಕನ್ಯಕೆಯರೊಡನೆ ನೆತ್ತದೊಳಂ ವೀಣಾವಾದ್ಯದೊಳಂ ಸ್ವರಸಂದೋಹವಿವಾದದೊಳಂ ಸುಭಾಷಿತಗೋಷ್ಠಿಯೊಳಂ ಪಲವುಂ ಸುಕುಮಾರಂಗಳಪ್ಪ ವಿಲಾಸಂಗಳಿಂ ಕ್ರೀಡಿಸುತ್ತಮಿರ್ದು ಪೊಱಮಟ್ಟು ಪವನಾಲೋಕನ ಕುತೂಹಲಿತಮಾನಸನಾಗಿ ಕ್ರೀಡಾಪರ್ವತಮನೇಱಿದ ಯುವರಾಜನಂ ನೋಡಿ

ನೋಡಲೊಡಂ ಮನಂ ಬೆದಱೆ ಕಲ್ಲೆರ್ದೆಯಂ ಕಡುಪಿಂದೆ ಕಾಮನೇ
ಸಾಡೆ ಲತಾಂಗಿ ನೊಂದಿನಿಸುಮಲ್ಲಿರದಕ್ಕನ ಬರ್ಪ ಬಟ್ಟೆಯಂ
ನೋಡುವಮೇಱುಮೆಂದು ಪರಿಚಾರಿಕೆಯರ್ ಬೆರಸಾಗಳೇಱಿದಳ್
ಮಾಡಮನದ್ರಿರಾಜಸುತೆ ತಾರನಗೇಂದ್ರಮನೇಱುವಂದದಿಂ ೧೦೯

ವ || ಅಂತು ಸೌಧತಳಮನೇಱಿ ಪರಿಮಿತಪರಿಜನೆಯಾಗಿರ್ದಲ್ಲಿ

ತೊಳತೊಳತೊಳಗುವ ಬೆಳ್ದಿಂ
ಗಳ ಪಕ್ಕದೆ ಪೊಳೆವ ರಶ್ಮಿಜಾಲವಿದೆನೆ ಕೋ
ಮಳೆಯ ಸಿತಚ್ಛತ್ರದ ಕೆಲ
ದೊಳದೇನೊಪ್ಪಿದುವೊ ಧವಳ ಚಮರರುಹಂಗಳ್ ೧೧೦

ನೆರೆದು ಸಹಜಾಮೋದಕ್ಕೆಟ್ಟಿಂದು ತುಂಬಿಯ ಬಂಬಲಾ
ವರಿಸಲೆನಸುಂ ತನ್ನಂ ನೀಲಾಂಬರಚ್ಛದೆಯಾಗಿ ಸುಂ
ದರಿ ಪಗಲೊಳುಂ ಚಂದ್ರಾಪೀಡಾಭಿಸಾರಣವೇಷಮಂ
ಪಿರಿದುಮೊಲವಿಂದಭ್ಯಾಸಂಗೆಯ್ಯುತಿರ್ಪವೊಲೊಪ್ಪಿದಳ್ ೧೧೧

ವ|| ಅದಲ್ಲದೆಯುಂ

ಚಮರರುಹಾಗ್ರಮಂ ಪಿಡಿದು ಬೀರ್ಚುತಮಿರ್ಪ ಸಿತಾತಪತ್ರದಂ
ಡಮನವಲಂಬಿಸಿರ್ಪಡಪದಾಕೆಯ ಮುಯ್ಯಿನ ಮೇಲೆ ಹಸ್ತಯು
ಗ್ಮಮನೊಸೆದಿಕ್ಕುತಿರ್ಪ ಮದಲೇಖೆಯನಟ್ಟಿಱಿನಪ್ಪುತಿರ್ಪ ಗೆ
ಯ್ತಮನೆನಿತಾನುಮುಣ್ಮಿದುವವಳ್ಗಿದಿರೊಳ್ ನೃಪರೂಪಚಂದ್ರನಾ ೧೧೨

ವ|| ಅದಲ್ಲದೆಯುಂ

ಕೆಳದಿಯನಾಗಳ್ ಕರ್ಣೋ
ತ್ಪಳದಿಂದಂ ಮೋದೆ ತಪ್ಪಿಸಲ್ ಪರಿವಳ ಬೆ
ನ್ನೊಳೆ ಪರಿವಳಿರದೆ ನಗುತಂ
ನಳಿನಾನನೆ ಲೀಲೆಯಿಂದಮೊಂದೆರಡಡಿಯಂ ೧೧೩

ವ|| ಅಂತು ಪಲತೆಱದೆ ನೆಗಱುತ್ತಮಿರ್ದಳಲ್ಲಿ

ವನಿತೆ ಮನೋಹರನಂ ತಾ
ನನುರಾಗದೆ ನೋಡುತಿರ್ಪ ತನ್ನುಮನಾತಂ
ಮನಮೊಸೆದು ನೋಡುತಿರ್ಪುದ
ಱಿನಾಗಳಣಮಱಿದಳಿಲ್ಲ ಪೊೞ್ತಿನ ಪವಣಂ ೧೧೪

ವ|| ಆಗಳೊರ್ವ ಪಡಿಯರತಿ ಮಹಾಶ್ವೇತೆ ಬಂದಳೆಂದು ಬಿನ್ನವಿಸೆ ಮಾಡದಿಂದಿೞಿದು ಮಹಾಶ್ವೇತಾನುರೋಧದಿಂದಮೆಂತಾನುಂ ಮಜ್ಜನಭೋಜನಾದಿ ದಿವಸ ವ್ಯಾಪಾರಮಂ ಮಾಡಿದಳಿತ್ತ ಚಂದ್ರಾಪೀಡನುಂ ಕ್ರೀಡಾಪರ್ವತದಿಂದಿೞಿದು ಸ್ನಾನ ದೇವತಾರ್ಚನಭೋಜನಾದಿದಿವಸವ್ಯಾಪಾರಮಂ ತೀರ್ಚಿ ತದನಂತರಂ ಕೃತಕಾಚಲದ ತಪ್ಪಲಲ್ಲಿ

ಹರಿಣೀರೋಮಂಥಫೇನಪ್ರಸೃತಕಣಲವಾಸಾರದಿಂ ನಾಂದು ಯೋಷಿ
ಚ್ಚರಣಾಲಕ್ತಾಂಶುವಿಂ ಕೆಂಪಡರ್ದು ಲತೆಯ ಬಾಳ್ಗೊಂಪದಿಂದೊಪ್ಪಿ ಪುಷ್ಪೋ
ತ್ಕರರೇಣುಸ್ತೋಮದೊಳ್ ತಳ್ತ ಚಲಿತಯಮುನಾವಾರಿವಿಸ್ತಾರಮಂ ಮಾಂ
ಕರಿಸಲ್ ಸಾಲ್ದಿರ್ದ ಹಾರೀತಕ ಹರಿತಶಿಲಾಪಟ್ಟದೊಳ್ ಭೂಪನಿರ್ದಂ ೧೧೫

ವ|| ಅಂತಾ ಸಮಯದೊಳ್

ಬಿಸಿಲೆಲ್ಲಂ ಬಿಸನಾಳಜಾಲಕದಿನಾಗಳ್ ಕೂಡೆ ಪೀರ್ತಂದುದಾ
ಗಸಮೆಲ್ಲಂ ಸುಧೆಯಿಂದೆ ಲೇಪಿಸಿದುದುರ್ವೀಚಕ್ರಮೆಲ್ಲಂ ಪಯಃ
ಪ್ರಸರಾಪೂರದೆ ತೇಂಕಿದತ್ತು ದೆಸೆಯೆಲ್ಲಂ ಚಂದನಾಸಾರದಿಂ
ಮುಸುಕಿತ್ತೆಂಬಿನಮೊಂದು ಬೆಳ್ವೆಳಗು ಪರ್ವಿತ್ತೆಯ್ದೆ ರೋದೋಂತಮಂ ೧೧೬

ವ|| ಅಂತು ಪಸರಿಸುವ ಬೆಳಗಿನ ಬಳಗಮಂ ನೋಡಿ

ಪರಿಭಾವಿಸಲಾರ್ಗಂ ತಾ
ನರಿದಾಯ್ತೊರ್ಮೊದಲೆ ಚಂದ್ರನುದಯಿಸಿದನೊ ಪೇೞ್
ಸುರಸಿಂಧು ಗಗನಮಂ ಶೀ
ಕರನಿಕರದೆ ಸಿಂಪಿಸುತ್ತೆ ಧರೆಗಿೞಿದಪುದೋ ೧೧೭

ವ|| ಎಂದತಿಕುತೂಹಲಂಬೆರಸು ಬೆಳಗಿನ ಬರ್ಪದೆಸೆಯಂ ನೋಳ್ಪಿನಮಾಗಳಿರ್ಪಿಂ ಪೊರೆದ ದುಗುಲದಿಂ ಬಾಸಣಿಸಿ ಚಂದನಾನುಲೇಪಂ ತೀವಿದ ಸಿಪ್ಪಂ ಪಿಡಿದು ಕಯ್ಗೊಟ್ಟು ನಡೆವ ಪಡಿಯರತಿಯುಂ ಮಾಲತೀಕುಸುಮಮಾಲಿಕೆಯುಂ ಪಿಡಿದ ತಮಾಳಿಕೆಯುಂ ಸುಯ್ಯೆಲರಿಂ ಪಾಱದಪುವೆನಿಪ ದುಕೂಲಂಗಳಂ ಪಿಡಿದು ನೆಲನನುಪ್ಪೞಿಪ ಕೇಯೂರಕನುಮೊಡವರೆ ಕನ್ಯಕಾಪರಿವೃತೆಯುಂ ಛತ್ರಚಾಮರವಿರಾಜಿತೆಯುಮಾಗಿ ಮದಲೇಖೆ ಬರುತಿರ್ದಳಾಕೆಯ ಕೆಲದೊಳ್ ಬರ್ಪ ತರಳಿಕೆಯ ಕಯ್ಯ ಸಿತಾಂಶು ಕಾಚ್ಛಾದಿತ ರತ್ನಮಯಪಟಲಕದೊಳ್

ಪೊಳೆವೆಳದಿಂಗಳೊಳ್ಮುೞುಗಳಿಂ ಸುರಸಿಂಧುವ ಶೀಕರಂಗಳಿಂ
ಜಳನಿಧಿಯಲ್ಲಿ ಮಾರ್ಪೊಳೆವ ತಾರೆಗಳಿಂ ಸಮೆದಂತೆ ಶಾರದಂ
ಗಳ ಜಸದೇೞ್ಗೆ ಲಕ್ಷ್ಮಿಯ ಮುಗುಳ್ನಗೆ ಜೊನ್ನದ ಬಾೞ್ಕೆ ರತ್ನಸಂ
ಕುಳದಧಿದೈವಮೆಂದೆಸೆದುದುಜ್ಜ್ವಳಮೌಕ್ತಿಕಹಾರಮಂಡಲಂ ೧೧೮

ವ॥ ಅದಂ ಕಂಡು

ಎಲೆ ಚಂದ್ರಾತಪರುಚಿಯಂ
ಗೆಲೆವಂದೀ ಧವಳಿಮಕ್ಕೆ ಕಾರಣಮೀ ನಿ
ರ್ಮಳತಾರಹಾರಮಿಂತೀ
ಗಳೆಂದು ಬಗೆದಂ ನರೇಂದ್ರನಂದನನಾಗಳ್ ೧೧೯

ವ॥ ಅಂತು ಬಗೆಯುತ್ತಮಿರ್ದು

ಮದಲೇಖೆಯು ಬರಮಂ ಕಂ
ಡಿದಿರೇೞ್ವುದುಮಾಕೆ ವಿನಯದಿಂ ತನ್ನ ಪದಾ
ಬ್ಜದ ಮೇಲೆ ಮುಟ್ಟಿಲೊದವಿದ
ಪದಪಿಂ ತೆಗೆದೆತ್ತಿ ನೃಪಸುತಂ ಮನ್ನಿಸಿದಂ ೧೨೦

ವ॥ ಅಂತು ಮದಲೇಖೆಯಂ ಪರ್ಯಂಕದೊಳ್ ಕುಳ್ಳಿರವೇೞ್ದು ನೃಪರೂಪಚಂದ್ರಂ ಸಿಂಹಾಸನದೊಳ್ ಕುಳ್ಳಿರ್ಪುದುಮಾ ಕಾಂತೆ ತಾನೆೞ್ದು ಮಲಯಜಾನುಲಿಪ್ತದೇಹನುಮಂ ಮಾಲತೀಕುಸುಮದಾಮಶೇಖರನುಮಂ ಮಾಡಿ ದುಕೂಲಂಗಳನುಡೆಕೊಟ್ಟು ಹಾರಮಂ ಪಿಡಿದುಕೊಂಡಿತೆಂದಳ್

ಮನಮೊಲ್ದೀ ಮಧುರೋಕ್ತಿಗಾರೆಳಸರೀ ಮೆಲ್ಪಿಂಗದಾರ್ ಮೆಚ್ಚರೀ
ವಿನಯಕ್ಕಾರೊಳಗಾಗರೀ ರುಜುಗುಣಕ್ಕಾರ್ಕೂರರೀ ನಿನ್ನ ಪೆಂ
ಪಿನ ಬಿಣ್ಪಿಂಗದಾರ್ ಮರುಳ್ಗೆಳಸರೀ ಸನ್ಮೂರ್ತಿಗಾರ್ ನೆಟ್ಟನಾ
ಳ್ತನದೊಳ್ ನಿಲ್ಲದರೀ ಮನೋಹರತೆಗಾರ್ ಸೋಲರ್ ಮಹೀವಲ್ಲಭಾ ೧೨೧

ಭುವನತ್ರಯಾಂತರಾಳ
ಪ್ರವಿದಿತ ನಿಜಮಹಿಮನೆನಿಪ ನಿನಗೇನಂ ಮಾ
ಡುವೆನೆಂತವೆಲ್ಲಮಾವಗ
ಮವಿನಯಮೆಂಬಂತೆ ತೋಱುತಿರ್ದಪುವೀಗಳ್ ೧೨೨

ಮೊದಲೊಳ್ ಸಂಭಾಷಣಂಗೆಯ್ವುದೆ ವಲವಿಱುಕೆಯ್ವಂದಮೊಂದಾದರಂಗೆ
ಯ್ವುದಹಂಕಾರಂ ಸ್ತವಂಗೆಯ್ವುದಪೆಮೆಗೆ ದಲ್ ಗೌರವಂ ಬಿನ್ನಪಂಗೆ
ಯ್ವುದೆ ಧಾರ್ಷ್ಟ್ಯಂ ಸೇವೆಯುಂ ಚಾಪಲಮುಪಕರಣಂ ಕೃತ್ರಿಮಂ ಪ್ರೀತಿಯಂ ಮಾ
ೞ್ಪುದನಾತ್ಮಜ್ಞತ್ವಮಾಮೀವುದೆ ವಿಭವದ ಗರ್ವಂಬೊಲಾದಪ್ಪುದೀಗಳ್ ೧೨೩

ಹೃದಯಮನೊಪ್ಪುಗೊಂಡ ನಿಮಗಿಂ ಮಗುೞ್ದಂ ಕುಡುವೊಂದು ವಸ್ತುವಾ
ವುದೊ ಗಡ ಜೀವಿತೇಶ್ವರರೆನಿಪ್ಪವರ್ಗಂ ಪ್ರತಿಪಾದ್ಯಮಪ್ಪುದಾ
ವುದೊ ಬರವಿಂದೆ ಮಾಡಿದುಪಕಾರಮನಿನ್ನದನೇತಱಿಂದೆ ನೀ
ಗಿದಪೆನೊ ಯೆಂದು ಚಿತ್ರರಥನಂದನೆ ತೋಱಿಸಿದಪ್ಪಳಕ್ಕಱಿಂ ೧೨೪

ಕನ್ನೆ ನಿಜಜೀವಿತಮುಮಂ
ತನ್ನುಮನಿರದಿತ್ತು ತೊೞ್ತುತನಮಂ ತಾಂ ಕೊಂ
ಡುಂ ನೆಱೆಯಳ್ ಸುಜನರ್ಗಿ
ನ್ನಿನ್ನನ್ನರ್ಗೇನ ಮಾಡಿಯುಂ ತಣಿವುಂಟೆ ೧೨೫

ವ॥ ಅದಱ ನಿಂಗಡಲ ಕಡೆಪದೊಳೊಗೆದ ನೂತ್ನರತ್ನಂಗಳೊಳೀ ಹಾರಮೇ
ಶೇಷಮಪ್ಪುದಱಿಂ ಶೇಷವೆಂಬ ಪೆಸರೆಸೆಯೆ

ವರುಣಂಗಿತ್ತಂ ರತ್ನಾ
ಕರನಂತಾವರುಣನಕ್ಕಱಿಂದಿತ್ತಂ ಚಿ
ತ್ರರಥಂಗೆ ಕೂರ್ಮೆಯಿಂ ಚಿ
ತ್ರರಥಂ ನಿಜತನುಜೆಗಿತ್ತನಿದನವನಿಪತೀ ೧೨೬

॥ವ ಇಂತಿದನಾ ಕಾದಂಬರೀ ದೇವಿ

ಹಾರಂಗಳೊಳೆಸೆವೀ ಮಣಿ
ಹಾರಂ ಮದನಾವತಾರಮೆನಿಸಿದ ನಿನ್ನಾ
ಕಾರಕಣೆಯಕ್ಕುಮೆಂದವ
ಧಾರಿಸಿ ತಾಂ ನಿಮಗೆ ಕುಡುವೆನೆಂಬೀ ಬಗೆಯಿಂ ೧೨೭

ಪೊಳೆವ ಸುಧಾಸೂತಿ ನಭ
ಸ್ಥಳದೊಳ್ ಕಣ್ಗೊಳಿಪ ತೆಱದೆ ಯುವರಾಜನುರ
ಸ್ಥಳದೊಳ್ ಮುಕ್ತಾವಳಿ ಕ
ಣ್ಗೊಳಿಸುಗುಮೆಂದಕ್ಕಱಿಂದಮಟ್ಟಿದಳೀಗಳ್ ೧೨೮

ಆಭರಣದ ಪೊಱೆಯಂ ತಳೆ
ವಾಭರಣಪ್ರಿಯರ ತೆಱವೆ ಸದ್ಗುಣಗಣರ
ತ್ನಾಭರಣರ್ ನಿಮ್ಮೊಂದಿಗ
ರಾಭರಣದ ಪೊಱೆಯನೇಕದಂ ಪೊತ್ತಿರ್ಪರ್ ೧೨೯

ವ॥ ಆದೊಡಂ ನಿಮಗಿದು ಪ್ರೀತಿಯಿನೆ ಭಾವಿಸಲ್ವೇೞ್ಪುದಪ್ಪುದಲ್ಲದೆಯುಂ

ಸಿರಿಯೊಡನೆ ಪುಟ್ಟಿ ತಂದಾ
ಹರಿ ಕೌಸ್ತುಭವೆಂಬ ಕಲ್ಲಮುಱಿಯುಮನತ್ಯಾ
ದರದಿಂದೆಂದುಂ ತಾನಾ
ಗುರದೊಳ್ ತಳೆದಿರ್ಪನೇಕೆ ನೀವಱಿಯದುದೇ ೧೩೦

ವ॥ ಆದಱಿಂ ನಾರಾಯಣಂಗಂ ನಿಮಗಂ ಲಕ್ಷ್ಮಿಗಂ ಕಾದಂಬರಿಗಂ ಕೌಸ್ತುಭಕ್ಕಂ ಶೇಷಾಭಿದಾನಹಾರಕ್ಕಂ ವಿಶೇಷಮೇನುಮಿಲ್ಲಮಾಗಿ ಕಯ್ಕೊಂಡು ಕಾದಂಬರೀಪ್ರಣಯಕ್ಕೆ ನಿಮಿರ್ಕೆಯಂ ಮಾೞ್ಪುದೆಂತಾನುಂ ಕಯ್ಕೊಳ್ಳದಿರಲಾಕೆ ಭಗ್ನಪ್ರಣಯೆಯಾದಪ್ಪಳಪ್ಪೊಡೆ ತನ್ನಂ ಬಿಡುವಳೆಂದು

ತರಳಿಕೆಯ ಕಯ್ಯೊಳಟ್ಟಿದ
ಳರಸ ಮಹಾಶ್ವೇತೆ ತಾನೆ ಬೇಱೊಂದದನೆನು
ತ್ತಿರಸಲ್ಲದೆಂದು ಮುತ್ತಿನ
ಸರಮನದಂ ಕೊರಲೊಳಾಕೆ ಕಟ್ಟಿದಳಾಗಳ್ ೧೩೧

ವ॥ ಅಂತು ಕಟ್ಟೆ ಬೆಱಗಾಗಿ ವಿನಯರತ್ನಾಕರನಿಂತೆಂದಂ

ಮದಲೇಖೇ ಬಲ್ಲೆ ನೀಂ ಕಯ್ಕೊಳಿಸಲೆಮಗೆ ಮಾತಾಡಸಲ್ಲೆಂಬವೋಲ್ ತೋ
ಱದೆ ನೀಂ ನಿನ್ನೊಂದು ವಾಕ್ಕೌಶಲಗುಣಮನಿದಂ ನಿಮ್ಮ ಸೌಜನ್ಯಜಾಲಂ
ಪುದಿದಿರ್ದತ್ತೆನ್ನನಾನಿನ್ನೆನಗೊಡಯನೆ ಚಿತ್ತಕ್ಕೆವಂದಂತುಟೇ ಮಾ
ೞ್ಪುದು ದಲ್ ಕಾದಂಬರೀದೇವಿಯ ಗುಣಪಣದಿಂ ಮಾಱುವೋದೆನ್ನನೀಗಳ್ ೧೩೨

ವ॥ ಎಂದಿಂತು ಮೊದಲಾಗಿ ಕಾದಂಬರೀಸಂಬಂಧಂಗಳಪ್ಪ ನುಡಿಯಂ ನುಡಿದು ಪಿರಿದುಬೇಗವಿರ್ದು ಮದಲೇಖೆಯಂ ಕಳುಪಿ

ಮದಲೇಖೆಯುಮಿತ್ತಲ್ ಪೋ
ಪುದುಮೊಯ್ಯನೆ ಕೇಳಿಶೈಲಮಂ ಚಂದನಹಾ
ರದುಕೂಲಧವಳನೇಱಿದ
ನುದಯೋದ್ಗತಚಂದ್ರನಂತೆ ನೃಪಕುಲಚಂದ್ರಂ ೧೩೩

ವ ॥ ಆಗಳಾ ನೃಪರೂಪಚಂದ್ರನಂ ಗಂಧರ್ವರಾಜನಂದನೆ ನೋಡಲೆಂದುತ್ಸಾರಿತಚ್ಛತ್ರಚಾಮರಚಿಹ್ನೆಯುಂ ನಿಷಿದ್ಧಾಶೇಷಪರಿಜನೆಯುಂ ತಮಾಲಿಕಾದ್ವಿತೀಯೆಯುಮಾಗಿ ಸೌಧಶಿಖರಮನೇಱೆ

ಕಾಂತೆ ನಿಜಕರಸರೋರುಹ
ಮಂ ತಂದು ಕಟೀತಟಕ್ಕೆ ಮುಯ್ಪಿಂಗೆ ಸೆಱಂ
ಗಂ ತೆಗೆದು ಚಿತ್ರಿಸಿದ ಪೆ
ಣ್ಣಂತಿರೆ (ಕಣ್ಣಾಲಿಬೀಱಿ) ನೋಡುತ್ತಿರ್ದಳ್ ೧೩೪

ನಳಿನದಳನಯನೆ ತನಗಾ
ಗುಳಿವರೆ ಕರತಳದೆ ವದನಮಂ ಮುಚ್ಚುತವ
ಗ್ಗಲಿಸಿ ಪೊಱಮಡುವ ಗೋತ್ರ
ಸ್ಖಲನೆಯ ಭಯದಿಂದೆ ಮುಚ್ಚಿದಂತೆವೊಲಿರ್ದಳ್ ೧೩೫

ನಱುಸುಯ್ಯೆಲರಿಂಗೆಱಗುವ
ಮಱಿದುಂಬಿಗಳಂ ಸೆಱಂಗಿನಿಂ ಸೋವುತುಮಾ
ತೆಱದೊಳೆ ಯುವರಾಜನನ
ಟ್ಟಿಱಿಂದಡಿಗಡಿಗೆ ಕಾಂತೆ ಕರೆವಂತಿರ್ದಳ್ ೧೩೬

ಎಲರಲೆಪದಿಂದೆ ಮೇಲುದು
ತೊಲಗಲ್ ಸಂಭ್ರಮಿಸಿ ಭುಜಲತಾಯುಗದಿಂ ಪೆ
ರ್ವೊಲೆಯಂ ಮುಚ್ಚುತುಮಾ ಕೋ
ಮಲೆ ಸನ್ನೆಯಿನಪ್ಪಿದಪ್ಪಳನೆ ಸೊಗಯಿಸುಗುಂ ೧೩೭

ಸೊಗಯಿಪ ಸೋರ್ಮುಡಿಯಿಂದ
ಲ್ಲುಗುವಲರಂ ತೀವಿ ಕಯ್ಯೊಳಾಘ್ರಾಣಿಸುತಂ
ಮೃಗನಯನೆ ಕಾಣ್ಕೆಯೊಳೆ ಕ
ಯ್ಮುಗಿದಪ್ಪಳ್ ಭೂಭುಜಂಗೆನಲ್ ಕರಮೆಸೆದಳ್ ೧೩೮

ಕೊರಲೊಳ್ ಸೊಗಯಿಪ ಹಾರಮ
ನೆರಡುಂ ಸುಟ್ಟುಂಬೆಯಿಂದನಡಿಗಡಿಗಾಗಳ್
ತಿರುಪುತ್ತಂ ನಿಜಹೃದಯಾಂ
ತರದುತ್ಕಲಿಕೆಯನೆ ತೋಱುವಂತೆವೊಲೆಸೆದಳ್ ೧೩೯

ಕೆದಱಿದ ಪೂವಲಿಯಲರಂ
ಮದಿರೇಕ್ಷಣೆ ನಡೆಯೊಳೆಡಪಿ ಬಿಡೆನಡುಗುತ್ತಂ
ಮದನನಲರ್ಗಣೆಯ ಕೋಲಿಂ
ದೊದವಿದ ವೇದನೆಯನಿದಿರ್ಗೆ ತೋರ್ಪವೊಲಿರ್ದಳ್ ೧೪೦

ಉಡೆನೂಲ್ ಸಡಿಲ್ದು ಮೇಗಾ
ಲ್ದುಡಿಗೆಯ ಕುಸುರಿಯೊಳೆ ತೊಡರೆ ಕಾಮಿನಿ ಮಿಡುಕಲ್
ಪಡೆಯದೆ ಯುವರಾಜಂಗಾ
ಗಡೆ ಕಾಮನೆ ಕಟ್ಟಿಯೊಪ್ಪುಗೊಟ್ಟವೊಲಿರ್ದಳ್ ೧೪೧

ವ॥ ಆದಲ್ಲದೆಯುಂ

ತಡವರಿಸುತ್ತಿರಲ್ಕೆ ತೊಡೆ ಜೋಲೆ ಸಡಿಲ್ದುಡೆ ಬೀೞ್ದ ಮೇಲುದಂ
ಬಿಡದೆ ಕುಚಕ್ಕೆ ತರ್ಪಿನೆಗಮಿತ್ತೊಳಮುಯ್ಪಿನಮೇಲೆ ಬಿರ್ಚಿ ಸೋ
ರ್ಮುಡಿ ಬಿದಱುತ್ತೆ ಕಯ್ಯೊಳದನಂಗನೆ ಸಾವಗಿಸಲ್ ವಳಿತ್ರಯಂ
ಕಿಡುವಿನೆಗಂ ತೆಱಿಂದಿರಿದು ಸಂಭ್ರಮದಿಂ ಮಱೆಗೊಂಡು ನೋಡಿದಳ್ ೧೪೨

ವ॥ ಅಂತಾ ಸಂಭ್ರಮದೊಳ್

ಪೊಳೆಯುತ್ತಂ ತಾರಹಾರಂ ಬರಿಗೆವರೆ ಕಟಾಕ್ಷಾಂಶುವಿಂದೊಂದಿ ಕರ್ಣೋ
ತ್ಪಳಮಾಗಳ್ ಪುಂಡರೀಕಕ್ಕೆಣೆಯೆನಿಸಿ ವಿಲಕ್ಷಸ್ಮಿತಾಲೋಕದಿಂ ಪ್ರ
ಜ್ವಲಿಸಲ್ ತನ್ನೊಂದು ಗಂಡಸ್ಥಲವೊಸೆದು ಮೊಗಂ ಸಾರ್ಚಿ ನಾನಾರಸಂ ಕ
ಣ್ಗೊಳಿಪನ್ನಂ ಮೂರ್ತಿನಾರಾಯಣನೃಪನನವಳ್ ಮೆಚ್ಚಿ ನೋಡುತ್ತಮಿರ್ದಳ್ ೧೪೩

ಬೆಳಗೆಲ್ಲಂ ಪೋಗೆ ವಿಯ
ತ್ತಳದೊಳ್ ಬೆಳರ್ಗೆಂಪು ಪಸರಿಸುತ್ತಿರಲಪರಾ
ಚಲ ಶಿಖರದತ್ತಲೊಯ್ಯನೆ
ತಳರ್ದಂ ರಾಜೀವಜೀವಿತೇಶ್ವರನಾಗಳ್ ೧೪೪

ಮುಟುಗದು ಗಡಿನ್ನುಮೆನುತಂ
ಮುಳಿಸಿಂ ಕಾಮಿನಿಯರೀಕ್ಷಿಸುತ್ತಿರೆ ನುಣ್ಗೆಂ
ಪೆಳಸಿದುದೆನೆ ಬಿಂಬಂ ಕೆಂ
ಪೆಳಸಿರ್ದುದು ಚಕ್ರವಾಕಚಕ್ರೇಶ್ವರನಾ ೧೪೫

ಪಸುರೆಸೆದುದು ಪದ್ಮಿನಿ ಬೆ
ಳ್ಪೆಸೆದುದು ಕುಮುದಿನಿ ನಿಶಾಮುಖಂ ನಸುಗರ್ಪಿಂ
ದೆಸೆದುದು ಪಡುವಣದೆಸೆ ಕೆಂ
ಪೆಸೆದುದು ದಿವಸಾವಸಾನಮಪ್ಪುದುಮಾಗಳ್ ೧೪೬

ವ॥ ಆಗಳನುರಾಗದಿಂ ದೀಧಿತಿಗಳ್ ಬೆರಸು ದಿವಸಕರನದೃಶ್ಯನಪ್ಪುದುಂ

ಇದು ಚಿತ್ರರಥತನೂಜೆಯ
ಹೃದಯದಿನಗ್ಗಲಿಪ ರಾಗಸಾಗರಮೋ ಕೀ
ಳಿದುದು ಭುವನಮನೆನಲ್ ಕೀ
ಳಿದುದಾಗಳ್ ಬಹುಳಸಾಂದ್ರಸಂಧ್ಯಾರಾಗಂ ೧೪೭

ವ॥ ಮತ್ತಮಿನಿಸಾನು ಬೇಗದಿಂ

ಮದನನ ಪೆರ್ಗಿಚ್ಚಿಂ ಮು
ಗ್ಗಿದ ಪೊಣರ್ವಕ್ಕಿಗಳ ಹೃದಯಸಂಕುಳದಿಂದು
ಣ್ಮಿದ ಕರ್ಬೊಗೆಯೆಂಬಿನೆಗಂ
ಪುದಿದೆತ್ತಂ ಮರ್ಬಿನುರ್ಬು ಪರ್ಬಿತ್ತಾಗಳ್ ೧೪೮

ತರತರದಿಂದೆಂಟುಂ ದಿ
ಕ್ಕರಿಗಳ್ ನೆರೆದೊಟ್ಟಿಕೊಳ್ವ ಕರಪುಷ್ಕರಶೀ
ಕರಮೋ (ಪೊಣ್ಮಿದುವೆನೆ) ಲಂ
ಬರದೊಳ್ ತುಱುಗಿದುವು ಧವಳತಾರಾನಿಕರಂ ೧೪೯

ವ॥ ಆಗಳಾ ಕಾದಂಬರಿ ಮಾಡದಿಂದಿೞಿದಳಿತ್ತಲರಸಂಕೇಳೀಶ್ಶೈಲದಿಂದವನಿತ ಳಕ್ಕವತರಿಸಿ

ಅದೊ ರಜನಿಯನನುರಾಗದೆ
ಹೃದಯಮನೇಱಿಸಿದನೆಂಬಿನಂ ಮಂಡಲಮ
ಧ್ಯದೊಳಿೞೆಯಲಾತ್ಮಲಾಂಛನ
ಮುದಯಿಸಿದಂ ರಜನಿನಾಥನುದಯಾಚಲದಿಂ ೧೫೦

ವ॥ ಅಂತು ವಿಭಾವರೀವನಿತಾವಿಲಾಸದಂತಪತ್ರನುಂ ಮದನರಾಜ್ಯೈಕಾತಪತ್ರ ನುಮೆನಿಸಿದ ಕುಮುದಿನೀಬಾಂಧವನುದಯಿಸೆ

ಜಗಮಿದು ಮೌಕ್ತಿಕದಿಂದಂ
ತೆಗೆದುದೊ ದಂತದೊಳೆ ಸಮೆದುದೊ ಪಾಲ್ಗಡಲಿಂ
ದೊಗೆದುದೊ ಪೇೞಿಂಬಿನೆಗಂ
ಸೊಗಯಿಸಿದುದು ಸಾಂದ್ರಚಂದ್ರಿಕಾವಿಸ್ತಾರಂ ೧೫೧

ವ॥ ಅಂತಾ ಚಂದ್ರಿಕೆಯೊಳ್ ನೃಪರೂಪಚಂದ್ರಂ ಕೇಳೀಶೈಲದ ತಪ್ಪಲೊಳ್ ನಡಪಾಡುತಿರ್ಪುದುಂ ಪರಿಜನಂಗಳ್

ತೆರೆಗಳ್ ಮೆಲ್ಪಿಂದೆ ನೀರ್ವಿಜ್ಞಣಿಗೆಯ ತೆಱದಿಂ ಬೀಸೆ ಹಂಸದ್ವಯಂಗಳ್
ತರದಿಂ ಕಣ್ಗೆಯ್ಯೆ ನೀರ್ವಕ್ಕಿಗುಳುಲಿಯೆ ದಳನ್ನೀಲನೀರೇಜನೀಬಂ
ಧುರಗಂಧೋದ್ಗಾರಿ ಲೀಲಾಸರದ ಪುಳಿನದೊಳ್ ಸಿಂಧುವಾರೋಪಧಾನಂ
ಬೆರಸೊಪ್ಪಂಬೆತ್ತುದೀ ಮುತ್ತಿನ ಪಡುಶಿಲೆಯೊಳ್ ದೇವ ಕುಳ್ಳಿರ್ಪುದೀಗಳ್ ೧೫೨

ವ॥ ಎಂಬುದುಂ ಕುಳ್ಳಿರೆ ಕೇಯೂರಕಂ ಭೋಂಕೆನೆ ಬಂದು ದೇವಾ ಕಾದಂಬರೀ ದೇವಿ ನಿಮ್ಮಂ ನೋಡಲೆಂದು ಬಂದಳೆಂದು ಬಿನ್ನವಿಸಲರಸನತಿಸಂಭ್ರಮದಿನಿದಿರೇೞ್ಪನ್ನೆಗ ಮಿತರೆಯಂತಲ್ಪಸಖೀಜನಪರಿವೃತೆಯುಮಪನೀತಾಶೇಷರಾಜಚಿಹ್ನೆಯುಮಾಗಿ

ಎಳವೆಱೆ ಸುತ್ತಿದಂತೆ ಮಿಱುಗುತ್ತಿರೆ ಕೇದಗೆಯೋಲೆ ಚಂದ್ರನೊ
ಳ್ವೆಳಗವೊಲೊಪ್ಪೆ ತೋಱೆ ದುಗುಲಂ ತನುವೊಳ್ಪೊಳೆಯಲ್ಕೆ ಚಂದನಂ
ತೊಳಗುವದೊಂದು ಹಾರಮುಮರಲ್ ಕೊರಲೊಳ್ ನಿಜಕಾಂತಿ ಸುತ್ತಲುಂ
ಬಳಸೆ ಲತಾಂಗಿ ಚಂದ್ರನಧಿದೇವತೆಯಂತೆವೊಲಾದಮೊಪ್ಪಿದಳ್ ೧೫೩

ವ॥ ಅಂತು ಮದಲೇಖಾದತ್ತಹಸ್ತಾವಲಂಬೆಯಾಗಿ ಕಾದಂಬರೀ ದೇವಿ ಬಂದು ನಿಜಪ್ರೀತಿಯಂ ತೋಱಲೆಂದು ಪರಿಜನದಂತೆ ನೆಲದೊಳ್ ಕುಳ್ಳಿರೆ ಚಂದ್ರಾಪೀಡದೇವನುಂ ಮೌಕ್ತಿಕಶಿಲಾತಳದೊಳ್ ಕುಳ್ಳಿರಿಮೆಂದು ಮದಲೇಖೆ ಪಿರಿದುಮಾಶ್ವಾಸಿಸೆಯುಮಾಗಳ್ ನೆಲದೊಳ್ ಕುಳ್ಳಿರ್ದು ಗಂಧರ್ವರಾಜನಂದನೆಯನಿಂತೆಂದಂ

ನೋಡಲೊಡಂ ಕೃತಾರ್ಥರೆನಿಪಾಳ್ಗಳೊಳೇನವಕಾಶಮುಂಟೆ ಮಾ
ತಾಡುವೊಡಿಂತನುಗ್ರಹಿಸುವಲ್ಲಿಗೆ ತಕ್ಕುದದಾವ ಭಂಗಿಯಿಂ
ನೋಡುವೊಡೆನ್ನೊಳಿಲ್ಲ ಗುಣಲೇಶಮುಮೀ ತೆಱದಿಂದನುಗ್ರಹಂ
ಮಾಡುವುದರ್ಕೆ ದೇವಿಯರದೊಂದು ಋಜುತ್ವಮೆ ಮುಖ್ಯಕಾರಣಂ ೧೫೪

ವಿಭವದೆ ನೆಗೞ್ದನ್ವಯದೊಂ
ದಭಿಮಾನಮುದೇವುದೆಂದು ಪೊಸಸೇವಕರೊಳ್
ರಭಸದೆ ನಿಜಸೌಜನ್ಯ
ಪ್ರಭಾವಮಂ ಮೆಱೆವಿರಲ್ಲದೇಂ ಪೆಱತುಂಟೇ ೧೫೫

ಇನಿಸುಂ ದಾಕ್ಷಿಣ್ಯಮುಮಂ
ಮನದೊಳ್ ಭಾವಿಸದೆ ಭೃತ್ಯನೆನೆ ಧನ್ಯನೆನಿಂ
ತಿನಿತಾದರಮೇಕೆಯೊ ಪರಿ
ಜನದೊಳ್ ಬೆಸಕೆಯ್ವ ಬರ್ದುಕಿನೆಂಬೊಂದೆಡೆಯೊಳ್ ೧೫೬

ಪರಗುರ್ಪಕರಿಪೆಡೆಗಳ್ಗುಪ
ಕರಣಂ ತನು ತೃಣದ ತೆಱದೆ ಲಘುಜೀವಿತಮೆಂ
ಬೆರಡುಂ ಪಾವುಡಮಿಂತೀ
ಬರವಿಂಗೆನಲೆನಗೆ ಲಜ್ಜೆಯಾದಪುದೀಗಳ್ ೧೫೭

ಅವಿರ್ಪವು ತನುವಿದೆ ಮೇಣ್
ಜೀವಿತಮಿರ್ದಪ್ಪುದವಯವಂಗಳುಮಿವೆ ಮೆ
ಚ್ಚಾವುದನಾತ್ಮೀಕರಿಪರೊ
ದೇವಿಯರಿಂದೀಗಳಿವಱೊಳದುವೆ ಕೃತಾರ್ಥಂ ೧೫೮

ವ॥ ಎಂದು ನುಡಿಯೆ ಮದಲೇಖೆ ಮಾರ್ಕೊಂಡು ನೀವಿನ್ನು ಕೀಲ್ಪಟ್ಟು ನುಡಿಯೆ ಕಾದಂಬರೀದೇವಿ ಖೇದಿಸುವಳೆಂದು ಮತ್ತಮಿಂತೆಂದಳ್.

ಇದನಿಂತಿನಿತಂ ನೀವೆ
ನ್ನದೊಡೇಂ ಗಂಧರ್ವರಾಜನಂದನೆ ಕೈಕೊ
ಳ್ವದ ಕೆಮ್ಮನೆ ಮತ್ತುಪಚಾ
ರದ ನುಡಿ ಸಂದೇಹ ಬುದ್ಧಿಯಂ ಪುಟ್ಟಿಸದೇ ೧೫೯

ವ॥ ಎಂದು ನುಡಿಯೆ ಕಾದಂಬರೀದೇವಿ ಕೃತಪ್ರಸ್ತಾವೆಯಾಗಿ

ಅವನೀಪಾಲಕಚಕ್ರವರ್ತಿ ವಿಭು ತಾರಾಪೀಡನೆನ್ನಂ ವಿಳಾ
ಸವತೀದೇವಿಯದೆನ್ನಳಾರ್ಯಶುಕನಾಸಂ ತಾನದೆನ್ನಂ ಮಹೀ
ಭುವನಂ ನೋಡುವಡೆಂತುಟೆಲ್ಲಿಗೆನಿತಾವುಜ್ಜೈನಿಯೆಂತಿರ್ಪುದೊ
ಪ್ಪುವುದೇ ಭಾರತವರ್ಷಮೆಂದು ಬೆಸಗೊಂಡಳ್ ಕಾಂತೆ ಭೂಕಾಂತನಂ ೧೬೦

ವ॥ ಎಂದಿವು ಮೊದಲಾಗಿ ಪಲವುಮಂ ಬೆಸಗೊಳುತ್ತಂ ಪಿರಿದು ಬೇಗಮಿರ್ದು ಕಾದಂಬರಿ ಕೇಯೂರಕನುಮಂ ಪರಿಜನಮುಮನರಸನ ಸಾರೆಯಿರವೇಟ್ಟು ತನ್ನ ಕನ್ನೆ ಮಾಡಕ್ಕೆ ಪೋಗಿ ಶಯನತಳಮನಲಂಕರಿಸಿದಳಿತ್ತ ಕೇಯೂರಕನಡಿಯೊತ್ತೆ ಮುನ್ನಿರ್ದೆಡೆ ಯೊಳೆ ಯುವರಾಜನಿರ್ದು ಕಾದಂಬರೀದೇವಿಯ ನಿರಹಂಕಾರಮುಮಂ ಮಹಾಶ್ವೇತೆಯ

ನಿಷ್ಕಾರಣವತ್ಸಲತೆಯುಮಂ ಮದಲೇಖೆಯ ಸುಜನತೆಯುಮಂ ಪರಿಜನದ ಮಹಾನು ಭಾವತೆಯುಮಂ ಗಂಧರ್ವರಾಜಲೋಕದ ಸಮೃದ್ಧತೆಯುಮಂ ಕಿಂಪುರುಷವಿಷಯದ ರಮ್ಯತೆಯುಮಂ ಮನದೊಳ್ ಭಾವಿಸುತಿರ್ಪನ್ನೆಗಂ

ಇರುಳೋರಂತಿರೆ ಕಾದಂ
ಬರಿಯನೆ ನೋಡುತ್ತುಮಿರ್ದು ರೆಪ್ಪೋಂಪಿಸೆ ನಿದ್ರಾ
ತುರನಾಗಿ ಪಕ್ಕೆಸಾರ್ವಂ
ತಿರೆ ಸಾರ್ದಂ ಚಂದ್ರನಪರವೇಲಾವನಮಂ ೧೬೧

ಇನಿಸುಂ ನಿಲಲಾಱದೆ ಕಾ
ಮಿನಿಯರ ಕರ್ಣೋತ್ಪಲಪ್ರಹಾರದ ನಿಸ್ತೇ
ಜನದಿಂ ತನುವಾದಂತಿರೆ
ತನುವಾದುವು ಕೂಡೆ ಸೆಜ್ಜೆವನೆಗಳ ಸೊಡರ್ಗಳ್ ೧೬೨

ಬೆಳಗಾಯ್ತೆಂಬೊಂದಟಲ
ಗ್ಗಳಿಸಲ್ ಪೊಸವೇಟಕಾರ್ತಿಯರ ಬಿಸುಸುಯ್ಯೊಳ್
ಬೆಳಗಿದುದೆಂಬಿನಮಾ
ಗಳದೇಂ ಕೊರಗಿದುದೊ ಕುಮುದಿನೀವಿಸ್ತಾರಂ ೧೬೩

ಬಗೆಯದೆ ವಿರಹಿಗಳಂ ಮಿಗೆ
ತೆಗೆದೆಚ್ಚು ಬಟಿಲ್ದ ಮಧುಸಖನ ಸುಯ್ಯೆಲರ್ವೊಲ್
ಸೊಗಯಿಸಿ ಪೊತ್ತಲರ್ಗಂಪಂ
ನೆಗೆದುಱಿ ತಣ್ಣೆಲರದಿನಿಸು ತೀಡಿತ್ತಾಗಳ್ ೧೬೪

ಅರಸನನೀಕ್ಷಿಸಿ ಮದನಾ
ತುರೆಯಾದಂತಿರುಳೊಳಾವಗಂ ಕುಮುದದೊಳಾ
ದರದೊಳಿರಲ್ಕವು ಕೊರಗಲ್
ಸಿರಿ ಪಂಕಜದಲ್ಲಿ ಮೆಯ್ಯನಿಕ್ಕಿದಳಾಗಳ್ ೧೬೫

ವ॥ ತದನಂತರಂ

ಅದೆ ಜಕ್ಕವಕ್ಕಿಗಳ ಹೃದ
ಯದ ರಾಗಂ ಪುದಿದುದೆನಿಸಿ ಕೆಂಪಂ ಕಯ್ಕೊಂ
ಡುದಯಾದ್ರಿಯಿಂದಮುದಯಿಸಿ
ದುದು ಬಿಂಬಂ ಚಕ್ರವಾಕಚಕ್ರೇಶ್ವರನಾ ೧೬೬

ವ॥ ಆಗಳ್ ಚಂದ್ರಾಪೀಡಂ ಪ್ರಕ್ಷಾಳಿತ ಮುಖಕಮಲನುಂ ಕೃತಸಂಧ್ಯಾವಂದನನುಂ ಗೃಹೀತತಾಂಬೂಲನುಮಾಗಿ ಕೇಯೂರಕ ಕಾದಂಬರಿಯೆಲ್ಲಿರ್ದಳುಪ್ಪವಡಿಸಿದಳೆಲ್ಲೆಂಬುದಂ ನೋಡಿ ಬಂದಱಿಪುವುದೆಂಬುದುಮವಂ ಪೋಗಿಬಂದು ದೇವ ಮಂದರಪ್ರಾಸಾದದ ಕೆಳಗಣ ಸೌಧತಳವೇದಿಕೆಯೊಳ್ ಮಹಾಶ್ವೇತವೆರಸಿರ್ದಪಳ್ ಎಂದು ಬಿನ್ನಪಂಗೆಯ್ಯಲೊಡಂ ಗಂಧರ್ವರಾಜನಂದನೆಯಲ್ಲಿಗೆ ಬರ್ಪನ್ನೆಗಮನೇಕಪರಿವ್ರಾಜಿಕಾಸಮಾಜಂ ಸುತ್ತಮೋಲಗಿಸುತ್ತಿರಲಂತಃಪುರಾಭ್ಯರ್ಹಿತರೊಳಾದರಂಬೆರಸು ಸಂಭಾಷಿಸುತ್ತಂ ಸೌಧತಳವೇದಿಕೆಯೊಳ್ ಗಂಧರ್ವರಾಜ ಬಾಂಧವವೃದ್ಧರಂ ವೇತ್ರಾಸನಾದಿದಾನದಿಂ ಸನ್ಮಾನಿಸುತ್ತಮಿರ್ದ ಮಹಾಶ್ವೇತೆಯ ಪೆಱಗೆ

ಎರಡುಂ ಬಂಚಂಗಳಿಂದಿಂಚರವೊಸರ್ವಿನೆಗಂ ಕಿನ್ನರದ್ವಂದ್ವವೊತ್ತು
ತ್ತಿರೆ ನಾನಾಭಂಗಿಯಿಂ ನಾರದತನಯೆ ನಯಂಬೆತ್ತುದೆಂಬಂತೆ ಪಾಡು
ತ್ತಿರೆ ಪುಣ್ಯೋಪೇತಮಂ ಭಾರತಮನೆಸೆವ ಪೌರಾಣಿಕರ್ ಪಕ್ಕದೋದು
ತ್ತಿರೆ ಕೇಳುತ್ತಿರ್ದ ಕಾದಂಬರಿಯನವನಿಪಂ ದೂರದೊಳ್ ಕಂಡನಾಗಳ್ ೧೬೭

ವ॥ ಅಂತು ಬಂದು

ಲಲನೆಯ ವಕ್ತ್ರಕಾಂತಿ ದೊರೆಕೊಳ್ಗೆನಗೆಂದಮೃತಾಂಶು ಭಕ್ತಿಯಿಂ
ಬಲವರುತಿರ್ದನೋ ಪಿರಿದುಮೊಂಬಿನೆಗಂ ನವಕರ್ಣಪೂರದೊಂ
ದಲೆದ ಶಿರೀಷಮಂಜರಿಯುನೀಕ್ಷಿಸಿ ಪಾವಸೆಗೆತ್ತು ತೃಷ್ಣೆಯಿಂ
ಬಲವರುತಿರ್ದುದಂಗನೆಯನುನ್ಮುಖಬಾಲಮರಾಳಮಂಡಳಂ ೧೬೮

ಪೊಳೆವ ಸುಲಿಪಲ್ಲ ನುಣ್ಬೆಳ
ಗೆಳಸಿದ ತಾಂಬೂಲಬದ್ಧ ಕೃಷ್ಣಿಕೆಯಿಂ ಕ
ಣ್ಗೊಳಿಪ ನಿಜಾಧರಮಂ ಕೋ
ಮಳೆ ನೋಡುತ್ತಿರ್ದಳಮಳಮಣಿದರ್ಪಣದೊಳ್ ೧೬೯

ವ॥ ಅಂತಿರ್ದಳನೆಯ್ದೆವಂದು ಸುಧಾವೇದಿಕೆಯೊಳಿಕ್ಕಿದಾನಮನಲಂಕರಿಸಿ ಕಿಱಿದುಬೇಗಮಿರ್ದು ಮಹಾಶ್ವೇತೆಯಂ ಮಂದಸ್ಮಿತವದನನಾಗಿ ನೋಲ್ಪುದುಂ ವಿದಿತಾಭಿಪ್ರಾಯೆಯಾಗಿ ಕಾದಂಬರಿಯುನಿಂತೆಂದಳ್

ಚಂದ್ರಿಕೆಯಿಂದಂ ದ್ರವಿಯಿಪ
ಚಂದ್ರೋಪಲದಂತೆ ನಿನ್ನ ಗುಣಗಣದಿಂದಂ
ಚಂದ್ರಮುಖಿ ನಾಂದನಾಗಿ ನ
ರೇಂದ್ರಂ ನುಡಿಯಲ್ಕಮಱಿಯದಿರ್ದಪನೀಗಳ್ ೧೭೦

ಅಱಿಯದೆ ಪೋದೆಡೆಯಂ ಬಿಡ
ದಱಿಸುತ್ತಿಂತಿರ್ಪನೆನುತಮುಮ್ಮಳದಿಂದಂ
ಪೆಱಗಿರ್ದ ರಾಜಲೋಕಂ
ಮಱುಗದೆ ಮಾಣದು ಕುಮಾರನಂ ಕಾಣ್ಬನೆಗಂ ೧೭೧

ಕಮಲನಿಗೆ ಕಮಲಬಂಧುಗೆ
ಕುಮುದಿನಿಗಾ ಕುಮುದಿನೀಶ್ವರಂಗೆಂತೀಗಳ್
ತಮಗೆಂತಿರ್ಪೆಡೆಗಳ್ ದೂ
ರಮಾದೊಡಂ ಪ್ರೀತಿ ಮಾಣದಾಕಲ್ಪಾಂತಂ ೧೭೨

ವ|| ಅದಱಿಂದರಸಂಗೆ ಪೋಗಲ್ವೇೞ್ಕುಮೆಂದು ನುಡಿಯೆ ಕಾದಂಬರಿಯಿಂತೆಂದಳ್

ತವಗಿಂ ಪೆಱತೇಂ ಸ್ವಾಧೀ
ನವೆನಿಪ ಪರಿಜನದೊಳಿನ್ನ ಮನದೊಳ್ ಬೇೞಿಂ
ಬವಳಾನಲ್ಲಣಮುದಱಿಂ
ದವಕ್ಕ ಮತ್ತಾರ್ಗೆ ತಾವಿದಂ ಪೇೞ್ದಪಿರೌ ೧೭೩

ವ|| ಎಂದು ನುಡಿದು ಗಂಧರ್ವ ಕುಮಾರಕರಂ ಕರೆದರಸನಂ ಬೀಡಿಂಗೆಯ್ದಿಸಿಮೆಂದು ಪೇೞಿ ವಿದಗ್ಧವಿದ್ಯಾಧರನೆೞ್ದು ಮಹಾಶ್ವೇತೆಗೆ ನಮಸ್ಕಾರಂಗೆಯ್ದು ಕಾದಂಬರಿಗೆ ಕಯ್ಗಳಂ ಮುಗಿದು

ಪಿರಿದು ನುಡಿಯೇವುದೆನಗಿಂ
ಪರಿಜನದೊಳಗೊರ್ವನೆಂದು ದೇವಿಯರೆನ್ನಂ
ಪರಿಭಾವಿಪುದೆಂಬಿದನುಸಿ
ರ್ದರಸಂ ಪೊಱಮಟ್ಟನಾಗಳಂತಃಪುರಮಂ ೧೭೪

ವ|| ಅಂತು ಪೊಱಮಡೆ

ಬರತೆಗೆದುದೊ ನೃಪನ ಗುಣೋ
ತ್ಕರಮೆನೆ ಕಳುಪಲ್ಕೆ ಕಡೆಯ ಬಾಗಿಲ್ವಾಡಂ
ಬರೆಗಂ ಬಂದುದು ಕಾದಂ
ಬರಿ ಪೊಱಿತಾಗಖಿಳ ಕನ್ಯಕಾನಿಕುರುಂಬಂ ೧೭೫

ವ|| ಆಗಳಾ ಕನ್ನಿಕೆಯರುಂ ಮುಗುೞ್ಚಿ ಕೇಯೂರಕಂ ಸಾರ್ಚಿದಿಂದ್ರಾಯುಧಮನೇಱಿ ಗಂಧರ್ವರಾಜಕುಮಾರರೊಡನೆ ಹೇಮಕೂಟದಿಂ ಪೊಱಮಟ್ಟು ಪೋಗುತ್ತಮಿರ್ದು

ಅಗಲಲಸಹ್ಯಮೆಂದು ಪೆಱಗೀಬಟಿಸಲ್ವಳಿ ಮುಂದೆ ಬಂದಳೀ
ತಗೆವೊಡೆ ಚಿತ್ರದುತ್ಕಲಿಕೆಯಿಂ ನಭಕೀ ನೆಗೆತಂದಳಾಗಳುಂ
ಮೊಗಮನೆ ನೋಡಲೆಂದುರುದೊಳೀ ನೆಲಸಿರ್ದಪಳೆಂದೆನುತ್ತಮಾ
ಮೃಗಶಿಶುನೇತ್ರೆಯಂ ಬಿಡದೆ ಭಾವಿಸಿದಂ ನೃಪರೂಪಚಂದ್ರಮಂ ೧೭೬

ವ॥ ಅಂತು ಪೋಗೆವೋಗೆ ಮಹಾಶ್ವೇತಾಶ್ರಮದಚ್ಛೋದಸರೋವರದ ತೀರದೊಳಿಂದ್ರಾಯುಧದ ಪಜ್ಜೆವಿಡಿದು ಬಂದು ಬಿಟ್ಟಿರ್ದ ನಿಜಸ್ಕಂಧಾವಾರಮಂ ಕಂಡಾ ಗಂಧರ್ವಕುಮಾರರಂ ಮಗುಟ್ಚಿ ಕಟಕಜನಮಾನಂದಮುಮತಿಕೌತುಕಮುಂ ಕಯ್ಗಣ್ಮೆ ತನತನಗೆ ಪೊಡಮಡುತ್ತಿರಲರಮನೆಯಂ ಪೊಕ್ಕು ವೈಶಂಪಾಯನನುಂ ಪತ್ರಲೇಖೆಯುಂ ಬೆರಸು ಸಕಲರಾಜಲೋಕಮಂ ಮನ್ನಿಸಿ ತನ್ನ ಪೋದಬಂದ ವೃತ್ತಾಂತಮೆಲ್ಲಮಂ ಪೇೞುತ್ತಮಾ ಪಗಲಂ ಕಳೆದು

ತರಳಾಕ್ಷಿಯನಾ ಕಾದಂ
ಬರಿಯಂ ರಣರಣಕ ವಿಕಲಹೃದಯದಿನೋರಂ
ತಿರೆ ಚಿಂತಿಸುತ್ತಮಿರ್ದಾ
ಯಿರುಳನದೆಂತಾನುಮನನಿಪಾಲಂ ಕಳೆದಂ ೧೭೭

ಕಾದಂಬರಿಯು ದ್ವಿತೀಯ ಸಂದರ್ಶನ

ವ॥ ಅಂತು ಕಳೆದಾ ಮಱುದಿವಸಮಾ ಕನ್ನೆಯನೆ ನೆನೆವುತ್ತಮಾಸ್ಥಾನ ಮಂಟಪದೊಳಿರ್ಪನ್ನೆಗಂ ಪಡಿಯರಂಬೆರಸು ಕೇಯೂರಕಂ ಭೋಂಕನೆ ಬಂದು

ವಿನಯಂ ಕೈಗಣ್ಮೆ ದೂರಾಂತರದೊಳೆಱಗೆ ಕಂಡಿತ್ತ ಬಾಯಿತ್ತ ಬಾಯೆಂ
ಬಿನಮೈತಂದಂಘ್ರಿಪದ್ಮಕ್ಕೆಱಗೆ ತೆಗೆದು ತಱಿಕ್ಕೈಸಿದಂ ಪ್ರೀತಿಯಿಂ ಮು
ನ್ನ ನಿಜಾಪಾಂಗಾವಲೋಕಂ ಬೞಿಕೆ ಹೃದಯವಲ್ಲಿಂ ಬೞಿಕ್ಕಂತೆ ರೋಮಾಂ
ಚನಿಕಾಯೋದ್ಭೇದವಲ್ಲಿಂ ಬೞಿಕ ಭುಜಯುಗಂ ಸುತ್ತೆ ರಾಜೇಂದ್ರಚಂದ್ರಂ ೧

ವ॥ ಅನಂತರಂ

ಒಸರ್ದಪುದು ನುಡಿಯೊಳೊಲವಿನ
ರಸವೆನೆ ನಸುವೆಳ್ಪ ಮಂದಮಂದಸ್ಮಿತದಿಂ
ಪಸರಿಸುತಿರೆ ಯುವರಾಜಂ
ಬೆಸಗೊಂಡಂ ಪ್ರೀತಿಯಿಂದೆ ಕೇಯೂರಕನಂ ೨

ಅರಸಿಯರ್ಗೆ ಮಹಾಶ್ವೇತೆಗೆ
ಪರಿಜನನಿವಹಕ್ಕೆ ಕುಶಲಮೇ ಪೇೞೆನಲಾ
ದರದಿಂದೆ ದೇವ ನೀಮಿಂ
ತಿರೆ ಬೆಸಗೊಂಡಂತೆ ಕುಶಲಮಂತವರ್ಗೆಲ್ಲಂ ೩

ವ॥ ಎಂದಾಗಳಿರ್ಪುವೊರೆದ ದುಗುಲದ ಬಾಸಣಗೆಯಂ ಕಳೆದು ತಾವರೆಯ ನೂಲಿಂ ಸುತ್ತಿದ ಸಿರಿಕಂಡದುರುಳಿಯಂ ಪತ್ತಿಸಿದ ಮೃಣಾಳನಾಳವಲಯದಿಂ ಮುದ್ರಿಸಿದ ನಳಿನೀಪತ್ರಪುಟಮಂ ತೆಗೆದು ಕಾದಂಬರೀದೇವಿಯಟ್ಟಿದ ಮದನವೇದನೆಯ ವಿನ್ನಾಣಂಗಳಪ್ಪ ಪಸುರೆಸೆವ ಪಾಲಡಿಕೆಯ ಗೊಂಚಲುಮಂ ಖಚರಕಾಮಿನಿಯರ ಕದಂಪಿನ ಬೆಳ್ಪನಪ್ಪುಕೆಯ್ವ ಕಪ್ಪುರವಳ್ಳಿಯ ಬಿಳಿಯೆಲೆಯ ವೀಳೆಯುಮಂ ಎಳೆವೆಱೆಯ ಮುಱಿಗಳ ನೇಟುಪ ಕಪ್ಪುರದ ಪಳುಕುಗಳುಮಂ ಕತ್ತುರಿಯ ಕಂಪಿನಿಂ ಸೊಂಪಂ ತಳೆದ ಮಲಯಜ ವಿಲೇಪನಮುಮನರಸಂಗೆ ತೋಱಿ ಕಾದಂಬರಿಯ ಚೂಡಾಮಣಿ ಮರೀಚಿರಂಜತಾಂಜಲಿ ಸಮಭ್ಯರ್ಚನಮುಮಂ ಮಹಾಶ್ವೇತೆಯ ಕಂಠಗ್ರಹಕುಶಲವಚನಸಂಬೋಧನಮುಮಂ ಮದಲೇಖೆಯ ನಮಸ್ಕಾರಮುಮಂ ತಮಾಲಿಕೆಯ ಪಾದಪ್ರಣಾಮಮುಮಂ ಬಿನ್ನವಿಸಿ ಮಹಾಶ್ವೇತೆಯಿಂತೆಂದಟ್ಟಿದಳದಂತೆನೆ

ಹಿಮಕರಮಯಮೆನಿಸಿದ ನಿಜ
ವಿಮಲ ಗುಣವ್ರಜಮೆ ತನ್ನ ಗಲ್ಕೆಯೊಳುಷ್ಣಾಂ
ಶುಮಯಮೆನಿಸಿದಪುವೆನೆ ಮು
ನ್ನಮೆ ತನ್ನಂ ಕಾಣದಿರ್ಪುದದು ಸುಖಮಲ್ತೇ ೪

ಅಮೃತೋತ್ಪತ್ತಿಯ ದಿವಸಂ
ಸಮನಿಸಿತೆಂಬಂತೆ ದೈವದಿಂದೆಂತಾನುಂ
ಸಮನಿಸಿದಾ ನಿನ್ನಿನ ದಿವ
ಸಮನೀನಾಂ ಬಿಡದೆ ಬಯಸುತಿರ್ದಪುದು ಜನಂ ೫

ವ|| ಮತ್ತಂ ತನ್ನಗಲ್ಕೆಯಿಂ ಗಂಧರ್ವರಾಜನಂದನೆಗೆ ಶೀತೋಷ್ಣಭವನಮದು ಮದುವೆಗಳಿಪಿದ ಮನೆಯಂತೆ ನಿರ್ವೃತ್ತಮಹೋತ್ಸವಮಾಗಿರ್ಪುದಂತುಮಲ್ಲದೆಯುಂ

ವಿದಿತೆಯೆನಾಂ ತನಗೆಲ್ಲಂ
ದದೊಳಂ ಪರಿಹೃತಸಮಸ್ತಸಂಗೆಯೆನೆನ್ನೀ
ಹೃದಯಂ ನೋಡಲ್ಬಯಸಿದ
ಪುದಕಾರಣಪಕ್ಷಪಾತಿಯೆನಿಸಿದ ತನ್ನಂ ೬

ತನು ಬಸಮಲ್ತು ಮತ್ಸಖಿಗೆ ಮನ್ಮಥನನ್ನನೆನಿಪ್ಪ ತನ್ನುಮಂ
ನೆನೆದಪಳೊರ್ಮೆ ಬಂದೆನಗೆ ಮಾಳ್ಪುದು ಪೆರ್ಮೆಯ ನಿಮ್ಮ ನಣ್ಪಿನಿಂ
ಜನಿಯಿಸಿದೀ ಕದರ್ಥನೆಗೆ ಸೈರಿಪುದಿಲ್ಲಿಗೆ ಬರ್ಪುದೆಂದು ಪೇ
ಳ್ಬಿನಿವಿರಿದೊಂದು ದರ್ಪಮೆನಗಾದುದು ತನ್ನಯ ನಿರ್ಮಳತ್ವದಿಂ ೭

ವ|| ಎಂದು ನುಡಿಯಲ್ ಪೇಳ್ದಿಳದಲ್ಲಿವೆಯುಂ

ಇದನಂದಾ ಶಯನೀಯದೊಳ್ ಮಱೆತು ದೇವರ್ಬಂದಿರೆಂದೀಗಳ
ಟ್ಟಿದಳೆಂದೊಯ್ಯನೆ ಚಾಮರಾಂಗನೆಯ ಕಯ್ಯೊಳ್ ಕೊಟ್ಟನಾತ್ಮೋತ್ತರೀ
ಯದುಕೂಲಾಂಚಲಸೂಕ್ಷ್ಮಸೂತ್ರವಿವರವ್ರಾತಂಗಳಿಂ ಕೂಡೆ ನು
ಣ್ಗಾದಿರ್ಗಳ್ ಸೂಸುವ ಶೇಷಮೆಂಬಮಳ ತಾರೋದಾರಮಂ ಹಾರಮಂ ೮

ವ|| ಕುಡುವುದುಂ ವಿದಗ್ಧವಿದ್ಯಾಧರನಿಂತೆಂದಂ

ಪದಪಿಂ ತಮ್ಮಾಳ್ಗಳನಿಂ
ತು ದೇವಿಯರ್ ನೆನೆವುದೆಂಬುದಿದು ಸಕಲಗುಣಾ
ಸ್ಪದೆಯೆನಿಪ ಮಹಾಶ್ವೇತೆಯ
ಪದಕಮಲಾರಾಧನೆಯ ತಪಃಫಲಮಲ್ತೇ ೯

ವ॥ ಎನುತ್ತುಮೆಲ್ಲಮಂ ಪ್ರೀತಿವೆರಸು ತಾನೇ ಕಯ್ಕೊಂಡು ಕಿರಿದುಬೇಗಮಿರ್ದ ಲ್ಲಿಂದಮೆೞ್ದು ಸನ್ಮಾನಪುರಸ್ಸರಮನುಖಿಳರಾಜಲೋಕಮುಮಂ ಪ್ರಧಾನ ನಿವಹಮುಮಂ ವಿಸರ್ಜಿಸಿ ಗಜಗಮನರಾಜಪುತ್ರಂ ಗಂಧಮಾದನನಾಗೇಂದ್ರನಲ್ಲಿಗೆ ಬಂದು ನಿಜನಖಾಂಶು ಜಾಲಜಟಿಲಮಾಗಿ ಮೃಣಾಳನಾಳದಂತೆ ಸೊಗಯಿಸುವೆಳವುಲ್ಲಕವಳಮಂ ನೀಡುತ್ತುಂ ಮದಲೇಖೆಗೆಱಗುವ ಚಂಚರೀಕದಿಂ ಚರದಿನುತ್ಕಂಠಿತನಾಗಿ ವಲ್ಲಭವಾಜಿಯ ಮಂದುರ ದಲ್ಲಿಗೆ ಕೇಯೂರಕದ್ವಿತೀಯನಾಗಿ ಬಂದಿಂದ್ರಾಯುಧದ ಕುಂಕುಮಕಪಿಲಕೇಸರಸಟೆಯ ನೊಯ್ಯನೋಸರಿಸುತ್ತುಂ ಖುರಮಣಿಕೆಯೊಳ್ ಕಾಲನಿಕ್ಕಿ ಮಂದುರದ ಮುಂಡಿಗೆಯಂ ಮಲಂಗಿ ಕೌತುಕಂಬೆರಸು ಕೇಯೂರಕನನಿಂತೆದಂ—

ಆನೆೞ್ದಂದ ಬೞಿಕ್ಕೆ ಚಿತ್ರರಥರಾಜಾವಾಸದೊಳ್ ವಾರ್ತೆಯೇ
ನಾ ನೀರೇಜದಳಾಕ್ಷಿಗೇಂ ಬಿನದಮೇಗೆಯ್ವಳ್ ಮಹಾಶ್ವೇತೆ ತಾ
ನೇನೆಂಬಳ್ ಮದಲೇಖೆ ತತ್ಪರಿಜನಾಲಾಪಂಗಳೇನಲ್ಲಿ ನೀ
ನೇನಂ ಮಾಡುತಮಿರ್ದೆಯೆಂದು ಬೆಸಗೊಂಡಂ ಚಂದ್ರಚೂಡಾಹ್ವಯಂ ೧೦

ವ॥ ಎಂದು ಬೆಸಗೊಳ್ವುದುಂ ಕೇಯೂರಕಂ ದೇವರ್ ಬಿಜಯಂಗೆಯ್ಯಲೊಡನೆ

ಹೃದಯಭವಪ್ರಯಾಣಪಟಹಧ್ವನಿಯೆಂಬಿನಮೆತ್ತಲುಂ ಪೊದ
ೞ್ದುದವಿದ ರತ್ನನೂಪುರಕಲಾಪಕಲಧ್ವನಿಗಂಚೆವಿಂಡು ತಂ
ಡದಿನುಲಿವುತ್ತಿರಲ್ ಕೆಳದಿಯರ್ವೆರಸಾಗಳೆ ನಿಮ್ಮನೀಕ್ಷಿಸಲ್
ಪಡೆದಿರದೇಱಿದಳ್ ತರುಣಿ ತನ್ನಯ ರನ್ನದ ಕನ್ನೆಮಾಡಮಂ ೧೧

ಪರಪುರುಷನೆನಿಪ್ಪ ದಿವಾ
ಕರನ ಕರಸ್ಪರ್ಶನಕ್ಕೆ ಸೈರಿಸದೆ ಸುಧಾ
ಕರಬಿಂಬಮನದ ಮಱಿಯಾ
ಗಿರಿಸಿದಳೆನಲೆತ್ತಿದತ್ತು ಧವಳಚ್ಛತ್ರಂ ೧೨

ವ॥ ಆಗಳ್ ಚಿತ್ರರಥನಂದನೆ ತುರಗಖುರಲುಳಿತಧೂಳೀದೂಸರಮಪ್ಪ ಭವದ್ಗ ಮನಮಾರ್ಗಮಂ ನೋಡುತ್ತುಮಿರ್ದು ಕಿಱಿದು ಬೇಗದಿಂ ನೀಂ ತಿರೋಹಿತದರ್ಶನನಪ್ಪು ದಮಾ ದಿಗಂತಮೆಲ್ಲಮಂ ದುಗ್ಧೋದಧಿಧವಳದೀರ್ಘಂಗಳಪ್ಪಪಾಂಗಾವಲೋಕನದಿಂ ತೀಂಕಾಡಿಸುತ್ತುಂ ಪಿರಿದು ಬೇಗಮಲ್ಲಿಯೆ ನಿಂದು ಬಿಸುಸುಯ್ದಲ್ಲಿಂದಮೆೞ್ದು ಬಿಜಯಂಗೆಯ್ದು

ಅಲರೆಡಪಿದಪ್ಪೆ ನೀಂ ಕೋ
ಮಲೆಯೆಂದಡಿಗಡಿಗೆನಂದು ಪೇೞ್ವಂದದೆ ಪೂ
ವಲಿಯಲ್ಲಿ ಜಿನುಗುತಿರ್ದುದು
ಬಲವಂದಳಿಮಾಲೆ ಮಧುರಮಂದ್ರಧ್ವನಿಯಿಂ ೧೩

ವ॥ ಮತ್ತಮಾ ಲಾವಣ್ಯವತಿಯ ಪದನಖಮಯೂಖಂಗಳಂ ಜಲಧಾರೆಗೆತ್ತ್ರತ್ಕಂಠಂಗಳಾದ ಸೋಗೆಗಳ ಕೇಗುಗಳ್ಗಗಿದವರ ಕೊರಲಂ ಬಿಗಿವಂತೆ ಕಯ್ಯಿಂದಮುರ್ಚುವ ಮಣಿಕಂಕಣಂಗಳಂ ತುಡಿಸುತ್ತಂ ಕರದಿಂ ಕುಸುಮಧವಳಂಗಳಪ್ಪ ಭವನಲತಾಪಲ್ಲವಂಗಳಂ ಮನದಿಂ ಭವದ್ಗುಣಂಗಳುಮನವಲಂಬಿಸುತ್ತಂ ಕ್ರೀಡಾಪರ್ವತಕ್ಕೆವಂದು

ಇದು ನಿಂದ ನವೇಂದೂಪಲ
ಮಿದಭವನಂ ಪೂಜೆಗೆಯ್ದ ಶೀಕರತಲಮಿಂ
ತಿದು ನೃಪನಾರೋಗಿಪ ಪವ
ಳದ ನೆಲೆಯಿದು ಪವಡಿಸಿರ್ದ ಚಂದನತಲ್ಪಂ ೧೪

ವ॥ ಎಂದು ಪರಿಜನಂಗಳ್ ಪೇೞೆ ಮಗುೞೆಮಗುೞೆ ಕೇಳುತ್ತಂ ನೀವಿರ್ದೆಡೆಗಳಂ ನೋಡುತ್ತಂ ಪಗಲಂ ಕೞಿಪಿ ಮಹಾಶ್ವೇತಾನಿರೋಧದಿಂದೆಂತಾನುಮಲ್ಲಿಯೆ ಕೃತಾಹಾರೆಯಾಗಿ ಕಿಱಿದುಬೇಗಮಿರ್ದು ಚಂದ್ರೋದಯಮಾಗಲೊಡಮೇನಾನುಮಂ ಚಿಂತಿಸುತ್ತಮಲ್ಲಿಂದಮೆೞ್ದು

ಚರಣನಖಾಂತರ್ಗತ ಹಿಮ
ಕಿರಣಪ್ರತಿಬಿಂಬಭೂರಿಭಾರದಿನತಿಮಂ
ಥರತೆ ದೊರೆಕೊಂಡುದೆಂಬಂ
ತಿರೆ ಮೆಲ್ಲನೆ ತರುಣಿ ಸೆಜ್ಜೆವನೆಗೆೞ್ತಂದಳ್ ೧೫

ವ॥ ಅಂತುವಂದು ಸೆಜ್ಜೆವನೆಯೊಳ್ ಮೆಯ್ಯನೀಡಾಡಿ ದಾರುಣವೆನಿಪ ದಾಹಜ್ವರದಿನಿಕ್ಕುವಟ್ಟೆಂತೇನಾನುಂ ವ್ಯಾಧಿಕಯ್ಕೊಂಡಂತಾರೊಳಂ ನುಡಿಯದೆ ಪೊರಳುತ್ತಮಿರ್ದು

ಪೊಳೆವ ಭವನಪ್ರದೀಪಂ
ಗಳೊಡನೆ ಕುಮುದಿನಿಗಳೊಡನೆ ಚಕ್ರಾಹ್ವಯಸಂ
ಕುಳದೊಡನೆ ನಿದ್ರೆಯಿಂದು
ತ್ಪಳಾಕ್ಷಿ ಕೋಟಲೆಗೊಳುತ್ತಮಿರುಳಂ ಕಳೆದಳ್ ೧೬

ವ॥ ಅಂತು ಕಳಿದು ಬೆಳಗಾಗಲೊಡನೆನ್ನಂ ನಿಮ್ಮಲ್ಲಿಗಟ್ಟಿದಳೆಂಬುದುಮದೆಲ್ಲಮಂ ಕೇಳ್ದಲ್ಲಿಗೆ ಪೋಗಲುದ್ಯುಕ್ತನಾಗಿ ಮನುಜೇಂದ್ರಚಂದ್ರನಿಂದ್ರಾಯುಧದ ಬೆಂಗೆವಂದು ಪತ್ರಲೇಖೆಯುಮಂ ಪೆಱಗನೇಱಿಸಿ ವೈಶಂಪಾಯನಾದಿ ಪರಿಜನಮನಿರಲ್ವೇೞ್ದು ತುರಗಾರೂಢನಪ್ಪ ಕೇಯೂರಕನೊಡವರೆ ಹೇಮಕೂಟಕ್ಕೆವಂದು ಕನ್ಯಾಂತಃಪುರದ್ವಾರಮನೆಯ್ದೆವಂದು ಪಡಿಯಱನ ಕಯ್ಯೊಳ್ ಕುದುರೆಯುಂ ಕೊಟ್ಟು ಕಾದಂಬರೀಪ್ರಥಮ

ದರ್ಶನಕೌತುಕೆಯಪ್ಪ ಪತ್ರಲೇಖೆವೆರಸುಪುಗುತಂದಿದಿರ್ವರ್ಪ ಪುರುಷವರನಂ ಕಾದಂಬರೀ ದೇವಿಯೆಲ್ಲಿರ್ದಳೆಂಬುದುಮಾತಂ ಪೊಡವಟ್ಟು ದೇವ ಮತ್ತಮಯೂರಮೆಂಬಕೇಳೀಶೈಲದ ತಾವರೆಗೊಳದ ಹಿಮಗೃಹದೊಳಿರ್ದಪಳೆಂದು ಬಿನ್ನವಿಸೆ ಕೇಯೂರಕೋಪದಿಶ್ಯಮಾನ ಮಾರ್ಗನಾಗಿ ಪ್ರಮದವನದೊಳಗೆ ಬರುತಂ

ಬಿಸಿಲೆಲ್ಲ ಪಸೆಗವಿದುದು
ಪಸುರ್ವೆಳಗಿಂದೆನಿಪ ಬಾಲಕದಳೀವನದೊಳ್
ಬಿಸರುಹದಳಂಗಳಿಂ ಪೊದೆ
ಯಿಸಿರ್ದ ಹಿಮಗೃಹಮನವನಿಪಾಲಂ ಕಂಡಂ ೧೭

ನಳಿನೀಪತ್ರಾಂಶುಕಾಚ್ಛಾದಿತಕುಚಯುಗಳಂ ಚಂದನಾಪಾಂಡುಗಂಡ
ಸ್ಥಳಯುಗ್ಮಂ ಕೇತಕೀಕೋಮಲದಳವಿಲಸತ್ಕರ್ಣಪತ್ರಂ ಮೃಣಾಳೀ
ವಳಯಾಲಂಕಾರಕಾಂತಂ ವಕುಳಮುಕುಳಹಾರಾಂಚಿತಂ ಪದ್ಮಸೂತ್ರೋ
ಜ್ವಳಚಂಚಚ್ಚಾಮರಂ ಭೋಂಕನೆ ಪೊಜಮಡುತಿರ್ದತ್ತು ಕಾಂತಾಕದಂಬಂ ೧೮

ದಳಿತಪ್ರೋನ್ನಾಳನೀರೇರುಹ ಕುವಲಯರಂಭಾದಳಾಂಭೋಜಪತ್ರಾ
ವಳಿಯಂ ಲೀಲಾತಪತ್ರಾವಳಿ ಸೊಗಯಿಸೆ ತನ್ಮೊಳ್ ಜಲಶ್ರೀಸಮಾಜಂ
ಜಳಜಾತಶ್ರೀಸಮೂಹಂ ಸಕಲಜಲಧಿಪಶ್ರೀಚಯಂ ಶಾರದಶ್ರೀ
ಕುಳಮಂದೊಂದಾಗಿ ಬಂದತ್ತೆನಿಸಿ ಬರುತಮಿರ್ದತ್ತು ಕನ್ಯಾಕದಂಬಂ ೧೯

ವ॥ ಅಂತಾ ಶಿಶಿರೋಪಚಾರನಿಪುಣೆಯರಪ್ಪ ಕಾದಂಬರೀಪರಿಜನಂಗಳ್ ತಮ ತಮಗೆ ಪೊಡವಟ್ಟೋಸರಿಸಿ ಪೋಗೆವೋಗೆ

ಒದವಿದ ತೋರಮಲ್ಲಿಗೆಯ ಹಾರದ ಸೂಸಕದಿಂದೆ ಸಿಂಧುವಾ
ರದ ಚಮರೀಜದಿಂದೆ ಕುಮುದಧ್ವಜಮಾಲಿಕೆಯಿಂದೆ ಪುಂಡರೀ
ಕದ ಕಿರುಗಂಟೆಯಿಂದೆ ಸಹಕಾರದ ಕೆಂದಳಿರಿಂದೆ ಚೆಲ್ವುವೆ
ತ್ತುದು ಕದಳೀದ್ರುಮಗ್ರಥಿತ ಸುಂದರವಂದನಮಾಲಿಕಾವೃತಂ ೨೦

ವ॥ ಅಂತದಂ ನುಸುಳುತ್ತಂ ಪೋಗಿ ನಾಲ್ದೆಸೆಯುಮಂ ನೋಟಿಪ್ಪಗಳೊಂದೊಂದು ದೆಸೆಯೊಳಿರ್ತಡಿವಿಡಿದು ಸಟ್ಟ ತಮಾಲದ ತಳಿರ್ಗೊಂಬುಗಳಿಂ ಸಮೆದ ವನಲೇಖೆಗಳುಮಂ ಕುಸುಮರಜಮೆಂಬ ನುಣ್ಮಳಲ ಪುಟಿಲ್ಗಳಿಂದಮೆಸೆವ ಚಂದನರಸದ ಪಳ್ಳಂಗಳುಮಂ ಓರೊಂದೆಡೆಯೊಳೆಟಲ್ವಲರ್ಗೊಂಚಲ ಚಾಮರಂಗಳೊಳಂ ನಾಂದನಾರಂಗ ವಟ್ಟೆಯ ಮೇಲ್ಕಟ್ಟನೊಳಮಿಟ್ಟೆಳಮೆಸೆವ ಸಿಂದೂರದ ನೆಲಗಟ್ಟನೊಳ್ ಪಾಸಿದ ಕೆಂದಾವರೆಯೆಸಳ ಪಸೆಗಳುಮಂ ಮತ್ತೊಂದೆಡೆಯೊಳೇಲಾರಸದಿಂ ಸಿಂಪಣಿಗೆಗೊಟ್ಟು ಮುಟ್ಟ

ದೊಡಲ್ಲದಱಿಯಲ್ಬಾರದೆಂದೆನಿಪ ಭೃಂಗದ ಚಪ್ಪರಂಗಳುಮಂ ಪೆಱತೊಂದೆಡೆಯೊಳ್ ಸಹಕಾರರಸದಿಂ ತೊಯ್ದುರನೇಱಿಲ ತಳಿರ್ಗಳಿಂ ಪೊಸಯಿಸಿದ ಕುಳಿರ್ವ ಕಾವಣಂಗಳುಮಂ ಮತ್ತಮೊಂದೆಡೆಯೊಳ್ ಸಿರಿಸದೆಸಳಪಸಲೆಯ ಮೃಣಾಳನಾಳಧಾರಾಗೃಹಂಗಳ ಮೇಲೆ ಮುಗಿಲ್ಗಡವಿನಲರಧೂಳಿಯೊಳ್ ಪೊರೆದು ನಿಲಿಸಿದ ಯಂತ್ರಮಯೂರಂಗಳುಮಂ ಒಂದೆಡೆಯೊಳ್ ಜಂತ್ರದ ಮಱಿಯಾನೆಯ ಕರಪುಟಂಗಳಿಂ ಕದಡಿದ ತಾವರೆಗೊಳಂಗಳುಮನಂತುಮಲ್ಲದೊಂದೆಡೆಯೊಳ್

ಮಲಯಜವಾರಿಯಿಂ ಕುಳಿರ್ವ ಬಾವಿಗಳಲ್ಲಿ ಮೃಣಾಳದಂಡಮಂ
ಡಲಿಗಳ ದಂಡತೋರಣಕದಿಂ ನವಕಾಂಚನ ಕೇತಕೀದಳಂ
ಗಳ ಪರಿಡೋಣಿಯಿಂ ವಕುಳಮಾಲೆಯೊಳಾಲಿಸಿದಬ್ಜಿನೀದಳಾ
ವಳಿಗಳ ಮಾಲೆಗುಂಡಿಗೆಗಳಿಂ ಸಮೆದಾಡುವ ಊಟಳಂಗಳಂ ೨೧

ವ॥ ಅಂತವಂ ನೋಡುತ್ತಂ ಪೋಗೆ ಮತ್ತಮಲ್ಲಲ್ಲಿಗೆ ಪಳುಕಿನ ಬಲಾಕೆಗಳೊಳಂ ಬರೆದ ಸುರಶರಾಸನಂಗಳೊಳಂ ಸೊಗಯಿಸುವ ವಾರಿಧಾರಿಗಳಂ ಸುರಿಯುತಂ ನಡೆವ ಜಂತ್ರದ ಮುಗಿಲ್ಗಳುಮನಲ್ಲಲ್ಲಿಗೆ ಮುತ್ತಿನಪುಡಿಯ ನುಣ್ಮಳಲ್ಗಳಾಲವಾಲಂಗಳಿಂ ಕೂಡಿರ್ದೆಡೆವಿಡದೆ ಸುರಿವ ತೋರವನಿಗಳಿಂ ದುರ್ದಿನಂ ಮುಸಗಿಸುವ ಪತ್ರವೃಕ್ಷಂಗಳುಮನಲ್ಲಲ್ಲಿಗೆ ನಾಂದೆಱಿಕೆಗಳಂ ಬಿದಿರೆ ಕೆದಱುವ ತುಂತುಱಿಂ ಮಂಜು ಮುಸೆಗೆ ಪಾರ್ವ ಜಂತ್ರದ ಪತ್ರಶಕುನಿಗಳುಮನಲ್ಲಲ್ಲಿಗೆ ಮಧುಕರನಿಕರಮೆಂಬ ಕಿಂಕಿಣಿಗಳ ನುಣ್ಚರಂಗಳಿಂದೆಸೆವಲರುಯ್ಯಲೆಗಳುಮನಲ್ಲಲ್ಲಿಗೆ ತಾವರೆಯ ಕೊಡೆಯೆಲೆಗಳಿಂ ಮುಚ್ಚಿದ ಪಚ್ಚೆಯ ಪವಳದ ಪದ್ಮರಾಗದ ಪಳುಕಿನ ತಣ್ಗಳಸಂಗಳುಮನಲ್ಲಲ್ಲಿಗೆ ಕರ್ಪೂರಪಲ್ಲವ ರಸದಿನಧಿವಾಸಿಸಿದ ತಾವರೆಯ ನೂಲ ದುಗುಲಂಗಳುಮನಲ್ಲಲ್ಲಿಗೆಳವಾಟೆಯ ತಿರುಳೆಲೆಗಳೊಳಂ ತಾವರೆಯ ತಳಿರೆಲೆಗಳೊಳಂ ಪೊಸವೂಗಳೆಸಳ್ಗಳೊಳಂ ಸಮೆದ ಬಿಜ್ಜಣಿಗೆಗಳುಮಂ ಪೆಱವಂ ಪಲತೆಱದ ಶಿಶಿರೋಪಚಾರಂಗಳಂ ಮಾಳ್ಪ ಪರಿಜನಂಗಳುಮಂ ನೋಡುತ್ತಂ ಪೋಗೆವೋಗೆ

ಘನಸಮಯಂಗಳಿಕ್ಕೆವನೆ ಮಾಗೆಯಿರುಳ್ಗಳ ಬಿಟ್ಟಬೀಡು ಚಂ
ದನಕುಲಮಂದಿರಂ ಜಲನಿಧೀಶನ ವಾರಿವಿಹಾರಭೂಮಿ ನಂ
ದನವನದೇವಿಯರ್ಕಳೆಱತವಟ್ಟ ಹಿಮಾಲಯದಂತರಂಗಮೆಂ
ಬಿನೆಗಮಳುಂಬಮೊಪ್ಪುವ ಹಿಮಾಲಯಮಂ ನಡೆನೋಡಿದಂ ನೃಪಂ ೨೨

ಅಕ್ಕರ॥ ಉಡುಪವಿರಹದುಸ್ಸಹವಾಸರಂಗಳಂ ಕಳಿಪಲ್ಕೆ ಕುಮುದಿನಿಯಿರ್ಪ ತಾಣಂ
ಸಿಡಿಲ ಕಿಚ್ಚಿನ ಬೇಗೆಯನಾಱಿಸಲ್ ಜಲಧರಸಂಕುಲಮಿರ್ಪ ತಾಣಂ
ಕಡಲಬಳಗಂ ಬಾಡಬವಹ್ನಿತಾಪಮಂ ಪರಿಹರಿಸಲ್ಕೆ ಬಂದಿರ್ಪ ತಾಣಂ
ಮೃಡನ ಫಾಳೇಕ್ಷಣಾನಲನಳುರಲ್ಕೆ ಮುಗ್ಗಿಸಲ್ ಮನುಮುತನಿರ್ಪ ತಾಣಂ ೨೩

ವ॥ ಎಂದು ಭಾವಿಸುತ್ತಂ ಪೋಗೆವೋಗೆ ಕಡವಿನಲರ ಕೇಸರಂಗಳಿಂ ಪೊರೆವೆಲರ್ಗಳುಂ ಹಿಮಸ್ಪರ್ಶನದಿಂ ಕಂಟಕಿತವಾದಂತೆಯುಂ ಎಲರಲೆಪದಿಂ ನಡುಗುವೆಲೆದುಱುಗಲಿಂ ಕದಳೀವನಂಗಳುಮ್ಮೈಕಿಲಡರ್ದು ನಡುಗಿದಪುವೆಂಬಂತೆಯುಂ ಅಲರ್ವಂಡನುಂಡು ಸೊಕ್ಕಿ ಮೊರೆವ ಮೊರೆಪದಿಂ ತುಂಬಿಗಳುಂ ಪಲ್ಪಱಿಗುಟ್ಟಿದಪುವೆಂಬಂತೆಯುಂ ಕೂಡೆ ಮುಸುಱುವ ಮಱಿದುಂಬಿಯ ಬಂಬಲಿಂ ಲತೆಗಳುಂ ಕರಿಯ ದಡ್ಡಿಯಂ ಕವಿದಂತೆಯುಮಾಗೆ ಪಿಡಿಕ್ಕೈಸಲಪ್ಪ ತಂಪಿಂ ತೀವಿದಂತಾಗಿ

ಮನಮಮೃತಾಂಶುಮಯಂ ಚೇ
ತನೆ ಬಿಸಮಯಮಿಂದ್ರಿಯೋತ್ಕರಂ ಕುಮುದಮಯಂ
ತನು ಸಾಂದ್ರಚಂದ್ರಿಕಾಮಯ
ಮೆನಿಸಿದುದು ನರೇಂದ್ರಚಂದ್ರಮಂಗಾ ಕ್ಷಣದೊಳ್ ೨೪

ವಾರಿಮಯಂ ದಿವಸಂ ಮಣಿ
ಹಾರಮಯಂ ತಿಗ್ಮರೋಚಿ ಕಿರಣಾವಳಿ ಕ
ರ್ಪೂರಮಯಂ ಪವನಂ ನೀ
ಹಾರಮಯಂ ಭುವನಮೆನಿಸಿ ತೋಱಿತ್ತಾಗಳ್ ೨೫

ವ॥ ಅಂತು ಪೊರ್ದೆ

ಕುಳಿರ್ವ ಹಿಮಾಲಯದೊಳ್ ಕೋ
ಮಳೆ ನಿಜಪರಿವಾರಸಹಿತಮಿರ್ದಳ್ ಹಿಮವ
ತ್ತಳದೊಳ್ ತರಂಗಿಣೀ ಸಂ
ಕುಳದಿಂ ಬಳಸಿರ್ದ ದಿವಿಜನದಿಯೆಂಬಿನೆಗಂ ೨೬

ಪರಿವೇಷದ ತೆಱದಿಂದನ
ವರತಂ ಕರ್ಪೂರರಸದ ಪರಿಕಣಿಸುತ್ತಂ
ಪರಿಯಲ್ ಮೃಣಾಳಪೊಸವಂ
ದರ ನಡುವಣ ಪೂವಿನೆಸಳ ಪಾಸಿನೊಳಿರ್ದಳ್ ೨೭

ವ॥ ಆಗಳ್

ಅಪರಿಮಿತಂ ಪೊಣ್ಮುವ ಬಾ
ಷ್ಪಪಯೋಧಾರಾಳಿ ಪರಿವ ಪರಿನಾಳಿಕೆಯೊಂ
ದುಪಮೆಗೆ ಬಂದಿರ್ದುದು ಕ
ರ್ಣಪೂರನವಕೇತಕೀದಳಂ ಕಾಮಿನಿಯಾ ೨೮

ಸಂತಾಪಭೀತಿಯಿಂ ತನು
ಕಾಂತಿ ತೆರಳ್ದೋಡಿದಪುದೆನಲ್ ನಿಡುಸುಯ್ಯಿಂ
ದಂ ತೊಲಗೆ ಮೇಲುದೆಸೆದುದು
ಕಾಂತೆಯ ಚಂದನವಿಲಿಪ್ತಘನಕುಚಯುಗಳಂ ೨೯

ಅರಸಂ ಬರಲೌತ್ಸುಕ್ಯದೆ
ಪರಿಯಲ್ ಗಱಿಯಿಟ್ಟುವೆನಿಸಿ ಮಾರ್ತೊಳಗುವ ಚಾ
ಮರದಿಂದಮೆಸೆವ ಕುಚಮಂ
ಕರಕಮಲದಿನೊತ್ತಿ ಕಾಂತೆ ಕಣ್ಗೆಸೆದಿರ್ದಳ್ ೩೦

ಯುವತಿ ಹಿಮೋಪಲಪ್ರತಿಮೆಯಂ ನಳಿತೋಳ್ಗಳಿನಾಗಳಾಗಳ
ಪ್ಪುವ ಶಶಿಸಾಲಭಂಜಿಕೆಯನೊಯ್ದು ಕದಂಪಿನೊಳಾಗಳಾಗಳೊ
ತ್ತುವ ಶಶಿಕಾಂತಪುತ್ರಿಕೆಯ ಮೇಲೆ ನಿಜಾಂಘ್ರಿಯನಾಗಳಾಗಳಿ
ಕ್ಕುವ ಪಿರಿದಪ್ಪ ಬೇವಸದೊಳಂ ತಡೆದಿರ್ದಳದೊಂದು ಬೇಗಮಂ ೩೧

ಸ್ಮರಪರವಶಂಗಳಾದಂ
ತಿರೆ ಮುಕ್ತಾತ್ಮಂಗಳೆನಿಸಿಯುಂ ಹಾರಂಗಳ್
ಕರನಿಕರದಿಂದೆ ಮುಂ ತಾಂ
ಸರಸಿಜಲೋಚನೆಯನಾದವಪ್ಪಿದುವಾಗಳ್ ೩೨

ಸುಂದರಿ ನವೇಂದುಮಣಿಮುಕು
ರಂದಳೆದೊತ್ತಿರ್ದಳುರದೊಳಿನ್ನುದಯಂ ಗೆ
ಯ್ವಂದೆನ್ನ ಕೊಂದೆ ನೀನೆಂ
ದಿಂದುವಿನೆರ್ದೆಯಂಟೆ ಸೂರುಳಿಡಿಸುವ ತೆಱದಿಂ ೩೩

ವ॥ ಅಂತು ಕಾದಂಬರೀ ದೇವಿಯುಂ ನೋಡಿ ದೂರದೊಳೆ ಕಂಡನನ್ನೆಗಂ ಮೂರ್ತಿನಾರಾಯಣಂ ಬಂದನೆಂದು ಪೇೞಲುತ್ತರಳತಾರಕೆಯಾಗಿ

ಬರವನದಾರ್ ಪೇೞ್ದಟ್ಟಿದ
ರರಸಂ ಬಂದಪನೆ ಕಂಡಿರೇ ನೀವೆನಿತಂ
ತರವಾವೆಡೆಯೆನುತೆನುತಂ
ಪರಿಜನಮಂ ಕಣ್ಣ ಸನ್ನೆಯಿಂ ಬೆಸಗೊಂಡಳ್ ೩೪

ವ॥ ಅಂತು ಬೆಸಗೊಳ್ವುತ್ತಂ ಗೆಂಟನೊಳೆ ಬರುತಿರ್ದ ಯುವರಾಜನಂ ಭೋಂಕನೆ ಕಂಡು ನವಗ್ರಾಹಕರಿಣಿಯಂದದಿನೂರುಸ್ತಂಭ ವಿಧೃತೆಯಾಗಿ

ನವ ರೋಮರಾಜಿ ತಾಮ್ರ
ತ್ರಿವಳಿಯೊಳ್ ತೆರೆಗೊಳಲ್ಕೆ ಮುರಿದೇಟ್ವಿಡೆಯೊಳ್
ಯುವತಿ ನಿಜಾಂಗಮನಂಗೋ
ದ್ಭವನಾಗಳ್ ಪಿಂಡಿ ಪಿಟಿದನೆಂಬವೊಲಿರ್ದಳ್ ೩೫

ವ|| ತದನಂತರಂ

ನಡುಗುತ್ತುಂ ಮೇಲುದೆಂದೊರ್ವೊದಲೆ ತೆಗೆದು ಹಾರಾಂಶುವಂ ಸಾರ್ಚುತಂ ಸೋ
ರ್ಮುಡಿಯಂ ಸಸ್ವೇದಹಸ್ತಾಬ್ಜದಿನೆಟಿವುತವಾತ್ಮಪ್ರತಿಚ್ಛಾಯೆಯಂ ಕ
ಯ್ಗಡು ನೀನೆಂಬಂದದಿಂ ನಿರ್ಮಲತರ ಮಣಿಬದ್ಧಾವನೀಭಾಗಮಂ ತ
ನ್ನೆಡಗಯ್ಯಿಂ ಮೆಲ್ಲನೊತ್ತುತ್ತೆ ಸೆವಲರ್ವಸೆಯಿಂ ಕಾಂತೆಯೆಂತಾನುಮೆಟ್ದಿಳ್ ೩೬

ವ|| ಆಗಳ್ ಮನುಜಮಕರಧ್ವಜನೆಯ್ದೆವಂದು ಮುನ್ನಿನಂದದೊಳ್ ಕಾದಂಬರಿಗೆ ಮಹಾಶ್ವೇತಾಪ್ರಣಾಮಪುರಸ್ಸರಮುಪದರ್ಶಿತವಿನಯನುಮಾಗಿ ಕಯ್ಗಳಂ ಮುಗಿವುದು ಮಾಕೆಯುಂ ಕಯ್ಗಳಂ ಮುಗಿದು ಲಲಾಟಿಕಾಚಂದನಭರದಿನೆಱಗಿದಂತೆ ಕಿಂಚಿದವನತ ಮುಖಿಯಾಗಿ.

ನಳಿನದಳಾಯತಾಕ್ಷಿ ಯುವರಾಜ ನಿಜಪ್ರತಿಬಿಂಬಮಿಲ್ಲಿ ಬಂ
ದೆಳಸಿದುದಪ್ಪೊಡಂ ಸಫಲಮೆನ್ನಯ ಜೀವನವೆಂಬ ಮಾಟಕ್ಕಿಯಿಂ
ಪೊಳೆವವತಂಸಪುಷ್ಪರಜದಿಂ ಪೊರೆದಿರ್ದ ಕಪೋಲಪಟ್ಟಮಂ
ತೊಳೆದಳನಾರತಂ ಸುರಿವ ಚಂದನಶೀತಲ ಹರ್ಷವಾರಿಯಿಂ ೩೭

ವ|| ಆಗಳಾ ಗಂಧರ್ವರಾಜನಂದನೆ ಮುನ್ನಿರ್ದ ಕುಸುಮಶಯನದೊಳ್ ಕುಳ್ಳಿರೆ ವಿದಗ್ಧವಿದ್ಯಾಧರಂ ದೌವಾರಿಕೆಯರ್ ಕೆಲದೊಳಿಕ್ಕಿದ ಮಣಿಮಯಾಸನಮಂ ಕಾಲೊಳ್ ನೂಂಕಿ ನೆಲದೊಳ್ ಕುಳ್ಳಿರ್ದುಂ ಕಾದಂಬರೀದೇವಿಗೆ ಕೇಯೂರಕಂ ಪೊಡವಟ್ಟು.

ವಸುಧಾಧೀಶನ ಪರಮ
ಪ್ರಸಾದಭಾಗಿನಿಯನಡಪವಳಿತಿಯನವಧಾ
ರಿಸು ಪತ್ರಲೇಖೆಯೆಂಬುದು
ಪೆಸರೆಂದಾ ಸತಿಯನರಸಿಯುಂ ಕಾಣಿಸಿದಂ ೩೮

ವ|| ಅಂತಾ ಪತ್ರಲೇಯಂ ನೋಡಿ

ಎನಿತೊಂದು ಪಕ್ಷಪಾತಮೊ
ವನಿತೆಯರಂ ಮಾಡುವೆಡೆಯೊಳಬ್ಜಭವಂಗಂ
ದಿನಸುಂ ಕಾಂತೆಯ ರೂಪನೆ
ಮನದೊಳ್ ಗಂಧರ್ವಕನ್ನೆ ಭಾವಿಸುತಿರ್ದಳ್ ೩೯

ತನಗಾಗಳ್ ಪೊಡವಟ್ಟಳಂ ಪದಪಿನಿಂ ಪೊಣ್ಮುತ್ತಬಾಯಿತ್ತಬಾ
ಯೆನುತಂ ತನ್ನ ಕೆಲಕ್ಕೆ ಕಾಂತೆ ಕರೆದಾದಂ ಭ್ರಾಂತಿಯಿಂದಂ ಸಖೀ
ಜನಮೆಲ್ಲಂ ನಡೆನೋಡೆ ಪಿಂತಿರಿಸಿಕೊಂಡಾಗಳ್ಮೊದಲ್ಗೊಂಡಲಂ
ಪಿನೊಳಾ ಕಾಂತೆಯ ಮೆಯ್ಯನೊಯ್ಯನೆಳವುತ್ತಿರ್ದಳ್ ಕರಾಂಭೋಜದಿಂ ೪೦

ವ॥ ಆಗಳ್ ಯುವರಾಜಂ ಕೃತಸಕಲಾಗಮನೋಚಿತೋಪಚಾರನಾಗಿ ತದವಸ್ಥೆಯಪ್ಪ ಚಿತ್ರರಥನಂದನೆಯಂ ನೋಡಿ.

ಇಂತಪ್ಪವಸ್ಥೆಯಿಂದಿವ
ಳಿಂತಿರೆಯುಂ ದುರ್ವಿದಗ್ಧವೆನ್ನ ಮನಂ ಮು
ತ್ತೆಂತುಂ ನಂಬಿದುದಿಲ್ಲಾ
ನಿಂ ತಿಳಿವೆಂ ನಿಪುಣವಚನದಿಂ ಕಾಮಿನಿಯಂ ೪೧

ವ॥ ಎಂದು ತನ್ನ ಮನದೊಳೆ ಬಗೆದು ವಾಗ್ವಿಲಾಸಿನೀವಲ್ಲಭಂ ವಿದಗ್ಧ ವಿದ್ಯಾಧರಂ ಗಂಧರ್ವರಾಜನಂದನೆಯನಿಂತೆಂದಂ

ಪರಿತಾಪಮಾವತೆಱದಿಂ
ದೊರೆಕೊಂಡುದೊ ದೇವಿ ನಿನಗೆ ನೋವಿದು ನಿನ್ನಿಂ
ಪಿರಿದೆನ್ನದದಱನೆಂತುಂ
ಸರೋಜಮುಖಿ ನಿನ್ನ ಸುಖಮನಾಂ ಬಯಸಿದಪೆಂ ೪೨

ಎನಿತಂಗಜಾತತಾಪಮೊ
ತನು ಕಂಪಿಸುತಲರಮೇಲೆ ಬೀೞ್ದುದಿದಂ ಕಂ
ಡನುಕಂಪಮಾನಮೆನ್ನಯ
ತನುವುಂ ಬೀೞಲ್ಕೆ ಬಗೆದಪುದು ಮೃಗನಯನೇ ೪೩

ವ॥ ಅದಲ್ಲದೆಯುಂ ದೇವಿ ಭವದವಸ್ಥೆಯಂ ಕಂಡೀ ಪರಿಜನಂ ಮಱುಗುತ್ತಿರ್ದ ಪುದದು ಕಾರಣದಿಂ

ಲಲಿತಾಂಗಿ ನೀಂ ವಿವಾಹೋ
ಜ್ವಲವೆನಿಸಿದ ಮಂಗಳಪ್ರಸಾಧನ ಚಯಮಂ
ತಳೆ ಕುಸುಮಶಿಲೀಮುಖಮಂ
ತಳೆದೊಡೆ ನವಲತಿಕೆ ಪಿರಿದುಮೊಪ್ಪುವುದಲ್ತೆ ೪೪

ವ॥ ಎಂದು ನುಡಿಯೆ ಕಾದಂಬರೀದೇವಿ ಬಾಲ್ಯದಿಂ ಸ್ವಭಾವಮುಗ್ಧೆಯಾಗೆಯುಂ ಮನ್ಮಥೋಪದಿಷ್ಟಪ್ರಜ್ಞೆಯಿಂ ರಾಜಸರ್ವಜ್ಞನವ್ಯಕ್ತವ್ಯಾಹಾರಸೂಚಿತಮಪ್ಪರ್ಥಮಂ ಮನದೊಳಱಿದಿನಿವಿರಿದು ಮನೋರಥಮಸಂಭಾವ್ಯಮೆಂದು ಭಾವಿಸುತ್ತಂ ಶಾಲೀನತೆಯ ನವಲಂಬಿಸಿ ನುಡಿಯಲಱಿಯದೆ

ಸುದತಿ ಪೆಱತೊಂದು ನೆವದಿಂ
ಕೆದಱಿದಳೊಂದಿನಿಸು ಮಂದಹಾಸದ್ಯುತಿಯಂ
ವದನಾಬ್ಜಪರಿಮಳಾಗತ
ಮದಾಳಿ ಪಟಲಾಂಧಕಾರಮಂ ಬಿದಱಿಪವೋಲ್ ೪೫

ವ॥ ಆಗಳಾ ಕಾದಂಬರೀದೇವಿಯ ಕೆಳದಿ ಮದಲೇಖೆಯೆಂಬಳ್ ಮೂರ್ತಿನಾರಾಯಣನ ಮೊಗಮಂ ನೋಡಿ

ಇದನೇನೆಂದಪುದಿಂತುಟೆಂದುಸಿರಲಾರ್ಗಂ ಬಾರದೀ ತಾಪದೊಂ
ದೊದವಿಂತೀ ಸುಕುಮಾರಭಾವಯುತೆಗಾದಂ ತಾಪಮಂ ಮಾಡದಾ
ವುದು ಪೇೞಿಂತುಟೆ ದಲ್ ಮೃಣಾಳಿನಿಗೆ ತೀವ್ರಾಗ್ನಿಸ್ವರೂಪಂಗಳಾ
ಗದೆ ಮಾಣ್ದಿರ್ದುವೆ ಚಂದ್ರಿಕಾಪ್ರಸರಮುಂ ನೀಹಾರವಿಸ್ತಾರಮುಂ ೪೬

ನೀರೇಜ ತಾಳವೃಂತ ಸ
ಮೀರಾದಿಗಳಿಂದೆ ತಾಪಮೊದವಿದಪುದು ನೋ
ಡೀ ರಮಣಿಗೆ ಧೀರತ್ವದ
ಸಾರತಸಂಗತಿಯದೊಂದೆ ಜೀವಾಧಾರಂ ೪೭

ವ॥ ಎಂದು ಕಾದಂಬರೀಹೃದಯಗತಮಪ್ಪುದನೇ ಮದಲೇಖೆ ನುಡಿಯೆ ತನ್ನ ನುಡಿಗಳ್ಗೆ ಪ್ರತ್ಯುತ್ತರದಂತೆತೆಱದೊಳಮೀ ನುಡಿ ಘಟಿಯಿಸುವುದೆಂದು ಸಂದೇಹದೋಲಾಧಿರೂಢಚಿತ್ತನಾಗಿ ಮಹಾಶ್ವೇತೆವೆರಸು ಪ್ರೀತ್ಯುಪಚಯಚತುರಂಗಳಪ್ಪ ವಚನಂಗಳಂ ನುಡಿಯುತ್ತಂ ಪಿರಿದುಬೇಗಮಿರ್ದು ಗಂಧರ್ವರಾಜನಂದನೆಯಿಂ ತನ್ನನೆಂತಾನುಂ ಬಿಡಿಸಿ ಬೀೞ್ಕೊಂಡು ನಿಜಸ್ಕಂಧಾವಾರಕ್ಕೆ ಪೋಗಲೆಂದು ತದೀಯಭವನಮಂ ಪೊಱಮಟ್ಟೆಂದಾಪ್ರಯುಧದ ಬೆಂಗೆನಂದಾಗಳ್ ಕೇಯೂರಕು ದೇವ ಪತ್ರಲೇಖೆಯುಂ ಕೆಲವು ದಿನಕ್ಕೆ ಕಳು

ಪಿದಪೆವಿರಿಸುವುದೆಂದು ಪ್ರಥಮದರ್ಶನಜನಿತಪ್ರೀತಿಯಪ್ಪ ಕಾದಂಬರೀದೇವಿಯ ಬೆಸದಿಂ ಮದಲೇಖೆ ಬಿನ್ನಪಂಗೆಯ್ದಟ್ಟಿದಳೆಂಬುದುಂ ಮನುಜಮಕರಧ್ವಜನಿಂತೆಂದಂ

ಆರೊ ಪಡೆದಪರಿದಂ ಕೇ
ಯೂರಕ ದೇವೀಪ್ರಸಾದಮಂ ಧನ್ಯೆಯಿವಳ್
ಸಾರಿರ್ದಪಳ್ ಗಡಿಂತೀ
ಕಾರುಣ್ಯಪದಕ್ಕೆ ಪತ್ರಲೇಖೆಯೆ ನೋಂತಳ್ ೪೮

ವ॥ ಎಂದು ಪತ್ರಲೇಖೆಯನಿರಲ್ವೇಟ್ಟು ನಡೆಗೊಂಡು ನಿಜಸ್ಕಂಧಾವಾರಮಂ ಪುಗುವಾಗಳ್

ಚರನುಜ್ಜೈನಿಯಿನೊರ್ವನಾಗಳೆ ಬರಲ್ ಕಾಣುತ್ತಮೌತ್ಸುಕ್ಯದಿಂ
ಪರಿವಾರಂಬೆರಸೆಮ್ಮ ತಂದೆಯುಮಶೇಷಾಂತಃಪುರಸ್ತ್ರೀಜನಂ
ಬೆರಸೆಮ್ಮಬ್ಬೆಯುಮಿರ್ದರೇ ಸುಖದಿನೆಂದಾವಿರ್ಭವತ್ಪ್ರೀತಿನಿ
ರ್ಭರವಿಸ್ತಾರಿತನೇತ್ರನಂದು ಬೆಸಗೊಂಡಂ ಚಂದ್ರಚೂಡಾಹ್ವಯಂ ೪೯

ವ॥ ಅಂತು ಬೆಸಗೊಳ್ವುದುಮಾ ಲೇಖವಾಹಕಂ ಪೊಡಮಡುತ್ತೆಯ್ದೆವಂದು ದೇವರ್ ಬೆಸಸಿದಂದದೊಳೆಲ್ಲರುಂ ಸುಖದಿನಿರ್ದರೆಂದು ಬಿನ್ನವಿಸಿ ನಿಮ್ಮ ತಂದೆಯರಟ್ಟಿದ ರಾಜಾದೇಶಮಿದೆಂದು ಲೇಖನದ್ವಿತಯಮಂ ನೀಡೆ

ಯುವರಾಜನೃಪಂ ನಯವಿನ
ಯವಿನೂತಂ ತಲೆಯೊಳಾಂತು ಕೈಕೊಂಡು ಮಹೋ
ತ್ಸವದಿಂದಂ ರಾಜಾದೇ
ಶವನಾಗಳ್ ಬಿರ್ಚಿನೋಡಿ ತಾಂ ಬಾಚಿಸಿದಂ ೫೦

ವ॥ ಅದೆಂತೆನೆ :—ಸ್ವಸ್ತಿ, ಸಕಲರಾಜಶಿಖಂಡಶೇಖರಾರ್ಚಿತಚರಣಾರವಿಂದನುಂ ಪರಮಮಾಹೇಶ್ವರನುಂ ಮಹಾರಾಜಾಧಿರಾಜನುಮೆನಿಸಿದ ಶ್ರೀಮತ್ತಾರಾಪೀಡದೇವಂ ಸಕಲಗುಣಸಂಪದಾಯತನನಪ್ಪ ಯುವರಾಜನಂ ಪರಮಾಶೀರ್ವಚನಪುರಸ್ಸರಂ ಕಾರ್ಯಮಂ ಬೆಸಸಿರ್ಪಂ

ಪ್ರಜೆಯೆಲ್ಲಂ ಕ್ಷೇಮದಿಂದಿರ್ದುದು ಕುಶಲದಿನಿರ್ದಪ್ಪೆವಾವಾದೊಡಂ ದಿ
ಗ್ವಿಜಯಂಗೆಯ್ಯಲ್ಕೆ ಪೋದಂ ಪಲವುದಿವಸಮಾದತ್ತು ಕಾಣಲ್ಕೆವೇಟ್ಕುಂ
ವಿಜಯಾಲಂಕಾರನಂ ಪುತ್ರನನೆನುತೆ ಮಹೋತ್ಕಂಠೆಯಿಂ ತನ್ನಮಾತೃ
ವ್ರಜಮಿರ್ದತ್ತೋಲೆಯಂ ಬಾಚಿಸುವುದು ತಡಮೆಟ್ಟಿಂದು ತಾಂ ಕಾಣ್ಬುದೆಮ್ಮಂ ೫೧

ವ॥ ಎಂದು ಬಾಚಿಸಿ ಕುದುರೆಯನೇಱಿರ್ದಂದದೊಳೆ ಪ್ರಯಾಣಭೇರಿಯಂ ಪೊಯ್ಸಿ

ಮುಂದಿರ್ದ ಮೇಘನಾದನ
ನೆಂದಂ ನೀನಿರ್ದು ಪತ್ರಲೇಖಾಂಗನೆಯಂ
ಮುಂದಿಟ್ಟು ಬೞಿಕೆ ಬರ್ಪುದು
ತಂದಪನಿಲ್ಲಿವರಮಾಕೆಯಂ ಕೇಯೂರಂ ೫೨

ವ॥ ಕೇಯೂರಂಗೆ ನೀನಿಂತು ಪೇೞ್ವುದು.

ನೆನೆಯದೆ ತಮ್ಮ ವತ್ಸಲತೆಯಂ ಪರಿಭಾವಿಸದೊಳ್ಪನಟ್ಟಿಱಿಂ
ಮನದೊಳಣಂ ವಿಚಾರಿಸದೆ ನಿಸ್ಪೃಹತಾತ್ಮಕನೆಂಬಳೀಕಭ
ಕ್ತನುಮುಪಚಾರಶೀಲನುಮೆನಿಪ್ಪೆನಗಂ ನುಡಿಯೊಂದು ಮೂಟವೊಂ
ದೆನಿಸಿದ ಮಾನವಂಗೆನಗೆ ದೇವಿ ಹಸಾದಮನೇಕೆ ಮಾಡಿದಳ್ ೫೩

ವ॥ ಅದಲ್ಲದೆಯುಂ

ಎನಸುಂ ಕೈವಾರದಿಂದಿಲ್ಲದ ಗುಣಗಣಮಂ ರಾಗದಿಂ ಕೆಮ್ಮನೀ ಪಾಂ
ಥನೊಳಧ್ಯಾರೋಪಣಂಗೆಯ್ದನಗನವರತಂ ಬಣ್ಣಿಸುತ್ತಿರ್ದಳೀ ಮ
ರ್ತ್ಯನೊಳಾವೊಳ್ಪಪ್ಪೊಡೆಂತೀ ತೆಱನುಮರಿದೆನುತ್ತಂ ಮಹಾಶ್ವೇತೆಯಂ ತಾಂ
ಮನದೊಳ್ ಮೇಣ್ ಮಾತಿನೊಳ್ ಮೇಣಱಿಗುನುರಸಿಯೆಂದಾಂ ಕರಂ
ನಾಣ್ಚಿದಪ್ಪೆಂ ೫೪

ಜನಕಾಜ್ಞೆ ಮೀಱಲಂಗಮೆ
ತನುವಿಂತವರೊಡನೆಯಾಗಿ ಸಲ್ಗೆಮ ಗಂಧ
ರ್ವನಿವಾಸಕ್ಕನುವಿಸುವೀ
ಮನವಪ್ಪೊಡೆ ತನಗೆ ಮಾಱುವೋದತ್ತೀಗಳ್ ೫೫

ವ॥ ಎಂದಿವು ಮೊದಲಾಗಿ ಪಲವುಮಂ ಗಂಧರ್ವರಾಜನಂದನೆಗೆ ಕೇಯೂರಕನಿಂ ಬಿನ್ನವಿಸಲ್ವೇೞ್ಕುಮೆಂದು ಮೇಘನಾದಂಗೆ ಪೇೞ್ದು ಕೆಲದೊಳಿರ್ದ ವೈಶಂಪಾಯನಂಗಂ ಕಟಕಮಂ ಸಂವರಿಸಿಕೊಂಡುಬರ್ಪುದೆಂದುಮೊಪ್ಪಿಸಿ

ಖುರನಿರ್ಭಿಣ್ಣಮಹೀತಲಂ ಗಮನಹೇಲಾಹರ್ಷಹೇಷಾರವಂ
ಸ್ಫುರಿತಾಂತಧ್ವಜವಾತ್ತಕುಂತಲತಿಕಂ ಸಂವಾಹವಾಜಿವ್ರಜಂ
ಬರೆ ತಾನೇಱಿದ ದಿವ್ಯವಾಜಿಗಿನಿಸುಂ ಪಕ್ಕಾಗಿ ಕಾದಂಬರೀ
ವಿರಹೋತ್ಕಂಠಿತಚಿತ್ತನಂದು ತಳರ್ದಂ ವೈರೀಭಕಂಠೀರವಂ ೫೬

ಚಂದ್ರಾಪೀಡನ ಪುನರಾಗಮನ

ವ|| ಅಂತು ತಳರ್ದು ನಡೆಗೊಂಡು ಮೊದಲೊಳ್ ಮಿಳಿಸುತ್ತಿಂಗಗ್ಗಳಮಾಗಿ ಕಡುಗೊರ್ಬಿಂ ಬಳೆದ ಪೆರ್ಮರಂಗಳ ತಿಂತಿಣಿಯೊಳಂ ಕಾಡಾನೆಗಳೊತ್ತಿ ಕೀಲ್ತಿಡೆಗೆಡೆದ ಮರಂಗಳಿಂ ಕೊಂಕುವೆತ್ತ ಬಟ್ಟೆಗಳೊಳಂ ಪೆರ್ಮರಂಗಳ ಮೊದಲೊಳ್ ಕಂಡರಿಸಿದ ಚಂಡಿಕಾ ಪ್ರತಿಮೆಗಳೊಳಮತಿವಿಸ್ಮಯಕರಮಾಗಿ ತಡಿವಿಡಿದು ಮಂದೈಸಿ ನಿಂದ ಕರಂಜದ ಪೂಗೊಂಚಲುಗಳುಮಂ ಬಟ್ಟೆವೋಪರ್ ಬಟಲ್ಕೆಗೞಿದುದನಱಿಪುವ ಬಾಡುಂದಳಿರ ಪಾಸಿಕೆಗಳುಮಂ ಪಲವುಂ ಬಣ್ಣದೆಲೆಗೊಳಿಯನೀರ್ಗಳುಮನಪ್ಪುಕೆಯ್ದು ನಿಡುಮರದ ತುದಿಗೋಡುಗಳೊಳ್ ಕಟ್ಟಿದ ತೃಣಪುಲೀ ಚಿಹ್ನಂಗಳಿನಱಿಯಲಾದ ಕಾಡಪೞವಾವಿಗೆ ಗಳೊಳಂ ಬಿಡದೆ ಬಂಡನುಗುಳ್ವಲರ್ದುಱುಗಲಿಂ ಮಂದೈಸಿದ ಸಿಂಧುವಾರವನರಾಜಿಯಿಂ ನಸುಬೆಳರ್ತ ತಡಿಗಳುಮಂ ಮರದ ತುದಿಗೋಡುಗಳೊಳುಲಿವ ಪಕ್ಕಿಗಳುಮಂ ಲತೆಯ ಪೊದಱ ಪುದುವಿಂ ಪೆಣೆದ ಮಣಲ್ದಾಣಂಗಳುಮಂ ಪಥಿಕರಱಿಲ್ಗೊಂಡು ತೋಡಿದಱುಂ ಬನೀರಬಗರಗೆಗಳುಮನೊಳಕೆಯ್ದು ಬತ್ತಿದ ಪಳ್ಳಂಗಳೊಳಮತಿರೌದ್ರಮಾದ ಪೇರಡವಿ ಯೊಳಗೆ ಬರ್ಪಾಗಳ್

ದೆಸೆದೆಸೆಯೊಳ್ ಪಸರಿಸುತಿರೆ
ಪೊಸತೊಂಡೆಯ ಪಣ್ಣ ಬಣ್ಣಮಂ ಮಸುಳಿಪ ಕೆಂ
ಬಿಸಿಲ ಮಿಸುಪಿನಿಸು ಪಡುವಣ
ದೆಸೆಗವಲಂಬಿಸಲೊಡರ್ಚಿದತ್ತಿನಬಿಂಬಂ ೧

ದಿನಕೃದ್ಬಿಂಬಸ್ಫುರದ್ದರ್ಪಣಕಲಿತಕರಾಳತ್ರಿಶೂಲಂ ಕನತ್ಕಾಂ
ಚನಚಂದ್ರಾರ್ಧಾವಳೀಪ್ರಾಂಚಿತಶಿಖರಮಯಶ್ಶೃಂಖಲಾಬದ್ಧಘಂಟಾ
ಘನಘೋಷಂ ರಕ್ತಸಿಕ್ತಾಸಿತಚಮರರುಹೋಚ್ಛ್ವಾವಚೂಲಂ ಬೃಹಚ್ಚಂ
ದನಶಾಖಾಬದ್ಧರಕ್ತಧ್ವಜವಿನಿಸಿನಿಸುಂ ಕಾಣಲಾತ್ತದಾಗಳ್ ೨

ವ|| ಅಂತಾ ಧ್ವಜಮಂ ಕಂಡದನೆಯ್ದೆವಂದು ಲೋಹದ ತೋರಗಂಭಂಗ ಳೊಳಗೆ ಮುರಿಗೇಶದಿನೆಸೆವ ಶಬರರ ತಲೆಗಳೋಳಿಯಂತೆ ರಕ್ತಚಾಮರಂಗನೊಳಕೆಯ್ದು ಕರ್ಬೊನ್ನ ಕನ್ನಡಿಯತೋರಣಂಗಳೊಳಮುಗುರ್ವಿಸುವ ಚಂಡಿಕಾಗೋಪುರದ್ವಾರಪುರೋ ಭಾಗದೊಳ್ ಚಂದ್ರಚೂಡಾಹ್ವಯನಿಂದ್ರಾಯುಧದಿಂದವನಿತಳಕ್ಕವತರಿಸಿ ಪುಗುವಲ್ಲಂ ಜನಶಿಲಾವೇದಿಕೆಯೊಳ್ ನೆತ್ತರಿಂ ಪೊರೆದ ಕಯ್ಗಳಿಂ ಜವನಪ್ಪಳಿಸಿದಂತಿರ್ದ ರಕ್ತಚಂದನ ಚರ್ಚೆಗಳಂ ನೆತ್ತರೆಗೆತ್ತು ನಕ್ಕುವ ಬಳ್ಳುಗಳಮನತಿರೌದ್ರದೇಹನಪ್ಪ ಲೋಹದ ಮಹಾ ಮಹಿಷನುಮನೊಂದೊಂದೆಡೆಯೊಳ್ ಬೇಡರರ್ಚಿಸಿದ ಕಾಡೆಮ್ಮೆವೋರಿಗಳ ಕಣ್ಗಳಂತಿರ್ದ

ರಕ್ತೋತ್ಪಲಂಗಳುಮನೊಂದೆಡೆಯೊಳ್ ಸಿಂಗದುಗುರ್ಗಳಿನರ್ಚಿಸಿದಂತಿರ್ದ ಕೆನ್ನಗಸೆಯ ಮುಗುಳ್ಗಳುಮನೊಂದೊಂದೆಡೆಯೊಳ್ ಕಾಡೆಮ್ಮೆವೋರಿಗಳ ತಿಂತಿಣಿಯುಮನೊಂದೆಡೆಯೊಳ್ ಕೊಯ್ದಿರ್ದ ನಾಲಗೆಯ ರಾಶಿಗಳುಮನೊಂದೊಂದೆಡೆಯೊಳ್ ಕಳೆದಿರ್ದ ಕಣ್ಣಾಲಿಗಳ ಪುಂಜಂಗಳುಮನೊಂದೊಂದೆಡೆಯೊಳರಿದಿಕ್ಕಿದ ಪಂದಲೆಗಳ ಸಂದಣಿಗಳುಮಂ ಕೊಂಬುಕೊಂಬುದಪ್ಪುದೆಱಗಿದ ರಕ್ತಕುಕ್ಕುಟಂಗಳಿಂ ಭಯದೊಳಕಾಲಕುಸುಮಸ್ತಬಕಮಂ ತೋಱುವಂತಿರ್ದ ರಕ್ತಾಶೋಕಾನೋಕಹಂಗಳುಮಂ ಶಂಕಾಜ್ವರಕಂಪಿತಮೆನಿಸಿದ ಕದಳಿಕಾವನಮುಮಂ ಚಂಡಿಕಾಪರಿಗ್ರಹಪ್ರಚಂಡಗಳಪ್ಪ ಕಿಶೋರಕೇಸರಿಗಳುಮನವಲೋಕಿಸುತ್ತಂ ಪೋಗೆವೋಗೆ

ನೆಗೆದೆತ್ತಂ ಧೂಪಧೂಮಂ ಪಸರಿಸೆ ನಸುಗಂದಿರ್ದ ಕೆಂಬಟ್ಟೆಯಿಂ ಗಂ
ಟೆಗಳಿಂ ಮಾಯೂರಕಂಠಾವಳಿಯಿನೆಸೆದಿರಲ್ ತೋರಣಂ ಕೂಡೆ ಕಣ್ಬು
ಬ್ಬೆಗಮಂ ತಾಳ್ದಿರ್ದ ದಂತಾರ್ಗಳ ಕಲಿತ ಕವಾಟಂಗಳಿಂ ಚಂಡಿಕಾಗ
ರ್ಭಗೃಹದ್ವಾರಪ್ರದೇಶಂ ಜನಪನ ಬಗೆಗಾಶ್ಚರ್ಯಮಂ ಮಾಡಿತಾಗಳ್ ೩

ವ॥ ಅದಂ ನೋಡುತ್ತೆ ಪೋಗೆವೋಗೆ

ಲಲಿತ ರಗಳೆ ॥ ಕರಿಗೊರಡನುಡುವಡರ್ದವೆನಿಪ ಸೆರೆಗಾಲ್ಗಳಿಂ
ಬಿಡದೆ ಪೊಡೆವಡೆ ದಡ್ಡುಗಟ್ಟಿದ ನೊಸಲ್ಗಳಿಂ
ಕುಮತಿ ಸಿದ್ಧಾಂಜನದಿನೊಡೆದೊಂದು ಕಣ್ಗಳಿಂ
ತಱಿಂದುಕೊಳೆ ದೋಣಿವೋಗಿರ್ದ ಪೆರ್ಬುಣ್ಗಳಿಂ

ಕೆಮ್ಮನಿಟ್ಟಿಗೆಗಳಿಂದಿಡಲುಡಿದ ಕಯ್ಗಳಿಂ
ಸೆರೆದೆಗೆಯೆ ಸೂಜಿಯಿಂ ಪೊಲ್ತಿರ್ದ ಕಯ್ಗಳಿಂ
ಅಱಿಯದೆಸಗಿದ ರಸಾಯನದ ಸೇವನೆಯಿಂದೆ
ಭೋಂಕೆನಲಕಾಲದೊಳ್ ಸಂಧಿಸಿದ ಜರೆಯಿಂದೆ

ಧೂಮರಕ್ತಾಲಕ್ತಕಂಗಳ ರಸಂಗಳಿಂ
ಬರೆದ ಬಹುಕುಹಕ ಮಂತ್ರದ ಪುಸ್ತಕಂಗಳಿಂ
ಯಕ್ಷಿಣಿಯರಂ ಬಯಸಿ ಮಾಡುವ ಜಪಂಗಳಿಂ
ಬಿಲದುರ್ಗಮಂ ಪೊಕ್ಕು ಪಡೆವ ಶಾಪಂಗಳಿಂ

ಶ್ರೀಪರ್ವತಾದ್ಭುತ ಕಥಾಪ್ರಕಥನಂಗಳಿಂ
ದಧ್ವಗೋದ್ವೇಗಕರ ವೀಣಾಸ್ವನಂಗಳಿಂ
ಲಿಖಿತ ದುರ್ಗಾಸ್ತೋತ್ರ ಪಟ್ಟಿಕಾವ್ರಾತದಿಂ
ತಲೆದೂಗಿ ಬಿಕ್ಕಿರಿನವೊಲ್ಮೊರೆವ ಗೀತದಿಂ

ವಿಧೃತ ತುರಗಬ್ರಹ್ಮಚರ್ಯತೆಯ ಮುಸಕದಿಂ
ಮುದುಪರೆಳವೆಂಡಿರಂ ಬಯಸಿಪೊಂದೆಸಕದಿಂ
ಬಿಡದೆ ಪಥಿಕರ್ಕಳೊಳ್ ಪೋರ್ದುಡಿದ ಬೆಂಗಳಿಂ
ಪೂಮರನನೇಱಿ ಕೆಡೆದುಡಿದವಯವಂಗಳಿಂ

ಕೆಣಕಿ ಗೋವುಗಳೊದಗೆ ಬೆನ್ನೊಳತಿಕೋಪದಿಂ
ಪರಿದೆಡಪಿ ಕೆಡೆದುಡಿದ ಪುಸ್ತಕಕಳಾಪದಿಂ
ಬಿಡೆ ಬಾದುಗೆಯ್ದೊಡರಿಸುವ ತಮ್ಮ ಕಡುಪಿಂದೆ
ಓರೋರ್ವರಂ ತಿವಿಯೆ ನೆಗ್ಗಿರ್ದ ಕದಪಿಂದೆ

ಹಾಸ್ಯಬೀಭತ್ಸಾದ್ಯಾದಿ ನಾನಾರಸಂಗಳಿಂ
ದೊಂದಿದ ಜರದ್ದ್ರವಿಳ ಧಾರ್ಮಿಕಜನಂಗಳಿಂ
ಬಳಸಿ ನೆರೆಬೆಳೆದ ನಿಡುಧೂಪಧೂಮಂಗಳಿಂ
ಪರಶು ಪಟ್ಟಿಸ ಮಂಡಳಾಗ್ರಧಾಮಂಗಳಿಂ

ಪಾತಾಳಗುಹೆಯೊಳಗೆ ತೋಱುವಂತಿರ್ದಳಿಂ
ಕೃಷ್ಣಚಾಮರಚಯಂ ಪೊಳೆಯಲೊಪ್ಪಿರ್ದಳಿಂ
ರಕ್ತಚಂದನಕುಸುಮಕಲಿಕಾಸಮೂಹದಿಂ
ಪ್ರಾಲಂಬರಕ್ತಾಮ್ರಗುಚ್ಛಸಂದೋಹದಿಂ

ಕನಕಪಟ್ಟಗ್ರಥಿತಪೃಥುಫಾಲಫಲಕದಿಂ
ಶಬರಕಾಂತಾರಚಿತ ಸಿಂಧೂರತಿಲಕದಿಂ
ದಾಡಿಮೀಕುಸುಮಕೃತನವಕರ್ಣಪೂರದಿಂ
ರಕ್ತೋತ್ಪಲಪ್ರತಿಮ ನೇತ್ರವಿಸ್ತಾರದಿಂ

ಭ್ರುಕುಟಿಕುಟಿಲ ಭ್ರೂಲತಾಬಭ್ರುರೋಚಿಯಿಂ
ರುಚಿರತಾಂಬೂಲಾರುಣಾಧರಮರೀಚಿಯಿಂ
ಕೌಸುಂಬಶುಂಭದ್ದುಕೂಲಕಲಿತಾಂಗದಿಂ
ಕಣ್ಗೆಸೆದು ತೋಱುವ ಕರಾಳತ್ರಿಭಂಗಿಯಿಂ

ರೌದ್ರಭಾವಂ ನೆಲಸಿನಿಲೆ ತನ್ನೊಳೆಸೆದಳಂ
ಮಹಾಕಾಳದೇವನಭಿಸಾರಿಕೆವೊಲೆಸೆದಳಂ
ಲಂಬಕೂರ್ಚಾಕಳಾಪಚ್ಛಾಗನಿಕರದಿಂ
ಸ್ಫುರದಧರಪುಟಧವಳಮೂಷಕಪ್ರಕರದಿಂ

ಕೃಷ್ಣಾಜಿನಪ್ರಾವೃತೈಣನಿಕರಂಗಳಿಂ
ಸೊಡರ್ವಾವೆನಿಪ್ಪ ಪೆಡೆವಣಿಯ ಸರ್ಪಂಗಳಿಂ
ದಾರಾಧ್ಯಮಾನೆಯವೊಲಂತೆಸೆದು ತೋರ್ಪಳಿಂ
ಸಾಧಕಜನಾಭೀಷ್ಟಸಿದ್ಧಿಯಂ ಮಾಳ್ಪಳಿಂ

ಚಂಡಿಕಾದೇವಿಯಂ ಕಂಡನುರ್ವೀಶ್ವರಂ
ಸದ್ಭಕ್ತಿಪೂರ್ವಂ ಪ್ರತಾಪಲಂಕೇಶ್ವರಂ ೪

ವ॥ ಅಂತು ಕಂಡು ಪೂಜಾಪುರಸ್ಸರಂ ಪೊಡಮಟ್ಟು ಕೃತಪ್ರದಕ್ಷಿಣನಾಗಿ ನಮಸ್ಕಾರಂಗೆಯ್ದು ತದನಂತರಂ ಬೀಡಂಬಿಡಲ್ವೇಟ್ಟಿಲ್ಲಿಯ ಮೂರ್ಖದ್ರವಿಡಧಾರ್ಮಿಕ ಜನಂಗಳಂ ಜನ್ಮಭೂಮಿಜಾತಿವಿದ್ಯಾಕಳತ್ರಮುಮಂ ತಪೋನಿಮಿತ್ತಮುಮಂ ಹಾಸ ವಿಳಾಸಂ ಬೆಸಗೊಳ್ವುದುಮವಂದಿರ್ ಪಸರಂಬಡೆದು ತಂತಮ್ಮ ಕಲಿತರೂಪಶೌರ್ಯ ವಿಭ ವಂಗಳಂ ವಾಚಾಲರಾಗಿ ಬಣ್ಣಿಸುತ್ತಮಿರೆ ವಿರಹವಿಧುರ ಹೃದಯನಾಗಿಯುಮವಂ ಕೇಳುತ್ತುಂ ಕಿಱಿದುಂಪೊಳ್ತು ಕಳೆದುಮವಂದಿರ್ಗಳ್ಗುಪಜಾತಪರಿಚಯದಿಂ ತಂಬುಲಂ ಗುಡಲ್ವೇಟ್ಟಿಲ್ಲಿಂದಮೆಟ್ಟು ಬೀಡಿಂಗೆವಂದು ನೇಸರ್ ಪಡಲೊಡಂ ಕೃತಸಂಧ್ಯಾವಂದನನಾಗಿ ಕಿಱಿದುಬೇಗನೋಲಗಂಗೊಟ್ಟಿರ್ದು ಸಕಲರಾಜಲೋಕಮಂ ವಿಸರ್ಜಿಸಿ ಸೆಜ್ಜೆಗೆ ಬಿಜಯಂ ಗೆಯ್ದು ಪಸಾಯಿತರೊಳಂ ನುಡಿಯದುನ್ಮೀಲಿತಲೋಚನನಾಗಿ ಗಂಧರ್ವರಾಜನಂದನೆ ಯಿರ್ದ ಹೇಮಕೂಟಮಂ ನೆನೆಯುತ್ತಮಿರ್ದಾಯಿರುಳಂ ಕಳೆದು ಪ್ರಭಾತಸಮಯ ದೊಳಖಿಲದ್ರವಿಡಧಾರ್ಮಿಕಜನಂಗಳ್ಗುಡಲುಂ ತೊಡಲುಂ ಕೊಟ್ಟು ಚಂಡಿಕಾದೇವಿಯಂ ಬೀೞ್ಕೊಂಡು ರಮಣೀಯಪ್ರದೇಶಂಗಳೊಳ್ ಬೀಡಂ ಬಿಡುತುಂ ಕೆಲವಾನುಂ ದಿವಸದಿಂ ನಿಜರಾಜಧಾನಿಯುಪ್ಪುಜ್ಜೈನಿಯಂ ಪೊಕ್ಕಾಕಸ್ಮಿಕಾಗಮನ ಸಂಜಾತಹರ್ಷರಾಗಿ ಪೌರ ಜನಂಗಳ್ ಪೊಡವಡುತಿರೆ ಭೋಂಕನೆ ರಾಜಭವನಮನೆಯ್ದೆವರ್ಪಾಗಳ್

ಯುವರಾಜಂ ಬಂದೀಗಳ್
ತವಂಗದಲ್ಲಿರ್ದನೆಂದು ಪರಮೋತ್ಸವದಿಂ
ತವತವಗೆ ಪರಿದು ಪರಿಜನ
ನಿವಹಂ ಬಿನ್ನವಿಸೆ ಕೇಳ್ದು ತಾರಾಪೀಡಂ ೫

ಸುರಿಯುತ್ತಿರ್ದತ್ತು ಮುಕ್ತಾಫಲದ ಸರಿಗಳಂ ಕಲ್ಪಭೂಜಾತಮೆಂಬಂ
ತಿರಲೆತ್ತಂ ಹರ್ಷವಾರ್ಬಿಂದುಗಳುಗುತರೆ ಭೋರೆಂಬಿನಂ ಪಾಲಮುನ್ನೀರ್
ತೆರೆಯಂತಿರ್ದುತ್ತರೀಯಂ ನೆಲದೊಳಲೆಯಿಸುತ್ತಿರ್ದ ಮೂರ್ಧಾಭಿಷಿಕ್ತರ್
ಬೆರಸಾನಂದಾತಿಭಾರಾಲಸಪದನಿದಿರೊಳ್ ಬಂದನಾ ಸಾರ್ವಭೌಮಂ ೬

ವ॥ ಅಂತು ಬರ್ಪ ತನ್ನ ತಂದೆಯಂ ಕಂಡು ಕುದುರೆಯಿಂದಿೞಿದು ಪಲವೆಡೆ ಪೊಡವಡುತ್ತಮೆಯ್ದೆವಂದು ಕಾಲಮೇಲೆ ಮುೞ್ಗಿದ ವಿನಯಾಭಿರಾಮನಂ ತೆಗೆದು ತೞ್ಕೈಸಿ ಪರಸಿ ಕೆಲದೊಳ್ ಕುಳ್ಳಿರ್ದ[1]ರಸುಮಕ್ಕಳೆಲ್ಲರುಮಂ ಪೊಡಮಡಿಸಿ ನಿಜಾಂತಃಪುರಕ್ಕೊಡಗೊಂಡುಪೋಪುದುಂ ವಿಳಾಸವತಿಮಹಾದೇವಿ ಸಮಸ್ತಾಂತಃಪುರಪರಿವಾರಂಬೆರಸಿದಿರ್ವಂದು ಕೃತಪ್ರಣಾಮನಾದ ಮಗನಂ ಪರಸಿ ಸಕಲಮಂಗಳಾಚಾರಮಂ ಮಾಡಿ ತಂದು ಕುಳ್ಳಿರಿಸಿ ದಿಗ್ವಿಜಯಸಂಬಂಧಿಯಪ್ಪ ವಾರ್ತೆಯಂ ಕೇಳೆ ಪೇೞುತ್ತಂ ಕಿಱಿದುಬೇಗಮಿರ್ದು ವೈಶಂಪಾಯನಂ ಬೀಡನೊಡಗೊಂಡು ಬಂದಪನೆಂದಾರ್ಯಶುಕನಾಸಂಗೆ ಪೇೞ್ದು ನಿಜಜನನೀಗೃಹದೊಳ್ ಮಜ್ಜನಭೋಜನಾದಿಗಳಂ ಮನವಲ್ಲದ ಮನದೊಳಗೆ ಮಾಡಿ ಬೈಗುಂ ಬೊೞ್ತುಪ್ಪುದುಂ ನಿಜಭವನಕ್ಕೆ ಬಂದು.

ಅರಮನೆಯುಮವಂತಿಯುಮು
ರ್ವರೆಯುಂ ರಾಜ್ಯಮುಮಿವೆಲ್ಲಮೇವುದೊ ಕಾದಂ
ಬರಿಯಿಲ್ಲದೆಂದು ವಿರಹಾ
ತುರಹೃದಯಂ ನೃಪತನೂಭವಂ ಚಿಂತಿಸಿದಂ ೭

ಅರಸನಿರುಳಾಗೆ ಪಗಲಿನ
ಬರವಂ ಪಗಲಾಗಲಿರುಳ ಬರವಂ ಪಾರು
ತ್ತಿರುಳುಂ ಪಗಲುಂ ಗಂಧ
ರ್ವರಾಜನಂದನೆಯ ವಿರಹದಿಂ ಚಿಂತಿಸಿದಂ ೮

ವ॥ ಮತ್ತಂ ಚಿತ್ರರಥನಂದನೆಯ ವಾರ್ತೆಯಂ ಕೇಳಲುತ್ಕಂಠಿತನಾಗಿ ಪತ್ರಲೇಖೆ ಬರ್ಪ ನೃಪನೇ ಬಯಸುತ್ತಮಿರಲಾಕೆಯಂ ಕೆಲವಾನುದಿವಸಕ್ಕೊಡಗೊಂಡು ಬಂದು ಮೇಘನಾದಂ ಪ್ರಣಾಮಪುರಸ್ಸರಂ ಕಾಣಿಸೆ ನೃಪರೂಪಚಂದ್ರನಿದಿರೇೞ್ಪುದುಂ ಪತ್ರಲೇಖೆ ತದಂಘ್ರಿಕಮಲಕ್ಕೆಱಗಿದಾಗಳ್

ಜನಪತಿ ಸಾಜದಿಂದಮೆ ಪಸಾದಮನಾದಮೆ ಮಾಡುತಿರ್ದನಾ
ವನಿತೆಯ ಮೇಲೆ ಚಿತ್ರರಥನಂದನೆಯತ್ತಣಿನಾಗಳೆೞ್ತರಲ್
ಮನದ ಪಸಾದಮುಂ ಪದಪುಮೊರ್ಮೆಯೆ ನೂರ್ಮಡಿಯಾಗೆ ಸಸ್ಮಿತಾ
ನನನಮರ್ದಪ್ಪಿದಂ ತೆಗೆದು ನಿರ್ಭರಹರ್ಷದೆ ಪತ್ರಲೇಖೆಯಂ ೯

ವ॥ ಅನಂತರಮಾಕೆಯಂ ಕುಳ್ಳಿರವೇೞ್ದು

ನಿರುಪಮ ಚಾರಿತ್ರಲಂ
ಕರಣೆ ಮಹಾಶ್ವೇತೆಗಂ ಸಪರಿಜನ ಕಾದಂ
ಬರಿಗಂ ಕುಶಲಮೆ ಪೇೞಿಂ
ದರಸಂ ತಾಂ ಪತ್ರಲೇಖೆಯಂ ಬೆಸಗೊಂಡಂ ೧೦

ವ || ಅಂತು ಬೆಸಗೊಳ್ವುದನಾಕೆ ದೇವರ್ ಬೆಸಸಿದಂದದೊಳೆಲ್ಲರುಂ ಕುಶಲದಿ ನಿರ್ದರಲ್ಲದೆಯುಂ ಕಾದಂಬರೀದೇವಿ ಪರಿಜನಂಬೆರಸು ನಿಮಗೆ ತನ್ನ ಪೊಡವಡಿಕೆಯಂ ಬಿನ್ನವಿಸಲ್ ಪೇೞ್ದಟ್ಟಿದಳೆಂಬುದುಂ ತತ್ಸಂಬಂಧಿಯಪ್ಪವಾರ್ತೆಯಂ ಕೇಳಲತಿಕುತೂಹಲನಾಗಿ ಮೇಘನಾದಂಗೆ ಮಚ್ಚುಗೊಟ್ಟಾತಂಬೆರಸು ರಾಜಲೋಕಮಂ ವಿಸರ್ಜಿಸಿ ದೂರೋತ್ಸಾರಿತ ಪರಿಜನಂ ಪತ್ರಲೇಖಾದ್ವಿತೀಯನಾಗಿ ವಲ್ಲಭಬಾಲೋದ್ಯಾನಮಂ ಪೊಕ್ಕು

ಅರೆದುಱುಗಿರ್ದ ಬಯಲ್ದಾ
ವರೆಯೆಲೆಗೊಡೆಯಿಡುವಿನಲ್ಲಿ ಸುಖದಿಂ ಕಣ್ಗೆ
ಯ್ದಿರೆ ಹಂಸಮಿಥುನಮಂ ನಿಜ
ಚರಣಾಬ್ಜದೆ ನೂಂಕಿ ನೃಪಸುತಂ ಕುಳ್ಳಿರ್ದಂ ೧೧

ವ || ಅಂತು ಕುಳ್ಳಿರ್ದು ಪತ್ರಲೇಖೆಯ ಮೊಗಮಂ ನೋಡಿ

ಎನಿತುದಿನಮಿರ್ದೆ ಗಂಧ
ರ್ವನನಂದನೆಯೊಂದು ಪದಪದೆಂತುಟು ನುಡಿಗಳ್
ಮನಮೊಸೆದು ನಮ್ಮ ದೆಸೆಯಂ
ನೆನೆವವರಾರಲ್ಲಿ ಗೋಷ್ಠಿಯೇನಿಂದುಮುಖೀ ೧೨

ವ || ಎಂದು ನೃಪರೂಪಚಂದ್ರಂ ಬೆಸಗೊಳ್ವುದುಂ ದೇವ ತಾತ್ಪರ್ಯದಿನವಧಾರಿಸುವುದೆಂದು ನೀವಿತ್ತಬಿಜಯಂಗೆಯ್ಯಲೊಡನೆಯಾ ಕೇಯೂರಕನೊಡನೆ ಪೋಗಿ ಮುನ್ನಿನಂದದೊಳೆ ಪಟ್ಟಿರ್ದ ಕಾದಂಬರೀದೇವಿಯ ಕೆಲದೊಳ್ ಕುಳ್ಳಿರ್ದು ಪೊಸತೆನಿಸಿದ ಪಸಾದಮನನುಭವಿಸುತ್ತಮಿರ್ದೆನಲ್ಲದೆಯುಂ

ಪದಪಿನ ಮಾತುಗಳ್ ಪಲವುಮಂ ಬಿಡದಾಡಿದೊಡಲ್ಲಿ ಬರ್ಪುದಾ
ವುದು ಗಡ ದೇವ ಮನ್ನಯನದೊಳ್ ನಯನಂ ಕರದೊಳ್ ಕರಾಬ್ಜನಂ
ಗದೊಳೆಸೆವಂಗಯಷ್ಟಿ ಪೆಸರಕ್ಕರದೊಳ್ ನಿಜವಾಣಿ ಕೂರ್ಮೆಯೊಳ್
ಹೃದಯುವದೊರ್ಮೆಯುಂ ನೆಲಸಲಂಗನೆಗಿಂತಿರೆ ಪೋದುದಾದಿನಂ ೧೩

ವ || ಅಂತು ಬೈಗುಂಬೊೞ್ತಪ್ಪುದುಮೆನ್ನ ಕಯ್ಯಂ ಪಿಡಿದು ಹಿಮಗೃಹದಿಂ ಪೊಱಮಟ್ಟು ಸುಯ್ಯುತ್ತಂ ಬಂದು ನಿಷಿದ್ಧಾಶೇಷಪರಿಜನೆಯಾಗಿ ವಲ್ಲಭಬಾಲೋದ್ಯಾನಮಂ ಪೊಕ್ಕು ಮರಕತಸೋಪಾನಶೋಭಿತಮುಂ ಸುಧಾಧವಳಿತಮುಮಪ್ಪ ರಮಣೀಯ ಪ್ರಮದವನಮಧ್ಯವೇದಿಕೆಯ ಮಣಿಸ್ತಂಭಮಂ ನೆಮ್ಮಿ

ಅವಧರಿಸಿ ಮನದೊಳೀನಾ
ನುವನಾಗಳ್ ಕನ್ನೆ ನುಡಿಯಲೊಡರಿಸಿ ನಿಷ್ಕಂ
ಪವೆನಿಪ್ಪ ತಾರೆಗಳ್ವೆರ
ಸೆವೆಯಿಕ್ಕದೆ ನೋಡುತಿರ್ದಳಿನ್ನಯ ಮೊಗಮಂ ೧೪

ವ॥ ಅಂತು ನೋಡಿ ಬೆವರೊಳ್ ಮುೞುಂಗಿ ನಡುಗುತ್ತುಂ ವಿಷಾದಮನವಲಂಬಿಸಿರ್ಪುದುಮಾಂ ವಿದಿತಾಭಿಪ್ರಾಯೆಯಾಗಿ ತನ್ಮುಖವಿನಿವೇಶನಿಷ್ಪಂದಿತ ನಯನೆಯೆಂಬೆಸನಾವುದೆನಗೇಗೆಯ್ವುದೆಂದು ಬಿನ್ನವಿಸೆ

ತೊಲಗಿಪಳೊ ರಹಸ್ಯಶ್ರವ
ಣಲಜ್ಜೆಯಿಂ ತನ್ನ ಪೊಳೆವ ನೆೞಲುಮನೆನೆ ನಿ
ರ್ಮಲ ಮಣಿಕುಟ್ಟಿಮಮಂ ಕೋ
ಮಲೆ ಚರಣಾಂಗುಷ್ಠದಿಂದೆ ಬರೆಯುತ್ತಿರ್ದಳ್ ೧೫

ಭವನಮರಾಳಮಂಡಲಮುಮಂ ನಿಜಪಾದಪಯೋಜದಿಂದೆ ನೂಂ
ಕುವ ಕುಮುದಾವತಂಸಮಧುಪಂಗಳುಮಂ ಕರದಿಂದೆ ಪಿಂಗೆ ಬೀ
ಸುವ ವನದೇವತಾಶ್ರವಣಶಂಕಿತೆಯಾದವೊಲತ್ತಮಿತ್ತ ನೋ
ಡುವ ಪಿರಿದಪ್ಪ ಬೇವಸಮನಾವರಿಸಿರ್ದಳದೊಂದು ಬೇಗಮಂ ೧೬

ಮದನಾಗ್ನಿಜ್ವಾಲೆಯಿಂ ಮುಗ್ಗಿದುದೊ ಬಹುಳಬಾಷ್ಪಾಂಬುಪೂರಂಗಳಿಂದ
ೞ್ದುದೊ ನಿಶ್ವಾಸಂಗಳಿಂ ಪಾಱಿದುದೊ ಕುಸುಮಬಾಣಂಗಳಿಂ ನುಚ್ಚುನೂಱಾ
ದುದೊ ಸುಯ್ಗೆೞ್ತಂದ ಭೃಂಗಾವಳಿಯಿನಿರದೆ ಪೀರ್ದಂದುದೋ ಪೇೞ್ಮೆಂಬಂ
ದದೆ ಲಜ್ಜಾಮಗ್ನೆಗೇನುಂ ನುಡಿ ಪೊಱಮಡದಾಯ್ತಂತುಮಾ ಕಾಂತೆಗಾಗಳ್ ೧೭

ಅನುಭವಿಸಿದ ಕೋಟಲೆಗಳ
ನಿನಿಸೆಂದೆಣಿಸಲ್ಕೆ ವರೌಕ್ತಿಕಾಕ್ಷಾವಳಿಯಂ
ವನಜದಳನಯನೆ ಸಮೆದಪ
ಳೆನೆ ಸುರಿದುವು ತರದೆ ತೋರ ಕಣ್ಬನಿದುಱುಗಲ್ ೧೮

ಸಮಸಂದೊಂದಿದ ಲಜ್ಜೆಯುಜ್ಜುಗಮೆ ಲಜ್ಜಾಭಾವಮುಂ ಬಾಲಭಾ
ವಮೆ ಬಾಲ್ಯೋದಯಮುಂ ವಿಷಾದಮೆ ವಿಷಾದೋದ್ರೇಕಮುಂ ಭೀತಿಭಾ
ವಮೆ ಭೀತಿಕ್ರಮಮುಂ ವಿಳಾಸಮೆ ವಿಳಾಸೋಲ್ಲಾಸಮುಂ ಮುಗ್ಧಭಾ
ವಮೆ ಮುಗ್ಧತ್ವಮಹತ್ವಮುಂ ನೆೞೆಯೆ ಕಲ್ತಂತಾದುದಾ ಕನ್ನೆಯೊಳ್ ೧೯

ವ॥ ಆಗಳಿದೇನೆಂದಾಂ ಮಗುೞ್ಚಿಮಗುೞ್ಚಿ ಬಿನ್ನಪಂಗೆಯ್ವುದುಮುಸಿರಲ್ ನಾಣ್ಚಿ ರಹಸ್ಯಾಲಾಪಮನೆನಗೆ ಬರೆದು ತೋರ್ಪಂತೆ ನಖಮುಖದಿಂ ಕೇತಕೀದಳಮಂ ಬರೆಯುತ್ತಂ ಕ್ಷಿತಿತಳನಿಹಿತ ನಿಶ್ಚಲನಯನೆಯಾಗಿ ಪಿರಿದುಬೇಗಮಿರ್ದನಂತರಮೊಯ್ಯನೆನ್ನ ಮೋಗಮಂ ನೋಡಿ

ಮದನಾನಲಧೂಮಸ್ತೋ
ಮದೆ ದೂಸರಮಾದ ವಚನಮಂ ತೊಳೆಯಲ್ ಪೊ
ಣ್ಮಿದುವೆನೆ ಮತ್ತಂ ಪೊೞಪೊ
ಣ್ಮಿದುವೆಳೆಯಳ ಬಾಷ್ಪವಾರಿಧಾರಾಪೂರಂ ೨೦

ಉಸಿರ್ವುಜ್ಜುಗದಿಂದಧರಂ
ನಸುಗೆತ್ತಲ್ ಶ್ವಾಸಮಧುಪಮಾಲೆಗೆ ಸಂದೇ
ಶಿಸಿದಪಳೊ ರಹಸ್ಯಮನೆನ
ಲೆಸೆದೆಂತೆಂತಾನುಮುಸಿರಲುದ್ಯತೆಯಾದಳ್ ೨೧

ವ॥ ಅದೆಂತೆನೆ

ಎನಗೀಗಳ್ ನಿಕ್ಕುವಂ ವಲ್ಲಭತೆಯೆಡೆಯೊಳಿನ್ಮಬ್ಬೆಯಿಂದಯ್ಯನಿಂದ
ಕ್ಕ ನಿನೀಪ್ರಾಣಂಗಳಿಂದತ್ಯಧಿಕಮೆನಿಸಿ ಮಚ್ಚಿತ್ತದೊಳ್ ನಿಂದೆ ನೀಂ ನಿ
ನ್ನನದೆಂದಾಂ ಕಂಡೆನಂದಿಂಬೞಿಕೆ ಸಖಿಯರಂ ಪತ್ತುವಿಟ್ಟೀ ಮನಂ ನಿ
ನ್ನನೆ ನೀಡುಂ ನಾಡೆ ನಂಬಿರ್ದಪುದೞಿಯೆನಿದಿನ್ನೆಂತುವಾಂ ಪತ್ರಲೇಖೆ ೨೨

ಎನಗಾದದೊಂದು ಪರಿಭವ
ಮನಾರ್ಗೆ ದೂಱಿದಪೆನಾರ್ಗೆ ಪೇೞ್ದಪೆನಿದನಾಂ
ನಿನಗುಸಿರ್ದನಂತರಂ ಸುಖ
ದಿನೆನ್ನ ತನುವಿಂದೆ ಪತ್ತುವಿಡಿಸುವೆನಸುವಂ ೨೩

ವ॥ ಎಂದು ಚಿತ್ರರಥನಂದನೆ

ನಿನಗೆನ್ನಂದಮನೇನೆಂ
ದು ನುಡಿವೆನೆನ್ನೊಂದು ತಪ್ಪನಱಿದತ್ತೆಂದೀ
ಮನಕಂ ಪಿರಿದುಂ ಲಜ್ಜಿಸು
ವೆನೆನಲ್ ಪೇೞಲ್ ಪೆಱರ್ಗದಾಗಳುಂ ಲಜ್ಜಿಸೆನೇ ೨೪

ಪಿರಿದೆನಿಸಿದ ಪೞಿಗೆಡೆಯಾ
ಗಿರಲೆನ್ನನದಾರುಮಿಲ್ಲಮಿತರೆಯರೆನ್ನಂ
ತಿರೆ ಗರ್ವದಿಂದೆ ಪಿರಿದುಂ
ಪರಿಭವಿಸಿದನಿಂದಕಾರಣಂ ನೃಪತನಯಂ ೨೫

ಪಿರಿಯರ್ಗಿದು ಗುಣಮೋ ಪೇೞ್
ಪರಿಚಯಕಿದು ಫಲಮೊ ತರುಣಿ ಬಿಸತಂತುವಿನೊಳ್
ದೊರೆಯೆನಿಪೆಳಮನದೆನ್ನಂ
ಪರಿಭವಿಪುದೆ ಕಂಡು ಕನ್ನೆಯಂ ಯುವರಾಜಂ ೨೬

ಇನ್ನೆನ್ನನಿಂತು ನೃಪನೆಸ
ಕಂ ನಿತ್ತರಿಸಲ್ಕೆ ಕುಡದು ಮಱುವುಟ್ಟಿನೊಳಂ
ನಿನ್ನೊಡನೆ ಕೂಟವೆನಗ
ಕ್ಕೆನ್ನಯ ತಪ್ಪಿಂಗೆ ಸತ್ತು ಶುದ್ಧಯೆನಪ್ಪೆಂ ೨೭

ವ || ಎಂದು ಚಿತ್ರರಥನಂದನೆ ಮಡಿದು ಮಾಣ್ಬುದುಮಾನತಿಭೀತಿಯೆನಾಗಿ ದೇವಿ ನಿನ್ನ ಯುವರಾಜಂ ನಿನ್ನ ಕುಸುಮಸುಕುಮಾರಮಪ್ಪ ಮನವನೇತಱಿಂ ನೋಯಿಸಿದನದಾವುದಪರಾಧಂ ಮಾಡಿದನಾನೆ ಮುನ್ನೆನ್ನ ಜೀವಮಂ ಬಿಡು[1]ವೆಂ ಬೆಸಸೆಂದು [1]ಬಿನ್ನವಿಸುವುದುಮಾಕಾಂತೆಯಿಂತೆಂದಳ್.

ಕನಸಿನೊಳಾವನಾಂ ಮಱೆದು ನಿದ್ರೆಗೆಯುತ್ತಿರೆ ಬಂದುವಂದು ಕೆ
ಮ್ಮನೆ ಕಿವಿಯೋಲೆಯಲ್ಲಿ ಕುರುಪಂ ಬರೆವಂ ಛಲದಿಂದ ಬೇಡವೇ
ಡೆನೆ ನಡೆನೋಡುವಂ ಭವನನಂದನದೊಳ್ ಸುೞಿಯುತ್ತಿರಲ್ಕೆ ಪಿಂ
ತನೆ ಮಱೆಯಿಕ್ಕಿ ಬಂದು ಕಡುಗೂರ್ತವೊಲೆನ್ನಯ ಬೆನ್ನನಪ್ಪುವಂ ೨೮

ಶ್ವಸಿತಾನೀಕಂಗಳಿಂದಂ ಕದಪಿನ ಬೆಮರಂ ನಾಡೆ ಕೂರ್ತಂದದಿಂದಾ
ರಿಸುವಂ ಕಸ್ತೂರಿಯಿಂದೆನ್ನಯ ನೊಲೆಗೆಲದೊಳ್ ಪತ್ರಭಂಗಂಗಳಂ ಚಿ
ತ್ರಿಸುವಂ ಕಂಕೆಲ್ಲಿಯಂ ಲೀಲೆಯಿನೊದೆವೆಡೆಯೊಳ್ ಮಾಣದಾತ್ಮಾಂಗಮಂ ಸಂ
ದಿಸುವಂ ಪೇೞೀವೆನೆಂತಾಂ[2] ನಿಯಮಿಸಿದಪೆನಾ ಧೂರ್ತನಂ ಪತ್ರಲೇಖೇ ೨೯

ವ || ಎಂದು ಗಂಧರ್ವರಾಜನಂದನೆ ನುಡಿಯೆ ಕೇಳ್ದೀಕೆ ಮನುಜಮಕರಧ್ವಜಂಗಿಕ್ಕುವಟ್ಟಳೆಂಬುದನಱಿದು ಸಕಲಭುವನಮಂ ಧವಳಿಸುವ ನಿನ್ನ ಸೌಭಾಗ್ಯಯಶಕ್ಕೆ ಸಂತಸಂಬಟ್ಟು ಮಲಯಾನಿಲನ ಸೋಂಕುಂ ಮಧುಮಾಸಕುಸುಮಸಮೃದ್ಧಿಯುಂ

---

1 ವೆನೆಂದೆಂಬುದುಂ (ಕ) 2 ನನೆನ್ನಂ (ಕ)

ಚಂದ್ರೋದಯಸೌಂದರ್ಯಮುಂ ಸಫಲಮಾದುದೆಂದು ಮನದೊಳ್ ಬಗೆದು ನಸು ನಗುತ್ತಮಾ ಕಾಂತೆಯನಿಂತೆಂದೆಂ

ಮುನಿಯಲ್ಕಾಗದು ಯುವರಾ
ಜನ ದೋಷಮಿದಲ್ತು ಕಮಲಮುಖಿ ಕೇಳಿದು ಕಾ
ಮನ ದೋಷಮೆಂಬುದುಂ ಕಾ
ಮನೆಂಬನಾರೆಂದುಮುಱಿಯೆನಿಂತಿರೆ ನೆಗಟ್ದಿಂ ೩೦

ವ॥ ಎಂದು ಮತ್ತಮಾ ಕಾಂತೆ ನೀನೆಂಬ ಕಾಮನರೂಪೆಂತುಟೆಂದು ಬೆಸಗೊಳ್ವುದುಮನಂಗಂಗೆ ರೂಪಂಬುದೆಲ್ಲಿಬಂದುದು ಈತಂ ತನುವಿಲ್ಲದನಲನೆಂದು ಪೇಟ್ದು ಮತ್ತಮಿಂತೆಂದೆಂ.

ಮದನೋಗ್ರಾಗ್ನಿ ಮನಕ್ಕೆ ಮಾಟ್ಪುದು ಮಹಾಸಂತಾಪಮುಂ ಜ್ವಾಲೆಯಿ
ಲ್ಲದೆಯುಂ ಕಣ್ಮಲರ್ಗಳ್ಗೆ ಪೊಣ್ಮಿಸುವು[1]ದಂಭೋಧಾರೆಯಂ[1] ಧೂಮವಿ
ಲ್ಲದೆಯುಂ ಮೆಯ್ಗೊಗೆಯಿಪ್ಪುದಗ್ಗಲಿಪ ಪಾಂಡುಚ್ಛಾಯೆಯಂ ಭಸ್ಮವಿ
ಲ್ಲದೆಯುಂ ತಾನೆನಿಸಲ್ ವಿಚಿತ್ರಮಿದನಂತಿಂತುಂತೆನಲ್ ಬರ್ಕುಮೇ ೩೧

ವ॥ ಅಂತೆನಿಸಿದ ಮನಸಿಜನ ನನೆಯಂಬಿನ ಕೋಳ್ಗೆ ಪಕ್ಕಾಗಲೊಡನೆ

ಇನಿಯರ ಕೂಟಮುಂ ನೆನೆಯುತಿರ್ಪೊಡೆ ಕಾಮಿನಿಯರ್ಗೆ ಪದ್ಮಗ
ರ್ಭನ ದಿನಮುಂತದುಂ ಕಿಱಿದು ರೂಪನೆ ಚಿತ್ರಿಸಿ ನೋಡುತಿರ್ಪವಾ
ವನುದಿನಮೆಂದೊಡೀ ನೆಲನುಮೆಯ್ದದದಲ್ಲದೆ ತದ್ಗುಣಪ್ರಶಂ
ಸನಮನೆ ಕೇಳ್ವೆನೆಂಬೊಡೆ ಸರಸ್ವತಿಯುಂ ಜಡೆಯಾಗಿ ತೋಱುವಳ್ ೩೨

ವ॥ ಎಂದು ಬಿನ್ನವಿಸೆ ನೀನೆಂದುದೆಲ್ಲ ಮಾತಿನೊಳ್ ನೆಱೆಯುಂಟು ಮನುಜೇಂದ್ರನೊಳ್ ಮನೋಭವಂ ಪಕ್ಷಪಾತಮುಂ ನೆಗಟ್ದನ್ನೊಳೆ ಕಾಯ್ಪಂ ತೋಱಿ ನಿತ್ತರಿಸಲಿತ್ತನಿಲ್ಲ ನಿಮ್ಮಡಿಯ ಹೃದಯದಿನತ್ಯನುರಕ್ತೆಯಾದೆನಗೆರಡಿಲ್ಲದೆ ಕೂಡಿರ್ಪೆಯೆಂಬುದನಿಂಬಾಗಱಿದೆನಿಲ್ಲಿಗುಪಾಯಮಾವುದೆಂಬುದಂ

ಇಲ್ಲಿಗೆ ಮನುಜಮನೋಜನೆ
ಬಲ್ಲನುಪಾಯಮನದರ್ಕೆ ನೀನೀಗಳ್ ತ
ಳ್ವಿಲ್ಲದೆ ಬೆಸಸೆನ್ನಂ ಭೂ
ವಲ್ಲಭನುಮನಿಂದೆ ತಂದೆಪೆಂ ಚಂದ್ರಮುಖೀ ೩೩

ವ॥ ಎಂದು ಬಿನ್ನವಿಸೆ

1 ದಂಬಾಮೇರೆಯಂ (ಕ)

ಮನುಜಮನೋಜ ನಿನ್ನ ಪೆಸರ್ಗೇೞಲೊಡಂ ಬೆಮರಿಂದೆ ಕಣ್ಣಲಾ
ಗೆನೆ ನೆಱೆ ನಾಂದು ಪತ್ತಿದ ನಿಜಾಂಶುಕಮಂ ಪುಳಕಂಗಳೆತ್ತೆ ಕಾ
ಮನ ಸರದಿಂದೆ ಲಜ್ಜೆ ಪರಿಯಲ್ ಪದವೆತ್ತನುರಾಗವಿಭ್ರಮಂ
ಜನಿಯಿಸಲಾಗಳಾಕುಲತೆಯಂ ತಳೆದೆನ್ನನೊಱಲ್ದು ನೋಡಿದಳ್ ೩೪

ವ|| ಅನಂತರಮೆನ್ನನಿಂತೆಂದಳ್ ನೀನೆನಗೆರಡಿಲ್ಲದೆ ಕೂಡಿರ್ಪೆಯೆಂಬುದನಿಂ ಬಾಗಱಿದೆನಾದೊಡಮಕಠೋರಶಿರೀಷಪುಷ್ಪಸುಕುಮಾರಪ್ರಕೃತಿಯಪ್ಪ ನಾರೀಜನಕೆ ಪ್ರಾಗಲ್ಭ್ಯಂ ದೊರೆಕೊಳ್ಳುವುದಲ್ಲೆನೆ ವಿಶೇಷದಿಂ ಬಾಲಭಾವಮನಪ್ಪುಕೆಯು ಕುಮಾರೀ ಜನಕ್ಕೆ ಮುನ್ನಮೆ ದೊರೆಕೊಳದು ತಾನೆ ಪೇೞ್ದಟ್ಟುವುದುಂ ಸಾಹಸಮದೆಂತೆನೆ

ಪದದೆನ್ನಂ ಕಾಮನಿತ್ತಂ ತನಗೆನಲದು ಪೊರ್ದಲ್ ನೆವಂ ಕೂರ್ಪೆ ನಾನೆಂ
ಬುದು ವೇಶ್ಯಾಲಾಪಮಾಂ ತನ್ನಯ ವಿರಹದೆ ಸತ್ತಪ್ಪೆನೆಂಬುದು ದೃಷ್ಟ
ಕ್ಕೃದಸತ್ಯಂ ಬರ್ಪೆ ನಾನೆಂಬುದು ಚಪಲತೆ ತಾಂ ಬರ್ಪುದೆಂದಂದು ಸೌಭಾ
ಗ್ಯದ ಗರ್ವಂ ಮೇಲೆ ಬೞ್ದಾನೆಳಸಿದಪೆನೆನಲ್ ಬಂಧಕೀಧಾರ್ಷ್ಟ್ಯಮಲ್ತೇ ೩೫

ವ|| ಅದಱಿನೊಂದುಮಂ ಪೇೞ್ದಟ್ಟಲಱಿಯೆನಿತ್ತ ಚಿತ್ತಜನುಂ ನಿತ್ತರಿಸಲಿತ್ತ ಪನಿಲ್ಲೆಂತಾನುಮಖಿಲಜನಾವಿಭಾವ್ಯನಾಗಿ ಸಿದ್ಧನಂತೆನಗೆಡೆವಿಡದೆ ರೂಪುದೋಱುವ ಸಂಕಲ್ಪಮಯನಪ್ಪ ಯುವರಾಜನೆ ಮದೀಯ ವಿರಹಮರಣಭಯಹರಣನಪ್ಪುದಕ್ಕೆ ಕಾರಣನೆಂದು ಕಾದಂಬರಿ ನುಡಿದುಸಿರದಿರ್ಪುದುಂ

ಬರಪಾರದೆ ದೂದವಿಯರ
ಹರಿಸದೆ ಮಱೞ ಮುಂಜು ಕಾಳಗತ್ತಲೆಯೆಂದೋ
ಸರಿಸದೆ ಮನವೊಲ್ದಾಗಳ್
ನೆರೆಯಲ್ ದೊರೆಕೊಳ್ವ ರತಮೆ ಸಂಕಲ್ಪರತಂ ೩೬

ವ|| ಎಂದು

ಒಸೆದಪ್ಪಲ್ ತಾನದಿಲ್ಲಂ ಕುಚಯುಗಳತಿರೋಧಾನ ಜಾತಶ್ರಮಂ ಚುಂ
ಬಿಸುವಾಗಳ್ ಶಬ್ದಮಿಲ್ಲವ್ರಣನಖಮುಖದಂತಕ್ಷತಂ ನಾಣ್ಗೆ ಪಕ್ಕಾ
ಗಿಸದೆಂತುಂ ಕುಂತಳೋತ್ಕರ್ಷಣಮಳಕೆಗಳಂ ಸೂಸದೆಂಬೊಂದು ಸಂಕ
ಲ್ಪ ಸಮಾಯೋಗಂ ವಿಯೋಗಾಕುಲಕುಲಲಲನಾಜೀವನಾಧಾರಮಲ್ತೇ ೩೭

1 ಒಸೆದಪ್ಪಲ್........ಚಂ। ಬಿಸುವಾಳ್ಗಬ್ದಮಿಲ್ಲಬ್ರಣನಖದಮುಖಂತಕ್ಷತಂ ನಾಣ್ಗೆ ಪಕಾಗಿಸದೆಂತುಂ ಕುತಳೋತ್ಕರ್ಷ ಮಳಕಿಗಳಂ ಸೂಸದೆಂಬೊಂದಸಂಕ। ಲ್ಪ ಸಮಾಯೋಗ್ಯಂ ಸಯೋಗಾಕುಳಲಲನಾ ಜೀವನಾರಾವಮಲ್ತೆ (ಕ)

ವ॥ ಇಂತೆನ್ನೊಳ್ ಬಗೆಯುತ್ತಿರ್ಪನ್ನೆಗಂ ದಿವಸಾವಸಾನಸಮಯದೊಳನುರಕ್ತೆಯಾದ ಕಾದಂಬರೀದೇವಿಯ ಹೃದಯಮೆ ಪೋದಪುದೆಂಬಂತೆ ರವಿಬಿಂಬಮಪರಾಂಬುಧಿವಿಲಂಬಿಯಾಗೆ

ತರುಣಿಯ ವಿಯೋಗತಾಪ
ಕ್ಕೆ ರಜನಿಯುಂ ಕೆಳದಿಯಂತೆ ತಳಿರ್ವಾಸಂ ಬಿ
ತ್ತರಿಸುತ್ತಮಿರ್ದಳೆಂಬಂ
ತಿರೆ ಬಿತ್ತರಿಸಿತ್ತು ಸಾಂದ್ರಸಂಧ್ಯಾರಾಗಂ ೩೮

ವ॥ ಅಂತಾ ಸಮಯದೊಳ್ ಗಂಧರ್ವರಾಜನಂದನೆ ಸುರಭಿಗಂಧೋದ್ಗಾರಿಗಳಪ್ಪ ದೀವಿಗೆಗಳಂ ಪಿಡಿದು ದೀಪಧಾರಿಣಿಯರ್ವಂದು ನಿಜನಿಯೋಗಾಶೂನ್ಯಾರ್ಥವಾಗಿಗೆಂಟಱಿಂ ಬಳಸಲವಂ ಸೈರಿಸದೆ ನಿವಾರಿಸುತ್ತಮಿರ್ದು

ಒದವಿದ ತನುರುಚಿಯೊಳ್ ಪೊಳೆ
ಯೆ ದೀಪಿಕಾಪ್ರಕರಮತನುಶರಸಂತತಿಯಿಂ
ಪುದಿದವೊಲಿರ್ದಳ್ ಮುಗುಳೇ
ಱಿದ ಚಂಪಕಲತೆವೊಲಿರ್ದಳಂತಾ ಕ್ಷಣದೊಳ್ ೩೯

ವ॥ ಅಂತು ಕಿಱಿದುಬೇಗಮಿರ್ದು ಪೊಱಗಿರ್ದೆಮ್ಮಂ ಕಾದಂಬರಿ ಬೆಸಗೊಳ್ವುದುಮಾವಿರ್ದಪೆವೆಂಬಂತೆ ಕಲಹಂಸಕಲಾಲಾಪಮೃದುರವಂಗಳಪ್ಪ ನೂಪುರರವಂಗಳುಣ್ಮೆ ಬೆಸನಂ ಪಾರುತಿರ್ದ ಪರಿಜನಂಗಳಂ ನೋಡಿ ತರಳಿಕೆಯ ಕಯ್ಯ ತಂಬುಲಮಂ ತಳೆದು-ಕೊಂಡೆನಗೆ ಪಿರಿದನುಗ್ರಹದಿನಿತ್ತು ಕೇಯೂರಕ ನೀಂ ಪತ್ರಲೇಖೆಯನೊಡಗೊಂಡು ಪೋಗಿ ಕಟಕಮಂ ಪುಗಿಸೆಂದು ತನ್ನ ತೊಟ್ಟ ತೊಡಿಗೆಗಳೆಲ್ಲಮನೆನಗಂಗಚಿತ್ತಮನಿತ್ತೆಂತಾನುಂ ಬೀೞ್ಕೊಳಿಸಿ ಕಳಿಪಿ ತ್ವದೀಯಪ್ರೇಮಪ್ರಸಾರಿತದೃಷ್ಟಿಗಳಿನೆನ್ನಂ ಕಿಱಿದಂತರಮಂ ಕಳಿಪುತ್ತಂ ಬರೆ ಕೇಯೂರಕಂಬೆರಸು ಮೇಘನಾದನಲ್ಲಿಗೆವಂದಾಗಳಾತಂ ದೇವರ್ ಬೆಸಸಿದಂದದೊಳೆ ಕೇಯೂರಕಂಗೆ ಪೇೞ್ವುದುಮದೆಲ್ಲಮಂ ಕೇಳ್ದಾತಂ ಹೇಮಕೂಟಕ್ಕೆ ಪೋದ ನಾನುಂ ಮೇಘನಾದನೊಡನಿತ್ತಂ ಬಂದೆನದಲ್ಲದೆಯುಂ

ನಿನ್ನಯ ವಿರಹೋದ್ರೇಕದಿ
ನಿನ್ನುಂ ತಳಿರ್ವಸೆಯ ಮೇಲೆ ಪೊರಳುತ್ತಿರ್ದಾ
ಕನ್ನೆಯ ರೂಪೆನ್ನಿದಿರೊಳ್
ಸನ್ನಿದಮಾದಂತೆ ತೋಱುತಿರ್ದಪುದೀಗಳ್ ೪೦

ವ॥ ಮತ್ತಮಾ ಚಿತ್ರರಥನಂದನೆಯ ಮದನಾನಲಂ ದಿನಕರೋದಯಂ ಮೊದಲ್ಗೊಂಡು ಸೂರ್ಯಕಾಂತೋಪಲಾನಲನಂತೆ ಗಾಳಿಯಿಲ್ಲದುರಿಯುತಂ ಪರಿಜನಂ

ಗಳ ಕಯ್ಯ ಕೆಂದಳಿರಸಂದಣಿಯೊಳಂ ನಾಂದ ಬೀಸುವ ಬಿಜ್ಜಣಿಗೆಗಳ ತೋರಸೀರ್ಪನಿಯ ಸರಿಯೊಳಂ ನಂದನಹರಿಚಂದನಚ್ಛಟಾಚ್ಛುರಣದೊಳಮೆಡವಱಿಯದೆ ಪುಡಿಗುಟ್ಟಿದ ಮುತ್ತಿನ ಮಳಲ್ಗೆದಱಿದ ಮಣಿಕುಟ್ಟಿಮದೊಳಂ ಮಾಣದುತ್ಕೀಲಿತ ದಂತಮಯ ಕಲ ಹಂಸಪಂಕ್ತಿ ಮುಕ್ತಾಂಬುಧಾರೆಗಳಪ್ಪ ಧಾರಾಗೃಹಂಗಳಿನುಪಶಮಿಸದೆಂತೆಂತು ವಿಚಲಿತ ಜಲಯಂತ್ರವಿನಿರ್ಗಳಿತಂಗಳಪ್ಪ ಶಿಶಿರಶೀಕರನಿಕರತಾರಕಿತ ವಾರಿಧಾರೆಗಳಿಂ ತಳ್ಪೊಯ್ವುದಂತಂತೆ ಸಿಡಿಲ ಕಿಚ್ಚಿನವೊಲಗ್ಗಳಮುರಿವುದಂತುಮಲ್ಲದೆಯುಂ

ಅಳುರುತ್ತಮಿರ್ಪ ಮದನಾ
ನಳನಿಂದೆಂತೆಂತು ಬೇವುದನಿತಂತತಿ ನಿ
ರ್ಮಳಮಪ್ಪುದು ಲಾವಣ್ಯಂ
ನಳಿನಾನೆಗಗ್ನಿ ಶೌಚವಸ್ತ್ರದ ತೆಱದಿಂ ೪೧

ವ॥ ಅಂತುಮಲ್ಲದೆಯುಂ

ಮೆಲ್ಲಿದುವಪ್ಪ ವಾರಿಕಣಜಾಲದೆ ಪಶೌಕ್ತಿಕಜಾಲಮಪ್ಪವೊಲ್
ಮೆಲ್ಲೆರ್ದೆಯುಂ ವಿಯೋಗಿಜನಕಂತದು ಕಲ್ಲೆರ್ದೆಯಪ್ಪುದಲ್ತೆ ಅಂ
ತಲ್ಲದೊಡಾವಗಂ ಕರಗದಿರ್ಪರೆ ಪೆರ್ಚಿದ ತಾಪದಿಂದೆ ಮೇಣ್
ನಲ್ಲರ ಕೂಡುವಾಸೆಯೆ ಬರ್ದುಂಕುವುದರ್ಕೆ ನಿಮಿತ್ತಮಾಗದೇ ೪೨

ವ॥ ಅಂತಾ ಕಾಂತೆಗಾದ ಸಂತಾಪಮಂ ಕನಸಿನೊಳಾದೊಡಂ ಬರ್ದುಂಕುವುದರ್ಕರಿದೆಂಬುದಂ ನೀಂ ಕಂಡುದಿಲ್ಲ ನಿನಗದೇನೆಂದು ಪೇೞ್ವೆನಾವುದುಪಾಯದಿಂ ಪ್ರತ್ಯಕ್ಷಂಮಾಡಿ ತೋಱುವೆಂ ಪ್ರಚಂಡಕಿರಣಾತಪಸಹಸ್ರಂಗಳುಮಂ ಸೈರಿಸುವ ಸರಸಿಜಂಗುಳುಮಾಕೆಯ ಮೆಯ್ ಸೋಂಕಿದನಿತಱೊಳೆ ಕಱಂಗಿ ಕರಿಯಪ್ಪುವದುಕಾರಣ ದಿನಕಾರಣದಾರುಣನಪ್ಪ ಮನ್ಮಥನಿನೆಡೆವಿಡದೆ ಬೇವಸಂಬಡುತಿರ್ದಳಲ್ಲದೆಯುಂ

ತರುಣಿಗೆ ದೇವ ನಿಜಾನು
ಸ್ಮರಣದೆ ಮುಂದ್ವೆಸಿ ಮೇಯ್ಯೊಳುಣ್ಮಿದ ಪುಳಕಾಂ
ಕುರನಿಕರಂ ಕುಸುಮಾಯುಧ
ಶರಪಾತಕ್ಕಗಿದು ತೊಟ್ಟ ಕವಚಮಿದೆನಿಕುಂ ೪೩

ಚಕಿತಮೃಗೀವಿಲೋಚನೆಯ ಸುಯ್ಯೆಲರಿಂದೆ ತೆರಳ್ದು ಪಾಱುವಂ
ಶುಕಮುನದೊರ್ಮೆಯಾ ಪುಳುಕಿತೋದ್ಧಕುಚದ್ವಯದೊಳ್ ತಗುಳ್ಚುತಂ
ಪ್ರಕಟಿಸಿದಂತೆ ತೋಱುವುದು ನಿನ್ನಯ ಕಯ್ಪಿಡಿಯಲ್ಕೆವೇಡಿ ಕಂ
ಟಕಶಯನವ್ರತಾಚರಣಮಂ ತಳೆದೊಂದಿರನಂ ಕರಾಂಬುಜಂ ೪೪

ಅರುಣಮಣಿವಲಯರುಚಿ ಪ
ರ್ವಿರಲಂತಜ್ವಲಿತ ಮದನಶಿಖಿ ಪರ್ವಿದುದೆಂ
ದಿರದೆ ಬಿದಿರ್ವಳ್ ಕದಪಿನ
ಭರದಿಂ ಜೋವೇಱಿದೊಂದು ಕರಕಿಸಲಯಮಂ ೪೫

ವ॥ ಅದಲ್ಲದೆಯುಂ

ಚರಣದೆ ಕಾಂಚಿಯುಂ ಗುರುನಿತಂಬದ ಪರ್ವುಗೆಯಿಂದೆ ಮಧ್ಯಮಂ
ನೆರೆವತಿತೃಷ್ಣೆಯಿಂ ಹೃದಯಮಂ ಕುಚದೊಳ್ ನಳಿನೀದಳಂಗಳಂ
ಕೊರಲೊಳೆ ಜೀವಮಂ ಕರಸರೋರುಹದೊಳ್ ಕದಪಂ ಲಲಾಟದೊಳ್
ಪರೆದ ಕುರುಳ್ಗಳಂ ವಿರಹವಿಹ್ವಲೆಯಾಗಿ ಲತಾಂಗಿ ತಾಳ್ದುವಳ್ ೪೫

ವ॥ ಅದಲ್ಲದೆಯುಮೋರೊರ್ಮೆ ರಣರಣಕವ್ಯಥಾವ್ಯಜನ ಪಲ್ಲವಭಂಗವಾದಪ್ಪು ದೆಂದಂಜಿ ನಡುಗುವಂತೆ ನಿಡುಸುಯ್ಯ ಗಾಳಿಯಿಂ ನಡುಗುವ ಲತಾಮಂಟಪದೊಳಿರ್ಪ ಳೋರೊರ್ಮೆ ವಿರಹದ ತೊಡಿಗೆಗಳ್ಗಳ್ಪ ಮೃಣಾಳಂಗಳೆಲ್ಲಮಂ ಮುಱಿಯಿಸದಿರೆಂದು ಕಯ್ಮುಗಿವಂತೆ ಮುಗಿವ ಬಯಲ್ದಾವರೆಗಳೊಳಿರ್ಪಳೋರೊರ್ಮೆ ಪೂವಾಸಿಗೆ ತಿಱುವ ರೆಂಬ ಭಯದಿಂ ಮುಱುಂಗಿದ ಚೆನ್ನೆಯ್ದಿಲ್ಗಳಂತಿರೆ ನಿರಂತರಾಶ್ರುಪಾತದಿಂ ಕೆಂಪುದಳೆದ ಕಣ್ಮಲರನೊಳಕೆಯ್ದು ಪವನದ ತಿಳಿಗೊಳಂಗಳೊಳಂ ಪುಗುವಳೋರೊರ್ಮೆ ತಳಿರ್ ಸೇಱಿದ ತಮಾಲವೀದಿಗೆವಂದು ಸೆಳೆಗೊಂಬಂ ಪಿಡಿದು ನೇಲ್ದು ನಿಮೀಲಿತ ನಯನೆ ಯಾಗಿ ಕಿಱಿದುಬೇಗಮಿರ್ಪಳೋರೊರ್ಮೆ ಸಂಗೀತಗೃಹಕ್ಕೆ ಬಂದು ಮಧುರ ಮುರಜ ಲಯಗತಿಲಾಸ್ಯಜನಿತ ಖೇದದಿಂ ಬಂದು ಕದಂಬಕಲಿಕೆಯಂತೆ ಘನಜಲಧಾರಾಶೀಕರಾ ಸಾರದಿಂ ಪುಲಕಿತಾಂಗಿಯಾಗಿ ನಡುಗುತ್ತಿರ್ಪಳೋರೊರ್ಮೆ ಶುದ್ಧಾಂತಕಮಲಿನೀತೀರಕ್ಕೆ ವಂದು ನಿನ್ನ ಮೆಯ್ವೆಂಕಿಯೆಂದೆಮಗಾಹಾರಮಪ್ಪಿಲ್ಲಿಯ ಮೃಣಾಳಂಗಳೆಲ್ಲಮಂ ಕೊರ ಗಿಸದಿರೆಂದು ಚಪ್ಪರಿಸುವಂತಿರ್ದ ಹಂಸಚಕ್ರವಾಕಂಗಳುಲಿಪಕ್ಕೆ ಬೆಗಡುಗೊಂಬಳೋ ರೊರ್ಮೆ ರಮಣೀಯ ಪ್ರಮದವನಕ್ಕೆವಂದು ಶಿಶಿರೋಪಚಾರನಿಮಿತ್ತದಿನುಳ್ಳಲರ್ಗಳೆ ಲ್ಲಮಂ ತಿಱಿದು ಕಿಡಿಸಿದಳೀಕೆಯೆಂದು ಜಿನುಗುವಂತಿರ್ದ ಮಧುಕರನಿವಹಕ್ಕೆ ಪಿರಿದು ಮುಬ್ಬೆಗಂಬಡುವಳೋರೊರ್ಮೆ ಭವನಾಂಗಣಸಹಕಾರಭೂರುಹಕ್ಕೆವಂದು ತನ್ನ ಪಾಡು ವಿಂಚರದಿಂದೆಮ್ಮ ಪಾಟಮಂ ಕೇಟ್ಮಾಡಿದಳಿವಳೆಂಬ ಮುಳಿಸಿಂ ಗಜಱಿ ಗರ್ಜಿಸು ವಂತಿರ್ದ ಕೋಗಿಲೆಗಳ ಜಡಿಪಕ್ಕೆ ಬೆದಱುವಳಿಂತು ಪಲತೆಱದೆ ಮದನದುಶ್ಚೇಷ್ಟಿತಾಯಾ ಸಂಗಳಿಂದಮೆ ಪಲಗಲ್ಗಳಂ ಕಟಿಪುವಳಂತುಮಲ್ಲದೆಯುಂ

ಅಮೃತಮಯೂಖನಿರ್ಮಲ ನಿ[1]ಶೀಥಿನಿ[1]ಯೊಳ್ ಲಲಿತಾಂಗಮಿಂದುಕಾಂ
ತಮಯಮೆನಲ್ಕೆ ಬಿಂದುವಿಡುತಿರ್ಪುದು ಸುಯ್ಯೆಲರಂಬುರಾಶಿ ವಾ
ರಿಮಯಮೆನಲ್ಕೆ ಪೆರ್ಚುವುದಪಾರಮನೋರಥಮುಂ ರಥಾಂಗಯು
ಗ್ಮಮಯಮೆನಲ್ಕೆ ಕೂಡದಣಮಾ ವಿಕಚೋತ್ಪಲಪತ್ರನೇತ್ರೆಯಾ ೪೬

ಪೊಳೆವ ಶಶಿಕಾಂತದರ್ಪಣ
ನಿಳಯದೊಳಲ್ಲಲ್ಲಿ ಪೊಳೆವ ತನ್ನಯ ನೆೞಲಂ
ನಳಿನಾಕ್ಷಿ ಕಾಣುತಂ ಮನ
ದೊಳೆ ಪಱಿವಱಿಯಾದೆನೆಂದು ಚಿಂತಿಸುತಿರ್ದಳ್ ೪೭

ಅಲರ್ದಲರ್ವಾಸುಗಳೊಳ್ ಪರಿ
ಮಳಕ್ಕೆ ಪರಿತಂದು ಮುಸುಱುವಳಿಕುಲದಿಂದಾ
ಕುಲತೆ ಪಿರಿದಾಗೆ ಮದನಾ
ನಲನಳುರಲ್ ಕಾಂತೆ ಪೊತ್ತಿ ಪೊಗೆವಂತಿರ್ದಳ್ ೪೮

ವ॥ ಮತ್ತಮೇನೆಂದಱಿಯೆನದೊಂದು ಮುಗ್ಧತೆಯನಪ್ಪುಕಯ್ದಂತೆ ವಿಲಾಸನುಂ ತಾಳ್ದಿದಂತೆ ಮರುಳ್ತನಂ ತೊಡರ್ದಂತೆ ನೆಗೞುತ್ತಮಿರ್ಪಳದೆಂತೆನೆ

ಲಲನಾಮಂಜೀರನಾದಕ್ಕುಲಿಗುಮೆನುತೆ ಧಾರಾಗೃಹೋತ್ಕೀಲಿತೇಂದೂ
ಪಲಹಂಸಾಸ್ಯಂಗಳಂ ಮುದ್ರಿಸುವಳಿರುಳಗಲ್ದಪ್ಪುದೆಂದಬ್ಜಸೂತ್ರಾ
ವಳಿಯಿಂದಾಲೇಖ್ಯಚಕ್ರದ್ವಯದ ಚರಣಮಂ ಕಟ್ಟುವಳ್ ಕರ್ಣಪೂರೋ
ತ್ಪಲದಿಂ ಚಿಂತಾರತಕ್ಕಾಟಿಸಿ ಮಣಿಮಯದೀಪಂಗಳಂ ನಂದೆಪೊಯ್ವಳ್ ೪೯

ವ॥ ಮತ್ತಮಾಕೆ ಜಲಕಣಿಕೆಯಂತೆ ನಳಿನೀದಳಂಗಳಮೇಲಿರ್ದು ನಡುಗುವಳ್, ನಳಿನಿಯಂತೆ ಶೀತಕರಸ್ಪರ್ಶನದಿಂ ಕೊರಗುವಳ್, ಚಂದ್ರಮೂರ್ತಿಯಂತೆ ಕಮಲನಿಕರ-ಸ್ಖಲಿತಪಾದೆಯಾಗಿ ತೊೞಲುತ್ತಮಿರುಳಂ ಕೞಿಪುವಳ್, ಕುಮುದಿನಿಯಂತೆ ತಿಳಿಗೊಳಂಗಳೊಳ್ ಮೂರ್ಛೆವೋಗಿ ಪಗಲಂ ಕೞಿಪುವಳ್, ಮಲಯನದಿಯಂತೆ ಚಂದನಪಲ್ಲವಕಲಿತ ಶಿಲಾತಲಂಗಳೊಳ್ ಮೆಯ್ಯನೀಡಾಡುವಳ್, ಕಂದಳಿಕೆಯಂತೆ ಶಿಶಿರಸಂಪರ್ಕಕ್ಕೆ ಕಂದಿ ಕುಂದುವಳಂತುಮಲ್ಲದೆಯುಂ

ಯುವತೀರತ್ನಕ್ಕೆ ನಿನ್ನಾಕೃತಿಯೊಳೆ ಸತತಂ ಚಿತ್ರವಿದ್ಯಾವಿಲಾಸ್ಯೈ
ಕವಿನೋದಂ ನಿನ್ನ ನಾಮಾಕ್ಷರಮೆ ವಿರಹದಾಹಪ್ರತೀಕಾರಮಂ ಮಾ
ಡುವುಪಾಯಂ ನಿನ್ನ ಸಂಬಂಧಮೆ ಸಕಲರಹಸ್ಯಂಗಳುಂ ನಿನ್ನ ವೃತ್ತಾಂ
ತವೆ ಸರ್ವಪ್ರಶ್ನಮುಂ ನಿನ್ನಯ ಪೆಸರೆ ಸಖೀಸಂಕುಲಕ್ಕೆಲ್ಲಮೀಗಳ್ ೫೦

---

1 ಶಾಳಿಕೆ (ಕ)

ವ॥ ಎಂದಿವುಮೊದಲಾಗಿ ಸೋನ್ಮಾದ ಸಪ್ರಸಾದ ಸನಿರ್ವೇದ ಸೋಪಾಲಂಭ ಸಾವಷ್ಟಂಭ ಸಾಭ್ಯುಪಗಮ ಸಸಂಭ್ರಮ ಸಪರಿಹಾಸ ಸರೋಷ ಸನಿರ್ವಿಶೇಷ ಸಾಭ್ಯರ್ಥನ ಸಾನುರಾಗ ಸಾತ್ಮಾರ್ಪಣಂಗಳೆನಿಸಿ ಸರಸಂಗಳಾಗಿಯುಮತಿಶೋಷಣಹೇತುಗಳುಂ ಕೋಮಲಂಗಳಾಗಿಯುಂ ಕಠೋರಂಗಳುಂ ಲಲಿತಂಗಳಾಗಿಯುಂ ಪ್ರೌಢಂಗಳುಂ ಮಧುರಂಗಳಾಗಿಯುಂ ದುಃಶ್ರವಂಗಳುಮಪ್ಪ ಕಾದಂಬರೀಸಂಬಂಧವಚನಂಗಳಂ ಪತ್ರಲೇಖೆ ಬಿನ್ನವಿಸುತ್ತಿರೆ ಸಾಲ್ಗುಮಿಂ ಕೇಳಲಾಱೆನೆಂದು ನಿಸರ್ಗಧೀರಪ್ರಕೃತಿಯಾಗಿಯುಂ ಅತಿಪರ್ಯಾಕುಲನಾದ ರಾಜಪುತ್ರನಂ ಪತ್ರಲೇಖೆಯಿಂತೆಂದಳ್

ಇನಿವಿರಿದವಸ್ಥೆಗಳ ನೀ
ನನಿಮಿತ್ತಂ ಸೃಜಿಸಿಯುಂ ನಿಜಂ ನಿಷ್ಕರುಣಾ
ತ್ಮನೆಯಾಗಿ ಚಿತ್ರರಥನಂ
ದನೆಯಂ ಪೇೞಿಂತು ದೇವ ಕಡೆಗಣಿಸುವುದೇ ೫೧

ವ॥ ಎಂದು ಪತ್ರಲೇಖೆ ಬಿನ್ನಪಂಗೆಯ್ಯೆ ಮದನಶರಶಲಾಕಾಕೀಲಿತಾಂತರಂಗನಾಗಿ

ಮನದಟಲಿಂ ಪೊಣ್ಮುವ ಕ
ಣ್ಬನಿದಃಱುಗಲನೆಮೆಯೊಳಾಂತು ನಿಡುಸುಯ್ಗಧರಂ
ತನಿಗೆತ್ತಲ್ ಮನಮಿಕ್ಕೊ
ಯ್ಯನೆ ನುಡಿದಂ ಪತ್ರಲೇಖೆಗವನಿಪತನಯಂ ೫೨

ವ॥ ಅದೆಂತನೆ

ಎನಗನುರೂಪಲೀಲೆ ದೊರೆಕೊಂಡಿರದೆಂದಿನಿತುಂ ಮನೋರಥಂ
ಜನಿಯಿಸದೆಂದು ದೇವಿಯರ ಗೆಯ್ತುಮ[1]ದೆಲ್ಲಮೆ[1] ಸಾಜಮೆಂದು ಕೆ
ಮ್ಮನೆ ಪಲವುಂ ವಿಕಲ್ಪಶತದಿಂದಮೆ ಸಂದೆಯಮಾಯ್ತು ದಿವ್ಯಕಾ
ಮಿನಿಯರ ದೃಷ್ಟಪೂರ್ವತೆಯಿನಿನ್ನೆನಗೇವೆನೊ ಪೇೞ್ ತಳೋದರೀ ೫೩

ವ॥ ಅದಲ್ಲದೆಯುಂ

ಪ್ರಮದದೊಳಿನ್ನ ಕಂಧರದೊಳಂದಿರುಳಿಕ್ಕಿದ ತೋರಹಾರಮುಂ
ಹಿಮಗೃಹಕಪ್ರವೃತ್ತಕಮುಮಂತಿರೆ ನಿನ್ನಯ ಪೇೞ್ದ ಮಾತುಮಾ
ರಮಣಿಯದೊಂದು ಭಾವಗತಮಂ ನೆಱೆ ಸೂಚಿಸೆ ಮತ್ತೆ ಸಂದೆಗಂ
ಸಮನಿಸಿತೆಂದೊಡಿನ್ನೆನಗದೊಂದು ವಿಮೋಹಿಪ ಶಾಪಮಾಗದೇ ೫೪

1 ದೆನ್ನಯ (ಕ)

ವ || ಎಂದು ಪತ್ರಲೇಖೆಯೊಡನೆ ನುಡಿಯುತ್ತುಮಿರ್ದಾ ಪಗಲಂ ಕಳೆದು ಸಂಜೆಯಪ್ಪುದುಂ ತನ್ನ ಚಿಂತಾಸಂತಾಪದೊಳ್ ದಿಗಂತಮೆಲ್ಲಂ ಕತ್ತಲಿಸಿದುದೆಂಬಂತೆ ಕತ್ತಲೆ ಕವಿಯೆ ತಂತಮ್ಮೊಳೋರೊಂದರ್ಕೆ ಪುಯ್ಯಲ್ವುವಂತೆ ಕರುಣಾರುತಮನೊದವಿಸುತ್ತುಂ ದುರ್ನಿವಾರವಿರಹವೇದನೋನ್ಮಥ್ಯಮಾನಮಾನಸಾಕುಲಮಪ್ಪ ಚಕೋರಯುಗಂಗಳ್ಗೆ ಮದನನ ಮಸೆದ ಕೂರ್ಗಣೆಗಳಂತಿರೆ ಧೂಳಿದೂಸರಮಪ್ಪ ಚಂದ್ರಮಂಡಲಾಗ್ರಮಯೂಖಂಗಳ್ ನಿಮಿರೆ ತತ್ಸಮಯದೊಳ್ ಶಯನತಲಕ್ಕೆವಂದುನ್ಮೀಲಿತನಯನನಾಗಿಯುಮಪ್ರಾಪ್ತನಿದ್ರಾವಿನೋದನಾಗಿ ಚಿತ್ರರಥನಂದನೆಯಂ ನೆನೆಯುತ್ತುಮಿರೆಯಿರೆ

ತ್ವರಿತದೆ ಹೇಮಕೂಟನಗರಕ್ಕಿರದೆಯ್ದಿ ಬಟಿಲ್ದವೋಲ್ ಮನೋ
ಹರಿಯ ಪದಾಬ್ಜದೊಳ್ ಬಿರಸಿ ತೋಳ್ ತೊಡೆಯೊಳ್ ತೊಡರ್ದತ್ತು ಪೀನಪೀ
ವರಕುಚದೊಳ್ ಪೊರಳ್ದುದು ಮುಖೇಂದುವಿನೊಳ್ ಪೊಳೆದತ್ತು ಕುಂತಲೋ
ತ್ಕರದೊಳಡಂಗಿತಂಗರುಚಿಯೊಳ್ ಮುಟುಗಿತ್ತು ಮನಂ ಮಹೀಶನಾ ೫೫

ವ || ಅಂತು ನಿರ್ಭರಸ್ನೇಹಾರ್ದ್ರೀಕೃತಾಂತರಂಗನಾಗಿ ನೆನೆಯುತ್ತುಮಾಯಿರುಳಂ ಕಟಿಪೆ ನೇಸರ್ ಮೂಡಲೊಡನೆ

ಸುದತೀವೃತ್ತಾಂತಮಂ ಕೇಳ್ವಿನೆಗಮೆನಗೆ ಮಹೌನಂದಲೆಂಬಂತು ಮಾತಾ
ಡದೆ ತದ್ವಕ್ತ್ರೇಂದುಬಿಂಬಂ ಮಱೆಯೆನಿಸಿದುದೆಂಬಂದದಿಂದೇನುಮಂ ಕಾ
ಣದೆ ತತ್ಪ್ರೇಮಾಮೃತಾದ್ರೋಕ್ತಿಗಳೆ ಕಿವಿಗಳೊಳ್ ತೀವಿದಂತೇನುಮಂ ಕೇ
ಳದೆ ಕಾಮೋನ್ಮುಕ್ತಸಂಮೋಹನಶರಹತಿಯಿಂ ಮೂಢನಾದಂತಿರಿರ್ದಂ ೫೬

ವ || ಅಂತಿರ್ದ ಮದನಾನಲದಹ್ಯಮಾನಾಂತಃಕರಣನಾಗಿರ್ದುಂ ಗುರುಜನಂಗಳ್ಗೆ ಲಜ್ಜಿಸಿ ಮಾನಕನಕಾಚಲಂ ಶಿಶಿರೋಪಚಾರಂಗಳ್ಗೆ ಮೆಯ್ದೆರಲಾಱದೆ

ಬಗೆಯೊಳೆ ಧೈರ್ಯಮುಂ ಬಗೆದನಲ್ಲದೆ ಮನ್ಮಥಬಾಣಪೀಡೆಯುಂ
ಬಗೆಯನೆ ಲಜ್ಜೆಯುಂ ಬಗೆದನಲ್ಲದೆ ತನ್ನ ಶರೀರಕಾರ್ಶ್ಯಮಂ
ಬಗೆಯನೆ ಪೆರ್ಮೆಯುಂ ಬಗೆದನಲ್ಲದೆ ಕಾಮವಿಕಾರವೇಗಮಂ
ಬಗೆಯನೆ ಭೂಭುಜಂ ಪಿರಿಯರಪ್ಪವರ್ಗಿಂತಿರೆ ದಲ್ ನೆಗಟ್ತೆಗಳ್ ೫೭

ವ || ಅದಲ್ಲದೆಯುಂ

ಮೊದಲಿಂ ಗಂಭೀರಭಾವಂ ತನಗೆ ನಿಜಮೆನಲ್ ಸಂದ ರತ್ನಾಕರಂ ಕೌ
ಮುದಿಯಿಂದಂ ಕ್ಷೋಭಿಸಿರ್ದುಂ ಸಹಜವೆನಿಪ ತನ್ನೊಂದು ಮರ್ಯಾದೆಯಂ ದಾಂ
ಟದವೋಲಿಂತಪ್ಪವಸ್ಥಾಂತರವಡಸಿದೊಡಂ ತನ್ನ ಮರ್ಯಾದೆಯಂ ದಾಂ
ಟದನಂ ಗಾಂಭೀರ್ಯರತ್ನಾಕರನೃಪನದೇಂ ಬಣ್ಣಿಪಂ ಬಣ್ಣಿಪಾತಂ ೫೮

ವ|| ಅಂತು ಧೀರೋದಾತ್ತವೃತ್ತಿಯನವಲಂಬಿಸುತಂ ಕತಿಪಯದಿನಂಗಳ್ ದಿನ ಸಹಸ್ರಾಯಮಾಣವಾಗಿ ಪೋಗುತ್ತಮಿರಲೊರ್ವೆ ರಣರಣಕಾವಸ್ಥಾಂತರವಶದಿಂ ಲಬ್ಧಾವಸರನಾಗಿ ನಗರಿಯಂ ಪೊಱಮಟ್ಟು ಪೋಗಿ

ತೆರೆದೊಂಗಲ್ ಪೊರೆದಿರ್ದ ತಣ್ಣೆಲರ್ಗಳಿಂ ಮೆಲ್ಲುಣ್ಮರಂಗೆಯ್ವ ಹಂ
ಸರಥಾಂಗಂಗಳನಿರ್ಪುವೆತ್ತೆಳವುಳಿಲ್ದಾಣಂಗಳಿಂ ಕಣ್ಗೆವಂ
ದಿರೆ ಶಿಪ್ರಾತಟನೀ ತಟಸ್ಥಲಿಗಳೊಳ್ ಲೀಲಾವಿನೋದೈಕ ತ
ತ್ಪರನಾಗಳ್ ನಡಪಾಡುತಿರ್ದನವನೀಶಂ ಪತ್ರಲೇಖಾನ್ವಿತಂ ೫೯

ವ|| ಅಂತಿರ್ದ ತರಂಗಿಣೀತೀರಾಂತರದೊಳ್ ಕಾರ್ತಿಕೇಯನ ದೇಗುಲಕಾಗಿ ದೂರಾಗಮನ ಖೇದನಿವೇದಕಂಗಳಪ್ಪ ಕೆಲವು ಕುದುರೆಗಳ್ ಬೆರಸಿ ಬರ್ಪುದುಂ ಕಂಡೀ ವಾರುವಂಗಳಾರವೆಂದಾರಯಲೊರ್ವನಂ ಕಳಿಪಿ ಮಱುವಾರ್ತೆಗೇಳಲೆಂದು ತಾನುಮೂರು ದಘ್ನಮಪ್ಪ ನೀರಿಂ ಪೊಱಮಟ್ಟು ರುದ್ರಸುತಾಯತನಕ್ಕೆ ಪೋಗಿ ತತ್ತುರಂಗಮಂಗಳನ ತಿಕುತೂಹಲನಾಗಿ ನಿಂದು ನೋಡುತ್ತಂ ಪಕ್ಕದೆ ನಿಂದ ಪತ್ರಲೇಖೆಯಂ ಬರೆತೆಗೆದು

ಜವವಱಿಯದಿದಿರೊಳೀ ಬ
ರ್ಪ ವಾಜಿಗಳ ನಡುವೆ ಪೀಲಿದಱಿಗಳ ನೆೞಲಿಂ
ದವಿಭಾವ್ಯನೆನಿಸಿ ಬರುತಿ
ರ್ಪವನೇಂ ಕೇಯೂರನಾಗದಿರ್ಕುಮೆ ಪಿರಿದುಂ ೬೦

ವ|| ಎಂದು ಪತ್ರಲೇಖೆಗೆ ತೋಱಿ ನುಡಿಯುತ್ತಿರ್ದ ಯುವರಾಜದೇವನಂ ಕಂಡು ದೂರದಿಂ ಕುದುರೆಯಿಂದವಿೞಿದೆಯ್ದೆವಂದು

ಒದವಿದ ವಿನಯದಿನಡಿಗೆಱ
ಗಿದ ಕೇಯೂರಕನನಿತ್ತ ಬಾಯೆನುತ ಪದಂ
ಪೊದವೆ ತೆಗೆತೆಗೆದು ತಳ್ಕೈ
ಸಿದನಾಗಳ್ ನೃಪತಿ ನಿಬಿಡನಿಜಭುಜಯುಗದಿಂ ೬೧

ವ|| ಅಂತು ತಳ್ಕೈಸಿ ಮತ್ತಂ ಕೃತನಮಸ್ಕಾರನಾದ ಕೇಯೂರಕನನತಿಪ್ರೀತಿಯಿಂ ನೋಡಿ ನಿನ್ನ ಕಾಣ್ಕೆಯೊಳೆ ಸಪರಿವಾರಮಪ್ಪ ಕಾದಂಬರೀದೇವಿಯ ಕುಶಲಮಱಿಯ ಲಾದುದು, ನಿನ್ನ ಬರವಿಂಗೆ ನಿಮಿತ್ತಮಂ ಬೞಿಕ್ಕೆಗಳೆದು ಪೇೞೆಂದು ತನ್ನ ಮುಂದೆ ಸಾರ್ದಿರ್ದ ವಾರುವಂಗಳ್ಗಳ್ಕಿ ಬೆಗಡುಗೊಂಡ ಪಿಡಿಯನೆ ಕೇಯೂರಕನುಮಂ ಪತ್ರ ಲೇಖೆಯುಮಂ ಪೆಱಗನೇಱಿಸಿ ನಿಜಭವನಕ್ಕೆ ಬಂದು ಸಕಲರಾಜಲೋಕಮಂ ವಿಸರ್ಜಿಸಿ ವಲ್ಲಭೋದ್ಯಾನಮಂ ಪೊಕ್ಕು ಸಪರಿವಾರನಪ್ಪ ಕೇಯೂರಕಂಬೆರಸು ಮನವಲ್ಲದಮನ

ದೊಳ್ ದಿವಸವ್ಯಾಪಾರಮಂ ತೀರ್ಚಿ ದೂರೋತ್ಸಾರಿತಪರಿಜನಂ ಪತ್ರಲೇಖಾದ್ವಿತೀಯನಾಗಿ ಕೇಯೂರಕನಂ ಕರೆದು

ಪರಿಜನಸಮೇತಂ ಕಾದಂ
ಬರಿಯ ಮಹಾಶ್ವೇತೆಯೊಂದು ಸಂದೇಶಂ ಪೇೞ್
ನಿರಿವಿಸಿದುದುಂಟೆ ಬರ್ಪವ
ಸರದೊಳ್ ನಿನಗೆಂದು ನೃಪಸುತಂ ಬೆಸಗೊಂಡಂ ೬೨

ವ॥ ಅಂತು ಬೆಸಗೊಳ್ವುದುಂ ಸಂದೇಶಮುಪ್ಪೊಡೆ ಕಾದಂಬರಿಯ ದೆಸೆಯೊಳ್ ಮೇಣ್ ಮಹಾಶ್ವೇತೆಯ ದೆಸೆಯೊಳೊಂದುಮಿಲ್ಲಂ. ಪತ್ರಲೇಖೆಯಂ ಕಳಿಪಿ ಮಗುಳ್ದಾಂ ದೇವರುಜ್ಜೈನಿಗೆ ಬಿಜಯಂಗೆಯ್ದ ವಾರ್ತೆಯಂ ಬಿನ್ನವಿಸೆ ಮೊಗಮಂ ನೋಡಿ ಬಿಸುಸುಯ್ದೞಲಿಂದಮಿಂತುಟೆ ವಲಮೆಂದು ಮಹಾಶ್ವೇತೆ ತನ್ನಾಶ್ರಮಕ್ಕೆ ಪೋಗೆ ಕಾದಂಬರಿ ತೊಟ್ಟನದೃಷ್ಟವಜ್ರಾಭಿಘಾತೆಯಾದಂತೆ ನಿಮೀಲಿತನಯನೆಯಾಗಿ

ಅಂತಾ ಪದದೊಳ್ ಮೂರ್ಛಿತೆ
ಯಂತೆವೊಲುನ್ಮತ್ತೆಯಂತೆವೋಲರ್ದಿತಳಾ
ದಂತೆವೊಲಂತಃಪೀಡಾ
ಕ್ರಾಂತೆಯಿನೊಂದಿನಿತು ಪೊೞ್ತು ಮಱವಟ್ಟಿರ್ದಳ್ ೬೩

ವ॥ ಅಂತಿರ್ದು ಮಹಾಶ್ವೇತೆವೋದುದನಱಿಯದೆ ಕಿಱಿದು ಬೇಗಕ್ಕಾಕೆ ಕಣ್ಗಳಂ ತೆಱೆದು ಲಜ್ಜಿತೆಯಾದಂತೆಯುಂ ವಿಸ್ಮೃತೆಯಾದಂತೆಯುಂ ವಿಸ್ಮಯಸ್ತಬ್ಧದೃಷ್ಟಿಯಾಗಿ ಮಹಾಶ್ವೇತೆಗೀ ವೃತ್ತಾಂತಮಂ ಪೇೞಿಮೆಂದಲ್ಲಿಂದೆೞ್ದು ನಿವಾರಿತಾಶೇಷಪರಿಜನಪ್ರವೇಶೆಯಾಗಿ

ಸಾಡೆ ಬೞಲ್ದೞಲ್ದು ನಿಲಲಾಱದೆ ಸೆಜ್ಜೆಗೆವಂದು ಮೆಯ್ಯನೀ
ಡಾಡಿ ನಿಜೋತ್ತರೀಯವಸನಾಂಚಲದಿಂ ಮುಸುಕಿಟ್ಟು ಚಿಂತೆಯೊಳ್
ಮೂಡಿ ಮುೞುಂಗಿ ತನ್ನ ಮನದನ್ನರೊಳಂ ಮೊದಲಾಗಿ ಕನ್ನೆ ಮಾ
ತಾಡದೆ ಜಾನಿಸುತ್ತಿರಲು ಪಿಂಗಿದುದಂದಿನದೊಂದಹರ್ನಿಶಂ ೬೪

ವ॥ ಅಂತು ಮಱುದಿವಸಂ ನೇಸರ್ ಮೂಡಲೊಡನೆ ತನ್ನಿದಿರೊಳ್ ನಿಂದಿರ್ದೆನ್ನಂ ನೋಡಿ

ಇಂತು ಭವದ್ವಿಧರ್ ಪರಿಜನಂಗಳಿರಲ್ಕೆನಗೀಯವಸ್ಥೆಯೆಂ
ಬಂತೆಯುಮೀ ನಿರರ್ಥಕರಿನಾವುದು ತೀರ್ದಪುದೆನ್ನ ಕಜ್ಜಮೆಂ
ಬಂತೆಯುಮಿನ್ನುಮೆನ್ನಿದಿರೊಳಿರ್ದಪೆ ನಿರ್ದಯ ಪೋಗು ಬೇಗಮೆಂ
ಬಂತೆಯುಮೆನ್ನನಶ್ರುಪಿಹಿತಾಕುಲದೃಷ್ಟಿಗಳಿಂದೆ ನೋಡಿದಳ್ ೬೫

ವ ॥ ಅಂತು ನೋಡಲೊಡನೆನ್ನಂ ಪೋಗೆಂದಳೆಂದಱಿಂದು ದೇವಿಗೆ ಪೇೞಿದೆ ದೇವರ ಶ್ರೀಪಾದಂಗಳಂ ಕಾಣಲ್ಕೆ ಬಂದೆಂ ದೇವ ನೀನೊರ್ವನೆ ಶರಣಮೆಮಗೆ ಪರಿಜನಪ್ರಾಣತ್ರಾಣಾಕುಲಮತಿಯಪ್ಪೆನ್ನ ಬಿನ್ನಪಮಂ ದೇವರವಧಾರಿಸಿ ಪ್ರಸಾದಂಗೆಯ್ವುದು. ದೇವರ್ ಬಿಜಯಂಗೆಯ್ದಂದು ಮೊದಲ್ಗೊಂಡು ಮದನದುಶ್ಚೇಷ್ಟಿತಾಯಾಸಂಗಳಿಂದಮೆ ದಿವಸಂಗಳಂ ಕಳಿಪುತ್ತಮಿರ್ದಳ್. ಪತ್ರಲೇಖೆ ಪೇೞ್ದವಸ್ಥಾಂತರಂಗಳನಾಂ ಬಿನ್ನವಿಪೊಡೆ ಪುನರುಕ್ತಮೆಂದು ಬಿನ್ನವಿಸಿದ ಕೇಯೂರಕನ ಮಾತಂ ಕೇಳ್ದು ಸಾಲ್ಗುಮಿಂ ಕೇಳಲಾಱೆ ನೆಂದು ಮದನಶರಶಿಖಾಕೀಲಿತಾಂತರಂಗನುಮಂತರ್ಬಾಷ್ಪರುಧ್ಯಮಾನಕಂಠನುಮನಂಗತಾಪಸಂಭ್ರಮೋತ್ಕಂಠಾವೇಗವಿಹ್ವಲಹೃದಯನುಮಾಗಿ ಮನುಜೇಂದ್ರಚಂದ್ರನೆಂತಾನುಂ ಕೇಯೂರಕನನಿಂತೆಂದಂ.

ಅನುರಾಗಮಿಲ್ಲದಂ ಮೇಣ್
ಪುನರಾಗಮರಹಿತನೆಂದು ಬಗೆದೆನ್ನಂ ಮಾ
ನಿನಿ ಸಂದೇಶಮನೇನುಮ
ನೆನಗೀಗಳ್ ನಿನ್ನ ಕಯ್ಯೊಳಟ್ಟಿದಳಿಲ್ಲಂ ೬೬

ವ ॥ ಮಹಾಶ್ವೇತೆಯುಂ ಸಮುಪಾಹೃತಾನುಬಂಧೆಯಾಗಿಯುಂ ನಿನ್ನ ಕಯ್ಯೊಳೇನುಮಂ ಪೇೞ್ದಟ್ಟಿದಳಿಲ್ಲೆಮ್ಮ ಪತ್ರಲೇಖೆಯ ಪೇೞ್ಕೆಯೊಳಂ ನಿನ್ನ ನುಡಿಯೊಳಮದೆಲ್ಲಮಂ ನೆಱೆಯಱಿದೆಂ. ದೇವಿಯರಾಭಿಜಾತ್ಯಮುಮಂ ಮಹಾನುಭಾವತೆಯುಮಂ ದಾಕ್ಷಿಣ್ಯಮುಮಂ ಭಾವಿಸುತ್ತಿ[1]ರ್ದೆಂ[1]; ಚಂದ್ರಮೂರ್ತಿಯಾಲೋಕನದದೆಸೆಯಿಂ ನಿಶ್ಚೇತನಮಪ್ಪ ಚಂದ್ರಕಾಂತದ ಪಾಷಾಣಕ್ಕಾದ್ರ್ರಭಾವೋಪಗಮನಮಾಯತ್ತಮಲ್ಲದೆ ತತ್ಕರಾಕರ್ಷಣಂ ದೊರಕೊಳದು ; ದಿವಸಕರಸಂತಾ[2]ಪಕ್ಲಾಂ[2]ತಮಪ್ಪ ಕುಮುದಾಕರಕುನ್ಮುಖತೆಯೆ ದೊರೆಕೊಳ್ಗುಮದರ್ಕಲರ್ಕೆಯೆಂಬುದು ಚಂದ್ರಿಕಾಭಿರಾಮಮಪ್ಪ ರಜನಿಯ ಕಯ್ಯೆಡೆವಲಂ ; ಅದಱಿನಧರಸ್ಪಂದಿತಮಾತ್ರಮನೆ ಪಾರ್ದಿರ್ಪ ಪರಿಜನಂಗಳೊಳಿನಿತು ಗೌರವಮನೇಱಿಸಿ ಸುಖಪರಿಪಂಥಿನಿಯುಂ ದುಃಖೈಕದಾನನಿಪುಣೆಯುಂ ಪರಹೃದಯಪೀಡಾಪೇಕ್ಷಣಿಯುಮಪ್ಪ ಲಜ್ಜೆಯಂ ಕಾಯಲುಜ್ಜುಗಂಗೆಯ್ದು ಬೆಸಸದಿರ್ಪುದೆಲ್ಲಂ ದೇವಿಯರುಪರೋಧಮೆ ತಂಬಲರಲೆಪದಿಂ ಮೆಲ್ಲನುಗುವಲರ್ಗಳಂ ಸೈರಿಸದ ದೇವಿಯರ ಶರೀರಂ ವಜ್ರಸಾರಹೃದಯರ್ಗಂ ದುಸ್ಸಹಮೆನಿಪ ಸಮಶರಶತಪ್ರಹಾರಮನೆಂತು ಸೈರಿಸಿದಪುದು ; ದಿವಸಕ್ರಮುಗಮ್ಯಮಾರ್ಗಮೆಮಗಂ ಬೇಗಮೆಯ್ದೆ ಬಾರದು ; ದುಃಖೈಕದಾನವ್ಯಸನಿಯುಂ ದುರ್ಘಟಘಟನಾಪಂಡಿತನುಂ ಯತ್ಕಿಂಚನಕಾರಿಯುಮಪ್ಪ ಹತವಿಧಿಯೋಗಮಾರ್ಗಂ ಬಗೆಯಲಗೋಚರಮದೆಂತೆನೆ.

---

1 ರ್ದೆಂತು (ಕ) 2 ಕ್ರಾಂ (ಕ)

ಮೊದಲೊಳ್ ತತ್ಕಿನ್ನರದ್ವಂದ್ವದ ಬಟಿಸಲಲೆತ್ತಾನುಮುಚ್ಚೋದಮಂ ಸಾ
ರ್ವುದದೆತ್ತಂತಲ್ಲಿಗೊಂದಿಂಚರವೆಸಗುವುದೆತ್ತಾ ಮಹಾಶ್ವೇತೆಯಂ ಕಾ
ಣ್ಬುದದೆತ್ತಾ ಕಾಂತೆ ಕಾದಂಬರಿಯನೆನಗೆ ತಾಂ ತೋರ್ಪುದೆತ್ತಾನುಮೆನ್ನೊಳ್
ಮದನವ್ಯಾಪಾರವೆತ್ತಾಂ ಜನಕನ ಬೆಸದಿಂದಿಂತಗಲ್ದಿರ್ಪುದೆತ್ತಂ ೬೭

ವ॥ ಎಂದು ನೃಪರೂಪಚಂದ್ರಂ ಕೇಯೂರಕನೊಡನೆ ನುಡಿಯುತ್ತಿರ್ಪನ್ನೆಗಂ

ಎನಸುಂ ಗಂಧರ್ವರಾಜಾತ್ಮಜೆಯ ವಿರಹವೃತ್ತಾಂತ ಸಂತಪ್ತನಾಗಿ
ರ್ದನೊಳಾನುಂ ಕಾಯೆನೆಂದಾದವೆ ಕರುಣಿಸಿದಂತೆಯ್ದೆ ಸಂಕೋಚಿಸಿತ್ತೊ
ಯ್ಯನೆ ಸುತ್ತಂ ಸೂಸಿದೀಶಾನನ ಜಡೆಗಳವೊಲ್ ಕಾಯ್ದು ಪೊನ್ನೀರ್ಗವಿಲ್ಗೆಂ
ಪಿನ ಪೆಂಪಂ ಸಿಂಪಿಸುತ್ತಿರ್ದಹಿಮರುಚಿಗಳಂ ತಿಗ್ಮರುಜ್ಮಾಲಿಬಿಂಬಂ ೬೮

ವ॥ ಆಗಳ್ ಪೆರ್ಮರದ ತುದಿಗೋಡುಗಳೊಳ್ ತೊಡರ್ದ ಕೆಂಬಿಸಿಲ ಮುಱಿ
ಗಳನುಡಿಗೆಡೆಗೆಯ್ಯುತ್ತಮಾದಿತ್ಯನೊಡನೆ ವಾಸರವೊಯ್ಯನೋಸರಿಸೆ ನೃಪರೂಪಚಂದ್ರಂ
ಗೆ ಕೆಳದಿಯಂತೆ ಕರುಣಿಸಿ ನಾಂದ ನಾರಂಗಪಟ್ಟೆಯ ಮೇಲ್ಕಟ್ಟನಂಬರದೊಳ್ ಕಟ್ಟಿದಳೆಂ
ಬಂತೆ ಸಂಜೆ ಸಂಜಾತ ಸ್ವರಾಗಪಟಲಮಂ ಪಸರಿಸೆ ಗಂಧರ್ವರಾಜನಂದ[1]ನಾಭೀಕ್ಷಣ[1]ಕ್ಕೆ
ಸಮೆದ ನೀಲಪಟಮೆಂಬಂತೆ ನಿಶಾಗಮನವೆಣ್ದೆಸೆಯೊಳಮೆಸೆವ ಕತ್ತಲೆಯಂ ಬಿತ್ತರಿಸೆ
ಅರಲ್ದಿರೆ ಕೊರಗಿ ದುಸ್ಸಹವಿರಹಶಯನರಚನೆಗೆ ಬಾರ್ತೆಯಾಗಲಾಱೆವೆಂದಗಿದು
ಮೆಯ್ದೆಗೆದುವೆಂಬಂತೆ ತಾವರೆಗಳ್ ಮುಗಿಯೆ ಶುಚಿಸ್ವಾಭಾವಂಗಳಪ್ಪುದಱನಾರ್ದ್ರತೆ
ಯನಪ್ಪುಕೆಯ್ದುತ್ಕಂಠಶಯನಪರಿಕಲ್ಪನಕ್ಕಾವಾವೆ ಮುಂಚುವೆವೆಂಬಂತೆ ಕುಮುದಿನಿ
ಳೊಂದೊಂದು ಗಱಗಳುಳ್ಳಲರೆ ಕಾದಂಬರಿಯ ಸಮೀಪಕ್ಕೆ ಪೋಗೆಂದು ಯುವರಾಜಂಗ
ಗುಪದೇಶಂಗೆಯ್ವಂತೊಡನೊಡನಗಲ್ವ ಜಕ್ಕವಕ್ಕಿಗಳೊಳ್ ಕಳರುತಮುನೊದವಿಸೆ
ತತ್ಸಮಯದೊಳ್

ನಯದಿಂ ರಾಜೇಂದ್ರಚಂದ್ರಂಗಭಿಷವವಿಧಿಯಂ ಮಾಡುವೆಂ ಚಂದ್ರಿಕಾವಾ
ರಿಯಿನೆಂಬಂತೆತ್ತಲುಂ ತಣ್ಬೆಳಗಿನ ಬಳಗಂ ಸಿಂಪಿಸಲ್ ಪೂರ್ವದಿಕ್ಕಾಂ
ತೆಯ ಲೀಲಾದಂತಪತ್ರಂ ತ್ರಿಭುವನವಿಭವೈಕಾತಪತ್ರಂ ನಭೋಲ
ಕ್ಷ್ಮಿಯ ಲಾವಣ್ಯಹ್ರದಂ ಬಂದುದಯಿಸಿತುದಯಾದ್ರೀಂದ್ರದೊಳ್ ಚಂದ್ರಬಿಂಬಂ ೬೯

ವ॥ ಅಂತು ಚಂದ್ರೋದಯದೊಳ್ ನೃಪರೂಪಚಂದ್ರಂ ಚಂದ್ರಾತಪ ಸ್ಪರ್ಶ
ದರ್ಶಿತವಿಶದಬಿಂದುಸಂದೋಹಶೀತಳವಪ್ಪ ಚಂದ್ರಮಣಿಶಿಲಾತಲದೊಳ್ ಪಟ್ಟಿರ್ದಡಿ
ಯೊತ್ತುತಿರ್ದ ಕೇಯೂರಕನಂ ಮೆಲ್ಲನಿಂತೆಂದಂ.

1 ನಭಿಷಣ (ಕ)

ಮಗುಳ್ದಾನಿಲ್ಲಿಗೆ ಬರ್ಪುದುಂ ತನುವಿನೊಳ್ ಪ್ರಾಣಂಗಳಂ ದೇವಿ ತಾ
ಳ್ದುಗುಮೋ ಮೇಣ್ ಮದಲೇಖೆ ವಾರ್ತೆಯಱಿಂದೊಂದುದ್ಯೋಗದೆತ್ತಾನುವಿ
ಲ್ಲಿಗೆ ತಾಂ ಬರ್ಕುಮೊ [1]ಮಚ್ಚಿ ಮತ್ಪರಿಚಯ[1]ಕ್ಕಾದಂ ಮಹಾಶ್ವೇತೆ ತೊ
ಟ್ಟಗೆ ತನ್ನಂ ತನುವಿಂದೆ ಪತ್ತುವಿಡಳಲ್ತೇ ಪಿಂದೆ ಕೇಯೂರಕಾ ೨೦

ಮನದನ್ನರೆನಿಪ ನಿಜಪರಿ
ಜನದ ಸಖೀಜನದ ದೆಸೆಯೊಳಾದ ಸಮುಭ್ಯ
ರ್ಥನೆಯಿಂದೆ ದೇವಿ ತನ್ನಯ
ತನುವಂ ನಿಲೆಪಿಡಿವ ಬಾಸೆಯಂ ಮಾಡುಗುಮೋ ೨೧

ವ॥ ಎಂಬುದುಂ ಕೇಯೂರಕನಿಂತೆಂದಂ

ಪರಿಜನಮುಮಾಪ್ತರುಂ ಸಂ
ವರಿಸಲ್ ನಿತ್ತರಿಪರೆಂಬುದಂತಿರ್ಕಾ ಚಿ
ತ್ರರಥತನೂಜೆಯೆ ನಿನ್ನಯ
ಬರವಿನೊಳಾದಾಸೆಯಿಂದೆ ನಿತ್ತರಿಸಿದಪಳ್ ೨೨

ವ॥ ಅದಱಿಂ ದೇವರ್ ಬರವಿನೊಳಾದಂ ಬವಸೆಯನೆ ಮಾಟ್ಪುದೆನೆ ಕಿಱಿದು ಬೇಗಮೇನಾನುಮಂ ತನ್ನೊಳೆ ಭಾವಿಸುತಿರ್ದು ಕೇಯೂರಕನಂ ವಿಶ್ರಮಿಸೆ ವಿಸರ್ಜಿಸಿ ತಾನುಂ ಸೆಜ್ಜೆಗೆ ಬಿಜಯಂಗೆಯ್ದು ಗಮನಚಿಂತಾನಿಮಗ್ನಸ್ವಾಂತನಾಗಿ

ತಂದೆಗೆ ತಾಯ್ಗೆ ಪೇೞ್ದು ಗಮನೋದ್ಯಮನಾಗಲೆವೇೞ್ಕುಮಲ್ಲದಿ
ರ್ದಂದವರ್ಗಕ್ಕುಮಾವಗನುತಾಪಪರಂಪರೆ ಪೇೞ್ದು ಪೋಪೆನೆಂ
ಬಂದದು ನಾಡೆ ಲಜ್ಜೆ ಪೆಱತಿನ್ನದಱಿಂ ಶುಕನಾಸನಂದನಂ
ಬಂದಪನಾತನಿಂದಮಱಿವಂತಿರೆ ಪೇೞಿಸಿ ಮತ್ಪ್ರಪಂಚಮಂ ೨೩

ವ॥ ಮಹಾರಾಜಾಧಿರಾಜನುಮಪ್ಪೆನ್ನ ತಂದೆಯುಂ ಗಂಧರ್ವಲೋಕಾಧಿಪತಿಯಪ್ಪ ಚಿತ್ರರಥರಾಜನುಮೊಂದಾಗಿ ಮದುವೆಯಂ ಸಂಧಿಸುವಂತು ಮಾೞ್ಪನಿಲ್ಲಿಗೆನ್ನೊಳಲ್ಲದೆಯುಂ ಜನಕಂಗಮಱಿಪುವೊಡೆ ಮದೀಯ ಹೃದಯದ್ವಿತೀಯನಪ್ಪ ವೈಶಂಪಾಯನಂ ಪೆಱಗಾಗಿ ಪೆಱನಾವನಱಿದಪ್ಪನೆಂದು ಆತನ ಬರವನೆ ಬಯಸುತ್ತಮಾಯಿರುಳಂ ಕಳೆದು ನೇಸರ್ ಮೂಡಲೊಡನೆ

---

1 ನಾಣ್ಚುಮತ್ಸಂಜನ (ಕ)

ಬಂದುದು ಕಟಕಂ ದಶಪುರ
ಕೆಂದೆಲ್ಲರ್ ನುಡಿಯೆ ಕೇಳ್ದು ಭೋಂಕನೆ ಜೀವಂ
ಬಂದಂತುತ್ಸಾಹದಿನಾ
ನಂದಪರಂಪರೆಯನೆಯ್ದಿದಂ ಯುವರಾಜಂ ॥ ೭೪

ವ॥ ಅನ್ನೆಗಂ ಬಂದು ದೂರದೊಳೆ ಕೃತನಮಸ್ಕಾರನಾದ ಕೇಯೂರಕನಂ ಕರೆದು ವೈಶಂಪಾಯನಂ ಬಂದನಿನ್ನೆಮ್ಮ ಕಾರ್ಯಸಿದ್ಧಿ ಕರತಳವರ್ತಿಯಾದುದೆನೆ ಗಮನಕ್ಕೆ ಕಿಱಿದು ತಡಮನೊಡರಿಸುಗುಮೆಂದು ಮನದೊಳ್ ಬಗೆಯುತ್ತಂ ದೇವ ಕರವೊಳಿ ತಾಯ್ತೆಂದೆಯ್ದೆವಂದು ಕೆಲದೊಳ್ ಕುಳ್ಳಿರ್ದು ವೈಶಂಪಾಯನಾಲಾಪಂಗಳಿಂದಮೆ ಕಿಱಿದುಬೇಗಮಿರ್ದು ಸನ್ನೆಯಿಂ ಪರಿಜನಂಗಳಂ ತೊಲಗವೇೞ್ದು ಕೇಯೂರಕವ[1]ರ್ಷ್ಮನಂ[1] ಕೇಯೂರಕನಿಂತೆಂದಂ

ಸುರಚಿರ ಪಾಂಡುರಪ್ರಭೆ ಸುಧಾಕಿರಣೋದಯಮುಂ ಸುಗಂಧಬಂ
ಧುರ ಮಲಯಾನಿಲಾಗತಿ ಮಧೂದ್ಗಮಮುಂ ವಿಕಸಲ್ಲತಾಂತಮಂ
ಜರಿ ಫಲದೇೞ್ಗೆಯಂ ನೆರೆಯೆ ಪೇೞ್ವವೊಲೀ ಸಮವಸ್ಥೆ ತಾನೆ ದೇ
ವರ ಬರವಂ ನಿರಾಕುಳಮೆ ಪೇೞ್ದಪುದೆನ್ನ ಮನಕ್ಕೆ ನಿಕ್ಕುವಂ ೭೫

ವ॥ ಅದಲ್ಲದೆಯುಂ

ತೊದಳೇಂ ದೇವಿಯರನಗ
ಲ್ದು ದೇವರಿರಲರಿಯಿರೆಂತೆನಲ್ ಬಿಸಲತೆಯಿ
ಲ್ಲದೆ ಕಮಲಾಕರಮುಂ ಕೌ
ಮುದಿಯಿಲ್ಲದೆ ಕುಮುದಸಖನುಮಿರಲರಿದಪನೇ ೭೬

ವ॥ ಆದೊಡೆ ವೈಶಂಪಾಯನನೊಳ್ ನೆರೆದು ದೇವರ್ ಬಿಜಯಂಗೆಯ್ವನ್ನೆಬರ ಮನಿತುಕಾಲಾತಿಪಾತಮಂ ದೇವಿಯರ ಶರೀರಾವಸ್ಥೆ ಸೈರಿಸುವುದಲ್ತು; ತದೀಯ ಜೀವಸಂಧಾರಣಮುಮಂ ಭವದೀಯ ಗಮನವಿಶ್ವಾಸಮುಮಂ ಮಾಡಲ್ವೇೞ್ಕುಮುದ ಱಿಂದೆನ್ನ ಬಿನ್ನಪಮಂ ದೇವರವಧಾರಿಸುವುದದೆಂತೆನೆ

ಲಲನೆಯನೆಯ್ದಿದತ್ತು ಮನವಪ್ಪೊಡೆ ದೇವರು[2]ಮೆಯ್ದುವಿರ್ನಿರಾ
ಕುಲಮಿದು ಮನ್ನನಂ ಗಮನದೀನನಿ[2]ಜಪ್ರಣಯಪ್ರಸಾದ ದು
ರ್ಲಲಿತತಮಂ ತ್ವದಾಗಮನದುತ್ಸವಮಂ ನೃಪ ಮುಂದೆ ಪೋಗಿ ಪೇ
ೞಲೆ ಪಡೆದಾಸೆಗೆಯ್ದಪುದು [3]ಬೀೞ್ಕೊಳ್[3]ಪೊಂದು ಭವತ್ಪ್ರಸಾದಮಂ ೭೭

---

1 ಷರ್ಣಂ (ಕ) 2 ಮೆಯ್ದಿದರ್ನಿರಾಕುಳಮಿದು ಮಂತನಂ ಗಮನಾನ (ಕ)
3 ಬಿಜ್ಜಳಿ (ಕ)

ವ॥ ಎಂಬುದುಂ ಪರಿತೋಷವಿಕಚನೀಲೋತ್ಪಲದೀರ್ಘದೃಷ್ಟಿಗಳಿಂ ದರ್ಶಿತ ಪ್ರಸಾದನಾಗಿ [1]ಕೇಯೂರಕವರ್ಷ್ಮಂ[1] ಕೇಯೂರಕನನಿಂತೆಂದಂ,

ಇನಿಸಂ ಬಂದ ಬಟಲ್ಕೆಯುಂ ಬಗೆಯದಾಂ ಪೋದಪ್ಪೆನೆಂಬನ್ನನಾ
ವನೊ ಪೇೞಿಂತಿರೆ ದೇಶಕಾಲಗತಿಯುಂ ನಿನ್ನಂತಿರಲ್ ಬಲ್ಲನಾ
ವನೊ ನಿರ್ವ್ಯಾಜದೆ ಭಕ್ತಿಭಾವನೆಯನೆನ್ನೊಳ್ ನಿನ್ನವೊಲ್ ತೋರ್ಪನಾ
ವನೊ ನೀನೆಂದುದೆ ಕಜ್ಜವಿಂತಿದನೆ ಬೇಗಂ ಮಾಡು ಕೇಯೂರಕಾ ೭೮

ಈಗಲೆ ಪತ್ರಲೇಖೆವೆರಸಂಗನೆಯಲ್ಲಿಗೆ ಮುಂದೆ ಪೋಗು ನೀಂ
ಬೇಗಮಿವಳ್ ಪಸಾಯಿತೆ ಮನೋಹರಿಗೀಕೆಯದೊಂದು ಕಾಣ್ಕೆಯಿಂ
ದಾಗಿಯುಮಾ ತನೂದರಿಗೆ ಧೀರತೆಯುಂ ನಿಜಜೀವರಕ್ಷಣೋ
ದ್ಯೋಗಮುಮಸ್ಮದಾಗಮನನಿಶ್ಚಯಮುಂ ದೊರೆಕೊಳ್ಗುಮಾವಗಂ ೭೯

ವ॥ ಎಂದು ರಾಜಪುತ್ರಂ ಪೆಱಗಿರ್ದ ಪತ್ರಲೇಖೆಯಂ ನೋಡಿ

ಪಿರಿದುಂ ಕೂರ್ಪೆಯೊ ಕಾದಂ
ಬರಿಗೇಂ ಪೋದಪ್ಪೆ ಮುಂದೆ ಪೇೞಿನಲಾಜ್ಞಾ
ಕ್ಷರಮನೆ ಬೆಸಗೊಳ್ವೆಂ ದೇ
ವರೆನ್ನನಿಂತೇಕೆ ಮಗುೞೆ ಬೆಸಗೊಂಡಪಿರಿಂ ೮೦

ವ॥ ಎಂದು ಪತ್ರಲೇಖೆ ತನ್ನಗಮನಮಂ ನಿಶ್ಚೈಸುವುದುಮುರಸಂ ಮೇಘನಾದನಂ ಕರೆದು ಕೇಯೂರಕನೊಡನೆ ಪತ್ರಲೇಖೆಯನೊಡಗೊಂಡು ಮುಂದೆಪೋಗು, ವೈಶಂಪಾಯನನೊಳ್ ನೆರೆದಾನುಂ ಪಿಂತೆನಡೆದು ಬರ್ಪೆನೆಂದು ಪೇೞೆ, ದೇವರ್ ಬೆಸಸಿ ದಂತೆಗೆಯ್ವೆನೆಂದು ಪೊಡವಟ್ಟು ಬೇಗಂ ಪೋಗೆ ಸಮಕಟ್ಟಂ ಮಾಡಲೆಂದು ಮೇಘನಾದಂ ಪೊಱಮಡಲೊಡಂ ಕೇಯೂರಕನೆೞ್ದು ದೇವ ತಡವೆನಗೇವುದೆಂದು ಗಮನಪ್ರಣಾಮಮುಂ ಮಾಡೆ

ಪದಪಿಂದಂ ನೋಡಿ ಬಾಷ್ಪಾಕುಲನಯನದೆ ತಳ್ಕೈಸಿ ರೋಮಾಂಚದಿಂದಂ
ಪುದಿದಿರ್ದ್ದಾದ್ದಮ ಬಾಹುದ್ವಿತಯದಿನದು ಬೇಱೊಂದು ಸಂದೇಶಮೆಂಬಂ
ದದಿನಾಗಳ್ ತಾನೆ ಕೇಯೂರಕನ ಕಿವಿಯೊಳುಲ್ಲಾಸಿತಾನೇಕವರ್ಣಾ
ಸ್ಪದಮುಪ್ಪಾತ್ಮೀಯ ಕರ್ಣಾಭರಣಮನೊಲವಿಂದಿಕ್ಕಿದಂ ರಾಜಪುತ್ರಂ ೮೧

ವ॥ ಅನಂತರಂ ಕಂಠಗತ ಬಾಷ್ಪಗದ್ಗದಿಕಾವಗೃಹ್ಯಮಾಣಾಕ್ಷರನಾಗಿ ಕೇಯೂರ ಕನನಿಂತೆಂದಂ

1 ಕೇಯೂರಕವರ್ಷಂ (ಕ)

ಸಂದೇಶಂ ವೇವಿಯ ದೆಸೆ
ಯಿಂದಂ ನೀಂ ತಂದುದಿಲ್ಲದರ್ಕೀಗಳ್ ತ
ಕ್ಕಂದದೆ ದೇವಿಯಗಾರ್ಗಂ ಪ್ರತಿ
ಸಂದೇಶಮನೇನಱಿಪವೇೞ್ವಂ ನಿನ್ನಂ ೮೨

ವ॥ ಅವಜ್ಞಾನಪೂರ್ವಮೆನೆ ಬಿನ್ನವಿಸಲ್ವೇಡಿದಪ್ಪುದಿಲ್ಲ[1]ವಳೀಕ ಲಜ್ಜೆಯಿನೇಂ ನಿನಗೆ ಗಮನಾಯಾಸಮನೆ[1] ತೊಡರ್ಚಿದಪ್ಪೆಂ, ಪತ್ರಲೇಖೆಯೆ ಪೋಗಿ ಗಂಧರ್ವರಾಜನಂದನೆಗೆ ಬಿನ್ನವಿಸಿದಪ್ಪಳೆಂಬುದುಂ ತನಗಾದಗಲ್ಕೆಯ ನೋವಿಂದೊಗೆತರ್ಪ ಬಾಷ್ಪವೇಗಮನೆಂತಾನುಂ ತೋಱುತ್ತಂ ಉಪದರ್ಶಿತ ಲಕ್ಷ್ಯಶೂನ್ಯದೃಷ್ಟಿಸಂಚಾರೆಯುಂ ಚರಣಪಾತಾಭಿಮುಖಿಯುಮಾದ ಪತ್ರಲೇಖೆಯನಿಂತೆಂದಂ; ನೀಂ ಪೋಗಿ ಕಾದಂಬರೀದೇವಿಗೆ ಬದ್ಧಾಂಜಲಿಯಾಗಿ ಪ್ರಣಾಮಪುರಸ್ಸರಮಪ್ಪೆನ್ನ ಬಿನ್ನಪಮಂ ಪೇೞ್ವುದದೆಂತೆನೆ

ಮೊದಲೊಳೆ ಬಂದು ಕಾಣಲೊಡನಂತಿರೆ ತನ್ನ ನಿಸರ್ಗವತ್ಸಲ
ತ್ವದಿನೆನಗಾ ಪ್ರಸಾದಪದಮಂ ದಯೆಗೆಯ್ದ ಮಹಾನುಭಾವೆಗಾ
ಸುದತಿಗೆ ಪೇೞ್ದು ಬರ್ಪನಿತು ಗೌರವಮಂ ಮೊದಲಾಗಿ ಮಾಡಲಾ
ಱದೆ ಖಳರೋಳಿಯೊಳ್ ದೊರೆಗೆವಂದನನೆನ್ನನದೇನನೆಂದಪೆಂ ೮೩

ಮತಿಯಂ ಮೂಢತೆ ಧೈರ್ಯಮಂ ತರಳಭಾವಂ ಲಜ್ಜೆಯಂ ಧಾರ್ಷ್ಟ್ಯಮು
ನ್ನತಿಯಂ ಕ್ಷುದ್ರತೆ ಸತ್ಯಮಂ ಪುಸಿ ದೃಢಪ್ರೀತಿತ್ವಮಂ ಪ್ರೀತಿಶೂ
ನ್ಯತೆ ಮೆಲ್ಪಂ ಕಠಿನತ್ವಮಾದರಮನೌದಾಸೀನ್ಯಮೊಳ್ಪಂ ಕೃತ
ಘ್ನತೆಯೆಂಬಂತಿರೆ ತದ್ಗುಣೋತ್ಕರಮನೆರ್ವಟ್ಟಿತ್ತು ದೋಷೋತ್ಕರಂ ೮೪

ವ॥ ಅದಱಿಂ

ಏನಂ ಗುಣಲವಮಂ ಪಿಡಿ
ದಾನೆಳಸಿ ಪರಿಗ್ರಹಾರ್ಥದಿಂ ಬಿನ್ನವಿಪೆಂ
ಮಾನಿನಿಗಾ ಮಾನಿನಿಯುಮ
ದೇನೆಂದು ಗಡೆನ್ನನೀಗಳಂಗೀಕರಿಪಳ್ ೮೫

ಪುಸಿಯೊಲವಿಂದಮೆನ್ನನಿರದೊಪ್ಪಿಸಿ ತೋರ್ಪುದಱಿಂದಮಾಂ ಪ್ರತಾ
ರಿಸಿದವನಾಗದಿರ್ದಪನೆ ದೇವಿಯ ಚಿತ್ತಮನಲ್ಲದಂದುಪೇ
ಕ್ಷಿಸಿದವನಾಗದಿರ್ದಪೆನೆ ನಿಷ್ಕರುಣಾತ್ಮನೆನಿನ್ನದೆಂತು ಜೀ
ವಿಸಿದಪಳೆಂಬ ಸಂದೆಗಮನಾಗಿಪ ಕಾಮಿನಿಗಾದವಸ್ಥೆಯಂ ೮೬

1 ದಲ್ಲಿಯಾನಳಕಲಗ್ನೆಯಿಂ ಮಚ್ಚಿಪೇಳ್ದು ನಿನಗಚ್ಚಿಗಮನೆ (ಕ)

ವ॥ ಇಂತಖಿಲಗುಣವಿಹೀನನಾದೊಡೆಮೆನ್ನನಾ ನಿಖಿಲಗುಣಾಭಿರಾಮೆಯ ಗುಣಸ್ತೋಮಮೆ ಸೇವೆಗೊಡರ್ಚಿದಪ್ಪುದಿನಿತು ಗೆಂಟಾಗಿಯುಂ ಮದನದಹನಸಂತಪ್ತನಾದೆನ್ನನಾ ಸ್ವಭಾವಸರಸೆಯ ಸರಸತೆಯೆ ರಕ್ಷಿಸಿದಪುದಾ ಸ್ಥಿರಪ್ರಕೃತಿಯ ಸತ್ಯಪ್ರಕೃತಿಯೆ ತೆಗೆಯಿಸಿದಪುದಾ ದಕ್ಷಿಣಹೃದೆಯೆಯ ದಕ್ಷಿಣತ್ವಮೆ ಗಮಿಯಿಸಿದಪುದಾ ನಿಸರ್ಗವತ್ಸಲೆಯ ವಾತ್ಸಲ್ಯಮೆ ಕಯ್ಕೊಳಿಸಿದಪ್ಪುದಾ ಮೃದುಹೃದಯೆಯ ಮೃದುಹೃದಯಮೆ ಚರಣಪತಿತನಂ ಚಪ್ಪರಿ[1]ಸದಿರ್ಪುದಾ[1] ಮಹಾನುಭಾವೆಯ ಮಹಾನುಭಾವತೆಯೆ ಮಾಣದತಿಸಂಭಾವನೆಗೆಯ್ಸಿದಪ್ಪುದಾ ಮನೋಹರಾಲಾಪೆಯ ಪ್ರಿಯಾಲಾಪಮೆ ನುಡಿಯಿಸಿದಪ್ಪುದಾ ಮಹೋದಾರೆಯುದಾರತೆಯೆ ಮನಂಗೊಳಿಸಿದಪ್ಪುದೆಂ[2]ತಾದೊಡಂ[2] ಪೋಗಿ ನಾಣ್ಚದೆ ಮುಗುಱ ಮೊಗಮಂ ನೋಟ್ಪ ಸಾಹಸಮನಪ್ಪುಕೆಯ್ದಪ್ಪೆನೆಂಬುದರ್ಕತ್ಯುದಾರಂಗಳುಂ ಸತ್ಪ್ರ[3]ಕೃತಿಗಳುಮಪ್ಪ[3] ದೇವೀಪ್ರಸಾದಂಗಳೆ ಕಾರಣಮದಱಿನವು ತಡೆಯದೆ ತಾವೇ ಅಕಾಲೋಪಸರ್ಪಣ ಕೋಪಮಂ ನೋಡಿದೊಡನನುನ್ಯೈಸಲುಂ ಗುಣಾ[4]ನುವಾದದಿಂ[4] ಲಜ್ಜಿತನಂ ಬರೆತೆಗೆಯಲುಂ ಕಡುಗೆಂಟಾದನಂ ಬಱಯಟ್ಟದೆಯುಂ ಬಲ್ಪಿನಿಂ ದೇವಿಯ ಪಾದಮೂಲಮನೆಯ್ದಿಸಲುಂ ಸಾಲ್ವುವೆಂದು ನಿಶ್ಚೈಸಿ ನಿರಪೇಕ್ಷಿತಗಮನಾಜ್ಞನಾಗಿ ತಂದೆಯ ನಿಯಾಮದಿಂ ಪೋದನದಲ್ಲದೆಯುಂ

ಅದೆಂತು ದೊರಕೊಳ್ಗುಮೆನ್ನ [5]ಬರವಿಂಗೆ ಸಾಫಲ್ಯಮಿ
ನ್ನದೆಂತುಚಿತಮಕ್ಕುಮಾತ್ಮಗುಣಬೃಂದವಿ[5]ಂತೀ ಜಗ
ಕ್ಕದೆಂತು ನಯನೋತ್ಸವಂ ಸತತಮಕ್ಕುಮಂತಾಗೆ ಯ
ತ್ನದಿಂ ನಿಜಶರೀರಮಂ ನಿಲಿಸವೇೞ್ಪುದಿಂ ದೇವಿಯರ್ ೮೭

ವ॥ ಎಂದು ಬಿನ್ನವಿಸೆಂದು ಬೆಸಸಿ ರಾಜಪುತ್ರಂ ಪತ್ರಲೇಖೆಯನಿಂತೆಂದಂ

ತಡಮೆನಗಿಲ್ಲ ಮದ್ವಿರಹವೇದನೆಯುಂ ನೆನೆಯಲ್ಕಳುಂಬಮೀ
ಯೆಡೆಯೊಳನಾದರಂಗೆಯದಿರನ್ಯರಪೇಕ್ಷ್ಕಿಯದೆಂಬ ಬಟ್ಟೆಯೊಳ್
ನಡೆಯದಿರೇತಱಿಂದಱಿಯದಲ್ಲಿರದಿರ್ ಮಱಿದಾರ್ಗಮಂತರಂ
ಗುಡದಿರನಾರತಂ ಮಱೆಯದಾಗಿಸು ನೀಂ ತನುಗಪ್ಪ ಯತ್ನಮಂ ೮೮

ಇದನಿನ್ನೆಂತೆಂದಪೆಂ ವಲ್ಲಭತರವೆನಗಾದತ್ತು ನಿನ್ನಿಂದವಂತಾ
ಸುದತೀಪ್ರಾಣಂ[1] ದಲಿನ್ನೀನದನೆ ನಿಲಿಸಲೆಂದೊರ್ಬಳಂ ನಿನ್ನನಿಂತ
ಟ್ಟದಪೆಂ ಮಜ್ಜೀವಿತಂ ನಿನ್ನಯ ಕರತಲದೊಳ್ ನಿಂದುದೆಂತಾದೊಡಂ ಯ
ತ್ನದಿನೆನ್ನಂ ರಕ್ಷಿಸೆಂದಪ್ಪಿಱಿಕೊಳಿ ತೆಗೆದು ತಳ್ಕೈಸಿದಂ ರಾಜಪುತ್ರಂ ೮೯

---

1 ಸುತಿದುರ್ಣವಾ (ಕ) 2 ಲೆಂದದೆ (ಕ) 3 ಕೃತಿಗುಣಂಗಳಪ್ಪ (ಕ)
4 ಪಠಾಥ (ಕ) 5 ವರದಿಂದೆಸಾಫಲಮಿಲ್ಲದೆಂತುಚಿತಮಕ್ಕು ಗುಣದ್ವೀದನಿಂ (ಕ)

ವ || ಅನಂತರಮೀ ಬಿನ್ನಪಮಂ ಪತ್ರಲೇಖೆ ಮಱಿಯದಂತು ಮಾೞ್ಪುದೆನ್ನ ನೊಡಗೊಂಡು ಪೋಗಲ್ಕೀಕೆವೆರಸು ಮಹಾಶ್ವೇತಾಶ್ರಮಕ್ಕೆ ನೀನೆ ಮಗುೞ್ಚಿ ಬರ್ಪು ದೆಂದು ಕೇಯೂರಕಂಗೆ ಬೆಸಸಿ ಬೀೞ್ಕೊಳಿಸಲೊಡಮವನನೇಕಾಶ್ವೀಯಬಲಸಮನ್ವಿತ ನಪ್ಪ ಮೇಘನಾದಂಬೆರಸುಪೋದನಿತ್ತ ನೃಪರೊಪಚಂದ್ರನವರಗಲ್ಕೆಯಿಂ ಸಚಿಂತನಾಗಿ ಕಿಱಿದುಬೇಗಮಿರ್ದು ಕಟಕವಾರ್ತೆಗೆ ವಾರ್ತಾಹರರನಟ್ಟಿ ತಾನುಂ ವೈಶಂಪಾಯನಂಗಿದಿ ರ್ವೋಪುದರ್ಕೆ ಬೀೞ್ಕೊಳಲೆಂದು ತಂದೆಯಲ್ಲಿಗೆವಂದು ಕೃತಪ್ರಣಾಮನಾಗಿ ಓಲೈಸುತ್ತ ಮಿರೆ ತಾರಾಪೀಡಂ ಸರ್ವಾಂಗಸುಂದರನಪ್ಪ ಕುಮಾರನಂಗಪ್ರತ್ಯಂಗಂಗಳನತಿಪ್ರೀತಿಯಿಂ ಕರತಲದಿದೆೞವುತ್ತಮಿರ್ದು

ಘನಶೌರ್ಯಾನಲಧೂಮವಲ್ಲಿ ವದನಾಂಭೋಜಾಳಿನೀಮಾಲೆ ಯೌ
ವನಗಂಧದ್ವಿಪದಾನಲೇಖೆ ವಪುರಾಲೇಖ್ಯ[2]ಪ್ರಭೋನ್ಮೀಲನಾಂ[2]
ಜನರುಗ್ಲೇಖೆ ವಿವಾಹಮಂಗಳಕಿದೇ ಭ್ರೂಸಂಜ್ಞೆಯೆಂಬಂತೆ ಚೆ
ಲ್ವನದೇಂ ಶ್ಮಶ್ರುವಿಕಾಸರೇಖೆ ತಳೆದತ್ತೀಗಳ್ ಕುಮಾರಾಸ್ಯದೊಳ್ ೯೦

ವ || ಎಂದು ತನ್ನೊಳೆ ಭಾವಿಸುತ್ತಿರ್ದ ತಾರಾಪೀಡನ ಮನೋಗತಾಭಿ ಪ್ರಾಯಮನಱಿದು ಶುಕನಾಸನಿಂತೆಂದಂ

ವಿವಿಧಾಶೇಷಕಲಾಧಿಪತ್ಯಪದಮಂ ಕಯ್ಕೊಂಡನೇಕಾತಪ
ತ್ರವೆನಲ್ ಭಾವಿಸಿದಂ ಜಗತ್ಪ್ರಭುತೆಯಂ ಪಾರ್ವಂತುಟೆನ್ನೇನೊ ದೇ
ವ ವಧೂಸಂಗತನಾಗೆಮಾಡಿ ಬೞಿಯಿಂ ನಿನ್ನೀ ಕುಮಾರಾನನೇಂ
ದುವನಾನಂದದೆ ನೋಡಿ ಮಾಡುವುದು ನೀಂ ನೋಟಕ್ಕೆ ಸಾಫಲ್ಯಮಂ ೯೧

ವ || ಎಂಬುದುಂ ತಾರಾಪೀಡನಿದೇ ಚಿತ್ತದೊಳಿರ್ದುದಾದೊಡಂ ವೈಶಂಪಾಯ ನನುಂ ಬಂದೊಡಲ್ಲದೊಂದುವಂ ಮಾಡಲಱಿಯದಿರ್ದೆನೆನಲೊಡಂ ಲಜ್ಜಾವನತವದನ ನಾಗಿ ಯುವರಾಜನುಮದನೆ ಮನದೆಗೊಂಡೆನ್ನ ಮನೋರಥಂ ನೀಡಿರದೆ ಕೂಡಿದಪ್ಪು ದೆಮ್ಮಯ್ಯಂ ವೈಶಂಪಾಯನನ ಬರವನೆ ಪಾರ್ದಿರ್ದಪನದುವೆ ಕಾದಂಬರೀದರ್ಶನಕ್ಕಂತರ ಮಾಗಿರ್ಪುದೆಂದು ತನ್ನೊಳೆ ಬಗೆದು ಚಿಂತಿಸುತ್ತಂ ಸಂತಸದಂತನೆಯ್ದೆ ಕಿಱಿದುಬೇಗಕ್ಕೆ ತದಾಸ್ಥಾನದಿಂದುತ್ಥಿತನಾಗಿ

ವಿನಯಭರಾವನಮ್ರತನುವಪ್ಪ ತನೂಭವನಂಸದೇಶದೊಳ್
ವನಧಿವ್ರತಾವನೀಭರಧುರಂಧರದಕ್ಷಿಣಬಾಹುದಂಡಮಂ
ಮನವೊಸೆದಿಕ್ಕಿ ಮಂತ್ರಿಶುಕನಾಸಸಮೇತನಿಳಾಧಿನಾಥನೊ
ಯ್ಯನೆ ನಡೆತಂದನಾ ವಿಭು ವಿಲಾಸವತೀಭವನಕ್ಕೆ ಲೀಲೆಯಿಂ ೯೨

---

1 ದಂಡದಿನ್ನದನೆ (ಕ) 2 ಪ್ರದೋನ್ಮಿಳನಾಂ (ಕ)

ವ॥ ಆಗಳಿಂದೂದಯಾವಲೋಕನದಿಂ ವಿಲೋಲವಾದ ಸಮುದ್ರವೇಲೆಯಂತೆ ಸಂಭ್ರಮದಿನಿದಿರೆಟ್ಟ ವಿಲಾಸವತೀಮಹಾದೇವಿಯ ಮೊಗಮಂ ರಾಜಾಧಿರಾಜಂ ನೋಡಿ

ಪಡೆಯುತ್ತಿರ್ದೆ ವಧೂವಿಲೋಕನಸುಖಕ್ಕೆಂದುಂ ವಿವಾಹೋತ್ಸವ
ಕ್ಕಿದೆ ನೋಡಾಗ್ರಹಮಂ ಕುಮಾರವದನಶ್ಮಶ್ರೂದ್ಗಮಂ ಮಾಡಿದ
ಪ್ಪುದು ನಿನ್ನುಜ್ಜುಗಮೇನೋ ಪೇೞಿನೆ ಕರಂ ನಾಣ್ಚಿರ್ಪುದುಂ ದೇವಿ ಪೇ
ೞದಿರಲ್ ಕಾರಣವೇಂ ಮಗಂಗೆ ಪಿರಿದುಂ ನೀಂ ಕೂರ್ಪುದಿಲ್ಲಾಗದೇ ೯೩

ವ॥ ಎಂದಿವು ಮೊದಲಾಗಿ ಪಲವುಂ ನರ್ಮಾಲಾಪಂಗಳಿಂದವೆ ಸುಖಾಯಮಾನಸ್ವಾಂತನಾಗಿ ರಾಜಾಧಿರಾಜಂ ಕಿಱಿದುಬೇಗಮಿರ್ದು ಪೋಪುದುಂ ಚಂದ್ರಾಪೀಡನುಂ ವೈಶಂಪಾಯನ ಪ್ರತ್ಯುದ್ಗಮನಾರ್ಥಂ ಶುಕನಾಸಮುಖದಿಂ ತಂದೆಯಂ ಬೀೞ್ಕೊಂಡು ನಿಜರಾಜಭವನಕ್ಕೆ ಬಂದು ಗಮನಸಂವಿಧಾನವಿನೋದದಿಂದಮಾ ಪಗಲಂ ಕಳೆದು ಸುಹೃದ್ದರ್ಶನೋತ್ಸುಕಚಿತ್ತನಾಗಿ ಶಯನತಲಕ್ಕೆವಂದೆಚ್ಚತ್ತಂದದೊಳೆ ಯಾಮಿನೀಯಾಮದ್ವಯಮಂ ಕಳಿಪಿ.

ಮನಮೊಲ್ದು ಯಾಮಿನೀ ಕಾ
ಮಿನಿಯಂ ತನ್ನಯ ಕರಂಗಳಿಂ ಚಂದ್ರಂ ಚಂ
ದನರಸಮಂ ಪೂಸಿದನೆಂ
ಬಿನಮೆಸೆದುದು ಸಾಂದ್ರಚಂದ್ರಿಕಾವಿಸ್ತಾರಂ ೯೪

ಮೇಗೆನಿಸಿರ್ದದೊಂದು ಸಕಲಗ್ರಹತೇಜಮನೊಯ್ಯನಿಂಗಿಸು
ತ್ತಾಗಸಮಂ ನೆಲಕ್ಕಿೞಿಪುತಿರ್ದಪನೀ ನೆಲನಂ ಹಿಮಾಂಶು ಮೇ
ಣಾಗಸಕೆತ್ತುತಿರ್ದಪನೆನಲ್ಕನಿತುಂ ಬಿಳಿ[1]ದಾಗೆ[1] ರೋದಸೀ
ಭಾಗಮನಾವಗಂ ತಗುಳೆ ಪೆರ್ಚಿಸಿದಂ ನಿಜರಶ್ಮಿಜಾಲಮಂ ೯೫

ವನಜದಳಂಗಳೊಳೊಂದೊಂ
ದನೆ ಮುಗಿಯಿಸಿ ಕುಮುದವನದಳಂಗಳೊಳೊಂದೊಂ
ದನೆ ಪಿಡಿದಲರ್ಚುತಿರ್ದಪು
ವೆನೆ ಪೂಗೊಳದೊಳಗೆ ಪೊಳೆದುವಿಂದು ಕರಂಗಳ್ ೯೬

1 ಯಾಗಿ (ಕ)

ಗಿರಿಶಿಖರಂಗಳೊಳ್ ಪರೆದು ಸೌಧಗೃಹಂಗಳೊಳೊಂದಿ ರಥ್ಯೆಯೊಳ್
ಪರಿದು ಸರಸ್ತರಂಗಿಕೆಗಳೊಳ್ ಪೊರೆದಂಚೆಗಳೋಳಿವೆಳ್ಪಿನೊಳ್
ಬೆರಸಿ ಲತಾಂಗಿಯರ್ಕಳ ಕದಂಪುಗಳೊಳ್ ಪುದಿದಿಂದುಕಾಂತದಿಂ
ಸುರಿವ ಜಲಂಗಳಿಂ ತೊಳೆದು ಪರ್ವಿದುವಿಂದುಮರೀಚಿಮಾಲೆಗಳ್ ೯೭

ಸುರತಾಂತಶ್ರಾಂತಿಯಿಂ ನೀರಡಿಸಿದಬಲೆಯರ್ಗೀಂಟಲೌತ್ಸುಕ್ಯದಿಂ ನ
ಲ್ಲರೊಳೊಂದಲ್ ಪೋಪ ನಾರೀಜನಕೆ ಪಱೆಗಲೆಂದೇಱಲುದ್ಯಾನಮಾಲಾಂ
ತರದೊಳ್ ಬಚ್ಚಲ್ಗಳಂ ತಿರ್ದಿಸಲವಿರಳಘರ್ಮಾದ್ರ್ರಕಾಂತಾಜನಕ್ಕಾ
ದರದಿಂ ನೀರಾಟಮಾಡಲ್ ನೆಱೆಗುವೆನೆ ಪೊದಟ್ದಿತ್ತು ಚಂದ್ರಾಂಶುಜಾಲಂ ೯೮

ವ॥ ಅಂತುಜ್ವಲಮಾದ ಚಂದ್ರಿಕಾವಿಲಾಸದಿಂ ಮನುಜೇಂದ್ರಚಂದ್ರಂ ದ್ವಿಗುಣೀಕೃತ ಗಮನೋತ್ಸಾಹನಾಗಿ ಗಮನಸಂಜ್ಞಾಶಂಖಮಂ ಪೂರಿಸಲ್ವೇೞ್ದಾಗಳ್

ನಗರಪ್ರಾಕಾರಕೂಟೋತ್ಕರದೊಳೆಱಗಿತೆಂಬಂತೆ ಹರ್ಮ್ಯಾವಳೀ ಕು
ಕ್ಷಿಗಳೊಳ್ ಕಯ್ಗಯ್ದುದೆಂಬಂತುಪವನತಳದೊಳ್ ತಳ್ತುದೆಂಬಂತೆ ದಿಗ್ಭಾ
ಜಿಗಳೊಳ್ ಥಿಂಕಿಟ್ಟುದೆಂಬಂತನಿಲಪಥದೊಳಾವರ್ತಿಸುತ್ತಿರ್ದುದೆಂಬಂ
ತೊಗೆದತ್ತುತ್ತಾರ[1]ರಾಗಂ ತ್ರಿಭುವನಭವನೋದ್ಭೇದಿ ಶಂಖಪ್ರಣಾದಂ ೯೯

ವ॥ ತದನಂತರಂ

ಘನಮಾರ್ಗಂ ಕುಂತಶಾಖಾಕಬಳಿತಮಖಿಲೋರ್ವೀವಿಭಾಗಂ ಖುರಾನೀ
ಕನಿರುದ್ಧಂ ಶ್ರೋತ್ರಪಾತ್ರೋದರಮವಿರಳಹೇಷಾರವಾಪೂರಿತಂ ರಾ
ಜನಿವಾಸದ್ವಾರದೇಶಂ ವಿಗಳದಮಲಫೇನಪ್ರತಾನಾಂಚಿತಂ ತಾ
ನೆನೆ ರತ್ನಾಭೋಗರೋಚಿರ್ಜಟಿಲಿತತನು ಬಂದತ್ತನಂತಾಶ್ವಜಾಲಂ ೧೦೦

ವ॥ ಅನಂತರಂ ಪಲ್ಲಣಿಸಿದಿಂದ್ರಾಯುಧಮಂ ಗೃಹೀತಸಮಾಯೋಗನಾಗಿ ನೃಪರೂಪಚಂದ್ರನೇಱಲೊಡನೆ

ತಿಲಕಿತಭುವನಂಗೆನ್ನಯ
[2]ಬೆಳಗಂ[2] ಸಲೆ ಮಾಱಪ್ಪಿನೆಂದು ಚಂದ್ರಮನೊಡನೀ
ತಳರ್ದಪನೆಂಬಿನೆಗಂ ಮುಂ
ಗಳಧವಳಚ್ಛತ್ರಮೆಸೆದು ತೋಱತ್ತಾಗಳ್ ೧೦೧

1. ನ (ಕ) 2. ಬಲಮಂ (ಕ)

ವ॥ ಅಂತಾ ಸಮಯದೊಳಖಿಲ ರಾಜಲೋಕದಿಂ ಪ್ರಣಮ್ಯಮಾನನಾಗಿ ಪರಸ್ಪರಾರ್ದಿತಜಾನುಭಾಗರಪ್ಪನೇಕಾಶ್ವಿಕಬಲಸಮನ್ವಿತನಾಗಿ ನಗರಿಯಂ ಪೊಱಮಟ್ಟ ನತಿದೂರದೊಳ್ ತ್ರಸ್ತಹಂಸಸಾರ್ಥೋತ್ಪಲವ್ಯತಿಕರೆಯಪ್ಪ ಶಿಪ್ರಾನದಿಯಂ ದಾಂಟಿ ಬೆಳ್ದಿಂಗಳಂ ಬಿತ್ತರಿಸಿದಂತಿರ್ದ ದಶಪುರದ ಬಟ್ಟೆವಿಡಿದು ನಡೆಯುತ್ತಪರರಾತ್ರಿ ವೇಳೆಯನಿತರ್ಕೆ ಯೋಜನತ್ರಿತಯಮಂ ಪೋಗೆ

ಎನಸುಂ ನಿರ್ಭರಚಂದ್ರಿಕಾಜಲದೊಳೊಲ್ದೋಲಾಡಿ ಮೆಯ್ವೆಟ್ಟು ಮಂ
ಜಿನ ತುಂತುರ್ವನಿಯೊಳ್ ಪೊದಟ್ದಿಲರ್ದ ಚೆನ್ನೆಯ್ದಿಲ್ಗಳೊಳ್ಗಂಪಿನಿಂ
ಪನಲಂಪಿಂ ತೆಗೆದೊಟ್ಟಿಕೊಂಡವನಿಪಂಗಧ್ವಶ್ರಮಂ ಪಿಂಗುವಂ
ತು ನಿಶಾನಿರ್ಗಮಸೂಚಕಂ ತಳರ್ದು ತೀಡಿತ್ತೊಂದು ಮಂದಾನಿಲಂ ೧೦೨

ವ॥ ಅನಂತರಂ ಮೆಲ್ಲಮೆಲ್ಲನೆ ಯಾಮಿನಿಯಗಲ್ಕೆಗೆ ಚಿಂತಿಸಿದಂತೆ ಚಂದ್ರಬಿಂಬಂ ಬೆಳರ್ಪನಪ್ಪುಕೆಯ್ಯೆ ಕುಮುದವತೀವಿರಹಸಂತಾಪದಿಂದಿೞಯವಿಟ್ಟ ಕುಮುದಿನೀಪ್ರಿಯನ ಧವಳೋತ್ತರೀಯಮೆಂಬಂತೆ ಬೆಳ್ದಿಂಗಳ ಬೆಳಗಿನ ಬಳಗಮೋಸರಿಸೆ ಪಡುವಣ ಕಡಲ್ವುಗೆ ಪರಿವ ಬೆಳ್ದಿಂಗಳ ಬೆಳ್ವೊನಲೊಳುರ್ವಿದ ಬೊಬ್ಬುಳಿಕೆಗಳಂತೆ ತಾರಕೆಗಳ್ ತಲೆಗರೆಯೆ ಪೊಯ್ನೀರಿಂ ಪೊಱಮಡುವಂತೆ ಲತಾವಿಟಪಂಗಳ್ ನಿಜಮಾದ ಪಸುರ್ವೆಳ್ಪ ನೊಳಕೆಯ್ಯೆ ದಿವಾಕರನುದಯದೊಸಗೆಗಿಂದ್ರಂ ದಿಗ್ಭಿತ್ತಿಯಂ ಕುಂಕುಮದ ಪಂಕದಿಂ [1]ಕಾರಳೆಗೊಳಿಸಿದನೆಂಬಂತೆ[1] ಸಂಜೆಗೆಂಪು ರಂಜಿಸೆ ಕಿಱಿದಾನುಂ ಬೇಗದೊಳ್

ಒದವಿರೆ ರಾಗದೇಳ್ಗೆ ನಿಜಮಂಡಲದೊಳ್ ಕರದಿಂದೆ ಮುಂದೆ ಪ
ರ್ವಿದ ರಜನೀತಿರಸ್ಕರಿಣಿಯಂ ಪೆಱಪಿಂಗಿಸಿ ಪದ್ಮಿನೀವಧೂ
ವದನಸರೋಜಮಂ ಪದಪಿನಿಂದಮೆ ನೋಡುವೆನೆಂಬ ಮೂಟಿಕ್ಕೆಯಿಂ
ದುದಯಗಿರೀಂದ್ರವೇದಿಕೆಯನೇಱದನೊಯ್ಯನೆ ಪದ್ಮಿನೀಪ್ರಿಯಂ ೧೦೩

ವ॥ ಆಗಳಖಿಲಜಗದ್ದೀಪಿಕೆಯಂತೆ ದಿವಸಕರದೀಧಿತಿಗಳಗ್ಗಳಿಸೆ ನಿರಂತರದೃಷ್ಟಿಪ್ರಸರನಾಗಿ ಭೋಂಕನೆ ಮುಂದರ್ಧಗವ್ಯೂತಿಮಾತ್ರದಲ್ಲಿ

ಇರದಂತಃಕ್ಷೋಭವೇಗಕ್ಕಗಿದುಗುಟ್ದಿದೊ ಪಾತಾಳಮಾಕ್ರಾಂತಸೈನ್ಯೋ
ತ್ಕರಭಾರೋದ್ಭೂತಿಯಿಂ ನೂಂಕಿದುದೊ ವಸುಮತೀಭಾಗಮೊತ್ತೊತ್ತಿನಿಂ ನಿ
ತ್ತರಿಸಲ್ ತಾನಾಱದೇನೊಂದೆಡೆಗೆ ತೆಗೆದುದೋ ವಿಶ್ವದಿಕ್ಚಕ್ರಮೆಂಬಂ
ತಿರುಳೆಲ್ಲಂ ಬಂದು ಬೀಡಂಬಿಡುವ ಕಟಕಮಂ ಕಂಡನಾಗಳ್ ನರೇಂದ್ರಂ ೧೦೪

---

1 ಕಾಳ್ವೆಳಗೊಂಡಂತೆ (ಕ)

ವ॥ ಅಂತು ಕಂಡು

ಎನಗಿದು ಲೇಸಾದುದದೆಂ
ತೆನಲಿದಿರ್ವರುತಿರ್ದ ಬೀಡಿನೊಳ್ ಮೆಯ್ಗರೆದೊ
ರ್ವನೆ ಪೋಗಿ ಕಾಣ್ಕೆಯಿಂ ಭೋಂ
ಕನೆ ಮೂೞಪ್ಪಂ ಪ್ರಿಯಸಖಂಗೆ ಸಂತಸದೊದವಂ ೧೦೫

ವ॥ ಎಂದು ಮನದೊಳೆ ಬಗೆದರಸಂ ಛತ್ರಚಾಮರಾದಿಚಿಹ್ನಂಗಳುಮನಖಿಲರಾಜಪುತ್ರಲೋಕಮುಮನಗಲ್ದು ತನ್ನೇಱಿದ ವಾರುವದೊಡವರ್ಪ ನಾಲ್ಕಯ್ದು ಕುದುರೆಗಳ್ವೆರಸು ತನ್ನನಱಿಯಲಾಗದಂತುತ್ತರೀಯದಿಂ ಮೊಗಮಂ ಸುತ್ತಿ ಕಟಕದೊಳವಿದಿತವೃತ್ತಾಂತನಾಗಿ ವೈಶಂಪಾಯನನ ಬೀಡಾವುದೆಂದಲ್ಲಿಗಲ್ಲಿಗೆ ಬೆಸಗೊಳ್ವುದುಂ

ಮನೆಮನೆದಪ್ಪುದಿದೇಂ ಮರು
ಳಿನವೊಲ್ ಬೆಸಗೊಳ್ವಯಣ್ಣ ನೀಂ ವೈಶಂಪಾ
ಯನನೆಲ್ಲಿರ್ಪನಸಂಬ
ದ್ಧನೆ ಪೋಗೆಂದೆನಸುವಲ್ಲಿಗಲ್ಲಿಗೆ ಜಡಿದರ್ ೧೦೬

ವ॥ ಅಂತು ಜಡಿಯಲಿದೇನೆಂದು ಸುಹೃತ್ಸ್ನೇಹಕಾತರಹೃದಯನಪ್ಪುದಱಿಂ ಮತ್ತಮಲ್ಲಲ್ಲಿಗೆ ಬೆಸಗೊಳ್ವುದುಮವರುಮಂತೆ ಜಡಿಯೆ ವಿಹತಯೂಥಪತಿಯಪ್ಪ ಕರಿಕಲಭದಂತತಿತ್ರಸ್ತನಾಗಿ ಮುಂದುಗಾಣದೆ ವಿಹ್ವಲನಾಗಿ ತೊೞಲುತ್ತುಂ ಕಟಕದ ನಡುವನೆಯ್ದಿ ಬರ್ಪನ್ನೆಗಮಿಂದ್ರಾಯುಧಪ್ರತ್ಯಭಿಜ್ಞೆಯೊಳ್[1]ಮನುಪ್ರಧಾವಿತ[1] ರಾಜಪುತ್ರಲೋಕದೊಳಂ ಚಂದ್ರಾಪೀಡದೇವನೆಂದಱಿದು ದೆಸೆದೆಸೆಯೊಳಂ ತಳವೆಳಗಾಗಿ ಪರಿತಂದು ನಾಣ್ಚಿ ಮೊಗಂಬುಗದೋರೊರ್ವರ ಪೆಱಗಡಂಗಿ [2]ಗೆಂಟೆನೊಳ್[2] ಮೆಲ್ಲಮೆಲ್ಲನೆಱಗುವ ರಾಜಪುತ್ರಸಹಸ್ರಂಗಳ ಮೊಗಮಂ ನೋಡಿ ಚಂದ್ರಾಪೀಡಂ ವೈಶಂಪಾಯನನೆಲ್ಲಿರ್ದಪನೆಂದು ಬೆಸಗೊಳ್ವುದುಂ

ಮರದಡಿಯಲ್ಲಿ ದೇವರಿೞಿಯಿಂ ಶುಕನಾಸತನೂಜವಾರ್ತೆಯಂ
ನಿರವಿಸಿದಪ್ಪೆವೆಂಬುದುಮಿದೇನೆನುತಂತೆ ಸುಹೃದ್ವಿಯೋಗ ಕಾ
ತರಹೃದಯಂ ನರೇಂದ್ರಸುತನಚ್ಚರಿಯಾಗಿರೆ ಮೂರ್ಛೆವೋಗಿ ಬೀ
ೞ್ತಿರಲಿರದೆತ್ತಿಕೊಂಡಿೞಿಪದರ್ ಧರಣೀಪತಿಯಂ ತುರಂಗದಿಂ ೧೦೭

1 ತಿ ಪ್ರಜ್ಞಾಂ (ಕ) 2 ಗೆಂಟೆಯೊಳೆ (ಕ)

ದೇವ [1]ತನು[1]ವೆರಸಿರೆಂತಂ
ತಾ ವೈಶಂಪಾಯನಂ ಸುಖಂ ನಿಶ್ಚಯದಿಂ
ಜೀವಿಸುತಿರ್ದಪನೆನಲಂ
ತಾ ವಚನಾಮೃತದೆ ಮೂರ್ಛೆಯಿಂದೆಚ್ಚೆತ್ತಂ ೧೦೮

ಎನಗಿದು ವಿಸ್ಮಯಂ ಕ್ಷಣಮುಗಲ್ದು ಬರ್ದುಂಕದನೆನ್ನನಿಂತಗ
ಲ್ದಿನಿತುದಿನಂ ಬರ್ದುಂಕಿದಪನಾದೊಡಮುಕ್ಕೆನುದೇಕೆ ಬಾರವಾ
ಜನೆ ಸಖನೆಲ್ಲಿ ನಿಂದನಿರದೊರ್ವನನಿಂತಿರೆ ಬಿಟ್ಟು ಬಂದಿರೇ
ಕೆನೆ ನೃಪನಂದನಂಗೆ ಮೊದಲಿಂ ನೆಱೆ ಬಿನ್ನವಿಕುಂ ಬಲಾಹಕಂ ೧೦೯

ವ|| ದೇವರ್ ಬಿಜಯಂಗೆಯ್ಯಲೊಡನೆ ಮಱುದಿವಸಂ ವೈಶಂಪಾಯನಂ ಪ್ರಯಾಣಭೇರಿಯಂ ಪೊಯ್ಸಿ ಕಟಕಮೆಲ್ಲಮಂ ಮುಂದೆ ನಡೆಯಲ್ವೇೞ್ದು ಪುರಾಣಂಗಳೊಳ್ ಪುಣ್ಯತೀರ್ಥಮೆಂದು [2]ಕೇಳ್ದಿರ್ಪುದಱ[2]ನಾನೀಯಚ್ಛೋದಮಂ ಮಿಂದು ಸಿದ್ಧಾಯತನದ ಭಗವದ್ಭವಾನೀವಲ್ಲಭಂಗೆ ಪೊಡವಟ್ಟು ಪೆಱಗೆಪೋಪೆನೆಂದು ಪಾದಮಾರ್ಗದೊಳೆ ನಡೆಯುತವಚ್ಛೋದಕ್ಕೆವಂದು ಆ ಪ್ರದೇಶದ ರಮಣೀಯತೆಗೆ ಸೋಲ್ತೆಲ್ಲಾ ದೆಸೆಯುಮಂ ನೋಡುತ್ತುಂ ಪೋಗೆ

ಸುರಕಾಂತಾಕರ್ಣಪೂರೋಚಿತ ಕಿಸಲಯದಿಂದೊಂದಿ ಸಂದಿರ್ದ ಪುಷ್ಪೋ
ತ್ಕರದೊಳ್ ತಳ್ಪೊಯ್ವ ಭೃಂಗೀನಿವಹನಿನದದೊಳ್ ಕೂಡಿ ಬರ್ಹಂಗಳಿಂದಂ
ಪೊರೆದಾಶಾಭಿತ್ತಿಯಂ ತನ್ನಯ ಪಸುರ್ವೆಳಗಿಂ ಪೂಸುತಿರ್ಪಂತೆ ಚೆಲ್ವಾ
ಗಿರೆ ಮುಂದೊಂದಂ ಲತಾಮಂಟಪನನವನಿವೃಂದಾರಕಂ ಕಂಡನಾಗಳ್ ೧೧೦

ವ|| ಅಂತದನಚ್ಚರಿವಟ್ಟು ನೋಡುತ್ತಿರ್ಪುದುಂ

ಕುಳಿರ್ವಚ್ಛೋದದ ತೆರೆಯೆಲ
ರೊಳೆ ಪುಳಕಂ ಪೊಣ್ಮಿದಂತೆ ತಣ್ಣದಿರ್ಗಳ್ ಕ
ಣ್ಗೊಳಿಸಿರೆ ಶಶಿಕಾಂತ ಶಿಲಾ
ತಳವೊಂದುಜ್ವಳಿಸಿತಾ ಲತಾಮಂಟಪದೊಳ್ ೧೧೧

ಕಂಡಱವಂತೆ ಮುನ್ನ ಶುಕನಾಸತನೂಭವನಾಗಳಾ ಲತಾ
ಮಂಡಪಮಂ ಕರಂ ಮನದೆ [3]ಮುತ್ತವೊಱಲ್ದು[3] ನೋಡುತಂ
ಕಂಡರಿಸಿಟ್ಟರೊ ಕಡೆದರೋ ಕರುವಿಟ್ಟರೋ ನಿದ್ದೆಬಂದು ಕ
ಯ್ಕೊಂಡುದೊ ಪೇೞಿಮೆಂಬಿನೆಗಮಲ್ಲಿಯೆ ನಿಂದನದೊಂದು ಜಾವಮಂ ೧೧೨

1 ತಸಿ (ಕ) 2 ಳಲಪ್ಪುದಱಂ (ಕ) 3 ಮುತ್ತ ಮರಲ್ದು (ಕ)

ವ॥ ಅಂತು ನಿಂದು

ತನುವಂ ತಾಳ್ದಿರಲಾಱದೊರ್ಮೊದಲೆ ಮೂರ್ಛಾವೇಗದಿಂದಿಕ್ಕುವ
ಟ್ಟನವೊಲ್ ಝೊಂಪಿಸಿ ಜೋಲ್ದುನೇಲ್ದು ನೆಲದೊಳ್ ಕುಳ್ಳಿರ್ದನೇನಾನುಮೊಂ
ದನೆ ತನ್ನೊಳ್ ಪರಿಭಾವಿಸುತ್ತಮೆನಿತಾನುಂ ಪೊಟ್ತು ನಿಷ್ಪಂದಗಾ
ತ್ರನುಮುದ್ಬಾಷ್ಪನಿಮಗ್ನನೇತ್ರನುಮೆನಲ್ ತನ್ಮಂತ್ರಿಮುಖ್ಯಾತ್ಮಜಂ ೧೧೩

ವ॥ ಅಂತಿರ್ದನಂ ನೋಡಿ ರಸಿಕರಪ್ಪರೆನ್ನರ್ ಕಂಡೊಡಂ ಸೋಲ್ವರೆಂದೆಮ್ಮ ಮನದೊಳ್ ಬಗೆದು ವೈಶಂಪಾಯನನಿಂತೆಂದೆವು

ಇದು ದಲ್ ಚೈತ್ರರಥಾಹ್ವಯಂ ಬನಮಿದಚ್ಛೋದಂ ಸರಂ ನೋಟ್ಪೊಡೀ
ತ್ರಿದಶಾವಾಸಮಿದಿಂತುಟಲ್ತೆ ರಮಣೀಯಂ ಬೀಡುಮಂತೆತ್ತಿಪೋ
ದುದು ರಾಜಾತ್ಮಜರಿಂತು ನಿನ್ನ ಬರವಂ ಪಾರುತ್ತಮಿರ್ದಪ್ಪರಂ
ತದಱಂ ಬೇಗಮೆ ಮಿಂದು ಕಾಣಭವನಂ ಸದ್ವಿಪ್ರವಿದ್ಯಾಧರಾ ೧೧೪

ವ॥ ಎಂಬುದುಂ ಮೂಗನಂತೇನುಮಂ ನುಡಿಯದೆ ಲತಾಮಂಡಪಮನೆ ನೀಡುಂ ನೋಡುತ್ತಮಿರ್ಪುದುಂ ಮತ್ತಾವಾಗಳಡಿಗಡಿಗನಿವಿಸಲೆಮ್ಮನಿವಕ್ಕೆ ಸೈರಿಸದೆ ಚಂದ್ರಾ ಪೀಡಭುಜಪರಿರಕ್ಷಿತಮಪ್ಪ ತುರಂಗ ಬಲಂಬೆರಸು ನೀವಿಲ್ಲಿರವೇಡಿಂ, ಕಟಕಮಂ ಮುಂದಿಟ್ಟೊಡಗೊಂಡು ಪೋಗಿಮಾಂ ಬರ್ಪುದಿಲ್ಲೆಂದು ಜಡಿದೆಮ್ಮಂ ಬೆಟ್ಟವೆಟ್ಟರಾಗಿ ಪಱಪಡೆ ನುಡಿದು ಮುನ್ನಿನಂದದೊಳೆ ಮನಂಗೊಂಡು ಜಾನಿಸುತ್ತಿರ್ದನನಿಂತೆಂದೆವು

ನಿನಗೀ ವೈರಾಗ್ಯಮೇಕೊರ್ಮೊದಲೊಗೆದುದಿದೆಮ್ಮಿಂದವಾಯ್ತೋ ಭವನ್ಮಿ
ತ್ರನಿದಾಯ್ತೋ ನಿನ್ನ ನಾವೀ ತೆಱದೆ ನಿಲಿಸಿ ಪೋದಂದು ರಾಜೇಂದ್ರಚಂದ್ರಾಂ
ಕನ ತಾರಾಪೀಡಭೂಪಾಲಕನ ಮುಳಿಸನಾರಾಂಪರೇೞ್ ಪೋಪಮೆಂದಿಂ
ತನಿವಂ ಗೆಯ್ಯುತ್ತಿರಲ್ಕಂ ನುಡಿಯನೆ ಶುಕನಾಸಾತ್ಮಜಂ ಮತ್ತಮೆಮ್ಮೊಳ್ ೧೧೫

ವ॥ ಮತ್ತಂ ಬರವಿಂಗಾಗ್ರಹಿಸಲಿಂ ನುಡಿಯದಿರಿಂ, ಚಂದ್ರಾಪೀಡನೊಳ್ ನೆರೆವ ಪುಣ್ಯಮೆನಗಿಲ್ಲೆನ್ನನಗಲ್ಚಿದ ಬಿದಿ ಬಲ್ಲಿದನೆಂದಲ್ಲಿಂದೆಟ್ಟು ಪೋಪನ ಬೆನ್ನೊಳಾವೆಲ್ಲಂ ಪೋಗೆ ಪೋಗೆ ನೀವೇಕೆ ಬಂದಪ್ಪಿರೆಂದೆಮ್ಮಂ ಬಿಡೆಜಡಿದು ಕಿಱಿದಂತರಂ ಪೋಗಿ

ತರುವೀಥೀವ್ರಾತದೊಳ್ ಕಲ್ತಿಲೆವಿಡುವ ತಮಾಲಂಗಳೊಳ್ ಮಲ್ಲಿಕಾಮಂ
ದಿರದೊಳ್ ನಾನಾಲತಾಮಂಟಪದೊಳೆಸೆವ ಬೀಟಿಝೊಂಪದೊಳ್ ದಿವ್ಯಪದ್ಮಾ
ಕರತೀರೋಪಾಂತ ಸಿದ್ಧಾಯತನದೊಳೆನಸುಂ ಭ್ರಾಂತಿಯಿಂ ಭಾವಿಸುತ್ತ
ಚ್ಚರಿವಟ್ಟೇನಾನುಮಂ ಕೆಟ್ಟುದನಱಸುವವೋಲ್ ಕೂಡೆ ನೋಡುತ್ತಮಿರ್ದಂ ೧೧೬

ವ || ಅಂತದನನನ್ಯದೃಷ್ಟಿಯಾಗಿ ತೊಟಲುತ್ತಂ ಪಲವುದಿವಸಮುಣ್ಣದೆ ಕುಡಿಯದಿರ್ದನನೆಂತಾನುಮಾಹಾರಾಭಿಮುಖನಂ ಮಾಡೆ ಕಂದ ಮೂಲಫಲಂಗಳನಲ್ಲದೆ ಮೆಲ್ಲೆನೆಂದು ನಿಯಮಂ ಮಾಡಿರ್ದನಂ ನೋಡಿ

ಬರವಿನ ಮಾತು ಮಂತ್ರಿಸುತನೊಳ್ ಪಱಿವಟ್ಟುದನೆಯ್ದೆ ಕಂಡು ದೇ
ವರ ಬೞಿಗಲ್ಲದಿಂ ಬರವು ಕೂಡದು ನಿಕ್ಕುವಮೆಂದು ವಾಜಿಗಳ್
ಬೆರಸು ಕೆಲಂಬರಂ ಪೆಱಗೆ ಕಾಪಿರಿಸಿಟ್ಟು ಸಮಸ್ತಸೇನೆಗ
ಳ್ಳಿರವಿದಯುಕ್ತಮೆಂದು ನಡೆತಂದೆವಿದಿಂತುಟು ವೃತ್ತಕಂ ನೃಪಾ ೧೧೮

ವ || ಎಂದು ಬಿನ್ನವಿಸೆ ಚಂದ್ರಾಪೀಡನದೆಲ್ಲಮಂ ಕೇಳ್ದು

ಜನಿಯಿಸಿದಂದು ತೊಟ್ಟಗಲದಾತನನಿಂತಿರಗಲ್ದ ಪಾಪಕ
ರ್ಮನನವಿವೇಕಿಯಂ ಗುಣವಿಹೀನನನೆನ್ನನಳೀಕಮಿತ್ರನಂ
ನೆನೆಯದೆ ನಿಂದೊಡಂ ಗುರುಜನಂಗಳ ಮೇಗಣದೊಂದು ಭಕ್ತಿಯಂ
ನೆನೆದು ಮನೋರಮಾಪ್ರಿಯಸುತಂ ಬರವೇೞ್ಕುಮದೇಕೆ ನಿಂದನೋ ೧೧೯

ಪುರುಷಾರ್ಥತ್ರಿತಯಮನವ
ಧರಿಸದೆ ವೈರಾಗ್ಯಮೇಕೆ ಪುಟ್ಟಿದುದೋ ಚಿ
ಚ್ಚರಮೆಂಬುದ ನಾಂ ಪೋಗಿಯೆ
ನೆರೆದಲ್ಲಿಯಮಾತ್ಯಮುಖ್ಯಸುತನೊಳ್ ತಿಳಿವೆಂ ೧೨೦

ವ || ಅದಲ್ಲದೆಯುಂ ಪತ್ರಲೇಖೆಯುಂ ಪೋದಳಲ್ಲಿಯೆ ವೈಶಂಪಾಯನನ್ನುಮಿರ್ದಪನದಱಿನಾತನನೊಡಗೊಂಡು ಬಂದಪ್ಪನೆಂದು ತಂದೆಯಂ ಬೀೞ್ಕೊಂಡು ಪೋಗಿ ಮಹಾಶ್ವೇತಾಶ್ರಮದೊಳಿರ್ದ ವೈಶಂಪಾಯನನಂ ಹೇಮಕೂಟಕ್ಕಟ್ಟೆ ನಡೆಯಿಸಿ ಕಾದಂಬರಿಯೊಳ್ ಮದುವೆನೆರೆದು ಶುಕನಾಸನಂದನಂಗೆ ಮದಲೇಖೆಯಂ ಮದುವೆಯಂ ಮಾಡಿ ಸಂತೋಷದಿಂ ಬಂದುಜ್ಜೈನಿಯಂ ಪುಗುವೆನೆಂದು ತನ್ನ ಮನದೊಳ್ ಬಗೆದು ಮನಮಂ ಬಲಿಕೆಯ್ದಲ್ಲಿಂದಮೆೞ್ದು ದ್ವಾರಪ್ರಭೃತಿ ಸಂಮೃಷ್ಟಭೂಮಿಭಾಗಮುಮಂತರ್ಬಹಿಃ ಪ್ರಕೀರ್ಣ ಸುರಭಿಕುಸುಮಪ್ರಕರಮುಂ ಗೃಹೀತಚಾಮರ ತಾಳವೃಂತ ಭೃಂಗಾರು ವಾರಾಂಗನಾಸಹಸ್ರಸಂಗತಮುಂ ಗಂಧಮಾದನವಿಜಯಗಜಸನಾಥೀಕೃತಮುಂ ಪರಿಕಲ್ಪಿತೇಂದ್ರಾಯುಧಾವಸ್ಥಾನಮುಂ ಉತ್ತುಂಗತೋರಣಾಬದ್ಧವಂದನಮಾಲಮುಮಪ್ಪ ರಾಜಮಂದಿರಮಂ ಪೊಕ್ಕು ಸಕಲ ರಾಜಲೋಕಮಂ ಬೀಡುದಾಣಂಗಳ್ಗೆ ಪೋಗಲ್ವೇೞ್ದಪನೀತ ಸಮಾಯೋಗನಾಗಿ ಶಯ್ಯಾತಳದೊಳ್ ಮೆಯ್ಯನೀಡಾಡಿ

ಅನುನಯದಿಂ ವಾರವಿಲಾ
ಸಿನಿಯರ್ ಮೆಲ್ಲೆಲರ ಪೀಲಿಬಿಜ್ಜಣಿಗೆಯನೊ
ಯ್ಯನೆ ಬೀಸುತ್ತಿರೆ ನೃಪನಂ
ದನನನಿಸಿನಿಸಂ ಬಟಲ್ಕೆಗಟೆಯುತ್ತಿರ್ದಂ ೧೨೧

ವ॥ ಅಂತಿರ್ದು ನಿಜಾಂತರಂಗದೊಳ್

ಜನನಿಗೆ ಪೇಟದಾರ್ಯ ಶುಕನಾಸನನೀಕ್ಷಿಸಿದಾದಮಾತ್ಮನಂ
ದನನ ವಿಯೋಗದಿಂ ಮಱುಗುತಿರ್ದ ಮನೋರಮೆಯಲ್ಲಿಗೆಯ್ದದಾ
ನನುನಯದಿಂದಮಾದರಿಸದಿತ್ತಣಿನಿತ್ತಲೆ ಪೋದೊಡಾನುಮಾ
ತನ ತೆಱನಪ್ಪೆನಿರ್ಮಡಿಸುಗುಂ ಗುರುಗಳ್ಗತಿದುಃಖಮೇವೆನೋ ೨೨೨

ವ॥ ಆದಱಿನಿವರನಾಶ್ವಾಸಿಸಿ ವೈಶಂಪಾಯನಪ್ರತ್ಯಾನಯನಕ್ಕೆ ತಂದೆಯುಂ ಬೀಟೊಳ್ಕೊಂಡು ಪೋಗಲ್ವೇಟ್ಕುಂ; ಅಲ್ಲಿ ಕಾದಂಬರಿಯಿರ್ಪಳಲ್ಲಿಯೆ ವೈಶಂಪಾಯನನು ಮಿರ್ದಪನೆಂದು ಧೈರ್ಯಮನವಲಂಬಿಸಿ ದಿವಸವ್ಯಾಪಾರಮನೆಂತಾನುಂ ತೀರ್ಚಿ ತದ ನಂತರಂ ಸಕಲ ದಿಗಂತರಂಗಳೊಳ್ ದುಳ್ಳುರಿಯನುಗುಳ್ವ ತೀವ್ರರಶ್ಮಿಜಾಲಮುಂ ಪಸರಿ ಸುತ್ತಂ ನಿದಾಘಸಮಯಸಹಸ್ರಭಾನುಮಂಡಲಂ ಮಧ್ಯಾಹ್ನವರ್ತಿಯಾಗೆ ತತ್ತಪನತಾಪ ದೊಳಂ ಸುಹೃದ್ವಿಯೋಗತಾಪದೊಳಂ ಕಾದಂಬರೀವಿರಹತಾಪದೊಳಂ ಸಂತಪ್ತನಾಗಿ ತಾರಾಪೀಡತನಯಂ ತಣ್ಪನಾಸೆಗೆಯ್ದಲ್ಲಿಂದಮೆಟ್ಟು

ಬಳಸಿದ ಬಚ್ಚಲಿಂ ಮಲಯಜದ್ರವದಿಂ ಪೊರೆದಬ್ಜಿನೀದಳಂ
ಗಳ ನೆಲಗಟ್ಟಿನಿಂ ಕುಳಿರ್ವ ಬಾಳದ ಬೇರ್ಗಳ ಕೇರ್ಗಳಿಂ ಲತಾ
ವಳಿಯನೆ ಸುತ್ತುಗೊಂಡ ಪಸುರ್ಗಂಬದಿನೆಯ್ದೆ ಮುಸುಂಕಿನಿಂದ ತ
ಣ್ಣೆಳಿರ್ಗಳಿನೊಪ್ಪಿ ತೋರ್ಪ ಜಲಮಂಟಪದಲ್ಲಿಗೆ ಬಂದನಾ ನೃಪಂ ೧೨೩

ಎಳದೆನಿಸಿರ್ದ ಪಾವಸೆಯ ತಣ್ಣೆಳೆಯಿಂದಮ ನೆಯ್ದ ಸೀರೆ ಶೀ
ತಳಿಕೆಯ ಚಾಮರಂ ಪೊಸಮೃಣಾಳದ ತೋಳ್ವಳೆ ಮುತ್ತಿನಾರಮು
ತ್ಪಳದವತಂಸಮಿರ್ಪನೊಳಕೆಯ್ದ ಕುರುಳ್ ಸಿರಿಕಂಡದಣ್ಪು ಕ
ಣ್ಗೊಳೆ ನೆಲಸಿರ್ದರಲ್ಲಿ ಜಲದೇವಿಯರಂತೆ ವಿಳಾಸಿನೀಜನಂ ೧೨೪

ವ॥ ಮತ್ತಮಲ್ಲಿ ಮೃಣಾಳನಾಳ ತಾಳವೃಂತ ಕರ್ಪೂರಪಟವಾಸ ಹರಿಚಂದನ ಚಂದ್ರಕಾಂತದರ್ಪಣಾದ್ಯುಪಕರಣಪಾಣಿಗಳಪ್ಪ ಕತಿಪಯವಾರಾಂಗನಾಜನಂಗಳಿರ್ದರದು ನಿದಾಘಕ್ಕೆ ಪರಿಭವಸ್ಥಾನಮುಂ ಶೀತಕಾಲಕ್ಕೆಕ್ಕೆದಾಣಮುಂ ಹಿಮಶೈಲಕ್ಕೆ ಸಹೋದರ ಮುಮೆನಿಸಿದ ನೀರ್ಜೊಂಪಮುಂ ಪೊಕ್ಕು ಶಿಶಿರಶಿಲಾತಳದೊಳ್ ಮೆಯ್ಯನಿಕ್ಕಿ

ಅವಿಂತ ಮಕರಧ್ವಜೋತ್ಕಲಿ
ಕಮನಾತ್ಮಸುಹೃದ್ವಿಯೋಗವಡಬಾನಲದು
ರ್ದಮಮುಮಂ ದಿನಾಬ್ಧಿಯಂ ಧೈ
ರ್ಯವೆಂಬ ಭೈತ್ರದಿನಿಳಾಧಿಪಂ ತರಿಯಿಸಿದಂ ೧೫

ವ॥ ಅಂತು ನೇಸರ್ ಪಡಲೊಡಂ ಬಯಲ್ಗಂಬೊಟ್ಟಿರಸಂ ನೀರ್ಜೊಂಪದಿಂ ಪೊಱಮಟ್ಟು ಸಿಂಪಿಣಿಯ ತಣ್ಪಿನಿಂ ಪೂವಲಿಯ ತಿಣ್ಪಿನಿಂ ಮನಂಗೊಳಿಸುವ ಭವನಾಂಗಣದೊಳವತರಿಸಿ ಸಮಾಸನ್ನ ರಾಜಲೋಕದೊಡನೆ ವೈಶಂಪಾಯನ ವೃತ್ತಾಂತಮನೆ ನುಡಿಯುತ್ತುಂ ಕಿಱಿದುಬೇಗಮನಿರ್ದೆರಡನೆಯ ಜಾವಮುಳ್ಳಂತೆ ಬೀಡಂ ನಡೆಯಿಸೆಂದು ಪಡೆವಳ್ಳಂಗೆ ಬೆಸಸಿ ರಾಜಲೋಕಮುಂ ವಿಸರ್ಜಿಸಿ ಸೆಜ್ಜೆಗೆವಂದನಂತರಂ ಕಿಱಿದುಬೇಗಕ್ಕೆ ಚಿರಾಂತರಿತೋಜ್ಜಯನೀ ದರ್ಶನೋತ್ಸುಕತೆಯಿಂ ಕಟಕಜನಂ ಪ್ರಯಾಣನಾಂದೀನಿನಾದಮುಂ ಕೇಳದೆ ಉಜ್ಜಯನಿಯ ಬಟ್ಟೆವಿಡಿದು ನಡೆಯೆ ತಾನುಂ ಲಬ್ಧನಿದ್ರಾವಿನೋದನಾಗಿ ತೃತೀಯಯಾಮದೊಳ್ ಬಹುತುರಗಕರಿಣೀವಾಹನಾರೂಢ ಕತಿಪಯ ರಾಜಪುತ್ರರಂ ಬೆರಸು ಕಟಕಜನದೆ ಸಂದಣಿಸಿದ ಬಟ್ಟೆವಿಡಿದು ನಡೆಯಲಿರುಳುಮಾ ಬಟ್ಟೆಯೊಡನೆ ಪಱಿಪಟ್ಟು ಪೋಗೆ

ಜಲನಿಧಿಯಂ ಪೀರ್ದಲ್ಲಿಯ
ಜಲಚರಮುಂ ಕೂಡೆ ತೆಗೆಪಿದೆಂ ತೆಗೆವುವೆನಿಂ
ಸ್ಥಲಚರಮನೆಂದು ವಡಬಾ
ನಲ[1]ನೇಟ್ವವೊಲೊಗೆದು[1]ದರ್ಕಮಂಡಳಮಾಗಳ್ ೧೬

ವ॥ ಅಂತು ನೇಸರ್ ಮೂಡಲೊಡಂ ಕಟಕಂಬೆರಸುಜ್ಜಯನಿಗೆ ವಂದಲ್ಲಿಗಲ್ಲಿಗೆ ಗಳದ್ಬಾಷ್ಪನಯನರಾಗಿ ಪರಿತಂದು ವೈಶಂಪಾಯನವೃತ್ತಾಂತಮನೆ ಬೆಸಗೊಳ್ವ ಪುರಜನಂಗಳಂ ಚಂದ್ರಾಪೀಡಂ ನೋಡಿ

ಇನಿವಿರಿದಟಲನ್ಯರೊಳಂ
ಜನಿಯಿಸಿತೆನೆ ಬಯಸಿ ಪಡೆದು ತೊಡೆಯೇಱಿಸಿ ಮು
ದ್ದನೊಱಲ್ದು ನೋಡಿ ನಡೆಪಿದ
ಜನನೀಜನಕರ್ಗದೆನಿತಟಲ್ ಜನಿಯಿಕುಮೋ ೧೭

ತನಯವಿಯೋಗವಿಹ್ವಲತೆಯಿಂ ಮಗನೆಲ್ಲಿದನೆಂದೊಡೇನನೆಂ
ಬೆನೊ ಗುರುಗಳ್ಗೆ ಪಿಂದೆ ಪರಭೂಮಿಯನಾಕ್ರಮಿಸಲ್ಕೆ ನಿಂದನೆಂ
ಬೆನೊ ಪರಭೂಪರಂ ಕವರ್ದು ಕಪ್ಪಮನೀಂಟಿಕೊಳಲೆಂದು ನಿಂದನೆಂ
ಬೆನೊ ಪೊಸತೊಂದು ವಿದ್ಯೆಯನುಪಾರ್ಜಿಸವೇಡಿಯೆ ನಿಂದೆನೆಂಬೆನೋ ೧೮

1. ನೊಳಪೊಗೆದೊ (ಕ)

ವ॥ ಎಂದು ನಿಜಾಂತರಂಗದೊಳ್ ಚಿಂತಿಸುತ್ತಮುಜ್ಜಯಿನಿಯಂ ಪೊಕ್ಕರಮನೆಯ ಬಾಗಿಲನೆಯ್ದುವರ್ಪುದುಂ ವಿಳಾಸವತಿಮಹಾದೇವಿವೆರಸರಸನಾರ್ಯಶುಕನಾಸನರಮನೆಗೆ ಬಿಜಯಂಗೆಯ್ದನೆಂಬುದಂ ಕೇಳ್ದು ತಾನುಮಲ್ಲಿಗೆ ಪೋಪಾಗಳಭ್ಯಂತರಮಂಟಪದಲ್ಲಿ

ಇದಿರೊಳ್ [1]ತಾನುಮಿರಲ್ಕೆ[1] ಹಾ ತನಯ ವೈಶಂಪಾಯನಾ ನೀಡುಮಂ
ಕದೊಳಿನ್ನುಂ ನೆಲಸಿರ್ಪ ಬಾಲಕನೆ ನಾನಾವ್ಯಾಳಕೋಲಾಹಲಾ
ಸ್ಪದಮುಂ ನಿರ್ಮನುಜಪ್ರವೇಶಮುಮೆನಿಪ್ಪಾ ಘೋರಕಾಂತಾರದ ಮ
ಧ್ಯದೊಳೋರೋರ್ವರುಮಿಲ್ಲದಾವ ತೆಱದಿಂದೇಕಾಕಿಯಾಗಿರ್ದಪಯ್ ೧೨೯

ಮುಗುೞ್ದೀಗಳ್ ಜಯಯಾತ್ರೆಯಿಂ ಮಗನೆ ನೀನೆಟ್ಟೈರ್ಪುದುಂ ನಿನ್ನ ತಂ
ದೆಗೆ ಪೇೞ್ದಾಂ ನಿನಗಲ್ತೆ ಬೇಗಮೆ ವಿವಾಹೋತ್ಸಾಹಮಂ ಮಾಡಿ ಕಯ್
ಮಿಗುವತ್ಯುತ್ಸವದಿಂ ವಧೂವದನಮಂ ನೋ[2]ೞ್ಪಿಂದಲೆ[2]ಂದಿರ್ದೆನ
ನ್ನೆಗಮಂತಿರ್ಕದು ಕೂಡಿತಿಲ್ಲೆನಗೆ ಮುನ್ನಂ ನಿನ್ನುಮಂ ಕಾಣ್ಬುದುಂ ೧೩೦

ಮಗನೆ ಕಿಱಿದೆಮ್ಮನಗಲಲ್
ಬಗೆದಂದೊಡದೇನೊ ಪುಟ್ಟಿದಂದು ಮೊದಲ್ಗೊಂ
ಡಗಲದ ಚಂದ್ರಾಪೀಡನ
ನಗಲ್ದಿ[3]ರಲ್ ನೀನದೆಂತು[3] ಪೇೞ್ ಬಗೆದಂದೈ ೧೩೧

ವ॥ ಎಂದಿವು ಮೊದಲಾಗಿ ಪಲವುನುಂ ಪಲಂಬಿ ಪಂಬಲಿಸುವ ವೈಶಂಪಾಯನ ತಾಯ ಸರಮಂ ಕೇಳ್ದು

ಮನೆಯಂ ಮನೋರಮಾನಂ
ದನನಿಲ್ಲದದೆಂತು ಪುಗುವೆ ನಾನೀಗಳ್ ನಂ
ದನನ ವಿಯೋಗದೆ ಮಱುಗುವ
ಮನೋರಮೆಯ ಮೊಗಮನಾವ ಮೊಗದೊಳ್ ನೋೞ್ಪೆಂ ೧೩೨

ವ॥ ಎಂದು ತನ್ನ ಮನದೊಳೆ ಬಗೆಯುತ್ತಂ ಶುಕನಾಸಭವನಮಂ ಪುಗುವಲ್ಲಿ

ಶರನಿಧಿಪತಿಮಥನಾನಂ
ತರದೊಳ್ ಮರವಟ್ಟು ಮಂದರಂ ಬೆರಸಿರ್ಪಂ
ತಿರುತಿರ್ದಂ ಶುಕನಾಸಂ
ಬೆರಸು ಜಡೀಭೂತನಾಗಿ ತಾರಾಪೀಡಂ ೧೩೩

1 ಳ್ಪನ್ನುಮೀಗಳ್ಕೆ (ಕ) 2 ೞ್ಪಂದಱಿಂ (ಕ) 3 ಲುಂ ನಿನಗಿದೆಂದು (ಕ)

ವ|| ಅಂತಿರ್ದ ತನ್ನ ತಂದೆಯಂ ಕಂಡು ಲಜ್ಜಿಸಿ ತಲೆಯಂ ಬಾಗಿ ದೂರದೊಳ್ ಪೊಡವಟ್ಟು ಕೆಲಕ್ಕೆ ಪೋಗಲಮ್ಮದಗಲೆ ಕುಳ್ಳಿರ್ದ ಚಂದ್ರಾಪೀಡನ ಮೊಗಮಂ ನೋಡಿ

ಮಱಿ ಸುರಿಯಲ್ಕಿರ್ದ ಮುಗಿಲ್
ಮೊಱಗುವವೊಲ್ ಮೊಱಗಿ ತಳೆದು ಕಣ್ಣೀರಂ ಕ
ಯ್ಗಱದಱಲುಗೆ ಮಗನಂ ಮೆ
ಯ್ವೞಿಯಿಂದಮೆ ನುಡಿದನಂದು ತಾರಾಪೀಡಂ ೧೩೪

ಅನ್ನೆ ಱಿಯಱವೆಂ ನಂದನ
ನಿನ್ನನುಜನಮೇಲೆ ನಿನಗೆ ನಿರತಿಶಯ ಸ್ನೇ
ಹನ್ನಿರುತಮುಳ್ಳುದುಮನಾ
ತನ್ನಿನ್ನನಗಲ್ದ ನೋವು ಪಿರಿದೆಂಬುದುಮಂ ೧೩೫

ವ|| ಆದೊಡಂ

ವಿನಯಕ್ಕಂ ವಯಸಕ್ಕವಾಕೃತಿಗವೊಂದಿಂಗಂ ಗುರುವ್ರಾತಶಾ
ಸನಕಂ ಕೂರ್ಮೆಗವಲ್ಲದಂತುಟನಿದೊಂದಂ ಮಾಡೆ ನೀಂ ನಿನ್ನ ತ
ಮ್ಮನ ವೃತ್ತಾಂತಮನಿಂದು ಕೇಳ್ದನಿತುಮಂ ನಿನ್ನಿಂದಲಾಯ್ತೆಂದು ಮ
ನ್ನನವಾಶಂಕೆಯನಪ್ಪುಕೆಯ್ದಪುದು ನೋಡೇನೆಂಬೆನಾನಿಂತಿದಂ ೧೩೬

ವ|| ಎಂದು ನುಡಿದ ತಾರಾಪೀಡನರೇಂದ್ರನನಾಕ್ಷೇಪಂಗೆಯ್ದು

ಪೊಳೆದಪುವು ಕಾರಕರ್ಮುಗಿ
ಲೊಳಗೆಳಮಿಂಚುಗಳಿವೆನಿಸಿ ಮುಳಿಸಿಂ ಕಡುಗ
ರ್ಪೆಳಸಿದ ನಿಜವದನದೊಳ
ಗ್ಗಳವಧರಂ ಕೆತ್ತೆ ಮಂತ್ರಿಮುಖ್ಯಂ ನುಡಿದಂ ೧೩೭

ನೆಟ್ಟನೆ ಚಂದ್ರನೊಳ್ ಬಿಸುಪು ಪುಟ್ಟದವೊಲ್ ನೃಪರೂಪಚಂದ್ರನೊಳ್
[1]ಪುಟ್ಟದುಮಂತಿದಂ[1] ತಿಳಿವುಗೆಟ್ಟ ಕೃತಜ್ಞತೆಗೆಟ್ಟ ಪೌರುಷಂ
ಗೆಟ್ಟ ದುರಾತ್ಮನಂ ಕುಱಿತು ಭಾವಿಸದೇನುಮನೀ ಮಹಾತ್ಮನಂ
ತೊಟ್ಟನಲಿಂತು ದೇವ ಯುವರಾಜನನೀ ತೆಱದಿಂ ಪೆಸರ್ಪುದೇ ೧೩೮

ಆರಾನುಂ ದೋಷಮನ
ಧ್ಯಾರೋಪಿಸೆ ಗುಣಿಗಳರಮೆ ನೋವರೆನಲ್ ತ
ಮ್ಮಾರಾಧ್ಯರೆ ದೋಷಮನ
ಧ್ಯಾರೋಪಿಸೆ ನೋವುದರ್ಕೆ ಪೇೞ್ ಕಡೆಯುಂಟೇ ೧೩೯

1 ಪುಟ್ಟುಗುಮಿಂತಿದಂ (ಕ)

ಒಡಲೆರಡು ಜೀವಮೊಂದೆನೆ
ಕಡುಗೂರ್ಪುದನಱಿ[1]ಯದಿಂತು ದು[1]ಷ್ಕೃತದಿಂದಂ
ತೊಡರ್ದವನೆ ತಾನೆ ತನ್ನಿಂ
ಕಿಡೆ ಚಂದ್ರಾಪೀಡನಂತದರ್ಕೇಗೆಯ್ವಂ ೧೪೦

ಪುಟ್ಟಿದ ತಾಣಕ್ಕಱಿವಂ
ಪುಟ್ಟಿಸಲೊಡರಿಸುವ ಕಿಚ್ಚು ತೇಱ್ ಕ್ರಿಮಿ ಕುತ್ತಂ
ಪುಟ್ಟುವವೊಲ್ ದುಷ್ಕೃತದಿಂ
ಪುಟ್ಟಿದನೀ ಪಾಪಕರ್ಮನೆನ್ನಯ ಬಸುಱಿಂ ೧೪೧

ಗಿಳಿಯಂತೋದಿಯೆ ಪೋದಂ
[2]ಗಿಳಿಯುಂ ಮೊದಲಾಗಿ ನಡಪಿದರನಱಿದು ಮರು
ಳ್ಗೊಳಿಸುವುದವಱಿಚ್ಛೈಸುವ[2]
ಫಳಮಿಂತಂತನಿತುಮಾದುದಿಲ್ಲಾ ಖಳನೊಳ್ ೧೪೨

ವ|| ಆದೊಡಂ

ಪರಹಿತಮಿದಾತ್ಮಹಿತಮೆಂ
ಬೆರಡುಮನುಱಿದಱಲನೆಮಗೆ ಮಾಡಿದವಂ ನಿ
ತ್ತರಿಸಂ ತಿರ್ಯಗ್ಜಾತಿಯೊ
ಳೆರಡಿಲ್ಲದೆಯಿಂ ವಿಜಾತಿ ಪುಟ್ಟದೆ ಮಾಣಂ ೧೪೩

ವ|| ಅಂತಗ್ಗಳಿಸಿದಱಲ ಮುಳಿಸಿಂ ಹೇಮಂತಸಮಯೋತ್ಪಲದಂತೆ ದೃಷ್ಟಿಗಳು ದ್ಬಾಷ್ಪಂಗಳಾಗೆ ವೈಶಂಪಾಯನಂಗೆ ಶಾಪಂಗೊಟ್ಟು ಶುಕನಾಸನಂ ಪಿರಿದುಮನ್ಯಾಯಂಗೆಯ್ದೆಯೆಂದು ಮನಂಗೊಂಡು ತಾರಾಪೀಡನಿಂತೆಂದಂ

ಜಲನಿಧಿಯಂ ಮುಗಿಲ್ವನಿಗಳಿಂದಮುಗುರ್ವಿಸುವಂತೆ ನಿಮ್ಮ ನಾಂ
ತಿಳಿಪೆದಪೆಂ ಗಡಾದೊಡಮಸಹ್ಯಮೆನಿಪ್ಪತಿದುಃಖದಿಂದಮಾ
ವಿಳಮೆನಿಸಿರ್ಪುದಗ್ಗದ ವಿವೇಕಿಗಳಪ್ಪರ ಮಾನಸಂಗಳುಂ
ತಿಳಿಗೊಳನಾದೊಡಂ ಮೞೆಯ ನೀರ್ಗಳಿನಾವಿಲಮಾಗದಿರ್ಕುಮೇ ೧೪೪

1 ವರಿತನಮ್ಮತ್ಯುತದಿಂ (ಕ) 2 ಗಿಳಿಯೊಡಲಾಗಿನಡಪಿದರನಂ ಚಮರು । ಳ್ಗೆಳಸುವವಂಚ್ಛೆಗೆಳೆಸುವ (ಕ)

ಪರಮಾರ್ಥಂ ನಿಜಜನಕರ್
ಪರಸಿದ ಪರಕೆಗಳು ಬಯ್ದು ಬಯ್ಗುಳ್ ಮಕ್ಕ
ಳ್ಗಿರದೆಯ್ದುಗುಮದಱಿಂದಂ
ತಿರೆ ಶಪಿಯಿಸಲಾಗದೇಕೆ ನೀಮಱಿಯದುದೇ ೧೪೫

ನಿಡುಮರನೊಂದಂ ತಾನಿ
ಟ್ಟೊಡೆ ಕೂರ್ಮೆಯನಂತದರ್ಕೆ ಗಡ ಮಾಡುವರೆಂ
ದೊಡೆ ಮುಳಿಯಲಕ್ಕುಮೇ ತ
ನ್ನೊಡಲಿಂದಂ ಬಂದ ಶಿಶುಗೆ ತಿಳಿವುಳ್ಳವರ್ಗಳ್ ೧೪೬

ವ॥ ಅದಱಿಂ ಶಾಪಂಗುಡುವುದುಚಿತಮಲ್ತು ; ಯವ್ವನೋದಯದೊಳಾರ್ಗಾದೊಡಂ ಕ್ಲೇಶಬಹುಳಮಪ್ಪ ವಿಷಯಾಸಕ್ತಿ ದೊರೆಕೊಳ್ಗುಮೇನಾನುಮೊಂದು ಕಾರಣದಿಂದಮೇ ನಿನ್ನಾಗ್ರಹದಿನೊಡಗೊಂಡು ಬರ್ಪಂತು ವೈಶಂಪಾಯನಂಗೆ ಬಱಿಯನಟ್ಟುವಮೆಂದ ತಾರಾಪೀಡನರೇಂದ್ರನ ಮಾತಂ ಚಂದ್ರಾಪೀಡಂ ಕೇಳ್ದು

ಆಂ ಪೋಗದೆ ಬಾರಂ ವೈ
ಶಂಪಾಯನನೆಂದುಮದಱಿನೀಗಳೆ ನೀಮೆ
ನ್ನಂ ಪೋಗಲೆವೇಟ್ಟುದೆನು
ತ್ತುಂ ಪರ್ಚಿ ಸಖೇದನಾಗಿ ಮೆಲ್ಲನೆ ನುಡಿದಂ ೧೪೭

ವ॥ ಇಂತು ನುಡಿವುದುವಿಾತನೇನೆಂದಪ್ಪನೆಂದು ತಾರಾಪೀಡನರೇಂದ್ರಂ ಬೆಸಗೊಳ್ವುದುಂ ಸುಹೃತ್ಸ್ನೇಹಕಾತರಹೃದಯನಾಗಿ ವೈಶಂಪಾಯನನನೊಡಗೊಂಡುಬಂದಪ್ಪೆನೆಂದು ಶುಕನಾಸಂಗೆ ಬಿನ್ನವಿಸೆ ತಾರಾಪೀಡನುಂ ಪೀಡಿತಾಂತರಂಗನಾಗಿ

ವಿನುತ ಸಮಗ್ರಮಂಡಲದ ಚಂದ್ರನ ಚಂದ್ರಿಕೆವೊಲ್ ನರೇಂದ್ರಚಂ
ದ್ರನ ರುಚಿರೋತ್ಕರಗ್ರಹಣಶೋಭಿತೆಯುಂ ಸೊಸೆಯುಂ ನಿರೀಕ್ಷಿಸಲ್
ಮನಮೊಸೆದಿರ್ದೊಡಿತ್ತ ಸಚಿವಾತ್ಮಜವೃತ್ತಕಮಿಂತು ಬಂದು ತೊ
ಟ್ಟನೆ ಘನಕಾಲದಂತೆನಗೆ ದೈವದಿನಂತರಶೋಕಮುಕ್ಕುಮೆ ೧೪೮

ವ॥ ಎಂದು ತನ್ನೊಳಗೆ ಬಗೆದು ಮನಮುಂ ಬಲಿಕೆಯ್ದು ಶುಕನಾಸನನಿಂತೆಂದಂ

ನಂದನನೆಂದುದೆ ಮತಮೆಂ
ತೆಂದೊಡೆ ಬರಲಱಿಯನಾತನುೞಿದವರಾರ್ ಪೋ
ದಂದುಂ ಪ್ರಿಯಸಖನನಗ
ಲ್ದೊಂದು ಮುಹೂರ್ತಮುಮನಾತನುಂ ನಿಲಲಱಿಯಂ ೧೪೯

ವ॥ ಅದಱಿಂ ಪೋಗಿ ಬೇಗಂ ವೈಶಂಪಾಯನನೊಡಗೊಂಡು ಬರ್ಕೆಂಬುದುಂ ಲಬ್ಧಗಮನಾಭ್ಯನುಜ್ಞನಾಗಿ ವಿನಯವಿನಮಿತಮಸ್ತಕನಾದ ಚಂದ್ರಾಪೀಡನಂ ಮಗನೆ ವೈಶಂಪಾಯನನೊಡಗೊಂಡು ಬಂದಪೆನೆಂಬಿದಂ ನುಡಿದು ಮನೋರಮೆಯನಾಶ್ವಾಸಿಸೆಂದು ಬೆಸಸಿ ತಾರಾಪೀಡಂ ಶುಕನಾಸನ ಕಯ್ಯಂ ಪಿಡಿದುಕೊಂಡು ನಿಜರಾಜಭವನಕ್ಕೆ ಬಿಜಯಂಗೆಯ್ದನಿತ್ತ ಚಂದ್ರಾಪೀಡನುಮೊಳಗೆ ಮನೋರಮೆಯಂ ಸಂತೈಸುತ್ತಿರ್ದ ವಿಲಾಸವತಿಮಹಾದೇವಿಯರ್ಗೆ ಪೊಡಮಟ್ಟು ಕೆಲದೊಳ್ ಕುಳ್ಳಿರ್ದ ಸುತವಿಯೋಗವಿಹ್ವಲೆಯಪ್ಪ ಮನೋರಮೆಯನಿಂತೆಂದಂ

ಜನಕಂ ಬೀಟಿಕ್ಕೊಳಿಸಿದನೆ
ನ್ನನುಜನನೊಡಗೊಂಡು ಬಂದಪೆಂ ಚೆಚ್ಚರದಿಂ
ತನಯಂ ತಡದಪನೆಂದಿಂ
ತೆನಸುಂ ನೀನಬ್ಬೆ ಮನದೊಳುಮ್ಮಳಿಸದಿರಿಂ ೧೫೦

ವ॥ ಎಂದು ನಿಜಗಮನವೃತ್ತಾಂತಮಂ ನುಡಿದ ಚಂದ್ರಾಪೀಡನಂ ವೈಶಂಪಾಯನನ ಜನನಿಯಿಂತೆಂದಳ್

ಮನಮಂ ಪೋದಪ್ಪೆನೆಂದಾಱಿಸಿದಪೆ ಮಿಗಿಲಾಗಿರ್ದನೇ ಕಂದ ನಿನ್ನಿಂ
ದೆನಗಾತಂ ನಿನ್ನ ತಮ್ಮಂ ಬರವಿನ ದೆಸೆಯಂ ಮಾಣ್ದೊಡಂ ಜೀವಿಸೆಂ ನಿ
ನ್ನನಲಂಪಿಂ ನೋಡಿಯಾಂ ಪುತ್ರವತಿಯರೆನಿಸುತಿರ್ಪೆವಾವೀರ್ವರುಂ ನಂ
ದನ ಕೇಳ್ ನಿನ್ನೊರ್ವನಿಂದುಮ್ಮಳದೊದವೆನಗೇಕೊಂದುಗುಂ ವತ್ಸ ನಿನ್ನಿಂ ೧೫೧

ವ॥ ಅದಱಿಂ ಗಮನೋದ್ಯೋಗಮಂ ಮಾಣ್ಬುದೆಂದು ಚಂದ್ರಾಪೀಡನಂ ನುಡಿದ ಮನೋರಮೆಯಂ ವಿಲಾಸವತಿಮಹಾದೇವಿ ಮನಮಂ ಬಲಿಕೆಯ್ದಿಂತೆಂದಳ್

ಯುವರಾಜಂಗಲ್ಲದೆ ಮಗ
ನವರಿವರ್ಗಂ ಬಾರನೆಂದೆ ದಲ್ ಬೆಸಸಿದನಿಂ
ತಿವರಯ್ಯನೀಗಳದಱಿಂ
ದವಕ್ಕ ಮಾಕೆರ್ೊಳಲೆಬೇಡ ಗಮನೋದ್ಯಮಮಂ ೧೫೨

ವ॥ ಎಂದು ಕುಮಾರಂಗೆ ಗಮನಮಂಗಳಸಂವಿಧಾನಮಂ ಮಾಪ್ಪವೇೞ್ಮೆಂದು ಕಯ್ಯಂ ಪಿಡಿದೆತ್ತಿ ಮನೋರಮೆಯನೊಡಗೊಂಡು ವಿಲಾಸವತಿಮಹಾದೇವಿ ನಿಜರಾಜಭವನಕ್ಕೆ ಬಿಜಯಂಗೆಯ್ಯೆ ಚಂದ್ರಾಪೀಡನುಮೊಡನೆಯ್ದೆ ಪೋಗಿ ತಾಯ ಮನೆಯೊಳ್ ಮಜ್ಜನ ಭೋಜನಾದಿ ದಿವಸವ್ಯಾಪಾರಮಂ ಮಾಡಿ ಮಱುದಿವಸಂ ಪಯಣಮೆಂಬುದನಲ್ಲಿಯೆ ನಿಶ್ಚೈಸಿ ನಿಜರಾಜಭವನಕ್ಕೆ ಬಿಜಯಂಗೆಯ್ದು

ಇನ್ನಾ ಕಾದಂಬರಿಯುಮ
ನೆನ್ನಯ ಕೆಳೆಯನುಮನೆಂತುಮಾಂ ಕಂಡೆನೆನು
ತ್ತುನ್ನೃಪತನೂಜನಾಗಳ್
ತನ್ನೊಳೆ ಬಗೆಯುತ್ತ[1]ಮೆನಸುಮು[1]ತ್ಸಾಹಿಸಿದಂ ೧೫೩

ವ॥ ಅಂತುತ್ಸಾಹಿಸಿ ಪತ್ರಲೇಖೆ ಮುನ್ನಮೆಯ್ದಿದನ್ನೆವರಮಾನೆಯ್ದುವೇಟ್ಕು ಮೆಂದಿಂದ್ರಾಯುಧ ರಯಾನುಗಾಮಿಗಳಪ್ಪ ತುರಂಗಮಂಗಳಂ ತರಿಸಿ ನೋಡುತ್ತಮುತ್ಸಾಹಿಗಳಪ್ಪ ರಾಜಪುತ್ರರಂ ನಿಯಾಮಿಸುತ್ತಮಿರ್ದು ಪಗಲ್ಃಂ ಕಳೆಯೆ ರಜನೀಪ್ರವೇಶದೊಳ್

ಎನಿತು ಭವನಂಗಳೊಳವಂ
ತನಿತರ್ಕಂ ತನ್ನ ಬೆಳಗೆ ಬೆಳಗಾಗಿರೆ ಚಂ
ದ್ರನದೇನುದಯಿಸಿದನೊ ಪಡೆ
ದನುಭವಿಸಲ್ ತಾರಕಾಸನಮಾಗಮ ಸುಖಮಂ ೧೫೪

ವ॥ ಅಂತು ಚಂದ್ರೋದಯದೊಳ್ ಚಂದ್ರಾಪೀಡಂ ತಾಯ ಮನೆಗೆ ಬೀಟಿಕ್ಕೊಳಲೆಂದು ಬಂದು ಬಿನ್ನವಿಸೆ ವಿಳಾಸವತಿ ಮಹಾದೇವಿ ಭೋಂಕನೆ ಮನಂ ಕಲಂಕೆ ಮಗನನಿಂತೆಂದಳ್

ಇನಿಸುಂ ಮಾಣ್ದಪುದಿಲ್ಲ ನಂದನ ಭವದ್ದಿಗ್ಜೈತ್ರಯಾತ್ರಾವಿಲಂ
ಬನದಿಂ ಪುಟ್ಟಿದ ನೋವು ಮನ್ಮನದೊಳಿನ್ನುಂ ಮತ್ತೆ ಪೋಗಾಯ್ತು ಭೋಂ
ಕೆನಲೇನಾನವದೊಂದಱಿಕೆಯೊಳ್ ತೊಡರ್ದು ನೀನೀ ಪೋಗಿನೊಳ್ ನಿಲ್ಲದಿರ್
ನಿನಗಾಂ ಕಯ್ಮುಗಿದಪ್ಪೆನೀ ಯೆಡೆಗೆ ನಿನ್ನಂ ಬೇಡಿ ಕಯ್ಯೊಡ್ಡಿದೆಂ ೧೫೫

ವ॥ ಎಂದು ಗದ್ಗದ ಕಂಠೆಯಾಗಿ ನುಡಿಯೆ ಚಂದ್ರಾಪೀಡದೇವಂ ವಿನಯವಿನಮಿತನಾಗಿ ಕಯ್ಗಳಂ ಮುಗಿದು ದೇವಿಯರ್ ಬೆಸಸಿದಂತೆ ಗೆಯ್ವೆನೆಂಬುದುಂ ಗಮನಮಂಗಳಸಂವಿಧಾನಮನೆಂತಾನುಂ ಮಾಡಿದಾಗಳ್

ಒಲವಿನೊಳಾಗಳೊಲ್ದೆಱಗೆ ಪೆರ್ಮೊಲೆಗಳ್ ತೊರೆ[2]ದುರ್ಚೆ[2] ಪಾಯ್ವ ಪಾ
ಲೊಳೆ ಮಿಸಿಸುತ್ತಮೆತ್ತಿ ಮಗನಂ ಬಿಗಿಯಪ್ಪಿ ಪೊದಟ್ಟಿ ಕಣ್ಣನೀ
ರ್ಗಳನೊಳ[3]ಸೇದಿ[3] ತಾಂ ಪರಸಿ ಮತ್ತಮುಲಂಪಳಿಯಾಗೆ ನೋಡಿ ಬೀ
ಟಿಕ್ಕೊಳಿಸಿದಳಾ ವಿಲಾಸವತಿ ಧೀರತೆಯಿಂ ಬಲಿಕೆಯ್ದು ಚಿತ್ತಮಂ ೧೫೬

---

1 ಮಿನಿಸಮು (ಕ) 2 ದಜ್ಜ (ಕ) 3 ಸೋಗೆ (ಕ)

ವ॥ ಆಗಳ್ ಮತ್ತಂ ಕೃತಪ್ರಣಾಮನಾಗಿ ತಾಯಂ ಬೀೞ್ಕೊಂಡು ತಂದೆಯಂ ಬೀೞ್ಕೊಳಲೆಂದು ತದೀಯ ವಾಸಭವನಕ್ಕೆ ಬರ್ಪುದುಂ ದ್ವಾರರಕ್ಷಕರ್ ದೇವಾ ಯುವ ರಾಜಂ ಬೀೞ್ಕೊಳಲೆಂದು ಬಂದನೆಂದು ಬಿನ್ನವಿಸೆ ಮೆಲ್ಲನೊಳಗಂ ಪೊಕ್ಕು ಕೃತನಮಸ್ಕಾರ ನಾದ ಮಗನಂ ನೋಡಿ ತಾರಾಪೀಡದೇವಂ ಕಿಂಚಿದುನ್ನಮಿತ ಪೂರ್ವಕಾಯನಾಗಿ ಶಯನ ತಳದಿರ್ದಂದದೊಳೆ ಕರೆದು ತಳ್ಕೈಸಿ ಭೋಂಕನೆ ಮನಂ ಕಲಂಕೆ ಮನಂಮಿಕ್ಕುಸಿರನುಸಿರ ಲೊಲ್ಲದೆಂತಾನುಮಿಂತೆಂದಂ

ಬೆಸೆದೀಯಂದದೆ ದೋಷವೇಱಿಸಿದನೆನ್ನೊಳ್ ತಂದೆಯೆಂದೆಮ್ಮ ಭಾ
ವಿಸದಿರ್ ಮೆಚ್ಚಿಸಲೆಂದುಮೆಯ್ದೆ ಜಗಮಂ ಚಿಕ್ಕಂದು ತೊಟ್ಟಾಂ ಪರೀ
ಕ್ಷಿಸಿ ನಿನ್ನಂ ಗುಣಜಾತಲಭ್ಯಮೆನಿಸಿರ್ದೀ ರಾಜ್ಯಭಾರಕ್ಕೆ ಯೋ
ಜಿಸಿದೆಂ ಕೆಮ್ಮನದುಂತೆ ಯೋಜಿಸಿದೆನೇ ಪೇೞಾತ್ಮಜ ಸ್ನೇಹದಿಂ ೧೫೭

ವ॥ ಆ ರಾಜ್ಯಮುಂ ಪ್ರಥಿತಪೃಥ್ವೀಭಾರಮಪ್ಪುದಱಿಂ ದುರ್ವಹಮುಂ ಮಹೀಭೃತ್ಸಂಬಾಧಮಪ್ಪುದಱಿನತಿಸಂಕಟಮುಂ ಅನೇಕ ಸಾಧನಸಾಧ್ಯಮಪ್ಪುದಱಿಂ [1]ದುಸ್ಸಾಧನಮುಮಪರ್ಯವಸಾನ[1]ಕಾರ್ಯಜಾಲಮಪ್ಪುದಱಿಂ ದುಷ್ಪ್ರಾಪಮುಮೆನಿಸಿದು ದದುವೆ ನಿನಗೇಕಭೋಗ್ಯಮಾಗಿರ್ದುದಱಿಂ ಸಕಲಲೋಕರಂಜನಕ್ಕೆ ಯತ್ನಂ ಮಾಡಲೆ ವೇೞ್ಪುದಿಂ ಪರಿಣತವಯಸರುಮನುಭೂತಪುರುಷಾರ್ಥತ್ರಯರುಮೆನಿಸಿದೆವಗೆ ನಿನ್ನನಧಿ ರಾಜಪದವಿಯೊಳ್ ನಿಲಿಸಿ ಪೂರ್ವರಾಜಸೇವಿತಮಾರ್ಗಮನೆಯ್ದವೇೞ್ಕುಮೆಂಬನ್ನೆಗಂ ತೊಟ್ಟನೆ ವೈಶಂಪಾಯನವೃತ್ತಾಂತಮಂತರಾಯಹೇತುವಾದುದಱಿಂ ಮಗನೆ ನೀಂ ತಡೆಯದೆ ಬಂದೆಮ್ಮ ಮನೋರಥಕ್ಕೆ ಸಾಫಲ್ಯಮಂ ಸಂದಿಪುದೆಂದು

ಹೃದಯಮನಿತ್ತಪನಾ ಸಮ
ಯದೊಳೆನೆ ಬಾಯ್ವಾಯೊಳಿತ್ತು ತಂಬುಲಮನಲಂ
ಪೊದವಲ್ಕೆ ಪರಸಿ ಬೀೞ್ಕೊಳಿ
ಸಿದನೆಂತಾನುಂ ನಿಜಾತ್ಮಜನನಧಿರಾಜಂ ೧೫೮

1 ದುಃಸಾಧಮುಪರ್ಯಾವಸಾನ (ಕ)

ಚಂದ್ರಾಪೀಡನ ಪ್ರಾಣವಿಯೋಗ

ವ॥ ಅನಂತರಂ ಪುನಃಪ್ರಣಾಮಂ ಮಾಡಿ ಪೊಱಮಟ್ಟು ಬಂದು ಸುತವಿಯೋಗಚಿಂತಾಕ್ರಾಂತರಪ್ಪ ಶುಕನಾಸನುಮಂ ಮನೋರಮೆಯುಮನುಱೆನುಡಿದು ಬೀೞ್ಕೊಂಡು ಬಂದು ವೈಶಂಪಾಯನದರ್ಶನತಾತ್ಪರ್ಯದೊಳಂ ಕಾದಂಬರೀಸಮಾಗಮೌತ್ಸುಕ್ಯದೊಳಮಕೃತಪರಿಲಂಬನಾಗಿ ಭವನಾಂಗಣದೊಳ್ ಸಾರ್ಚಿದಿಂದ್ರಾಯುಧಮಂ ಚಂದ್ರಾಪೀಡನೇಱಿ ದಿಗಂತರಂಗಳೆಲ್ಲಮನನಂತಹಯಹ್ರೇಷಾರವಂಗಳಿಂ ತೆಕ್ಕನೆ ತೀವೆ ಭುವನತಳಮೆಲ್ಲಂ ತುರಂಗಮಯಮಾಗೆ ಪೊಱಮಟ್ಟು ಶಿಪ್ರಾನದಿಯಂ ದಾಂಟಿ ಯೋಜನತ್ರಯದನಿತಂ [1]ಪೋಗಿ ತೃಣಜಲಸಮೃದ್ಧಮಾದೆಡೆಯೊಳ್ ಬೀಡುಗೆ[1]ಯ್ದು ತನ್ನೊಳಿಂತೆಂದಂ

ಎನಗೆನಸುಂ ಲಜ್ಜಿಸಿ ಪೋ
ಪನ ಬೆನ್ನೊಳ್ ಪೋಗಿ ತೆಗೆದು ತಳ್ಕೈಸುತಮಾ
ತನದೊಂದು ಲಜ್ಜೆಯಂ ಕಳೆ
ದನುಭವಿಪೆಂ ಮತ್ಸಹೃತ್ಸಮಾಗಮಸುಖಮಂ ೧

ಆತನುಮಾನುಮಾಗಳೆ ಮದಾಗಮನೋದ್ಯತಹರ್ಷೆಯಂ ಮಹಾ
ಶ್ವೇತೆಯನೆಯ್ದೆ ಕಂಡು ಬೞಿಕಂತೆ ತದಾಶ್ರಮದೊಳ್ ತುರಂಗ ಸಂ
ಘಾತಮುಮಂ ನೃಪಾತ್ಮಜರುಮಂ ನಿಲಿಸಿಟ್ಟೊಲವಿಂದಮಾ ಮಹಾ
ಶ್ವೇತೆಯ ಬೇಗಮೊಯ್ಯೆ ಪುಗದಿರ್ಪೆವೆ ನಚ್ಚಿನ ಹೇಮಕೂಟಮಂ ೨

ವ॥ ಅಂತು

ಆಂ ಬಂದುದನಹಮಹಮಿಕೆ
ಯಿಂ ಬೇಗಂ ಪರಿದುಪೋಗಿ ಪರಮೋತ್ಸವದಿಂ
ದಂ ಬಿನ್ನವಿಪ ಜನಂ ಕಾ
ದಂಬರಿಯಿಂ ಮೆಚ್ಚುಗೊಳ್ಳದಿರ್ಕುಮೆ ಪಿರಿದುಂ ೩

ಎಂತೆಂತು ದಿಟಮೆ ನೀವೆನಿ
ತಂತರದೊಳ್ ಕಂಡಿರೆಲ್ಲಿದಂ ಬಂದನೆ ಭೂ
ಕಾಂತನೆನುತ್ತಂ ಬೆಸಗೊಳು
ತಂ ತಳವೆಳಗಾಗಿ [2]ತಣಿಪಿ[2] ನಿಜಪರಿಜನಮಂ ೪

---

1 ಪೋಗುತಮಚ್ಛೋದಮನೆಯ್ದಿದಂತೆ (ಕ) 2 ತರುಣಿ (ಕ)

ಬಿಸಿನೀಪತ್ರಂಗಳಂ ಭೋಂಕನೆ ತೊಲಗಿಸಿ ಮದ್ದರ್ಶನೋತ್ಪನ್ನಲಜ್ಜಾ
ರಸದಿಂದಂ ಮೇಲುದಂ ಪೆರ್ಮೊಲೆಗೆ ತೆಗೆವ ಭೂಷಾಮೃಣಾಳಂಗಳಂ ಪಿಂ
ಗಿಸಿ ತತ್ಕಾಲೋಪಜಾತ[1]ಪ್ರಚುರ[1]ಪುಲಕಮಂ ಭೂಷಣಶ್ರೀಗೆ ಪಕ್ಕಾ
ಗಿಸುವೀ ವ್ಯಾಪಾರಸಾರಂ ಸಮನಿಸುಗುಮೆ ಕಾದಂಬರೀ ದೇವಿಗಾಗಳ್ ೫

ಕದಪಂ ಪತ್ತಿರ್ದ ಶಯ್ಯಾಕಮಲಕುಮುದ ಕಿಂಜಲ್ಕಮಂ ತಳ್ತ ರೋಮಾಂ
ಚದಿನೀಡಾಡುತ್ತಮಣ್ಪಿಕ್ಕಿದ ಮಲಯಜಮಂ ಕೂಡೆ ಲಾವಣ್ಯಶೋಭಾ
ಸ್ಪದಮಪ್ಪಂಗಂಗಳೊಳ್ ನಾಣ್ ಪೊಡರೆ ತೊಡೆಯುತಂ ಬಿಟ್ಟು ಬೆನ್ನೆಲ್ಲಮಂ ಮು
ಚ್ಚಿದ ಕೇಶವ್ರಾತಮಂ ಮುಯ್ಪಿನೊಳಳವಡಿಸುತ್ತಿರ್ಕುಮೇ ಕಂಡೊಡೆನ್ನಂ ೬

ಕಣ್ಗುಡಿತೆಗಳಿಂದಾಕೆ ಪ
ವಣ್ಗಿಡಾ ಬಾಷ್ಪವಾರಿಯಂ ಸುರಿಯುತ್ತಂ
ಕಣ್ಗೊಳಿಸದಿರ್ಕುಮೇ ಪೇೞ್
ಮಾಣ್ಗಿಂ ಮದನಾಗ್ನಿಯೆಂದು ವದಿಪುವ ತೆಱದಿಂ ೭

ವ॥ ಆ ಸಮಯದೊಳ್ ಸಂಭ್ರಮಂಬೆರಸು ಮುನ್ನಿರ್ದ ಕುಸುಮಶಯನಮಂ ಪಿಂದಿಕ್ಕಿ ಕಂಪಿಸುತ್ತಮೆನಗಿದಿರೆಟ್ಟಿ ಕಾದಂಬರೀದೇವಿಯುಂ ಕಣ್ಣಾರೆ ನೋಡಿ ಕಣ್ಪಡೆದುದರ್ಕೆ ಸಾಫಲ್ಯಮಂ ಸಾಧಿಸುವೆನನಂತರಂ

ಚರಣನತೆ ಪತ್ರಲೇಖೆಯ
ನಿರದೆತ್ತುವ ವಿನಯವಿನತೆ ಮದಲೇಖೆಯನಾ
ದರಿಸುವ ಕೇಯೂರಕನಂ
ಬರೆತೆಗೆದಪ್ಪುವ ಸುಖಕ್ಕೆ ನೆಲೆಯೆನಿಸಿರ್ಪೆಂ ೮

ವ॥ ಅನಂತರಮಾ ಮಹಾಶ್ವೇತೆಯುಮಖಿಲಜನಸಮೂಹಮುಂ ವಿವಾಹಮಂಗಳಮನೆಸಗೆ ಕಾದಂಬರಿಯೊಳ್ ಕೂಡಿ ಹೃದಯಜನ್ಮನಿವಾಸಮೆನಿಸಿದಾ ವಾಸಭವನಕ್ಕೆ ಸುರಭಿಕುಸುಮಧೂಪಾನುಲೇಪನಾಮೋದಿತಾಂಗನೆಂ ಗಂಧರ್ವಕನ್ಯಾಕರಗ್ರಹಣಪೂರ್ವಕಂ ಬಂದಾಕೆವೆರಸು ದಳಿಂಬದೊಳ್ ಕುಳ್ಳಿರ್ದು ಕಿಱುದುಬೇಗಕ್ಕೆ ಕೃತನರ್ಮಾಲಾಪೆಯಪ್ಪ ಮದಲೇಖೆ ಮೆಲ್ಲನೇನಾನುಮೊಂದು ನೆವದಿಂ ಪೊಱಮಟ್ಟು ಪೋಗೆ

ನವಲಜ್ಜಾಭಾರನಮ್ರಾನನೆಯನುರದೊಳೊತ್ತಂಬದಿಂದೊತ್ತಿ ಸರ್ವಾಂ
ಗವನೆನ್ನಂಗಂಗಳೊಳ್ ಮೆಯ್ಗರೆದುವೆನಿಸಿ ಮೆಯ್ಯಾರೆ ತಳ್ತಪ್ಪಿ ದೇವ
ರ್ಗವಣಂ ಕಯ್ಗೊಡದಂತಪ್ಪವಳಧರಸುಧಾಸಾರಮಂ ತೃಪ್ತಿಪರ್ಯಂ
ತವಲಂಪಿಂ ಪೀರ್ದು ಮಧ್ವಲ್ಲಭೆಯ ಸುಸಿಲ ಸೈಪಿಂ ಕೃತಾರ್ಥಾತ್ಮನಪ್ಪೆಂ ೯

1 ಪ್ರಕರ (ಕ)

ಎನಸುಂ ಮೀನೇಕ್ಷಣಂ ಸೋಲದ ರಸದೊದವಿಂ ಸೊರ್ಕಿ ಬೆಂಡೇಱುವನಂ ನ
ಚ್ಚಿನಮುಗ್ಧಾಲಾಪವಿಂಪಂ ಕಱಿದು ಬಱಿತುದೆಂಬನ್ನೆಗಂ ಬತ್ತಿರಲ್ ಬಾಯ್
ಮನದೊಳ್ ತೀವಿರ್ದ ಮೋಹಾಮೃತರಸಮನೆ ಸರ್ವಾಂಗಮುಂ ಚಾಗವಿಕ್ಕಿ
ತ್ತೆನಿಸಲ್ ಘರ್ಮಾಂಬು ತಳ್ತೊಪ್ಪಲುವನುನಯದಿಂದಾಕೆಯೊಳ್ ಕೂಡಿದಪ್ಪಂ ೧೦

ವ|| ಅದಲ್ಲದೆಯುಮಖಿಳಜನ ಸುಲಭಮಾಗಿಯುಂ ಯೋಗ್ಯೈಕಗಮ್ಯಮುಂ ಸ್ಪರ್ಶವಿಷಯಮಾಗಿಯುಂ ಹೃದಯಗ್ರಾಹಿಯುಂ ಮೋಹನಮಾಗಿಯುಂ ಇಂದ್ರಿಯ ಪ್ರಸಾದಸಂಪಾದಕಮುಮುದ್ದೀಪನಮಾಗಿಯುಂ ಮದನದಹನನಿರ್ವೃತಿಕರಮುಂ ಉಪ ಜಾತವಿಷಮೋಚ್ಛ್ವಾಸಶ್ರಮಸ್ವೇದಮಾಗಿಯುಂ ಮಹಾಹ್ಲಾದಕಾರಿಯುಮನುಘೂಯ ಮಾನಮಾಗಿಯುಂ ಉತ್ಪಾದಿತಾನುಭವಸ್ಪೃಹಮುಂ ಸಹಸ್ರವಾರಾನುಭೂತಮಾಗಿಯು ಮಪುನರುಕ್ತಮುಂ ಅತಿಸ್ಪಷ್ಟಮಾಗಿಯುಮನಿರ್ದೇಶ್ಯಸ್ವರೂಪಮುಮಸಂಸ್ಪರ್ಶನಮನು ಪಮರಸಮನಾಖ್ಯೇಯಪ್ರೀತಿಕರಮುಮಪ್ಪ ಸುರತಸುಖಮಂ ಬೇಱೊಂದು ಪರಮಾ ನಂದಸುಖಮನಾಕೆಯೊಳನುಭವಿಸಿ ರತಾವಸಾನಸಮಯದೊಳ್

ಅಮೃತಲವಲಲಿತಮಾದ
ತ್ತಮೃತದ್ಯುತಿಬಿಂಬಮೆನಿಪ ನಿರ್ಭರ ಸುರತ
ಶ್ರಮಜಲಲವಲಲಿತಮನವ
ಳಮುಖೇಂದುವನಡರೆ ನೋಟ್ಟಿ ಸೈಪಂ ಪಡೆವೆಂ ೧೧

ವ|| ಮತ್ತಮೆಳವೆಂಡಿರ ತಂಡದಲತಗೆಯೂಡಿದಡಿವಜ್ಜೆಗಳಿಂದಚ್ಚಿಱಿದಪಚ್ಚೆ ಯ ಪಾಸಱಿಗಳುಮಂ ಕೇಗುವ ಸೋಗೆಗಳ ಕಳಕಳಂಗಳಿಂ ತೆಕ್ಕನೆ ತೀವಿದ ತಮಾಲತ ರುಗಳುಮಂ ಪೊಸವಿಸಿಲ ಪೊಳಪಿನಿಂ ನುಣ್ಣನುಜ್ಜಳಿಪ ರನ್ನದೆಳವೆಳಗಿನ ಬಳಗದಿಂ ಬಣ್ಣಿಸಿ ಸುರಶರಾಸನಂಗಳನೆಟಲಿಕ್ಕಿದಂತೆ ನಿಮಿರ್ವ ನಿರ್ಝರಂಗಳುಮನಪ್ಪುಕೆಯ್ದು ಕೇಳೀಪರ್ವ ತನಿತಂಬಂಗಳೊಳಂ ಪೂಗೊಳಂಗಳೊಳ್ ತೇಂಕಿ ಪಾಱುವ ಪಕ್ಕಿಗಳೆಱಂಕೆ[1]ವಿಡಿದುದಿರ್ವ[1] ತಂಪನೀವ ತುಂತುರ್ವನಿಯ ತುಱುಗಲಮುಂ ತಳಿರ ನನೆಯಲರ ಕಾಯ ತನಿವಣ್ಣ ಬಣ್ಣಂ ಗಳಿಂ ಚಿತ್ರಿಸಿದಂತಿಡಿದಡರೆಗೋ[2]ಡುಗಳೊಳಂಚಿತಮಾದ[2]ಗೊಂಚಲುಗಳುಮನಲರ್ವಂಡ ನುಂಡು ತನಿಸೊರ್ಕಿಂ ಸೊರ್ಕಿ ತೆಱಂದಿರಿದು ಪಾಱುವ ಪೆಣ್ದುಂಬಿಗಳ ಬಳಗಮನೊಳ ಕೊಂಡ ಲತಾಮಂಟಪಂಗಳೊಳಂ ತಳರೆ ತಾಗುವ ತೆರೆದುಱುಗಲಲೆಪದಿಂ ಸೂಸಿ ಪಾಸಿ ಱದು ಬಣ್ಣವುರಂ ತೀವಿದಂತೆ ಬೆಡಂಗುವಡೆದ ಬಣ್ಣವಣ್ಣಿಗೆಯನೀರ್ವೂಗಳ ರಜಂಗಳು ಮನೊಳದೊಂಡಿನ ಪಾಲ್ಗಳುಮಂ ಪೀರ್ದಿಂಗೊರಲ್ಗಳಾದ ನೀರ್ವಕ್ಕಿಗಳ ಸುಸಿಲಮಸಕ ದಿಂಚರಂಗಳುಮಂ ನೀರಾಟವಾಡುವ ಗಾಡಿಕಾರ್ತಿಯರ ಘನಜಘನಂಗಳ ಪೆರ್ಮೊಲೆಯ

1 ಬಿಡಿಗಾಲಗೊಡಿಸುವ (ಕ) 2 ಹಂಚಿನಮುಲ್ಲದ (ಕ)

ಪೊರ್ಕುಳಿಯಿಂ ಪಱಿವಱಿಯಾದ ಪೆರ್ದೆರೆಗಳುಮಂ ತಳಿದ ಪೂಗೊಳಂಗಳೊಳಂ ಪಲ ತೆಱದ ರಮಣೀಯಪ್ರದೇಶಂಗಳೊಳಮೊಂದುಪೊತ್ತಗಲದೆ ಮೆಯ್ಗೆ ಮೆಚ್ಚಿದಂತೊಚ್ಚತಂ ಕಾದಂಬರಿಯೊಳ್ ನೆರೆದು ನಿಸರ್ಗರಮಣೀಯಮಪ್ಪ ಯವ್ವನಮಂ ರಮಣೀಯತರ ಮಾಗೆ ನೆಗಱುತ್ತಮಿರ್ಪೆನದಲ್ಲದೆಯುಂ

ಮನದನ್ನಳೆನಿಸಿ ನೆಗೞ್ವೆ
ನ್ನಿನಿಯಳ್ಗಾಂ ಪೇೞ್ದನಂತರಂ ಮಾಡಿಸುವೆಂ
ಮನವೊಸೆದಾ ವೈಶಂಪಾ
ಯನಂಗೆ ಮದಲೇಖೆಯೊಳ್ ವಿವಾಹೋತ್ಸವಮಂ ೧೨

ವ|| ಎಂದಿಂತನಂತ ಚಿಂತಾತರಂಗಂ ಪಲುಂಬಿ ಪಂಬಲಿಸುತ್ತುಂ ನಿಚ್ಚ ಪಯಣಂಗಳಿಂ ಯುವರಾಜನನೇಕ ಯೋಜನಂಗಳಂ ಪೆಱಗಿಕ್ಕಿ ಪೋಗುತ್ತಮಿರೆಯಿರೆ

ವಸುಧಾಚಕ್ರಕ್ಕೆ ಕಾಲಾಯಸಗೃಹನರಣಂ ಚಂದ್ರಬಿಂಬಕ್ಕೆ ರಾಹು
ಗ್ರಸನಂ ಚಂಡಾಂಶುಬಿಂಬಕ್ಕವಮೆಯ ರಜನೀಪ್ರೋದ್ಗಮಂ ವಜ್ರವಹ್ನಿ
ಪ್ರಸರಕ್ಕುದ್ದಾಮ ಧೂಮೋದಯಮಖಿಲವಿಯೋಗಾತುರರ್ಗಂಧಕಾರೋ
ಲ್ಲಸನಂ ತಾನೆಂಬಿನಂ ಬಂದುದು ಬಹುಳ ತಟಿಜ್ಜಾಲಮಂಭೋದಕಾಲಂ ೧೩

ತಿರುವಂ ಮುಪ್ಪುರಿಗೊಂಡು ಮಿಳ್ಳಿಸುವ ಮಿಂಚಂ ಮಾಡಿ ನೀಡುಂ ಭಯಂ
ಕರಮಾಗೇಱಿಸಿಕೊಂಡು ಧನುವಂ ಧಾರಾಶರಾಸಾರಮಂ
ಸುರಿಯುತ್ತುಂ ಘನಘೋಷಗರ್ಘರತರ ಪ್ರಧ್ವಾನದಿಂದಾರ್ದು ಪಾ
ರ್ದಿರದುದ್ದಾಮ ನಿದಾಘಮಂ ಬೆದಱೆ ಬೆಂಕೊಂಡತ್ತು ಮೇಘಾಗಮಂ ೧೪

ವ|| ಅಂತು ಬಂದ ಮೇಘಾಗಮದೊಳ್ ವಿಯೋಗಿಜನಂಗಳ ಮೊಗಂಗಳುಂ ದಿಗಂತರಂಗಳುಮೊಡನೊಡನೆ ಕತ್ತಲಿಸಿದುವವರ ಮನಮುಂ ಮರಾಳಕುಲಮುಮೊಡ ನೊಡನೆ ಬೆದಱಿದುವವರ ನಿಶ್ವಾಸವಾತಂಗಳುಂ ಧಾರಾಕದಂಬಂಗಳುಮೊಡನೊಡನೆ ಪೊಣ್ಮಿದುವವರ ಕಣ್ಮಲರ್ಗಳುಂ ಕಾರಮುಗಿಲ್ಗಳುಮೊಡನೊಡನೆ ವಾರಿಧಾರೆಗಳಂ ಸುರಿದು ವವರ ಹೃದಯಂಗಳುಂ ನದೀನದಂಗಳುಮೊಡನೊಡನುತ್ಕಲಿಕೆಗಳನೊಳಕೆಯ್ದುವವರ ರಣರಣಕಾವಸ್ಥೆಗಳುಂ ಕೆಂದಳಂಗಳುಮೊಡನೊಡನೆ ವಿಜೃಂಭಿಸಿದುವವರ ಮನೋರಥಂ ಗಳುಂ ಮೇಘವರ್ಣಂಗಳುಮೊಡನೊಡನೆ ಬಹುವಿಧಂಗಳಾದುವಂತುಮಲ್ಲದೆಯುಂ

ಧರೆಯೊಳ್ ಶಾಲೂರಸಂಘಂ ಪವನಪಥದೊಳಂಭೋಧರಾನೀಕಮಾಶಾಂ
ತರದೊಳ್ ಜಂಝಾಸಮೀರಂ ವನಸಮುದಯದೊಳ್ ಕೇಕಿಸಂಘಾತಮುರ್ವೀ
ಧರಚಕ್ರಪ್ರಾಂತದೊಳ್ ನಿರ್ಝರತತಿ ತಟಿನೀವ್ಯೂಹದೊಳ್ ಪೂರಮಾರಂ
ವಿರಹಿವ್ರಾತಂ ಬಿಗುರ್ವಂತೊಡನೊಡನೆ ರುತಂ ಪರ್ವಿಸುತ್ತಿರ್ದವೆತ್ತಂ ೧೫

ಬಯಲೊಳ್ ಪರ್ವುಗೆದೋಱಿ ನುಣ್ಬುಸಲೆಯೊಳ್ ಮೆಯ್ದೋಱಿ ನೀರ್ದಾಣದೊಳ್
ನಯಮಂ ಬೀಱಿ ಮಹೀಧ್ರದೊಳ್ ಮಸಕಮಂ ಕೈಕೊಂಡು ಶಾಖಾಸಮು
ಚ್ಚಯದೊಳ್ ಸಂದಣಿಗೊಂಡು ತಾಳವನದೊಳ್ ಕಾರ್ಕಶ್ಯಮಂ ಮಾಡಿಕೊಂ
ಡು ಯಥಾ[1]ಸಾರನಿಪಾತ[1]ಮುಣ್ಮಿದುದು ಮೇಘೋನ್ಮುಕ್ತಧಾರಾರವಂ ೧೫

ಸ್ಫುರಿತ ತಟಿತ್ಪ್ರಭಾಪ್ರತತಿ ಕತ್ತಲೆಯಂ ಸುರಗೋಪಕಾಂತಿ ಪಾಂ
ಡುರತೆಯನಂಬುವಾಹತತಿ ಶೋಷಣಮಂ ಘನವಾರಿಧಾರೆ ನಿ
ರ್ಭರಪರಿತಾಪಮಂ ಕುಟಜಕುಂದ ನವೋದ್ಗಮವಾಟಿ ರಾಗಮಂ
ವಿರಹಿಜನಕ್ಕೆ ಮಾಡಿದುದು ನೋಡುವೊಡೆಯ್ದೆ ವಿರುದ್ಧಮೆಂಬಿನಂ ೧೬

ವ|| ಅಂತು ಬಂದ ಮೞೆಗಾಲಮಂ ಬಗೆಯದೆ ಸುಹೃದ್ದರ್ಶನಕುತೂಹಲದೊಳಂ ಕಾದಂಬರೀಸಮಾಗಮೌತ್ಸುಕ್ಯದೊಳಮೆಲ್ಲಿಯುಂ ತಡೆಯದೆ ಪಲವು ಪಯಣಂಗಳಿಂ ಚಿತ್ರರಥವನಕ್ಕೆ ಸಮೀಪವೆನೆ ಬರ್ಪಿನವನ್ನೆಗಂ ಪತ್ರಲೇಖೆಯಂ ಕಳುಪಿ ಮಗುೞ್ದಿಂಬಂದು ಪೊಡಮಟ್ಟ ಮೇಘನಾದನನಿದಿರೊಳ್ ಕಂಡು ವೈಶಂಪಾಯನವಾರ್ತಾಕರ್ಣನೋತ್ಸುಕನಾಗಿ ಚಂದ್ರಾಪೀಡನಿಂತೆಂದಂ

ಪ್ರಿಯಸಖವಾರ್ತೆಯಂ ತಿಳಿಯೆಬಿನ್ನವಿಸನ್ನೆಗಮಿರ್ಕೆ ಪತ್ರಲೇ
ಖೆಯ ದೆಸೆ ಕಂಡುದುಂಟೆ ಸಖನೇಂ ಸುಖಮಿರ್ದನೆ ತದ್ವನಾಂತದ
ಲ್ಲಿಯೆ ನೆಲೆಸಿರ್ದ ಕಾರಣವದೇಂ ನಿನಗಾತನದೇನನೆಂದನೆ
ನ್ನಯ ಬರುತಿರ್ದುದಂ ವಿದಿತಮಾದುದೆ ಕಾಣ್ಬೆನೆ ಪೋದೊಡಾತನಂ ೧೭

ವ|| ಎಂದು ಬೆಸಗೊಳ್ವುದುಂ ದೇವರ್ ಬೆಸಸಿದಲ್ಲಿವರಂಪೋಗಿ ಪತ್ರಲೇಖೆಯಂ ಕಳುಪಿಬಂದೆನಲ್ಲದೆ ವೈಶಂಪಾಯನ ವೃತ್ತಾಂತಮನಱಿಯೆನೆಂದು ಮೇಘನಾದಂ ನುಡಿಯೆ ಚಂದ್ರಾಪೀಡಂ ಸುಹೃತ್ಸ್ನೇಹಕಾತರಹೃದಯನಾಗಿ ಬೇಗಂ ನಡೆಗೊಂಡು ಚಿತ್ರರಥವನೆಯ್ದಿ

ತೊಲಗುಗುಮೊ ಕೆಳೆಯನೋರ್ದೆಸೆ
ಗೆ ಲಜ್ಜೆಯಿಂ ನಮ್ಮ ಬರವುಗೇಳ್ದೊಡೆನುತ್ತಾ
ಕುಲಮತಿ ಯುವರಾಜಂ ರಾ
ಜಲೋಕಮಂ ಬನದ ಪೊಱಗೆ ಕಾಪಂ ಪೇೞ್ದಿಂ ೧೮

ವ|| ಅನಂತರಂ ತಾನುಮಾ ವನಮಂ ಪುಗುವಲ್ಲಿ ಜಲಧರಗಳಿತಧಾರಾಜಲಕ್ಲಿನ್ನತೀರತರುತಳಮುಮಾಪ್ಲಾವಿತೋಪಾಂತಶಾಡ್ವಲಮುಂ ಅನವರತರೋಧೋಜಲಪ್ರವೇಶ

---
1 ದಾರನಿವಾರ (ಕ)

ಕಲುಷಿತಪ್ರಾಂತಮುಂ ಅವಶೀರ್ಯಮಾಣೋದ್ದಂಡಕುಮುದದಳಗಹನಮುಂ ಮನೋಜ್ಞಕಮಲಷಂಡಮುಂ ಜರ್ಝರಿತಕಲ್ಹಾರಕುವಲಯಮುಂ ಉದ್ಭ್ರಾಂತಭ್ರಮರಮುಂ ಉಡ್ಡೀನಹಂಸಸಾರ್ಥಮುಂ ಉತ್ಕಂಪಿತ ಕಾದಂಬಕದಂಬಕಾಶ್ರಯಮಾಣೋಪಕೂಲನಡ್ವಲಮುಂ ಅವಶಿಷ್ಟದಳನಿಲೀಯಮಾನೋಚ್ಚಕಿತ ಚಕ್ರವಾಕಯುಗಮುಮೆನಿಸಿ ತಜ್ಜಲದೋಪಹತಿಯಿಂ ಬೇಱೊಂದು ಸರೋವರಮೆಂಬ ಸಂದೆಯಮಂ ಸಂದಿಸುವಚ್ಛೋದ ಸರೋವರಮಂ ಕಂಡು

ವನಾಂತರದ ಪೆರ್ಮರಂ ಪೊದಱು ಪಳ್ಳ ಕೊಳ್ಳಂಗಳೆಂ
ಬಿನಿತ್ತೆಡೆಯೊಳಂ ತೊಱಲ್ದವನಿಪಾಲರುಂ ತಾನುಮಾ
ವನಾಂತರದೊಳಿತ್ತಲುಂ ಸುೞಿದು ಸುತ್ತಲುಂ ಸುತ್ತಿ ಕಂ
ಡನಿಲ್ಲ ಸಖನಿರ್ದ ಚಿಹ್ನಮುಮನಾ ನರೇಂದ್ರಾತ್ಮಜಂ ೧೯

ವ॥ ಅಂತು ವೈಶಂಪಾಯನನನೆಲ್ಲಿಯುಮಱಿಸಿ ಕಾಣದಾತನವೃತ್ತಾಂತಮಂ ಮಹಾಶ್ವೇತೆಯಾದೊಡಱಿಗುಮೆಂದು ಚಂದ್ರಾಪೀಡದೇವಂ ತದಾಶ್ರಮನೆಯ್ದೆವಂದು ಕಿಱಿದಾನುಂ ದೂರದೊಳ್ ನಿವೇಶಿತು ತರಂಗಸೈನ್ಯನಪನೀತಸಮಾಯೋಗನಾಗಿ ಪಾವಿನೆರೆಯ ದೊರೆಯ ದುಕೂಲಮಂ ಪೊದೆದು ಯಥಾಸ್ಥಿತಪರ್ಯಾಣಕಮಪ್ಪಿಂದ್ರಾಯುಧಮನೇಱಿ ಮಹಾಶ್ವೇತಾಶ್ರಮಮಂ ಪೊಕ್ಕು ತುರಂಗಮದಿನವತರಿಸಿ ಪೆಱಗೆತೆಗೆದು ಬರ್ಪಿಂದ್ರಾಯುಧದ ಬೞಿವಿಡಿದು ಮಹಾಶ್ವೇತಾವಲೋಕನಕುತೂಹಲದಿಂದೆ ಪರಿಜನಂ ಬರುತ್ತಮಿರೆ ಗುಹಾದ್ವಾರಮನೆಯ್ದೆವರ್ಪಲ್ಲಿ

ದೆಸೆಗೆಟ್ಟುದ್ಬಾಷ್ಪದಿಂದಂ ತರಳಿಕೆ ಪಿಡಿದೆಂತಾನುಮಾತ್ಮಾಂಗಮಂ ನೆ
ಮ್ಮಿಸೆ ಜೋಲ್ದಂತಾ ಗುಹಾದ್ವಾರದ ಶಿಲೆಯೊಳೆ ಮನ್ಯೂದ್ಗಮಕ್ಷೋಭದಿಂ ಕಂ
ಪಿಸುತಂ ಪ್ರಾವರ್ಷಧಾರಾವಳಿವೊಲೊಗೆವ ಕಣ್ಣೀರ್ಗಳೊಳ್ ತೇಂಕುತಂ ದುಃ
ಖಸಹಸ್ರೋದ್ವೇಜನಾಧೋಮುಖಿಯೆನಿಪ ಮಹಾಶ್ವೇತೆಯಂ ಕಂಡನಾಗಳ್ ೨೦

ವ॥ ಅಂತು ಕಂಡು ಭೋಂಕೆನಲಾಶಂಕಿತಹೃದಯನಾಗಿ

ಪಿರಿದುಂ ಹರ್ಷಮನೆನ್ನಯ
ಬರವಿಂದಂ ಮಾಡದೀ ಮಹಾಶ್ವೇತೆಯದೊಂ
ದಿರವಿಂತಿದೇನೊ ಕಾದಂ
ಬರಿಗೇನಾನೊಂದನಿಷ್ಟಮಾಗಲೆವೇೞ್ಕುಂ ೨೧

ವ॥ ಎಂದು ತನ್ನೊಳ್ ಬಗೆಯುತ್ತಮೊಯ್ಯನೊಯ್ಯನೆ ಪೋಗಿ ಶಿಲಾತಲದೊಳ್ ಕುಳ್ಳಿರ್ದು ಬಾಷ್ಪವಿಷಣ್ಣವದನನಾಗಿ ತರಳಿಕೆಯನಿದೇನೆಂದು ಬೆಸಗೊಳ್ವುದುಮಾಕೆ

ಕುಮಾರಂ ಬಿಜಯಂಗೆಯ್ದನೆಂದು ಮಹಾಶ್ವೇತೆಗರಿವುವುದುಮಾ ಕಾಂತೆಯನುಪಸಂಕ್ಷಿ ತಮನ್ಯುವೇಗೆಯುಂ ಗದ್ಗದಿಕಾವಗೃಹ್ಯಮಾಣಕಂಠೆಯುಮಾಗಿ ಕುಮಾರನನಿಂತೆಂದಳ್.

ನಿನಗೇವೇಳ್ದಪಳೀಕೆ ಕೇಳಿಸಿದೆನಾಂ ಮದ್ದುಃಖಮಂ ಮುನ್ನೆ ನಿ
ನ್ನನದುಃಖಶ್ರವಣಾರ್ಹನಂ ಸಕಲದುಃಖಾವಾಸೆಯೆಂ ಜೀವಿತ
ಕ್ಕೆ ನಿಬದ್ಧಾಸೆಯನತ್ರಪಾತ್ಮಿಕೆಯನೀಗಳ್ ಮತ್ತೆಯುಂ ಕೇಳಿಸ
ಲ್ಕೆನುಗೆಯ್ದಪ್ಪೆನಿದೊಂದು ದುಶ್ರವಮುಮಂ ರಾಜಾಧಿರಾಜಾತ್ಮಜಾ ೨೨

ವ॥ ಅದೆಂತೆನೆ ನೀಮುಜ್ಜಯಿನಿಗೆ ಬಿಜಯಂಗೆಯ್ದಿರೆಂಬುದನಾಂ ಕೇಯೂರಕನ ಪೇೞ್ಕೆಯಿಂದಱಿದು ಭೋಂಕನೆ ವಿದೀರ್ಣಹೃದಯೆಯಾಗಿ ಚಿತ್ರರಥಮನೋರಥಮುಂ ಮದಿರಾದೇವಿಯ ಮನೋಭಿಲಷಿತಮುಂ ಮದೀಯ ಸಮೀಹಿತಮುಂ ಕಾದಂಬರಿಯ ಮನಃಪ್ರಿಯಸಮಾಗಮನನಿರ್ವೃತಿಯುಂ ಸಮನಿಸಿತಿಲ್ಲೆಂದು ಮನಂನೊಂದು ವೈರಾಗ್ಯದಿಂ ಮದೀಯ ಪ್ರಿಯಸಖಿಯ ಕೂರ್ಮೆಯ ತೊಡರ್ಪಂ ಪಱಿದು ಮಹಾಘೋರತರತಪಶ್ಚ ರಣಾರ್ಥಂ ಮತ್ತಮಿಲ್ಲಿಗೆವಂದಿರ್ದೆನನ್ನೆಗಮೊಂದು ದಿವಸಂ

ನಸುದೋಱುತ್ತಿರ್ದ ನುಣ್ಮೀಸೆಗಳುಮತಿಮೃದುಸ್ನಿಗ್ಧಕೇಶಂಗಳುಂ ಕ
ಣ್ಗೆಸೆಯಲ್ ಮೂಲೋಕಮಂ ಯವ್ವನಚತುರತರಾಪಾಂಗದಿಂದೊಂದು ಸೀವುಂ
ಲ್ಗೆಸೆವನ್ನಂ ಮಾಡುತಂಗಪ್ರಭೆಯೊಳಖಿಲ ಕಾಂತಾರಮಂ ಕೂಡೆ ತೇಂಕಾ
ಡಿಸುತಂ ವಿಪ್ರೋತ್ತಮಂ ನಿನ್ನಯ ಹರಯದವಂ ಬಂದನೊರ್ವಂ ಕುಮಾರಂ ೨೩

ವ॥ ಅಂತು ಬಂದಂತಃಕರಣದಿನುನ್ಮತ್ತನಾದಂತೆಯುಂ ಸಕಲೇಂದ್ರಿಯಂಗಳಿಂ ವಿಕಲನಾದಂತೆಯುಂ ಉತ್ತರಳಮುಖನುಂ ಉತ್ಫುಲ್ಲಿತಾಕ್ಷನುಮೆನಿಸಿ ಬನದೊಳಲ್ಲಿಗಲ್ಲಿಗೆ ಬದ್ಧಲಕ್ಷದೃಷ್ಟಿಯಿನೇನಾನುಂ ಕೆಟ್ಟುದನಱಸುವಂತೆನ್ನ ನೋಡುತ್ತಮೆಯ್ದಿವಂದು ಕಂಡ ಱಿವನಂತೆಯುಮೇನಾನುಮಂ ಪ್ರಾರ್ಥಿಪನಂತೆಯುಂ ಬೆಸಗೊಳ್ಳದೆಯುಂ ನಿಜಾ ವಸ್ಥೆಯಂ ನಿವೇದಿಸುವಂತೆಯುಂ ಲಜ್ಜಿಸುವಂತೆಯುಮುಮ್ಮಳಿಸುವಂತೆಯುಮಾಗಿ

ಸುರಿತರೆ ಬಾಷ್ಪಪೂರಮೆಮೆಯಿಕ್ಕದೆ ಕೆನ್ನೆಯನೆಯ್ದೆ ನೀಳ್ದ ಬಿ
ತ್ತರಿಪ ಬಟಿಲ್ಪೆಳರ್ಪೆರಸು ಸುತ್ತುವ ಮುತ್ತುವಪಾಂಗಮಾಲೆಯಿಂ
ಬರೆತೆಗೆದಪ್ಪನಪ್ಪಿದಪನೆನ್ನೊಳಪೊಕ್ಕಪನೆಯ್ದೆ ಪೀರ್ದಪಂ
ಪಿರಿದುಮೆನಲ್ಕೆ ತದ್ವಿಜಕುಮಾರಕನೆನ್ನನೊಱಲ್ದು ನೋಡಿದಂ ೨೪

ವ॥ ಅಂತು ನೀಡುಂ ನೋಡುತ್ತಮೆನ್ನನಿಂತೆಂದಂ

ಭುವನದೊಳೆಲ್ಲಂ ತಂತ
ಮ್ಮ ವಯೋರೂಪಕ್ಕೆ ತಕ್ಕುದಂ ನೆಗೞ್ದೊಡೆ ಮೆ
ಚ್ಚುವರೆಳವೆಗಮುಸದೃಶಮೆನಿ
ಸುವನುಷ್ಠಾನದೊಳಿದೇಕೆ ನಿನ್ನಯ ಯತ್ನಂ ೨೫

ಇರಿಸಲ್ಕೆ ತಕ್ಕುದೊಲವಿಂ
ದುರದೊಳೆನಿಪ್ಪೊಂದು ಮಾಲತೀಮಾಲಿಕೆಯೊಳ್
ದೊರೆಯೆನಿಪ ನಿನ್ನ ತನುವಂ
ಕೊರಗಿಪುದೆ ಲತಾಂಗಿ ಘೋರತರ ತಪದಿಂದಂ ೨೬

ಸುಮನೋಬಾಣ[1]ಜ[1]ಯಪ್ರದಾಯಕತಮಂ ನಿನ್ನೀ ತ್ರಿಲೋಕಾಭಿರಾ
ಮಮೆನಿಪ್ಪಾಕೃತಿ ದೇವದುರ್ಲಭತರಂ ನಿನ್ನೀ ಜಗದ್ವಂದನೀ
ಯಮೆನಿಪ್ಪದ್ವಯವಪ್ರತರ್ಕ್ಯಮಹಿಮಂ ನಿನ್ನೀ ಮಹೋದಾರಮ
ಪ್ರಮಿತೈಶ್ವರ್ಯಮೆನಲ್ಕೆ ಮತ್ತೆ ತಪದಿಂ ತನ್ವಂಗಿ ನೀಂವೇೞ್ಪುದೇಂ ೨೭

ಸರಸಮೃಣಾಳಿಕೆಯಂ ಮೃದು
ತರ ತುಹಿನಂ ಕೊರಗಿಪಂತೆ ಶಾಂತಿರಸಕ್ಕಾ
ಗರಮೆನಿಪ ತಪಮೆ ನಿನ್ನಂ
ಕೊರಗಿಸುತಿರೆ ತರುಣಿ ಪಿರಿದುಮಾಂ ಕೊರಗಿದಪೆಂ ೨೮

ಸುಂದರಿ ಜೀವಲೋಕದ ಸುಖಕ್ಕೆ ಪರಾಙ್ಮುಖಿಯರ್ಕಳಾಗಿ ನಿ
ನ್ನೊಂದಿಗರೀ ತಪಕ್ಕೆಳಸಿದಂದು ಮನೋಜನ ಬಿಲ್ಲಬಲ್ಮೆ ಪೂ
ರ್ಣೇಂದುವಿನುಜ್ಜ್ವಳಿಕ್ಕೆ ಮಧುಮಾಸದ ಗೋಸನೆ ತುಂಬಿಯಿಂಚರಂ
ಬಂದೆಳಮಾವಿನೇೞ್ಗೆ ಬಗೆದಂದು ನಿರರ್ಥಕಮಾಗದಿರ್ಕುಮೆ ೨೯

ವ|| ಎಂದಿವು ಮೊದಲಾಗಿ ಮತ್ತಮನೇಕ ಚಾಟು ಚಪಲವಚನಂಗಳಂ ನುಡಿಯುತ್ತಮಿರೆ ಕೇಳ್ದು ಪುಂಡರೀಕದೇವನವೃತ್ತಾಂತದಿನಪೇತಕೌತುಕೆಯುಮುಪಗತಸುಖೆಯುಮವಧೀರಿತೋಪಭೋಗೆಯು[2]ಮಸಂಭೂತಪುರುಷಾನುರಾಗಿಯುಮಾಗಿರ್ಪೆನದು ಕಾರಣದಿಂ[3]

ನೀನಾರ್ಗೆ ಬಂದೆಯೆತ್ತಣಿ
ನೇನಂ ಬೆಸಗೊಳ್ವೆಯೆನ್ನನೆಂದಾತನನಂ
ತೇನುಮನಾಂ ಬೆಸಗೊಳ್ಳದೆ
ಮೌನದಿನೊರ್ದೆಸೆಗೆ ತೊಲಗಿದೆಂ ನೃಪತಿಲಕಾ ೩೦

1 ಭ (ಕ) 2 ಮುಪಸಂಖ್ಯಾತಪುಷ್ಪಾಗಿಲಾಗೆಯುಮುಪ್ಪದುಕಾರಣಂ (ಕ)

ತರಳಿಕೆ ದೇವತಾರ್ಚನಕೆ ಪೂದಿಱಯುತ್ತಿರಲಾಗಳೀಕೆಯಂ
ಕರೆದೆನಗೀ ದ್ವಿಜಂ ನುಡಿವನೊಂದುವಗೆಯ್ತುವ ಕಾನನಕ್ಕೆ ಮಂ
ದಿರವಿದು ಬೇಱದೊಂದೆನಿಸದಿರ್ದಪುದೀ ಗುಹೆಯುತ್ತ ಸಾರದಂ
ತಿರಲಿವನಂ ನಿವಾರಿಸು ಬೞದಂದೆನಸುಂ ಬೞಸಂದು ಪೊರ್ದುಗುಂ ೩೧

ವ॥ ಎಂದು ಪೇೞ್ವುದುಮವಳೆನ್ನತ್ತಲಾ ದ್ವಿಜಕುಮಾರನಂ ಸಾರದಂತು ನಿವಾರಿಸುತ್ತಮಿರೆಯಿರೆ

ಅದಯನೆನಿಪ್ಪ ಮನ್ಮಥನ ದುರ್ಜಯವೃತ್ತಿಯದೊಂದು ಪಾ
ಪದ ಫಲದಿಂ ವಿಧಾತೃವಶದಿಂ ಭವಿತವ್ಯತೆಯಿಂದಮಿಂತು ಮಾ
ಣದೆ ದಿವಸಕ್ಕಮಿಲ್ಲಿಗಸದಾಗ್ರಹದಿಂದಮೆ ಬಂದು ಪೊರ್ದಲ
ಣ್ಮದೆ ಮದನಾತುರಂ ಸುೞವನೆನ್ನಯ ಕಣ್ಬೊಲದೊಳ್ ನಿರಂತರಂ ೩೨

ವ॥ ಅಂತು ಸುೞಯುತ್ತಮಿರಲೊರ್ಮೆ ಯಾಮಿನೀಯಾಮತ್ರಯಸಮಯದೊಳುತ್ಸಾರಿತತಮಃಪಟಳಮುಮು[1]ದ್ದೀಪಿತ[1] ಮದನದಹನಮುಮುತ್ತೇಜಿತಮನೋಜಮಾರ್ಗಣಮುಮುದ್ದಳಿತವಿರಹಿಹೃದಯಮುಮುತ್ಖಂಡಿತಮಾನಿನೀಮಾನಮುಮುದ್ಬಾಷ್ಪೀಕೃತವಿರಹಿಜನಮುಮೆನಿಸಿ ಚಂದ್ರಿಕಾಪಯಃಪೂರಮನಿಂದುಮಯೂಖಂಗಳ್ ಸುರಿಯೆ ತರಳಿಕೆ ಮಱೆದು ನಿದ್ರೆಗೆಯ್ದಳೆನಗೆ ನಿದ್ರೆಬಾರದೆ ಸಂತಪ್ತಶರೀರೆಯಾಗಿ ಗುಹೆಯಂ ಪೊಱಮಟ್ಟೆನನ್ನೆಗಂ

ಅಲರ್ದಚ್ಛೋದನವೋತ್ಪಲಪ್ರಸರದಿವ್ಯಾಮೋದದೊಳ್ ಸಂದು ನಿ
ರ್ಮಲ ಚಂದ್ರದ್ಯುತಿವರ್ಷಹರ್ಷಿತ ಚಕೋರಾನಂದವಾರ್ಬಿಂದು ಸಂ
ಕುಲದೊಳ್ ಮಿಂದು ಚಲಲ್ಲತಾವಳಿಗೆ ಲಾಸ್ಯಾರಂಭಮಂ ತಂದು ತ
ಣ್ಣೆಲರೂದುತ್ತಿರಲಾನದರ್ಕೆಳಸಿ ಪಟ್ಟಿರ್ದೆಂ ಶಿಲಾಪಟ್ಟದೊಳ್ ೩೩

ವ॥ ಅಂತಿರ್ದ ಸುಧಾದ್ರ್ರಂಗಳಪ್ಪ ಕರಕೂರ್ಚಂಗಳಿಂ ದಿಗ್ಭಿತ್ತಿಗಳಂ ಧವಳಿಸುತ್ತಿರ್ದ ಸುಧಾಮಯೂಖನಂ ನೀಡುಂ ನೋಡಿ

ಅಮೃತಾಸಾರದಿನಾವಗಂ ತ್ರಿಭುವನಕ್ಕಾನಂದಮಂ ಮಾೞ್ಪ ತ
ನ್ನ ಮರೀಚಿಪ್ರಕರಂಗಳಿಂದನೆನಗೆಂತಾನಂದಮಂ ಮಾೞ್ಪನಂ
ತೆ ಮನಂಗೊಂಡು ಮದೀಯವಲ್ಲಭನೆನಿಪ್ಪಾ ಪುಂಡರೀಕಂಗವಾ
ತ್ಮಮರೀಚಿವ್ರಜದಿಂದೆ ಮಾಡುಗುಮೆ ಪೇೞಾನಂದಮಂ ಚಂದ್ರಮಂ ೩೪

1 ಕ್ಷಿಪಿತ (ಕ)

ಮಿಸುಗುವ ಚಂದ್ರಮಂಡಲದಿನಂದಿೞಿತಂದನ ದಿವ್ಯವಾಣಿಯುಂ
ಪುಸಿಯೆನಿಸಿತ್ತು ಮಾಯ್ದನಗೆ ಪಾಪಿಗೆ ಮೇಣ್ ದಯೆಯಿಂದೆ ಜೀವಿತ
ವ್ಯಸನಿನಿಯಂತೆ ಜೀವಿಸುತಮಿರ್ಕಿವಳೆಂದು ಮಹಾತ್ಮನೆನ್ನನಾ
ಱಿಸಿದನದೆಂತುಮೆನ್ನಯ ಸಮೀಹಿತಮಿಂತು ವಿಳಂಬಿಸಿರ್ಕುಮೆ ೩೫

ತನುವನದೊರ್ಮೆಯುಂ ಮಗುೞ್ದು ತೋಱಿಸಲಾಱನೆ ಪುಂಡರೀಕದೇ
ವನನಿರದೆತ್ತಿಕೊಂಡು ಗಗನಕ್ಕೆ [1]ಪರಾಸುವನಾವನ[1]ಕ್ಕೆ ಭೋಂ
ಕನೆ ಪಿಡಿದೊಯ್ದನೇವನೊ ಮನಃಪ್ರಿಯನಕ್ಕಟ ಜೀವಿಸುತ್ತಮೆಂ
ತೆನಗೆ [2]ಕೃಪಾಬ್ಧಿ ತಾರನೆ[2] ಕಪಿಂಜಲಕಂ ಪ್ರಿಯನೊಂದುವಾರ್ತೆಯಂ ೩೬

ವ || ಎಂದಿವು ಮೊದಲಾಗಿ ಪಲವುಮಾಲಜಾಲಂಗಳಂ ದುರ್ಜೀವಿಕಾಗೃಹೀತೆಯ ನೆನ್ನೊಳ್ ಚಿಂತಿಸುತ್ತಮಿರ್ಪನ್ನೆಗಮಾ ದ್ವಿಜಕುಮಾರನೆಡೆವಿಡದೆ ನಟ್ಟುಡಿದ ನನೆಯಂಬಿನ ಮೊನೆಗಳಂತೆ ನೆಗೆದ ಕಂಟಕನಿಕಾಯಮುಂ ಮದನದಹನನಿಂ ಭಸ್ಮಮಾದಂತೆ ಬೆಳರ್ಪನಪ್ಪುಕೆಯ್ದ ಮೆಯ್ಯುಮಪ್ರತಿಹತಶಾಸನನಪ್ಪ ಪುಷ್ಪಶರಾಸನನಂ ವಶ್ಯವ್ಯತಿಕರಣದೊಳ್ಮಧ್ಯಶಿಲಾತಲಕಟ್ಟಲೆಂದು ಕಟ್ಟಿದ ಕಟ್ಟುಗಳಂತೆ ತೊಟ್ಟ ಮೃಣಾಳವಲಯಮುಂ ಸುತ್ತಿಯಿನ್ನೆತ್ತವೋಪೆಯೆಂದು ತರ್ಜಿಸಿದ ನಿಶಾಕರನ ಕರಶಾಖೆಯಂತೆ ಕಿವಿಗವತಂಸಮಾದ ಕೇದಗೆಯೊಳ್ಗರಿಯುಂ ತನಗೆ ತಾನೆ ನೀರ್ಗೊಟ್ಟಪನೆಂಬಂತೆ ಸುರಿವ ನಿರಂತರಾಶ್ರುಪೂರಮುಂ ತನ್ನಿಚ್ಛೆಯೊಳೆನ್ನಕೈವಿಡಿಯಲೆಂದು ಮಿಂದನೆಂಬಂತೆ ಪೊಣ್ಮುವ ಘರ್ಮೋದಕಂಗಳುಂ ಇದಿರ ಮನಮೇನೆಂದಱಿಯದೆಳಸದಿರೆಂದಡಿಗಡಿಗೆ ನಿವಾರಿಸುವಂತೆ ನಿಲಿಸುವ ಊರುಸ್ತಂಭಮುಮುತ್ಕಲಿಕಾಸಹಸ್ರವಿಷಮರಾಗಸಾಗರಮನೀಸಿದಪನೆಂಬಂತೆನ್ನನಪ್ಪುವ ೞಯಾಸೆಯಿಂ ದೂರದೊಳ್ ನಿಮಿರ್ವ ನಿಡುತೋಳ್ಗಳುಂ ತನ್ನೊಳ್ ತೋಱಿ[3] ಸತ್ವಗುಣಕ್ಕೆ ಸಾರ್ಕೆಗುಡದೆ ಕೃಪಣತೆಗೆಡೆಗೊಟ್ಟು ವಿರಕ್ತತೆಗೆ ಬಿಗುತರ್ಪ ತರಳತೆಗೆ ಕೂರ್ತು ಲಜ್ಜೆಗೆ ಗೆಂಟಾಗಿ ಧಾಷ್ಟ್ರ್ಯನಭಿಮುಖನಾಗಿ ಪರಲೋಕಭಯಕ್ಕೆ ಬೆಸೆದು ಬೆಸನಕ್ಕೊಸೆದು ಯುಕ್ತಾಯುಕ್ತವಿವೇಕಕ್ಕೆ ಪಿಂತೆಗೆದು ಉನ್ಮತ್ತನಂತಚ್ಚಬೆಳ್ದಿಂಗಳೊಳೊಯ್ಯನೊಯ್ಯನೆ ಬರುತಿರ್ದನನಾಂ ದೂರದೊಳ್ ಕಂಡು ಭಯಂಗೊಂಡು

ಎಲೆ ಕೇಡಾಯ್ತೆನಗೋವೊ ಮತ್ತಮಿವನೆನ್ನಂ ಕಯ್ಯಲೊಳಂ ಬಂದು ಮು
ಟ್ಟಲೊಡಂ ಪತ್ತುವಿಡಲ್ಕೆವೇೞ್ಕುವಸುವಂ ಮೆಯ್ಯೊಡ್ಡಿದೆಂ ದುಃಖಸಂ
ಕುಲಕೋರಂತಿರೆ ಪುಂಡರೀಕನನೆ ಮತ್ತಂ ಕಾಣ್ಬೆನಾನೆಂದೆ ನಿ
ಷ್ಫಲಮಾಯ್ತಕ್ಕಟ ಮಂದಭಾಗ್ಯೆಗೆನಗಿಂತೀ ಪ್ರಾಣಸಂಧಾರಣಂ ೩೭

1 ಸುರಾಸುರನಾವನಕ್ಕೆ (ಕ) 2 ಕೃಪಾರ್ಥಿತಾರನೆ (ಕ)

ವ || ಎಂದೆನ್ನೊಳೆ ಬಗೆಯುತ್ತಿರ್ದನನ್ನೆಗವಾತನೆಯ್ದೆ ವಂದೆನ್ನನಿಂತೆಂದಂ

ಎಲೇ ಕುಮುದನೇತ್ರೆ ಮನ್ಮಥಸಹಾಯನೀ ಚಂದ್ರಮಂ
ಕೊಲಲ್ ಬಗೆದನೆನ್ನನಾರ್ತನನಾಥನಂ ದುಃಖಿಯಂ
ಪಲುಂಬಿ ಮಱೆವೊಕ್ಕೆನಾಂ ನಿನಗಧೀನಮೀ ಜೀವಿತಂ
ವಿಲಂಬಿಸದೆ ರಕ್ಷಿಸೆನ್ನನಱಿಯೆಂ ಪ್ರತೀಕಾರಮಂ ೩೮

ಶರಣಾಗತಜನಭರಣಂ
ಪರತರಧರ್ಮಂ ತಪಸ್ವಿಗಳ್ಗದಱಿಂದಂ
ಪೊರೆಯೆನ್ನನಿಲ್ಲದೊಡೆ ಹಾ
ಸ್ಮರಶೀತಮಯೂಖರಿಂದೆ ಹತನಾದಪ್ಪೆಂ* ೩೯

ವ || ಅದಂ ಕೇಳಲೊಡನೆನ್ನ ನೆತ್ತಿಯೊಳುರಿ ಮಸಗಿದಂತಾಗೆ ಕಿನಿಸು ಕಯ್ಗಣ್ಮೆ ಕಣ್ಗಳಿಂದುಗುತರ್ಪ ಕಂಬನಿಗಿಡಿಗಳಿಂದುರುಪುವಂತವನಂ ನೀಡುಂ ನೋಡುತ್ತಾವಿಪ್ಪೆಯಂತೆನ್ನ ನಾನಱಿಯದೆ

ನುಡಿವನ್ನನೆನ್ನನೀ ಪರಿ
ಸಿಡಿಲೇತಕೆ ಕೆಡೆದುದಿಲ್ಲ ನಿನ್ನಯ ಸಿರದೊಳ್
ಉಡುಗಿದುದಿಲ್ಲಮುಸಿರ್ ನೂ
ರ್ಮಡಿಯೆನಲೀ ಜಿಹ್ವೆ ಬಿಱಿದುದಿಲ್ಲ ದುರಾತ್ಮಾ ೪೦

ಖಲ ನಿನ್ನೀ ತನು ಪಂಚಭೂತಮಯಮಲ್ತಂತಾಗೆ ನಿನ್ನಂ ರಸಾ
ತಲಮಂ ಪೊರ್ದಿಸದಾಯ್ತುದೇಕೆಳೆ ಮರುತ್ತೇಕದೊಯ್ಯದಾಯ್ತೊರ್ಮೊದಲ್
ಜಲಮೇಕಾಳಿಸದಾದುದೋ ದಹಿಸಲಿಲ್ಲೇತರ್ಕೆ ತಾನಗ್ನಿ ಪೇ
ೞಲೆ ಪಾಪಾತ್ಮನೆ ತನ್ನವೋಲೆಸಗಲಿಲ್ಲೇಕಾಗಸಂ ಶೂನ್ಯನಂ ೪೧

ಈ ತೆಱದಿಂದಂ ಗಳಹುವ
ಪಾತಕಿ ನೀಂ ನೀತಿಮಾರ್ಗಮಱಿಯದ ತಿರ್ಯ
ಗ್ಜಾತಿಯೊಳೆ ಜನ್ಮವೆತ್ತದ
ದೇತರ್ಕೆ ಮನುಷ್ಯಜಾತಿಯೊಳ್ ಜನಿಯಿಸಿದ್ಯೆ ೪೨

---

* ಇಲ್ಲಿಂದ ಒಂಬತು ಪದ್ಯಗಳು ಮೂಲಪ್ರತಿಯಲ್ಲಿ ಕಲುಷಿತವಾಗಿದ್ದುದರಿಂದ ಆಸ್ಥಾನ ವಿದ್ವಾನ್, ನೋಸಲೆ ಅಯ್ಯಾಶಾಸ್ತ್ರಿಗಳಿಂದ ರಚಿತವಾಗಿ ಇಲ್ಲಿ ಸೇರಿಸಲ್ಪಟ್ಟಿದೆ.

ವ॥ ಮತ್ತಮೆಲೆ ಮತ್ತ ನೀನಿಂತು ನಗೆಗೇಡಾದ ನುಡಿಗಳಂ ನುಡಿಯುತ್ತಮೆನಗೆ ಮುಳಿಸನಾದೊಡಂ ಪುಟ್ಟಿಸಲಿಲ್ಲಮದುಕಾರಣದಿಂ ನಿನ್ನನುಡಿಗನುರೂಪಮಪ್ಪ ಜಾತಿಯೊಳ್ ಪುಟ್ಟಿದೊಡೆಮ್ಮನ್ನರನೆಂದುಂ ಕಾಮಿಸೆಯೆಂದು ನುಡಿದೊಡನಾಂ ಚಂದ್ರಾಭಿಮುಖಿಯಾಗಿ ಕಯ್ಗಳಂ ಮುಗಿದು ಮಹಾಭಾಗ ಸಕಲಭುವನಚೂಡಾಮಣಿಯಪ್ಪ ರೋಹಿಣೀರಮಣ ಪುಂಡರೀಕನ ನಾಂ ನೋಡಿದಂದಿನಿಂ ಮತ್ಪೂರ್ವಪುರುಷನಂ ಮನದೊಳಾದೊಡಂ ಭಾವಿಸದಿರ್ದುದು ನನ್ನಿಯಪ್ಪೊಡೀಯಳೀಕಕಾಮಿಯಾನುಸಿರ್ದಂತೆ ಗಿಳಿಯಾಗಿ ಪುಟ್ಟುಗೆಂದು ಶಪಿಸಲೊಡನೆ

ಸಹಿಸಲಸಹ್ಯಮಪ್ಪ ಮದನಜ್ವರವೇಗದೆ ಮೇಣ್ ನಿಜಾಘದು
ರ್ವಹಪರಿಪಾಕದಿಂ ಬಗೆಯಲಲ್ಲದೊಡೆನ್ನಯ ತೀವ್ರಶಾಪವಾ
ಜ್ಯಹಿಮೆಯಿನಾತನಂದು ಕಡಿದಿಕ್ಕಿದ ಪೆರ್ಮರನಂತೆವೋಲದೇ
ನಹಹ ನಿರೂಪಿಪೆಂ ಕೆಡೆದು ಪೊಂದಿದನಾಯಿಳೆಯಲ್ಲಚೇತನಂ ೪೩

ವ॥ ಅದಂ ಕಂಡತಿದುಃಖಿತರಪ್ಪ ಪರಿಜನಂಗಳ ಮುಖದಿಂದೀತಂ ಭವತ್ಪ್ರಿಯವಯಸ್ಯನೆಂದಱಿದಾಂ ಕಡುದುಗುಡಂದಳೆದಿದೇನೆಂದು ಕಂಬನಿಗಳಂ ಬಿಡುತ್ತೆ ಲಜ್ಜಾವನತ ಮುಖಿಯಾಗಿರಲೆನ್ನಂ ಕುರಿತು ಚಂದ್ರಾಪೀಡಂ

ಪಿರಿದುಂ ನೀನೊಲವಿಂದೆ ಯತ್ನಿಸಿದೊಡಂ ಕಾದಂಬರೀದೇವಿಯಾ
ಚರಣೋಪಾಸನ ಸೌಖ್ಯಮಾದೊಡೆನಗಾದತ್ತಿಲ್ಲಮೀ ಪುಟ್ಟಿನೊಳ್
ದೊರೆಕೊಳ್ವಂತದು ತಾನೊಡರ್ಚುಗೆ ಮಱುವುಟ್ಟಲ್ಲಾದೊಡಂ ನೀನೆಯೆಂ
ದೊರೆವನ್ನಂ ಬಿಱಿದತ್ತು ಭೋಂಕನೆರ್ದೆ ತದ್ರಾಜೇಂದ್ರ ಚಂದ್ರಾಕನಾ ೪೪

ವ॥ ಅನಂತರಂ ತರಳಿಕೆ ಮಹಾಶ್ವೇತೆಯಂ ಬಿಟ್ಟು ಭೋರನೆ ಚಂದ್ರಾಪೀಡಶರೀರಮುಂ ಸಾರ್ದು ಹಾ ದೇವ ಚಂದ್ರಾಪೀಡ ಕಾದಂಬರಿಯನುಱಿದೆತ್ತ ಪೋಪೆಯೆಂದು ಬಾಯಱಿದು ಪಲವಿಸುತ್ತಮಿರ್ದಳ್. ಮಹಾಶ್ವೇತೆಯುಂ ಚಂದ್ರಾಪೀಡಮುಖನಿಹಿತ ನಿಶ್ಚಲಸ್ತಬ್ಧದೃಷ್ಟಿಯಾಗಿ ಮರಣಸಮಾಸಾದಿತೆಯಾದಂತೆ ಮೂರ್ಛೆಗೆ ಸಂದಳಿತ್ತಲನಂತರಂ ತತ್ಸಮಾಸನ್ನ ಪರಿಜನಂ ಪ್ರಲಾಪಂಗೆಯ್ಯುತ್ತವನಿತಲದೊಳ್ ಕೆಡೆದು ವಿಗತಚೇತನನಾದ ಕುಮಾರನಂ ಕಂಡು ಕೆಟ್ಟೆವಿದೇನೆಂದು ರಾಜಪುತ್ರರುಮುದ್ಭ್ರಾಂತರಾಗಿ ಚಂದ್ರಾಪೀಡನನುಗಮನಮೇ ಕರಣೀಯುವೆಂದು ನಿಶ್ಚೈಸಿರ್ದರನ್ನೆಗಮಿತ್ತ ಕಾದಂಬರಿಯ ಪರಿಜನಂ

ತಮತಮಗೊಲವಿಂ ಶ್ವೇತಾ
ಶ್ರಮಕ್ಕೆ ತಾಂ ಬಂದನಧಿಕ ಹರ್ಷದೆ ನೃಪಚಂ
ದ್ರಮನೆಂದು ಭೋಂಕನತಿಸಂ
ಭ್ರಮದಿಂ ಗಂಧರ್ವಕನ್ಯೆಗಱಿಪಿದರಾಗಳ್ ೪೫

ವ॥ ಅಂತಱಿಪೆ ಚಂದ್ರೋದಯೋಲ್ಲಸಿತೆಯಪ್ಪುದಧಿವೇಲೆಯಂತೆ ಸಮಕರಧ್ವಜೆಯಾಗಿ ಮನದೊಳಗೆ ಗುಡಿಗಟ್ಟಿ ಮಹಾಶ್ವೇತೆಯಲ್ಲಿಗೆ ಪೋದಪ್ಪೆನೆಂದು ಜನನೀಜನಕರಿಂ ಕೃತಾನುಜ್ಞೆಯಾಗಿ ಕಾದಂಬರಿ ಕಯ್ಗೆಯ್ದು ರಸನ್ಮಣಿನೂಪುರ[1]ಕಲಾಪೆ[1]ಯರುಂ ಮುಖರಮೇಖಲಾದಾಮಸಂದಾನಿತ[2]ಜಘನೆ[2]ಯರುಂ ರಮ್ಯೋಜ್ವಲಾಲಕೆಯರುಂ ಗೃಹೀತಸುರಭಿಮಾಲ್ಯಾನುಲೇಪನಪಟವಾಸಾದ್ಯುಪಕರಣೆಯರುಮೆನಿಸಿದ ಕೆಲಂಬರಾಪ್ತಪರಿಚಾರಿಕೆಯರ್ವೆರಸು ಕೇಯೂರಕೋಪದಿಶ್ಯಮಾನಮಾರ್ಗೆಯುಮೆನಿಸಿ ಪತ್ರಲೇಖಾಹಸ್ತಾವಲಂಬಿನಿಯುಮಾಗಿ ಬರುತಂ ಮದಲೇಖೆಗಿಂತೆಂದಳ್

ಅಱಿವೋ ನಿಸ್ನೇಹನೆನ್ನಂ ಹಿಮಗೃಹಕದೊಳಂತಿರ್ದಳಂ ಕಂಡು ಮತ್ತಂ
ಪೆಱವೋದಂ ದುರ್ವಿದಗ್ಧಂ ಕಠಿನಹೃದಯನಾಂ ಸತ್ತೊಡಂ ನಂಬನೆನ್ನಂ
ಮಱೆಗುತ್ತಿರ್ದಪ್ಪಳಿಂದೆಂದೆಣಿಸಿ ನುಡಿದೊಡಂ ಪೇೞೆನಾನೇನುಮಂ ಕೇಳ್
ಪೆಱತೇಂ ಸಾರ್ತಂದವಂ ಕಾಲ್ವಿಡಿದೊಡವೊಸೆಯೆಂ ಪದ್ಮಪತ್ರಾಯತಾಕ್ಷೀ ೪೭

ವ॥ ಎಂದು ನುಡಿಯುತ್ತಂ ಚಂದ್ರಾಪೀಡದರ್ಶನೋತ್ಕಂಠೆಯಾಗಿ ಕಾದಂಬರಿ ಮಹಾಶ್ವೇತಾಶ್ರಮಕ್ಕೆವಂದು ನೆರೆದಿರ್ದ ರಾಜಲೋಕದ ನಡುವೆ ತಿರೋಹಿತಾಮೃತಮಪ್ಪ ರತ್ನಾಕರಮುಮನಂತಃಪ್ರವಿಷ್ಟಕಮಲಮಪ್ಪಪದ್ಮಾಕರಮುಮಂ ಜಲಧರಪಟಲಾಂತರಿತೇಂದುವಪ್ಪ ನಿಶಾಪ್ರಬಂಧಮುಮನನುಕರಿಸಿ ತಿರೋಭೂತಚೇತನನಾದ ಚಂದ್ರಾಪೀಡದೇವನಂ ಕಂಡು ಕೆಟ್ಟೆನಿದೇನೆಂದು ತೊಟ್ಟನೆ ಮುಗ್ಧೆ ಮೂರ್ಛೆಗೆ ಸಂದು ನೆಲಕ್ಕೆ ಬೀೞ್ವನ್ನೆಗವೆಂತಾನುಂ ಮುಕ್ತಾಕ್ರಂದನೆಯಪ್ಪ ಮದಲೇಖೆ ಕರತಲದಿಂ ಪಿಡಿದೆತ್ತೆ ಪತ್ರಲೇಖೆಯುಂ ಕಾದಂಬರೀದೇವಿಯ ಕರತಲಮಂ ಬಿಟ್ಟು ನಿಶ್ಚೇತನೆಯಾಗಿ ಬಿೞ್ದಳಿತ್ತಲನಂತರಮೆಂತಾನುಂ ಕಿಱಿದುಬೇಗಕ್ಕೆ ಕಾದಂಬರಿ ಲಬ್ಧಸಂಜ್ಞೆಯಾಗಿ

ಮರವಟ್ಟಂತೆ ವಿಮೂಢೆಯಂತೆ ಬರೆದಂತಾವಿಷ್ಟೆಯಾದಂತೆ ಕಂ
ಡರಿಸಿಟ್ಟಂತುಸಿರಿಕ್ಕಲುಂ ಮಱೆದು ಚಂದ್ರಾಪೀಡದೇವಾನನಾಂ
ಬುರುಹಸ್ತಂಭಿತದೃಷ್ಟಿ ಮೆಯ್ಯಱಿಯದಂತರ್ಮನ್ಯುಭಾರಾತಿಮಂ
ಥರೆ ಪೆಂಡರ್ಗಿದು ತಕ್ಕುದಲ್ತೆನಿಪವಸ್ಥಾಭೇದಮಂ ತಾಳ್ದಿದಳ್ ೪೭

ವ॥ ಅಂತು ತಾಳ್ದಿದ ಕಾದಂಬರಿಯ ಕಾಲಮೇಲೆ ಬಿೞ್ದು ಮುಕ್ತಾರ್ತನಾದೆಯಾಗಿ ಮದಲೇಖೆಯಿಂತೆಂದಳ್

ಬಿಡು ನಿಜಮನ್ಯುಬಾಷ್ಪಭರಮಂ ನುಡಿಗುಂದುತಮಿಂತು ದುಃಖನಾಂ
ತೊಡೆ ಕಡೆಗೋಡಿಪೋಗದೆ ಪೊನಲ್ ಪುಗುತರ್ಪ ತಟಾಕದಂದದಿಂ
ದೊಡೆದಪುದಲ್ತೆ ನಿನ್ನ ಸುಮುಕೋಮಲಮಪ್ಪೆರ್ದೆ ತಂದೆಯ ತಾಯ ಬಾೞಕ್ಕಯಿ
ನ್ನುಡಿದೊಡದೆಂತುಮಿಲ್ಲ ತಿಳಿ ನೀಂ ಬೞಿಕಿಲ್ಲಿ ನಿಜಾನ್ವಯದ್ವಯಂ ೪೮

---

1 ಕಪೋಳೆ (ಕ) 2 ರಚನೆ (ಕ)

ವ|| ಎಂದು ನುಡಿಯೆ ವಿಹಸಿತವದನೆಯಾಗಿ ಕಾದಂಬರಿ ಮದಲೇಖೆಯನಿಂತೆಂದಳ್

ಮರುಳೇ ನೀಂ ತಂಗಿ ಪೇಳ್ ಕಲ್ಲೆರ್ದೆಯಿದೊಡೆಗುಮೇಂ ಮುಂದೆ ಮತ್ಕಾಂತನಿಂತಾ
ಗಿರೆಯುಂ ಪ್ರಾಣಂಗಳೆನ್ನಂ ಬಿಡವು ಬಿಡದೊಡೇನಾದುದೆಂತಾನುಮೀಗಳ್
ದೊರೆಕೊಂಡತ್ತೀ ಮದೀಯ ಪ್ರಿಯತಮತನುವಿಂ ತಂದೆ ತಾಯ್ ಬಂಧುವರ್ಗಂ
ಪರಿವಾರಂ ತಾನದೇಕೀ ತನುವಿನ ಬಟಿಸಂದಾಂ ಕೃತಾರ್ಥಾತ್ಮೆಯಪ್ಪೆಂ ೪೯

ವ|| ಅದಲ್ಲದೆಯುಂ

ಪಿಂದೆ ಸಮಸ್ತರಾಜ್ಯಪದಮಂ ಬಿಸುಟೆನ್ನಯ ದೂಸಱಿಂದವೇ
ಟ್ಕಿಂದೆನಗೊಪ್ಪುಗೊಟ್ಟ ನಿಜದೇಹಮನೀ ಮಹಿಪಂ ಗುರುತ್ವದಿಂ
ದೊಂದಿದನೀಗಳಾಂ ಬರಿದೆ ಕಣ್ಬನಿಯಂ ಸುರಿಯುತ್ತಮಿರ್ದೊಡಂ
ಬಂದಪುದೇನೊ ಪೇಳ್ ಕೆಳದಿ ಕೆಮ್ಮನೆ ಲಾಘವದಿಂದಮೊಂದುಮೆಂ ೫೦

ವ|| ಅದುಕಾರಣದಿಂ

ಸಾವುದೆ ಜೀವನಂ ದಲೆನಗೀ ಕಡುನಾಣ್ಗೆಡೆಯಾದ ಜೀವನಂ
ಸಾವೆಮ ತಂಗಿ ನೀನೆನಗೆ ಕೂರ್ಪುದು ನಿಕ್ಕುವಮಪ್ಪೊಡೆನ್ನಮೇ
ಲಾವರಿಸಿರ್ದ ಕೂರ್ಮೆಯನೆ ನಿನ್ನೊಳೆ ಮಾಡಿ ಮದೀಯ ಶೋಕದಿಂ
ಜೀವಮನಬ್ಬೆ ಪತ್ತುವಿಡದಂತಿರೆ ಮಾಡುವುದಾವುಪಾಯದಿಂ ೫೧

ವ|| ಅದಲ್ಲದೆಯುಂ

ಪರಿಜನಮುಂ ಸಖೀಜನಮುಮೆನ್ನನೆ ಚಿಂತಿಸದಂತು ತಂಗಿ ನೀ
ನಿರು ಕರುಮಾಡದೊಳ್ ಮದುವೆಯಂ ಭವನಾಂಗಣಬಾಲಚೂತದೊಳ್
ಪರಿಪೊಲವಿಂದೆ ಮಾಧವಿಯೊಳೆನ್ನ ಪದಾಂಚನದಿಂದೆ ತಳ್ತು ಬಿ
ತ್ತರಿಸಿದಶೋಕದೊಳ್ದಳಿರ ಕೊಯ್ಯದಿರಾಭರಣಾರ್ಥಮಾಗಿಯುಂ ೫೨

ಅನುರಾಗದಿನಾನೆ ಕುಮಾ
ರನ ಪಟಮಂ ಬರೆದು ಸೆಜ್ಜೆವನೆಯೊಳ್ ಸಾರ್ಚಿ
ರ್ದನದಂ ಪೂಜಿಸುತಿರು ಕಾ
ಮನ ಪಟಮಂ ಸೀಳ್ದು ಕಳೆ ವೃಥಾಪೂಜಿತಮಂ ೫೩

ಚಿರಕಾಲಂ ನಮೆದವು ಪಂ
ಜರದೊಳ್ ಕಾಳಂದಿಯೆಂಬ ಸಾರಿಕೆಯುಂ ತ
ತ್ಪರಿಹಾಸನೆಂಬ ಗಿಳಿಯುಮು
ವೆರಡಂ ನೀಂ ತಂಗಿ ಬಿಟ್ಪು ಕಳೆ ಬಡವುಗಳಂ ೫೪

ಶಮದಮಯುತನೆನಿಸಿರ್ದೊ
ರ್ವ ಮುನಿಗೆ ತತ್ಕೇಳೀಶೈಲಮಂ ಕುಡು ವಕುಳ
ದ್ರುಮಕಂ ಮಾಲತಿಗಂ ಮದು
ವೆ ಮಾಡಿದಂ ಬಿಡಿಸವರ್ಕೆ ನೀಂ ಕಂಕಣಮಂ ೫೫

ತರಳಿಕೆಯೆಂಬ ನಮ್ಮ ಮಱಿವುಲ್ಲೆಯನೊಂದು ತಪೋವನಕ್ಕೆ ನೀಂ
ನಿರವಿಸು ಪಂಜರಾಂತರದ ಕನ್ನಡವಕ್ಕಿಯನೊಂದು ಬಂದ ಮಾ
ಮರದೊಳೆ ಸಾರ್ಚು ಮುಚ್ಚರಣನೂಪುರದಿಂ ಚರಕಾದಮುಟ್ಕಿಱಿಂ
ಪರಿತರುತಿರ್ದ ಹಂಸಕನನೊಯ್ದಿರಿಸೊಂದು ಸರಃಪ್ರದೇಶದೊಳ್ ೫೬

ಪದೆದೆನ್ನಯ ವೀಣೆಯನಿರಿ
ಪುದು ನಿನ್ನಯ ತೊಡೆಯ ಮೇಲೆ ಮತ್ತಂ ನಿನಗಾ
ವುದಪೇಕ್ಷಿತಮಾಗಿರ್ದ
ತ್ತದೆಲ್ಲಮಂ ನೀನೆ ಕೆಳದಿ ಕೈಕೊಳ್ಳೀಗಳ್ ೫೭

ವ॥ ಆನಪ್ಪೊಡೆ ತಿಂಗಳ ತಣ್ಗದಿರ್ಗಳೊಳಮಿರ್ಪಱಿಯದ ಸಿರಿಕಂಡದಣ್ಪಿನೊಳ ವೆಡೆವಿಡದಾಲಿನೀರ್ವನಿಗಳಂ ಸಿಂಪಿಸುವ ನೀರ್ಜೊಂಪಂಗಳೊಳಂ ತುಹಿನಕರ ತಣ್ಗದಿರ್ಗಳ ತನಿಸೋಂಕಿನಿಂ ತಣ್ಪುವಡೆದ ತಾರಹಾರಂಗಳೊಳಂ ಕರ್ಪೂರರಸದಿರ್ಪಿನಿಂ ಕುಳಿರ್ವ ತಳಿರ್ವಾಸುಗಳೊಳಂ ಉಳ್ಪಲರ್ದ ತಾವರೆಯ ನೆಯ್ದಿಲೆಸಳ ಪಸೆಗಳೊಳಂ ತಪ್ತಶೇಷಮಾಗಿ ಮಾಯ್ದೆನ್ನ ಶರೀರಮಂ ಪ್ರಿಯತಮ ಶರೀರ ಸಂಯೋಗಾಹ್ಲಾದದಿನಾಱಿಸಿದಪ್ಪೆನೆಂದು ತನ್ನಂ ಮದಲೇಖೆಯಿಂ ಬಿಡಿಸಿಕೊಂಡು ಲಬ್ಧಸಂಜ್ಞೆಯುಂ ಚಿಂತಾಸ್ತಿಮಿತನಯನೆಯುಮಪ್ಪ ಮಹಾಶ್ವೇತೆಯಂ ತಳ್ಕೈಸಿ ನಿರ್ವಿಕಾರವದನೆಯಾಗಿ

ಇನಿಯನ ಬರ್ಪುದುಂ ನಿನಗೆ ಪಾರ್ದಿರವೇಟ್ಪುದು ಪುಂಡರೀಕದೇ
ವನೆ ಪತಿಯಪ್ಪನೆಂಬ ನುಡಿಯುಂ ಸದುಕಾರಣಮಾಗೆ ತಾಳ್ದು ನೀಂ
ತನುವನನೇಕಕಾಲವಿದನೆನ್ನಯ ಚಿಂತೆಯನಕ್ಕ ನೂಣ್ಪುದಿಂ
ತೆನಗಿನಿತೊಂದು ಮೂಡುಗೆ ಭವಾಂತರದಲ್ಲಿ ಭವತ್ಸಮಾಗಮುಂ ೫೮

ವ|| ಎಂದನಂತರಂ

ಸುರಿಯೆ ಕಚಭಾರಹಸ್ತದಿ
ನರಲ್ಗಳಾತ್ಮೋತ್ತಮಾಂಗದಿಂದರ್ಚಿಸಿದಳ್
ಸರಭಸಮಾಗಳ್ ಕಾದಂ
ಬರಿ ಚಂದ್ರಾಪೀಡದೇವಚರಣಾಂಬುಜಮಂ ೫೯

ವ|| ಅಂತರ್ಚಿಸುತ್ತಮುತ್ಪುಂಜ್ಯಮಾನಪುಲಕನಿಕರೆಯುಮಸಮಸಾಧ್ವಸೋತ್ಕಂಪಮಾನಾಂಗಿಯುಮಮಂದಬಾಷ್ಪವೇಗಪ್ರಕ್ಷಾಳಿತವದನೆಯುಂ ಸರ್ವಾಂಗಸ್ರವತ್ಸ್ವೇದಬಿಂದುತಾರಕಿತಗಾತ್ರೆಯುಂ ಮುಕುಳಾಯಮಾನನಯನಯುಗಳೆಯುಮಾಗಿ ತದವಸ್ಥನಪ್ಪ ಹೃದಯವಲ್ಲಭನೊಳ್ ಸಮಾಗಮಸುಖಮನನುಭವಿಸಿದಪ್ಪಳೆನಿಸಿ ವಿಗಳತ್ಸ್ವೇದಾರ್ದ್ರಂಗಳಪ್ಪ ಕರಕಮಲಂಗಳಿಂ ಪ್ರಿಯತಮನಂ ತೊಡೆಯ ಮೇಗಣ್ಗೆ ತೆಗೆದು ಮೊಗಮಂ ಬಿಡದೆ ನೋಡಿ ನಿಜಪ್ರಾಣಮಂ ಬಿಡಲುಜ್ಜುಗಂಗೆಯ್ವಾಗಳ್

ಅಮೃತಾಸಾರದಿನಾ ಪ್ರದೇಶಮನಿತುಂ ತೇಂಕಾಡಲಲ್ಲಿರ್ದರಿ
ಲ್ಲಮಿದೇನೋ ಕವಿತರ್ಪುದೀಗಳೆನುತಂ ತಳ್ಪೊಯ್ವ ತಣ್ಪಿಂದಮೆ
ಯ್ದೆ ಮುಟುಂಗುತ್ತಿರಲುಣ್ಮಿತೊರ್ಮೊದಲೊಳವ್ಯಕ್ತಸ್ವರೂಪಂ ಸುಧಾಂ
ಶುಮಯೂಖೋಜ್ವಲಮಂತರಿಕ್ಷತಲದೊಳ್ ಹೈಮಪ್ರಭಾಮಂಡಲಂ ೬೦

ವ|| ಅಂತಾ ಪ್ರಭಾಮಂಡಲದ ದೆಸೆಯಿನಮೃತವೃಷ್ಟಿಯಂ ಪಸರಿಸುವಂತದೊಂದು ದಿವ್ಯನಿನದಂ

ಒಸೆದಂದಾಂ ನಿನ್ನನಾಶ್ವಸಿಸಿದೆನೆಲೆ ಮಹಾಶ್ವೇತೆ ಮತ್ತಿಂದುಮಾಶ್ವಾ
ಸಿಸಲೆಟ್ತಿಂದೆಂ ಮದೀಯಾಮೃತಮಯಕರಸಂದೋಹದಿಂ ನಿಚ್ಚಮಾನ
ರ್ಚಿಸುತಿರ್ದೆಂ ಪುಂಡರೀಕೋಜ್ವಲವಪುವನದಿರ್ದತ್ತು ಮಲ್ಲೋಕದೊಳ್ ನಿ
ನ್ನ ಸಮಾಯೋಗಾರ್ಥಮಿನ್ನುಂ ತೊಳಗಿ ಬೆಳಗುತಂ ನಿತ್ಯರೂಪತ್ವದಿಂದಂ ೬೧

ಇದು ಜೇರ್ಮೆಯ್ವೊಕ್ಕ ಯೋಗೀಂದ್ರನ ತನುವಿನವೊಲ್ ಮುನ್ನಿನಂತಿರ್ಪುದ
ಲ್ಲದೆಯುಂ ಕಾದಂಬರೀದೇವಿಯ ಕರತಲಸಂಸ್ಪರ್ಶಮಂ ತಾಳ್ದಿಕೊಂಡಿ
ರ್ದುದು ಬೇಱೊಂದೆನ್ನ ತೇಜೋಮಯಮಿದು ಪೆಱತೇಂ ನಿತ್ಯಮೀ ದೇಹಮೀ ದೇ
ಹದೆ ಚಂದ್ರಾಪೀಡದೇವಂ ಕತಿಪಯದಿನದಿಂದೀಕೆಯೊಳ್ ಕೂಡಿದಪ್ಪಂ ೬೨

ವ|| ಅದಱಿಂ ನೀ ದೇಹಮನತಿಪ್ರಯತ್ನದಿನಾರಾಧಿಸುತ್ತಿರ್ಪುದೆಂದು ನುಡಿದು ಮಾಣ್ಬುದುಮಿದೇನೆನುತ್ತಂ ಕಾದಂಬರಿವೆರಸು ಸಕಲರಾಜಲೋಕಂ ವಿಸ್ಮಯಾಕ್ಷಿಪ್ತಹೃದಯರುಂ ಮಂದೀಕೃತಮರಣವ್ಯತಿಕರರುಮಾಗಿರ್ಪುದುಮನಂತರಂ ಪತ್ರಲೇಖೆ

ತತ್ಪ್ರಭಾಮಂಡಲಗಳಿತ ಹಿಮಸ್ಪರ್ಶದಿಂ ಲಬ್ಧಸಂಜ್ಞೆಯಾಗಿ ಮರುಳ್ಗೊಂಡಂತೆ ಇಂದ್ರಾ ಯುಧಮಿರ್ಪೆಡೆಗೆ ಪರಿತಂದು ಪರಿವರ್ಧಕಹಸ್ತದಿಂದದಂ ತೆಗೆದು ವಾಹನವಿಲ್ಲದೆ ಚಂದ್ರಾ ಪೀಡದೇವನೇಕಾಕಿಯಾಗಿಂತು ದೂರಮೆಯ್ದಲೆಮ್ಮನ್ನರಿರ್ಪುದನುಚಿತಮೆಂದು ನುಡಿದಾ ಯಿಂದ್ರಾಯುಧವನೊಡಗೊಂಡಚ್ಛೋದಸರದೊಳ್ ಮುಟ್ಟಿಂಗಲೊಡಂ

ಪೊರೆದು ಸರೋಜರೇಣುಗಳಿನೊಂದಱಿರೊಳೊಂದು ತೊಡಂಕಿ ವಾಃಕಣೋ
ತ್ಕರದೊಡಗೂಡಿ ಕಣ್ಗೆ ಕವಿತರ್ಪ ಜಟಾಳಿಯನಿರ್ಕೆಲಕ್ಕಮೋ
ಸರಿಸುತವಬ್ಜತಂತುವಿನ ಜನ್ನಿವರಂ ಸುರಭೂಜವಲ್ಕವೊ
ಪ್ಪಿರೆ ಪೊಱಮಟ್ಟನಾ ಕೊಳದಿನಾಗಳದೊರ್ವ ಕುಮಾರತಾಪಸಂ ೬೩

ವ॥ ಅಂತು ಪೊಱಮಟ್ಟ ಸುಹೃದ್ವಿಯೋಗವಿಹ್ವಲಿತಹೃದಯನಪ್ಪ ಕಪಿಂಜಲ ನುದ್ಬಾಷ್ಪಪರ್ಯಾಕುಲವ್ಯಾಬದ್ಧಲಕ್ಷ್ಯದೃಷ್ಟಿಯಪ್ಪ ಮಹಾಶ್ವೇತೆಯನೆಯ್ದೆವಂದು

ಮಱುವುಟ್ಟೆಗನಾದನನೇ
ನಱಿವೋ ನೀನೆನ್ನನೆನೆ ಕಪಿಂಜಲಮುನಿಯೆಂ
ದಱಿದತಿಸಂಭ್ರಮದಿಂ ಬಂ
ದೆಱಗಿದಳಾ ಸತಿ ತದೀಯ ಚರಣದ್ವಯದೊಳ್ ೬೪

ಮುನಿಪತಿ ಲಜ್ಜೆಗೆಟ್ಟು ಬೆಸಗೊಂಡಪೆನೆಂತೆನೆ ಪುಂಡರೀಕದೇ
ವನ ಪೆಱಗಿಂತು ಜೀವಿಸುತಮಿರ್ದವಳೆಂ ಬೆಸಸಿಂ ಮಹಾನುಭಾ
ವನನಿರದೊಯ್ದನಾವನಿರಿಸಿಟ್ಟನದೆಲ್ಲಿ ತದೀಯವಾರ್ತೆಯೇ
ನಿನಿತುವರಂ ವಿಲಂಬಿಸಿಯುಮೊರ್ವರೆ ಬಂದಿರದಾವಕಾರಣಂ ೬೫

ವ॥ ಎಂದ ಮಹಾಶ್ವೇತೆಗೆ ಕಪಿಂಜಲನಿಂತೆಂದಂ :—ನೀನೆಂದಂತು ಬಾಯಟೀದು ಪಳವಿಸುತ್ತಿರೆಯುಂ ನಿನ್ನನೇಕಾಕಿಯನೀಡಾಡಿ ವಯಸ್ಯಸ್ನೇಹದಿನಾಂ ಪುಂಡರೀಕನ ಕೊಂಡೊಯ್ದ ಪುರುಷನ ಬೞಸಂದು ಮದೀಯ ಸಖನೆತ್ತಲೊಯ್ದಪೆಯೆಂಬುದುಮಾತ ನೆನಗೆ ಮಱುಮಾತುಗುಡದೆ ಗೀರ್ವಾಣಮಾರ್ಗದೊಳನೇಕವೈಮಾನಿಕಜನಪ್ರಣಮ್ಯ ಮಾನನುಂ ದಿವ್ಯಾಂಗನಾವಲೋಕ್ಯಮಾನನುಮಾಗಿ ಪೋಗುತ್ತಮಂಬರಸರಃಕುಮುದಾ ಕರಮೆನಿಪ ತಾರಕಾಚಕ್ರಮನತಿಕ್ರಮಿಸಿ ಚಂದ್ರಲೋಕಮಂ ಪೊಕ್ಕು ಚಂದ್ರಕಾಂತ ಮಣಿಮಂಟಪದೊಳ್ ಪುಂಡರೀಕನ ಶರೀರಮನಿರಿಸಿ ಮಗುೞ್ದೆನ್ನಂ ನೋಡಿ

ಅಱಿಯೆೈ ಚಂದ್ರನೆನಾಂ ಕಪಿಂಜಲಕ ನೀನೀ ಪುಂಡರೀಕಾರ್ಥಮೀ
ತೆಱದಿಂ ಪಿಂದೆಯಿದೇಕೆ ಬಂದೆ ಗಡ ಲೋಕಾನುಗ್ರಹಂಗೆಯ್ವ ದೂ
ಸಱಿನಾಂ ಬಂದುದಯಂಗೆಯುತ್ತೆಮಿರಲೀ ಕಾಮಾತುರಂ ಸಾವುತಂ
ಬೞಿಯಿಂದಿಂತೆನ್ನನದೋಷಿಯಂ ಕುರಿತು ಕೋಪೋದ್ರೇಕದಿಂ ನೋಡಿದಂ ೬೬

ವ॥ ಅಂತು ನೋಡಿ

ಎಲೆ ಚಂದ್ರಹತಕ ಮದನನ
ಬಲದಿಂದಂ ಮೇಲೆವರಿದು ಕೊಂದಿಂತೆನ್ನಂ
ನಿಲಲೞಿಯೆಯಿರ್ದೆ ನೀಂ ಮ
ರ್ತ್ಯಲೋಕದೊಳ್ ಪುಟ್ಟುನುತ್ತೆ ಶಾಪಂಗೊಟ್ಟಂ ೬೭

ಇವನೆನಗೆ ನಿರಪರಾಧಂ
ಗವಿಚಾರದೆ ಶಾಪಮೀಯೆ ನೀನುಂ ಸುಖದುಃ
ಖವನೆನ್ನೊಡನನುಭವಿಸೆಂ
ದಿವಂಗೆ ಮುನಿದಾನುಮಂತೆ ಶಾಪಂಗೊಟ್ಟಂ ೬೮

ವ॥ ಅಂತು ಶಾಪವಿತ್ತಸ್ಮನ್ಮಯೂಖಸಂಭವೆಯರೆನಿಸಿದಚ್ಚರಸಿಯರೊಳುದಯಿಸಿದ ಗೌರೀತನೂಜೆಯಪ್ಪ ಮಹಾಶ್ವೇತೆಯಿಂ ಸ್ವಯಂವೃತನಾದನಪ್ಪುದಱಿನಪಗತಾಮರ್ಷಣನಾಗಿ ಪುಂಡರೀಕನ ಶರೀರಮಂ ಕಿಡದಂತು ತಂದು ಮತ್ತೇಜದಿಂದಾಪ್ಯಾಯಮಾನಮಾಗೆ ಶಾಪಮೋಕ್ಷಪರ್ಯಂತಮಿರಿಸಿದಪ್ಪೆಂ ನೀನುಮೀತನ ವೃತ್ತಾಂತಮನವರಯ್ಯನಪ್ಪ ಶ್ವೇತಕೇತುವಿಂಗೆ ನಿವೇದಿಸಾ ಮಹಾನುಭಾವನೀತಂಗಾಯುಷ್ಕಾಮಹೋಮಾದಿಕಮನೊಡರ್ಚಿದಪನೆಂದೆನ್ನಂ ವಿಸರ್ಜಿಸುವುದವಾಂ ಸುಹೃಚ್ಛೋಕಾಂಧನೆಂ ಮಗುಳ್ದಿ ಮರ್ತ್ಯಮಾರ್ಗದೊಳ್ ಪರಿಯುತ್ತಮೊರ್ವ ವೈಮಾನಿಕನಂ ಭರದಿಂ ದಾಂಟುವುದುಮಾತಂ ಕ್ರೋಧಾನಲದಿನೆನ್ನನುರಿಪುವಂತು ಕೆಚ್ಚನಾಗೆ ಬಿಚ್ಚನೆ ಬಿಟ್ಟದಿಟ್ಟಿಗಳಿಂ ನೋಡಿ

ಎಲೆ ದುಶ್ಶಿಕ್ಷಿತ ನಿನ್ನ ಕಣ್ಣೊಡೆದುವೇ ವಿಸ್ತೀರ್ಣಮಪ್ಪೀ ನಭ
ಸ್ಥಲದೊಳ್ ಪೋಗುತಮೆನ್ನನಿಂತುರದೆ ನೀಂ ನಿನ್ನೊಂದು ವಿದ್ಯಾತಪೋ
ಬಲದಿಂ ದಾಂಟಿದೆ ವಾಹದಂತಿರದಱಿಂ ವಾಹತ್ವಮಂ ತಾಳ್ದಿ ಭೂ
ತಲದೊಳ್ ಪೋ ನೆಲಸೆಂದು ಕೊಟ್ಟನೆನಗಾ ವೈಮಾನಿಕಂ ಶಾಪಮಂ ೬೯

ವ॥ ಅಂತು ಶಾಪಂಗುಡಲಾಂ ನಡುನಡುಗಿ ಕಯ್ಗಳಿಂ ಮುಗಿದು ಮಹಾಪುರುಷಾ ನಿನ್ನನಾಂ ವಯಸ್ಯಶೋಕಾಂಧನೆಂ ಕಾಣದೆ ದಾಂಟಿದೆನಲ್ಲದವಜ್ಞೆಯಿಂ ದಾಂಟಿದನಲ್ಲೆನಾದೊಡಮೆನಗೆ ಶಾಪಾಂತಕಾರಣಮಂ ಬೆಸಸೆಂಬುದುಂ ನೀನಾವಂಗೆ ವಾಹನಮಾಗಿರ್ಪೆಯಾತಂ ಮಱುಮೆಯ್ಗೆ ಸಲ್ವ ಸಮಯದೊಳಚ್ಛೋದಸರೋವರಸಲಿಲದೊಳ್ ಮುೞುಂಗೆ ವಿಗತಶಾಪನಪ್ಪೆಯೆಂದು ವೈಮಾನಿಕನೆನಗೆ ಪೇೞ್ದುದುಮಾನಾತಂಗೆ ಮತ್ತಮಿಂತೆಂದೆಂ

ಜನಿಯಿಸಿದಪರೆನ್ನಯ ಕೆಳೆ
ಯನುಮಾ ಚಂದ್ರಮನುಮಿನ್ನಿಳಾತಳದೊಳವರ್
ಜನಿಯಿಸಿದಲ್ಲಿಯೆ ಜನಿಯಿಸು
ವಿನಿತಂ ನೀಂ ದಯೆಯಿನೆನಗೆ ಮಾಡಲೆವೇಟ್ಕುಂ ೭೦

ವ॥ ತುರಂಗತ್ವಮೆನಗೆ ಮೂಡಿದೊಡಮೆನ್ನ ಕೆಳೆಯನೊಡಗೂಡಿ ಕಾಲಮಂ ಕಳಿಪುವಂತು ನಿನ್ನ ದಿವ್ಯಚಕ್ಷುಗಳಿಂ ನೋಡಿ ಬೆಸಸೆಂಬುದುಂ ಸದಯನಾಗಿ ತನ್ನೊಳ್ ಕಿಱಿದುಬೇಗಂ ವೈಮಾನಿಕಂ ಜಾನಿಸಿ ತಿಳಿದೆನ್ನನಿಂತೆಂದಂ. ಉಜ್ಜಯಿನಿಯೊಳಪತ್ಯಾರ್ಥ ವನೇಕವ್ರತಾಚರಣ ತತ್ಪರನಪ್ಪ ತಾರಾಪೀಡನೆಂಬ ಚಕ್ರವರ್ತಿಗೆ ಸಕಲಕಲಾಭಿರಾಮನುಂ ವಿಬುಧಜನಸೇವ್ಯನುಂ ಕುವಲಯಾನಂದಕರನುಂ ಯಶಶ್ಚಂದ್ರಿಕಾಧವಳಿತಭುವನನುಮೆನಿಸಿ ಚಂದ್ರಾಪೀಡನೆಂಬ ಪೆಸರಿಂ ಚಂದ್ರಮನೆ ಬಂದುದಯಿಸಿದಪ್ಪನಾತನಮಂತ್ರಿ ಶುಕನಾಸ ನೆಂಬಂಗೆ ನಿನ್ನ ಕೆಳೆಯನಪ್ಪ ಪುಂಡರೀಕಂ ವೈಶಂಪಾಯನನೆಂಬ ಪೆಸರಿಂ ಪುಟ್ಟಿದಪ್ಪ ನಾ ಚಂದ್ರಾವತಾರನೆನಿಸಿದ ರಾಜಕುಮಾರಂಗೆ ನೀಂ ವಾಹನವಾದಪ್ಪೆಯೆಂಬುದುಂ

ಅಂತಾ ವೈಮಾನಿಕ ವಚ
ನಾಂತದೊಳಾ ತುರಂಗರೂಪಮುಂ ತಳೆದಾಕಾ
ಶಾಂತರದಿಂದಿೞಿದು ಸಮು
ದ್ರಾಂತರದೊಳ್ ಬಿೞ್ದೆನೆನ್ನ ಕರ್ಮಾಂತರದಿಂ ೭೧

ವ॥ ಅಂತು ಬೀೞ್ವುದುಂ ಪಾರಶೀಕಾದಿರಾಜನೆನ್ನಂ ಕಂಡು ಪಿಡಿದೊಯ್ದು ತಾರಾ ಪೀಡನರೇಂದ್ರಂಗೋಲ್ಪೈಸೆ ತದೀಯನಂದನನೆನಿಸಿದ ಚಂದ್ರಮೂರ್ತಿಯಪ್ಪ ಚಂದ್ರಾಪೀ ಡಂಗೆ ವಾಹನಮಾಗಿರ್ದು ಕಿನ್ನರಮಿಥುನದ ಬೞಿಸಲ್ವ ನೆವದಿಂ ನಿನ್ನಂ ಕಾಣಿಸಲೆಂದೀ ಚಂದ್ರಾವತಾರನನೀ ಪ್ರದೇಶಕ್ಕೆ ತಂದೆನದಲ್ಲದೆಯುಂ—ಎಂಬುದುಂ ಹಾಮನಃಪ್ರಿಯ ಪುಂಡರೀಕ ಜನ್ಮಾಂತರಾವಿಸ್ಮೃತಮುದನುರಾಗ ಮುತ್ಪ್ರತಿಬದ್ಧಜೀವಿತ ಮನ್ನಯ ಸಕಲ ಜೀವಿತಲೋಕ ಎಂದುದ್ಗತಶೋಕೆಯಾಗಿ

ಮುನ್ನವದೊರ್ಮೆ ಪಾತಕಿಯೆನಂತಿರೆ ಕೊಂದವಳೆಂ ಭವಾಂತರೋ
ತ್ಪನ್ನನುಮಾಗಿ ನೀಂ ಮದನುರಾಗದಿನೆಯ್ತರೆ ಮತ್ತೆ ಕೊಂದೆ ನಾಂ
ನಿನ್ನನೆ ನಿನ್ನನಿಂತು ಮಗುೞ್ದುಂ ಮಗುೞ್ದುಂ ಕೊಲವೇೞ್ಪುದೆಂದು ಪೇ
ೞಿನ್ನನಿದಿಂತು ಪುಟ್ಟಿಸಿದನೇ ವಿಧಿ ರಕ್ಕಸಿಯುಂ ಮನಃಪ್ರಿಯಾ ೭೨

ವ॥ ಎಂದಿವು ಮೊದಲಾಗಿ ಬಹುಪ್ರಕಾರದಿಂ ಪಳವಿಸುವ ಮಹಾಶ್ವೇತೆಯಂ ಕಪಿಂಜಲನಿಂತೆಂದಂ

ಹೃದಯಪ್ರಿಯನ ಸಮಾಗಮ
ನ ದೃಢಪ್ರತ್ಯಾಶೆಯಿಂದೆ ಘೋರತಪಃಕ್ಲೇ
ಶದಿನೊಂದಿ ನಿಂದೆಗೆಡೆಯು
ಲ್ಲದ ನಿನ್ನಂ ನೀನಿದೇಕೆ ನಿಂದಿಸಿದಪ್ಪೆ ೭೩

ವ॥ ಇದೆಲ್ಲಂ ಮದ್ವಯಸ್ಯಂಗಂ ಚಂದ್ರಾವತಾರಂಗವೋರೋರ್ವರ ಶಾಪದಿಂದವೆ ಸಮನಿಸಿದುದು. ನಿನ್ನದೋಷವಲ್ಲೆಂಬುದ ನಾನುಂ ನಿನಗೆ ಪೇೞ್ದಿಂ. ವಿಯತ್ತಳದೊಳಿರ್ದ ಚಂದ್ರಮಂ ತನ್ನ ದಿವ್ಯವಚನದಿನಾಜ್ಞಾಪಿಸಿದುದುಮಂ ನೀನುಂ ಕಾದಂಬರಿಯುಂ ಕೇಳ್ದಿರದುಕಾರಣದಿನಶ್ರೇಯಸ್ಕರಮೆನಿಪ್ಪ ಶೋಕಾನುಬಂಧಮನಿರ್ವರುಂ ಮಾಡಲಾಗದಭಿಲಷಿತಸಿದ್ಧಿಗಾವುದೊಂದು ಸದ್ವ್ರತಮನಾಚರಿಸುತಿರ್ದಿರದನೇ ನೀವನುಬಂಧಿಸುವುದದಲ್ಲದೆಯುಂ

ತಪದಿಂ ಸ್ಮರರಿಪುದೇಹಾ
ರ್ಧಪದದೊಳಾ ಗೌರಿ ನಿಂದವೊಲ್ ನಿಲ್ವೈ ನೀಂ
ತಪದಿಂದಿನಿಯನ ತೊಡೆಯೊಳ್
ತಪದಿಂ ದೊರೆಕೊಳ್ಳದಿರ್ಪ ಫಲವೊಂದುಂಟೇ ೭೪

ವ॥ ಎಂದು ತಿಳಿಯವೇೞ್ದು ಮಹಾಶ್ವೇತೆಯುಂ ಸಮಾಶ್ವಾಸಿಸಿದ ಕಪಿಂಜಲನಂ ವಿಷಣ್ಣದೀನಮುಖಿಯಾಗಿ ಕಾದಂಬರಿಯಿಂತೆಂದಳ್

ಸಲಿಲಪ್ರವೇಶಮಂ ಪ
ತ್ರಲೇಖೆಯುಂ ನೀವುಮಲ್ತೆ ಮಾಡಿಡಿರಂತಾ
ಲಲನೆಯದೇನಾದಳದಂ
ಜಲಕ್ಕನಾಗೆನಗೆ ಬೆಸಸಿಮೀಗಳ್ ಮುನಿಪಾ ೭೫

ವ॥ ಎಂದು ಬೆಸಗೊಳ್ವುದುಂ ಕಪಿಂಜಲಕನೆಂದನಾಂ ಜಲಪ್ರವೇಶನಾನಂತರದ ವಾರ್ತೆಯಂ ಅಱಿಯೆನಿಲ್ಲದಱಿನೀ ಚಂದ್ರಾತ್ಮಕನಪ್ಪ ಚಂದ್ರಾಪೀಡನುಂ ಪುಂಡರೀಕಾತ್ಮಕನಪ್ಪ ವೈಶಂಪಾಯನನುಮೆತ್ತಿರ್ದರೆಂಬುದಂ ಪತ್ರಲೇಖಾವೃತ್ತಾಂತಮೇನೆಂಬುದನಾನಱಿಯಲೆಂದೀಗಳಾಂ ಪ್ರತ್ಯಕ್ಷಲೋಕತ್ರಯನೆನಿಪ ಶ್ವೇತಕೇತುಮಹಾಮುನಿಗಳಲ್ಲಿಗೆ ಪೋದಪ್ಪೆನೆಂದು ಗಗನತಳಕ್ಕೆ ನೆಗೆದುಪೋದನನ್ನೆಗಮಿತ್ತ ಕಾದಂಬರಿ ಚಂದ್ರಾಪೀಡದೇಹಮಂ ನೋಡಿ ಕಣ್ಬನಿಗಳಂ ತೀವುವುದಂ ಮಹಾಶ್ವೇತೆ ನೋಡಿ ತಂಗಿ ನೀನಟಿಲಂ ತಳೆಯದಿರಾವಿರ್ವರುಂ ಸಮಸುಖದುಃಖವೃತ್ತಿಗಳಾದೆವದಱಿಂ ಪ್ರಿಯತಮಸಮಾಗಮಪ್ರತ್ಯಾಶೆಯಿಂ ಕರಣೀಯವಾವುದದನೆ ಮಾಡವೇೞ್ಪುದದಱಿಂ

ಎನಗಿದು ದೈವಮೆಂದು ಮನದೊಳ್ ಪರಿಭಾವಿಸಿ ಕಲ್ಲಮಣ್ಣರೂ
ಪನೆ ಗಡ ಪೂಜಿಸುತ್ತಮಿರೆ ಸನ್ನಿದಮಾದಪುದೆಂದೊಡಕ್ಕ ನೆ
ಟ್ಟನೆ ಮನುಜೇಂದ್ರಚಂದ್ರನೆಸರಿಂದೆಸೆವಗ್ಗದ ಚಂದ್ರಮೂರ್ತಿಯಂ
ಮನಮೊಸೆದರ್ಚಿಸುತ್ತಮಿರೆ ಸನ್ನಿದನಪ್ಪುದಿದಾವ ಸಂದೆಗಂ ೭೬

ವ॥ ಎಂಬುದುಮುದನೆ ಮನಂಗೊಂಡು ಶೀತವಾತಾತಪವರ್ಷಾದಿ ಸರ್ವದ್ವಂದ್ವ ದೋಷರಹಿತಮಪ್ಪದೊಂದು ರತ್ನ ಶಿಲಾತಲದೊಳ್ ಚಂದ್ರಾಪೀಡದೇವನಂ ನಿಲಿಸಿ ದಿವ್ಯ ವಸನ ಕುಸುಮ ಧೂಪಾನುಲೇಪನಾಭರಣಂಗಳಿನಲಂಕರಿಸಿ ತದೀಯಚರಣಂಗಳಂ ತೊಡೆಯಮೇಲಿಕ್ಕಿಕೊಂಡು ಪರಿಜನಮುಂ ಪುರಜನಮುಂ ರಾಜಲೋಕಮುಂ ಬೆರಸಂದಿನ ಪಗಲುಮನಿರುಳುಮಂ ಕಳೆದು ಮಱುದಿವಸಂ ಕಣ್ದೆಱೆದ ಚಿತ್ರದಂತಿರ್ದ ಚಂದ್ರಾಪೀಡ ನವಯವಂಗಳುಮನೆಲ್ಲಮನೆಟವಿನೋಡಿ ಕಾದಂಬರಿ ಕೆಲದೊಳಿರ್ದ ಮದಲೇಖೆಯಂ ನೀನುಂ ಭಾವಿಸಿನೋಡೆಂಬುದುಮಾಕೆ ತದ್ದಿವ್ಯಾಕೃತಿಯ ಸಕಲಾಂಗಪ್ರತ್ಯಂಗಂಗಳಂ ನೋಡಿ

ನಗುವಂತಿರ್ದಪ್ಪುದಿಂತೀ ವದನಮುರುಳಿಗೊಂಡಿರ್ಪುದೀ ಕೇಶಮೀ ದೃ
ಗ್ಯುಗಳಂ ಕನ್ನೆಯ್ದಿಲಂತಿರ್ದಪುದರುಣಿಮಮಂ ಬೀಱುತಿರ್ದಪ್ಪುವೀ ಮಿಂ
ಚುಗುರುಂ ಹಸ್ತಾಂಘ್ರಿಪದ್ಮಗಳುಮಧರಮುಮೀ ದೇಹಲಾವಣ್ಯಮಾದಂ
ಮಿಗುತಿರ್ಕುಂ ತನ್ಮಹಾಭಾಗನ ನುಡಿಯಿದಱಿಂ ಸತ್ಯಮಾಗಿರ್ದುದಲ್ತೇ ೭೭

ವ॥ ಎಂದು ನುಡಿದ ಮದಲೇಖೆಯ ಮಾತಿನೊಳ್ ನಿರ್ಭರಾನಂದೆಯಾಗಿ ಕಾದಂಬರಿ ಮಹಾಶ್ವೇತೆಗಂ ಚಂದ್ರಾಪೀಡಚರಣತಳನಿಬದ್ಧಜೀವಿತಮಪ್ಪ ರಾಜಲೋಕ ಕ್ಕಂ ಪ್ರಿಯತಮಾಕೃತಿಯಂ ತೋಱಲೊಡಮವರ್ ವಿಸ್ಮಯೋತ್ಫುಲ್ಲಲೋಚನರುಮಾ ವಿಷ್ಕೃತಾನಂದರುಮಪ್ಪುದುಮನಂತರಂ ಸಖೀಜನಂಬೆರಸು ಚಂದ್ರಾಪೀಡದೇವನನಲಂಕ ರಿಸಿ ಶರೀರಸ್ಥಿತಿಕರಣಾರ್ಥಂ ಸಕಲರಾಜಲೋಕಮುಂ ವಿಸರ್ಜಿಸಿ ಮಹಾಶ್ವೇತಾನುರೋ ಧದಿಂ ಕೃತಫಲಜಲಾಹಾರೆಯಾಗಿ ತದನಂತರಂ ಮದಲೇಖೆಗೆಂದಳೆನ್ನೆಗಮೆನಗೀ ಮನೋ ಹರಂ ಸನ್ನಿದನಪ್ಪನನ್ನೆವರಮೀ ತೆಱದಿಂದಿರಲ್ವೇಡಿರ್ದುದಱಿಂ ವಿಸ್ಮಯಮಪ್ಪೀ ವೃತ್ತಾಂತ ಮನಾದ್ಯಂತಮಾಗಿ ತಾಯ್ತಂದೆಗಳ್ಗೆ ತಿಳಿಯವೇಟ್ಟು ಸಮಾಧಾನಮಂ ಮಾಳ್ಪುದೆಂ ದಾಕೆಯುಂ ಬೇಗಂ ಪೋಗಲ್ವೇಟ್ಟೆಂದಿನಂದದಿಂ ಚಂದ್ರಾಪೀಡಚರಣಕಮಲಂಗಳಂ ದೃಢ ಪ್ರತ್ಯಯದಿನಾರಾಧಿಸುತ್ತಿರ್ದಳನ್ನೆಗಂ

ಪರೆಯೆ ಮುಗಿಲ್ ಜಲಕ್ಕನಿರಲೆಣ್ದೆಸೆ ನೀರ್ತೆಗೆಯಲ್ಕೆ ಬೆಳ್ಮಳೆ
ಲ್ದೆರೆಗಳನಪ್ಪುಕೆಯ್ಯೆ ತೊಱೆ ಶಾಲಿವನಾಳಿಯ ಪೆಂಪಿನಿಂದನಾ
ವರಿಸೆ ಪೊಲಂ ಸರೋಜಕುಮುದೋಜ್ವಲಮಾಗೆ ಕೊಳಂ ಪಳಚ್ಚನಾ
ಗಿರೆ ಶಶಿರಶ್ಮಿ ಬಂದುದತಿನಿರ್ಮಲ ಸೀರದನಪ್ಪ ಶಾರದಂ ೭೮

ವ॥ ಅಂತು ಬಂದ ಶಾರದಾಗಮದೊಳೊಂದುದಿವಸಂ ಚಂದ್ರಾಪೀಡಚರಣಮೂಲೋಪವಿಷ್ಟೆಯಾದ ಕಾದಂಬರಿಯಲ್ಲಿಗೆ ಮೇಘನಾದಂ ಬಂದು ತಡದುದರ್ಕುತ್ಕಂಠಿತರಾಗಿ ತಾರಾಪೀಡದೇವನುಂ ವಿಲಾಸವತೀಮಹಾದೇವಿಯುಮಾರ್ಯಶುಕನಾಸನುಂ ವಾರ್ತಾಹರರನಟ್ಟಿದೊಡವರುಮರಸನಂ ಕಾಣಲೆಂದು ಬಂದಿರ್ದಪರಿಲ್ಲಿಗೆ ತಕ್ಕುದಂ ದೇವಿಯರೆ ಬಲ್ಲಿರೆಂದು ಬಿನ್ನವಿಸುವುದುಂ ತೊಟ್ಟನೆ ವಿಚಿತ್ರವೃತ್ತಾಂತಸ್ಮರಣ ಪರಿಕ್ಷುಬ್ಧಹೃದಯೆಯುಂ ಗದ್ಗದಿತಾನಗೃಹ್ಯಮಾಣಕಂಠೆಯುಮಾಗಿ ಕಾದಂಬರಿ ಕಿಱಿದು ಬೇಗಂ ತನ್ನೊಳೆ ಚಿಂತಿಸುತ್ತಮೆಂತಾನುಂ ವಾರ್ತಾಹರರಂ ಬರವೇೞ್ಪೆಂಬುದುಂ ಮೇಘನಾದಂ ತಂದು ಕಾಣಿಸೆ ಚಂದ್ರಾಪೀಡಚರಣಂಗಳ್ಗೆ ದೂರದೊಳೆ ಸರ್ವಾಂಗಾಲಿಂಗಿತ ಮಹೀತಳರಾಗಿ ಪೊಡಮಟ್ಟು ಕುಮಾರನಂ ಕಾಣುತ್ತೆ ಕೌತುಕದಿನವಹಿತೋತ್ಪಕ್ಷ್ಮನಿಭೃತದೃಷ್ಟಿಗಳುಂ ಖಿನ್ನವದನರುಮಾದ ವಾರ್ತಾಹರರಂ ನೀಡುಂನೋಡಿ ಕಾದಂಬರಿಯಿಂತೆಂದಳ್

ಇದು ಖೇದಪ್ರದಮಲ್ತು ವೃತ್ತಕಮಿದಾಶ್ಚರ್ಯಪ್ರದಂ ಮರ್ತ್ಯನೆಂ
ಬುದುವೇಡೀ ವಿಭು ದೇವತಾತ್ಮನಿದನೀ ವಕ್ತ್ರೇಂದು ಪೇೞುತ್ತಮಿ
ರ್ದುದು ದಲ್ ಪೇೞ್ವುದು ಪೋಗಿ ನೀವಿದಱಿನೀಗಳ್ ಬೇಗವಚ್ಛೋದತೀ
ರದೊಳಿರ್ದಂ ನೃಪಚಂದ್ರನೆಂಬಿದನೆ ರಾಜೇಂದ್ರಂಗೆ ನಿರ್ವ್ಯಾಕುಳಂ ೭೯

ವ॥ ಎಂಬುದುಂ ಪ್ರತ್ಯಕ್ಷಿತಸಕಲವೃತ್ತಾಂತನಪ್ಪನನೆಮ್ಮೊಡನೆ ದೇವಿಯರ್ ಬೆಸಸುವುದೆನೆ ಕಾದಂಬರಿಯುಮದನೆ ಮನಂಗೊಂಡು ಮೇಘನಾದಂಗೆ ಬೆಸಸುವುದುಮಾತಂ ತ್ವರಿತಗತನೆಂಬ ಕುಮಾರಸೇವಕನಂ ಕರೆದೀ ವೃತ್ತಾಂತಮುಂ ತಾರಾಪೀಡದೇವಂಗೆ ಬಿನ್ನವಿಸಿ ಬಾಯೆಂದು ವಾರ್ತಾಹರರೊಡನೆ ಪೋಗಲ್ ಪೇೞ್ವುದುಮಾ ತ್ವರಿತಗತನತಿವೇಗದಿಂದವರೊಡನೆ ಕೆಲವಾನುದಿವಸಂಗಳಿನುಜ್ಜಯಿನಿಯನೆಯ್ದಿ ಪುಗುವಾಗಳುಜ್ಜಯಿನಿವಾಸಿಗಳಪ್ಪ ನರಪತಿಪ್ರಭೃತಿ ಬಂಧುಜನಂಗಳ್ ತಮ್ಮತಮ್ಮವರ ವೃತ್ತಾಂತಂಗಳಂ ಬೆಸಗೊಳಲದರ್ಕದತ್ತಪ್ರತಿವಚನರಾಗಿ ರಾಜಭವನವನೆಯ್ದೆವರ್ಪುದುಮತಿಸಂಭ್ರಮದಿಂ ಪರಿಜನಂಗಳ್ ತಮುತಮುಗೆ ಪರಿತಂದು ಚಂದ್ರಾಪೀಡದೇವನತ್ತಣಿಂ ವಾರ್ತಾಹರರ್ ವಂದರೆಂದು ವಿಲಾಸವತೀಮಹಾದೇವಿವೆರಸಿರ್ದ ತಾರಾಪೀಡದೇವಂಗೆ ಬಿನ್ನವಿಸಲೊಡನಾನಂದಬಾಷ್ಪಲುಳಿತಲೋಚನನುಂ ವಾರ್ತಾಹರಾಗಮನದತ್ತದೃಷ್ಟಿಯುಮಾಗಿ

ಇದು ಪಿರಿದಪ್ಪ ಬೇವಸದ ಬೀಡು ಪಥಶ್ರಮದಾಗರಂ ಪ್ರವಾ
ಸದ ಮೊದಲೆಂಬಿದ ವಿವಿಧ ವೈಪಥಪಾಂಸುಗಳಿಂದೆ ಸಾಡೆ ಸೀ
ೞದ ತಲೆಯುಂ ಕರಂ ಮಲಿನಮಾದ ಪಟಚ್ಚರಮುಂ ನೆಗೞ್ದಿಲಂ
ದಿದಿರೊಳೆ ಲೇಖವಾಹನಿವಹಂ ಬರೆ ಕಂಡನಿಳಾಧಿನಾಯಕಂ ೮೦

ವ॥ ಅಂತು ಕಂಡು

ತನಯಂ ಕುಶಲದೆ ಬರುತಿ
ರ್ದನೆ ಪೇೞೆಮೆನುತ್ತಮುಂತೆ ವಾರ್ತಾಹರರಂ
ತನಗೆ ಪೊಡಮಡದ ಮುನ್ನಮೆ
ಜನಕಂ ಬೆಸಗೊಂಡನಾಗಳುತ್ಕಂಠತೆಯಿಂ ೮೧

ವ॥ ಅದಲ್ಲದೆಯುಂ

ಎಂತುಟು ಯುವರಾಜನ ವೃ
ತ್ತಾಂತಂ ಬರುತಿರ್ಪನೆಲ್ಲಿ ತಡೆದಿರ್ದಂ ತಾ
ನಿಂತೇಕೆ ಬಿನ್ನವತ್ತಲೆ
ಯಂ ತಂದಿರೆ ತೋಱಿಮೆಂದು ನುಡಿವುದುಮಾಗಳ್ ೮೨

ವ॥ ಆ ಲೇಖವಾಹಕರ್ ತ್ವರಿತಗತಿಸಮೇತಂ ರಾಜಧಿರಾಜಂಗೆ ಕೃತಪ್ರಣಾಮರಾಗಿ ದೇವ ಚಂದ್ರಾಪೀಡದೇವನಚ್ಛೋದಸರೋವರದ ತಡಿಯಲ್ಲಿರ್ದಂ ಮೇಲಾದ ವೃತ್ತಾಂತಮಂ ತ್ವರಿತಗತಿ ಬಿನ್ನವಿಸಿದಪ್ಪನೆನುತ್ತಂ ವಿಷಣ್ಣದೂನವದನರಾಗಿರ್ಪುದುಂ ವಿಳಾಸವತಿಮಹಾದೇವಿಯಿಂತೆಂದಳ್

ನಿರುದ್ಧನಿಜಬಾಷ್ಪಮೋಕ್ಷರತಿದುಃಖದೀನಾನನರ್
ಪರಿಚ್ಯುತಮುದರ್ ಮದಾನನ ವಿಲೋಕನತ್ರಸ್ತರಿಂ
ತಿರಲ್ಕೆ ಬೆಸಗೊಳ್ವುದೇಂ ಮಗನದೊಂದು ವೃತ್ತಾಂತಮಂ
ನಿರಾಕುಳಮೆ ಪೇೞ್ದರಾಂ ನೆರೆಯೆ ಕೇಳ್ವೆನಿನ್ನೆಲ್ಲಮಂ॥ ೮೩

ವ॥ ಎನುತ್ತಂ ಪುತ್ರಸ್ನೇಹಕಾತರಹೃದಯೆಯಾದುದಱಿಂ ಬಹುಪ್ರಕಾರದಿಂ ಬಾಯೞಿದು ಪಲವಿಸುತ್ತಂ ಮೂರ್ಛಾಪ್ರಪನ್ನೆಯಾಗಿ ಕಿಱಿದಾನುಂಬೇಗಕ್ಕೆ ಶಿಶಿರೋಪಚಾರಂಗಳಿಂ ಲಬ್ಧಚೇತನೆಯುಮರ್ಧೋನ್ಮೀಲಿತಲೋಚನೆಯುಮಾದ ವಿಳಾಸವತೀಮಹಾದೇವಿಯುಂ ಬಾಷ್ಪಗದ್ಗದ ಕಂಠನಾಗಿ ತಾರಾಪೀಡನಿಂತೆಂದಂ

ಮಗನಾದನೆನಿಪ್ಪವರ್ಗೀ
ನೆಗೞ್ತೆ ನಮಗೇಕೆ ಬೇಡ ಕೇಳ್ವಂ ಸಾವ
ನ್ನಗವಿನಿಸಂ ಮತ್ತಂ ತ್ವರಿ
ತಗತನೆ ತಾಂ ಪೇೞಲಿರ್ದನೆಂಬುದನೀಗಳ್॥ ೮೪

ವ॥ ಎಂದಾ ತ್ವರಿತಗತನಂ ಬೆಸಗೊಳ್ವುದುಮವಂ ವೈಶಂಪಾಯನವ್ಯತಿಕರದಿಂ ಚಂದ್ರಾಪೀಡದೇವಂಗಾದ ವೃತ್ತಾಂತಮುಮಂ ತಕ್ಷಣದೊಳೆ ವಿಸ್ಮಯಮಾಗಲಾಕಸ್ಮಿಕಮಾಗಸದೊಳೆಗೆದ ದಿವ್ಯವಚನಮುಮನನಂತರಮಾ ಪತ್ರಲೇಖೆಯೊಡನಚ್ಛೋದಸರೋ

ವರದೊಳ್ ಮುಟುಗಿದಿಂದ್ರಾಯುಧಮೆ ವಿಗತಶಾಪನಾಗಿ ಕಪಿಂಜಲಕನೆಂಬ ಕುಮಾರನಾದುದುಮನಾತನೆ ಮಹಾಶ್ವೇತೆಯಲ್ಲಿಗೆವಂದು ಪರಸ್ಪರ ಶಾಪದಿಂ ಸಕಲಕಳಾಭಿರಾಮನುಂ ವಿಬುಧಜನಸೇವ್ಯನುಂ ಯಶಶ್ಚಂದ್ರಿಕಾಧವಳಿತಸಕಲಭುವನನುಂ ಕುವಲಯಾನಂದಕರನುಮೆನಿಸಿದ ಚಂದ್ರಮನೆ ದೇವರ್ಗೆ ಚಂದ್ರಾಪೀಡನಾಗಿ ಪುಟ್ಟಿದನೆಂಬುದಮುನವರ್ ಕತಿಪಯದಿನದಿಂ ಪ್ರತ್ಯುಜ್ಜೀವಿತರಾದಪ್ಪುದನುಂ ತದ್ವಚನಾನುರೂಪನಾಗಿ ಚಂದ್ರಾಪೀಡದೇವನ ದಿವ್ಯದೇಹದೊಳಾದ ದೃಢತರ ಪ್ರತ್ಯಯೋತ್ಪಾದಕಂಗಳೆನಿಸಿದ ಪ್ರತಿದಿನಪ್ರವೃದ್ಧಮಾನ ಲಾವಣ್ಯಾದ್ಯನೇಕ ಚಿಹ್ನಂಗಳುಮನಾದ್ಯಂತಂ ಬಿನ್ನವಿಸೆ ನಿರತಿಶಯಶೋಕಾಕರಮುಂ ದುಶ್ಶ್ರವಮುಂ ವಿಸ್ಮಯೋತ್ಪಾದಕಮುಂ ಅತಿಕೌತುಕಜನಕಮುಮಪ್ಪ ವೈಶಂಪಾಯನನ ವೃತ್ತಾಂತಮಂ ತಾರಾಪೀಡದೇವಂ ಕೇಳ್ದು ಕೆಲದೊಳ್ ನಿರ್ವಿಶೇಷಾವಸ್ಥನಾಗಿರ್ದ ಶುಕನಾಸನ ಮೊಗಮಂ ನೋಟ್ಟಪುದುಂ ಆ ಮಂತ್ರಿಮುಖ್ಯಂ ತದವಸ್ಥನಾಗಿಯುಂ ಸುಹೃದ್ದುಃಖಾಪನೋದನಾರ್ಥಂ ಸ್ವಸ್ಥನಂದದಿಂ ನರೇಂದ್ರನನಿಂತೆಂದಂ

ಉದಯಿಕ್ಕುಂ ಪರಮೇಶ್ವರೇಚ್ಛೆಯೊಳೆ ಮೇಣ್ ಪ್ರಾಧಾನ್ಯದಿಂ ಮೇಣ್ ಸ್ವಕ
ರ್ಮದೆ ಮೇಣ್ ವಸ್ತುನಿಜಸ್ವಭಾವದೊಳೆ ಮೇಣ್ ವೈಚಿತ್ರ್ಯಮಂ ಕೂಡೆ ತಾ
ಳ್ದಿದ ಸಂಸಾರದೊಳೆಂದುಮಿಂತೆ ಸುಖದುಃಖಾದಿಪ್ರಸಂಗಕ್ಕೆ ಪು
ಟ್ಟಿದ ನಾನಾವಿಧಮಪ್ಪ ಭೂತನಿವಹಕ್ಕಾರಬ್ಧಕಾರ್ಯೋದಯಂ ೮೫

ಇದಱಿೊಳ್ ಯುಕ್ತಿಯನಾರ
ಯ್ಯದಿರುಗ್ರವಿಷಪ್ರಸುಪ್ತನೆಚ್ಚರ್ಪಂ ಧ್ಯಾ
ನದೆ ದಲ್ ಕಾಜಿರ್ೊನ್ನಂ ತಿರು
ಗಿದಪುದಯಸ್ಕಾಂತಶಕ್ತಿಯೆಲ್ಲಿತ್ತದಱಿೊಳ್ ೮೬

ವ॥ ಮತ್ತಂ ಮದ ಮಾಂದ್ಯೋತ್ಪಾದನಾಪಹರಣ ಮಾರಣವಶೀಕರಣ ದ್ವೇಷಣಾದಿಗಳ್ಗೆ ಪೆಱವುಮೀ ದೊಱೆಯವರ್ಕೆ ಪಿರಿದುಮಾಗಮಂಗಳೆ ಪ್ರಮಾಣಂಗಳಲ್ಲದೆಯುಂ ಪುರಾಣರಾಮಾಯಣ ಭಾರತಾದಿಗಳೊಳಂ ಶಾಪಕಥನಂಗಳನೇಕಪ್ರಕಾರಮಿರ್ಪುವವೆಂತೆನೆ :

ಸಮನಿಸಿದತ್ತು ಕೇಳಜಗರತ್ವಮಗಸ್ತ್ಯನದೊಂದು ಶಾಪದಿಂ
ದಮೆ ಸುರರಾಜನಪ್ಪ ನಹುಷಂಗೆ ವಸಿಷ್ಠನ ಶಾಪದಿಂದವ
ಷ್ಟಮವಸುಗಲ್ತೆ ಶಂತನುತನುಜಾತೆ ಸಾರ್ದುದು ಶುಕ್ರಶಾಪದಿಂ
ದಮೆ ದೊರೆಕೊಂಡುದಲ್ಲವೆ ಯಯಾತಿಗೆ ಯೌವನದೊಳ್ ಜರಾಗಮಂ ೮೭

ವ॥ ಅದಲ್ಲದೆಯುಂ

ತ್ರಿಜಗದ್ವಂದಿತನೆನಿಸಿ
ರ್ದಜನಾ ಜಮದಗ್ನಿಗಖಿಳಭುವನಪ್ರಭು ಪಂ
ಕಜನಾಭಂ ದಶರಥಭೂ
ಭುಜಂಗೆ ಸುತನಾದನೆಂಬುದಂ ಕೇಳ್ ಮೊದಲೊಳ್ ೮೮

ಜನಿಯಿಸುವರಲ್ತೆ ದೇವರ್
ಮನುಜರ್ಗದಱಿಂದೆ ಸಂದೆಯಂಬಡಲೇನಾ
ಮನುಜರ್ಗೆಂ ಕಿಱಿಯನೆ ನೀಂ
ವನರುಹನಾಭಂಗೆ ಚಂದ್ರನೇಂ ಕಿಱುಕುಳನೇ ೮೯

ಕನಸಿನೊಳಾ ದೇವಿಯರಾ
ನನದೊಳ್ ಚಂದ್ರಪ್ರವೇಶಮಾಯ್ತೆಂದುಸಿರ್ದಯ್
ಜನಪತಿ ನೀಂ ಪೇೞ್ದನೆ ದಲ್
ನಿನಗಾನುಂ ಪುಂಡರೀಕಮುಂ ಕಂಡುದುಮಂ ೯೦

ಒರ್ವನಮೃತಸ್ವರೂಪಸದೊ
ಳೊರ್ವಂ ತಾನಿರ್ದಪಂ ತದಮೃತದಿನಂತಾ
ಯಿರ್ವರ್ಗಂ ಪ್ರತ್ಯುದ್ಭವ
ಮುರ್ವೀಪತಿ ಸಮನಿಸಿರ್ಪುದೇಂ ಸಂದೆಯಮೇ ೯೧

ಭುವನಕ್ಕಾದಮಪೂರ್ವಮಾದುದೆನಿಸಿರ್ದಾ ರೂಪು ಲಾವಣ್ಯವೈ
ಭವಮಾ ಕಾಂತಿವಿಶೇಷಮಾ ಜನಮನೋಹಾರಿತ್ವಮಾ ಸತ್ಕಳಾ
ನಿವಹಂ ಶ್ರೀನಿಲಯತ್ವಮಾ ಸಕಲಲೋಕಾಹ್ಲಾದಕಾರಿತ್ವಮು
ಕ್ಕುವೆ ಚಂದ್ರಾತ್ಮಕನಲ್ಲದಂದು ನೆಗೞ್ದಾ ರಾಜೇಂದ್ರಚಂದ್ರಾಂಕನೊಳ್ ೯೨

ಪಡೆದಾ ಕಾದಂಬರೀ ದೇವಿಗೆ ವರನೆ ಭವನ್ನಂದನಂ ಶಾಶ್ವತೈಶ್ವ
ರ್ಯದ ಪೆಂಪಂ ಲೋಕಪಾಲತ್ವದ ಮಹಿಮೆಯನುತ್ಸಾಹದಿಂ ತಾಳ್ದಿ ತದ್ದೇ
ಹದಿನಾದಂ ಭಕ್ತಿಯಿಂ ನಿನ್ನಡಿಗೆಱಗಿದಪಂ ತಾನೆ ಚಂದ್ರಂ ದಲೀ ಬಂ
ದದಱಿಂ ಸೈಪಾವುದಾ ಶಾಪಮೆ ನಮಗೆ ವರಂ ಶೋಕಮಂ ಮಾಣ್ಬುದೀಗಳ್ ೯೩

ವ ॥ ಎಂದು ಶುಕನಾಸಂ ತಿಳಿಯ ಪೇೞೆ ತಾರಾಪೀಡನರೇಂದ್ರಂ ಮತ್ತ
ಮಿಂತೆಂದಂ

ಉಱಿದುಪವೇನುಂ ತೋಱವು
ಘಱಿಲನೆ ತಾಂ ತನ್ನ ಕೂರ್ತ ತನ್ಮಂಗಾದೊಂ
ದಟಲಿಂ ಮಗನೆರ್ದೆಯೊಡೆದುದು
ತೊಟಲುತ್ತಿರ್ದಪುದು ಮನದೊಳಂ ಕಣ್ಗಳೊಳಂ ೯೪

ಸಂತೈಸಲ್ಕಾರ್ತಪೆನಿ
ಲ್ಲಿಂತುಂ ನೋಡೆನ್ನ ನಾನೆ ದಲ್ ದೇವಿಯನಿ
ನ್ನೆಂತಾವ ತೆಱದಿನೀಗಳ್
ಸಂತೈಸುವೆನೆನುತಮಂತೆ ತಾರಾಪೀಡಂ ೯೫

ಪಾರಲ್ಕೇಂ ಜೀವಿತ ಸಂ
ಧಾರಣಕಿಂ ಗಮನಮೊಂದೆ ಪೊಱಗಾಗಿರೆ ಮ
ತ್ತಾರಯಲುಪಾಯವಿಲ್ಲವ
ಧಾರಿಸುವುದು ಮನದೊಳಾರ್ಯ ನಮಗಿದು ಕಾರ್ಯಂ ೯೬

ವ|| ಎಂಬುದುಂ ವಿಲಾಸವತೀ ಮಹಾದೇವಿ ವಿಲಂಬಮಾವುದೇಱಿಮೆಂಬುದು ಮಿತ್ತಲತಿಸಂಭ್ರಮೆಯಾಗಿ ಚಂದ್ರಾಪೀಡನ ವೃತ್ತಾಂತಮಂ ಕೇಳ್ದು ಮನೋರಮೆ ಬರುತ್ತಿರ್ದಳೆಂಬುದುಂ ಕೇಳ್ದು ವಿಲಾಸವತೀಮಹಾದೇವಿಯಂ ತಾರಾಪೀಡನಿಂತೆಂದಂ.

ಭಾವಿಸು ಧೈರ್ಯಮಂ ತನಯರಿರ್ವರವಾರ್ತೆಯನತ್ತ ಕೇಳ್ವುದುಂ
ಜೀವಮನಂತೆ ಪತ್ತುವಿಡುಗುಂ ತನುವಿಂದದಱಿಂದಮೀಗಳಿ
ನ್ನಾವುದುಪಾಯದಿಂದನಿತುಮಂ ತಿಳಿವಂತಿರೆ ಮುಂಚೆ ಪೇಳ್ದು ನೀಂ
ಜೀವಿಸುವಂತು ಸಂತಯಿಸು ಪೋಗಿ ಮನೋರಮೆಯಂ ಮನಃಪ್ರಿಯೇ ೯೭

ವ|| ಎಂದು ಪೇೞೆ ಪೋಗಿ ಮನೋರಮೆಯುಂ ಸಂತೈಸಿ ಮುಂದಿಟ್ಟೊಡಗೊಂಡು ಬಂದಳ್. ಇತ್ತಲಾರ್ಯ ಶುಕನಾಸಂಬೆರಸು ಗಮನಸಂವಿಧಾನಮಂ ಮಾಡಿ ತಾರಾಪೀಡಂ ಪೊಱಮಡುವುದುಂ ರಾಜಾದೇಶದೊಳಂ ಚಂದ್ರಾಪೀಡಂ ಸ್ನೇಹದೊಳಮಾಶ್ಚರ್ಯದರ್ಶನ ತಾತ್ಪರ್ಯದೊಳಂ ಪ್ರಥಮಗತಪಿತೃಮಿತ್ರಭ್ರಾತೃಸ್ವಜನದರ್ಶನೌತ್ಸುಕ್ಯದೊಳಂ ಗೃಹರಕ್ಷಕವರ್ಜಮಾಗುಜ್ಜಯನಿಯ ಸಕಳರಾಜಲೋಕಮೆಟ್ದು ನಡೆಗೊಳ್ವುದಂಕಂಡಿದು ಶೀಘ್ರಗಮನವಿಘಾತಹೇತುವೆಂದು

ಇರಿಸಲ್ವೆಡಿರ್ದರಂ ಪಿಂದಿರಿಸಿ ಸಕಲರಾಜನ್ಯಕಂ ಸುತ್ತುವಂದೇ
ಳ್ತರಲಶ್ವಾನೀಕವಾದಂ ಪಥಮನಿರದೆ ಪೀರ್ತಂದುವೋ ಪೇಱಿಮೆಂಬಂ
ತಿರಲೇಳ್ತಂದೆಲ್ಲಿಯುಂ ನಿಲ್ಲದೆ ಕೆಲದಿವಸಕ್ಕೆಯ್ದಿದಂ ಪದ್ಮಪತ್ರೋ
ತ್ಕರಕಾಂತಿಪ್ರಚ್ಛದಾಚ್ಛಾದಿತ ಜಲಮನಿಪಚ್ಛೋದಮಂ ಸಾರ್ವಭೌಮಂ ೯೮

ವ॥ ಅಂತೆಬ್ದು ವಿಕಲ್ಪಶತಡೋಲಾಧಿರೂಢನಾಗಿ ವಾರ್ತೆಯನಾರಯ್ಯಲಾಪ್ತರೆನಿಸಿದ ಸಾದಿಗಳಂ ತ್ವರಿತಗತಂಬೆರಸಟ್ಟಿದನನ್ನೆಗವರ್ವರಸುಜ್ಝಿತಾತ್ಮಸಂಸ್ಕಾರಮಲಿನೀಕೃತಶರೀರರುಂ ಅವನಿತಲನಿವೇಶಿತೋತ್ತಮಾಂಗರುಮುದ್ಬಾಷ್ಪದೀನತರದೃಷ್ಟಿಗಳುಮಾಗಿ ಲಜ್ಜೆಯಿಂ ರಸಾತಳಮಂ ಪುಗುವಂತೆ ಬಗೆದು ಮೇಘನಾದಸಹಿತಂ ಬರುತಿರ್ದ ಚಂದ್ರಾಪೀಡಚರಣತಳನಿಬದ್ಧಜೀವಿತರಪ್ಪ ನಿಖಿಳ ರಾಜಪುತ್ರರಂ ಕಂಡು ಸಮುಲ್ಲಸಿತ ತನಯಶೋಕಾಕ್ರಾಂತಸಾದೊಡಮುಚ್ಛ್ವಸಿತಹೃದಯನುಂ ದೃಢೀಭೂತ ಚಂದ್ರಾಪೀಡದೇಹಾವಿನಾಶಪ್ರತ್ಯಯನುಮಾಗಿ ಪಕ್ಕದಿರ್ದ ವಿಳಾಸವತೀಮಹಾದೇವಿಯರಂ ತಾರಾಪೀಡನಿಂತೆಂದಂ

ಬಗೆಯೊಳ್ ಧೈರ್ಯಮನುಂಟುಮಾಡು ತನುವಂ ತಾಳ್ದಿರ್ದಪಂ ನಿಶ್ಚಯಂ
ಮಗನೆಂತುಂ ತೆಗೆ ಮೇಘನಾದಸಹಿತಂ ತತ್ಪಾದಪದ್ಮೋಪಜೀ
ವಿಗಳಾಗಿರ್ದರಮಕ್ಕಳೆಲ್ಲವಿದೆ ನಮ್ಮಂ ಕಾಣಲೆಂದೀಗಳಿ
ಲ್ಲಿಗೆ ಮುಂತೀ ಬರುತಿರ್ಪರೀಕ್ಷಿಸಿನಿಸಂ ಪಂಕೇಜಪತ್ರೇಕ್ಷಣೇ ೯೯

ವ॥ ಎಂಬುದಮದಂ ಕೇಳ್ದು ಸುತನಿರ್ವೇಶಪಮಪ್ಪ ರಾಜಲೋಕಮಂ ನೋಡಿ ಧೈರ್ಯಮಂ ಪತ್ತುವಿಟ್ಟಿರ್ದಪಡಿದೆಱೞದಂತಾಗೆ

ಒಡನಾಡಿಯೊಡನೆ ಬಳೆದೊಡ
ನೊಡಸಂದಿರ್ದರಸುಮಕ್ಕಳೆಲ್ಲರ್ ಬರೆ ನೀಂ
ನಡುವೆಸೆದು ಬಾರದಾವುದು
ತೊಡರ್ಪಿನಿಂ ಪೆಱಗೆ ನಿಂದೆಯೊರ್ವನೆ ಕಂದಾ ೧೦೦

ವ॥ ಎಂದು ಪ್ರಲಾಪಂಗೆಯ್ವ ವಿಲಾಸವತೀಮಹಾದೇವಿಯನಾಶ್ವಾಸಿಸುತಿರ್ಪುದುಮಖಿಳರಾಜಲೋಕಂಬೆರಸು ಮೇಘನಾದನವನಿತಳನಿವೇಶಿತೋತ್ತಮಾಂಗನಾಗಿ

ಎಂತುಟು ಮೇಘನಾದ ತೊಡಕಿಲ್ಲದೆ ಪೇೞ್ ಮಗನಿರ್ದದೊಂದುವೃ
ತ್ತಾಂತಮನೆಂಬುದುಂ ಪ್ರತಿದಿನಂ ನೃಪಚಂದ್ರನ ದಿವ್ಯದೇಹದಿಂ
ಕಾಂತಿ ಪೊದಟ್ದು ಪರ್ವಿ ಗಗನಾಂತರಮಂ ಪುದಿದಿರ್ಪುದೀಗಳೇ
ನುಂ ತಡವಿಲ್ಲ ಸನ್ನಿಹಿತನಾದಪನಲ್ತೆ ಭವತ್ತನೂಭವಂ ೧೦೧

ವ॥ ಎಂದು ಮೇಘನಾದಂ ಬಿನ್ನಪಂಗೆಯ್ಯೆ ಸಮುಪಜಾತಪ್ರತ್ಯಾಶೆಯಾಗಿರ್ದ ವಿಲಾಸವತೀಮಹಾದೇವಿಗಿಂತೆಂದಂ

ಅಮೃತಾಂಶುಮೂರ್ತಿಯೆನಿಸಿ
ರ್ದ ಮಗನನೀಕ್ಷಿಸಿ ಕೃತಾರ್ಥರಪ್ಪಂ ನಡೆ ಪೋ
ಪಮೆನುತ್ತೆ ಮಹಾಶ್ವೇತಾ
ಶ್ರಮಕ್ಕೆ ನಡೆತಂದನೆಂದು ತಾರಾಪೀಡಂ ೧೦೨

ವ॥ ಅನ್ನೆಗಮಿತ್ತ ಚಂದ್ರಾಪೀಡನ ಗುರುಜನದ ಬರವಂ ಮಹಾಶ್ವೇತೆ ಕೇಳ್ದು ಭೋಂಕನೆ ಕಣ್ಬನಿಗಳಂ ಸೂಸಿ

ಕರಗಿಸುತಿರ್ದಪೆಯೆನ್ನಂ
ಮರಣಮನೆನಗೇಕೆ ಮಾಡೆ ವಿಧಿಯೆನುತಂ ನಿ
ತ್ತರಿಸದೆ ಲಜ್ಜಿಸಿ ಪೊಕ್ಕಳ್
ಪರಿದು ಮಹಾಶ್ವೇತೆ ನಿಜಗುಹಾಭ್ಯಂತರಮಂ ೧೦೩

ವ॥ ಗಂಧರ್ವರಾಜನಂದನೆಯುಂ ಮೋಹಾಂಧಕಾರಂ ಕವಿಯೆ ಚಂದ್ರಮೂರ್ತಿಯಪ್ಪ ಚಂದ್ರಾಪೀಡನ ಪಕ್ಕದೊಳ್ ಸಖೀಜನಹಸ್ತಾವಲಂಬಿತ ಶರೀರೆಯಾಗಿರ್ದಳ್ ಇತ್ತ ಶುಕನಾಸಾವಲಂಬಿತಶರೀರನಾಗಿ ತಾರಾಪೀಡಂ ತದಾಶ್ರಮಮಂ ಪುಗುವುದುಮಲ್ಲಿ ತನ್ನ ಮಗನೆತ್ತವೋದನೆಂದು ನೀಡುಂ ನೋಡುತುಂ ಮನೋರಮಾವಲಂಬಿತ ಶರೀರೆಯಾಗಿ ವಿಲಾಸವತೀ ಮಹಾದೇವಿ ಪೊಕ್ಕು ಸಹಜಮಪ್ಪ ಕಾಂತಿಯೊಳೊಪ್ಪಂಬಡೆದು ಲೆಪ್ಪದಂತಿರ್ದ ಮಗನಂ ಗೆಂಟೆನೊಳೆ ಕಂಡು

ಇನಿತು ದಿವಸಕ್ಕೆಂತಾನುಂ ಕಂಡೆನಪ್ಪುವೆ ಕಂದ ಹಾ
ಯೆನುತ ನಿವಿರಲ್ ತೋಳ್ಗಳ್ ಕಣ್ಣೀರಪೂರದಲಂದು ಝು
ಮ್ಮೆನುತೆ ನೊಲೆವಾಲಾದಂ ತಾನೆತ್ತಲುಂ ತೊರೆದುರ್ಚೆ ಪಾ
ಯ್ವಿನಿಗೆವಿುರದೆಳ್ತಂದಳ್ ಸೋತ್ಕಂಠೆ ಪುತ್ರವಿಮೋಹದಿಂ ೧೦೪

ವ॥ ಅಂತು ಬರುತ್ತಂ

ಮಱುಮಾತಂ ಕುಡು ವತ್ಸ ನಿನ್ನ ವಿನಯಂ ಪೇಱಿತ್ತವೋಯ್ತೀಗಳೀ
ತೆಱನೇಕಾದುದೊ ಕಂದ ಕಾಲ್ವಿಡಿದಪೆಂ ನಿಮ್ಮಯ್ಯನೀ ಬಂದನ
ಲ್ಕಿಱನೊಳ್ ನೀನಿದಿರೇೞ್ದು ಕಾಲ್ವೆಱಗು ಚಂದ್ರಾಪೀಡ ನೀಂ ಭಕ್ತಿಯಂ
ಮಱೆದೈ ನಿನ್ನಯ ಕೂರ್ಮೆಯೆಲ್ಲಿತೆನುತಂ ಬಾಯ್ವಿಟ್ಟು ಪುಯ್ಯಲ್ಚಿದಳ್ ೧೦೫

ಬಿಡದಾಲಿಂಗಿಸಿ ಪುತ್ರನಂ ಪದೆದು ಮೂರ್ಧಾಘ್ರಾಣಮಂ ಮಾಡಿ ಕ
ನ್ನಡಿಯಂತಿರ್ದ ಕದಂಪನೊತ್ತಿ ಕಡುಪಿಂದಿನ್ನೇವೆ ನಾನೆಂದು ಕೇ
ಸಡಿಯಂ ನೆತ್ತಿಯೊಳಿಟ್ಟುಕೊಂಡು ಪಿರಿದೊಂದಾಕ್ರಂದದಿಂ ಗಂಟಲಂ
ದೊಡೆವಂತಾಗಱುತಿರ್ದಳಿರ್ಪೆನೆಗಮೆಲ್ತಂದಂ ಧರಾಧೀಶ್ವರಂ ೧೦೬

ವ॥ ಅಂತು ಬಂದಂತರಿತ ನಿಜಪೀಡನಪ್ಪ ತಾರಾಪೀಡಂ ಚಂದ್ರಾಪೀಡನಂ ಪ್ರಜಾಪೀಡಾಪಹರಣಕ್ಷಮಂಗಳಪ್ಪ ಬಾಹುದ್ವಯದಿನಪ್ಪಿ ವಿಲಾಸವತೀ ಮಹಾದೇವಿಗಿಂತೆಂದಂ.

ಬಸುಱಿನೊಳ್ ಬಂದಂ ನವ್ಮೊ೦
ದು ಸುಕೃತದಿಂ ದೇವತಾತ್ಮನೀ ಮಗನಂ ಮಾ
ನಿಸನೆಂದು ದೇವಿ ನೀಂ ಭಾ
ವಿಸಿ ಶೋಕಮನೇನನಪ್ಪುಕಯ್ಯದಿರೀಗಳ್ ೧೦೭

ವ|| ಮತ್ತಂ ವೈಶಂಪಾಯನ ವಿಯೋಗದಿಂ ವಿಹ್ವಲಿತೆಯರಾದ ಮನೋರಮೆಯುಮಂ ಶುಕನಾಸನುಮಂ ನಾವೀಗಳಾವ ತೆಱದಿಂ ಸಂತೈಸಲ್ವೇೞ್ಪುದದಲ್ಲದೆಯುಂ ತ್ವದಾತ್ಮಜಾತ ಜೀವಿತಪ್ರಲಬ್ಧಾಭ್ಯುದಯ ಮಹೋತ್ಸವೆಯಪ್ಪ ಗಂಧರ್ವರಾಜತನೂಜೆ

ನಿನ್ನಯ ಸೊಸೆ ಕಾದಂಬರಿ
ಯುನ್ನಾಡೆಯುಮಾದ ಮನ್ಯುವಿಂದಂ ಮೂರ್ಛಾ
ಪನ್ನೆಯೆನಿಸಿರ್ಪಳೆಚ್ಚಱಿಂ
ಸನ್ನೆವರಂ ದೇವಿ ತೊಡೆಯಮೇಲಿಟ್ಟೀಗಳ್ ೧೦೮

ವ|| ಎಂದು ತಾರಾಪೀಡಂ ನುಡಿಯೆ

ಅತಿ ಸಂಭ್ರಮದಿಂದಂ ಸತಿ
ಸುತನಂ ಬಿಟ್ಟಿಲ್ಲಿದಳ್ ಮದನ್ವಯ ಜೀವ
ಪ್ರತಿಲಂಭನ ಹೇತುವೆನು
ತ್ರತಿಸಂಮೋಹದೊಳೆ ಹೃದಯಮಂ ತಾನೆೞವಿ ೧೦೯

ಮಗಳೆ ತೆಱೆ ನೀಂ ಕಣ್ಣಂ ನೀನಿಲ್ಲದನ್ನೆಗವಾಸೆಯಿ
ಲ್ಲ ಗಡ ಬೞಯಂ ಚಂದ್ರಾಪೀಡಾಂಕನಂ ಪಿಡಿದಟ್ಟಿಱಿಂ
ದಗಲದಿನಿತುಂ ಕಾಲಂ ಪೊರ್ದಿರ್ದ ನೀನಮೃತಾಂಗಿಯ್ಯೆ
ಮಗುೞ್ವುಮದಱಿಂ ಕಂಡೆಂ ರಾಜೇಂದ್ರಚಂದ್ರನ ವಕ್ತ್ರಮಂ ೧೧೦

ವ|| ಎಂದು ವಿಲಾಸವತೀಮಹಾದೇವಿ ನುಡಿಯೆ ಚಂದ್ರಾಪೀಡ ನಾಮಗ್ರಹಣದೊಳಂ ಪ್ರಿಯತಮಸ್ಪರ್ಶನಿರ್ವಿಶೇಷಮಪ್ಪ ಕರಸ್ಪರ್ಶದೊಳಂ ಮೂರ್ಛೆಯಿಂದೆಚ್ಚೆತ್ತು ನೋಡಿ ನಮ್ರಮುಖಿಯಾದ ಕಾದಂಬರಿಯಂ ಮದಲೇಖೆ ಮೆಲ್ಲನೆತ್ತಿ

ಪ್ರತಿಪತ್ತಿಮೂಢೆಯೆನಿಸಿ
ರ್ದ ತರುಣಿಯಂ ಗುರುಜನಕ್ಕೆ ಪೊಡವಡಿಪುದುಮಾ
ಸತಿಯಂ ಪರಸಿದರಾಯು
ಷ್ಮತಿ ನೀಂ ನಿಚ್ಚೈದೆಯಾಗೆನುತ್ತವರಾಗಳ್ ೧೧೧

ವ|| ಅಂತು ಪರಕೆಯಂ ಪರಸಿ ತಾರಾಪೀಡನರೇಂದ್ರಂ ಮದಲೇಖೆಗಿಂತೆಂದಂ

ನೋಡೆಲೆ ದೇವಿ ಬಂದೆವಲೆ ಚಿತ್ರರಥಾತ್ಮಜೆಯಿರ್ದ ದೂಸಱಿಂ
ಕೂಡಿದುದಟ್ಟಿಱಿಕೊಂದೆ ಯುವರಾಜನ ದಿವ್ಯಶರೀರದಲ್ಲಿಯಾಂ
ಮಾಡುವ ರುದ್ಧದೊಳ್ ಕಿಱಿದು ನಾಚುಗುವೋ ವಧುವಪ್ರಯೋಜನಂ
ನೋಡುತವಿರ್ದುವೇನಮೃತಮೂರ್ತಿಯ ನೋಡುತವಿರ್ಕೆ ಪಕ್ಕದೊಳ್ ೧೧೨

ವ|| ಎಂದು ಕಿಱಿದುಬೇಗವಿರ್ದಲ್ಲಿಂ ಪೊಱಮಟ್ಟು ಮುನ್ನೆ ಕಲ್ಪಿತವಾದ ನಿವಾಸಕ್ಕೆ ಪೋಗಿ ಪೆಱತೊಂದಾಶ್ರಮದೊಳೆಸೆವ ಶಿಲಾತಲಸನಾಥಮಪ್ಪ ತರುಲತಾ ಮಂಟಪದೊಳ್ ಕುಳ್ಳಿರ್ದು ಸಮದುಃಖಿಗಳಪ್ಪ ಮಂತ್ರಿಶುಕನಾಸನಮುನಖಿಲನಿಜಾನುಗತ ರಾಜಚಕ್ರಮುಮಂ ಕಳೆದವರೆಲ್ಲರುಮನಿಂತೆಂದಂ

ಇದು ಶೋಕೋದ್ರೇಕದಿಂದಂ ನುಡಿದ ನುಡಿಯೆನಲ್ವೇಡ ಮಚ್ಚಿತ್ತದೊಳ್ ತಾ
ಳ್ದಿದುದಂ ನಾನಾಡಿದಪ್ಪೆಂ ವಧುವೆರಸಿದ ಪುತ್ರಂಗೆ ಮದ್ರಾಜ್ಯಭಾರಾ
ಸ್ಪದಮಂ ಕೊಟ್ಟೊಂದು ಋಷ್ಯಾಶ್ರಮದೊಳೆ ತನುವಂ ಮುಪ್ಪಿನೊಳ್ ತೇದು ಮೋಕ್ಷಾ
ಸ್ಪದಮಂ ಕೈಕೊಳ್ವೆ ನಾನೆಂದಿರೆ ವಿಧಿವಶದಿಂದಿಂತುಟೊಂದಾದುದೀಗಳ್ ೧೧೩

ಆರಿರ್ದೊಡದೇಂ ರಾಜ್ಯದ
ಭಾರಂ ನಿಮ್ಮಿಂದನಪ್ಪುಕಯ್ದುದು ನೀವಾ
ಭಾರಮನಾಂ ಸುಖರಹಿತ ಶ
ರೀರದೆ ಪರಲೋಕಸುಖಮನಿಂ ಸಾಧಿಸುವೆಂ ೧೧೪

ವ|| ಎಂಬುದುಮಾ ಸಕಲರಾಜಲೋಕಂ

ಇದನೇನೆಂದಪ್ಪಿರೆಚ್ಚತ್ತ್ರಖಿಲಭುವನಸಾಮ್ರಾಜ್ಯಮಂ ತಾನೆ ದಲ್ ತಾ
ಳ್ದಿದಪಂ ರಾಜೇಂದ್ರಚಂದ್ರಂ ಪೆಱರ್ಗಿದು ತಳೆಯಲ್ ತಕ್ಕುಮೋ ದೇವ ನೀವಾ
ಳ್ದುದ ನಾವಾಳ್ದಪ್ಪೆವೆಂತೆಲ್ಲರುಮೆನೆ ಪರಿವಾರಾನ್ವಿತಂ ರಾಜ್ಯದೊಳ್ ನಿ
ಲ್ಲದೆ ನಾವಿರ್ಪಂತಿರಿರ್ದಂ ಮುನಿವಿನುತ ತಪೋರಾಜ್ಯದೊಳ್ ಸಾರ್ವಭೌಮಂ ೧೧೫

ಚಂದ್ರಾಪೀಡ ಕಾದಂಬರಿಯರ ಪುನಸ್ಸಮಾಗಮ

ಎಂದಾ ಹಾರೀತನಾಮಪ್ರಮುಖಮುನಿಸಮೂಹಕ್ಕೆ ಜಾಬಾಲಿಗಳ್ ಪೇ
ೞ್ವಂದುಂ ಮಂದಸ್ಮಿತಾಸ್ಯರ್ ಕಥೆಯ ರಸದೊಳೋಲಾಡುತಂ ಪೊೞ್ತಿನಿತ್ತಾ
ಯ್ತೆಂದುಂ ಮಚ್ಚಿತ್ತದೊಳ್ ಭಾವಿಸದೆ ಮಱೆದು ಪೇೞುತ್ತಮಿಂತಿರ್ಪಮೇ ಪೇ
ೞೆಂದೆನ್ನಂ ನೋಡಿ ಕೇಳ್ ಶೂದ್ರಕನೃಪ ಕೆಲದೊಳ್ ಕೇಳ್ವವರ್ಗೆಂದರಾಗಳ್ ೧

ವ॥ ಅದೆಂತೆನೆ

ಆವೊಂ ಶ್ರೀಶ್ವೇತಕೇತುವ್ರತಿಗೆ ಸುತನೆನಲ್ ಸಂದು ಕಾಮಿತ್ವದಿಂದಂ
ದೇವತ್ವಂಗೆಟ್ಟು ಮರ್ತ್ಯೋದ್ಭವನೆನೆ ಶುಕನಾಸಂಗೆ ಪುಟ್ಟಿರ್ದನೋ ತಾ
ನಾ ವೈಶಂಪಾಯನಂ ತಂದೆಯ ಮುನಿಸಿನ ಬೈಗುಳ್ಗಳಿಂದಂ ಮಹಾಶ್ವೇ
ತಾವಾಕ್ಸಾಮರ್ಥ್ಯದಿಂದಂ ಗಿಳಿಯ ಬಸುಱೊಳೀಯಂದದಿಂ ಬಂದನಲ್ತೇ ೨

ಅಂತು ಮುನಿ ಪೇೞಲೆೞ್ಚೆ
ತ್ತಂತೆವೊಲಾನಾಗೆ ಬಾಲ್ಯದೊಳವೆನ್ನಯ ಜ
ನ್ಮಾಂತರದೊಳಾದ ವಿದ್ಯಾ
ಸಂತತಿ ಜಿಹ್ವಾಗ್ರದಲ್ಲಿ ನೆಲಸಿದುದಾಗಳ್ ೩

ವ॥ ಅದಲ್ಲದೆಯುಮಖಿಲಕಲಾಕಲಾಪೋಪದೇಶ ಕೌಶಲಮನೊಳಕೊಂಡಿರ್ಪ ಸ್ಪಷ್ಟವರ್ಣಾಭಿಧಾನಮಪ್ಪ ವಾಣಿಯನಪ್ಪುಕೆಯ್ದು ವಿಜ್ಞಾತ ಸಕಲಾನ್ಯಜನ್ಮವೃತ್ತಾಂತನೆನಾಗಿ ತಾಯುಂ ತಂದೆಯುಂ ತಾರಾಪೀಡದೇವನುಮಂ ವಿಲಾಸವತೀಮಹಾದೇವಿಯುಮಂ ಚಂದ್ರಾಪೀಡದೇವನುಮಂ ಮುನ್ನೆನ್ನಕೆಳೆಯನಪ್ಪ ಕಪಿಂಜಲನುಮಂ ನೆನೆದೆಂ ಮಹಾಶ್ವೇತೆಯೊಳಾದ ಕೂರ್ಮೆ ನೂರ್ಮಡಿಸೆ ತದ್ಗತಚಿತ್ತನಾಗಿ ನೆನೆನೆನೆದೆನ್ನ ಕಾಮಪರತೆಗಾಂ ನೆಲದೊಳ್ ತಲೆಯಂ ಕುತ್ತಿ ಕಿಱಿದುಬೇಗಮಿರ್ದು ನಿಜಾವಿನಯಶ್ರವಣಲಜ್ಜೆಯಿಂ ಕರಗುವಂತೆಯುಂ ಪಾತಾಳಮಂ ಪುಗುವಂತೆಯುಮಾಗಿಂತೆಂದೆನದೆಂತೆನೆ

ಮುನ್ನಿನ ಭವಮಂ ಬಂಧುಗ
ಳಂ ನೆಱೆ ತಿಳಿವಱಿತಮಾಯ್ತು ಭವದೀಯ ಪದಾ
ಸನ್ನತೆಯಿಂದಾದೊಡಮೇಂ
ಬಿನ್ನವಿಸಿದಪೆಂ ಮುನೀಂದ್ರ ನಾಣ್ಚದೆ ಮತ್ತಂ ೪

ಜಾತಿಸ್ಮರತೆ ವಿರಕ್ತಿಗೆ
ಹೇತುವೆನುತ್ತಿರ್ಪರದುವೆ ಪುಸಿಯಾಗಿ ಮಹಾ
ಶ್ವೇತೆಯೊಳಾದೊಂದನುರಾ
ಗಾತಿಶಯಂ ಪೆರ್ಚಿದಪುದು ಮುನ್ನಿಂದೀಗಳ್ ೫

ವ|| ಅದಲ್ಲದೆಯುಂ ಮದ್ವಿಪತ್ತಿಶ್ರವಣಮಾತ್ರದಿಂ ಸ್ಫುಟಿತಹೃದಯನಾದ ಚಂದ್ರಾಪೀಡನೆಲ್ಲಿ ಪುಟ್ಟಿದನೆಂಬುದಂ ಬೆಸಸಲ್ವೇಳ್ಕುಮಾಂ ತಿರ್ಯಗ್ಜಾತಿಯಾದೊಡಮಾತನಂ ನೋಡಿ ಕೃತಾರ್ಥನಪ್ಪೆನೆಂಬುದುಮಾ ಮುನೀಂದ್ರನೆನ್ನಂ ಮುನ್ನಿನಂತೆ ನೋಡಿ ನಿಜಸ್ನೇಹವಚನದಿನೆನ್ನನಿಂತೆಂದಂ

ಮಱತಿದ್ದೆ ತರಳತೆಯಿಂದೀ
ತೆಱನಾದುದನೆಲೆ ದುರಾತ್ಮ ಪಾಱಲ್ ಮತ್ತಂ
ಮಱುಗುತ್ತಿರ್ದಪೆಯಿನಿಸಂ
ಗಱಮೂಡಿದ ಬೞಿಕ ನೀನೆ ದಲ್ ಪೋದಪ್ಪೈ ೬

ವ|| ಎಂದು ಜಾಬಾಲಿಗಳ್ ನುಡಿಯೆ ಹಾರೀತನತಿಕುತೂಹಲಿತಾಂತಃಕರಣನಾಗಿ ತಂದೆಗಿಂತೆಂದಂ.

ತನುವಿಂದಂ ಪೋಗೆ ಜೀವಂ ನೆಲೆವಿಡಿಯದಣಂ ಬಾರದೆಂಬನ್ನೆಗಂ ತ
ನ್ಮುನಿಗಂತಪ್ಪೊಂದು ಕಾಮಾತುರತೆ ಸಮನಿಸಿತ್ತೇತಱಿಂ ನಾಕಸಂಭೂ
ತನದೇಕಲ್ಪಾಯುವಾದಂ ಬೆಸಸಿಮೆನಗಿದಾಶ್ಚರ್ಯಮಾಗಿರ್ದುದೆಂದಾ
ತನಯಂಗಿಂತೆಂದನಾಗಳ್ ಮುನಿಜನಕುಮುದಾನಂದಚಂದ್ರಂ ಮುನೀಂದ್ರಂ ೭

ವಿದಿತಮೆನಲ್ ಕಾಮದ ಮೋ
ಹದ ಮೊದಲೆನಿಸಿದಲ್ಪಸಾರಸ್ತ್ರೀವೀ
ರ್ಯದಿನಲ್ತೆ ಕೇವಲಂ ಪು
ಟ್ಟಿದನೀ ಪಾಪಾತ್ಮನಾತ್ಮಕರ್ಮೋದಯದಿಂ ೮

ವೇದದಲ್ಲಿಯುಮೀ ಪ್ರಕಾರದಿಂ
ದೋದಿತೆಂದಱವೆಯಲ್ತೆ ವತ್ಸ ನೀಂ
"ಯಾದೃಶೋ ಜಗತಿ ಜಾಯತೇ ಪುನ
ಸ್ತಾದೃಶೋ ಭವತಿ"ಯೆಂಬ ವಾಕ್ಯಮಂ ೯

ವ|| ಅದಲ್ಲದೆಯುಂ ಕಾರ್ಯಂಗಳ್ ಕಾರಣಗುಣಯೋಗಂಗಳದು ವಲಮಾಯುರ್ವೇದದೊಳಮಲ್ಪಸಾರಸ್ತ್ರೀವೀರ್ಯದೊಳಲ್ಪಾಯುವಪ್ಪನೆಂಬುದಱಿನೀತಂಗಿಂತಪ್ಪ ಕಾಮಪರತೆಯುಂ ಮದನಜ್ವರಸಂತಾಪ ಮರಣಮುಮಾದುದು.

ಇನ್ನುಮಚಿರಾಯುವಕ್ಕುಂ
ಮುನ್ನಿನ ತೆಱದಿಂದಮಾಯುರವಸಾನದೊಳೀ
ತಂ ನೆಟ್ಟನಕ್ಷಯಾಯು
ಷ್ಯೋನ್ನತಿಯಂ ತಳೆದು ಸುಖದಿನಿರ್ಕುಂ ಬೞಿಯುಂ ೧೦

ವ॥ ಎಂಬುದುಮದಂ ಕೇಳ್ದುಮವನಿತಲನಿವೇಶಿತೋತ್ತಮಾಂಗನಾಗಿ ಯತಿಪತಿಯನಿಂತೆಂದೆಂ

ಧೈರ್ಯಂ ಕೆಟ್ಟಿತ್ತು ಸರ್ವಾಕ್ಷಮುಮೆನಿಪುದಱೊಳ್ ವರ್ತಿಸುತ್ತಿರ್ಪೆನಿಂತೀ
ತಿರ್ಯಗ್ಜಾತಿತ್ವದೊಳ್ ನಾಲಗೆಯುಮಿದು ಭವತ್ಸೇವೆಯಿಂದಾದುದಿನ್ನೇಂ
ಕಾರ್ಯಂ ಮತ್ತುಂಟು ಸಾರ್ಗುಂ ತನುವುಮಗಣಿತಾಯುಷ್ಯಮುಂ ಮತ್ತೆನಲ್ಕಾ
ಶ್ಚರ್ಯಂಬಟ್ಟಿಪ್ಪೆನೀಗಳ್ ಬೆಸಸಿಮೆನಗೆನಲ್ ಮುಕ್ತತಂದ್ರಂ ಮುನೀಂದ್ರಂ ೧೧

ತವುತಿರ್ದತ್ತಲ್ತೆ ತಾರಾಸಮುದಯಮಿದೊ ಪಂಪಾಸರಸ್ತೀರಸುಪ್ತೋ
ತ್ಥವಿಹಂಗಧ್ವಾನಮೀ ಪೊಣ್ಮುವುದು ವನಲತಾಳಿಪ್ರಸೂನಾವಳೀ ಗಂ
ಧವಹಂ ಮೆಲ್ಪಿಂದೆ ದಲ್ ಮತ್ತಿರದೆಸೆವ ನಿಶಾಸಂಘಸಂಮರ್ದದೊಂದು
ತ್ಸವದಿಂ ತಣ್ಗಂಪನೀ ಬೀಱುದಪುದು ಬೆಳಗಾಯ್ತೇನನಿಂ ಪೇೞ್ವೆನೀಗಳ್ ೧೨

ವ॥ ಆದಲ್ಲದೆಯುಂ ನಿತ್ಯಕರ್ಮಂ ಪ್ರತ್ಯಾಸನ್ನಮಾಯ್ತೆಂದು

ನಿಷ್ಕ್ರಾಪರಂ ಪ್ರಭಾತಾ
ನುಷ್ಠಾನ ನಿಮಿತ್ತಮೆೞ್ದನಲ್ಲಿಂದಂ ತ
ದ್ಗೋಷ್ಠಿಯನುೞಿದು ಮುನೀಂದ್ರಗ
ರಿಷ್ಠಂ ಜಾಬಾಲಿನಾಮಧೇಯ ಮುನೀಂದ್ರಂ ೧೩

ವ॥ ಆಗಳಾ ತಪಸ್ವಿಗಳ್ ನೀರಾಗರಾಗಿಯುಂ ಕಥಾರಸವಿಸ್ಮೃತಗುರೂಚಿತಪ್ರತಿಪತ್ತಿಗಳುಂ ಮತ್ತಂ ಕೇಳುತ್ತಮಿರ್ದಂತೆ ಕಂಟಕಿತಕಾಯರುಂ ವಿಸ್ಮಯೋತ್ಫುಲ್ಲಮಾನಸರುಂ ಯುಗಪದಾಗಳಿತಶೋಕಾನಂದಜನ್ಮನಯನಸಲಿಲರುಂ ಹಾಕಷ್ಟಶಬ್ದಾನುಬಂಧಿಗಳುಂ ಪರವಶರುಮೆನಿಸಿ ಕಿಱಿದುಬೇಗಮಿರ್ದಲ್ಲಿಂದಮೆೞ್ದು

ಸಕಲಮುನಿವ್ರಜಮಿರೆ ತಾ
ನೆ ಕರುಣದಿಂ ಕೊಂಡುಪೋಗಿ ಮೆಲ್ಲನೆ ಹಾರೀ
ತಕುಮಾರಂ ತನ್ನಯಪ
ರ್ಣಕುಟೀರದ ಶಯನತಳದೊಳಿರಿಸಿದನೆನ್ನಂ ೧೪

ವ|| ಆನ್ನೆಗಂ ಪ್ರಾಭಾತಿಕಕ್ರಿಯಾನಿಮಿತ್ತಂ ಹಾರೀತಂ ಪೋದಂ. ಇತ್ತ ಸಕಲ ಕಾರ್ಯಾಕ್ಷಮಮಪ್ಪ ತಿರ್ಯಗ್ಜಾತಿಯೊಳ್ ಬಿಟ್ಟು ಚಿಂತಾಪೀಡಿತನಾಗಿ

ಪಡೆಯಲ್ಬಾರದು ಮುನ್ನಮಂತಭವದೊಳ್ ಮಾನುಷ್ಯಮಂ ಮತ್ತೆಯುಂ
ಪಡೆಯಲ್ ಬರ್ಕುಮೆ ವಿಪ್ರಜಾತಿಯನದಂ ಪೆತ್ತುಂ ಮುನೀಂದ್ರತ್ವಮಂ
ಪಡೆಯಲ್ ಬರ್ಕುಮೆ ಮತ್ತಮಾರ್ಗೆ ಪಡೆಯಲ್ ದೇವತ್ವಮಂ ನೋಡದಂ
ಪಡೆದಾನಿಂತಿರೆ ಶಾಪದಿಂದಕಟ ತಿರ್ಯಗ್ಜಾತಿಯೊಳ್ ಬೀಟ್ಟಿನೇ ೧೫

ಶೋಕಶತಾಕುಲಮುಂ ದುಃ
ಖಾಕರಮುಮೆನಿಪ್ಪ ಮಾಯ್ದ ಮತ್ಕಾಯಮನಿ
ನ್ನೇಕೆಗಡ ಪಿಡಿದಪೆಂ ನಿ
ರ್ವ್ಯಾಕುಲದಿಂ ಬಿಡುವೆನೆಂದು ಚಿಂತಿಸುವಿನೆಗಂ ೧೬

ಚಿಂತಾಕುಲಿತನನಾಜೀಸು
ವಂತಿರೆ ಮೊಗಮಲರ್ದು ನಸುನಗುತ್ತಂ ಹಾರೀ
ತಂ ತೊಟ್ಟನೆ ಪರ್ಣಕುಟೀ
ರಾಂತರಮಂ ಪೊಕ್ಕು ಪದಪಿನಿಂದಿಂತೆಂದಂ ೧೭

ಎಲೆ ವೈಶಂಪಾಯನ ತ
ನ್ನೊಲವಿಂದಂ ಬಂದನೀಗಳರಸುತ್ತೆ ಕಪಿಂ
ಜಲನಿಲ್ಲಿಗೆ ನಿನ್ನಂ ಪಂ
ಬಲಿಸುತ್ತಂ ಶ್ವೇತಕೇತುಯತಿಗಳ ಕೆಲದಿಂ ೧೮

ವ|| ಎಂಬುದುಮಾ ಕ್ಷಣದೊಳ್ ಉತ್ಪನ್ನಪಕ್ಷನಾದಂತೆಗೆಯ್ದು ನೋಡ ಲುತ್ಕಂಠಿತನಾಗಿ ಮದ್ವಯಸ್ಯನೆಲ್ಲಿರ್ದನಾವೆಡೆಯೆನೆ ಹಾರೀತಂ ಮತ್ತಾತಪಾದಮೂಲ ದಲ್ಲಿಗೆ ನಂದನೆಂಬುದುಮತ್ತಲೆ ಕಣ್ಣಾಗಿರೆ

ಬಟಿಲೆ ಪೆಗಲಿಂ ಚಂಚನ್ವಲ್ಕಾಂಚಲಂ ಪೆಗಲಿಂಗೆ ಬಂ
ದೆಟಿಲೆ ಜಡೆಗಳ್ ಮುಯ್ಪಿಂ ಯಜ್ಞೋಪವೀತಮುದೊಯ್ಯನಂ
ದಿಟಿಯೆ ಪರಿಪಟ್ಟ್ವೀನಂತಾಕಾಶಮಾರ್ಗದೆ ಬಂದು ಪಾ
ಡಟಿದ ಸಖನಂ ಮುಂದಾಂ ಕಂಡೆಂ ಕಪಿಂಜಲನಂ ನೃಪಾ ೧೯

ವ|| ಅಂತು ಕಂಡು ಕಣ್ಣನೀರ್ಗಳುಣ್ಮೆ ಭೋಂಕನಿದಿರೇಟಿಲುಜ್ಜುಗಂಗೆಯ್ದೆನ್ನ ಕೆಳೆಯನಪ್ಪ ಕಪಿಂಜಲನನಿಂತೆಂದೆಂ

ದೊರೆಕೊಂಡತ್ತು ಭವದ್ವಯಾಂತರದೊಳೀಗಳ್ ಕಾಣ್ಕೆ ಕಂಡೇನೋ ಚಿ
ಚ್ಚರಮೆಟ್ಟಿಪ್ಪುವ ಕುಳ್ಳಿರಲ್ ಕುಡುವ ನಿನ್ನೀ ಸೇದೆವಟ್ಟಂಗಮುಂ
ಕರದಿಂದೊತ್ತುವ ಶಕ್ತಿಯಂ ತಳೆವುದಕಾರ್ಗಂ ನೋಂತೆನಿಲ್ಲಣ್ಣ ನೀಂ
ಬರೆಯುಂ ಪಾಪಿಯೆನೇವೆನೆಂದು ಪಿರಿದುಂ ಶೋಕಾಂಧನಾಗಿರ್ಪಿನಂ ೨೦

ಎತ್ತಿ ಕರಂಗಳಿಂದೆ ನಿಜಬಾಷ್ಪನಿರುದ್ಧಮೆನಿಪ್ಪ ಕಣ್ಗಳಿಂ
ದೊತ್ತಿ ಶರೀರದೊಳ್ ಪುಗಿಸಿಕೊಂಡಪನೆಂಬಿನಮಾದಮಪ್ಪುತುಂ
ಚಿತ್ತದಲಂಪಿನಿಂ ಕಿೞುಳನಂತಿರಲೆನ್ನಯ ಮಾಯ್ದ ಕಾಲ್ಗಳಂ
ನೆತ್ತಿಯಲಿಟ್ಟುಕೊಂಡೞುತಮಿರ್ದನೞಲ್ದಿನಸುಂ ಕಪಿಂಜಲಂ ೨೧

ವ॥ ಅಂತೞುತಿರ್ದನಂ ವಾಙ್ಮಾತ್ರಪ್ರತೀಕಾರನೆನಿಂತೆಂದೆಂ

ಮೊದಲೊಳ್ ಪಱಿದ್ದೆ ಸಂಸಾ
ರದ ತೊಡರಂ ನಿಂದೆ ಮುಕ್ತಿಪದದೊಳ್ ನಿನಗಿಂ
ತಿದು ತಕ್ಕುದೆ ಮೂಢರ ಮಾ
ರ್ಗದಿನೆನಗೆ ಜಡಂಗಿದೇಕೆ ಶೋಕಂಗೆಯ್ವ ೨೨

ಜನಕಂ ಕುಶಲದಿನಿರ್ದನೆ
ನೆನೆವನೆ ಮಾಯ್ದೆನ್ನ ವಾರ್ತೆಗೇಳ್ದೀನೆಂದಂ
ಮನದೊಳ್ ಖೇದಿಸಿದನೆ ಮುನಿ
ದನೆ ಪೇೞೆಂದೆನ್ನ ಕೆಳೆಯನಂ ಬೆಸಗೊಂಡೆಂ ೨೩

ವ॥ ಅನ್ನೆಗಂ ಹಾರೀತಶಿಷ್ಯೋಪನೀತ ಪಲ್ಲವಾಸನದೊಳ್ ಕುಳ್ಳಿರ್ದು ತನ್ನ ತೊಡೆಯ ಮೇಲೆನ್ನನಿರಿಸಿ

ತಂದೆಗೆ ಕುಶಲಂ ನಮಗಾ
ದಂದಮುಮಂ ದಿವ್ಯಚಕ್ಷುವಱಿದಿರ್ದಂ ನೀ
ನೊಂದರ್ಕಂ ಚಿಂತಿಸಬೇ
ಡೆಂದು ಕಪಿಂಜಲಕನೆನಗೆ ಮಗುೞ್ದುಂ ನುಡಿದಂ ೨೪

ವ॥ ಆಂ ತುರಂಗತ್ವಮುಂ ಪತ್ತುವಿಟ್ಟು ತಂದೆಯಲ್ಲಿಗೆ ವಂದೆನನ್ನೆಗಮನತಿದೂರದೊಳುದ್ಬಾಷ್ಪದೃಷ್ಟಿಯುಂ ವಿಷಣ್ಣದೀನವದನನುಂ ಸಭಯನುಮಾಗಿ ಪೊರ್ದಲೆನ್ನಂ ಕಂಡು

ಬಿಡು ನೀನಂಜಿಕೆಯಂ ಕಪಿಂಜಲಕ ದೋಷಂ ನಿನ್ನದಲ್ತೇಕೆ ಪೇಟಿರ್
ಸೆಡೆವೈ ದೋಷಮಿದೆನ್ನದೆಂದು ಮಱುಗುತ್ತಿರ್ದುಂ ಮಗಂ ಪುಟ್ಟಿದಾ
ಗಡೆ ಮಾಡಲ್ ಬಗೆದಂದೆನಿಲ್ಲಿನಿಸುಮಾಯುಷ್ಕಾಮಮಂ ಯಜ್ಞಮಂ
ತಡವಂ ಮಾಡಿದೆನೀಗಳಿಂದೆ ಬಗೆ ನೀಂ ತತ್ಕಾರ್ಯ ಸಂಸಿದ್ಧಿಯಂ* ೨೫

ವ|| ಇದಱಿಂ ನೀನೊಂದುಮಂ ಚಿಂತಿಸದಿರೆಂದು ತಂದೆ ಬೆಸಸೆ ಭಯಮಂ ಪತ್ತುವಿಟ್ಟು

ಎನಗೆ ಪಸಾದಿಪೊಡೆ ಸಖಂ
ಜನಿಯಿಸಿದೆಡೆಯತ್ತಲೈದುವಂತೆನಗಾಜ್ಞಾ
ಪನಮೀವುದೊಲವಿನಿಂ ನೀ
ಮೆನೆ ಜನಕಂ ಕೇಳ್ದು ಮಗುಟ್ದು ಬೆಸಸಿದನಾಗಳ್ ೨೬

ಮಗನೆ ಶುಕಜಾತಿಯೊಳಗವ
ನೊಗೆದಿರ್ದಪನವನನಱಿಯಲಾರ್ಪೈ ನಿನ್ನಂ
ಮಿಗೆ ತಿಳಿಯಲಾಱನವನುಂ
ತೆಗೆಯದಱಿಂ ಗಮನಚಿಂತೆಯಂ ನೀನೀಗಳ್ ೨೭

ವ|| ಎಂದು ನುಡಿದಿರ್ದಿಂದಿನ ಪೊತ್ತಿರೆಯೊಳಯ್ಯನೆನ್ನಂ ಕರೆದು

ಕೇಳೆಲೆ ನೀಂ ಕಪಿಂಜಲ ಭವತ್ಸುಹೃದಂ ವಿಧಿಯೋಗದಿಂದೆ ಜಾ
ಬಾಲಿಮುನೀಂದ್ರನಾಶ್ರಮವನಾ ಶುಕದೇಹದೆ ಸೇರ್ದನಿಂದು ಮೇಣ್
ಮೇಳಿಸಿತ್ತೈ ಸಮಂತು ಜನನಾಂತರ ಸಂಸ್ಮರಣಂ ದಲಾತನೊಳ್
ತಾಳುತನೂನಹರ್ಷಮನೆ ಪೋಗವನಂ ನಡೆನೋಡಲೊಪ್ಪದಿಂ ೨೮

ಭರದಿಂದಂ ಸಾರ್ದು ಪುಣ್ಯಾಶ್ರಮವನಿರದೆ ಮತ್ಸ್ವಸ್ತಿವಾದಂಗಳಂ ಬಿ
ತ್ತರಿಸುತ್ತಂ ದೀರ್ಘಕಾಲಂ ಬದುಕಿಪ ಬಗೆಯಿಂದೀಗಳಾಂ ಮಾಡುವಾಯು
ಷ್ಕರಯಜ್ಞಂ ಪೂರ್ಣಮಪ್ಪನ್ನೆವರಮೊಸೆದು ಜಾಬಾಲಿಸಾಮೀಪ್ಯದೊಳ್ ಸಾ
ದರಮಿರ್ ಬೇಱಿತೊಂದನಾಲೋಚಿಸದಿರೆನುತೆ ಪೇಟ್ದ್ ನೀನವಂಗೆಂದರಾಗಳ್ ೨೯

ವ|| ಇದಲ್ಲದೆ ಭವದೀಯ ವಿಯೋಗದುಃಖಸಮಾಕಲಿತೆಯಾಗಿರ್ಪ ನಿನ್ನ ಜನನಿಯೆನಿಸಿದ ಲಕ್ಷ್ಮಿಯುಮಾ ಕಜ್ಜದೊಳ್ ಪರಿಚಾರಿಣಿಯಾಗಿರ್ದಪಳಾಕೆಯುಮೆನ್ನಂ ಮುದ್ದಿಸಿ ಜನಕನೊರೆದುದನೆ ಮಗುಟ್ದು ಮಗುಟ್ದು ಬೆಸಸಿದಳ್.

---

* ಇಲ್ಲಿಂದ ೧೦ ಪದ್ಯಗಳು ಮೂಲ ಪ್ರತಿಯಲ್ಲಿ ತ್ರುಟಿತವಾಗಿದ್ದುದರಿಂದ ಪಂಡಿತ ಕರಿಬಸವಪ್ಪ ಶಾಸ್ತ್ರಿಗಳಿಂದ ರಚಿಸಲ್ಪಟ್ಟು ಇಲ್ಲಿ ಸೇರಿಸಲ್ಪಟ್ಟಿವೆ.

ಇಂತೊರೆದು ಮೃದುಶಿರೀಷಸು
ಮಾಂತದವೋಲ್ ಸೂಕ್ಷ್ಮಮೆನಿಪ ತುಪ್ಪುಳಿ ತತಿಯಿಂ
ದಂತುರಮಾದೆನ್ನಂಗಮ
ನಂತರಿಸದೆ ಕರದಿನೆೞವಿದಂ ಮನದೞಲಂ ೩೦

ವ॥ ಆಗಳಾತನ ಮನದ ಸಂತಾಪಮನಱಿದಾನುಂ ದುಃಖಿತಹೃದಯನಾಗಿ ಮಿತ್ರನಪ್ಪ ಕಪಿಂಜಲ ನೀಂ ನಿರ್ಭಾಗ್ಯನಾದೆನಗೋಸುಗಂ ಕುದುರೆವರಿಜಂ ತಳೆದು ಪರಾಧೀನನಾಗಿ ಪಲಕೋಟಲೆಗಳನನುಭವಿಸಿದೆ. ಸೋಮಪಾನೋಚಿತಮಪ್ಪೀ ಮೊಗದೊಳ್ ನೊರೆವೆರೆದ ನೆತ್ತರುಗುವ ಬೆಟ್ಟಿತಪ್ಪ ಕಡಿಯಾಣದೇರ್ಗಳುಮಂ ಪೂಗೊಯ್ವ ಪದದೊಳ್ ಮೇಲೆ ಕೆಡದೆಳವಳ್ಳಿಯ ಸೋಂಕಿಗಂ ಬೞಲ್ವೊಡಲೊಳ್ ಚಮ್ಮಟಿಗೆಗುತ್ತುಗಳಮಂ ಚೆಂದಳಿರ ಮೆಲ್ವಾಸಿನೊಳ್ ಮಲಂಗುತಿರ್ದ ನಿನ್ನೀ ಬೆನ್ನೆಲುವಿನೊಳಾವಗಂ ಬಿಗಿದಿರ್ದ ಪಲ್ಲಣದೊತ್ತಿಂದೊಗೆದ ದಡ್ಡುಗಳುಮಂ ಜನ್ನಿವಾರಮಂ ತಳೆವೀ ಮೆಯ್ಯೊಳ್ ತೊವಲ್ವೊರಜಗಳ ಕಟ್ಟಿಂ ಪುಟ್ಟಿದ ಬೇನೆಯುಮನೆಂತು ಸೈರಿಸಿದೆಯೆಂದೀ ತೆಱದ ಪೂರ್ವವೃತ್ತಾಂತಾಲಾಪಂಗಳಿಂದಾಗಳಾಂ ತಿರ್ಯಗ್ಜಾತಿದುಃಖಮುಂ ಮಱೆದು ಸಂತಸದಿನಿರ್ದನ್ನೆಗಂ

ಗಗನಾಂಗಣ ಸೌಧಾಗ್ರದೊ
ಳೊಗುಮಿಗೆಯಿಂ ರಾಜಸಿರ್ದ ಮಣಿಕಲಶಂಬೊಲ್
ಸೊಗಯಿಸಿದುದು ಮಿಗೆ ಮಧ್ಯಾ
ಹ್ನಗತಂ ರವಿಬಿಂಬಮಾಗಳಂಬರತಲದೊಳ್ ೩೧

ವ॥ ಆಗಳಾ ಹಾರೀತಂ ಕಪಿಂಜಲಂಗಮೆನಗಮುಚಿತಮಾದಾಹಾರದಿಂ ತಣಿಪಿದನಂತರಂ ಕಪಿಂಜಲಂ ಕಿಱಿದು ಪೊತ್ತಿಂ ಕಳೆದೆನ್ನಂ ಕೂರ್ತು ಕೆಳೆಯನೆ ತಾತಂ ತಾನೆಸಗುವಾಯುಷ್ಕರಯಜ್ಞಂ ಪೂರ್ಣಮಪ್ಪನ್ನೆಗಮೀ ಪೂಜ್ಯನಪ್ಪ ಜಾಬಾಲಿಯಾಶ್ರಮದಿಂ ಚಲಿಸದಿರಾನುಮಾ ಕರ್ಮದೊಳೆ ವ್ಯಗ್ರನಾಗಿರ್ಪೆನದಱಿಂದೀಗಳಾಂ ಪೋಪೆನೆಂದೆನ್ನಂ ತಳ್ಕೈಸಿ ವಿಸ್ಮಯಾವಿಷ್ಟರಾದ ಮುನಿಕುಮಾರರುನ್ನಮಿತಾನನರಾಗಿ ನೋಡುತ್ತಿರೆ ಗಗನಕ್ಕೊಗೆದದೃಶ್ಯನಾದಂ. ಬೞಿಕ್ಕಂ ಹಾರೀತನೆನ್ನಂ ಕೆಲವಾನು ದಿವಸಂ ಪೋಷಿಸುತ್ತಿರಲೆನಗೆ ಗಱಿಗಳೊಗೆದು ಪಾಱುವನಿತು ಬಲಮುದಯಿಸೆ ಮನದೊಳಿಂತಾಲೋಚಿಸಿದೆಂ

ಕ್ಷಮನಾದೆಂ ನಭದಲ್ಲಿ ಪಾಱಲುರೆ ಚಂದ್ರಾಪೀಡನುತ್ಪತ್ತಿಯಾ
ಕ್ರಮಮುಂ ಮೇಣ್ ತಿಳಿವಿಂಗೆ ಬಂದುದದಱಿಂದಾ ರಾಜಚಂದ್ರಾಂಕನಂ
ನಿಮಿಷಂ ನೋಡದಿರಲ್ಕಮೋಱಿನಹಹಾ ಏನಾನುಮಕ್ಕೀಗಳಾಂ
ಗಮಿಷೆಂ ತಾನವನಲ್ಲಿಗೆಂದು ಮನದೊಳ್ ನಿಶ್ಚೈಸಿದೆಂ ಭೂಪತೀ ೩೨

ವ|| ಅಂತು ನಿಶ್ಚೈಸಿ ಬೞಿಕೊಂದು ದಿನಂ ಪ್ರಾತರ್ವಿಹಾರಾರ್ಥಮುತ್ತರಾಭಿಮುಖನಾಗಿ ಮೆಲ್ಲನೆ ಪೊಱಮಟ್ಟು ಬೞಲ್ಕೆಯಿಂ ಬಸವೞಿದು ಪಾಱಲಳವಿಲ್ಲದೆ ಸಮೀಪದೊಳಿರ್ದ ಹರಿತಪಲ್ಲವಭರಾನಮ್ರಮಾದೊಂದು ಜಂಬೂವೃಕ್ಷಮನಡರ್ದು ಕಿಱಿದು ಬೇಗವಿರ್ದು ಚೇತರಿಸಿಕೊಂಡಲ್ಲಿಂ ತಳರ್ದು

ಕುಳಿರುತ್ತುಂ ಸುತ್ತಲುಂ ಕತ್ತಲಿಪ ತರುತಲಚ್ಛಾಯೆಯಂ ಸಾರ್ದು ಸಾರ್ದು
ತ್ಪಲಗಂಧೋದ್ಗಾರಿ ಪಂಪಾಸರದ ಸಲಿಲಮಂ ಪೀರ್ದುಪೀರ್ದಬ್ಜಬೀಜಾ
ವಳಿಯಂ ತೀರದ್ರುಮಾಂದೋಳಿತಫಲತತಿಯಂ ಕಾರ್ದುಕಾರ್ದೊಯ್ಯನಲ್ಲಿಂ
ತಳರ್ದಾಂ ಮತ್ತೊಂದು ತಣ್ಪಂ ತಳಿದ ತರುತಲಸ್ಕಂದದೊಳ್ ನಿಂದೆನಾಗಳ್ ೩೩

ವ|| ಅಂತು ನಿಂದು

ಇನ್ನುಮಪರಾಹ್ಣದೊಳ್ ಕಿಱಿ
ದುಂ ನಡೆನೋಡುತ್ತೆ ಮನದೊಳಾಂ ಚಿಂತಿಸುತಿ
ರ್ಪನ್ನೆಗಮಧ್ವಶ್ರಮದಿಂ
ದಂ ನಡೆ ಮಾಯ್ದೆನಗೆ ನಿದ್ರೆ ಬಂದತ್ತಾಗಳ್ ೩೪

ವ|| ಅಂತು ನಿದ್ರೆಗೆಯ್ದು ಕಿಱಿದುಬೇಗಕ್ಕೆಂತಾನುಮೆಚ್ಚತ್ತು ನೇಣ್ಬಲೆಯೊಳ್ ಸಿಲುಕಿರ್ದೆನ್ನಂ ಕಂಡಿದೆತ್ತಣಿಂ ಬಂದುದೆಂದು ನೋೞ್ಪಿನ್ನೆಗಮುದ್ಬದ್ಧಭೀಷಣಭ್ರುಕುಟಿಯುಮಕಾರಣಕ್ರೋಧಾಂಧಕಾರಿತರೌದ್ರಮುಖನುಮಾರಕ್ತತಾರಕಾಕ್ಷನುಮಾಗಿ ಕೇವಲಕಾಲಾಯಸ ಪರಮಾಣುಗಳಿಂ ನಿರ್ಮಿಸಿದಂತೆ ರೌದ್ರಾಕಾರನಾದ ಕಾಲಪುರುಷನೋರ್ವನಂ ಕಂಡು ಭಯಂಗೊಂಡು ಮೆಲ್ಲನಿಂತೆಂದೆಂ

ಎಲೆ ನೀನಾರೇಕಿಕ್ಕಿದೆ
ಬಲೆಯಂ ಪೇೞಣ್ಣ ನಿನಗೆ ಮಾಂಸದೊಳಾದೊಂ
ದೊಲವು ಸಮನಿಸಿದೊಡಲ್ಲಿಯೆ
ಕೊಲಲೊಲ್ಲದೆ ಮೊಣ್ಡೆಯೇಕಿದಚ್ಚರಿಯಲ್ತೇ ೩೫

ಕರುಣಿಸಿ ಬಿಡು ವಲ್ಲಭಜನ
ನಿರೀಕ್ಷಣೋತ್ಸುಕನೆನೆಗೆ ಪೋಪೆಡೆ ದೂರಾಂ
ತರಮುಂತುಂ ಪ್ರಾಣಿಗಳೆ
ಲ್ಲರಾಸೆಯುಂ ಬಗೆವೊಡೊಂದೆ ನೀನಱಿಯದುದೇ ೩೬

ವ|| ಎಂಬುದುಮೆನ್ನನಾತನಿಂತೆಂದನಾಂ ಕ್ರೂರಕರ್ಮಜಾತಿಯಪ್ಪ ಚಂಡಾಲನೆನಪ್ಪೆನಾದೊಡಂ ಮಾಂಸಲೋಭಚಿತ್ತದೊಳ್ ಪಿಡಿದನಲ್ತಿಲ್ಲಿಗನತಿದೂರದೊಳ್

ಮಾತಂಗರ ಪಳ್ಳಿಯಿರ್ಪುದಲ್ಲಿಗೆನ್ನಾಳ್ದನೊಡೆಯಸಾತನಮಗಳ್ ಕೌತುಕದಿಂ ನಿನ್ನಂ ಪಿಡಿದು ತರಲೆಂದು ಪಲಂಬರನಟ್ಟಿದೊಡೆನ್ನಪುಣ್ಯದಿಂ ನೀನೆನಗೆ ದೊರೆಕೊಂಡೆ. ನಿನ್ನ ನೆನ್ನಾಳ್ದಿತಿಯಲ್ಲಿಗೊಪ್ಪಿಸುವೆನಲ್ಲಿಂಮೇಲೆ ಬಿಡುಗೆ ಬಿಡದಿರ್ಕೆ ನಿನಗಾಯಬ್ಬೆಯೊಡೆಯ ಳೆಂಬುದಂ ಪೇಳ್ವುದುಮುದಂ ಕೇಳ್ದು ತೊಟ್ಟನೆ ನೆತ್ತಿಯಂ ಸಿಡಿಲ್ವೊಡೆದಂತಾಗೆ

ಪಡೆದಳನೇಕಲೋಕಜನವಂದಿತೆ ಲಕ್ಷ್ಮಿಯೆನಲ್ಕೆ ಮೋಹದಿಂ
ನಡೆಪಿದನೆನ್ನನಾ ತ್ರಿಭುವನಾರ್ಚಿತನಪ್ಪ ಮುನೀಂದ್ರನೆಂದುಮಿ
ರ್ಪೆಡೆ ಸುರಲೋಕಮಕ್ಕಟಿನಗೀ ಪೊಲೆವಟ್ಟಿನಮೇಲೆ ಬೀಳ್ವುದೊಂ
ದಡಸಿದುದಾವ ಪಾಪಮನೆ ಮಾಡಿದೆನಿಂತಿರೆ ಮಂದಭಾಗ್ಯನೆಂ ೩೭

ಎಲೆ ಪುಂಡರೀಕ ಬಿಡು ಜ
ನ್ಮಲೋಭಮಂ ನಿನ್ನ ಗೆಯ್ದ ಕರ್ಮಂ ವಿಹಿತಂ
ತಲೆಯೊಳನುಭವಿಸುವೀ ಕೋ
ಟಲೆಯಿಂ ಗರ್ಭದೊಳೆ ಕರಗನೇಕೆಯೊ ಮೊದಲೊಳ್ ೩೮

ರಕ್ಷಿಸಲಾಗದೇ ಜಗದಭೀಷ್ಟಫಲಪ್ರದೆ ತಾಯೆ ಲಕ್ಷ್ಮಿ ಪೇ
ಟಿಕ್ಷಮನಾದ ನಿನ್ನ ಮಗನಂ ಪರಿರಕ್ಷಿಪುದಿಲ್ಲಿ ವಿಶ್ವರ
ಕ್ಷಾಕ್ಷಮ ತಾತ ನೀಂ ಮಗುಳ್ದು ಬಂದು ಕಪಿಂಜಲ ಮೊಳ್ಪುದೆನ್ನ ಕ
ರ್ಮಕ್ಷಯಮಂ ಭವಾಂತರದೊಳಾದೊಡಮಕ್ಕುಮೆ ಮತ್ಸಮೀಹಿತಂ ೩೯

ವ॥ ಎಂದಿವು ಮೊದಲಾಗಿ ಪಲವುಂ ಪ್ರಲಾಪಿಸುತ್ತುಮಾ ಮಾತಂಗನ ನಿಂತೆಂದೆಂ

ಜಾತಿಸ್ಮರನಾದೆಂ ಮುನಿ
ಜಾತಿಯೆನಾಂ ಮುನ್ನ ಶಾಪದಿಂದಂ ತಿರ್ಯ
ಗ್ಜಾತಿಗೆ ಬಿಟ್ಟೆಂ ಬಿಡು ದುಃ
ಖಾತುರನೆಂ ನಿನಗೆ ಪುಣ್ಯಮಕ್ಕುಮಗಣ್ಯಂ ೪೦

ವ॥ ಎಂದಡಿಗಡಿಗೆ ಕಾಲಮೇಲೆ ಬೀಳ್ವುದುಮವಂ ಬೆಟ್ಟವೆಟ್ಟನಿಂತೆಂದಂ.

ಮುನಿಯೋ ಯಕ್ಷನೊ ಗಂಧ
ರ್ವನೊ ರಾಕ್ಷಸನೋ ಪಿಶಾಚನೋ ನೀನಿನ್ನಾ
ವನುಮೆಂದಱಿಯೆಂ ಮತ್ಸ್ವಾ
ಮಿನಿಗೊಯ್ದೊಪ್ಪಿಸುವೆನೀಗಳಿನಿತನೆ ಬಲ್ಲೆಂ ೪೧

ವ|| ಎಂದೆನ್ನಂ ಪಿಡಿದುಕೊಂಡು ದಕ್ಷಿಣಾಭಿಮುಖನಾಗಿ ಪೋಪುದುಮೆನಗಿಂ ಪ್ರಾಣಪರಿತ್ಯಾಗಮೇ ಪ್ರತಿಕ್ರಿಯೆಯೆಂದು ನಿಶ್ಚೈಸುವಿನಮನ್ನೆಗಂ ಮುಂದೆ ಜೀರ್ಣವಾಗುರಾಗ್ರಥನವ್ಯಗ್ರರುಂ ಗೃಹೀತಕಾಂಡಕೋದಂಡರುಂ ಉದ್ದಂಡಪಾಣಿಗಳುಂ ಬಹುವಿಧಗ್ರಾಹಕವಿಹಂಗವಾಚಾಲನಾಕುಶಲರಂ ಕೌಲೇಯಕಮುಕ್ತಿಸಂಚಾರಣಚತುರರುಮಪ್ಪ ಚಂಡಾಲಶಿಶುಗಳ್ ದೆಸೆದೆಸೆಗೆ ಪರಿದು ಬೇಂಟೆಯಾಡುತ್ತಮಿರೆ ಮತ್ತಮಾನಂತೆ ಪೋಗೆವೋಗೆ ಪೊಲಸಿನ ಗಂಧಮುಂ ಪೊತ್ತು ಕಿಱುಕವ್ವರೆಗೊಳ್ವ ಕೌರಪೊಗೆಯಿನಱಿಯಲಾದ ಬೇಡವಟ್ಟಮುಂ ಕಂಡೆನಲ್ಲಿಯೆಲುವೆ ಮನೆಯ ಕಸದ ಕೂಟಂ ; ಬಸೆಯೆ ತುಪ್ಪಂ, ನಾಯ್ಗಳೆ ಪರಿವಾರಂ, ಮದ್ಯಮೆ ಪುರುಷಾರ್ಥಂ, ನೆತ್ತರೆ ದೇವತಾರ್ಚನೋಪಕರಣಂ ಪಶೂಪಹಾರಮೆ ಧರ್ಮಮಂತುಮಲ್ಲದೆಯುಂ

ನರಕದ ನೆಲೆ ಪೇಸಿಕೆಗಳ
ಕರು ಮಸಣದ ಪುಟ್ಟು ಪಾಪದೆಱೆ ಪಾತಕದಾ
ಗರಮದು ನೆನೆವರ್ಗೆ ಭಯಂ
ಕರವತಿಪಾಪಕರಮಾದುದ್ವೇಗಕರಂ ೪೨

ವ|| ಅಂತದಂ ಕಂಡು ಕಂಟಣಿಸುತ್ತಮೆನ್ನೊಳಿಂತೆಂದೆಂ

ಬರುತಿರೆ ಕಂಡು ದೂರದೊಳೆ ತನ್ನಯ ಜಾತಿಗೆ ತಕ್ಕುದಲ್ತೆನಲ್
ಕರುಣಮನಪ್ಪುಕೆಯ್ದು ಮನದೊಳ್ ಬಿಡುವಂತುಟದೊಂದವಳ್ಗೆ ಪೇೞ್
ದೊರಕೊಳಲಾರ್ಕುಮೇಂ ಪೊಲತಿಗೆನ್ನಯ ಪುಣ್ಯದೊಳೆಂದು ಭಾವಿಸು
ತ್ತಿರಲಿರದೆಯ್ದಿದಂ ಪೊಲೆಯನಾ ಪೊಲೆವಟ್ಟನೊಳಿರ್ದ ಕನ್ನೆಯುಂ ೪೩

ವ|| ಕಂಡು ಗೆಂಟಱಿತೊಳೆ ಪೊಡೆವಟ್ಟು ಮೆಲ್ಲನೆ ನೀಡೆ ಲೇಸುಗೆಯ್ದೆಯೆಂದೆನ್ನಂ ಕರತಲದೊಳ್ ತಳೆದು

ಎಯ್ದದೆಡೆಯೆಲ್ಲಮಂ ನೀ
ನೆಯ್ದಿದೆ ಮತ್ತಿರದೆ ಮಗನೆ ಮಾಣದೆ ಪೇೞ್
ನ್ನೆಯ್ದಿದಪೆಯೆಲ್ಲಿಗಲ್ಕಿಱ
ನುಯ್ದಪೆನಾಂ ಕಾಮಪರತೆಯಿಂದಂ ಕೆಟ್ಟೈ ೪೪

ವ|| ಎಂದಾ ಚಂಡಾಲಕನ್ನಿಕೆ ರೋಮಂಬೊರೆದ ಪಂದೊವಲಪಂಜರದೊಳಿಕ್ಕಿ ಮಹಾಶ್ವೇತಾವಲೋಕನಕೆ ತಗೆಯಂ ಮೊಟ್ಟಿಂತೆ ಪಡಿಯಂ ಕೆತ್ತಗುಳಿಯನಿಕ್ಕಿ ನೀನಿಂತಿರೆಂದು ನಿರ್ವೃತಾಂತರಾತ್ಮೆಯಂತೆ ನುಡಿದುಸಿರದಿರ್ದೊಡಾನುಮಾ ಪಂಜರದ ಪಡಿಕೆಯೊಳಿರ್ದೆನ್ನೊಳಿಂತೆಂದೆಂ

ನುಡಿದೆನಪ್ಪೊಡೆ ಲೇಸಾಗಿ ನುಡಿಯಲ್ಕೆ ಬಲ್ಲುದೀ ಗಿಳಿಯೆಂದು ಕನ್ನೆಯೆನ್ನಂ
ಬಿಡದಿರ್ಕುಮದಱಿಂದಮೀ ಕನ್ನಿಕೆ ನುಡಿಯಿಸಿದೊಡೆಮೆಂತುಂ ನುಡಿಯದಿರ್ಪೆಂ
ನುಡಿಯದಿರ್ದೆನಪ್ಪೊಡೆ ಕಡುಮುಳಿಸಿಂದಂ ಪಿರಿದಪ್ಪವಸ್ಥೆಯನೆಯ್ದಿಸುಗುಂ
ನುಡಿಯದೆಂತುಮೇ ಬಾರ್ತೆಯೆಂದು ಮೆಣ್ ಬಿಡುಗುವೊ ಪೇೞೆನುತೆ ಬಗೆಯುತಿರ್ದೆಂ ೪೫

ಸುರಲೋಕಭ್ರಷ್ಟನೆಂ ಮರ್ತ್ಯರೊಳುದಯಿಪ ತಿರ್ಯಕ್ತ್ವದೊಳ್ ನಿಲ್ವ ಚಂಡಾ
ಲರ ಕಯ್ಯೊಳ್ ಬೀೞ್ವ ತೋಲ್ ಪಂಜರದ ಪಡಿಕೆಯೊಳ್ ನಿಲ್ವ ದುರ್ವಾರ ದುಃಖೋ
ತ್ಕರಮೆಲ್ಲಂ ನೋಡಲೆನ್ನಿಂದ್ರಿಯನಿವಹದ ದೋಷಂ ದಲಿಂ ಮಿಱಿದಂತಾ
ಗಿರಿಸಲ್ವೇೞ್ಕುಂದವಂ ನಿಗ್ರಹಿಪ ನಿಯಮದಿಂ ಮೌನದಿಂದಿರ್ದೆನಾಗಳ್ ೪೬

ವ॥ ಅಂತು ನಿಖಿಲೇಂದ್ರಿಯ ನಿಗ್ರಹಕ್ಕೆ ನಿಶ್ಚಯಂಗೆಯ್ವೆನಗೆ ಮರಣಮೆ ಶರಣಮೆಂದಿರೆ ತಮತಮಗೆ ಬಂದು

ನುಡಿಯಿಸಿದೊಡಮುಱೆ ಬಿಡೆಜಡಿ
ದೊಡಮೋವದೆ ಪಿಡಿದು ಬಡಿದೊಡಂ ಕೊಂದೊಡಮಾಂ
ನುಡಿಯದೆ ಕಿವಿ ಘೀಳೆನೆ ಘೀ
ಳಿಡುತಿರ್ದೆಂ ಕುಟುಕನೊಲ್ಲೆನೆಂತಿಕ್ಕಿದೊಡಂ ೪೭

ವ॥ ಅಂತಾ ದಿವಸಮನನಶನದೊಳ್ ಕಳೆಯಲಾ ಕನ್ನೆ ಕಂಡು ನೋವಂತೆಗೆಯ್ದು ಪಲತೆಱದ ಪಕ್ವಫಲಂಗಳುಮಂ ಸುರಭಿಶೀತಲಜಲಂಗಳುಮಂ ತಾನೆ ತಂದು ನೀಡೆಯುಮೊಲ್ಲದಿರಲೆನ್ನನಿಂತೆಂದಳ್. ನಿರ್ವಿಕಾರಚಿತ್ತವೃತ್ತಿಗಳಪ್ಪ ಪಕ್ಷಿಗಳ್ ಪಸಿವುಂ ನೀರಟ್ಕೆಯುಮಾಗಲುಪಯೋಗಿಸದುದೊಂದುಮಿಲ್ಲೆತ್ತಾನುಂ ಭೋಜ್ಯಾಭೋಜ್ಯವಿವೇಕನೆನಾಂ ಜಾತಿಸ್ಮರವಾಹಾರಮಂ ಪರಿಹರಿಸುವೆನೆಂಬೆಯಪ್ಪೊಡೆ ಭಕ್ಷ್ಯಾಭಕ್ಷ್ಯರಹಿತಮಪ್ಪ ತಿರ್ಯಗ್ಜಾತಿಯೊಳ್ ಪುಟ್ಟಿದ ನಿನಗೆಯುಮಭಕ್ಷ್ಯಮೊಂದು ಮಿಲ್ಲಂ, ಮೊದಲೊಳುತ್ಕೃಷ್ಟ ಜಾತಿಯೊಳ್ ಪುಟ್ಟಿ ತಿರ್ಯಗ್ಜಾತಿಗೆ ಬೀೞ್ದಂದೇ ನಿನ್ನ ವಿವೇಕಮುಱಿದಂತುಟೆ ವಲಮಿನ್ನಿನಗೆ ಜಾತಿಗೆ ತಕ್ಕಂತಾಹಾರಮನಾಚರಿಸೆ ದೋಷಮಿಲ್ಲಮಲ್ಲದೆಯುಂ ಭಕ್ಷ್ಯಾಭಕ್ಷನಿಯಮಿತಗರ್ಾಪದ್ವಿಷಯದೊಳ್ ಪ್ರಾಣಸಂಧಾರಣಾರ್ಥಮಭೋಜ್ಯೋಪಭೋಗಮುಂಟೇಗಳೆತ್ತಾನುಮಾನಿತ್ತುದನೊಲ್ಲೆನೆಂಬೆಯಪ್ಪೊಡೆ ಚಂಡಾಲಭಾಂಡದಿಂ ಭೂಮಿಪತಿತಮಾದಬುವುಂ ಪವಿತ್ರಮೆಂಬುದುಂಟೆದಱಿಂ ಕ್ಷುತ್ಪಿಪಾಸೆಗಳಿನಾಯಾಸಂಬಡದೆ ಮುನಿಜನೋಚಿತಮಪ್ಪ ನವ ಫಲಂಗಳನುಪಭೋಗಿಸೆಂದು ನುಡಿಯೆ

ನೆಯದಿಂದಂ ತಿಳಿವುಟ್ಟಿರಲ್ಕೆನಗೆ ಪೇೞಲ್ ಕೇಳ್ದು ಚಂಡಾಲ
ಜಾತಿಯೊಳೀ ವಾಕ್ಯಮುಮೀ ವಿವೇಕಮುಮದೆಂತಾದತ್ತೊ ಪೇೞೆಂದು ವಿ
ಸ್ಮಯಮುತ್ತೆಂದುದಗೆಯ್ವೆನೆಂಬ ಬಗೆಯೊಳ್ ಬಾೞ್ವಾಸೆಯಿಂ ಕ್ಷುತ್ಪಿಪಾ
ಸೆಯುಮಂ ತಾಳ್ದಿರಲಾಱದಾಱಿಸಿದೆನಾಂ ತತ್ಪಾನಪಾನಂಗಳಿಂ ೪೮

ವ|| ಅಂತು ಕೆಲವುದಿವಸಮಿರ್ಪನ್ನೆಗಂ

ಇನೋದಯದೊಳೊರ್ಮೆ ಕಣ್ದೆಱೆದು ನೋಡುತುಂ ಕಂಡೆನಾಂ
ಕನತ್ಕನಕ ಪಂಜರಸ್ಥಿತನನೆನ್ನನಾ ಕನ್ನೆ ಮು
ನ್ನಿನಂತೆ ನಿಜರೂಪದಿಂದಮೆಸೆದಿರ್ದಳೆಂತಿಲ್ಲಿ ಕೇ
ಳನಂತರಮೆ ತೋಱಿತಿಂದ್ರಪುರದಂತಿರಾ ಪಕ್ಕಣಂ ೪೯

ವ|| ಅಂತದಂ ಕಂಡು ವಿಸ್ಮಿತಾಂತರಂಗನಾಗಿ ಮೌನಮಂ ಬಿಟ್ಟು ಕನ್ನೆಯಂ ಬೆಸಗೊಳಲುಜ್ಜುಗಂಗೆಯ್ವನ್ನಮೆನ್ನನೊಡಗೊಂಡು ದೇವರ ಶ್ರೀಪಾದಂಗಳಂ ಕಾಣಲೆಂದು ಬಂದಳ್

ಈ ಕನ್ನೆಯಾರ್ಗೆ ಪೆಸರೇ
ನೇಕೆನ್ನಂ ಪಿಡಿದು ತರಿಸಿದಳ್ ಸೆಱೆಯೊಳ್ ಮ
ತ್ತೇಕಿಕ್ಕಿದಳಾಗಳ್ ತಾ
ನೇಕಿಲ್ಲಿಗೆ ತಂದಳಱಿಯೆನಿದನವನಿಪತೀ ೫೦

ವ|| ಎಂದು ಶೂದ್ರಕಮಹಾರಾಜಂಗಾ ಪ್ರಪಂಚಮೆಲ್ಲಮಂ ಪೇೞೆ ಕೇಳ್ದತಿ ಕುತೂಹಲಿತನಾಗಿ ಚಂಡಾಲಕನ್ಯೆಯನೊಡಗೊಂಡು ಬಾಯೆಂದು ಮುಂದಿರ್ದ ಪಡಿಯಱಿಗೆ ಬೆಸಸುವುದುಮವಳ್ ಪೋಗಿ ಬೇಗದಿನೊಡಗೊಂಡು ಬರೆ ತದುಪದಿಶ್ಯಮಾನ ಮಾರ್ಗೆಯಾಗಿ ಬಂದು

ಮೊಣ್ಗುೞಿದರ ಮೆಯ್ವೆಳಗೆನೆ
ಕಣ್ಗಳ್ ಕೋರ್ವೈಸೆ ತೊಳಗಿ ಬೆಳಗುತ್ತಂ ಮುಂ
ದಣ್ಗಾಗಿ ನಡೆದು ನೃಪನಂ
ಜಾಣ್ಗೊಂಡ ನಿಜಪ್ರಗಲ್ಭವಚನದೆ ನುಡಿದಳ್ ೫೧

ವಿದಿತಾಶೇಷಕಲಾಕಲಾಪಭುವನಾಲಂಕಾರ ಕಾದಂಬರೀ
ಹೃದಯಾನಂದನ ರೋಹಿಣೀರಮಣ ತಾನಾತ್ಮೀಯವೃತ್ತಾಂತಮಂ
ವಿದಿತಂ ಪೇೞುತಮೀ ದುರಾತ್ಮನಿಗೆ ಕೇಳುತ್ತಿರ್ದೆ ನೀಂ ಕೇಳ್ದೆ ದಲ್
ಮೊದಲಿಂ ಪೂರ್ವಭವಾಂತರೋದಿತ ಭವದ್ವೃತ್ತಾಂತ ಸಂತಾನಮಂ ೫೨

ವ|| ಮತ್ತಮೀ ದುರ್ಬುದ್ಧಿ ಈ ಜನ್ಮದೊಳಂ ಗುರುಗಳಿಂ ನಿಷಿದ್ಧನಾಗಿಯುಂ ತಂದೆಯ ಮಾತಂ ಮೀಱಿ ವಧೂನಿರೀಕ್ಷಣೋತ್ಸಕತೆಯಿಂ ಪಾಱಿಪೋಗುತ್ತಮಿರೆ

ಮಗನಿಂತೀ ಶುಕನೀ ದುರಾತ್ಮಕನ ತಾಯೆಂ ಶ್ರೀಯೆನಾಂ ದಿವ್ಯಚ
ಕ್ಷುಗಳಿಂದೀತನ ತಂದೆ ಪೋಗಱಿದಿವಂ ತಿರ್ಯಕ್ತ್ವದೊಳ್ ನಿಲ್ವನೆ
ನ್ನೆಗಮಾಯುಷ್ಕರಮಾದ ಯಜ್ಞಮನಿದಂ ಪೂರೈಸದಾನಿರ್ಪೆನ
ನ್ನೆಗಮೀಗಳ್ ಸೆಱೆಯಿಕ್ಕಿಯಿಂ ನಿಲಿಪುದೆಂದೆನ್ನಲ್ಲಿಗಿಂತಟ್ಟಿದಂ ೫೩

ವ || ಅದಱಿನೀತಂಗೆಂತೆಂತು ವಿರಕ್ತಿಪುಟ್ಟುಗುಮಂತಂತೆ ವಿನಯವೃತ್ತಿನಿಮಿತ್ತ ವಿನಿತುಮಂ ಮಾಡಿದೆನೀಗಳಾ ಯಜ್ಞಾವಸಾನ ಸಮಯಮಾಗಿರ್ದುದಱಿನೀ ಸಮಯದೊಳ್ ಸಮಸುಖದುಃಖಿಗಳಾಗಲೆವೇೞ್ಕುಮದಱಿಂದೀತನ ಜನ್ಮಾಂತರಸಹಾಯನಪ್ಪ ನಿನ್ನಲ್ಲಿಗೊಡಗೊಂಡುಬಂದೆನೀವಿರ್ವರುಂ ಜನ್ಮಜರಾಮರಣವ್ಯಾಧಿದುಃಖಬಹುಳಂಗಳಪ್ಪ ತನುಗಳಂ ಬಿಟ್ಟು ದಿವ್ಯದೇಹಂಗಳಂ ಕೈಕೊಂಡು ಇಷ್ಟಜನಸಮಾಗಮಸುಖಮನನುಭವಿಸಿಂ ಮರ್ತ್ಯಲೋಕಸಂಪರ್ಕಪರಿಹಾರಾರ್ಥಮೀ ಚಂಡಾಲವೇಷಮಂ ತೆಳೆದಿರ್ದೆನಿಂ ಪೋಪೆನೆಂದು

ಝಣಜ್ಝಣಿತ ಮೇಖಲಾಕಲಿತ ಹಾರಕೇಯೂರಭೂ
ಷಣಪ್ರಭೆ ದಿಗಂತಮಂ ಬೆಳಗೆ ರಾಜರಾಜದ್ಗೃಹಾಂ
ಗಣಸ್ಥಿತ ಜನಕ್ಕೆ ವಿಸ್ಮಯಮನಾಗಿಸುತ್ತುಂ ನಭೋಂ
ಗಣಕ್ಕೊಗೆದಳಂದು ಲಕ್ಷ್ಮಿ ಕುಡುಮಿಂಚಿದೊಂದೆಂಬಿನಂ ೫೪

ವ || ಅನಂತರಮಾ ಶೂದ್ರಕಮಹಾರಾಜನಾ ವಚನಮಂ ಕೇಳ್ದು ಜಾತಿಸ್ಮರನಾಗಿ ಗಿಳಿಯ ಮೊಗಮಂ ನೋಡಿ

ನೀಂ ಪುಂಡರೀಕನ್ನೈ ವೈ
ಶಂಪಾಯನ ಪೂರ್ವಜನ್ಮಸಂಬಂಧಿಯೆ[1] ಕಂ
ಡೆಂ ಪುಣ್ಯದಿಂದಮಿರ್ವರು
ಮಿಂ ಪಡೆದಪಮೊಡನೆ ಶಾಪಮೋಕ್ಷದ ಫಲಮಂ ೫೫

ವ || ಎಂಬುದುಮನಂತರಂ ಗಂಧರ್ವರಾಜನಂದನೆಯಂ ಮುಂದೆ ನಿಲಿಸಿ ಕರ್ಣಾಂತಾಕೃಷ್ಟಕಾರ್ಮುಕನಾಗಿ ಮಕರಧ್ವಜನೆಡೆವಿಡದೆ ಮತ್ಸರಿಸಿ ಮನುಜಮಕರಧ್ವಜನನೋರಂತಿಸುತಿಸುತಿರಲಾತನಲರ್ಗಣೆಯ ಗಾಳಿಯೆ ಪೊಯ್ದಂತೆ ಮೆಯ್ ನಡುಗಲೊಡರಿಸಿದುದಾತನ ನನೆಯಂಬಿನ ಮೊನೆಗಣೆಗಳಿವೆಂಬಿನಂ ಮೆಯ್ ನವಿರ್ನೆಸೆದುವಾತನಕುಡುವಿಲ್ಲ ಜೇವಡೆಗೆ ಬಿಗುರ್ತಂತೆ ಕಣ್ ಮುಕುಳಿಸಿದುವಾತನುರಿಯಂಬಿನ

1 ಧಯೆ (ಕ)

ಪೊಗೆ ಮೊಗಸಿದಂತಧರಕಿಸಲಯಂ ನಸುಗಂದಿದಾತನ ವಿಷಮಶರಶಲಾಕೆಗಳಿಂ ಕೀಲಿತಮಾದಂತವಯವಂಗಳ್ ನಟ್ಟು ನಿಂದುವಂತುಮಲ್ಲದೆಯುಂ

ಎಳಮರನಂ ಕಾಟ್ಗಿಚ್ಚಿರ
ದಳುರಲ್ ಬೆವರುಣ್ಮಿ ಪೊಣ್ಮುವಂತಿರಲಾ ಕೋ
ಮಳತನುವನತನುದಾವಾ
ನಳನಳುರಲ್ ಬೆಮರ್ಗಳುಣ್ಮಿ ಪೊಣ್ಮಿದುವಾಗಳ್ ೫೬

ವ|| ಅಂತು ಸಂತಾಪಮೊದವೆ ತಾಪಾಪನೋದನಾರ್ಥಂ ಪ್ರವಾಳಕಮಲಕುವಲಯ ಕಲ್ಹಾರಮೃಣಾಳವಲಯಮಲಯಜಮೌಕ್ತಿಕಾವಳೀದರ್ಪಣಾದಿ ಶಿಶಿರೋಪಚಾರಂಗಳಂ ಪರಿಜನಂಗಳ್ ಪರಿತಂದು ಮಾಡೆ ತನ್ನೊಳಿಂತೆಂದಂ

ತಳಿರಂ ಕಾಂತೆಯ ಕೆಂದಳಂ ಕಮಲಮಂ ಕಣ್ಗಳ್ ಮೃಣಾಳಂಗಳಂ
ನಳಿತೋಳ್ ಕನ್ನಡಿಯಂ ಕುಚಂ ಮಲಯಜಶ್ರೀಯಂ ಸ್ಮಿತಂ ಮೌಕ್ತಿಕಾ
ವಳಿಯಂ ದಂತಮರೀಚಿ ಚಂದ್ರಿಕೆಯನಂಗಜ್ಯೋತಿ ಪೂರ್ಣೇಂದುಮಂ
ಡಳಮಂ ಮುದ್ದುಮೊಗಂ ಗೆಲುತ್ತಮಿರೆ ಮತ್ತೇನೆಂದಿವಂ ತಾಳ್ದುವೆಂ ೫೭

ವ|| ಎಂದು ಚಿತ್ರರಥನಂದನೆಯಂ ಹೃದಯದೊಳ್ ತಳೆದು

ಆಕೆಯ ಪೆಸರಾಕೆಯ ಮಾ
ತಾಕೆಯ ಮುದ್ದಾಕೆಯಂದಮಾಕೆಯ ತನುಸೋಂ
ಕಾಕೆಯ ತಿಳಿವಾಕೆಯ ಮುಳಿ
ಸಾಕೆಯ ಕೂಟಮೆ ದಲಿರ್ದುದರಸನ ಮನದೊಳ್ ೫೮

ವ|| ಆದಲ್ಲದೆಯುಂ ಗಿಳಿಯ ಮೊಗಮಂ ನೋಡಿ ನೃಪರೂಪಚಂದ್ರಂ ಚಂದ್ರಾಪೀಡನಾದ ತನ್ನ ಮುನ್ನಿನ ಭವದ ಕೆಳೆಯನಂ ವೈಶಂಪಾಯನನಂ ನೆನೆನೆನೆದು ನಿಜಪ್ರಿಯಸಖವಿಯೋಗದವದಹ್ಯಮಾನಮಾನಸನಾಗಿ ಪರಿಜನಂಗಳ್ ಪಸರಿಸಿದ ಸಿರಿಕಂಡದಣ್ಪುಗಳೊಳಂ ಕೇಸಡಿಗಳೊಳಿಕ್ಕುವಿರ್ಪುವೊರೆದ ತಾವರೆಯೆಲೆಗಳೊಳಂ ಕೆಂದಳಂಗಳೊಳ್ ಸಂದಿಸುವ ಕರ್ಪೂರರಜದೊಳ್ ಪೊರೆದ ಹಿಮದ ಅಚ್ಚೊಬ್ಬುಗಳೊಳಮುರದೊಳಿಕ್ಕಿದಾಲಿಗೋಡುವ ಹಾರಂಗಳೊಳಂ ಕದಂಪಿನೊಳೊತ್ತುವ ರನ್ನದ ಕನ್ನಡಿಗಳೊಳಂ ನೊಸಲೊಳಿಕ್ಕುವ ಚಂದ್ರಕಾಂತದ ಪಟ್ಟಂಗಳೊಳಂ ಮುಯ್ಪಿನೊಳಮರ್ಚುವ ಮೃಣಾಳದ ತೋಳ್ವಳೆಯಂಗಳೊಳಂ ಬಾಳಿತಿಯ ತಿರುಳೆಲೆಯ ಬಿಜ್ಜಣಿಗೆಗಳೊಳಮೆಸಳ ಪಸೆಗಳೊಳಂ ಪಳುಕಿನ ನೆಲಮಾಳಿಗೆಗಳೊಳಂ ಧಾರಾಗೃಹಂಗಳೊಳಂ ಜಲಮಂಟಪಂಗಳೊಳಮೆಂತುಮಾ ಸಂತಾಪಮಂ ಸಂತಯಿಸಲಾಱದೆ

ಎನ್ನನಿತ್ತು ಸುಖಮಂ ಸಖಿಂಗೆ ಮಾ
ಡೆಪ್ಪೆಂ ನಿರಾಕುಳಮೆನುತ್ತವಾಗಳಿ
ತ್ತಂ ನೃಪಂ ಪದಪಿನಿಂ 'ಮಹಾತ್ಮನಾಂ
ಕಿನ್ನದೇಯ'ಮೆನೆ ತನ್ನ ಜೀವಮಂ ೫೯

ಗಿಳಿಯಿತ್ತ ಮಹಾಶ್ವೇತಾ
ವಳೋಕನೋತ್ಕಂಠೆಯಿಂದೆ ಜೀವಂ ಬಿಟ್ಟ
ತ್ತೆಳಸುತಿರಲಮೃತಕರಮಂ
ಡಳಮಧ್ಯದ ಪುಂಡರೀಕದೇಹಮದಾಗಳ್ ೬೦

ಉದಯಂ ರಾಜೇಂದ್ರಚಂದ್ರಾತ್ಮಕನೆನಿಸಿದ ಚಂದ್ರಂಗೆ ಸಾರ್ತಂದುದಿನ್ನ
ಭ್ಯುದಯಂ ಲೋಕತ್ರಯಕ್ಕೆಂಬುದನಱುಪುವೆನಾಂ ರಾಗದಿಂದೀಗಳೆಂಬಂ
ದದೆ ರಕ್ತಾಶೋಕಚೂತದ್ರುಮಸಮುದಿತಬಾಲಪ್ರವಾಳಧ್ವಜಂ ಬಂ
ದುದು ಚಂಚಚ್ಚಂಚರೀಕಪ್ರಕರಶುಕಕುಲಾಲಾಪಕಾಂತಂ ವಸಂತಂ ೬೧

ಎಳಮಾವಿನ ಚೆಲ್ವಿಂ ಪೊಂ
ಬಳೆಗಂಪಿಂ ತೆಂಕಣೆಲರಿನೆಳನೀರ್ಗಳಿನಿಂ
ದೊಳದಿಂ ತಣಿಯಿಪುದು ಜನಂ
ಗಳ ಪಂಚೇಂದ್ರಿಯಮನಂದು ಬಂದ ವಸಂತಂ ೬೨

ತಳಿರಿಂ ತಳ್ತಿತ್ತಶೋಕದ್ರುಮವೆಳಗೊನರಿಂದೊಂದಿತಿಮ್ಮಾವು ಬಲ್ಪೆಂ
ಬಳೆಯಿಂ ಬಳ್ಕಿತ್ತು ಕೌಂಗಚ್ಚಲರ ತುಱುಗಲಂ ಪೇಱೆಕೊಂಡಿರ್ದುದೆತ್ತಂ
ತಿಳಕಂ ಪೂಗೊಂಚಲಿಂದೊಂದಿದುದು ಕುರವಕಂ ಕಂಜಕಿಂಜಲ್ಕದಿಂ ಕ
ಣ್ಗೊಳಸಿತ್ತಬ್ಜಾಕರಂ ತಂಪಲೆವ ಮಲಯಮಂದಾನಿಲಾಂದೋಳದಿಂದಂ ೬೩

ಬನಮಂ ಕೆಂದಳಿರಿಂದೆ ಬಾಸಣಿಸುತಂ ದಿಗ್ರಾಜಿಯಂ ಬಂದಮಾ
ವಿನಕಂಪಿಂದಮೆ ಪೂಸುತಂ ಬಿರಯಿಯಂ ಮತ್ತಾಳಿನೀ ಕೋಕಿಲ
ಧ್ವನಿಯಿಂದಂಜಿಸುತಂ ಸಮಸ್ತ ಜನಮಂ ಪುಷ್ಪಾಸವಾಸಾರ ದು
ರ್ದಿನದಿಂ ಸೊರ್ಕಿಸುತಂ ಪೊದಟ್ಟಿದುದು ಜಗತ್ಕಾಂತಂ ವಸಂತಾಗಮಂ ೬೪

ಬಿರಯಿಗಳಂ ಬೆರ್ಚಿಸಲಿದೆ
ಪರಮಾಸ್ತ್ರಂ ಮನುಮತಂಗೆನಿಪ್ಪ ವಸಂತಂ
ಬರಲೊಡನೊರ್ಮೆಯೆ ಗಂಧ
ರ್ವರಾಜಸುತೆ ಮನದೊಳಾಗಳಾಕುಲೆಯಾದಳ್ ೬೫

ವ॥ ಅನ್ನೆಗಂ ಕಾಮದೇವನುಕ್ಕೆವದಲ್ಲಿ ಮುನ್ನಮೆ ಕಟ್ಟಿದ ಮಾಂದಳಿರತೋರಣಂಗಳೊಳಮೆತ್ತಿದಶೋಕಪಲ್ಲವಪತಾಕೆಯೊಳಂ ನೇಱಲ ರಕ್ತಚಾಮರಂಗಳೊಳಂ ಬಿಗಿದ ನಾರಂಗದ ಮೇಲ್ಕಟ್ಟಿನೊಳಂ ಮಾಂಗಾಯಫಲಾವಳಿಗಳೊಳಂ ತೊಡರ್ಚಿದ ಪುನ್ನಾಗದ ಸೂಸಕಂಗಳೊಳಂ ನಾಗದ ಝಳುಂಬಕಂಗಳೊಳಂ ಸಂಪಗೆಯಲರ ಕಿಂಕಿಣಿಗಳೊಳಂ ಕೆಂದಾವರೆಯ ಗುಟಿಗಳೊಳಂ ದವನದ ಕೇರ್ಗಟ್ಟಿನೊಳಂ ಜವೆಯಜಾಗರದೊಳಮಲರ್ವಂಡಿನ ಜಗಲಿಯೊಳಂ ಸಹಕಾರದ ಸಾರಣಿಯೊಳಂ ಅಲ್ಲಲ್ಲಿಗಲರ್ದ ಪೂವಲಿಗಳೊಳಂ ಶತಪತ್ರದ ಸಿತಾತಪತ್ರದೊಳಂ ಪೊಂಬಾಳೆಯ ಚಾಮರಂಗಳೊಳಮೆಸೆವ ಮಂಟಪಂಗಳ ನಡುವಣ ಪದ್ಮರಾಗದ ಪಟ್ಟವಣೆಯೊಳ್ ನಿಲಿಸಿದ ಕಾಮದೇವನನತಿಪ್ರೀತಿಯಿಂದರ್ಚಿಸಿ

ನಿನ್ನನೆ ಪೂಜಿಸಿ ಪಡೆದರ್
ಕನ್ನೆಯರಭಿಮತಮನಾದವಾರಾಧಿಸಲಾ
ನಿನ್ನೆವರಂ ರತಿಪತಿ ನೀ
ನೆನ್ನ ಮನೋರಥಮನೇಕೆ ಪೇೞ್ ತಡೆಯಿಸಿದ್ದೈ ೬೭

ವ॥ ಎಂದು ವಿಷಮಾಸ್ತ್ರಂಗೆ ವಿಷಾದದೊಳೆ ಪೊಡೆಮಟ್ಟು

ಸುರಭಿಜಲಂಗಳಿಂದಮಭಿಷಿಕ್ತನನಾ ನೃಪರೂಪಚಂದ್ರನಂ
ತರದೊಳೆ ಮಾಡಿ ಕೇಸಡಿಗಳಂ ಹರಿಚಂದನದಿಂದಮೂಡಿ ಕೇ
ಸರದ ತುಱುಂಬನಿಕ್ಕಿ ಸಿರಿಕಂಡಮನೊಯ್ಯನೆ ಪೂಸಿ ಕಂಪಿನೊಳ್ ಪೊ
ರೆದ ವಸಂತದೊಳ್ಮುಗುಳ ತಣ್ತೊಡವಂ ತುಡಿಸಲ್ಕೊಡರ್ಚಿದಳ್ ೬೭

ವ॥ ಅದೆಂತೆನೆ ಸುರಗಿಯಲರ ಮುಗುಳ ಮುತ್ತಿನಮಾಲೆಯಿಂ ಸುರಹೊನ್ನೆಯ ರನ್ನವಟ್ಟಿಗೆಯಿಂ ರಕ್ತಾಶೋಕರಚಿತ ರತ್ನಕಟಕದಿಂ ಕಪ್ಪುರದ ಪೂವಸರಿಗೆಯಿಂ ಕುಂಕುಮದ ಕುಟ್ಮಲದ ಪದಕದಿಂ ಸಿಂಧುವಾರತಾರಹಾರದಿಂ ಕುರವಕದ ಕೇಯೂರದಿಂ ಪಾರಿಜಾತದ ಕರ್ಣಪೂರದಿಂ ತಿಲಕದ ತಿಲಕದಿನಲಂಕರಿಸಿ

ಅಳಿಪಿನೊದವಿಂ ನೀಡುಂ ಪೀರ್ವಂದದಿಂ ನಡೆನೋಡಿ ಸಂ
ಗಳಿಸೆ ನಿಡುಸುಯ್ ರೋಮಾಂಚಂ ಪೊಣ್ಮೆ ಘರ್ಮಜಲಂ ಪೊದ
ಱ್ದಳಿಯೆ ನಡುಗುತ್ತಕ್ಕಂ ಕಂಡಪ್ಪಳೆಂದು ಮೃಗಾಕ್ಷಿ ಪೆ
ಪ್ಪಳಿಸಿ ದೆಸೆಯಂ ನೋಡುತ್ತಂ ಪೊರ್ದಿದಳ್ ನೃಪಚಂದ್ರನಂ ೬೮

ವ॥ ಅದಲ್ಲದೆಯುಂ

ಉಱಿಯಲೆನಸುಂ ಲಜ್ಜಾಭಾರಂ ಸಮುಂಚಿತ ಸಾಧ್ವಸಂ
ಕಱಿಯಲೆಡೆವೆತ್ತಾಗಳ್ ಸಾರಾರುಮಿಲ್ಲದಿರಲ್ಕೆ ಕಂ
ಡೆಳಸಿ ನಿಲಿಸಲ್ ತನ್ನಂ ತಾನಾಱದೊಯ್ಯನೆ ಕಣ್ಮಲರ್
ಮಲರೆ ನೃಪನಂ ಭೋಂಕಲ್ ಮೇಲ್ವಾಯ್ದು ತಳ್ತಿರದಪ್ಪಿದಳ್ ೬೯

ವ॥ ಆಗಳ್ ತದಾಲಿಂಗನಾಮೃತವರ್ಷದಿಂ ಜೀವಂ ಬಂದು

ಪ್ರಸರಚ್ಚಂದ್ರಪ್ರಭಾಲಿಂಗಿತ ಕುಮುದಮಯಂ ತಾನಿದೆಂಬಂತಿರುತ್ಸಾ
ಹಿಸೆ ಮೆಲ್ಲುಸಿಯ್ಗುತ್ತಿನಿಂದೊಂದಿದ ಹೃದಯಮುಷಸ್ಸಂಗಪದ್ಮಂಬೊಲುನ್ಮೀ
ಳಿಸೆ ಕಂಗಳ್ ಕೂಡೆ ಚೈತನ್ಯದೊಳಳವಡೆ ಸರ್ವಾಂಗಮೆಚ್ಚತ್ತನಾಗಳ್
ಪಸೆಯೊಳ್ ಮುನ್ನಿದ್ರೆಗೆಯ್ದೆಚ್ಚಱುವರಸನವೋಲಂದು ರಾಜೇಂದ್ರಚಂದ್ರಂ ೭೦

ವ॥ ಅಂತು ಮೆಯ್ ಮುರಿದೆಚ್ಚತ್ತು ತನ್ನಂ ತಳ್ತಪ್ಪಿರ್ದ ಗಂಧರ್ವರಾಜ ನಂದನೆಯಂ ಕಂಡು

ಪಡೆದೆಂ ಮತ್ಪುಣ್ಯದಿಂದೀ ಪದಮನಿನಿತುಕಾಲಕ್ಕೆನುತ್ತುಂ ನರೇಂದ್ರಂ
ನಿಡುದೋಳಿಂದಪ್ಪಿ ಭೋಂಕಲ್ ಭಯದೆ ನಡುಗುತಂ ಕಣ್ಗಳಂ ಮುಚ್ಚಿತಳ್ತಿ
ರ್ದೊಡಲಂ ಪೊಕ್ಕಪ್ಪಳೆಂಬಂದದೆ ಬೆಡಗಿನೊಳಪ್ಪುತ್ತಮಾಗಳ್ ಬಿಡಲ್ಕಂ
ಪಿಡಿಯಲ್ಕಂ ತಾನದೇನೆಂದಱಿಯದಬಲೆ ನಾನಾರಸಾಕ್ರಾಂತೆಯಾದಳ್ ೭೧

ವ॥ ಅಂತಿರ್ದಳಂ ಮನುಜೇಂದ್ರಚಂದ್ರಂ ನೋಡಿ

ಭಯಮುಮಂ ಮಾಣ್ ಜೀವಂ ನಿ
ನ್ನಯ ಪರಿರಂಭಣದೆ ಬಂದುದಲ್ತೆ ಸುಧಾಸೂ
ತಿಯ ಕಾಂತಿಯೊಳೊಗೆದಚ್ಚರ
ಸಿಯರನ್ವಯದಲ್ಲಿ ದೇವಿ ಜನಿಯಿಸಿದವಳಯ್ ೭೨

ವ॥ ಅದಲ್ಲದೆಯುಂ

ಇದು ಬೇಱೆಂದೆನ್ನ ತೇಜೋಮಯಮೆನೆ ಮೊದಲೊಳ್ ನಿತ್ಯಮೀ ದೇಹಮಂತ
ಲ್ಲದೆಯುಂ ಕಾದಂಬರೀದೇವಿಯ ಕರತಲಸಂಸ್ಪರ್ಶದಿಂ ತಾಳ್ದಿಕೊಂಡಿ
ರ್ಪುದೆನಲ್ಕೇವೇೞ್ವುದೀ ದೇಹದೊಳೆ ನೆರೆಗುವೆಂದಾದಲಂಪಿಂ ನಭೋವಾ
ಣ್ಯದೊಳಿರ್ದಾನಂದೆ ಪೇೞ್ದಿನ್ನಯ ನುಡಿಯನದಂ ಭಾವಿಸಂಭೋಜನೇತ್ರೆ ೭೩

ವ॥ ಇನ್ನೆವರಂ ನಿನ್ನ ಕರತಲಸ್ಪರ್ಶದಿನಾಪ್ಯಾಯಿತ ಶರೀರನಾಗಿಯುಂ ಶಾಪ ದೋಷದಿಂ ಪ್ರತ್ಯುಜ್ಜೀವಿತನಾಗದಾನೀಗಳ್ ಮಹಾಶ್ವೇತೆಯ ಪ್ರಿಯತಮನಪ್ಪ ಮದೀಯ ವಯಸ್ಯಂಬೆರಸು ವಿಗತದೋಷನಾಗಿ ನಿನ್ನ ದೂಸಱಿಂಗೊಳಿಲ್ಲಿ ನಿಲಿಸಿದ ಮದೀಯ ದೇಹಕ್ಕವತರಿಸಿದೆನೆಂದು ಚಂದ್ರಮನನುಭೂತಪೂರ್ವಮಪ್ಪ ಗಂಭೀರಪೂರ್ವವಚನದಿಂ ನುಡಿದು ಗಂಧರ್ವರಾಜನಂದನೆಯನಾನಂದಿಸುತ್ತಮಿರ್ಪುದುಂ

ಕುಳಿರುತ್ತಿರ್ಪವೃತಾಂಶು ಮಂಡಲದೊಳಿರ್ದಾದಂ ಸುಧಾವೋದಮಂ
ತಳೆದಂಗಂ ಬೆಳಗೆಂಪನಾಳ್ದಿರೆ ಮಹಾಶ್ವೇತಾಂಗನಾವಾಮೌಕ್ತಿಕಾ
ವಳಿ ವಕ್ಷಸ್ಥಲದೊಳ್ ತೆಱಂಬೊಳೆಯಲಾಗಳ್ ಪುಂಡರೀಕಂ ಕಪಿಂ
ಜಲಕಂ ಕೈಗುಡಲಿಪ್ಪುಮಿತ್ರನೆ ಬರುತ್ತಿರ್ದಂ ಮರುನ್ಮಾರ್ಗದಿಂ ೭೪

ಮನದೊಂದಾಹ್ಲಾದದಿಂದಂ ಗಗನತಳದಿನೆಟ್ತಂದು ರಾಜೇಂದ್ರಚಂದ್ರಾಂ
ಕನ ಪಾದಾಂಭೋಜಯುಗ್ಮಕ್ಕೆಱಗೆ ತೆಗೆದು ತಟ್ಟೈಸುತಂ ಪುಂಡರೀಕಾ
ಖ್ಯ ನಿಜಪ್ರಾಗ್ಜನ್ಮಸಂಬಂಧದಿನೊಗೆದ ಸುಹೃತ್ಸ್ನೇಹದಿಂ ಮತ್ತೆಯುಂ ಪಿಂ
ತನೆ ಬಂದೈ ನೀನೆನುತ್ತಪ್ಪಱಿಂಗೊಳೆ ಕೆಳೆಯನೊಳ್ ಮಾತನಾಡುತ್ತಮಿರ್ದಂ ೭೫

ವ॥ ಅನ್ನೆಗಂ ಕೇಯೂರಕಂ ಚಿತ್ರರಥಹಂಸರ್ಗೆ ತನ್ಮಹೋತ್ಸವಮಂ ಪೇೞಲ್ಕೆ ಪೋದನಿತ್ತ ಮೃತ್ಯುಂಜಯಜಪವ್ಯಗ್ರನಾಗಿ ವಿಲಾಸವತೀಮಹಾದೇವಿವೆರಸಿರ್ದ ತಾರಾ ಪೀಡನಲ್ಲಿಗೆ ಮದಲೇಖೆ ಪರಿತಂದು ವೈಶಂಪಾಯನಂಬೆರಸು ಯುವರಾಜಂ ಪ್ರತ್ಯುಜ್ಜೀವಿತ ನಾದನೆಂದು ಪೇೞ್ವುದುಮತ್ಯಾನಂದರಭಸದಿಂ ವಿಲಾಸವತೀಮಹಾದೇವಿಯುಮಾರ್ಯಶುಕ ನಾಸನುಮಂ ಜರಾಶಿಥಿಲ ದೀರ್ಘಬಾಹುಯುಗಳದಿಂದಪ್ಪಱಿಂಗೊಳೆ ತಟ್ಟೈಸಿ

ಜರೆಯಿಂ ತಳ್ಪೊಯ್ವ ತನ್ನೊಳ್ ದೊರೆಯೆನಿಸಿದ ರಾಜರ್ಷಿಗಳ್ ಸುತ್ತುಗೊಂಡೇ
ೞ್ತರೆ ಮುಯ್ಪಿಂದಾವಗಂ ಸಂಭ್ರಮದೆ ರುಚಿರವಲ್ಕೋತ್ತರೀಯಾಂಚಲಂ ಜೋ
ಲ್ತಿರೆ ಲೋಕಾಹ್ಲಾದಿ ಚೈತ್ರಾನಿಲವಿಲುಳಿತಪದ್ಮಾಕರಂ ತಾನಿದೆಂಬಂ
ತಿರೆ ತಾರಾಪೀಡದೇವಕ್ಷಿತಿಪತಿಯತಿ ಬಂದಂ ಮಹೋತ್ಸಾಹದಿಂದಂ ೭೬

ವ॥ ಅಂತತಿಹರ್ಷಪರವಶನಾಗಿ ಬರುತಿರ್ದ ತನ್ನ ತಂದೆಯಂ ಕಂಡು ರಾಜೇಂದ್ರ ಚಂದ್ರಂ ಸಾಷ್ಟಾಂಗಪ್ರಣಾಮಪುರಸ್ಸರಂ ಪಾದಾರವಿಂದಕ್ಕೆಱಗಿದಾಗಳ್

ನಿನಗಾಂ ತಂದೆಯೆನಾದೆನೆಮ್ಮ ಬಸುಱಿಂದಂ ಬಂದೆ ನೀನೆಂಬ ಪೆಂ
ಪೆನಗೇಂ ಸಾಲದೆ ಕಂದ ಚಂದ್ರನೆನಲುಂ ತ್ರೈಲೋಕ್ಯದಿಂ ವಂದನೀ
ಯನೆಯೆಂದಂದೆಮಗಲ್ತೆ ವಂದ್ಯನವೊಲೆಂದಾನಂದದಿಂದಾತ್ಮನಂ
ದನನಂ ಚಂದ್ರನನಪ್ಪಿದಂ ತೆಗೆದು ತಾರಾಪೀಡಚಕ್ರೇಶ್ವರಂ ೭೭

ವ॥ ಅಂತು ತಲೆಚ್ಛೈಸೆ ನಿರ್ಭರಹರ್ಷಪರವಶೆಯಪ್ಪ ತಾಯಂ ಚಂದ್ರಾಪೀಡಂ ನೋಡಿ

ಪೊಡವಡೆ ತಾಯ್ ಬಸುಱಿಕೊಳಗಿಡ
ಲೊಡರಿಸಿದಪಳಿರದೆ ಮಗುಱ್ದುಮನೆ ನೋಲೆವಾಲ್ಗಳ್
ಬಿಡದೆಚ್ಚು ಪಾಯೆ ಪದಪಿಂ
ದಡಿಗಡಿಗಾತ್ಮಜನನಾದವಪ್ಪಿದಳಾಗಳ್ ೭೮

ವ॥ ಅನಂತರಂ ಮನೋರಮಾಸಮೇತನಪ್ಪ ಶುಕನಾಸನಲ್ಲಿಗೆವಂದು

ವಿನಯಭರದಿಂದೆ ನಮಿತಾ
ನನನೆನಿಸಿದ ಪುಂಡರೀಕನಂ ವೈಶಂಪಾ
ಯನನೆಂದವಧರಿಸಿಂ ನೀ
ವೆನುತಂ ಕಾಣಿಸಿದನಂದು ಚಂದ್ರಾಪೀಡಂ ೭೯

ವ॥ ಅಂತಾ ಸಮಯದೊಳ್ ಕಪಿಂಜಲಕಂ ಶುಕನಾಸನನಿಂತೆಂದಂ

ನಡಪಲ್ ಮುಂ ಪೆತ್ತೆವಾವೀತನನಿನಿತೆಡರಿಂ ಪುಂಡರೀಕಾಖ್ಯನಂ ಪೇ
ಟಿಕ್ಕೊಡೆ ವೈಶಂಪಾಯನಂ ತನ್ನಯ ಮಗನದಱಿಂ ಸ್ನೇಹಮೊಟ್ಟೈಸೆ ತಮ್ಮ
ರ್ದೆಡೆಗೀಗಳ್ ಮುಕ್ತಶಾಪಂ ನಿಜತನುವೆರಸಾನಂದದಿಂ ಬಂದನೀತಂ
ಗೊಡೆಯರ್ ತಾವೆಂದು ಪೇೞ್ದಿಟ್ಟೆದನಿದನೊಲವಿಂ ಶ್ವೇತಕೇತುಪ್ರತೀಶಂ ೮೦

ವ॥ ಎಂಬುದುಂ ವಿನಯವಿನಮಿತನಪ್ಪ ಪುಂಡರೀಕನ ಮೇಲೆ ಕಯ್ಯನಿಕ್ಕಿ ಶುಕನಾಸನಿಂತೆಂದಂ

ಸಕಲಾರಾಧ್ಯರ್ ತಾವಿಂ
ತು ಕರುಣದಿಂದೆನಗೆ ಬೆಸಸಿಯಟ್ಟಿದರೆಂದಂ
ದು ಕಪಿಂಜಲ ಪೇೞೆನ್ನಿಂ
ದೆ ಕೃತಾರ್ಥರುಮೊಳರೆ ಮತ್ತೆ ಭುವನತ್ರಯದೊಳ್ ೮೧

ವ॥ ಎಂದಿವು ಮೊದಲಾಗಿ ಪೂರ್ವಜನ್ಮಸ್ಮರಣಾಲಾಪಂಗಳಿಂದಂ ಪರಸ್ಪರಾಲೋಕನಸುಖೋತ್ಫುಲಲೋಚನರಾಗಿ ಕಣ್ಣೊಳೆ ಬೆಳಗಪ್ಪುದುಂ ಪ್ರಭಾತಸಮಯದೊಳಖಿಲಗಂಧರ್ವಲೋಕದೊಡನೆ ಬರೆ ಮದಿರಾಮಹಾದೇವಿವೆರಸು ಚಿತ್ರರಥನುಂ ಗೌರಿವೆರಸುಹಂಸನುಂ ಬಂದು ಜಾಮಾತೃದರ್ಶನೋತ್ಫುಲ್ಲವದನರ್ ತಾರಾಪೀಡಶುಕನಾಸರೊಳತಿ ಶ್ಲಾಘ್ಯಸಂಬಂಧಬಂಧುರವಚನಂಗಳಂ ನುಡಿಯುತ್ತವಾನಂದಪರಂಪರೆಯನೆಯ್ದಿ ಕಿಱಿದು ಬೇಗಮಿರ್ದು ರಾಜಾಧಿರಾಜನಂ ಗಂಧರ್ವರಾಜನಿಂತೆಂದಂ

ಇವರ್ಗಾತ್ಮೋಚಿತಮಾಗಿ ಮುನ್ನಮೆ ವಿವಾಹಂ ಸಂದುದಿಂ ಲೌಕಿಕ
ವ್ಯವಹಾರಕ್ಕೆಸಗಲ್ಕೆವೇಳ್ಪುದದಱಿಂದಂ ಹೇಮಕೂಟಕ್ಕೆ ವಂ
ದು ವಿವಾಹೋತ್ಸವಮಂ ನೆಗಳ್ಚು ಪಿರಿದೊಂದುತ್ಸಾಹಮಂ ಮಾಳ್ಪುದಿ
ನ್ನೆವಗೆಂದಟ್ಟಿಱೊಳಿಂತಿದಂ ನುಡಿದನಾ ಗಂಧರ್ವಲೋಕೇಶ್ವರಂ ೮೨

ವ॥ ಅಂತು ನುಡಿಯೆ ತಾರಾಪೀಡನರೇಂದ್ರನಿಂತೆಂದಂ

ಭವದೀಯ ಶ್ಲಾಘ್ಯಸಂಬಂಧಮೆ ದಲಿದುವೆ ಕೈಸಾರ್ದುದಿಂದೆಂದು ಪೇೞ್ದಿ
ನ್ನೆವಗಿಲ್ಲಿಂ ಬೞ್ಕು ಮತ್ತಂ ಸುಖವೆನಿಪುದದೇಂ ಪುತ್ರನಿಕ್ಷಿಪ್ತರಾಜ್ಯ
ಗೆವಗಿಂ ಮತ್ತೇಂಟ್ಪುರಲ್ಕಾಗದು ಸದನಸುಖಾವಾಪ್ತಿಯಂ ಮಾಡು ನೀನೆ
ಲ್ಲವನತ್ಯುತ್ಸಾಹದಿಂ ನಿನ್ನಳಿಯನನೊಡಗೊಂಡೆಯ್ದು ಗಂಧರ್ವರಾಜಾ ೮೩

ವ॥ ಎಂಬುದುಂ ನಿಮಗೆಂತುಸಂತಸಮಂತೆನೆಗೞ್ವೆನೆಂದು ರಾಜೇಂದ್ರಚಂದ್ರಂಬೞಿ
ರಸುತ್ಸಾಹಾನ್ವಿತನಾಗಿ ನಾನಾಧ್ವಜವಿರಾಜಿತಕೂಟಮುಮುದ್ಘಾಟಿತ ಸಕಲವಾತಾಯನ
ಕವಾಟಮುಮಪ್ಪ ಹೇಮಕೂಟಕ್ಕೆವಂದು ಮಂಗಳಾನಕರವಂಗಳಿಂದೆಸೆವ ವಿವಾಹಮಂಟ
ಪಕ್ಕೆೃತರ್ಪುದುಮಿತ್ತ ಕೃತಸಕಲಮಂಗಳವ್ಯಾಪಾರನುಮಾಗಿ

ಎಱೞಿಯಂ ತ್ರೈಲೋಕ್ಯರಾಜ್ಯಕ್ಕೆನಿಸಿದ ವಿಭುವಿಂಗೇನನಿತ್ತೀಗಳೊಲ್ದಾ
ನೆಱೆವೆಂ ಕಾದಂಬರೀದೇವಿಗೆ ಬಟವಟಿ ಗಂಧರ್ವರಾಜ್ಯಂದಲೆಂದ
ಟ್ಕಿಱಿನಿಂ ಕೈಕೊಳ್ವುದೆಂದಾತ್ಮಜೆಯನೊಲವಿನಿಂದಿತ್ತು ಸಾಕ್ಷ್ಯಕ್ಕೆ ಕೈನೀ
ರೆಱೆದಂ ರಾಜೇಂದ್ರಚಂದ್ರಂಗೊದವಿದ ಪದಪಿಂದೆಂದು ಗಂಧರ್ವರಾಜಂ ೮೪

ಪಿರಿದುಂ ವಿಭೂತಿಯಿಂ ಚಿ
ತ್ರರಥಾನುಜನೆನಿಪ ಹಂಸನುಂ ನಿಜರಾಜ್ಯಂ
ಬೆರಸು ಮಹಾಶ್ವೇತೆಯನಾ
ದರದಿಂದಂ ಪುಂಡರೀಕದೇವಂಗಿತ್ತಂ ೮೫

ವ॥ ಅಂತು ವಿವಾಹೋತ್ಸವಮಂ ರಾಜೇಂದ್ರಚಂದ್ರನುಂ ಪುಂಡರೀಕನುಮ
ಪ್ಪುಕೆಯ್ದು

ದೊರಕೊಂಡುದನುಂ ಬಯಸಿದ
ತರುಣಿಯರೊಳ್ ಕೂಟಮನಿತಱಿಂದಮೆ ನೋಡಲ್
ಚರಿತಾರ್ಥರಾವೆ ಕಿಂಚಿ
ತ್ಕರವನ್ಯಮೆನುತ್ತಮಾತ್ಮಗತದೊಳ್ ಬಗೆದರ್ ೮೬

ವ॥ ಅನಂತರಮಭಿವಾಂಛಿತ ಪ್ರಾಣೇಶ್ವರಪ್ರಾಪ್ತಿಸಮುತ್ಸುಕೆಯುಮಖಿಲಪರಿವಾರಪರಿವೃತೆಯುಮಪ್ಪ ಕಾದಂಬರಿ ವಿಷಾದಮನಪ್ಪುಕಯ್ದು ಮನುಜೇಂದ್ರಚಂದ್ರನಂ ನೋಡಿ

ಜೀವಂ ಬಂದುದು ಸಕಲ
ರ್ಗೀವೇಟ್ಟಿಂ ಪತ್ರಲೇಖೆಯಂ ಕಂಡಪೆವಿ
ಲ್ಲಾ ವಧುವೊರ್ವಳದೆಲ್ಲಿದ
ಳಾವೆಡೆಯೊಳ್ ನಿಂದಳರಸ ಪೇೞಿನಗೀಗಳ್ ೮೭

ವ॥ ಎನೆ ಮನುಜೇಂದ್ರಚಂದ್ರನಿಂತೆಂದಂ.

ಸಮಸುಖದುಃಖಮಂ ತಳೆವ ರೋಹಿಣಿ ತಾನಿವನಿತ್ತಶಾಪದಾ
ಕ್ರಮಮನೆ ಕೇಳ್ದು ಮೂಣಿಸೆಯುಮೆನ್ನಯ ಮೋಹದೆ ಮರ್ತ್ಯರೂಪದಿಂ
ದಮೆ ಬೞಿಸಂದಳೊಲ್ದು ಮಗುೞ್ದಂ ಬರೆ ಪಿಂತೆಯೆ ಮತ್ತೆ ಬಲ್ಪಿನಿಂ
ದಮೆ ನಿಲಿಸಿಟ್ಟೆನೆಯ್ದೆ ನಿಜಲೋಕದೊಳಾಕೆಯನಲ್ಲಿ ಕಂಡಪೈ ೮೮

ಎಂದು ನರೇಂದ್ರಚಂದ್ರನುಸಿರಲ್ ವಧುರೋಹಿಣಿ ಬೆನ್ನೊಳಂತೆ ಬಂ
ದಂದಮನಾತ್ಮವಲ್ಲಭನೊಳಾದನುರಕ್ತತೆಯಂ ಮಹತ್ವಮಂ
ಸಂದ ಪತಿವ್ರತಾಚರಣಮಂ ಋಜುವೃತ್ತಿಯನಂದು ಭಾವಿಸು
ತ್ತೊಂದುಮನೆಂದಳಿಲ್ಲ ಬೞಿಯಂ ಪಿರಿದುಂ ತನಗಾದ ಲಜ್ಜೆಯಿಂ ೮೯

ಎರಡುಂ ಜನ್ಮಂಗಳೊಳ್ ಬೇರ್ವರಿದ ಬಯಕೆ ಕೂಡಿತ್ತದೆಂತಾನುಮೀಗಳ್
ನೆರೆಯಲ್ಕಿಂವೇಟ್ಕುಮೆಂಬಂತನುಚರನವೊಲಾಲೋಕಮಂ ಪತ್ತುವಿಟ್ಟೋ
ಸರಿಸಿತ್ತಾವೇಗದೊಳ್ ವಾಸರಮನುಚರಿವೊಲ್ ಸಂಜೆ ಸಂಜಾತ ರಕ್ತಾಂ
ಬರದಿಂದಂ ಬಾಸಣಿಪ್ಪಂತೆಸೆದುದಸದಳಂ ಸಾಂದ್ರಶೋಣಾಂಶುಜಾಲಂ ೯೦

ವ॥ ತದನಂತರಂ

ಅನುರಕ್ತನಿಜಕರಸ್ಪ
ರ್ಶನದಿಂ ವನಿತಾಜನಕ್ಕೆ ರಾಗೋದ್ರೇಕಂ
ಜನಿಯಿಸುತಿರೆ ಕುವಲಯಪತಿ
ಯನುಕ್ರಮೋದಯವಿಲಾಸಮೇನೊಪ್ಪಿದುದೋ ೯೧

ವ॥ ಅಂತಾ ರಜನಿಯೊಳ್ ರಾಜೇಂದ್ರಚಂದ್ರಂ ಸುರತಸುಖಾಂಬೊಧಿಯೊಳ್ ಮೂಡಿ ಮುೞುಗಾಡಿ ಮಱುದಿವಸಂ ಮಾವಂದಿರಂ ಬೀೞ್ಕೊಂಡು ವಧೂಸಮೇತಂ

ಪರಿತ್ಯಕ್ತಸಕಲಕಾರ್ಯರಪ್ಪ ಮಾತಾಪಿತೃಗಳಲ್ಲಿಗೆವಂದು ತತ್ಪಾದಪ್ರಣತನಾಗಿ ತದೀಯಾಶೀರ್ವಾದಶತಸಹಸ್ರಂಗಳಂ ತಲೆಯೊಳಾಂತು ನಿಜಸಮಾನೀಕೃತ ಸಕಲರಾಜಲೋಕಸಮನ್ವಿತಮುಜ್ಜಯಿನ್ಯಭಿಗಮನಕೃತಾಭ್ಯನುಜ್ಞನಾಗಿ

ನಯದಿಂ ಗಂಧರ್ವರಾಜಾತ್ಮಜೆಯೆಡದೊಳಿರಲ್ ಪುಂಡರೀಕಂ ಮಹಾಶ್ವೇ
ತೆಯ ಸೋಂಕಿಂದಾದಲಂಪಿಂ ಬಲದೊಳಗಿರೆ ಪೌರಾವನೀಪಾಲಪುತ್ರ
ಪ್ರಯುತಂ ನಾನಾವಿಮಾನಾವಳಿಮಣಿಕಿರಣವ್ಯಾಪ್ತದಿಕ್ಚಕ್ರನುಜ್ಜೈ
ನಿಯನಂದೆಯ್ತಂದು ಪೊಕ್ಕಂ ವಿಬುಧಕುವಲಯಾನಂದಚಂದ್ರಂ ನರೇಂದ್ರಂ ೯೨

ಅವಿಭಕ್ತಸ್ನೇಹೆಯಂ ರೋಹಿಣಿಯನೊಸೆಯಿಸಲ್ ಸೋಮಲೋಕ್ಕದೊವ್ಮೊ
ವ್ಮೆ ವಯಸ್ಯಂ ಪುಂಡರೀಕಂಬೆರಸಮಳಸರಃಪಂಕಜಾಮೋದಲಕ್ಷ್ಮೀ
ಭವನಕ್ಕೊವ್ಮೊವ್ಮೆ ಕಾದಂಬರಿಯೊಲವಿನೊಳಂ ಹೇಮಕೂಟಕ್ಕದೊವ್ಮೊ
ವ್ಮೆ ವಿಶೇಷಸ್ನೇಹಮಂ ಮಾಡುವನನುದಿನಮೆೀಟ್ಟಿಂದು ರಾಜೇಂದ್ರಚಂದ್ರಂ ೯೩

ಪ್ರಿಯದಿಂ ರಾಜೇಂದ್ರಚಂದ್ರಂ ಪ್ರಿಯತಮೆಯೆನೆ ಸಂದಿರ್ದ ಕಾದಂಬರೀ ಕಾಂ
ತೆಯೊಳಾ ಕಾದಂಬರೀಕಾಂತೆಯುಮೊಸೆದು ಮಹಾಶ್ವೇತೆಯೊಳ್ ತನ್ಮಹಾಶ್ವೇ
ತೆಯನೊಲ್ದಾ ಪುಂಡರೀಕಾಹ್ವಯನಮಲತರಪ್ರೇಮದಿಂ ಪುಂಡರೀಕಾ
ಹ್ವಯನಂ ರಾಜೇಂದ್ರಚಂದ್ರಾಂಕನುಮಗಲದೆ ಕೂಡಿರ್ದರುತ್ಸಾಹದಿಂದಂ ೯೪

ಕ್ಷಿತಿಯೊಳ್ ಸೌವರ್ಣಕಾಂತಿಪ್ರಸರಮಸದಳಂ ಪರ್ವೆ ಸಂದಿರ್ದುದಂತಾ
ಕೃತಿ ಮುನ್ನಂ ಬಾಣವಾಣೀಪ್ರಿಯನ ವಚನದಿಂ ಮತ್ತೆ ಕರ್ಣಾಟಭಾಷಾ
ಚತುರತ್ವಂ ಪೊರ್ದಿ ಕಾದಂಬರಿ ಪಸರಿಸಿ ರಾಜೇಂದ್ರಚಂದ್ರಾಂಕನೊಳ್ ಸಂ
ಗತಿವೆತ್ತಾದಂ ತ್ರಿಲೋಕೀಸಹಚರಿಯೆನೆ ತಾಂ ಸಂದುದಾಚಂದ್ರತಾರಂ ೯೫

ಇವು ಕಾಳಿಂಗಾಭಿಧೇಯಪ್ರವಿದಿತಮಿವು ಕಾಂಭೋಜಬಾಹ್ಲೀಕದೇಶೋ
ದ್ಭವಮಶ್ವಂ ರಾಶಿಯಾಗಿರ್ದಪುವಿವು ನಿಜನಾಮಾಂಕವಿದ್ಯೋತಮಾಗ
ಲ್ಕಿವು ನಾನಾಶಾಸನಂ ಸತ್ಕೃತಿವನಿತೆಗಿವೌಚಿತ್ಯಮೆಂದಿತ್ತನತ್ಯು
ತ್ಸವದಿಂ ವಿದ್ವತ್ಸಭಾಮಂಡಲಿ ತಣಿವಿನೆಗಂ ಭೋಜರಾಜಕ್ಷಿತೀಶಂ ೯೬

ಅತಿಚತುರಕವಿಕದಂಬಂ
ಸ್ತುತಿಯಿಸೆ ಚಾತುರ್ಯವೃತ್ತಿಯಂ ತಳೆದು ಜಗತ್
ಸ್ತುತನಾದ ನಾಗಪೂಜ್ಯಂ–
ಕೃತಿಪಂ ತಾಂ ಸುಖದಿನಿರ್ಕೆಯಿನನಬ್ಜಗೆವರಂ ೯೭

ಇದು ಚೋದ್ಯಂ ಕವಿಹೃದ್ಗತಂ ನವರಸಂ ನಿರ್ದೋಷಮೆಂದೀಗಳಾ
ದುದು ಕಾದಂಬರಿ ಸೇವ್ಯಮಾದುದನಿತುಂ ತಾನೆಯ್ದೆ ಭೂಭಾಗದೊಳ್
ವಿದಿತ ಶ್ರೀಕವಿನಾಗವರ್ಮನ ವಚಃಸಂದೋಹದಿಂ ದೋಷಮೊಂ
ದದಲಂಕಾರದ ವಸ್ತುಬಂಧಮಿದು ತಾನೇಂ ಮಾಡದೇಂಗೆಯ್ಯದೋ ೮೮

ಕರ್ಣಾಟಕ ಕಾದಂಬರಿ ಸಂಪೂರ್ಣಂ

ಕರ್ಣಾಟಕ ಕಾದಂಬರೀ ದರ್ಪಣ

೧. ಸಂಸ್ಕೃತದಲ್ಲಿ ಬಾಣನಿಂದ ರಚಿತವಾದ 'ಕಾದಂಬರಿ'ಯ ಆಧಾರದ ಮೇಲೆ ನಾಗವರ್ಮನು ಕನ್ನಡದಲ್ಲಿ ಕರ್ಣಾಟಕ ಕಾದಂಬರಿಯೆಂಬ ಚಂಪೂ ಗ್ರಂಥವನ್ನು ರಚಿಸಿದ್ದಾನೆ. ಅದರ ಮೊದಲನೆಯ ಪದ್ಯದಲ್ಲಿ ಗ್ರಂಥದ ಮಂಗಳಾಚರಣೆಯನ್ನು ಮಾಡಿದ್ದಾನೆ. ಮಂಗಳ ಪದ್ಯಕ್ಕೆ ನಾಂದೀಪದ್ಯವೆಂಬ ಹೆಸರೂ ಉಂಟು. ನಾಂದೀ ಎಂಬುದು ಸಾಮಾನ್ಯವಾಗಿ ನಾಟಕದ ಮೊದಲನೆಯ ಪದ್ಯಕ್ಕೆ ರೂಢಿಯಾದ ಹೆಸರು. ಈ ನಾಂದಿಯು ಆಶೀರ್ವಾದರೂಪವಾಗಿಯೂ ನಮಸ್ಕಾರರೂಪವಾಗಿಯೂ ವಸ್ತುನಿರ್ದೇಶಾತ್ಮಕವಾಗಿಯೂ ಇರಬಹುದು. ಇಲ್ಲಿಯ ಮಂಗಳಪದ್ಯವು ಆಶೀರ್ವಾದರೂಪವಾಗಿಯೂ ವಸ್ತುನಿರ್ದೇಶಾತ್ಮಕವಾಗಿಯೂ ಇದೆ. 'ಚಂದ್ರಂ ತ್ರಿಭುವನಕಾನಂದಮಂ ಮಾಡುಗೆ' ಎಂಬುದು ಆಶೀರ್ವಾದ ರೂಪವಾದುದು. ಕಥಾನಾಯಕನಾದ ಚಂದ್ರನ ಕಥೆಯಿದೆಂಬುದು ವಸ್ತುನಿರ್ದೇಶವನ್ನು ಮಾಡುತ್ತದೆ. ಗಿರಿಶ ಜಟಾಜೂಟವ್ಯೋಮ್ನಿಪ್ರೋದ್ಭಾಸಿಯಾದ ಚಂದ್ರನು ಇಲ್ಲಿ ವಿವಕ್ಷಿತನಾದ ನಾಯಕ. ಅವನಿಗೆ ಮೂರು ವಿಶೇಷಣಗಳು ಉಕ್ತವಾಗಿವೆ. ಶ್ರೀಮನ್ನಾಗೇಂದ್ರಭೋಗಸ್ಫುರದರುಣಮಣಿಜ್ಯೋತಿಸಂಧ್ಯಾನಿಬದ್ಧಪ್ರೇಮಂ, ಅಂದರೆ ಶ್ರೀಮನ್ನಾಗೇಂದ್ರ = ಸಂಪದ್ಯುಕ್ತನಾದ ಶೇಷನ, ಭೋಗ = ಹೆಡೆಯ, ಸ್ಫುರತ್ = ಪ್ರಕಾಶಮಾನವಾದ, ಅರುಣಮಣಿ = ರತ್ನದ, ದ್ಯೋತಿ ಸಂಧ್ಯಾ = ಕಾಂತಿಯೆಂಬ ಸಂಧ್ಯೆಯಲ್ಲಿ ನಿಬದ್ಧ = ಇಡಲ್ಪಟ್ಟ, ಪ್ರೇಮಂ = ಆಸಕ್ತಿಯುಳ್ಳವನೂ, ಪ್ರೋದ್ಯತ್ತರಂಗೋಚ್ಚರತ್.... ತಾರಾರಾಮಂ, ಪ್ರೋದ್ಯತ್ತರಂಗ = ಮೇಲೆ ಎದ್ದ ಅಲೆಗಳಿಂದ, ಉಚ್ಚರತ್ = ಹಾರುತ್ತಿರುವ, ಅಮರನದೀ = ದೇವ ಗಂಗಾ ನದಿಯ, ಶೀಕರೋದಾರತಾರಾರಾಮಂ = ಹನಿಗಳೆಂಬ ನಿರ್ಮಲವಾದ ಮುತ್ತುಗಳಿಂದ ಮನೋಹರನಾದ, ಹೇಮಪ್ರಭಾ....ಪ್ರೋದ್ಭಾಸಿ ; ಹೇಮಪ್ರಭಾ = ಚಿನ್ನದ ಕಾಂತಿಯಿಂದ, ಪ್ರಸ್ಫುರಿತ = ಮಿನುಗುತ್ತಿರುವ, ಗಿರಿಶ = ಈಶ್ವರನ, ಜಟಾಜಾಲಜೂಟವ್ಯೋಮ್ನಿ = ಜಟೆಯ ಸಮೂಹಗಳೆಂಬ ಆಕಾಶದಲ್ಲಿ, ಪ್ರೋದ್ಭಾಸಿ = ಪ್ರಕಾಶಮಾನನಾದ, ಚಂದ್ರನು, ತ್ರಿಭುವನಕಾನಂದಮಂ ಮಾಡುಗೆ + ಎಂದುಂ = ಮೂರು ಲೋಕಕ್ಕೂ ಯಾವಾಗಲೂ ಆನಂದವನ್ನುಂಟು ಮಾಡಲಿ.

೨. ಎರಡನೆಯ ಪದ್ಯದಲ್ಲಿ ಕವಿಯು ಶ್ಲೇಷೆಯಿಂದ ಸರಸ್ವತಿ ನದಿಯಂತೆ ಸರಸ್ವತೀ ದೇವಿಯು ನಮಗೆ ಅನುಕೂಲತೆಯನ್ನೂ ನಿರ್ಮಲತ್ವವನ್ನೂ ದಯೆಗೆಯ್ಯಲಿ ಎಂದು ಪ್ರಾರ್ಥಿಸುತ್ತಾನೆ. ಇವರಿಬ್ಬರಲ್ಲಿಯೂ ಸಮಾನವಾದ ಗುಣಗಳಿವೆ. ಇದು ಶ್ಲೇಷಾರ್ಥವಿವೇಚನೆಯಿಂದ ಸ್ಪಷ್ಟವಾಗುತ್ತದೆ. ಸರಸ್ವತೀ ನದಿಯು ಸತತ = ಸರ್ವ ಕಾಲದಲ್ಲಿಯೂ ಗಭೀರವೃತ್ತಿಯಿಂ = ಆಳವಾದ (ಗೂಢವಾದ) ಸ್ಥಿತಿಯಿಂದಲೂ, ಉದಾರತೆಯಿಂ = ವಿಸ್ತಾರದಿಂದಲೂ, ಪ್ರಸಾದ ಗುಣದಿಂ = ಶಾಂತಸ್ವಭಾವದಿಂದಲೂ, ರಸಭಾವವಿಳಾಸದಿಂ = ನೀರಿನ ಗತಿವೈಭವದಿಂದಲೂ, ಕವಿಪ್ರತತಿನಿತಾಂತಸೇವ್ಯತೆಯಿಂ = ನೀರು ಹಕ್ಕಿಗಳು ಸರ್ವದಾ ಸೇವಿ

ಸುತ್ತಿರುವುದರಿಂದಲೂ, ಒಂದಿ=ಕೂಡಿ, ಪ್ರಸಿದ್ಧವಾಗಿರುವಹಾಗೆ, ಸರಸ್ವತೀ ದೇವಿಯೂ ಸತತ=ಏಕಪ್ರಕಾರವಾದ, ಗಭೀರ=ಗಂಭೀರವಾದ ವೃತ್ತಿಯಿಂ=ಕೈಶಕೀ, ಸಾತ್ಯಕಿ ಭಾರತೀ, ಆರಭಟಿ ಎಂಬ ಶೈಲಿಗೆ ಸಂಬಂಧಪಟ್ಟ ನಾಲ್ಕು ವೃತ್ತಿಗಳಿಂದಲೂ, ರಸಭಾವ ವಿಳಾಸದಿಂ=ಶೃಂಗಾರಾದಿ ನವರಸಗಳು ಭಾವ, ಅನುಭಾವ, ಸಂಚಾರಿ ಭಾವಗಳ ವೈಭವ ದಿಂದಲೂ, ಕವಿಪ್ರತತಿ=ಕವಿಗಳ, ವಿದ್ವಾಂಸರ ಸಮೂಹದ, ನಿತಾಂತಸೇವ್ಯತೆಯಿಂ= ಸರ್ವಕಾಲದ ಸೇವೆಯಿಂದಲೂ ಕೂಡಿ ಅನುಕೂಲತೆಯ=(ದಡವನ್ನು ಅನುಸರಿಸಿ ಹರಿಯುವ ಸರಸ್ವತೀ ನದಿಯಂತೆ) ಸಹಾಯ ಮನೋಭಾವವನ್ನೂ ನಿರ್ಮಳತ್ವವನೂ ದಯುಗೆಯ್ಗೆ=ದಯೆಮಾಡಲಿ.

೩. ಈ ಪದ್ಯದಲ್ಲಿ ಕವಿಯು ಸಂಸ್ಕೃತದ ಕಾದಂಬರೀಕಾರನಾದ ಬಾಣನ್ನ ಶ್ರೇಷ್ಠತೆಯನ್ನು ಪ್ರದರ್ಶನ ಮಾಡುತ್ತಾನೆ. ತಾನು ಪಡೆದ ಸರಸ್ವತಿಗೆ (ವಾಣಿಗೆ) ಮುಂದೆ ಬಾಣನು ಒಡೆಯನಾಗುತ್ತಾನೆಂದು ಬ್ರಹ್ಮನು ಮೊದಲೇ ಅವಳಿಗೆ ಬಾಣಿಯೆಂಬ ಹೆಸರನ್ನು ನಾಮಕರಣ ಮಾಡಿದನೆಂದಾಗ ಇತರ ಕವಿಗಳು ಸ್ತುತಿಮಾಡಿದರೇ ಇಲ್ಲವೇ ಎಂಬ ಚಿಂತೆ ಯನ್ನೇಕೆ ಮಾಡಬೇಕು. ಅದು ಹೋಗಲಿ ಬಿಡು. ತನ್ನ ವಾಕ್ಚಾತುರ್ಯದಲ್ಲಿ ಇವನು ದೇವತೆಯೇ ಸರಿ ಎಂಬ ಪ್ರಸಿದ್ಧಿಪಡೆದ ಬಾಣನೇ ಧನ್ಯನಲ್ಲವೇ! ಇತರರು ವಂಧ್ಯ ರಾಗುತ್ತಾರೆಯೆ? ಇಲ್ಲಿ ಕವಿಯು ಬಾಣ, ಬಾಣಿ ಎಂಬ ಶಬ್ದಗಳ ಮೇಲೆ ಆಟವಾಡು ತ್ತಿದ್ದಾನೆ.

೪. ಅವಯವದೆ=ಭಾಗಶಃ, ಆರುಮನ್=ಯಾರನ್ನಾದರೂ ಎರ್ದೆಗೊಳ್ವುದು =ಆಕರ್ಷಿಸುತ್ತದೆ. ಬಾಣಕೃತಿ=ಬಾಣನ ಕಾವ್ಯ, ಬಾಣದ ಕಾರ್ಯ, ಪುಳಿಂದನ ಸಂಧಾನ=ಬೇಡನ ಹೆದೆಯೇರಿಸುವಿಕೆ. ಎರ್ದೆಗೊಳ್ವುದು=ಹೃದಯಗ್ರಾಹಿಯಾಗು ವುದು.

೫. ಈ ಒಳ್ಪಿಯ ಕೃತಿಯು ಸಂಸ್ಕೃತದಲ್ಲಿ ಜಗತ್ಕೌತುಕವಾಗಿರ್ದುದು ಈಗ ಸತ್ಕವಿಗಳ ಸಮೂಹವು ಹೊಗಳಲಾಗಿ ಚಾತುರ್ಯದಿಂದ ಕನ್ನಡದಲ್ಲಿಯೂ ಸೊಬಗನ್ನು ಪಡೆದಿದೆ.

೬. ಈ ಕಾವ್ಯವು ಮೊದಲೇ ಸಂಸ್ಕೃತದಲ್ಲಿ ಸೌಂದರ್ಯೈಕ್ಯಾಶ್ರಯವೆನಿಸಿ ಕೊಂಡಿತ್ತು. ಈಗ ಚಾತುರ್ಯದಿಂದ ಕನ್ನಡದಲ್ಲಿಯೂ ಸೊಬಗು ಪಡೆದಿರುವುದೇ ನಾಶ್ಚರ್ಯ.?

೭. ಈ ಪದ್ಯದಲ್ಲಿ ಕವಿಯು ತನ್ನ ಕೃತಿಗೆ ಆಶ್ರಯದಾತನಾದ ಚಂದ್ರನೆಂಬುವ ನನ್ನು ಸೂಚಿಸುತ್ತಿದ್ದಾನೆಂಬ ಭಾವವು ತೋರುವುದು. ಈ ಚಂದ್ರನಾರೋ ತಿಳಿಯದು. ನರೇಂದ್ರನಾದ ಚಂದ್ರಾಪೀಡನೇ ಕೃತಿನಾಯಕ ಎಂದೂ ಅರ್ಥವಾಗಬಹುದು. ಬುಧಾಬ್ಜ ವನಕಳಹಂಸಂ ಎಂಬುದು ನಾಗವರ್ಮನ ಬಿರುದು. ಪಂಡಿತರೆಂಬ ಕಮಲವನಕ್ಕೆ ಶ್ರೇಷ್ಠ ವಾದ ಹಂಸದೋಪಾದಿಯಲ್ಲಿರುವವನು ಎಂಬುದು ಅದರ ಅರ್ಥ. ಕಥಿತ=ಹೇಳಲ್ಪಟ್ಟ, ಕಥಾವತಾರ=ಕಥಾಸರಣಿ, ಕೇವಳಮೇ=ಸಾಮಾನ್ಯವಾದುದೇ.

೮. ಈ ಪದ್ಯದಲ್ಲಿ ಶೂದ್ರಕ ಮಹಾರಾಜನ ವರ್ಣನೆ ಇದೆ. ಇಳೆ .... ಕೂಡಿ. ಭೂಮಿಯಲ್ಲಿರುವ ಇಂದ್ರನಿವನೊಬ್ಬನೇ ಎಂಬ ಪ್ರಸಿದ್ಧಿಯನ್ನು ಪಡೆದಿದ್ದವನು, ನೆಗಱ್ತೆ= ಪ್ರಸಿದ್ಧರಾಗಿರಲು. ಚತುರಬ್ಧಿಮೇಖಲಾವಳಿಯುತ ಭೂಮಿಗೆ=ನಾಲ್ಕು ಸಮುದ್ರಗಳೂ ನಡುಪಟ್ಟಿಯಂತೆ ಸುತ್ತಿಕೊಂಡಿರುವ ಭೂಮಿಗೆ. ಎಱೆಯ=ಒಡೆಯ, ರಾಜ, ಪ್ರಭು ಲೋಕಮಂ=ರಾಜರ ಸಮೂಹವನ್ನು, ನಿಜ+ಉಜ್ವಳತರ ಕೀರ್ತಿಯಂ=ತನ್ನ ಅತಿ ಪ್ರಕಾಶವಾದ ಕೀರ್ತಿಯಿಂದ, ನೆಱೆಯೆ=ಸಂಪೂರ್ಣವಾಗಿ, ಮುದ್ರಿಸಿದಂ= ಮುಚ್ಚಿದನು.

೯. ತ್ರಿವಿಕ್ರಮಾವತಾರದಲ್ಲಿ ವಿಷ್ಣುವು ಮೂಱು ಲೋಕಗಳನ್ನೂ ಆಕ್ರಮಿಸುವುದಕ್ಕೆ ಮೂಱು ಸಲ ಪ್ರಯತ್ನಪಡಬೇಕಾಯಿತು. ಈ ರಾಜನಾದರೋ ತ್ರಿಲೋಕವನ್ನೂ ಒಂದೇ ಪ್ರಯತ್ನದಿಂದ ಏಕಚ್ಛತ್ರಾಧಿಪತ್ಯದಿಂದ ಪಡೆದಿದ್ದಾನೆ ಎಂದು ಅವನ ಪರಾಕ್ರಮ ವಿಷ್ಣುವಿನ ಪರಾಕ್ರಮವನ್ನೂ ನಗುವ ಹಾಗಿತ್ತು. ಆಕ್ರಾಂತ=ಆವರಿಸಲ್ಪಟ್ಟ, ಜಗಚ್ಚಕ್ರಂ=ಜಗನ್ಮಂಡಲ.

೧೦. ಶೂದ್ರಕನ ಹೆಸರನ್ನು ಕೇಳಿದಾಗಲೇ ಶತ್ರುಗಳ ಎದೆಯೊಡೆಯುವುದು ಎಂಬ ಅವನ ಪರಾಕ್ರಮಾಡಂಬರವು ಅರ್ಧ ಮನುಷ್ಯ ಅರ್ಧ ಸಿಂಹದ ಆಕಾರದಿಂದ ಶತ್ರುವಿನ ಎದೆಯನ್ನು ಸೀಳಿದ ನರಸಿಂಹಾವತಾರವನ್ನು ನಗುತ್ತಿದೆ. ಅರೆ+ಮಾನಸಿಕೆ=ಅರೆವಾನಸಿಕೆ=ಅರ್ಧಮನುಷ್ಯತ್ವ.

೧೧. ಕಲಿಮಲಿನ=ಕಲಿಯುಗದ ದೋಷದಿಂದ ಕೂಡಿದ, ಕುಭೃತ್=ಕು= ಭೂಮಿಯನ್ನು, ಭೃತ್=ಧರಿಸಿರುವ—ಅಂದರೆ ರಾಜರ (ಕುಭೃತ್ ಎನ್ನುವುದಕ್ಕೆ ಬೆಟ್ಟಗಳು ಎನ್ನುವ ಅರ್ಥವೂ ಉಂಟು) ಸಂಗದ=ಸಹವಾಸದಿಂದ ಕೂಡಿದ, ಕಳಂಕಮಂ= ಕಪ್ಪನ್ನು-ಮಾಲಿನ್ಯವನ್ನು, ಕರ್ಚಿಕಳೆಯಲ್=ತೊಳೆದು ಹಾಕುವುದಕ್ಕಾಗಿ, ಸಾಮ್ರಾಜ್ಯಲಕ್ಷ್ಮಿ=ಅವನ ರಾಜ್ಯಲಕ್ಷ್ಮಿಯು, ಖಡ್ಗಧಾರಾಜಲದೊಳ್=ಕತ್ತಿಯ ಅಲಗಿನ ಕಾಂತಿಯಲ್ಲಿ.

೧೨. ಧೃಢಕರಮುಷ್ಟಿಯ=ಬಲವಾದ ಕೈಯಿನ ಹಿಡಿತದಿಂದ, ಮುನ್ನುಂಡ= ಮೊದಲು ಕುಡಿದ, ನೀರನ್+ಉಗುಳ್ವುದದು=ನೀರನ್ನು ಉಗುಳುತ್ತಿದೆ. ಕತ್ತಿಯನ್ನು ಕಾಸಿ ಮಸೆದಾದ ಮೇಲೆ ಅದು ಗಟ್ಟಿಯಾಗುವುದಕ್ಕಾಗಿ ಅದಕ್ಕೆ ನೀರು ಕುಡಿಸುತ್ತಾರೆ. ಆ ನೀರನ್ನು ಈಗ ಉಗುಳುತ್ತಿದೆಯೊ ಎನ್ನುವ ಹಾಗೆ ಎಂದು ಕವಿ ಉತ್ಪ್ರೇಕ್ಷಿಸಿದ್ದಾನೆ, ಅರಿಕರಿ ಮಸ್ತಕ ಮುಕ್ತೋತ್ಕರ=ಶತ್ರುಗಳ ಆನೆಯ ತಲೆಯಲ್ಲಿರುವ ಮುತ್ತಿನ ರಾಶಿ, ಕೃಪಾಣಂ=ಕತ್ತಿ

೧೩. ಅಭಿಸಾರಿಕೆಯು (ಹಾದರಗಿತ್ತಿ-ಸ್ವೈರಿಣಿ) ಕತ್ತಲೆಯಲ್ಲಿ, ಮಳೆಯಲ್ಲಿ, ರಾತ್ರಿಯಲ್ಲಿ ಯಾವ ಕಷ್ಟವನ್ನೂ ಯೋಚಿಸದೆ ತನ್ನ ಪ್ರೀತಿಪಾತ್ರನಾದ ಉಪಪತಿಯನ್ನು ತನ್ನ ಸ್ವಂತ ಪ್ರೀತಿಯಿಂದ ಹುಡುಕಿಕೊಂಡು ಬರುವಂತೆ ರಾಜ್ಯಲಕ್ಷ್ಮಿಯು ತನ್ನ ಪ್ರೀತಿಯಿಂದಲೇ ಅರಿಗಳ, ಉರಃ ಕವಾಟ ಕವಚಂಗಳ ಕಟ್ಟಿಲೆಯೊಳ್=ಶತ್ರುರಾಜರ

ಎದೆವಾಗಿಲು ಮತ್ತು ಕವಚಗಳ ಕತ್ತಲೆಯಲ್ಲಿ, ಕರೀಂದ್ರ....ಧಾರೆಗಳ ರ್ಪೆಮಟಿಕೆಯೊಳ್=ಅವರ ಮದ್ದಾನೆಗಳ ಮದೋದಕದ ದೊಡ್ಡ ಮಳೆಯಲ್ಲಿ, ರಣಮೆಂಬ ರಾತ್ರಿಯೊಳ್=ಯುದ್ಧಮೆಂಬ ರಾತ್ರಿಯಲ್ಲಿ, ಬರುತಿರ್ಪಳ್ ಎಂದಾಗ ಆ ರಾಜನ ಪೌರುಷವನ್ನು ಪ್ರತ್ಯೇಕವಾಗಿ ಹೊಗಳಬೇಕೆ ?

೧೪. ನೃಪ ಪ್ರತಾಪಜ್ವಲನಂ=ರಾಜನ ಕೀರ್ತಿಯೆಂಬ ಬೆಂಕಿಯು, ಹೃದಯಸ್ಥಿತ ನೃಪರುಮಂ=ಎದೆಯಲ್ಲಿ ಧರಿಸಿದ (ಯೋಚನೆ ಮಾಡಿದ) ರಾಜರನ್ನೂ, ಉರುಪಿದಪುದು=ಸುಟ್ಟು ಹಾಕುತ್ತದೆ. ಪತಿ....ಹೃದಯಂಗಳೊಳ್=ಗಂಡಂದಿರ ಅಗಲಿಕೆಯಿಂದ ನೊಂದ ಸ್ತ್ರೀಯರ ಹೃದಯಗಳಲ್ಲಿ, ಕಡುಪಿನೊಳ್=ವೇಗದಿಂದ, ಉರುಪಿದಪುದು=ಸುಡುತ್ತಿದೆ.

೧೫. ಬಲಿದಿರ್ದಪುದು=ದೃಢವಾಗಿ ನಿಂತಿದೆ; ತ್ರಿಭುವನ ಪ್ರಸವಕ್ಕಿದು ಭೂಮಿ=ಇದು ಮೂರು ಲೋಕಗಳ ಜನ್ಮಭೂಮಿ. ಪೆಂಪು=ಕೀರ್ತಿ, ವೈಭವ, ವಿದಿಸೆ=ವಿದಿಶಾ ಪಟ್ಟಣ, ನಚ್ಚಿನ=ಪ್ರೀತಿಪಾತ್ರವಾದ

ವ|| ಈವಚನ ವಿದಿಶಾಪಟ್ಟಣವನ್ನು ಸುತ್ತುವರಿದಿರುವ ನೇತ್ರವತಿಯೆಂಬ ನದಿಯ ವರ್ಣನೆ. ಜಲಕೇಳಿ=ಜಲಕ್ರೀಡೆ; ಮಾಳವ ವಿಲಾಸಿನಿ=ಮಾಳವ ದೇಶದ ಸ್ತ್ರೀ, ಪೊರ್ಕುಳಿಲ್=ಹೊಕ್ಕುಳು, ಪಱಪಱ=ಬೇರೆ ಬೇರೆ ಭಾಗವಾದ, ಪೆರ್ದೆಱೆ=ದೊಡ್ಡ ಅಲೆ. ಅವಗಾಹ=ಮುಳುಗುವಿಕೆ (ಸ್ನಾನ), ಸಿಂದುರಂ ಬೊರೆದ=ಮದೋದಕದ ಪುಡಿಯಿಂದ ಕೂಡಿದ, ಸಲಿಲ=ನೀರು, ಇಂಚರದಂಚೆ=ಇನಿದಾದ ಸ್ವರವುಳ್ಳ ಹಂಸ. ಇರ್ತಡಿ=ಎರಡು ದಡ.

೧೬. ಮಥಿತರಿಪುಭೂಪಾಳಂ=ಶತ್ರುರಾಜರುಗಳನ್ನು ಅಡಗಿಸುವವನು. ಹೇಳಾವಶೀಕೃತ ಮಂಡಲ=ಆಟದೋಪಾದಿಯಲ್ಲಿ ಭೂಮಂಡಲವನ್ನು ವಶಮಾಡಿಕೊಂಡವನು, ಪೃಥಿವೀಪಾಲೌಘ=ರಾಜರ ಸಮೂಹದ, ಆನಮ್ರ ಮೌಳಿಮಣಿ=ಬಗ್ಗಿರುವ (ನಮಸ್ಕಾರ ಮಾಡುವಾಗ) ತಲೆಯ (ಕಿರೀಟದ) ರತ್ನಗಳ, ಪ್ರಭಾಪ್ರಥಿತ=ಕಾಂತಿಯಿಂದ (ಕಟ್ಟಲ್ಪಟ್ಟ) ಆವೃತವಾದ, ಪದಪೀಠಾಗ್ರಂ=ಪಾದಪೀಠವ ತುದಿಯುಳ್ಳವನು. ಕೇಯೂರ=ತೋಳ ಬಳೆ. ಪೃಥುಳ ಭುಜ=ದಪ್ಪವಾದ ತೋಳು.

ವ|| ವಿಜಿತಾ....ಮಂಡಲತೆಯಿಂ=ಸಮಸ್ತ ಭೂಮಂಡಲವನ್ನು ಗೆದ್ದಿರುವುದರಿಂದಲೂ ಅಪಗತ....ನಿರ್ವೃತನಾಗಿರ್ಪನ್=ರಾಜ್ಯಭಾರ ಚಿಂತೆಯಿಲ್ಲದುದರಿಂದ ಸಂತುಷ್ಟಚಿತ್ತನಾಗಿದ್ದಾನೆ

೧೭. ಪ್ರಣತರಿಪು....ಪಾದನ್=ನಮಸ್ಕಾರ ಮಾಡುತ್ತಿರುವ ರಾಜಶ್ರೇಷ್ಠರ ತಲೆಯ ರತ್ನಗಳಿಂದ ರಂಜಿತವಾದ ಪಾದಗಳನ್ನುಳ್ಳವನು. ಅಧಿಕ ಸತ್ತ್ವೈಕಾಗ್ರಣಿ=ಹೆಚ್ಚಾದ ಸತ್ವ ಗುಣವುಳ್ಳವರಲ್ಲಿ ಅಗ್ರೇಸರ, ತೃಣವತ್+ಲಘು=ಹುಲ್ಲಿನಷ್ಟು ನಿಸ್ಸಾರ. ಸ್ತ್ರೈಣಸುಖಂ=ಸ್ತ್ರೀಸಂಬಂಧವಾದ ಸುಖ.

೧೮. ಕಂತು=ಮನ್ಮಥ. ಒಂದು=ಕೂಡಿರು. ಒಳ್ಪುವೆತ್ತ=ಗುಣಶಾಲಿಗಳಾದ

ಶುದ್ಧಾಂತ ನಿತಂಬನೀವಿವಹಂ=ರಾಣಿವಾಸದ ಸ್ತ್ರೀ ಸಮೂಹ. ಅಣಂ=ಸ್ವಲ್ಪವೂ, ಸುರತೋಪಭೋಗಮುಂ=ರತಿ ಸೌಖ್ಯವನ್ನು. ಒಂದದು=ಮುಟ್ಟು, ಆಶಿಸು, ಅಪೇಕ್ಷಿಸುವುದಿಲ್ಲ.

೧೯. ಆದೊರ್ಮೆ=ಒಂದು ಸಲ. ಕಲ=ಶ್ರೇಷ್ಠವಾದ, ಪಂಚಮಾಂಚಿತ=ಪಂಚಮ ಸ್ವರದಿಂದ ಪ್ರಕಟವಾದ (ಕೂಡಿದ), ವಿಪಂಚಿಕಾ=ವೀಣೆ, ರಸಭಾವ ಕಂಚುಕಿತ=ರಸ ಭಾವಗಳಿಂದ ಕೂಡಿದ

ವ|| ವನಿತಾಸುಖ ಪರಾಙ್ಮುಖಂ=ಸ್ತ್ರೀ ಸೌಖ್ಯಕ್ಕೆ ಮುಖವನ್ನು ಹಿಂತಿರುಗಿಸಿದವನು (ಆಸಕ್ತಿಯಿಲ್ಲದವನು).

೨೧. ಇಲ್ಲಿಯ ಉತ್ಪ್ರೇಕ್ಷೆ ಬಹಳ ಸ್ವಾರಸ್ಯವಾಗಿದೆ. ರಾಜಾಜ್ಞೆಯೇ ಆಕಾರತಾಳಿ ಬರುತ್ತಿದ್ದಂತೆ ತೋರುತ್ತಿದ್ದ ಪ್ರತಿಹಾರಿ (ಬಾಗಿಲು ಕಾಯುವವಳು) ಯು ಪ್ರವೇಶಿಸಲು ಆ ರಾಜಾಜ್ಞೆಯನ್ನೆ ಅಲ್ಲಿದ್ದ ರಾಜರೆಲ್ಲ ತಮ್ಮ ತಲೆಯಲ್ಲಿ ಧರಿಸಿದ್ದಾರೆಯೋ ಎನ್ನುವಂತೆ ಅವರ ಕಿರೀಟಗಳ ರತ್ನಗಳಲ್ಲಿ ಇವಳ ರೂಪವು ಪ್ರತಿಬಿಂಬಿಸಿತ್ತು. ಹೀಗಿರುವಲ್ಲಿ, ಒಯ್ಯನೆ=ನಿಧಾನವಾಗಿ, ವಿಜ್ಞಾಪನೋತ್ಕಂಠೆಯಿಂ=ವಿಜ್ಞಾಪನೆಯನ್ನು ಮಾಡಿಕೊಳ್ಳಬೇಕೆಂಬ ಆಸಕ್ತಿಯಿಂದ.

೨೨. ಬಿನ್ನಪ=ವಿಜ್ಞಾಪನಾ, ತ್ರಿದಶಲೋಕ=ದೇವಲೋಕ. ಶಕ್ರ=ಇಂದ್ರ, ಮಹಾಹುಂಕಾರ=ವಿಶೇಷವಾದ ಅಸಮ್ಮತಿ, ದಕ್ಷಿಣಾಪಥ=ದಕ್ಷಿಣ ದೇಶ, ದರ್ಶನ ತಾತ್ಪರ್ಯ=ನೋಡಬೇಕೆಂಬಾಶೆ, ರಾಜಕೀರ=ಶ್ರೇಷ್ಠವಾದ ಗಿಳಿ.

ವ|| ಪಡಿಯರತಿ=ಪ್ರತೀಹಾರಿಯೆಂಬದಕ್ಕೆ ತದ್ಭವ=ಬಾಗಿಲುಕಾಯುವವಳು. ಪುಗವೇಳ್ದಾಗಳ್=ಪ್ರವೇಶ ಮಾಡಲು ಹೇಳಿದಾಗ.

೨೩. ಕುಲಶೈಲ=ಕುಲಪರ್ವತ., ಕನಕಾದ್ರೀಂದ್ರಂ=ಶ್ರೇಷ್ಠವಾದ ಮೇರು ಪರ್ವತ, ಭೂಭೃತ್ಕುಳಂ=ರಾಜರ ಸಮೂಹ, ಇಂದ್ರಚಾಪ=ಕಾಮನಬಿಲ್ಲು, ತಳ್ಪು=ಆಲಿಂಗನ (ತಬ್ಬು). ಘನಸಮಯ=ಮಳೆಗಾಲ, ಪಾದಪೀಠಾಂಕಿತ=ಪಾದಪೀಠದಿಂದ ಕೂಡಿದ, ಮಣಿಮಯ ಪರ್ಯಂಕ=ರತ್ನ ಖಚಿತವಾದ ಹಾಸಿಗೆ.

೨೪. ಅಧಿಕತರ....ಮೆನಲ್=ಹೆಚ್ಚಿನ ಕೆಂಪುಬಣ್ಣದ ಕಾಂತಿಗೆ ಆವಾಸಸ್ಥಾನವೆನ್ನಿಸುವ, ಚಕ್ರಿಚರಣಾಂಬುಜಂ=ಚಕ್ರವರ್ತಿಯಾದ ಶೂದ್ರಕನ ಪಾದಕಮಲವು. ಮಧುಕೈಟಭ ಮದಮರ್ದನ=ಮಧುಕೈಟಭರೆಂಬ ರಾಕ್ಷಸರ ಅಹಂಕಾರವನ್ನಡಗಿಸಿದ ರುಧಿರಾರುಣ=ರಕ್ತದಿಂದ ಕೆಂಪಾದ, ಚಕ್ರಿ ಚರಣಮುಂ=ಚಕ್ರಾಯುಧ ಧಾರಿಯಾದ ಶ್ರೀ ಕೃಷ್ಣನ ಕಾಲನ್ನು,

೨೫. ಕರಗಳ್=ಸೆರಗಿನ ಕೊನೆಗಳು. ಮಿಳ್ಳಿಸೆ=ಚಲಿಸುತ್ತಿರಲಾಗಿ. ಎಲರ್=ಗಾಳಿ. ಮೆಲ್ಪು=ಮೃದು, ಸೆಱಂಗು=ಸೆರಗು, ಅನೀಕ=ಗುಂಪು, ದುಗ್ಧಾರ್ಣವ ಫೇನ ಪಾಂಡುರತೆ=ಕ್ಷೀರಸಮುದ್ರದ ನೊರೆಯಷ್ಟು ಬಿಳಿಯ ಬಣ್ಣ, ಉತ್ತರೀಯವಸನ=ಮೇಲುಹೊದಕೆಯ ಬಟ್ಟೆ.

೨೬. ಮುಱಿ = ಭಾಗ (ಒಡೆದ ಚೂರು) ಅಣ್ಪು=ಲೇಪನಕ್ರಿಯೆ, ಪೂಸಿಕೊಳ್ಳುವುದು, ಹಚ್ಚಿಕೊಳ್ಳುವುದು. ತಳ್ಪು=ಅನುಲೇಪನ, ಧರಿಸಿರುವುದು.

೨೭. ಸಾರಿ=ಸಮೀಪಕ್ಕೆ ಬಂದು. ಓಲಗಿಸು=ಸೇವೆಮಾಡು, ಪೇರುರ=ವಿಶಾಲವಾದ ಎದೆ.

೨೮. ಚಪಳೆಗೆ ಸಿರಿಗೆ ಇಕ್ಕದ ನಿಯಮನಿಗಳ=ಚಂಚಲೆಯಾದ ಲಕ್ಷ್ಮಿಗೆ ತೊಡಸಿರುವ ಕಟ್ಟಿನ ಸರಪಣಿ, ಭುಜಗ ಯುಗಂ=ಎರಡು ಹಾವುಗಳು. ಪರಿವೇಷ್ಟಿಸು=ಸುತ್ತುವರಿ, ಕೇಯೂರ=ತೋಳಬಳೆ.

೨೯. ತುರುಗು = ಒತ್ತಾಗಿ ವ್ಯಾಪಿಸು, ತಾರಾಪುಂಜ = ನಕ್ಷತ್ರಸಮೂಹ, ನಱುಗಂಪುಪೊಱೆದ=ಸುವಾಸನೆಯಿಂದ ಕೂಡಿದ,

೩೦. ರತ್ನಕುಟ್ಟಿಮ=ರತ್ನಖಚಿತವಾದ ನೆಲಗಟ್ಟು. ಭೂದೇವಿಯು ತನ್ನ ಪತಿಯನ್ನು ಹೆಚ್ಚಿನ ಪ್ರೀತಿಯಿಂದ ಹೃದಯದಲ್ಲಿ ಧರಿಸಿದ್ದಾಳೆಯೋ ಎಂಬಂತೆ ನೆಲಗಟ್ಟಿನಲ್ಲಿ ಆತನ ಪ್ರತಿಬಿಂಬವು ತಳತಳಿಸಿದ್ದಿತು.

೩೧. ಅರುಣದಳೋತ್ಪಲ ಕೋಮಲಕರ=ಕೆಂಪಗಿರುವ ದಳಗಳಿಂದ ಕೂಡಿದ ಕನ್ನೈದಿಲೆಯ ಹಾಗೆ ಕೋಮಲವಾಗಿರುವ ಕೈ. ಸಂಬಳಿಗೋಲು=ಚರ್ಮದಿಂದ ಆವರಿಸಿದ ಕೋಲು ? ಪಳಂಚಿಸಿದಳ್=ಕುಟ್ಟಿದಳು, ಬಡಿದಳು. ಕುಟ್ಟಿಮ=ನೆಲಗಟ್ಟು

೩೨. ತಾಳೆದನಿಗೇಳ್ದ=ತಾಳೇ ಮರದೆಲೆಗಳ ಧ್ವನಿಯನ್ನು ಕೇಳಿದ. ಉಲಿಪು=ಶಬ್ದ, ಭೊಂಕನೆ=ಇದ್ದಕ್ಕಿದ್ದಹಾಗೆ. ಅತ್ತಲೆ=ಆ ಕಡೆಗೆ, ಕದಂಬಂ=ಸಮೂಹ.

೩೩. ಜರೆ = ಮುಪ್ಪು, ದಳದ್ರಕ್ತನೀರೇಜ = ಅರಳಿದ ಕೆಂಪು ಕಮಲ, ವ್ಯಾಯಾಮ = ಅಂಗಸಾಧನೆ. ಸಡಿಲದೆ=ಶಿಥಿಲವಾಗದೆ, ಮಾತಂಗ = ಚಂಡಾಲ, ನಿಷ್ಠುರ=ಒರಟು, ಧವಳವಾಸೋನ್ವಿತಂ=ಬಿಳಿಯ ಬಟ್ಟೆಯಿಂದ ಕೂಡಿದವನು, ಆತ್ಮೋಚಿತ=ತನಗೆ ಯೋಗ್ಯವಾದ, ಆರ್ಯವೇಷ=ಗಂಭೀರವಾದ—ಮುಪ್ಪಿಗನುಗುಣವಾದ ವೇಷ. ವ||—ಅಲ್ಲಿಂ ಪೆಱಗೆ=ಅದಕ್ಕೆ ಹಿಂದೆ.

೩೪. ಪಸುರ್ಪು=ಹಸಿರುಬಣ್ಣ. ಪಂಜರ=ಗೂಡು, ಏಟ್ತಂದಂ=ಬಂದನು, ಚಂಡಿಕೆ=ಮುಡಿಗಂಟು.

೩೫. ಅಮರ್ದ=ಅಮೃತವನ್ನು, ಆವಗಂ=ಯಾವಾಗಲೂ, ಈಳ್ಕೊಳಲೆಂದು=ಅಪಹರಿಸಬೇಕೆಂದು,ದೈತ್ಯಮರ್ದನನ್=ರಾಕ್ಷಸರನ್ನು ಅಡಗಿಸಿದವನು,ವಿಲಾಸಿನಿ=ಸ್ತ್ರೀ, (ಮೋಹಿನಿ) ಪಸಿಯಬಣ್ಣ=ಕಪ್ಪುಬಣ್ಣ, ನೀಲಮಣಿಪುತ್ರಿಕೆ=ನೀಲರತ್ನದ ಬೊಂಬೆ.

೩೬. ಗುಲ್ಫಾವಸಕ್ತಂ=ಕಾಲಹರಡನ್ನು ಮುಟ್ಟುತ್ತಿದ್ದ, ರಕ್ತನವಕಂಚುಕ=ಕೆಂಪುಬಣ್ಣದ ಹೊಸ ನಿಲುವಂಗಿ. ಕಿಸುಸಂಜೆ=ಕೆಂಪಾದ ಸಂಧ್ಯಾಕಾಲ, ಬಿಸಿಲ್ಪೊರೆದ=ಬಿಸಿಲಿನಿಂದ ವ್ಯಾಪ್ತವಾದ, ಅಸಿತೋತ್ಪಲಿನಿ=ಕನ್ನೈದಿಲೆ.

೩೭. ಇಂದುವಮಂಡಳ=ಚಂದ್ರಮಂಡಳ, ವಿಭಾವರಿ=ರಾತ್ರಿ.

೩೮. ಕಪಿಳ ರೋಚನಾ=ಹಳೆಯ ಗೋರೋಚನ, ಗೌರೀಪತಿಯ ಬಿನದಕ್ಕೆ=

ಈಶ್ವರನ ವಿನೋದಕ್ಕಾಗಿ, ಭೂಭೃತ್ಸುತೆ=ಪರ್ವತರಾಜಪುತ್ರಿಯಾದ ಪಾರ್ವತಿಯು

೩೯. ಶ್ರೀರಮಣೀಪ್ರಿಯ=ಲಕ್ಷ್ಮೀಪತಿಯಾದ ವಿಷ್ಣು, ಪುದಿದಳ್=ಪ್ರವೇಶಿಸಿದಳು, ನೀರೇರುಹದಳನಯನೆ=ಕಮಲದಳದಹಾಗೆ ಕಣ್ಣುಳ್ಳವಳು. ನಾಡೆ=ವಿಶೇಷವಾಗಿ.

೪೦. ಸ್ಮರರಿಪುಲಲಾಟನೇತ್ರ=ಮನ್ಮಥನ ಶತ್ರುವಾದ ಈಶ್ವರನ ಹಣೆಗಣ್ಣು, ಸ್ಫುರತ್=ಪ್ರಕಾಶಮಾನವಾದ, ಹುತವಹನಿಂ=ಬೆಂಕಿಯಿಂದ, ಕರಮೆ=ವಿಶೇಷವಾಗಿ,

೪೧. ಸ್ಮರವೇದನೆ=ಕಾಮಬಾಧೆ. ಎಯ್ತರೆ = ಬರಲು, ಕೊಲ್ವಪದದೊಳ್=ಸಂಹಾರಕಾಲದಲ್ಲಿ, ನೆತ್ತರ್ಪೊರೆದ=ರಕ್ತದಿಂದ ಕೂಡಿದ, ಅದ್ರಿಕನ್ಯೆ=ಪಾರ್ವತಿ.

೪೨. ಬೆಟ್ಟಿತು=ಕಠಿನವಾದುದು, ತಳಿರ್ಗಳಂ=ಚಿಗುರುಗಳನ್ನು, ಇಟ್ಟಳಂ=ಸಾಂದ್ರವಾದುದು. ಅರುಣಚರಣ ದ್ಯುತಿಗಳ್=ಕೆಂಪಾದ ಕಾಲಿನ ಕಾಂತಿಗಳು.

೪೩. ಅನಲಂ=ಅಗ್ನಿಯು, ಗೆಯ್ತಂ = ಕಾರ್ಯವು, ಅಪ್ರಮಾಣಂಗಡ=ಅನ್ಯಾಯವಲ್ಲವೇ, ತಜ್ಜಾತಿ ಸಂಶೋಧನಕ್ಕೆ=ಅವಳ ಚಂಡಾಲಜಾತಿ ಸಂಶೋಧನೆಗಾಗಿ (ಚಂಡಾಲಸ್ತ್ರೀ ಅಹುದೋ ಅಲ್ಲವೋ ಎಂಬುದನ್ನು ತಿಳಿಯುವುದಕ್ಕಾಗಿ) ಅನುರಾಗಂ ಬೆರಸು=ಪ್ರೇಮದಿಂದ ಕೂಡಿ, ಎನಸುಂ=ವಿಶೇಷವಾಗಿ, ನೂಪುರ ರತ್ನಕಾಂತಿ=ಕಾಲಂದಿಗೆಯ ರತ್ನಕಾಂತಿ,

೪೪. ಸ್ಮರ ಚಕ್ರೇಶ್ವರ=ಮನ್ಮಥ ಚಕ್ರವರ್ತಿಯ, ಕರಿಕುಂಭ=ಆನೆಯ ಕುಂಭಸ್ಥಳದಲ್ಲಿ, ರುಚಿರ=ಮನೋಹರವಾಗಿರುವ, ರೋಮಲತಾ ಬಂಧುರತ=ಲತೆಯಂತಿರುವ ಕೂದಲಿನ ಮನೊಹರತೆಯಿಂದ ಕೂಡಿದ, ಆಲವಾಲ=ಪಾತಿ, ಕಾಂಚಿ=ನಡುಪಟ್ಟಿ.

೪೫. ಮಂದಾಕಿನಿ=ದೇವಗಂಗಾನದಿ, ಕಾಳಿಂದಿ=ಯಮುನಾ ನದಿ, ಗೆತ್ತು=ಭ್ರಾಂತಿಗೊಂಡು, 'ಗಿಱು' ಧಾತು ಭೂತಕಾಲದಲ್ಲಿ ಗೆತ್ತು ಎಂದಾಗಿದೆ ; ಆದಂ=ವಿಶೇಷವಾಗಿ, ಅಟ್ಕಱಿಂದಂ=ಪ್ರೀತಿಯಿಂದ,

ವಚನ॥ ಮುಂದಿನ ಭಾಗದಲ್ಲಿ ಕವಿಯು ಶ್ಲೇಷೆಯಿಂದ ಉಪಮಾನೋಪಮೇಯಗಳ ವಿಶೇಷಣಗಳನ್ನು ಸಮನ್ವಯ ಮಾಡಿದ್ದಾನೆ. ಮಲಯ ಮೇಖಲೆಯಂತೆ=ಮಲಯ ಪರ್ವತದ ತಪ್ಪಲಿನಂತೆ, ಚಂದನ ಪಲ್ಲವಾವತಂಸೆಯುಂ=ಶ್ರೀಗಂಧದ ಚಿಗುರಿನ ಆಭರಣವನ್ನುಳ್ಳವಳು. ಇದು ಮಲಯ ಪರ್ವತಕ್ಕೂ ಚಂಡಾಲ ಕನ್ನಿಕೆಗೂ ಸಮಾನವಾದುದು. ನಕ್ಷತ್ರಮಾಲೆ ಚಿತ್ರಾಶ್ಲೇಷ ಶ್ರವಣಾಭರಣ ಭೂಷಿತವಾಗಿದೆ ಅಂದರೆ ಚಿತ್ರಾ, ಆಶ್ಲೇಷಾ, ಶ್ರವಣ ಎಂಬ ನಕ್ಷತ್ರಗಳ ಪೋಷಣೆಯಿಂದಲಂಕೃತವಾಗಿದೆ. ಕನ್ಯೆಯು ಆಶ್ಚರ್ಯಕರವಾದ ಸಂಯೋಗವುಳ್ಳ ಕರ್ಣಾಲಂಕಾರಗಳಿಂದ ಕೂಡಿದವಳಾಗಿದ್ದಾಳೆ. ಅಕುಲೀನೆ=ಭೂಸ್ಪರ್ಶವಿಲ್ಲದವಳು-ಸತ್ಕುಲೋತ್ಪನ್ನೆಯಲ್ಲದವಳು, ಲೋಚನ ಗ್ರಾಹಿಣಿ=ಕಣ್ಣನ್ನು ಸೆಳೆಯುವುದು, ಆಕರ್ಷಕಳಾಗಿರುವವಳು, ಮನೋಹರಂ=ಮನಸ್ಸನ್ನೇ ಅಪಹರಿಸಿ ಮರೆಮಾಡುವುದು, ಮನಸ್ಸಿಗೆ ಇಂಪಾಗಿರುವವಳು. ಅಕ್ಷತರೂಪಸಂಪನ್ನೆ > ಕಾಡಿನ ದೃಷ್ಟಿಯಿಂದ, ಅಕ್ಷತರು + ಉಪಸಂಪನ್ನೆ=ತಾಳೀಮರಗಳಿಂದ ಕೂಡಿರುವುದು, ಕನ್ನಿಕೆಯ

ದೃಷ್ಟಿಯಿಂದ ಅಕ್ಷತ=ಕೊರತೆಯಿಲ್ಲದ. ರೂಪಸಂಪನ್ನೆ=ಸೌಂದರ್ಯದಿಂದ ಕೂಡಿದವಳು. ಅರಣ್ಯ ಕಮಲಿನಿ=ಕಾಡುಕಮಲ, ಮಾತಂಗಕುಲ=ಆನೆಯ ಗುಂಪು-ಚಂಡಾಲಜಾತಿ, ಅಮೂರ್ತಿ=ಆಕಾರವಿಲ್ಲದವಳು. ಸ್ಪರ್ಶವರ್ಜಿತೆ=ಮುಟ್ಟಲಾಗದವಳು, ಮುಟ್ಟಲರ್ಹಳಲ್ಲದವಳು. ಆಲೇಖ್ಯಗತೆ=ಚಿತ್ರದಲ್ಲಿ ಬರೆದವಳಂತಿರುವವಳು. ಮಧುಮಾಸ=ಚೈತ್ರಮಾಸ, ವಿಜಾತಿ=ಜಾಜಿಯಹೂವಿಲ್ಲದಿರುವಿಕೆ, ನೀಚ ಜಾತಿಯವಳು. ಮುಷ್ಟಿಗ್ರಾಹ್ಯಮಧ್ಯೆ=ಹಿಡಿಯಲ್ಲಿ ಅಡಗಿಸಲು ಸಾಧ್ಯವಾದ ಮಧ್ಯವುಳ್ಳದ್ದು. ಮುಷ್ಟಿಯಲ್ಲಿ ಹಿಡಿಯಲು ಸಾಧ್ಯವಾಗುವಷ್ಟು ಸಣ್ಣದಾದ ಕಟಿ ಭಾಗವನ್ನುಳ್ಳವಳು. ವಿಜೃಂಭದ್ವನೆ=ಅಭಿವೃದ್ಧಿಯಾಗುತ್ತಿರುವ ಯವ್ವನವನ್ನುಳ್ಳವಳು. ಎವೆಯಿಕ್ಕದೆ=ರೆಪ್ಪೆಬಡಿಯದೆ (ತೆರೆದ ಕಣ್ಣಿನಿಂದ), ವಿಸ್ಮಿತಚಿತ್ತ=ಆಶ್ಚರ್ಯದಿಂದ ಕೂಡಿದ ಮನಸ್ಸು.

೪೬. ಅಸ್ಥಾನ=ಯೋಗ್ಯವಲ್ಲದ ಸ್ಥಾನ. ಅಯೋಗ್ಯವಸ್ತು, ಗರ್ಹಿತಸ್ಪರ್ಶ ಸಂಭೋಗ=ದೂಷಿತವಾದ ಸ್ಪರ್ಶ ಸಂಭೋಗವುಳ್ಳ, ಅವಿವೇಕಿಯಾದ ಬ್ರಹ್ಮನು ಇಂತಹ ಅದ್ಭುತ ರೂಪವನ್ನು ಮುಟ್ಟುವುದಕ್ಕೂ ಭೋಗಿಸುವುದಕ್ಕೂ ಅರ್ಹವಲ್ಲದ ಚಂಡಾಲ ಜಾತಿಯಲ್ಲಿ ಮಾಡಿದ ಪ್ರಯತ್ನ ಮೂರು ಲೋಕಕ್ಕೂ ಆಶ್ಚರ್ಯವನ್ನುಂಟು ಮಾಡಿತು. ಏಗೈದನೊ=ಏನು ಅಕಾರ್ಯ ಮಾಡಿಬಿಟ್ಟನೊ!

೪೭. ಇವಳು ಚಂಡಾಲ ಸ್ತ್ರೀಯೆಂದು ಬ್ರಹ್ಮನು ಇವಳನ್ನು ಹಸ್ತಸ್ಪರ್ಶವೇ ಇಲ್ಲದೆ ನಿರ್ಮಿಸಿರಬೇಕು. ಕೈಯಿಂದ ಮುಟ್ಟಿದ್ದರೆ ಇವಳ ಲಾವಣ್ಯ ಇಷ್ಟು ಅದ್ಭುತವಾಗಿರುತ್ತಿತ್ತೆ?

೪೮. ಪಾಲೆ=ಕಿವಿಯ ಹಳ್ಳ. ಕರ್ಣಪೂರ ಪಲ್ಲವ=ಕಿವಿಯಾಭರಣವಾಗಿದ್ದ ಚಿಗುರು, ನಸು ಜಗುಳುತ್ತಿರೆ=ಸ್ವಲ್ಪ ಜಾರುತ್ತಿರಲು. ಪೊಡೆಮಟ್ಟಳ್=ನಮಸ್ಕಾರ ಮಾಡಿದಳು.

ವ॥ ವಿಹಂಗ ಸಂಗತ ಪಂಜರ=ಪಕ್ಷಿಯಿಂದ ಕೂಡಿದ ಗೂಡು.

೪೯. ವಿದಿತಾರ್ಥಶಾಸ್ತ್ರ=ತರ್ಕಶಾಸ್ತ್ರವನ್ನು ತಿಳಿದಿರುವುದು ಅಥವಾ ಅರ್ಥಶಾಸ್ತ್ರವನ್ನು ಬಲ್ಲದು. ಅಶೇಷ....ಪ್ರವೀಣ=ಸಮಸ್ತ ಪುರಾಣ ಕಥೆಗಳಲ್ಲಿ ಪ್ರವೀಣನಾಗಿರುವನು. ಸಕಲಾಂಗವೇದವಿದ=ಷಡಂಗ (ಶಿಕ್ಷಾ, ವ್ಯಾಕರಣ, ಛಂದಸ್, ನಿರುಕ್ತ, ಜ್ಯೋತಿಷ, ಕಲ್ಪ) ಸಹಿತವಾದ ಸಮಸ್ತ ವೇದವನ್ನೂ ತಿಳಿದಿರುವುದು. ಕಾವ್ಯಕಲಾಪ್ರಗಲ್ಭಂ=ಕಾವ್ಯ ಕಲೆಯಲ್ಲಿ ನಿಷ್ಣಾತನು. ವಿತತ=ತಂತ್ರೀ ವಾದ್ಯ, ಅಭಿರೂಪಂ=ಪ್ರೌಢ, ಉದ್ಗತಾಂಶುಕಂ=ಹೆಚ್ಚಿನ ಕಾಂತಿಯುಳ್ಳ.

೫೧. ಒಲವಿನ ಕಲಹ,=ಪ್ರಣಯ ಕಲಹ

೫೨. ದೇವರೆ ಭಾಜನಂದಲ್=ಸ್ವಾಮಿಯೇ ಭಾಗಿಯಲ್ಲವೆ, ಆಳ್ದನ ಮಗಳ್=ಯಜಮಾನನ ಮಗಳು, ಪದಪಿಂ=ಪ್ರೀತಿಯಿಂದ, ಪಾದಪಂಕರುಹ=ಪಾದ ಕಮಲ, ಕೈಕೊಳವೇಟ್ಟುದು=ಅಂಗೀಕರಿಸಬೇಕು

ವ॥ ರಾಜಾಭಿಮುಖಿ=ರಾಜನಿಗೆದುರಾಗಿ, ಉನ್ನಮಿತ=ಮೇಲಕ್ಕೆತ್ತಿದ, ದಕ್ಷಿ

ಣಚರಣ೯=ಬಲಗಾಲುಳ್ಳುದಾಗಿ, ಅತಿಸ್ಪಷ್ಟವರ್ಣಸಂಸ್ಕಾರಮಪ್ಪವಾಣಿ=ಬಹಳ ಸರಳವಾದ ಅಕ್ಷರಗಳ ಜೋಡಣೆಯಿಂದ ಕೂಡಿದ ಮಾತು.

೫೩. ತಿರ್ಯಗ್ಜಾತಿ=ಪ್ರಾಣಿವರ್ಗ, ಒದುವುವಿನಂ=ಉಂಟಾಗುತ್ತಿರಲಾಗಿ, ಆರ್ಯಮಂ=ಆರ್ಯಾವೃತ್ತದ ಪದ್ಯವನ್ನು

೫೪. ಭವತೋರಿಪುಸ್ತ್ರೀಣಾಂ=ನಿನ್ನ ಶತ್ರುಗಳ ಸ್ತ್ರೀಯರ, ಸ್ತನಯುಗಂ=ಎರಡು ಮೊಲೆಗಳು, ವೀರ ವಿಮುಕ್ತಾಹಾರಂ=ವೀರರ ಮುತ್ತಿನ ಹಾರವೂ, ಅಶ್ರುಸ್ನಾತಂ=ಕಣ್ಣೀರಿನಲ್ಲಿ ಮಿಂದು, ಸಮೀಪತರವೃತ್ತಿ = ಪಕ್ಕದಲ್ಲಿಯೇ ಇರುವ, ಹೃದಯ ಶೋಕಾಗ್ನೇಃ=ಎದೆಯ ದುಃಖಾಗ್ನಿಯಿಂದ ಬೆಂದು, ವ್ರತಮಿವ ಚರತಿ=ತಪಸ್ಸು ಮಾಡುತ್ತಿದೆ. ಎದೆಗಿಚ್ಚು=ಎದೆಯ ಬೆಂಕಿ.

ವ॥ ಚೋದ್ಯಂಪಟ್ಟು=ಆಶ್ಚರಪಟ್ಟು, ಕೆಲ=ಪಕ್ಕ, ಮಹಾಹೇಮಾಸನ=ದೊಡ್ಡ ಚಿನ್ನದ ಆಸನ, ಅಮರ ಗುರುಸದೃಶ=ದೇವಗುರುವಾದ ಬೃಹಸ್ಪತಿಗೆ ಸಮಾನ.

೫೫. ವರ್ಣಮಾತ್ರಾಸ್ವರರುಚಿರಂ=ಅಕ್ಷರ ಮಾತ್ರೆ ಸ್ವರಗಳಿಂದ ಮನೋಹರವಾದ, ವ್ಯಕ್ತದಿಂದ=ಸ್ಪಷ್ಟವಾಗಿ, ಅಸ್ಖಲಿತಂ=ತಪ್ಪಿಲ್ಲದೆ

೫೬. ಶಾರಿಕೆ=ಹೆಣ್ಣುಗಿಳಿ. ವಿಹಗಪ್ರಕರ=ಪಕ್ಷಿಗಳ ಸಮೂಹ,

೫೭. ಚಿತ್ರಂ=ಆಶ್ಚರ್ಯ

೫೮. ತತ್+ಶಾಪ=ತಚ್ಛಾಪ, ನುಡಿಯಲ್ಕೆ ಆಗ=ಆಗದು. ಶಬ್ದಾನುಶಾಸನದ 'ಅದ್ವದಾಗೋರನರ್ಹಾರ್ಥೇ' ಎಂಬ ಸೂತ್ರದ ಪ್ರಕಾರ ಆಗು ಧಾತುವಿನ ಮೇಲೆ ಅನರ್ಹಾರ್ಥದಲ್ಲಿ ಅ ಪ್ರತ್ಯಯ ಬಂದಿದೆ. ಮಡಿದುದು=ಮಡಿಸಿಕೊಂಡಿತು. ಸಮುದ್ಭೂತ=ಉಂಟಾದ, ಎದ್ದ, ಶಂಖಪ್ರಣಾದಂ=ಶಂಖಶಬ್ದವು ಪೊಣ್ಮಿತ್ತು=ಹೆಚ್ಚಿತು.

ವ॥ ಉಜ್ಜುಗಂಗೆಯ್ದು=ಪ್ರಯತ್ನಿಸಿ, ಪೞಿಯಿಸ್ವೆಟ್ಟು=ವಿಸರ್ಜಿಸಲು ಹೇಳಿ ಅಂಗದ=ತೋಳಬಳೆ, ಮಕರಿಕಾಪತ್ರ=ಎದೆ ತೋಳು ಕೆನ್ನೆಗಳಲ್ಲಿ ವಿವಿಧ ಬಣ್ಣಗಳಿಂದ ಬರೆಯುವ ಚಿತ್ರ, ತೋರಮುಯ್ಯು=ದಪ್ಪವಾದ ಭುಜಶಿರಸ್ಸು (ಹೆಗಲು) ಬಂಬಲ ಸೋಂಕಿನೊಳ್=ಇಕ್ಕಟ್ಟಿನಲ್ಲಿ ಪರಸ್ಪರ ಸೋಂಕುವುದರಿಂದ, ರಜಂ=ಧೂಳಿ, ಅಂಸಾವಸಕ್ತ=ಹೆಗಲಿನ ಮೇಲೆ ಒರಗಿರುವ, ಮುತ್ತಂಚೆ=ಮುದಿ ಹಂಸ, ಮೆಲ್ಲುಲಿ=ಮೃದು ಧ್ವನಿ. ನೂಪುರರಣಿತ=ಅಂದುಗೆಯ ಶಬ್ದ, ಎಳಸಿಬರ್ಪ=ಅಶೆಪಟ್ಟು ಬರುತ್ತಿರುವ, ಇಂಚರ=ಇನಿದಾದ ಸ್ವರ, ಉಲ್ಲಸಿತಮಾದ=ಹೊಳೆಯುತ್ತಿರುವ, ಕಾಂಚೀಕ್ರೇಂಕಾರ=ನಡುಪಟ್ಟಿಯ ಶಬ್ದ. ಉತ್ಕಂಠ=ಆಸಕ್ತಿ, ಸಾರಸಂಗಳ ಕೂಜಿತ=ನೀರು ಹಕ್ಕಿಗಳ ಕೂಗುವಿಕೆ. ಅನುಪಮ=ಹೋಲಿಕೆಯಿಲ್ಲದ, ಪ್ರಾಸಾದ ಕೂಟ=ಉಪ್ಪರಿಗೆ ಮನೆಗಳ ಸಮೂಹ. ಕುಹರ=(ಗುಹೆ) ಒಳಭಾಗ, ಮಾರ್ದನಿಯಿಡು=ಪ್ರತಿಧ್ವನಿಕೊಡು. ರಣಿತ=ಶಬ್ದ, ಮಾಮಸಕ=ಮಹೋತ್ಸಾಹ, ಪೂವಲಿ=ರಂಗವಲ್ಲಿ, ಮಾಡಲ್ಪಟ್ಟ ಪುಷ್ಪೋಪಹಾರ ಕ್ಷುಭಿತ=ಕಲಕಲ್ಪಟ್ಟ, ತಾಂಬೂಲಕರಂಕವಾಹಿನಿ=ವೀಳೆಯದೆಲೆಯ ಪೆಟ್ಟಿಗೆಯನ್ನು ಹೊತ್ತು ತರುವವಳು.

೬೦. ಪೆಱಗೆ+ಇವೆ=ಚಂದ್ರನಿಗೆ ಇದೊ, ಪೊಣ್ಮಿದತ್ತು=ಹೊಮ್ಮಿದವು, ಸಿಂಧುವಾರ ನವಮಂಜರಿ=ಬಿಳಿಯಲ್ಲಕ್ಕಿಯ ಹೂವಿನ ಗೊಂಚಲು. ಘರ್ಮ ಬಿಂದು= ಬೆವರಿನ ಹನಿ.

ವ|| ಬೆಳುವಟ್ಟೆ=ಬಿಳಿಯ ಬಟ್ಟೆ, ಪಳುಕಿನ ಪಟ್ಟವಣೆ=ಸ್ಫಟಿಕದ ರಾಜಪೀಠ, ಮುಸುಱುವ=ಮುತ್ತುವ, ಬಾಸಣಿಸಿದಂತೆ=ಮುಚ್ಚಿದ ಹಾಗೆ, ಮಜ್ಜನೋಪಕರಣ ಸಂಪಾದನವ್ಯಗ್ರ ಪರಿಜನಂ=ಸ್ನಾನಕ್ಕೆ ಬೇಕಾಗುವ ಸಲಕರಣೆಗಳನ್ನು ಸಜ್ಜುಗೊಳಿಸಲು ಆಸಕ್ತರಾದ ಪರಿವಾರ ಜನಗಳು, ಓಲಾಡಿ=ಮುಳುಗಾಡಿ.

೬೧. ರುಚಿರಾಂಚಳ=ಮನೋಹರವಾದ ಬಟ್ಟೆ. ಅಮರ್ದಂತಿಱುಂಕಿ=ಹೊಂದಿ ಕೊಳ್ಳುವಂತೆ ಸಂಕೋಚ ಮಾಡಿಕೊಂಡು, ಲುಳಿತಾಳಕೀಜಾಳ=ಚಲಿಸುತ್ತಿರುವ ಮುಂಗುರುಳಿನ ರಾಶಿ, ಕೊಡಂಕೆ=ಕಿವಿ, ಏಱನೂಂಕಿ=ಮೇಲಕ್ಕೆ ತಳ್ಳಿ,

೬೩. ನಳಿನದಳಪುಟ=ಕಮಲದೆಲೆಯಪಾತ್ರೆ,

೬೪. ರಜನಿ=ರಾತ್ರಿ, ಐಂದವಬಿಂಬವ್ರಜ=ಚಂದ್ರ ಬಿಂಬಗಳ ಸಮೂಹ, ಜ್ಯೋತ್ಸ್ನಾಪ್ರವಾಹ=ಬೆಳುದಿಂಗಳ ಪ್ರವಾಹ,

೬೫. ಸುರುಚಿರ=ಮನೋಹರವಾದ, ಶಾತಕುಂಭ=ಚಿನ್ನ, ನಿಕಾಯ= ಸಮೂಹ, ಮಂಜರಿ=ಗೊಂಚಲು,

೬೬. ಸುರಭಿಜಳ=ವಾಸನೆಯಿಂದ ಕೂಡಿದ ನೀರು.

೬೮. ತರುಣೋರಗ ನವನಿರ್ಮೋಕರುಚಿರಂ=ಎಳೆಯ ನಾಗರದ ಹೊಸ ಪೊರೆ ಯಂತೆ ಮನೋಹರವಾದ, ಧೌತಧವಳಾಂಬರ=ಶುದ್ಧವಾದ ಬಿಳಿಯ ಬಟ್ಟೆ. ಅಭ್ರ ಗಂಗಾಪರಿವೃತ=ಆಕಾಶ ಗಂಗೆಯಿಂದ ಸುತ್ತುವರಿಯಲ್ಪಟ್ಟ, ಹಿಮವನ್ನಗೇಂದ್ರ=ಹಿಮ ವತ್ಪರ್ವತ.

ವ|| ಅಭ್ಯವಹಾರ=ಊಟ. ಸ್ಕಂಧವಿನ್ಯಸ್ತಹಸ್ತ=ಹೆಗಲಿನ ಮೇಲೆ ಇಡಲ್ಪಟ್ಟ ಕಯ್ಯುಳ್ಳವನು, ಕತಿಪಯ ಪದಂ=ಕೆಲವು ಹೆಜ್ಜೆಗಳು. ಪಳುಕಿನ ಭಿತ್ತಿ=ಸ್ಫಟಿಕದ ಗೋಡೆ, ನೇತ್ರದುಕೂಲ=ಸೂಕ್ಷ್ಮವಾದ ಬಟ್ಟೆ, ಕುಳಿರ್ದ=ತಣ್ಣಗಿರುವ, ಸನ್ನಿದವಾ ದರ್=ಸಮೀಪವಾದರು. ಮಂದ್ಯೈಸಿ=ಒಟ್ಟುಗೂಡಿ,

೬೯. ಬಳಸಿರ್ದಭ್ರಾಳಿಯಿಂದ....ವೆಂಬಂತೆ=ಮೋಡಗಳ ಸಮೂಹದಿಂದ ಸುತ್ತು ವರಿಯಲ್ಪಟ್ಟ ಹಿಮವತ್ಪರ್ವತದ ಶಿಲಾಪಟ್ಟಕೆಯನ್ನುವಹಾಗೆ. ಲತಾಂತಂ ತಳ್ತ= ಹೂವನ್ನು ಹೊಂದಿರುವ, ಸಿತ=ಬಿಳುಪು, ಮೃದುಳ=ಮೃದುವಾದ, ಪ್ರಚ್ಛದಚ್ಛನ್ನ= ಹಾಸಿನಿಂದ ಮುಚ್ಚಿರುವ, ಕೀಳ್ವಾಳವಳ್=ಬಿಚ್ಚುಗತ್ತಿಯನ್ನು ಹಿಡಿದಿರುವ ಹೆಂಗಸು,

ವ|| ದೌವಾರಿಕೆ=ಬಾಗಿಲು ಕಾಯುವವಳು, ತದ್ವೃತ್ತಾಂತಾಕರ್ಣನಕೌತು ಕದಿಂ=ಅದರ ವಿಷಯವನ್ನು ಕೇಳಬೇಕೆಂಬ ಕುತೂಹಲದಿಂದ,

೭೦. ಕನ್ನಡವಕ್ಕಿ=ಗಿಳಿ.

೭೧. ಕುಂಚಿತ ಪೂರ್ವಕಾಯನ್=ಮುಂಭಾಗದ ಶರೀರವನ್ನು ಬಗ್ಗಿಸಿರುವ

ವನೂ. ಉಪಜಾತಜರಾಧವಳೋತ್ತಮಾಂಗನ್=ಮುಪ್ಪುಂಟಾದುದರಿಂದ ಬಿಳಿಯ ತಲೆಯುಳ್ಳವನೂ, ಅಂಗಾಂಚಿತ ಕಂಚುಕಂ=ಅಂಗಕ್ಕೆ ಹೊಂದುವ ಕಂಚಕವುಳ್ಳವನೂ, ಕೂರ್ಮೆಯಿಂ=ಪ್ರೀತಿಯಿಂದ, ಗಿಳಿಯ ಬೆನ್ನನೆ=ಗಿಳಿಯ ಹಿಂದೆಯೇ, ಗದ್ಗದ ಸ್ವನಂ =ತಗ್ಗಿದ ಧ್ವನಿಯುಳ್ಳವನು.

ವ|| ದೇವರಾಣತಿಯಿಂ=ಸ್ವಾಮಿಯಾಜ್ಞೆಯಿಂದ, ಕೃತಸ್ನಾನನುಂ ಉಪರಚಿತಾಹಾರನಂ=ಸ್ನಾನ ಮಾಡಿಸಲ್ಪಟ್ಟವನೂ ಆಹಾರವನ್ನು ಮುಗಿಸಿದವನು.

೨೨. ಅಭಿಮತ=ಇಷ್ಟಾರ್ಥ. ಆಸ್ವಾದಿಸಿದೆ=ರುಚಿನೋಡಿದೆ (ತಿಂದೆ),

೨೩. ಕಳಕಂಠ=ನವಿಲಿನ, ಲೋಚನಚಛ್ವಿವಿಳಾಸಮಂ=ಕಣ್ಣಿನ ಕಾಂತಿಯ ವೈಭವವನ್ನು, ತಳೆದ=ಹೊಂದಿದ, ನೀಲಪಾಟಳಜಂಬೂಫಳಮಧುರರಸಮಂ=ನೀಲಿಯ ಬಣ್ಣದ ನೇರಳೆಯ ಹಣ್ಣಿನ ರುಚಿಯಾದ ರಸವನ್ನು, ಪಿರಿದಟ್ಟಿಯಿಂ=ವಿಶೇಷ ಪ್ರೀತಿಯಿಂದ, ಮನಂ ತಣಿವಿನೆಗಂ=ಮನಸ್ಸು ತೃಪ್ತಿಪಡುವವರೆಗೂ, ಈಂಟಿದೆಂ=ಕುಡಿದೆನು.

೨೪. ಹರಿವಿದಳಿತ=ಸಿಂಹದಿಂದ ಸೀಳಲ್ಪಟ್ಟ, ಮದಗಜ ಕುಂಭರಕ್ತಸಿಕ್ತ= ಮದ್ದಾನೆಯ ಕುಂಭಸ್ಥಳದ ರಕ್ತದಿಂದ ಅಂಟುಕೊಂಡಿರುವ, ಆರ್ದ್ರಮೌಕ್ತಿಕ=ಹಸಿಯ ಮುತ್ತಿನ, ಪ್ರಕರದವೋಲ್=ಸಮೂಹದ ಹಾಗೆ, ರಾಜಿ=ಸಮೂಹ, ಆಸ್ವಾದಿಸಿದೆಂ= ರುಚಿನೋಡಿದೆನು.

೨೫. ಆಮಳಕಫಳಾಸ್ವಾದನೆಯಿಂ ತೃಪ್ತಿ ಆದತ್ತು=ನೆಲ್ಲಿಯಕಾಯನ್ನು ರುಚಿನೋಡಿದುದರಿಂದ ತೃಪ್ತಿಯಾಯಿತು. ಗಟಿಪುತ್ತಿರಲೇಂ=ಹರಟೆ ಹೊಡೆಯುವುದರಿಂದೇನು, ಆದತ್ತಮೃತಂ=ಅಮೃತೋಪಮಾನವಾಯಿತು, ಊಡಿದರ್=ತಿನ್ನಿಸಿದರು.

೨೬. ವಿಸ್ಮಯ = ಆಶ್ಚರ್ಯ, ಅಱಿಯೆ ಪೇಟ್ವುದು = ತಿಳಿಯುವ ಹಾಗೆ ಹೇಳುವುದು.

೨೭. ಅಭಿಧಾನ = ಹೆಸರು, ಭವಸ್ಮೃತಿ—ಜನ್ಮಾಂತರದ ನೆನಪು ವರಪ್ರಸಾದೋನ್ನತಿ = ವರಪ್ರಸಾದದ ಮೇಲ್ಮೆ, ವಿಹಂಗಮ = ಪಕ್ಷಿ, ಮಱಿಸಲೆಂದು = ಮರೆಸಬೇಕೆಂದು.

೨೮. ಮುಂ=ಮೊದಲು, ಪಂಜರ ಬಂಧನ=ಗೂಡಿನಲ್ಲಿ ಸಿಕ್ಕುವಿಕೆ, ಸಂಗತಿ =ಸಹವಾಸ.

೨೯. ಅಟ್ಮಿಱಿಂ=ಪ್ರೀತಿಯಿಂದ, ಬೆಸಗೊಳಲ್ = ಪ್ರಶ್ನೆಮಾಡಲಾಗಿ, ನಿಜವೃತ್ತ=ತನ್ನ ಚರಿತ್ರೆ, ತತ್ಪ್ರಪಂಚಮಂ=ಆವೃತ್ತಾಂತವನ್ನು.

ವ|| ತಗುಳ್ದುದು=ಪ್ರಾರಂಭಿಸಿತು.

೩೦. ಭುವನಪ್ರಸ್ತುತ್ಯವಸ್ತುಪ್ರಕರದಪುದುವಿಂ=ಪ್ರಪಂಚದಲ್ಲಿರುವ ಶ್ಲಾಘ್ಯವಾದ ಪದಾರ್ಥಸಮೂಹಗಳೆಲ್ಲವನ್ನು ಪಡೆದಿರುವುದರಿಂದ, ಕಟೀಸೂತ್ರ=ನಡುಪಟ್ಟಿ, ಉಡೆದಾರ, ಪೂರ್ವಾಪರ . . . . ದೇಶಂ=ಪೂರ್ವ ಪಶ್ಚಿಮಸಮುದ್ರದ ಅಲೆಗಳಿಂದ ಮೇಲಕ್ಕೆಸೆಯಲ್ಪಟ್ಟ ರತ್ನಗಳಿಂದ ಕೂಡಿದ ದೇಶ,

೮೧. ಪಳುವದ ಮದಕರಿಗಳ ಮದಜಲದೊಳ್=ಕಾಡಿನ ಮದ್ದಾನೆಗಳ ಮದೋದಕದಿಂದ

೮೨. ಕುರರ ಕುಲ ತುಂಡ ಖಂಡಿತ=ಕುರರ ಪಕ್ಷಿಸಮೂಹದ ಕೊಕ್ಕಿನಿಂದ ಕತ್ತರಿಸಲ್ಪಟ್ಟ, ಮರೀಚಲತಾಪ್ರಚಯ=ಮೆಣಸಿನ ಬಳ್ಳಿಯ ಸಮೂಹ, ಕರಿಕರ=ಆನೆಯ ಸೊಂಡಲು, ಮೃದಿತ=ಹೊಸಕಲ್ಪಟ್ಟ, ತಮಾಲೋತ್ಕರ ಕಿಸಲಯಸುರಭಿಗಂಧದಿಂ=ಹೊಂಗೆಯ ಗಿಡಗಳ ಸಮೂಹದ ಚಿಗುರಿನ ಸುಗಂಧದಿಂದ,

೮೩. ಚರಣಾಲಕ್ತಕ = ಕಾಲಿನ ಅರಗು, ಪೊರೆದುವು = ಲೇಪಿತವಾದುವು, ಚೆಂದಳಿರ್ದುರುಗಲ್=ಕೆಂಪುಚಿಗುರಿನ ಗೊಂಚಲು,

ವ॥ ಒಸರ್ವ=ಜಿನುಗುತ್ತಿರುವ, ತಳಿಪದೊಳಂ=ಸೇಚನೆಯಿಂದ (ಚೆಲ್ಲುವಿಕೆ) ಎಲರಲೆಪ=ಗಾಳಿಯ ಚಲನೆ. ಕುಸುಮ ರೇಣು=ಹೂವಿನ ಪರಾಗ (ಧೂಳಿ), ಪಥಿಕ ಜನ=ದಾರಿಹೋಕರು, ಪಸರಿಸಿದ=ಹರಡಿರುವ, ಲವಂಗ ಪಲ್ಲವದ ಪಾಸು=ಲವಂಗದ ಚಿಗುರಿನಿಂದ ಕೂಡಿದ ಹಾಸಿಗೆ, ಎಳಗೌಂಗು = ಎಳೆಯ ಅಡಿಕೆ, ಮದವನ್ಮಾತಂಗ ಕಪೋಲದಿಂ=ಮದ್ದಾನೆಗಳ ಕೆನ್ನೆಗಳಿಂದ, ಒರೆದ ಒರತೆಯೊಳೆ=ಜಿನುಗಿದ ಪ್ರವಾಹದಿಂದ ಪುದಿದ=ವ್ಯಾಪ್ತವಾದ, ಏಲಾಲತಾವನಂ=ಏಲಕ್ಕಿಯ ಬಳ್ಳಿಗಳ ಸಾಲು.

೮೪. ಗಗನತಳಂಬರಂ=ಆಕಾಶದವರೆಗೆ, ಉಗಿಬಗಿ ಮಾಡುವಲ್ಲಿ=ಸೀಳುವಾಗ, ತೆತ್ತಿಸು=ಸೇರಿಕೊಂಡಿರು, ಮೃಗಪತಿಯೂಥ=ಸಿಂಹದ ಗುಂಪು,

ವ॥ ಈ ವಚನಭಾಗದಲ್ಲಿಯೂ ಕಾಡನ್ನು ಅನೇಕ ಪದಾರ್ಥಗಳಿಗೆ ಹೋಲಿಸಿ ಶ್ಲೇಷೆಯಿಂದ ಸಮಾನಧರ್ಮವನ್ನು ಸಮನ್ವಯ ಮಾಡಿದ್ದಾನೆ. ಸಮರಸಮುದ್ಯತ=ಯುದ್ಧವನ್ನು ಪ್ರಾರಂಭಮಾಡುವವನು, ವೇಣು=ಬಿದಿರಿನ ಬಾಣಾಸನ=ಬಿಲ್ಲಿನಲ್ಲಿ, ಆರೋಪಿತ=ಏರಿಸಲ್ಪಟ್ಟ, ಶಿಲೀಮುಖಂ=ಬಾಣವುಳ್ಳವನು (ಯುದ್ಧೋದ್ಯೋಗಿಯ ಪರವಾಗಿ), ವೇಣು=ಬಿದರುಗಳಲ್ಲಿಯೂ, ಬಾಣ=ಗೋರಂಟೆ ಮರಗಳಲ್ಲಿಯೂ, ಆಸನ =ಸರ್ಜಕ ವೃಕ್ಷಗಳಲ್ಲಿಯೂ, ಆರೋಪಿತ=ಕುಳಿತುಕೊಂಡಿರುವ, ಶಿಲೀಮುಖಂ=ದುಂಬಿಗಳುಳ್ಳದ್ದು (ಕಾಡಿನ ಪರವಾಗಿ) ವಿವಿಕ್ತ ಸಿಂಹನಾದಮುಂ=ಪ್ರತ್ಯೇಕವಾದ ಸಿಂಹಗರ್ಜನೆಯಿಂದ ಕೂಡಿದುದು (ಎರಡಕ್ಕೂ ಸಮಾನ) ಒಂದರಲ್ಲಿ ಸಿಂಹದಂತೆ ಗರ್ಜನೆ ಮತ್ತೊಂದರಲ್ಲಿ ಸಿಂಹದ ಗರ್ಜನೆ—ಮೃತ್ಯು ಭೀಷಣ, ಯಮನ ಭಯವನ್ನುಳ್ಳದ್ದು—ಮೃತ್ಯುವಿನಷ್ಟು ಭಯಂಕರವಾದುದು, ಮಹಿಷಾಧಿಷ್ಠಾನ=ಎಮ್ಮೆಯ ವಾಸಸ್ಥಳ, ಕಾತ್ಯಾಯನೀ ಕಾಯ=ಗೌರಿಯ ಶರೀರ, ವಿಚಳಿತ=ಬೀಸಲ್ಪಟ್ಟ ಖಡ್ಗ=ಕತ್ತಿಯಿಂದ ಭಯಂಕರವಾದುದು ವಿಚಳಿತ=ಚಲಿಸುತ್ತಿರುವ ಖಡ್ಗ=ಘೇಂಡಾಮೃಗದಿಂದ ಭಯಂಕರವಾಗಿರುವುದು, ವರುಣ ಚಂದನ ಪಲ್ಲವಾಳಂಕೃತಂ=ಕೆಂಪು ಗಂಧದ ಚಿಗುರುಗಳಿಂದ ಅಲಂಕೃತವಾಗಿರುವವಳು. ಹಾಗೆಯೇ ಕಾಡು ಕೂಡ ಕೆಂಪಗಿರುವ ಶ್ರೀಗಂಧದ ಮರಗಳ ಚಿಗುರಿನಿಂದ ಅಲಂಕೃತವಾಗಿದೆ. ನೃತ್ಯನ್ನೀಲಕಂಠ=ಕುಣಿಯುತ್ತಿರುವ ಶಿವನನ್ನುಳ್ಳುದು, ಕುಣಿಯುತ್ತಿರುವ ನವಿಲುಗಳನ್ನುಳ್ಳುದು. ಪಲ್ಲವಾರುಣಿತ=ಚಿಗುರಿನ ಕೆಂಪುಬಣ್ಣ

ವುಳ್ಳದ್ದು, ಚಿಗುರಿನಿಂದ ಕೆಂಪಗಿರುವುದು, ಚಮರೀವಾಲವ್ಯಜನೋಪಶೋಭಿತಂ=ಚಾಮರವೆಂಬ ಬೀಸಣಿಗೆಯಿಂದ ಶೋಭಿಸುತ್ತಿರುವುದು. ಚಾಮರದಂತಿರುವ ಚಮರೀ ಮೃಗಗಳ ಬಾಲದಿಂದ ಶೋಭಿತವಾದುದು. ಮೃಗಮದ ಪರಿಮಳ=ಕಸ್ತೂರಿಯ ವಾಸನೆ, ಮೃಗಗಳ ಮದೋದಕದ ವಾಸನೆ. ಕೃಷ್ಣಾಗರುತಿಳಕ=ಕರಿಯ ಅಗರುವಿನಿಂದ ರಚಿಸಿದ ತಿಳಕ, ಕೃಷ್ಣಾಗರು ಮತ್ತು ತಿಳಕಗಳೆಂಬ ಮರಗಳು, ಮದನ=ಮನ್ಮಥ, ಮಗ್ಗಾರೆ ಗಿಡ, ಬಾಲಗಳ=ಬಾಲಕರ ಕತ್ತು, ವ್ಯಾಘ್ರನಖಮಂಡಿತಮುಂ=ಹುಲಿ ಯುಗುರೆಂಬ ಆಭರಣದಿಂದ ಅಲಂಕೃತವಾದುದು, ಹುಲಿಗಳ ಉಗುರಿನಿಂದಲೇ ಮಂಡಿತ ವಾಗಿರುವುದು. ಗಂಡಕ=ಒಂದು ಆಭರಣ, ಖಡ್ಗಮೃಗ, ಮಧುಕೋಶ=ಮದ್ಯಪಾತ್ರೆ, ಜೇನಹುಟ್ಟಿ, ಜೇನಹಳಿ, ವಿಕೀರ್ಣ=ಹರಿಯಲ್ಪಟ್ಟ, ಚೆಲ್ಲಿರುವ, ತುಂಗಸಾಲ=ಎತ್ತರ ವಾದ ಕೋಟೆ, ಎತ್ತರವಾದ ಸಾಲೇಮರ,

ಮಹಾವರಾಹ ಸಮುತ್ಖಾತ ಧರಣೀತಳಂ.=ದೊಡ್ಡ ಹಂದಿಯಿಂದ ಅಗೆಯಲ್ಪಟ್ಟ ಭೂಮಿಯನ್ನುಳ್ಳದು (ಎರಡಕ್ಕೂ ಸಮಾನ) ವಿವಾಹಗೇಹ=ಮದುವೆಯ ಮನೆ, ಸಮಿತ್ಕುಶ.... ಶೋಭಿತಮಂ ಕರ್ಮಕ್ಕಾಗಿ ತಂದಿರುವ ಹೋಮಸಾಮಗ್ರಿ, ಆಜಾತಿಯ ಮರಗಿಡಗಳು, ಅಮರಪತಿಗಾತ್ರ=ಇಂದ್ರನ ಶರೀರ, ನೇತ್ರ=ಕಣ್ಣು, ಮರದ ಜಡೆ, ವೇತ್ರಲತೆ=ಲತೆಯಂತೆ ಇರುವ ದೊಣ್ಣೆ, ಬೆತ್ತದ ಬಳ್ಳಿ, ವಿರಾಟ=ಕೀಚಕನ ಮೈದುನ, ಗಾಳಿಗೆ ಶಬ್ದಮಾಡುವ ಬಿದರು. ಸಪ್ತಪರ್ಣ=ಏಳೆಲೆ ಬಾಳೆ, ರಂಧ್ರದಿಂದ ಕೂಡಿ ಶಬ್ದಮಾಡುವ ಬಿದರು.

೮೫. ವ॥ ಮಕುಟಪತ್ರಭಂಗ ಚುಂಬಿತ=ಕಿರೀಟ ಮತ್ತು ಪತ್ರಭಂಗಗಳಿಂದ ಮುಚ್ಚಲ್ಪಟ್ಟ, ಹಣೆಯಲ್ಲಿ ಅಲಂಕಾರಕ್ಕಾಗಿ ಬರೆದುಕೊಳ್ಳುವ ಚಿತ್ರಲೇಖೆಗಳಿಂದ ಆವೃತರಾದ

೮೬. ಪೊಡೆಗಿಚ್ಚು=ಜಠರಾಗ್ನಿ, ಹುಂಕಾರದಿಂದ ನಹುಷನು ಹಾವಾಗಿ ಸರ್ಗ ದಿಂದ ನೆಲಕ್ಕೆ ಬಿದ್ದನು, ಜಠರಾಗ್ನಿಯಿಂದ ವಾತಾಪಿ ಜೀರ್ಣವಾಗಿಹೋದನು. ಆಣೆಯಿ ಟ್ಟೊಡೆ=ಆಜ್ಞೆಮಾಡಲು, ಮಾಣ್ದು=ಮೀರಿ, ಮೇರುಮತ್ಸರದೊಳ್=ಮೇರು ಪರ್ವತ ದೊಡನೆ ಹುರುಪಿನಿಂದ ಕೂಡಿ, ಆಪೋಶನ=ಆಚಮನಕ್ಕೆ ಉಪಯೋಗಿಸುವ ನೀರು,

೮೭. ತನೂಜರಿಂದೆ ಮಿಗಿಲ್=ಮಕ್ಕಳುಗಳಿಗಿಂತ ಹೆಚ್ಚು, ನಡೆಪು=ಸಾಕು, ವಿಟಪಿಸ್ತೋಮಂ=ಮರಗಳ ಸಮೂಹ,

ವ॥ ಗೃಹೀತವ್ರತ=ವ್ರತವನ್ನು ಅಂಗೀಕರಿಸಿರುವವನು, ಆಕಲಿತ ಶಾಸ್ತ್ರನ್=ಶಾಸ್ತ್ರಜ್ಞಾನವನ್ನು ಸಂಪಾದಿಸಿದವನು, ಆಬದ್ಧ=ಕಟ್ಟಲ್ಪಟ್ಟ, ಪರ್ಣಪುಟೋಪನೀತ=ಎಲೆಯ ದೊನ್ನೆಯಲ್ಲಿ ತಂದಂಥ, ಪ್ರತ್ಯುಟಜ=ಪ್ರತಿ ಗುಡಿಸಿಲಿನ, ಭಿಕ್ಷ=ಭಿಕ್ಷೆಯುಳ ವನು, ಪ್ರತಿ ಗುಡಿಸಲಿನಿಂದಲೂ ಎಲೆಯ ಮಧ್ಯದಲ್ಲಿ ತಂದಂಥ ಭಿಕ್ಷೆಯುಳ್ಳವನೂ,

೮೮. ಪರಿ.... ಕಳಶಜನಿಂ=ಈ ಅಗಸ್ತ್ಯನಿಂದ ರತ್ನಾಕರವು (ಸಮುದ್ರವು) ಕುಡಿಯಲ್ಪಟ್ಟಿತು, ಬಟಿಸಂದು=ಹಿಂಬಾಲಿಸಿ, ಬದ್ಧವೇಣಿ=ನಿಯಮಬದ್ಧವಾದ

ಪ್ರವಾಹದಿಂದ ಕೂಡಿ, ಅವತರಿಸು=ಹುಟ್ಟು. (ಇಳಿದುಬರು)

೮೯. ಗುರುವಿನ ನನ್ನಿಗೆ=ತಂದೆಯ ಸತ್ಯಪಾಲನೆಗಾಗಿ, ಕಂಧರ ಕುಲಖಂಡನ= ತಲೆಗಳ ಸಮೂಹವನ್ನು ಕತ್ತರಿಸುವುದರಿಂದ, ಆಹಿತದಶಾನನ ಲಾಘವಂ=ರಾವಣನಿಗೆ ಲಾಘವವನ್ನು (ಕೀಳ್ಮೆಯನ್ನು—ನಿಸ್ಸಾರತೆಯನ್ನು) ಉಂಟುಮಾಡಿದವನು

೯೦. ಸುಂದರವಾದ ಈ ಹೂವುಗಳನ್ನು ಕೊಯ್ದ ಸೀತಾದೇವಿಯ ಕೈಗಳ ಕೆಂಪು ಬಣ್ಣವು ಇವನ್ನು ಆವರಿಸಿವೆಯೋ ಎನ್ನುವ ಹಾಗೆ ಆ ಸುಂದರವಾದ ಬಳ್ಳಿಗಳ ಚಿಗುರುಗಳ ಸಮೂಹವು ಪ್ರಕಾಶಿಸಿದುವು ; ಲುಳಿತ=ಚಲಿಸುತ್ತಿರುವ.

೯೧. ಶಾಖಾಗ್ರಾವು=ಕೊಂಬೆಗಳ ಗುಂಪು, ನಿಭೃತ=ಇಡಲ್ಪಟ್ಟ (ಕುಳಿತಿರುವ) ಪಾಂಡುರಕಪೋತಪ್ರಕರಂ=ಬಿಳಿಯ ಪಾರಿವಾಳಗಳ ಗುಂಪು, ಶೂನ್ಯಮಾಗಿಯುಂ= ಹೊಗೆಯಿಲ್ಲದಿದ್ದರೂ, ಅಗ್ನಿಹೋತ್ರಧೂಮ=ಅಗ್ನಿಕಾರ್ಯದಿಂದುಂಟಾದ ಹೊಗೆ.

೯೨. ನಿಶಾಚರರ ನೆತ್ತರ್=ರಾಕ್ಷಸರ ರಕ್ತ.

೯೩. ಕೂರ್ಮೆ=ಪ್ರೀತಿ, ನಡಪು=ಸಾಕು, ಜೀರ್ಣ=ಮುದಿಯಾದ, ಚರನ್ಮ ಗಾಳಿ=ಚಲಿಸುತ್ತಿರುವ ಪ್ರಾಣಿಗಳ ಗುಂಪು. ಮೊಳಗು=ಗುಡುಗಿನ ಶಬ್ದ, ಜಗದ್ವಿವರ= ಬ್ರಹ್ಮಾಂಡದ ಒಳಭಾಗ, ಅಂತಮಪ್ಪ = ಕೊನೆಯಾಗುಳ್ಳ, ಚಾಪದಂಡ ರವ=ಬಿಲ್ಲಿನ ಶಬ್ದ, ಮೇಪುಗೊಳಲ್=ಆಹಾರವನ್ನು ಪಡೆಯಲು, ಶಾಡ್ವಲ=ಎಳೆಯ ಗರಿಕೆಯ ಹುಲ್ಲು.

೯೪. ನಿತಾಂತ ಮೃಗಯಾಹತಿಯಿಂ=ಒಂದೇ ಸಮನಾದ ಬೇಟೆಯ ಪೆಟ್ಟಿನಿಂದ ಪೊಮ್ಮಿಗ=ಚಿನ್ನದ ಮೃಗ.

೯೫. ಯೋಜನಬಾಹು=ಕಂಬಂಧ, ಅಭಿಶಂಕೆ=ಸಂದೇಹ, ಸಂಶಯ,

೯೬. ಉಟಜಾಂಗಣ=ಗುಡಿಸಲಿನ ಒಳಭಾಗ, ಉರ್ವರೆ=ಭೂಮಿ, ಇಳಾತ ನೂಜೆ=ಭೂಪುತ್ರಿಯಾದ ಸೀತೆ, ವನೇಚರರ್=ಕಾಡಿನಲ್ಲಿ ಸಂಚರಿಸುವವರು.

ವ॥ ಪ್ರಕಟೋಪ . . . ಮಪ್ಪ=ಸ್ಪಷ್ಟವಾಗಿ ಕಾಣುತ್ತಿರುವ ಪೂರ್ವವೃತ್ತಾಂತ ಜ್ಞಾನಸಾಧನವುಳ್ಳ.

೯೭. ಪುರುಡು=ಸ್ಪರ್ಧೆ. ಬಂಧನಮಂ ಬಿಡೆ=ಕಟ್ಟನ್ನು ಸಡಲಿಸಲು, ಧರಣಿಯಂ . . . ದೊಂದಡೆ=ವರಹಾವತಾರ ಕಾಲದಲ್ಲಿ ಮಹಾವರಾಹವು ಭೂಮಿಯನ್ನು ಅಗೆದು ಹಳ್ಳಮಾಡಿದ ಕಡೆಯಲ್ಲಿ, ಗುಣ್ಪು=ಆಳ, ಗಾಂಭೀರ್ಯ.

ವ॥ ಪುಳಿಂದಸುಂದರಿ = ಬೇಡರ ಹೆಂಗಸು, ಪೊರ್ಕುಳಿಯೊಳ್ = ತಾಡನದಿಂದ (ಬಡಿತದಿಂದ), ಪರಿಪರಿಯಾದ=ಕಲಕಲ್ಪಟ್ಟ, ಉಳ್ಳಲರ್ದ=ಅರ್ಧ ಅರಳಿರುವ, ತನಿವಂಡು =ಸಾರವತ್ತಾದ, ರುಚಿಕರವಾದ ಮಕರಂದ, ಪೀಲಿಕಣ್=ನವಿಲುಗರಿಯ ಕಣ್ಣಿನಂತಿರುವ ರೇಖೆಗಳು, ಮಸಗು = ಪ್ರಸಾರವಾಗು, ಮುಸುಱು = ಮುತ್ತು. ಬಂಬಲ್ = ಗುಂಪು, ಎಕ್ಕೈಕ್ಕೆ=ಗುಂಪು ಗುಂಪಾಗಿ, ತಾವರೆವಂಡು=ತಾವರೆಯ ಬಂಡು > ತಾವರೆಯ ಮಕರಂದ, ತನಿಸೊಕ್ಕಿಂ=ಸಂಪೂರ್ಣ ಮಧುಪಾನದಸೊಕ್ಕಿನಿಂದ, ಎಸಕ=ಕಾರ್ಯವ್ಯಾಪ್ತಿ, ತೆರೆ

ದುಱುಗಲ್=ಅಲೆಯ ಸಮೂಹ, ಬೆರಕೆಗಂಪು=ಮಿಶ್ರಗಂಧ, ಪೊಂಪುಱ=ಆಧಿಕ್ಯ, ತೂರ್ವನಿ—ಹಾರುವ ಹನಿ, ಓರನ್ನವಾಗಿ=ಒಂದೇಬಣ್ಣದಿಂದಕೂಡಿ,ಅಱಿಯಲ್ಬರ್ಪ= ಗುರುತಿಸುವುದಕ್ಕಾಗುವ, ಸಿರಿಕಂಡದಣ್ಪು=ಶ್ರೀಗಂಧದ ಲೇಪನ, ಉಪಾಂತ=ಹತ್ತಿರ, ಪುಱಿಲ್‌ಗಟ್ಟಿದ=ರಾಶಿಮಾಡಿದ ಮರಳುದಿಣ್ಣೆಗಳನ್ನುಳ್ಳ ತಿಳಿಗಾಸೆ=ಕಾವಿಬಟ್ಟೆ, ತಮಾಲವೀಥಿ=ಹೊಂಗೆಮರಗಳ ಸಾಲು, ಅವಲುಪ್ತ ಫಲವಾದ=ಬರಿದುಮಾಡಲ್ಪಟ್ಟ ಹಣ್ಣುಗಳನ್ನುಳ್ಳ (ಫಲರಹಿತವಾದ) ನಾಂದು=ನೆನೆದುಹೋಗಿ, ಎಱಂಕೆ=ರಕ್ಕೆ' ಕಿಸಲಯ=ಚಿಗುರು, ಶಿಖಂಡಿ ಮಂಡಲ=ನವಿಲುಗಳ ಗುಂಪು, ನಿಶ್ವಾಸವಾಸಿತ= ಹೊರಗೆ ಬಿಟ್ಟ ಗಾಳಿಯ ವಾಸನೆಯುಳ್ಳದ್ದು.

೯೮. ವನಕರಿನಿವಹಂ=ಕಾಡಾನೆಯ ಗುಂಪು.

ವ|| ಅಗಾಧ—ಆಳವಾದ, ಅತರ್ಕ್ಯ=ಊಹಿಸುವುದಕ್ಕಾಗದ, ಅನಂತ=ಎಲ್ಲೆಯಿಲ್ಲದ. ತಾಳತರುಷಂಡ=ತಾಳೆಯ ಮರದ ಸಮೂಹ,

೯೯. ಮರಗಟ್ಟು=ನೀರು ಹಾಕುವ ಪಾತಿ, ಮೊದಲೊಳ್=ಬುಡದಲ್ಲಿ, ದಿಕ್ಚಕ್ರವಾಳಾಂತರಮಂ—ದಿಙ್ಮಂಡಲದ ಒಳ ಭಾಗವನ್ನು, ನಟನ=ಈಶ್ವರನ, [ಅಮೇಯ— ಅಳತೆಮಾಡುವುದಕ್ಕಾಗದ, ಜರಡ ಮಹಾಶಾಲ್ಮಲೀವೃಕ್ಷ—ಹಳೆಯ ದೊಡ್ಡ ಬೂರಗದ ಮರ.

೧೦೦. ಭಯದೊದವಿಂದೆ=ಅರುಣನ ಚಾವಟಿಯೇಟಿನ ಭಯದಿಂದ, ಪರಿಖೇದ =ಶ್ರಮ, ಕಡುಸೇದೆ=ವಿಶೇಷ ಶ್ರಮ, ಪತಂಗನ+ಊಢವಾಜಿ=ಸೂರ್ಯನ ತೇರಿಗೆ ಕಟ್ಟಿದ ಕುದುರೆ, ಫೇನವಿತಾನ=ನೊರೆಯ ರಾಶಿ, ತೂಱಲಗೊಂಬು=ಸಣ್ಣಕೊಂಬೆ, ತೂಲ=(ದೂದಿಯ) ಹತ್ತಿ.

೧೦೧. ತೀಂಟೆತ್ತಿ=ನವೆಯುಂಟಾಗಿ, ಗಂಡಸ್ಥಳ=ಕಪಾಲ ಪ್ರದೇಶ, ಜಿಗಲ್ತು =ಅಂಟಿಕೊಂಡು ಅಗ್ಗಲಿಸಿದ—ಹೆಚ್ಚಾದ, ಕಳ್ಗಿ=ಕಪ್ಪಾಗಿ, ಕವ್ವರೆಗೊಂಡು= ಉತ್ಸಾಹದಿಂದಕೂಡಿ, ಎನಸುಂ=ಹೇಗೂ, ಶೃಂಖಲಾಬದ್ಧಂ=ಸರಪಳಿಯಿಂದ] ಕಟ್ಟಲ್ಪಟ್ಟದ್ದು, ಕಲ್ಪಸ್ಥಾಯಿ=ಕಲ್ಪದವರೆಗೂ ಇರತಕ್ಕದ್ದು, ಗಿರಿಕಟಕ=ಪರ್ವತದ ತಪ್ಪಲು,

ವ|| ಇಲ್ಲಿಯೂ ಶ್ಲೇಷೆ, ಉಪಲಕ್ಷಿತ=ತೋರಿಸುತ್ತಿರುವ, ಶಕುನಿಪಕ್ಷಪಾತಂ= ಮಾವನಾದ ಶಕುನಿಯಲ್ಲಿ ಒಲವುಳ್ಳವನು, ಶಕುನಿ=ಪಕ್ಷಿಗಳ, ಪಕ್ಷಪಾತಂ=ರೆಕ್ಕೆಗಳ ಬಡಿತವನ್ನುಳ್ಳದ್ದು. ವನಮಾಲೋಪಗೂಢಂ=ವೈಜಯಂತೀಮಾಲೆಯಿಂದ ಮುಚ್ಚಿರುವುದು; ಕಾಡಿನ ಸಾಲುಗಳಿಂದ ಮುಚ್ಚಿರುವುದು, ಜಳದವ್ಯೂಹ=ಮೋಡದ ಸಮೂಹ, ನಭೋವಿಭಾಗ=ಶ್ರಾವಣಮಾಸ, ಆಕಾಶ ಪ್ರದೇಶ

೧೦೨. ಮಹಾಪ್ರಾಸಾದ=ಎತ್ತರವಾದ ಉಪ್ಪರಿಗೆಯ ಮನೆ

೧೦೩. ತಳಿರ್ಗಳಱುಂಬು=ಚಿಗುರಿನ ನಡುವೆ, ಪೊರೆ=ಪದರ, ಪೋಳ್ಗಳ್= ಸೀಳುಗಳು, ಕವಲ್‌ಕಣಿ=ಕವಲುಗಳ ಮಧ್ಯ, ನಿರಾಕುಳಂ=ತೊಂದರೆಯಿಲ್ಲದೆ.

೧೦೪. ವಲ್ಕಲ=ಮರದ ನಾರು, ಕೋಟರ=ಪೊಟರೆ, ನೀಡನಿಕಾಯ=ಗೂಡುಗಳ ಸಮೂಹ, ಕೀರಕುಳಂ=ಗಿಳಿಗಳ ಸಮೂಹ,

೧೦೫. ಎಲವಂ=ಬೂರಗದ ಮರ, ಮಡಲ್ತುದು=ಚಿಗುರಿತು, ಪುದುವು=ಗುಂಪು.

೧೦೬. ಕಾಳಿಂದೀ ಪ್ರವಾಹ=ಯಮುನಾ ನದಿಯ ಪ್ರವಾಹ, ಸುರಗಜ=ಐರಾವತ, ನಲಿನೀ ಸಂತಾನ=ತಾವರೆಯ ರಾಶಿ, ದಿನಕೃತ್=ಸೂರ್ಯ, ವಾಜಿರಾಜಿಪ್ರಭಾಮಂಡಳ=ಕುದುರೆಗಳ ಸಮೂಹದ ಕಾಂತಿ ಸಮೂಹ, ಸಂಚಾರಿ=ಚಲಿಸುತ್ತಿರುವ, ಹಾರುತ್ತಿರುವ, ಗಾರುತ್ಮತ=ಗರುಡನ, ಕುಟಕುಗೊಳಲ್=ಆಹಾರವನ್ನು ಸಂಪಾದಿಸುವುದಕ್ಕಾಗಿ,

೧೦೭. ಎಸಕ=ಕಾರ್ಯ>ಪ್ರಭಾವ, ಬಿಸುಪು=ಶಾಖ, ಪಸುರ್+ಎಱಕೆ=ಹಸಿರು ರಕ್ಕೆ, ಬಿಜ್ಜಣಿಗೆ=ಬೀಸಣಿಗೆ, ತಣ್ಣೆಲರಂ=ತಂಪಾದ ಗಾಳಿಯನ್ನು, ಎಸಗಿಪುವು=ಉಂಟು ಮಾಡುವುವು.

೧೦೮. ಕೃತಾಹಾರಕಂಗಳ್=ತಾವು ಆಹಾರವನ್ನು ಮುಗಿಸಿಕೊಂಡು, ಅತಿಪಕ್ಷಪಾತ=ಬಹಳ ಪ್ರೀತಿ, ಶಾಬಕತತಿ=ಮರಿಗಳ ಗುಂಪು, ಚಂಚು ಪ್ರಕರ=ಕೊಕ್ಕುಗಳ ಸಮೂಹ, ಉತ್ಕಂಠ=ಎತ್ತಿದ ಕತ್ತು, ಆಸಕ್ತಿಯುಳ್ಳದ್ದು.

೧೦೯. ಜೀರ್ಣಕೋಟರ ವಿರಳಾಭ್ಯಂತರ=ಹಳೆಯ ಪೊಟರೆಯ ವಿಸ್ತಾರವಾದ ಒಳ ಭಾಗ, ಜಾಯೆವೆರಸು=ಹೆಂಡತಿಯಿಂದ ಕೂಡಿ, ಪರಿಣತವಯಸಂ=ಮುದಿತನದಿಂದ ಕೂಡಿದವನು.

೧೧೦. ಏನ್+ಪೇೞ್ದಪೆಂ=ಏವೇೞ್ದಪೆಂ>ಏನು ಹೇಳಲಿ. ಪ್ರಸೂತ್ಯುದ್ಭಾವ=ಹೆರಿಗೆಯ ನೋವು,

ವ|| ಜಾಯಾವಿಯೋಗ=ಹೆಂಡತಿಯ ಅಗಲಿಕೆ, ಪಾಪಿರ್ಯೆ=ಪಾಪಿಯಾಗಿದ್ದೇನೆ. ಪಾಪಿ ಎಂಬ ಗುಣವಾಚಕದ ಮೇಲೆ ಆಖ್ಯಾತ ಪ್ರತ್ಯಯ ಸೇರಿ ಕ್ರಿಯಾರ್ಥವನ್ನು ಕೊಡುತ್ತಿದೆ. (ಶಬ್ದಮಣಿದರ್ಪಣ=೨೯೯ ನೆಯ ಸೂತ್ರವನ್ನು ನೋಡಿ) ಅಳವಿಗಱಿದ=ಅಳತೆ ಮೀಱಿದ, ಮತ್ಪ್ರಾಣನ=ನನ್ನ ಪೋಷಣೆ.

೧೧೧. ಕಟಿಲಲ್=ಸಡಿಲವಾಗಲು, ಗಱುವೀೞ್ದು=ರೆಕ್ಕೆ ಬಿದ್ದು, ಮುಯ್ಪು=ರಕ್ಕೆಗಳ ಮೂಲ, ಪಾಱಲ್ ಆಱದಂತು=ಹಾರುವುದಕ್ಕಾಗದಷ್ಟು.

೧೧೨. ನೆಲ್=ಬತ್ತ, ತಾೞಿವಣ್ಣ=ತಾಳೀ ಹಣ್ಣಿನ, ವ|| ಅಶನ=ಆಹಾರ್ಯ ಅನ್ನ.

೧೧೩. ಅರುಣ....ತಟದಿಂದ=ಕೆಂಪು ಕಾಂತಿಯಿಂದ ಕೂಡಿದ ಕಮಲ ದಳ ಮಿಶ್ರಿತವಾದ ಆಕಾಶ ಸರೋವರದ ದಡದಿಂದ. ಜರನ್ಮರಾಳ=ಮುದಿಹಂಸ,ಪರಿಣಿತರಂಕು ರೋಮತತಿ ಪಾಂಡುರಂ=ವಯಸ್ಸಾದ ಜಿಂಕೆಯ ಕೂದಲಿನ ಸಮೂಹದಷ್ಟು ಬೆಳ್ಳಗಿರುವ

೧೧೪. ಸಂಧ್ಯೋಪಾಸ್ತಿ=ಸಾಯಂಕಾಲದ ಕೃತ್ಯ, ಉತ್ತರಾಶಿ=ಉತ್ತರ ದಿಕ್ಕು,

೧೧೫. ತರದಿಂ=ಕ್ರಮದಿಂದ. ಅಲ್ಲ=ಅಥವಾ. ಪೊರೆದಿರು=ಅಂಟಿಕೊಂಡಿರು, ಕರಂ=ಕಿರಣ.

೧೧೬. ಹರಿದಶ್ವಂ=ಸೂರ್ಯನ ಕುದುರೆ, ವಾಹಳಿ=ವಿಹಾರ, ವ್ಯೋಮವಿಸ್ತೀರ್ಣ ರಂಗ=ವಿಸ್ತಾರವಾದ ಆಕಾಶ ಮಾರ್ಗ, ಛನ್ನ=ಹರಡಿರುವ, ತಾರಾಸ್ಫಟಿಕ ಶಕಲ= ಸ್ಫಟಿಕದಹಾಗಿರುವ ನಕ್ಷತ್ರವೆಂಬ ಕಲ್ಲಿನ ಚೂರು. ನೂಂಕುತಂ=ಗುಡಿಸುತ್ತ, ಚಾರು= ಮನೋಹರವಾದ, ಚಾಮೀಕರ=ಚಿನ್ನದ, ಕುಂಕುಮ ಘನರಸ=ಗಟ್ಟಿಯಾದ ಕುಂಕುಮ ಕೇಸರಿಯ ನೀರು, ಸಿಂಪಿಸು=ಚೆಲ್ಲು, ನೀಳ್ದುಪೊಣ್ಮಿತ್ತು=ವಿಸ್ತಾರವಾಗಿ ಹರಡಿತ್ತು. ಶೋಣಸೂರ್ಯಾಂಶುಜಾಲಂ=ಸೂರ್ಯನ ಕೆಂಪು ಕಿರಣಗಳ ಸಮೂಹ. (ಸೂರ್ಯನ ಕುದು ರೆಯು ವಿಹಾರಕ್ಕಾಗಿ ಬರುತ್ತದೆಂದು ಅರುಣನು ಆಕಾಶ ಮಾರ್ಗದಲ್ಲಿ ಹರಡಿದ್ದ ನಕ್ಷತ್ರ ಗಳೆಂಬ ಕಲ್ಲನ್ನು ಗುಡಿಸಿ ಕುಂಕುಮ ಕೇಸರಿಯ ನೀರನ್ನು ಸೊಗಸಾದ ಚಿನ್ನದ ಜೀರ್ಕೊ ಳವೆಯ ಸಮೂಹಗಳಿಂದ ಚಿಮುಕಿಸುತ್ತಿದ್ದಾನೆಯೋ ಎನ್ನುವ ಹಾಗೆ ಉದಯ ಕಾಲದಲ್ಲಿ ಸೂರ್ಯನ ಕೆಂಪು ಕಿರಣಗಳು ವಿಸ್ತಾರವಾಗಿ ಹರಡಿದುವು ಎಂಬುದು ಈ ಪದ್ಯದ ಭಾವ.)

೧೧೭. ಗಗನಾಂತರ್ಭಾಗ=ಆಕಾಶದ ಒಳಭಾಗ, ತೀವು=ತುಂಬು, ಕರ ಸಂದೋಹ=ಕಿರಣಗಳ ಸಮೂಹ, ಮಿತ್ರ=ಸೂರ್ಯ, ಸಂಪುಟ=ಭರಣಿ, ಪತ್ತುಗೆ ವಿಟ್ಟು=ಬಾಯಿ ತೆಗೆದು, ಸಿಂಪುಗಳ್=ಚಿಪ್ಪುಗಳು, ಸಿಡಿಲ್ದಂದ=ಹಾರಿಬಂದ, ಮುಕ್ತಾ ಫಲಶ್ರೇಣಿ=ಮುತ್ತಿನ ರಾಶಿ, ಪುಳಿನ ಚಯಂ=ಮರಳ ರಾಶಿ,

೧೧೮. ಪನಿಪುಲ್ಗಳ್=ಪುಲ್ಗಳಪನಿ, ಕಱಿದುವು=ಸುರಿದುವು, ಎಚ್ಚಱಿಸು= ಆಲ್ಲಾಡಿಸು, ಪಿಂಗಳಿ=ಸಿಂಹ, ಮುನ್ನೇಸಱ್=ನೇಸರಿನ ಮುಂದು>ಅರುಣೋದಯ

೧೧೯. ವನಂ=ವನರಾಜನು, ಪಲ್ಲವಕರ=ಚಿಗುರೆಂಬ ಕೈ. ಪನಿವ=ಹನಿಯಿಕ್ಕು ತ್ತಿರುವ, ಅಲರ್=ಹೂವು,

೧೨೦. ವನದೇವೀ ಪ್ರಾಸಾದ=ವನದೇವಿಯ ಉಪ್ಪರಿಗೆಯ ಮನೆ, ಅಗಕುಳ= ಮರಗಳ ಸಮೂಹ, ಕಪೋತಸಂಹತಿ=ಪಾರಿವಾಳದ ಗುಂಪು, ನೆಗೆದತ್ತು=ಹಾರುತ್ತಿದೆ, ಧರ್ಮಪತಾಕೆ=ಧರ್ಮಧ್ವಜ,

೧೨೧. ಲತಿಕಾಲಾಸ್ಯೋಪದೇಶವ್ಯಸನಿ=ಲತೆಗಳಿಗೆ ನಾಟ್ಯವನ್ನು ಕಲಿಸುವುದ ರಲ್ಲಿ ಆಸಕ್ತವಾದ, ವನಲತಾಂದೋಳಿತ . . . ಚಂಚರೀಕಂ=ಅಲುಗುತ್ತಿರುವ ಲತಾ ಗಂಧದಿಂದ ತೃಪ್ತಿಯನ್ನು ಹೊಂದಿ ಚಲಿಸುತ್ತಿರುವ ದುಂಬಿಗಳನ್ನುಳ್ಳ, ಕಮಲ . . . ಕಾಂಗಂ=ತಾವರೆಯ ತೋಟದ ಪರಾಗದಿಂದ ಮನೋಹರವಾಗಿ ಕಾಣುವ ಶರೀರವುಳ್ಳ, ಪುಳಿಂದೀ . . . ಪಟು=ಬೇಡಿತಿಯ ಸುರತಕ್ರೀಡೆಯಲ್ಲುಂಟಾದ ಬಿಸಿಯ ಬೆವರನ್ನು ಹೋಗಲಾಡಿಸುವ ಶಕ್ತಿಯುಳ್ಳ, ಜಿಂಕೆಯ ಗುಂಪುಗಳು ಮೆಲುಕುಹಾಕುತ್ತಿರುವಾಗ ಉಂಟಾಗುವ ನೊರೆಯ ಬಿಂದುಗಳಿಂದ ಕೂಡಿರುವ, ಸುರಭಿ=ವಾಸನಾಯುಕ್ತವಾದ ವೈಭಾತಿಕಂ=ಸಂಧ್ಯಾಕಾಲದ, ಮಾತರಿಶ್ವಂ=ಗಾಳಿಯು, ತೀಡಿತ್ತು=ಬೀಸಿತು.

೧೨೨. ಪ್ರಬೋಧ ಮಾಗಧಿಯರ್=ಪ್ರಾತಃಕಾಲದಲ್ಲಿ ಸ್ತೋತ್ರ ಮಾಡುವ

ಹೊಗಳುಭಟರು.

೧೨೩. ಡಿಂಡಿಮ ರವ=ಒಂದು ತೆರದ ವಾದ್ಯಧ್ವನಿ. ವನವೇತಂಡಂ=ಕಾಡಾನೆ. ಮದಸೌರಭ—ಮಂಡಿಳಿತ=ಮದೋದಕದ ವಾಸನೆಯಿಂದ ಕೂಡಿದ, ಮಂದ್ರಧ್ವಾನಂ= ತಗ್ಗುದನಿ.

೧೨೪. ಪಗಿಲ್ತು=ಅಂಟಿಕೊಂಡು, ತಳ್ತಿಮೆ=ಕೂಡಿಕೊಂಡಿರುವ ರೆಪ್ಪೆ, ಐಕಿಲೆಲರ್ = ಶೀತಗಾಳಿ. ಪೊಳ್ತರೆ = ಹೊತ್ತಾರೆ > ಪ್ರಾತಃಕಾಲ, ಊಷರ . . . . ಸಮೂಹಂ=ಹುಲ್ಲಿಲ್ಲದ ನೆಲದ ಮೇಲೆ ಮಲಗಿರುಹುದರಿಂದ ಧೂಮ್ರವರ್ಣವಾಗಿ ಕಾಣುವ ಕೂದಲಿನಿಂದ ಕೂಡಿದ ಜಿಂಕೆಗಳ ಸಮೂಹ.

೧೨೫. ದಿನಮುಖ=ಪ್ರಾತಃಕಾಲ, ನೇಸಱ್=ಸೂರ್ಯ, ಮೂಡಲೊಡನೆ= ಉದಯವಾಗಲು, ಸನಾಥ=ಕೂಡಿಕೊಂಡು ವನಸ್ಪತಿ=ಮರ.

೧೨೬. ಕೊಳಪೋಪ>ಕೊಳಲ್‌ಪೋಪ=ತರುವುದಕ್ಕೆ ಹೋಗುವ, ಮಿಡುಕಲ್ =ಚಲಿಸುವುದಕ್ಕೂ ಅಣಂ=ಸ್ವಲ್ಪವೂ, ಪೊಡರದ ಗಱಯವನ್=ಗಱಹುಟ್ಟದೆ ಇರುವವನು.

೧೨೭. ಚಕಿತ=ಕಲಕಲ್ಪಟ್ಟ, ಪಕ್ಷಸ್ವನ=ರಕ್ಕೆಯ ಧ್ವನಿ, ಅಮರ್ದ=ಸೇರಿಕೊಂಡ, ಫೂತ್ಕಾರ=ಆನೆಯ ಶಬ್ದ, ಪುದಿದು=ಕೂಡಿಕೊಂಡು, ಗುಹಾನೀಕ . . . . ಪ್ರಕರ=ಅನೇಕ ಗುಹೆಗಳಲ್ಲಿ ಮಲಗಿದ್ದು ಎದ್ದ ಸಿಂಹ ಸಮೂಹ, ಪ್ರೋನ್ನಾದ=ಗಟ್ಟಿಯಾದ ಶಬ್ದ, ತಳ್ತು=ಸೇರಿ, ಉಪಗತ . . . . ಸಂತ್ರಾಸಕರಂ=ವನದೇವಿಯರ ಹೃದಯದಲ್ಲಿ ಭಯವನ್ನುಂಟುಮಾಡುವ, ಘನರವ ಸ್ಪರ್ಧಿ=ಗುಡುಗಿನೊಡನೆ ಸ್ಪರ್ಧೆಮಾಡುವ, ಕೈರಾತಘೋಷಂ=(ಕಿರಾತ) ಬೇಡರ ಶಬ್ದ—ಕೂಗು, ಪೊಣ್ಮಿತು=ಹಬ್ಬಿತು.

೧೨೮. ಅಶ್ರುತಪೂರ್ವ=ಹಿಂದೆ ಕೇಳದೇ ಇದ್ದ, ಘೀಳಿಡಲ್=ಅರಚುತ್ತ+ ಪೊಕ್ಕೆಂ, ಶಿಥಿಲಪಕ್ಷ ಸಂಪುಟ=ಸಡಿಲವಾದ ಗರಿಯ ಪೆಟ್ಟಿಗೆ

೧೨೯. ಮತಂಗಜ=ಮದ್ದಾನೆ. ಕಂಜಾಳೀ ರಜಸ್ತೋಮ=ಕಮಲ ಪರಾಗದ ರಾಶಿ, ತೀಡು=ಬೀಸು, ಆಮೋದ=ವಾಸನೆ. ಇಭಯೂಥನಾಥ=ಆನೆಯ ಸಲಗ, ಸಲ್ಲಕೀಗಂಧ=ಆನೆಯ ಬೀಲದ ವಾಸನೆ, ಸೈರಿಭಖುರ=ಕರಡಿಯ ಗೊರಸು, ರೇಣುವ್ರಜಂ=ಧೂಳಿನ ಸಮೂಹ,

೧೩೦. ರುರುಗಣಂ=ಜಿಂಕೆಯ ಗುಂಪು, ಸೂಕರಚಯ=ಹಂದಿಯ ಹಿಂಡು, ಕುಂಜರಕುಳ=ಆನೆಯ ಹಿಂಡು, ಶಿಖಂಡಿ=ನವಿಲು,

೧೩೧. ಲಾವುಕ=ಗೀಜಗನ ಹಕ್ಕಿ, ಕುರರ=ಅಳಲೀಕುಂಚ, ಕುಕ್ಕುಟ= ಕೋಳಿ, ಕಪಿಂಜಲ=ಲಾವುಗೆಯಹಕ್ಕಿ

೧೩೨. ನಸುಮೆಲ್ದ=ಸ್ವಲ್ಪ ತಿಂದ, ಅಚ್ಚಗಱಿಕೆ=ಹಸಿರು ಗರಿಕೆ, ಸೂಸು= ಚೆಲ್ಲು, ಗುಂಗುರ್=ಒಂದು ಜಾತಿಯ ಸೊಳ್ಳೆ, ಬಟ್ಟೆ=ದಾರಿ—ವರ್ತ್ಮ (ಸಂ) ಪುಲ್ಲಟ್ಟೆ=ಹುಲ್ಲಿನ ಪೊದರು

೧೩೩. ಮೌಕ್ತಿಕದಂತುರವೀಥಿ=ಮುತ್ತುಗಳಿಂದ ವ್ಯಾಪ್ತವಾದ ಬೀದಿ, ಮೃಗಪತಿ ಮಾರ್ಗಂ=ಸಿಂಹದ ದಾರಿ,

೧೩೪. ನಡೆ+ಸಲ್+ನಿಲ್ವಿಡು, ಸಲ್=ಮುನ್ನುಗ್ಗು. ಸಾರ್ಚು=ಸಮೀಪಕ್ಕೆ ಹೋಗು. ಅಮರ್ಚು=ಸೇರಿಸು. ತೆರಳ್ಚು=ಹೊರಡಿಸು. ಔಂಕು=ಒತ್ತು, ಕಡುಗೆಯ್ದು ಭಯವನ್ನುಂಟುಮಾಡಿ, ಕೋಲಂ ತುಡು=ಬಾಣಪ್ರಯೋಗಮಾಡು,

ವ || ಶಬರ ಸಂಘಾತ=ಬೇಡರ ಗುಂಪು, ಅೞಿಯೆನೊಂದು=ಸಾಯುವಷ್ಟು ನೊಂದು, ಬೆಟ್ಟುಗಳ್=ಪರ್ವತಗಳು. ಕಡುಪು=ಕ್ರೌರ್ಯ. ಪರಿಹೊಂದಿ=ಓಡಿಹೋಗಿ ಸೇರಿ, ಮೊೞಗು=ಗರ್ಜನೆಮಾಡು, ಬೃಂಹಿತ<ಆನೆಯಕೂಗು, ಕೂಜಿತ=ಕೂಗು, ಪತ್ತಿ=ಹಿಂಬಾಲಿಸಿ, ಕೆಕ್ಕರಿಸಿ=ಬೆದರಿ, ಒದಱಿ—ಕೂಗಿ, ಪೆಳಱಿ=ಭಯಪಟ್ಟು, ಖಡ್ಗಿಧೇನುಕಂಗಳ್=ಹೆಣ್ಣು ಖಡ್ಗಮೃಗ ಮತ್ತು ಕತ್ತೆಗಳು, ಉಲುಪು=ಶಬ್ದ-ಕೂಗು, ಮಹಿಷಸ್ಕಂಧ=ಎಮ್ಮೆಯಕತ್ತು, ಬಾಳ್=ಕತ್ತಿ, ಬೆದೆವೆರಸಿದ=ಬೆದೆಯಿಂದ ಕೂಡಿದ, (ಕಾಮಾತುರವಾದ), ಮೊೞಱಿತ=ಗಟ್ಟಿಯಾದ ಶಬ್ದ.

೧೩೫. ಬಿಂಜದಡವಿ=ವಿಂಧ್ಯದ ಕಾಡು, ನಂಜು=ವಿಷ,

೧೩೬. ಕಡಪ ಮುಡುಗಿದ=ಕಡೆತವು ಮುಗಿದ, ಮೂಗುವಟ್ಟಿರ್ದುದು=ಮೌನವಾಗಿತ್ತು.

ವ || ಉದ್ಭೂತ ವಿಸ್ಮಯ=ಉಂಟಾದ ಆಶ್ಚರ್ಯ, ಪೊೞಲ್=ಪೊಟರೆ, ದೆಪ್ಪಳಿಸಿ=ಬೆಪ್ಪಿನಿಂದ ಕೂಡಿ,

೧೩೭. ಕೃತಾಂತ=ಯಮ, ಅನಂತ ಕಿರಾತ ಸಂಕುಳಂ=ಎಲ್ಲೆಯಿಲ್ಲದಷ್ಟು ಬೇಡರನ್ನು ಕೂಡಿಕೊಂಡು.

ವ || ಉತ್ಪಾತ ವೇತಾಳ ಪಡೆ=ಪ್ರಳಯಕಾಲದ ಭೇತಾಳರ ಗುಂಪು.

೧೩೮. ಕರ್ಬೊನ್ = ಕಬ್ಬಿಣ, ಸಮೆದ=ಮಾಡಿದ, ಕಾರ್ಕಶ್ಯ=ಕಠಿಣತೆ ಶ್ಯಾಮ=ಕಪ್ಪು.

ವ || ದಾನಲೇಖೆ=ಮದಧಾರೆ. ಶ್ಮಶ್ರುಲೇಖ=ಮೀಸೆಯ ಸಾಲು, ಕುಟಿಳಕುಂತಳ=ಗುಂಗಿರಿನಿಂದ ಕೂಡಿದ ಮುಂಗುರುಳು, ಪ್ರತಿಮ=ಸಮಾನವಾದ, ತ್ರಿಪತಾಕ ಭ್ರುಕುಟಿ=ಮೂರು ಗಂಟುಳ್ಳ ಹುಬ್ಬು, ಘೋರ ಘೋಣ=ಭಯಂಕರವಾದ ಕತ್ತು, ಕೃತ ಅಂಗರಾಗ= ವಾಸನಾದ್ರವ್ಯವನ್ನು ಹಚ್ಚಿಕೊಂಡಿರುವವನು. ಮಯೂರಪಿಂಛಾತಪತ್ರ=ನವಿಲುಗರಿಯ ಕೊಡೆ, ಅಪನೋದಿತ=ಹೋಗಲಾಡಿಸಲ್ಪಟ್ಟ, ಲೋಹಿತ ಲೋಚನ, =ಕೆಂಪುಕಣ್ಣು, ಚಂಡಿಕಾ .... ಯುಗಳನ್=ರಕ್ತಧಾರೆಯಂತೆ ಇರುವ ತಲೆಯ ಕೂದಲಿನ ಪಕ್ಕದಲ್ಲಿ ಗುರುತು ಮಾಡಲ್ಪಟ್ಟ ಆಯುಧಗಳ ಕಲೆಗಳಿಂದ ಕಳೆಯನ್ನು ಹೊಂದಿರುವ ಎರಡು ತೋಳುಗಳನ್ನುಳ್ಳವನು, ಮೃಗರುಧಿರಕ ... ಸ್ಥಳನ್—ಪ್ರಾಣಿಗಳ ರಕ್ತದ ಹನಿಗಳಿಂದ ಕೂಡಿದ ಬೆವರಿನ ಬಿಂದುಮಾಲೆಯಿಂದ ಅಲಂಕೃತವಾದ ವಿಶಾಲವಾದ ಎದೆಯುಳ್ಳವನು, ಇಭಮದ ಮಲಿನೀಕೃತ=ಆನೆಯ ಮದೋದಕದಿಂದ ಕೊಳೆಯಾಗಿ ಮಾಡಲ್ಪಟ್ಟ, ಆಲಾನಸ್ತಂಭ=ಆನೆಯನ್ನು ಕಟ್ಟಿಹಾಕುವ ಕಂಭ. ಕಾಳಾಯಸನಿಗಳ ಕಬ್ಬಿಣದ ಸರಪಳಿ. ಕೌಶೇಯವಸನ=ರೇಷ್ಮೆಯಬಟ್ಟೆ, ಬಕ=ಬಕಾಸುರ, ಗೃಹೀತ ಏಕ

ಚಕ್ರ=ಒಂದು ಗಾಲಿಯನ್ನು ಹಿಡಿದಿರುವವನು, ಸಮುದ್ಧೃತ=ಮೇಲಕ್ಕೆತ್ತಿದ. ನಾಗದಶನ=ಹಾವನ್ನು ಕಚ್ಚುವುದು, ಆನೆಯ ಹಲ್ಲು(ದಂತ), ನಿದಾಘ=ಬೇಸಗೆ, ಆವಿಷ್ಕೃತ=ಸ್ಪಷ್ಟಪಡಿಸಿದ, ಮೃಗತೃಷ್ಣ=ಜಿಂಕೆಯ ದಾಹ, ಬಿಸಿಲುಗುದುರೆ, ವಿಶೀರ್ಣ=ಸೀಳಲ್ಪಟ್ಟ, ರಾಗಿ=ಕಾಮುಕ, ಬಹುವಿಧ ಪರಿಗ್ರಹ=ಅನೇಕ ಸ್ತ್ರೀಯರನ್ನು ಸ್ವೀಕರಿಸುವುದು, ನಾನಾವಸ್ತುವಿನಿಂದ ಕೂಡಿರುವುದು, ಅಭಿನವ ಯವ್ವನ=ಹೊಸಯುವಕ, ಕ್ಷಪಿತ=ದೂರ ಮಾಡಿದ, ಕೃಷ್ಣ=ಶ್ರೀಕೃಷ್ಣ, ಕರ್ರಗಿರುವವನು, ಅಸುದರ್ಶನ=ಚಕ್ರವಿಲ್ಲದವನು, ಸುಂದರನಲ್ಲದವನು, ಕ್ಷಿತಿಭೃತ್ಪದಾನುವೃತ್ತಿ=ಬೆಟ್ಟದ ತಪ್ಪಲಿನಲ್ಲಿಯೇ ಇರುವವನು, ರಾಜರಪಾದವನ್ನನುಸರಿಸಿರುವವನು, ರಾಜಸೇವಾ ಅನಭಿಜ್ಞ=ರಾಜರ ಶುಶ್ರೂಷೆಯನ್ನು ತಿಳಿಯದವನು.

೧೩೯. ಪೊರೆದರೊ=ಲೇಪನ ಮಾಡಿದ್ದಾರೆಯೊ, ಬಿಡೆಕೀಳ್ತ=ಹೊರಗೆ ಬಂದ, ಕುನ್ನಿ=ಮರಿ,

೧೪೦. ಸಿಂಹೀಯೂಥ=ಹೆಣ್ಣು ಸಿಂಹಗಳ ಗುಂಪು, ಕೌಳೇಯ ಕುಟುಂಬಿನಿ=ಬೇಟೆಯ ಹೆಣ್ಣುನಾಯಿ.

೧೪೧. ಪೀಲಿವೊಱೆ=ನವಿಲುಗರಿಯ ಹೊರೆ, ಲುಬ್ಧಕ=ಬೇಡ.

೧೪೨. ಸಾರ್ತಂದಂ=ಹತ್ತಿರಕ್ಕೆ ಬಂದನು,

೧೪೪. ವ|| ಈಂಟು=ಕುಡಿ, ಸೈಂಹಿಕೇಯ=ರಾಹು,

೧೪೫. ತೆರೆ=ಚರ್ಮದ ಸುಕ್ಕು, ಸೆರೆಗಳೊತ್ತಂಬ=ನರಗಳ ಒತ್ತಡ, ಅಡಗು=ಮಾಂಸ,

೧೪೬. ಬಿಯದ=ವ್ಯಾಧ (ಸಂ) ವಿಹಗಾಮಿಷ=ಹಕ್ಕಿಯ ಮಾಂಸ, ಜರಚ್ಛಬರ=ಮುದಿ ಬೇಡ,

ವ|| ಅನೇಕ ತಾಳೋತ್ಸೇಧ=ಅನೇಕ ತಾಳೆಯಮರಗಳ ಉದ್ದ, ಅಭ್ರಂಕಷ=ಮೋಡವನ್ನು ಮುಟ್ಟುವುದು. ದುರಾರೋಹ=ಹತ್ತುವುದಕ್ಕಾಗದಿರುವುದು.

೧೪೭. ಕಂದೆರೆವ=ಆಗತಾನೆ ಕಣ್ಣು ಬಿಡುತ್ತಿರುವ, ತುಪ್ಪುಟಿೞೊಡರ್ಚುವ—ಕೂದಲು ಹುಟ್ಟುತ್ತಿರುವ,

೧೪೮. ಮಾಯ್ದ=ನೀಚನಾದ. ಅಱುಗುಲಿ=ಧರ್ಮಧ್ವಂಸಕ, ಕರ್ವೇಡ=ಕರಿಯಬೇಡ.

ವ|| ಅಪ್ರತೀಕಾರ=ಪ್ರತೀಕಾರವನ್ನು ಮಾಡುವುದಕ್ಕಾಗದ.

೧೪೯. ಬಸವೞಿ=ಶಕ್ತಿಗುಂದು,

೧೫೦. ಜವ=ಯಮ, ಒಕ್ಕಲವೋಗಿಸನೇಕೆ=ತನ್ನಲ್ಲಿಗೆ ಕರೆದುಕೊಳ್ಳಲಿಲ್ಲವೇಕೆ (ಸಂಸಾರ ಸಹಿತ ಕೊಲ್ಲಲಿಲ್ಲವೇಕೆ ?) ಏಕೆ ಬಯ್ತೆ=ಏಕೆ ಮರೆಯಾದೆ (ಬದುಕಿಕೊಂಡೆ) ಅಮ್ಮ=ಅಪ್ಪ, ಮುೞುಂಗುವ=ನಾಶವಾಗುವ.

೧೫೧. ಪಱಿದೆಱಕೆ=ಹರಿದ ರಕ್ಕೆ,

೧೫೨. ಅಡಸುವ=ಮೇಲೆ ಬೀಳುವ, ಎರೆಗೊಳ್ವ=ಆಹಾರವನ್ನು ತೆಗೆದುಕೊಳ್ಳುವ, ಅಸಿತೋರಗ=ಕರಿಯ ಹಾವು, ಪೊಲಸಟ್ಟಿನಾರೆ=ಕೋಳಿಕೂಡಿ ದುರ್ವಾಸನೆಯಿಂದ ಕೂಡಿರಲು, ಜೇವಡೆಗಳ ಪುಣ್ಗಳಿಂ=ಬಿಲ್ಲಿನ ಹಗ್ಗವನ್ನು ಎಳೆಯುವುದರಿಂದುಂಟಾದ ಹುಣ್ಣುಗಳಿಂದ, ಕೀಳಿಡೆಯಿಡೆ=ಕಿರಿಚಿಕೊಳುತ್ತಿರಲು, ನಿರ್ಘೃಣನ್=ದಯಾಶೂನ್ಯ,

೧೫೩. ಬೆಱೆತು=ಸೆಡೆತುಕೊಂಡು, ನೃಶಂಸಂ=ಮನುಷ್ಯರನ್ನು ಹಿಂಸಿಸುವವನು (ಬೇಡ) ಕ್ರೂರಿ,

ವ॥ ಸುಟ್ಟುರೆ=ಸುಂಟರುಗಾಳಿ.

೧೫೪. ಕಱದಿರ್ದ=ಸತ್ತುಹೋದ, ಅಱಲ್=ದುಃಖ, ಎಳವೆ=ಬಾಲ್ಯ, ಪಾತಕನೆಂ=ಪಾತಕನಾಗಿದ್ದೇನೆ.

೧೫೫. ಇಱವಿನೆಗಂ=ಕುಗ್ಗಿಹೋಗುವ ಹಾಗೆ.

೧೫೬. ಕಡುಸೇದೆ=ಹೆಚ್ಚಿನ ಶ್ರಮ, ಪರವಶತೆ=ಮರೆವು, ಮೂರ್ಛೆ, ಪಿಪಾಸೋದ್ರೇಕಂ=ಬಾಯಾರಿಕೆಯ ಹೆಚ್ಚಿಗೆ.

೧೫೭. ಪೊರೆಗೆಯ್ದಿದನ್=ಹತ್ತಿರಕ್ಕೆ ಬಂದನು.

೧೫೮. ಬೆಟ್ಟಿತು=ಕಠಿಣ, ಪಕ್ಕಗೂಡಾಗಿ=ಮುದುರಿದ ರೆಕ್ಕೆಯಿಂದ ಕೂಡಿ, ಅಱುರಲ್=ಸುಡುತ್ತಿರಲಾಗಿ, ವ್ಯಾಪಿಸಲು, ಸುಯ್ಗಳ್=ಉಸಿರುಗಳು, ಅಱಲ್ದು=ದುಃಖಿಸಿ.

೧೫೯. ಬಸವಲ್ಲು=ವಶವಲ್ಲ–ಶಕ್ಯವಲ್ಲ, ಎಂಥ ದುರವಸ್ಥೆಯಲ್ಲಿದ್ದರೂ ಜೀವಿಗೆ ಜೀವವನ್ನು ಬಿಡುವ ಅಪೇಕ್ಷೆ ಹುಟ್ಟುವುದಿಲ್ಲ—ದುಃಖಮೆಯ್ದಿದುರ್ದಿಲ್ಲ=ದುಃಖವುಂಟಾಗಲಿಲ್ಲ. ಪೆಱನದೊರ್ವಂ ಸತ್ತವೊಲಿರ್ದನನ್=ಯಾರೋ (ಸಂಬಂಧಪಡದವರು) ಸತ್ತ ಹಾಗಿದ್ದಂಥ ನನ್ನನ್ನು, ಎನ್ನಿಂ ಕೃಪೆಗೆಟ್ಟನಂ=ನನಗಿಂತಲೂ ದಯಾಶೂನ್ಯನಾದವನನ್ನು—ಕಾಣೆಂ

೧೬೦. ಆದಂ+ಅಡಂಗಿಸಿ=ಪೂರ್ಣವಾಗಿ ಅಡಗಿಸಿಕೊಂಡು, ತತ್ತಿವಿಡಿದಿಂದುವರಂ=ಮೊಟ್ಟೆಯೊಡದಂದಿನಿಂದ ಇಂದಿನವರೆಗೆ, ಬಱಸಲಲ್ಕೆ=ಜೊತೆಯಲ್ಲಿ ಹೋಗುವುದಕ್ಕೆ

೧೬೧. ಜೀವಿತತೃಷ್ಣೆ=ಬದುಕಬೇಕೆಂಬಾಶೆ

೧೬೩. ನೂಪುರಾರಾವ=ಅಂದುಗೆಯ ಧ್ವನಿ, ಸಾರಸ=ನೀರುಹಕ್ಕಿಯ, ಉತ್ತಾರ=ಗಟ್ಟಿಯಾದ ವದನೋತ್ಸರ್ಪಣ=ಮುಖದಿಂದ ಹೊರಗೆ ಹೊರಟ, ವಿಪ್ರಕರ್ಷ=ಉಚ್ಚವಾದ, ಪಂಕೇಜನೀ ಸೌರಭಂ=ಕಮಲದ ವಾಸನೆ.

೧೬೪. ತಿಣ್ಣ=ತೀರ್ಣ (ಸಂ), ಅಧಿಕ.

೧೬೫. ಧೂಳಿದೂವೆ=ಧೂಳೆಂಬ ಹೊಗೆ, ಪಿಪಾಸೆ=ಬಾಯಾರಿಕೆ, ಪೊಡರಲಾರ್ತಪುದಿಲ್ಲ=ಚಲಿಸಲು ಶಕ್ತವಾಗಲಿಲ್ಲ; ಮರಳ್ದು=ಹಿಂತಿರುಗಿ, ನಂದಿದಪುದು=ಆರಿಹೋಗುತ್ತದೆ. ಎನ್ನುಮನಾನಱಿದಪ್ಪೆನಿಲ್ಲ=ನನ್ನನ್ನು ನಾನು ತಿಳಿದುಕೊಳ್ಳಲಿಲ್ಲ

(ಜ್ಞಾನಶೂನ್ಯನಾಗಿದ್ದೆ) ಪೋ=ಛೇ, ಬೆಟ್ಟದನ್=ಕ್ರೂರಿ,

೧೬೬. ಪ್ರತ್ಯಾಸನ್ನ=ಸಮೀಪ, ಅಪತ್ಯ=ಮಗ,

೧೬೭. ದೊರೆ=ಸಮಾನ

೧೬೮. ಕನಕದ್ಯುತಿ=ಚಿನ್ನದ ಕಾಂತಿ,

೧೬೯. ಅಳುಱು=ಆವರಿಸು, ಪಾವಕ=ಅಗ್ನಿ.

೧೭೦. ಪೊಱಮುಯ್ಯು = ಹಿಮ್ಮಡಿ, ತೀರ್ಥಾವಳಿ ಜಲಪೂತಂಗಳ್ = ಪುಣ್ಯ ತೀರ್ಥಗಳಿಂದ ಪವಿತ್ರೀಕೃತವಾದ

೧೭೧. ಮೂಱುಸೂಳ್ಪರಂ = ಪ್ರಮಾಣಪುರಸ್ಸರವಾಗಿ (ಪ್ರಮಾಣಮಾಡುವಾಗ ಒಂದು ಸಾರಿ ಎರಡು ಸಾರಿ ಮೂರು ಸಾರಿ ಕೂಗಿ ಪ್ರಮಾಣ ಮಾಡುವ ಪದ್ಧತಿ) ಪೆಱೆನೊಸಲ್ = ಚಂದ್ರನಂತಿರುವ ಹಣೆ,

೧೭೨. ಗುಂಡಿಗೆ=ಕಮಂಡಲು, ನಿಮಿರ್ದ=ಊರ್ಧ್ವಮುಖವಾದ.

೧೭೩. ಅಗುಳ್ದು=ಅಗೆದು, ಅಭಿಷೇಕಮೃತ್ತಿಕೆ = ಸ್ನಾನಮಾಡುವಾಗ ಉಪಯೋಗಿಸುವ ಮಣ್ಣು.

೧೭೪. ಮೇಖಲಾ=ತಪ್ಪಲು, ಉಡಿದಾರ, ಕೃಪಾನುಗತ=ಕೃಪನಿಂದ ಕೂಡಿದ, ದಯೆಯಿಂದ ಕೂಡಿದ, ಮೃಗಕೃತ್ತಿಕಾಶ್ಲೇಷೋಪಶೋಭಿತ=ಮೃಗಶಿರೆ, ಕೃತ್ತಿಕಾ, ಆಶ್ಲೇಷಾ ನಕ್ಷತ್ರಗಳಿಂದ ಶೋಭಾಯಮಾನವಾಗಿ, ಮೃಗ ಕೃತ್ತಿಕಾಶ್ಲೇಷ=ಜಿಂಕೆಯ ಚರ್ಮದಿಂದ ಕೂಡಿ, ದೋಷ=ರಾತ್ರಿ, ಪಾಪ, ನರಕ=ನರಕಾಸುರ, ಪಾಪಿಗಳು ವಾಸ ಮಾಡುವ ನರಕಲೋಕ, ಗೂಢಮಂತ್ರ=ರಹಸ್ಯವಾದ ಮಂತ್ರ, ಗುಪ್ತಾಲೋಚನೆ. ವಿಗ್ರಹ=ಯುದ್ಧ, ಶರೀರ, ಮಹಾಲಯ=ದೊಡ್ಡಮನೆ, ವಿಶೇಷ ನಾಶ, ಅಸಂಯಮ =ಬದ್ಧನಲ್ಲದವನು, ಇಂದ್ರಿಯನಿಗ್ರಹವಿಲ್ಲದವನು, ಮೋಕ್ಷ=ಬಿಡುಗಡೆ, ಕೈವಲ್ಯ, ಸಾಮ=ಸಾಮವೇದ, ಸಾಮೋಪಾಯ, ದಂಡ=ದಂಡೋಪಾಯ, ವೇಣುದಂಡ; ಸುಪ್ತ=ಸುಂದರವಾದ ಜಡೆಯುಳ್ಳವನು, ನಿದ್ರೆಮಾಡುವವನು, ವಾಮಲೋಚನ= ಎಡಗಣ್ಣು, ವಕ್ರದೃಷ್ಟಿ.

೧೭೫. ಗುಣಿಗಳ . . . ಮಾರೊಳಂ=ಗುಣವಂತರ ಮನಸ್ಸು ಕಾರಣವಿಲ್ಲದೆಯೇ ಯಾರಲ್ಲಾದರೂ ದಯಾಪೂರ್ಣವಾಗಿರುತ್ತದೆ.

೧೭೬. ತಂದತ್ತೊ=ತಂದು ಹಾಕಿದೆಯೋ, ಸೇದೆಯಲುಗ್ಗಡ=ಹೆಚ್ಚಿನ ಶ್ರಮ, ಗೋಣುನಿಸು....ದಿಲ್ಲ=ಕತ್ತು ಸ್ವಲ್ಪವೂ ನಿಲ್ಲಲು ಶಕ್ತವಲ್ಲ, ಜೀವಂಬಿಡದನ್ನಂ= ಪ್ರಾಣವನ್ನು ಬಿಡುವುದಕ್ಕೆ ಮುಂಚೆಯೆ, ಅಬ್ಜಾಕರ=ಸರೋವರ, ಒಯ್ವಂ=ತೆಗೆದು ಕೊಂಡು ಹೋಗೊಣ.

೧೭೭. ವ॥ ಸಪ್ರಾಣನಪ್ಪಂತು=ಪ್ರಾಣಸಹಿತನಾಗಿರುವಂತೆ, ಅಘಮರ್ಷಣ ಕ್ರಿಯೆ=ಸ್ನಾನಕರ್ಮ–ಪಾಪಗಳನ್ನು ತೊಳೆಯುವ ಕಾರ್ಯ, ಧವಳವಲ್ಕಲ=ಬಿಳಿಯ ನಾರುಮಡಿ, ನಿರ್ಧೌತ ಜಟಾಕಳಾಪ=ನಿರ್ಮಲವನ್ನಾಗಿ ಮಾಡಲ್ಪಟ್ಟ ಜಡೆಯಗಂಟು,

೧೩೮. ಮುನಿಗಳ....ವೊಗೆಯಲ್ = ಋಷಿಗಳನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವುದಕ್ಕೆ ಅಗ್ನಿಯು ಸೇತುವೆಯನ್ನು ಕಟ್ಟಿದನೋ ಎನ್ನುವಹಾಗಿದ್ದ ಹೋಮ ಧೂಮ (ಹೊಗೆ)ವುಂಟಾಗಲಾಗಿ,

೧೩೯. ಉಪಾಂತ=ಸಮೀಪ.

೧೪೦. ದುಂಬಿಗಳ ಝೇಂಕಾರದಿಂದ ಸಾರವತ್ತಾದುದೂ, ಅರಳಿದ ಹೂವಿನ ಗೊಂಚಲುಗಳಿಂದ ರಂಜಿತವಾಗಿರುವುದೂ ಹೆಣ್ಣು ಕೋಗಿಲೆಯ ಆಲಾಪದಿಂದ ರಮ್ಯ ವಾಗಿರುವುದೂ ಅನೇಕ ವಿಧವಾದ ಹೂವು ಮತ್ತು ಪರಾಗಗಳು ಉದುರಿರುವುದೂ ಕುಣಿಯುತ್ತಿರುವ ನವಿಲು ಸಮೂಹಗಳಿಂದ ಮನೋಹರವಾಗಿರುವುದೂ, ಬಲಿತ ಅಡಿಕೆಯ ಮರಗಳಿಗೆ ಸುತ್ತಿಕೊಂಡಿರುವ ಲತಾವಿಳಾಸವನ್ನೂ ನೋಡಲು ಆಸಕ್ತರಾದ ವನದೇವಿಯರ ಕಾಂತಿಯಿಂದ ಶೋಭಿಸುತ್ತಿರುವುದೂ ಆದುದ ಆ ಕಾಡು.

ವ। ಕಂದಗರ್ತ=ಏರುತಗ್ಗು, ವಿಷಮಿತ=ಸಮವಲ್ಲದ,

೧೪೩. ಉಪಾಸ್ತಿಗೆಯ್ಯಲ್=ಶುಶ್ರೂಷೆಮಾಡಲು, ದೀರ್ಘಿಕಾನಿಕುರುಂಬಂ= ಸರೋವರಸಮೂಹ,

೧೪೪. ಅಲರ್ಗಳ್=ಹೂವುಗಳು, ತಳ್ತು=ಸಾಂದ್ರವಾಗಿ, ಅಲ್ಲಿ ಉಗುತಿರ್ದವು =ಬೀಳುತ್ತಿವೆ, ಕಿಸಲಯಾಬದ್ಧ=ಚಿಗುರುಗಳಿಂದ ತುಂಬಿರುವ, ಸಂಛನ್ನ=ಮುಚ್ಚಿ ಕೊಂಡಿರುವ

ವ॥ ಶ್ರುತಿಮುಖರ ಮುಖ=ವೇದಪಠಣ ಮಾಡುತ್ತಿರುವ, ನಕ್ಕುವ=ನಾಲಗೆ ಯಿಂದ ನೆಕ್ಕುತ್ತಿರುವ, ಜರದಂಧತಾಪಸರ=ಮುದುಕರಾದ ಕುರುಡು ತಪಸ್ವಿಗಳನ್ನು

೧೪೫. ಚರು=ಹೋಮ ಮಾಡುವ ಅನ್ನ. ಪುರೋಡಾಶ=ಹೋಮಾರ್ಥವಾದ ಹೋಳಿಗೆ.

೧೪೬. ಪರ್ಣಕುಟೀರಕ=ಎಲೆಮನೆ, ಪೊಲುತಿರ್ಪ=ಹೊಲೆಯುತ್ತಿರುವ, ಅಲಂ ಬುವ=ತೊಳೆಯುವ, ಮುಂಜಮೇಖಲೆ=ನೊದೆಯ ಹುಲ್ಲಿನ ನಡುಕಟ್ಟು, ಸಮೆವ= ಮಾಡುವ.

೧೪೭. ಪ್ರಕಟಿತ ಹರಿವರಾಹಮಂ=ವರಾಹ ನರಸಿಂಹಾವತಾರಗಳನ್ನು ಪ್ರಕಟಿಸಿದ ಕಪಿಳಾಧಿಷ್ಠಿತ=ಕಪಿಲ ಋಷಿಗಳಿಂದ ಸ್ಥಾಪಿತವಾದ, ಗೋವಿಶೇಷಗಳಿಂದ ಆಶ್ರಯಿಸ ಲ್ಪಟ್ಟ, ವನ=ಕಾಡು, ನೀರು, ಗಹನ=ಆಳ, ಗಾಂಭೀರ್ಯ, ಹರಿ=ವಿಷ್ಣು, ಸಿಂಹ, ಮಾತಂಗ=ಆನೆ, ಅಂತ್ಯಜರು, ಧೂಮಕೇತು=ಅಗ್ನಿ, ಬಾಲಚುಕ್ಕಿ, ದ್ವಿಜರಾಜ= ಚಂದ್ರ, ಶ್ರೇಷ್ಠನಾದ ಬ್ರಾಹ್ಮಣ.

೧೪೮. ಆಸವಸ=ಸಂಭ್ರಮ.

ವ॥ ಮಲಿನತೆ=ಮಾಲಿನ್ಯ, ದೋಷ, ಮುಖರಾಗಂ=ಮುಖದ ಕಾಂತಿ, ಮುಖ ಕೆಂಪಗಾಗುವುದು (ಕೋಪದಿಂದ), ತೀಕ್ಷ್ಣತ್ವಂ = ಮೊನಚಾಗಿರುವುದು, ಕ್ರೌರ್ಯ, ಕುಶಾಗ್ರ=ದರ್ಭೆಯ ತುದಿ, ಸಂಚಳತ್ವಂ=ಅಲ್ಲಾಡುವಿಕೆ, ಚಾಂಚಲ್ಯ (ಮನಸ್ಸು),

ನಯನರಾಗಂ=ಕಣ್ಣಿನ ಕಾಂತಿ, ಕಣ್ಣು ಕೆಂಪಾಗುವುದು (ಕೋಪದಿಂದ-ಅಸೂಯೆಯಿಂದ) ಕಂಠಗ್ರಹಣಂ=ಮಧ್ಯ ಭಾಗದಲ್ಲಿ ಹಿಡಿಯುವುದು, ಕತ್ತು ಹಿಸುಕುವುದು, ಸ್ತನಸ್ಪರ್ಶನಂ=ಮೊಲೆಯನ್ನು ಮುಟ್ಟುವುದು, ಕೆಚ್ಚಲನ್ನು ಮುಟ್ಟುವುದು, ಧೇನು=ಹಸು, ವಸುಸಂಕೀರ್ತನಂ=ರತ್ನಾದಿಗಳ ಚಿಂತೆ, ಅಷ್ಟವಸುಗಳೇ ಮೊದಲಾದವರನ್ನು ಹೊಗಳುವುದು, ರಾಮಾ=ಸ್ತ್ರೀ, ಅನುರಾಗಂ=ಪ್ರೀತಿ, ರಾಮ+ಅನುರಾಗ=ರಾಮನಲ್ಲಿ ಪ್ರೀತಿ, ಭ್ರಮಂ=ಚಿತ್ತಚಾಂಚಲ್ಯ, ಪ್ರದಕ್ಷಿಣೆ, ಮುಖಭಂಗವಿಕಾರಂ=ಮುಖವನ್ನು ಗಂಟು ಹಾಕಿ ವಿಕಾರಮಾಡಿಕೊಳ್ಳುವಿಕೆ, ಮುಖದಲ್ಲಿ ನರೆಗಳು ಬಂದು ವಿಕಾರವಾಗುವುದು. ಶಕುನಿ=ಕೌರವನ ಮಾವ, ಪಕ್ಷಿ, ಮನುಷ್ಯ. ವಾಯುಪ್ರಲಪಿತ=ಕಾಡು ಹರಟೆ, ವಾಯುವಿನ ವಿಷಯವಾದ ಮಾತು, ದ್ವಿಜಪತನಂ=ಬ್ರಾಹ್ಮಣರ ಬೀಳುವಿಕೆ, ಹಲ್ಲು ಬೀಳುವುದು, ವಯಃಪರಿಣತಿ=ವೃದ್ಧಾಪ್ಯ, ಜಾಡ್ಯಂ=ರೋಗ, ಅಲಸಿಕೆ, ಶ್ರೀಖಂಡ=ಶ್ರೀಗಂಧ, ನೃತ್ಯಪಕ್ಷಪಾತಂ=ನಾಟ್ಯದಲ್ಲಿ ಆಸಕ್ತಿ, ಕುಣಿಯುವಾಗ ರಕ್ಕೆ ಹಾರಿಸುವುದು ; ಗೀತವ್ಯಸನಂ=ಸಂಗೀತದ ಚಿಂತೆ, ಗೀತದಲ್ಲಿ ಆಸಕ್ತಿ, ಭೋಗ=ಸುಖಾಸಕ್ತಿ, ಹೆಡೆ, ಅಧೋಗತಿ= ಕೆಳಗಿಳಿಯುವುದು, ಕೆಳಗಿನ ನಡೆಯುಳ್ಳುದು,

೧೮೯. ತರದೆ ಪೇಱಿದ = ಕ್ರಮವಾಗಿ ಅಡಕಿರುವ. ಪಿಷ್ಟಚರ್ಚೆ = ಹಿಟ್ಟಿನ ಲೇಪನ-ರಂಗವಲ್ಲಿ, ಆಲವಾಳ=ಪಾತಿ.

ವ|| ಗೋಮಯೋಪಲಿಪ್ತ=ಸಗಣಿಯಿಂದ ಸಾರಿಸಿದ.

೧೯೦. ಕನಕಕ್ಷ್ಮಾಧರೇಂದ್ರಂ=ಮೇರುಪರ್ವತ, ಹುತವಹ=ಅಗ್ನಿ, ಅಧ್ವರಂ=ಯಜ್ಞ, ಗಗನಾಭೋಗ=ಆಕಾಶಪ್ರದೇಶ ;

೧೯೧. ಗೆಲ್ದೆತ್ತೆ=ಗೆದ್ದು ಉದ್ಧಾರಮಾಡಲು.

೧೯೨. ತ್ರಿಪಥಗೆ=ಮೂರು ದಾರಿಯಲ್ಲಿ ಹರಿಯುವವಳು, ಗಂಗಾನದಿ, ಪೊನಲ್=ಪ್ರವಾಹ, ಭಸ್ಮತ್ರಿಪುಂಡ್ರಲಾಂಛಿತಲಲಾಟ = ವಿಭೂತಿಯ ಮೂರು ಗೆರೆಗಳಿಂದ ಗುರುತುಮಾಡಲ್ಪಟ್ಟ ಮುಖ.

೧೯೩. ಭ್ರೂಲತಾಯುಗಂ=ಲತೆಯಂತಿರುವ ಎರಡು ಹುಬ್ಬುಗಳು.

೧೯೪. ಸತ್ಯಪ್ರರೋಹ=ಸತ್ಯದ ಮೊಳಕೆ, ದಂತಾಂಶುಜಾಳಂ=ಹಲ್ಲಿನ ಕಾಂತಿಯ ಸಮೂಹ. ಅಭ್ರಗಂಗಾಪ್ರವಾಹಂ=ಆಕಾಶ ಗಂಗೆಯ ಪ್ರವಾಹವು, ಜಹ್ನುವ್ರತಿ=ಜಹ್ನುಋಷಿ.

೧೯೫. ಆಪೀತ=ಕುಡಿಯಲ್ಪಟ್ಟ, ಉಪೇತಂ=ಕೂಡಿಕೊಂಡಿವೆ ; ನಿಕುರಂಬ=ಸಮೂಹ, ರಾಶಿ,

೧೯೬. ಕಿವಿಯು ಉದ್ದವೂ ಬಿಳುಪೂ ಆದ ಕೂದಲುಗಳಿಂದ ವ್ಯಾಪಿಸಿತ್ತು. ಮಾಂಸಾಭಾವದಿಂದ ಎರಡು ಕೆನ್ನೆಯ ಹಳ್ಳಗಳೂ ಆಳವಾಗಿದ್ದುವು.

೧೯೭. ಕತ್ತಿನಲ್ಲಿ ಕಾಣುತ್ತಿದ್ದ ನರಗಳ ಸಮೂಹವು ಇಂದ್ರಿಯಗಳನ್ನೆಲ್ಲ ಕಟ್ಟಿದ ಹಗ್ಗದ ಸಮೂಹದ ಹಾಗೆ ಕಾಣುತ್ತಿದ್ದುವು.

೧೯೮. ಬರಿಗಳೊಳ್ = ಪಕ್ಕಗಳಲ್ಲಿ, ಎಲ್ಗಳ್ = ಎಲಬುಗಳು, ಮೂಳೆಗಳು, ಪಂಜರಿಸಿರ್ದಂತೆ = ಹೆಣದುಕೊಂಡಿದ್ದಂತೆ, (ಉಳ್ಪಂಜರಿಸಿರ್ದಂತೆ ಎಂಬ ಪಾಠವೂ ಉಂಟು–ಅದಕ್ಕೆ ಒಳಗೆ ಹೆಣದುಕೊಂಡಂತೆ ಎಂದರ್ಥವಾಗುತ್ತದೆ); ತೆರೆದುಱುಗಲ್= ಶರೀರದ ಸುಕ್ಕುಗಳ ಸಮೂಹವು, ರಂಗತ್ತರಂಗ=ಕುಣಿಯುವ ಅಲೆ.

೧೯೯. ಮಗುಳ್ಚೆ=ತಿರುಗಿಸುತ್ತಿರಲು,

೨೦೦. ಸುರತರು=ಕಲ್ಪವೃಕ್ಷ.

೨೦೧. ಮಿಸುಗುವ=ಕಾಂತಿಯುಕ್ತವಾಗಿರುವ, ಚಂದ್ರಮರೀಚಿಪ್ರಸರಂಗಳಿಂ= ಚಂದ್ರನ ಕಾಂತಿ ಸಮೂಹದಿಂದ, ಎಯ್ದೆ ನೆಯ್ದವು=ಚೆನ್ನಾಗಿ ನೆಯ್ಯಲ್ಪಟ್ಟವು, ಮಾನಸ....ಮಮಲಂ=ಮಾನಸಸರೋವರದ ನೀರಿನಷ್ಟು ಬೆಳ್ಳಗೂ ಪರಿಶುದ್ಧವೂ, ಆದುದು, ವಲ್ಕಲಯುಗಳ= ಜೋಡಿ ನಾರು ಬಟ್ಟೆ.

೨೦೨. ಪಳುಕಿನ ಗುಂಡಿಗೆ=ಸ್ಫಟಿಕದ ಕಮಂಡಲ, ಅಂಚೆ....ವನದವೋಲ್ = ಹಂಸಗಳಿಂದ ಸುತ್ತುವರಿಯಲ್ಪಟ್ಟ ಬಿಳಿಯ ಕಮಲದ ತೋಟದ ಹಾಗೆ.

೨೦೩. ಗುಣ್ಪು=ಆಳ, ಗಾಂಭೀರ್ಯ, ತನ್ನದೊಂದಿರವಿನೊಳ್=ತಮಗೆ ಸಹಜ ವಾಗಿಯೇ, ಪ್ರಕರ=ಸಮೂಹ.

೨೦೪. ತಳೆ=ಹೊಂದು, ಕೋರೈಸಂತಿರೆ=ಚುಚ್ಚುವ ಹಾಗಿರಲು.

೨೦೫. ಭುವನಪ್ರಸ್ತುತ್ಯರ್ = ಲೋಕದವರೆಲ್ಲರ ಸ್ತೋತ್ರಕ್ಕೆ ಪಾತ್ರರಾದವರು, ಒಂದು + ಅಂದ > ಓರಂದ = ಕ್ರಮವಾಗಿ, ಏಕಪ್ರಕಾರವಾಗಿ, ಆಮಳಕಫಲ= ನೆಲ್ಲಿಯಕಾಯಿ, ಎಲ್ಲ ಲೋಕಗಳವರಿಂದಲೂ ಸ್ತುತಿಯಿಸಲ್ಪಡುವ, ತಪಸ್ಸಿನಿಂದ ಕರ್ಮಕ್ಷಯ ಮಾಡಿಕೊಂಡು ಮೂರು ಲೋಕಗಳ ವಿಷಯಗಳನ್ನು ಕೈಯಲ್ಲಿರುವ ನೆಲ್ಲಿ ಕಾಯಿನಷ್ಟು ಸ್ಪಷ್ಟವಾಗಿ ತಿಳಿದುಕೊಳ್ಳುವ ಯೋಗೀಂದ್ರರಿಗೂ ಇಂತಪ್ಪವರ ಹೆಸರನ್ನು ಕೇಳುವ ಪುಣ್ಯವು ಉಂಟಾದರೆ ಅವರಿಗೂ ಪಾಪಕ್ಷಯವಾಗುತ್ತದೆಂದು ಹೇಳುವಾಗ ಪ್ರತ್ಯಕ್ಷ ಕಾಣುವ ಪುಣ್ಯವು ಲಭಿಸಿದರೆ ಆ ಅದೃಷ್ಟ–ಭಾಗ್ಯವನ್ನು–ಮತ್ತೇ ನೆಂದು ಹೇಳಲಿ.

೨೦೬. ನಿಖಿಳಧರಾವಳಯ ಬ್ರಹ್ಮ=ಸಮಸ್ತ ಭೂಮಂಡಲಕ್ಕೆ ಬ್ರಹ್ಮನ ಹಾಗಿರು ವವನು. ಆ ಋಷಿಶ್ರೇಷ್ಠನಿಂದ ಆ ಒಂದು ತಪೋವನವಲ್ಲ, ಸಮಸ್ತ ಭೂಮಂಡಲವೂ ಪವಿತ್ರವಾಯಿತು.

೨೦೭. ಪರಿಹೃತತೃಷ್ಣಂ=ಆಶೆಯನ್ನು ನೀಗಿರುವವನು, ಆಹಿತರಸಂ=ಕರುಣರಸ ದಿಂದ ಕೂಡಿರುವವನು, ದ್ವಿಜಸನ್ನಿಹಿತಂ = ಬ್ರಾಹ್ಮಣರಿಂದ ಸೇವಿಸಲ್ಪಡುವವನು. ಗಭೀರತಾ....ಸುಭಗಂ=ಗಾಂಭೀರ್ಯ ಮತ್ತು ಪ್ರಸನ್ನ ಗುಣಗಳಿಂದ ವಿಶೇಷ ಆಕರ್ಷಕ ನಾಗಿರುವವನು. ಮಾನಸಸರೋವರದ ದೃಷ್ಟಿಯಿಂದ, ತೃಷ್ಣೆ=ದಾಹ, ರಸ=ನೀರು, ದ್ವಿಜ = ಪಕ್ಷಿ, ಗಭೀರತಾ =ಆಳ, ಪ್ರಸನ್ನತಾ = ಪರಿಶುದ್ಧತೆ, ವಿಬುಧ = ದೇವತೆ. ಮಾನಸ....ಕೃತಕೃತ್ಯಳಾವಳೋ=ಮಾನಸಸರೋವರದಲ್ಲಿ ನೆಲಸಿರುವ ಹೆಣ್ಣು ಹಂಸದಂತೆ

ಋಷಿಯ ಮುಖಕಮಲದಲ್ಲಿ ಸೇರಿಕೊಂಡಿರುವ ಸರಸ್ವತಿಯು ಏನು ಭಾಗ್ಯಶಾಲಿಯೋ ?

೨೦೮. ಕಲಿ....ಸಂಕುಳ = ಕಲಿಯುಗದ ಸಂಪರ್ಕದಿಂದ ದೋಷಯುಕ್ತವಾದ ವಿದ್ಯಾಸಮೂಹ, ಶಾರದ ನಳಿನ ಸರೋವರ=ಶರತ್ಕಾಲದ ಕಮಲದ ಕೊಳ.

೨೦೯. ಸಮಸ್ತ ಋಷಿಗಳ ನಿವಾಸಸ್ಥಾನವಾದ ಜಾಬಾಲಿಯಾಶ್ರಮವನ್ನು ನೋಡಿದ ಆಕಾಶಕ್ಕೆ ತಾನು ಸಪ್ತರ್ಷಿಮಂಡಳಕ್ಕೆ ನಿವಾಸನಾಗಿದ್ದೇನೆಂಬ ಅಹಂಕಾರ ಅಳಿದುಹೋಗದೇ ಇರುತ್ತದೆಯೇ ?

೨೧೦. ದುಗ್ಧ=ಹಾಲು, ನಿರ್ಯತ್=ಹೊರಹೊರಡುತ್ತಿರುವ, ಫೇನ....ಧವಳೆ= ನೊರೆಯ ಸಮೂಹದಷ್ಟು ಬೆಳ್ಳಗಿರುವವಳು, ಭೀತಿಯಂ ಪತ್ತುವಿಟ್ಟು=ಭಯವನ್ನು ಬಿಟ್ಟು, ಜರೆ = ಮುಪ್ಪು, ವಿಳಯ... ತೀವ್ರಾಂಶು = ಪ್ರಳಯಕಾಲದ ಘೋರಾಗ್ನಿ, ಪಿಂಗ=ಹಳದಿಯಾದ.

೨೧೧. ಅಳ್ಕು=ಹೆದರು,

೨೧೨. ಮಂತ್ರಪೂತ=ಮಂತ್ರಗಳಿಂದ ಪರಿಶುದ್ಧವಾದುವು, ಇದಿರೆಟ್ದು=ಎದುರಾಗಿ ಎದ್ದುಬಂದು, ಕೆಯ್ಕೊಂಡಿರ್ಪುವು = ಅಂಗೀಕಾರಮಾಡಿದೆ, ಹುತವಹನಿವಹ= ಅಗ್ನಿಗಳ ಸಮೂಹ (ದಾಕ್ಷಿಣಾತ್ಯ, ಆಹವನೀಯ, ಗಾರುಹಪತ್ಯ ಎಂಬ ಅಗ್ನಿತ್ರಯಗಳು) ಸುಟ್ಟದಪ್ಪುದು=ಇಲ್ಲಿ ದಪಯೆಂಬ ವಿಕರಣಪ್ರತ್ಯಯದ ಪಕಾರಕ್ಕೆ ದ್ವಿತ್ವ ಬಂದಿದೆ. ಶ.ದ. ೨೩೩ ನೋಡು.

೨೧೩. ವಿಲುಳಿತ=ಚಲಿಸಲ್ಪಟ್ಟ, ಬಲಿಕುಸುಮಾಮೋದ ಬಂಧುರಗಂಧವಹಂ =ಪೂಜಿಸಲ್ಪಟ್ಟ ಹೂವಿನ ವಾಸನೆಯಿಂದ ಮನೋಹರವಾಗಿರುವ ಗಾಳಿ.

೨೧೪. ತಿರ್ಯಕ್ = ಪ್ರಾಣಿ, ನಿಸರ್ಗವೈರ=ಸಹಜವಾದ ದ್ವೇಷ.

೨೧೫. ನುಣ್ಬಸಲೆ=ನುಣುಪಾದ ಹಸರು ಹುಲ್ಲು ಬೆಳದಿರುವ ಸ್ಥಳ, ಅಳುರ್ವ= ವ್ಯಾಪಿಸುವ, ಪೀಲಿಗಣ್ಗಳ=ನವಿಲುಗರಿಯ ಕಣ್ಣುಗಳ, ಪರಭಾಗದಿಂದ=ವರ್ಣೋತ್ಕರ್ಷದಿಂದ, ಸೋಗೆಯ=ನವಿಲಿನ, ತಳ್ತಸೋಗೆಯಂ=ಒತ್ತಾದ ಗರಿಯನ್ನು, ಪೊಕ್ಕಪುದಿಂತಿದೆ....ಸೋಗೆಯಂ=ಹಾವು ಬಣ್ಣ ಬಣ್ಣವಾಗಿರುವ ನವಿಲುಗರಿಯ ಕಣ್ಣುಗಳೊಳಕ್ಕೆ ಇದೊ ಪ್ರವೇಶಿಸುತ್ತಿದೆ.

೨೧೬. ವಿಶೇಷ ಪರಿಚಯದಿಂದ ಜಿಂಕೆಯ ಮರಿಗಳು ತಮ್ಮ ತಾಯನ್ನು ಬಿಟ್ಟು ಸಿಂಹದ ಮರಿಗಳ ಜೊತೆಯಲ್ಲಿ ಸಿಂಹದ ಕೆಚ್ಚಲಿನಲ್ಲಿ ಹಾಲು ಕುಡಿಯುತ್ತಿದೆ. ಊಡು=ಕುಡಿ, ತೊಟಿ=ಹಾಲಿನಿಂದ ತುಂಬು,

೨೧೭. ಬಾಲಚಂದ್ರನನ್ನು ತಿರಸ್ಕರಿಸುತ್ತಿದ್ದ ಸಿಂಹದ ಕೇಸರ ಸಮೂಹವನ್ನು ಆನೆಯ ಮರಿಯು ತಾವರೆಯ ದಂಟೆಂದು ಸೆಳೆಯುತ್ತಿರಲು ಸಿಂಹವು ತನ್ನ ಕಣ್ಣನ್ನು ಅರ್ಧ ಮುಚ್ಚಿಕೊಂಡು ಸುಖಿಸುತ್ತಿತ್ತು.

೨೧೮. ಮದಸೌರಭ = ಮದೋದಕದ ವಾಸನೆ, ಬಂಬಲ್ = ಸಮೂಹ, ಸೋವಡೆ=ಅಟ್ಟದೆ.

೨೧೯. ನಿಶ್ಚೇತನಂಗಳ್=ಜಡವಸ್ತುಗಳು, ಭೂರುಹ=ಮರ, ಅಂತಿಂತುಂತು= ಹಾಗೆಹೀಗೆ ಬೇರೆ ರೀತಿಯಲ್ಲಿ

ವ|| ರಕ್ತಾಶೋಕ=ಕೆಂಪು ಅಶೋಕದ ಮರ.

೨೨೦. ದೊರೆಕೊಂಡಿತ್ತು=ಸಿಕ್ಕಿತು, ಬೆಸಗೊಂಡರ್=ಪ್ರಶ್ನೆಮಾಡಿದರು.

ವ|| ತುದಿಗೋಡು=ತುದಿಯ ಕೊಂಬೆ, ಅಳುರೆ=ವ್ಯಾಪಿಸುತ್ತಿರಲು, ಕಿಡಿಯಿಡುವ=ಬೆಂಕಿಯನ್ನು ಚೆಲ್ಲುತ್ತಿರುವ, ಪುಡಿ=ಧೂಳು, ನಡಸಿ=ಸಾಕಿ, ಪಾಱಿಪೋಕುಂ=ಹಾರಿಹೋಗುತ್ತದೆ; ನಿಲ್ಗೆ=ನಿಲ್ಲಲಿ, ಈಷದಾವಲಿತ ಕಂಧರ=ಸ್ವಲ್ಪ ತಲೆದೂಗಿದವನಾಗಿ, ಪ್ರಕ್ಷಾಳಿಸುವಂತೆ=ತೊಳೆಯುವಹಾಗೆ, ಕಂಡಱವನಂತೆ= ನೋಡಿ ತಿಳಿದಿದ್ದವನಹಾಗೆ

೨೨೧. ವ|| ಕಾಲತ್ರಯವೇದಿ = ಭೂತಭವಿಷ್ಯವರ್ತಮಾನ ವಿಷಯಗಳನ್ನು ತಿಳಿದವನು. ವಿಸ್ಮಿತಾಂತಃಕರಣರ್=ಆಶ್ಚರ್ಯದಿಂದ ಕೂಡಿದ ಮನಸ್ಸುಳ್ಳವರು.

೨೨೨. ನೆಗಲ್ದಂ=ಮಾಡಿದನು. ವಿಹಗಯೋನಿ=ಪಕ್ಷಿ ಜನ್ಮ, ಉತ್ಕಂಠ= ಆಸಕ್ತಿ, ಆಶೆ.

೨೨೩. ನೀಂ ಬೆಸಸಲ್ ವೇಟ್ಪುದು ಎಂಬುದನ್ವಯ (ಇಲ್ಲಿರುವ 'ವೇಟ್ಪು' ಎಂಬುದು 'ವೇಟ್ಪು' ಎಂದಿರಬೇಕು.)

೨೨೪. ವ|| ತೀರ್ಚುತ್ತ=ತೀರಿಸುತ್ತ.

೨೨೫. ಅನುಷ್ಣಪರ್=ಕಾವಿಲ್ಲದವರು > ಕೋಪವಿಲ್ಲದವರು > ಉಪಶಾಂತರು ಅಪಗತತೇಜಂ=ತೇಜಸ್ಸನ್ನು ಹೋಗಲಾಡಿಸಿಕೊಂಡವನು. ಉಡುಗಲ್+ಒಡರಿಚಿತು =ಅಸ್ತವಾಗುವುದಕ್ಕೆ ಪ್ರಾರಂಭಿಸಿತು.

೨೨೬. ಅರುಣಿಮ=ಕೆಂಪು ಬಣ್ಣ.

೨೨೭. ಸಮಸ್ತ ಮುನಿನಿವಹೋದಯ=ಎಲ್ಲ ಋಷಿಗಳ ಸಮೂಹದ ಉದಯ> ಸಪ್ತ ಋಷಿಮಂಡಲದ ಉದಯ.

೨೨೮. ಕ್ಷೀರಾಬ್ಧಿಶಾಯಿಯಾದ ಶ್ರೀಮನ್ನಾರಾಯಣನ ನಾಭಿಯಲ್ಲಿ ಕೋಮಳವಾದ ಮಕರಂದ ಧಾರೆಗಳಿಂದ ಕೂಡಿ ಮನೋಹರವಾಗಿರುವ ಕಮಲವೋ ಎನ್ನುವಹಾಗೆ ಪ್ರಕಾಶಮಾನವಾದ ಕೆಂಪು ಕಾಂತಿಯಿಂದ ಶೋಭಾಯಮಾನವಾದ ತನ್ನ ಬಿಂಬವು ಸಮುದ್ರದಲ್ಲಿ ಪ್ರತಿಬಿಂಬಿಸುತ್ತಿರಲು ಸೂರ್ಯನು ಅಸ್ತಪರ್ವತವನ್ನು ಸೇರಿದನು — ಉತ್ಪ್ರೇಕ್ಷಾಲಂಕಾರ.

೨೨೯. ಆಱಲಕ್ಕಿದ=ಒಣಗಿಸುವುದಕ್ಕಾಗಿ ಹರಡಿದ, ತನುತರ=ಸೂಕ್ಷ್ಮವಾದ, ಕಾಷಾಯವಲ್ಕಲ=ಕೆಂಪುಬಣ್ಣದ ನಾರುಮಡಿ, ಎನಸುಂ ತಾಳ್ದಿದುವು ಎನೆ=ಸ್ವಲ್ಪ ಕಾಲದವರೆಗೆ ಧರಿಸಿದುವೊ ಎನ್ನುವಹಾಗೆ,

ವ|| ಅಪರವಾರ್ಧಿ=ಪಶ್ಚಿಮ ಸಮುದ್ರ, ಮಗ್ನ=ಮುಳುಗು.

೨೩೦. ತುಱುಗಲ್=ಸಮೂಹ, ಪವಣ್=ಪ್ರಮಾಣ>ಅಳತೆ, ಅರ್ಣವತಟ

=ಸಮುದ್ರತೀರ, ಪರೆದಪುದು=ಹರಡುತ್ತಿದೆ. ಸಾಂದ್ರ=ಒತ್ತಾದ, ಸಂಧ್ಯಾರಾಗಂ=ಸಾಯಂಕಾಲದ ಕೆಂಪುಬಣ್ಣ,

೨೩೧. ಇದು ರೂಪಕಾಲಂಕಾರ, ದಿನಕೃದ್ವಿಯೋಗಿನಿ ಸರೋಜಿನಿ ಶೋಕದಿಂ ತಪಸ್ವಿನಿಯಂತೆ ವೊಲಾದವೊಪ್ಪಿದಳ್ ಎಂಬುದು ಅನ್ವಯ. ಅವಳಿಗೆ ನಾಲ್ಕು ವಿಶೇಷಣಗಳು ಉಕ್ತವಾಗಿವೆ. ವನ....ರಾಜನಿ=ಕಾಂತಿಯುಕ್ತವಾದ ಕಮಲದ ಮೊಗ್ಗುಗಳೆಂಬ ಕಮಂಡಲದಿಂದ ವಿರಾಜಮಾನಳಾದವಳೂ, ಹಂಸಮಾಲಿಕಾ.... ಭಾಜನೀ = ಹಂಸ ಸಮೂಹಗಳೆಂಬ ಸೂಕ್ಷ್ಮವಾದ ಬಿಳಿಯ ನಾರುಮಡಿಗೆ ಭಾಗಿಯಾದವಳು (ಧರಿಸುವವಳೂ) ಮೃಣಾಳ....ರಂಜಿನಿ=ಬಳ್ಳಿಯಹಾಗೆ ಕೋಮಲವಾಗಿರುವ ತಾವರೆಯ ದಂಟಿನ ಜನಿವಾರವುಳ್ಳವಳೂ ದ್ವಿರೇಫ.... ಸಮಾಜಿನಿ=ಸುತ್ತುತ್ತಿರುವ ಭ್ರಮರ ಸಮೂಹದ ಅಕ್ಷಮಾಲಿಕೆಯುಳ್ಳವಳೂ, ಆದ ಸರೋಜಿನಿ, ದಿನಕೃತ್ + ವಿಯೋಗ=ಸೂರ್ಯನ ಅಗಲಿಕೆ. ಕಮಂಡುಲ, ವಲ್ಕಲ, ಉಪವೀತ, ಅಕ್ಷಮಾಲೆ ಇವು ತಪಸ್ವಿಗಳಿಗೆ ವಿಶಿಷ್ಟವಾದುದು.

೨೩೨. ಸೀರ್ಪನಿ=ತುಂತುರು ಹನಿ. ತಾರಾನಿಕುರುಂಬ=ನಕ್ಷತ್ರಗಳ ಸಮೂಹ.

೨೩೩. ಇನನ ಬಟಿಸಂದ=ಸೂರ್ಯನನ್ನು ಹಿಂಬಾಲಿಸಿದ, (ಪತಿಯೊಡನೆ ಸಹಗಮನ ಮಾಡಿದ)

೨೩೬. ವಳಯೀಭೂತ=ಸುತ್ತಿಕೊಂಡಿರುವ. ತಮಸ್ತಮಾಳ=ಕತ್ತಲೆಯೆಂಬ ಹೊಂಗೆಯಮರ. ಸಾಷಾಢಂ=ಆಷಾಢದಿಂದ ಕೂಡಿದುದು, ಸಪ್ತರ್ಷಿಸಂಕುಳ ಸಂಪೂತಂ=ಸಪ್ತರ್ಷಿ ಸಮೂಹದಿಂದ ಪವಿತ್ರವಾದುದು. ಅರುಂಧತೀ ಸ್ತುತಿನುತಂ=ಅರುಂಧತಿಯ ಸ್ತೋತ್ರದಿಂದ ಸ್ತುತಿಸಲ್ಪಟ್ಟದೂ, ಮೂಲಾನ್ವಿತಂ=ಮೂಲಾ ನಕ್ಷತ್ರದಿಂದ ಕೂಡಿದುದು, ವ್ಯೋಮ ಮಂಡಳಂ=ಆಕಾಶ ಪ್ರದೇಶ>ನಭೋಮಂಡಳ. (ಆಷಾಢ=ಪಾಲಾಶದಂಡ). ಎಳಸಿದಂ = ಆಶೆಪಟ್ಟನು, ಧೌತ....ಬರನ್ = ಬಿಳಿಯ ನಾರುಮಡಿಯ ಕಾಂತಿಯಿಂದ ಕೂಡಿದವನು. ಮಿತ್ರವಿರಹ=ಸೂರ್ಯ-ಸ್ನೇಹಿತನ ಅಗಲಿಕೆ.

೨೩೭. ಅವಗಾಹ=ಮುಳುಗುವಿಕೆ (ಸ್ನಾನ). ಇಂದ್ರದಿಶಾಕರಿ ಕುಂಭ=ಪೂರ್ವ ದಿಕ್ಕಿನ ಆನೆ>ಐರಾವತದ, ಕುಂಭಸ್ಥಳ ನಿಶಾಧೀಶ್ವರ=ರಾತ್ರಿಯ ಒಡೆಯ=ಚಂದ್ರ

೨೩೮. ಪ್ರಾಲೆ ಯಾಂಶುವಿಭೂಷಿತಂ=ಚಂದ್ರ ಕಿರಣದಿಂದ ಆಲಂಕೃತನಾದವನು. (ಪ್ರಾಲೇಯ = ಹಿಮ) ತರಳತಾರಾ....ಲಂಕಾರಂ = ಚಂಚಲವಾದ ನಕ್ಷತ್ರಗಳೆಂಬ ತಲೆಯ ಬುರುಡೆಗಳ ಮಾಲೆಯಿಂದ ಆಲಂಕೃತನಾದವನು. ಶಂಭುವ್ಯೋಮ ಶೀರ್ಷಾಗ್ರದಿಂ=ಈಶ್ವರನೆಂಬ ಆಕಾಶದ ತಲೆಯ ತುದಿಯಿಂದ

೨೩೯. ಕುಳಿರ್ವ=ತಣ್ಣಗಿರುವ, ಅಮರ್ದಿನ ಕೋಟ್ಗಿಸರ್ಜ=ಅಮೃತದ ಗಟ್ಟಿಯಾದ ಕೆಸರು. ಅಟ್ಟುದು=ಮುಳುಗಿತು. ನಿಭೃತ=ಇಡಲ್ಪಟ್ಟ,

೨೪೦. ತುಷಾರದೊಳ್ ಬೆರೆದು=ಹಿಮದೊಡನೆ ಕೂಡಿ, ಗಂಧದೊಳ್ಪೊರೆದು=ವಾಸನೆಯಿಂದ ವೃದ್ಧಿಯಾಗಿ, ಮಗ್ಗುಲೊಳ್=ಪಕ್ಕದಲ್ಲಿ, ತೆರಂದಿರಿದು=ಅವಕಾಶ

ಮಾಡಿಕೊಂಡು, ಉಟಜಾಂಗಣ=ಪರ್ಣಶಾಲೆಯ ಒಳಭಾಗ, ಪರಿದೆಸಗಿತ್ತು=ಆವರಿಸಿ ಬೀಸಿತು. ನಿಶಾಸಮೀರಣಂ=ರಾತ್ರಿಯ ಗಾಳಿ. ಅತಿಪ್ರಮದ ಕಾರಣಂ=ವಿಶೇಷ ಸಂತೋಷಕ್ಕೆ ಕಾರಣವಾದ,

೨೪೧. ಆಂಬೆರಸು=ನನ್ನೊಡನೆ, ವ|| ತಾಳವೃಂತ=ಬೀಸಣಿಗೆ, ಸನ್ನಿಧಿಕೃತ=ಹತ್ತಿರವಿದ್ದ, ವೇತ್ರಾಸನ=ಬೆತ್ತದ ಪೀಠ, ತಗುಳ್ದರ್=ಪ್ರಾರಂಭಿಸಿದರು.

ಚಂದ್ರಾಪೀಡನ ಜನನ ಮತ್ತು ಬಾಲ್ಯ

೧. ಮಹಾಕಾಳಾಹ್ವಯಂ=ಮಹಾಕಾಳನೆಂಬ ಹೆಸರುಳ್ಳ. ಅವಂತಿವಿಷಯ=ಅವಂತಿ ದೇಶ,

೨. ಪರಿಖಾವಳಯ=ಸುತ್ತಿರುವ ಕಂದಕ, ಅಗಳು=ಕಂದಕ,

೩. ಇಕ್ಕೆದಾಣ=ವಾಸಸ್ಥಳ,

೪. ಈಂಟಲ್=ಕುಡಿಯಲು, ಪಸರ=ಪ್ರಸರ > ಹರಡುವಿಕೆ, ವಿಪಣಪದ=ಅಂಗಡಿಯ ಸಾಲು,

೫. ಪನ್ನಗ=ಹಾವು, ಅವತರಿಸಿದುದು=ಇಳಿದುದು,

೬. ಮಂಥನ=ಕಡೆಯುವುದು. ಪಾಂಡುರಮಂ=ಬಿಳುಪನ್ನು, ಸಾರ=ಶ್ರೇಷ್ಠವಾದ, ಸಶೇಖರ=ಕಲಶಗಳೊಡನೆ ಕೂಡಿರುವ, ಅಗ್ರ=ತುದಿ, ಎಲರಿಂ ನಿಮಿರಲ್ಕೆ=ಗಾಳಿಯಿಂದ ಚಲಿಸಲಾಗಿ, ಅಮರಾಪಗಾಪಯಃಪೂರ=ದೇವ ಗಂಗಾನದಿಯ ನೀರಿನ ಪ್ರವಾಹ, ಹೈಮನಗ=ಹಿಮವತ್ಪರ್ವತ.

೭. ಉದಂಚತ್=ಮೇಲಕ್ಕೆತ್ತಿದ, ಪತಾಕಾವಸನ ವಿಲಸಿತಂ=ಬಾವುಟದ ಬಟ್ಟೆಯಿಂದ ಪ್ರಕಾಶಮಾನವಾದುದು. ಚಾಮರೌಘ=ಚಾಮರಗಳ ಸಮೂಹ, ರಣತ್=ಶಬ್ದಮಾಡುತ್ತಿರುವ

೮. ಮುರಜಧ್ವಾನ=ಮದ್ದಳೆಯ ಶಬ್ದ, ಇಂದ್ರಚಾಪ=ಕಾಮನ ಬಿಲ್ಲು,

೯. ಅನಿಮಿಷರಮಣೀಯ = ದೇವತೆಗಳಿಗೆ ಆನಂದವನ್ನುಂಟುಮಾಡತಕ್ಕವು, ನೋಡುವುದಕ್ಕಾಗದಷ್ಟು ಸುಂದರವಾದುವು. ವಿನಿದ್ರಕುಮುದಾಯತೋಜ್ವಳಂಗಳ್=ಅರಳಿದ ಕನ್ನೈದಲೆಯ ಪುಷ್ಪಗಳಿಂದ ಅಲಂಕೃತವಾದುದು.

೧೦. ದಂತವಲಭಿ=ದಂತದಿಂದ ಮಾಡಲ್ಪಟ್ಟ ಮೇಲ್ಚಾವಣಿ

೧೧. ಈರ್ಷೆ = ಅಸೂಯೆ = ಹೊಟ್ಟೆಯ ಕಿಚ್ಚು, ಭ್ರುಕುಟಿ = ಹುಬ್ಬು, ಮಾದ್ಯತ್=ಮದಿಸಿರುವ, ಮಾಳವೀ=ಮಾಳವದೇಶದ ಸ್ತ್ರೀಯರ, ಪೀವರ=ದಪ್ಪವಾದ, ಕುಚಕಲಶಾಲೋಲ=ಕುಚಕಲಶದಿಂದ ಕಲಕಲ್ಪಟ್ಟ, ಕಲ್ಲೋಲ=ಅಲೆ,

೧೨. ವೈಜಯಂತೀಪಟ—ಧ್ವಜದ ಬಟ್ಟೆ, ಎಟಲೆ=ಜೋಲುತ್ತಿರಲಾಗಿ (ಪದ್ಯಭಾಗದಲ್ಲಿ ಕುಳಬಿದ್ದಿದೆ. ಅದು ಐಟವಾಗಿರಬೇಕು)

೧೩. ಶರಾನಳಾರ್ಚಿ=ಬಾಣದ, ಬೆಂಕಿಯ ಕಾಂತಿ, ತಮಸ್ವಿನಿಗಳ್=ರಾತ್ರಿಗಳು, ವಿಧುವಿಪ್ರಲಂಭದಿಂ=ಚಂದ್ರನ ಅಗಲಿಕೆಯಿಂದ ಕೂಡಿ.

೧೪. ಮಂದನಿಶಾ....ಕೇತನಾಳಿಗಳ್=ನಿಧಾನವಾಗಿ ಬೀಸುವ ರಾತ್ರಿಯ ಗಾಳಿಯಿಂದ ಚಲಿಸಲ್ಪಟ್ಟು ಅಲುಗುತ್ತಿರುವ ರೇಷ್ಮೆಯ ಬಟ್ಟೆಯಿಂದ ಪ್ರಕಾಶಮಾನವಾಗಿರುವ ಧ್ವಜಗಳ ಸಮೂಹಗಳು.

೧೫. ಮಳಯಜ....ತಳದೊಳ್=ಶ್ರೀಗಂಧದ ನೀರಿನಿಂದ ಚಿಮಿಕಿಸಲ್ಪಟ್ಟ ರತ್ನ ಖಚಿತವಾದ ನೆಲಗಟ್ಟಿನಲ್ಲಿ.

ವ॥ ತರಳತೆ= ಚಾಂಚಲ್ಯ, ದ್ವಂದ್ವವಿಯೋಗ =ದಂಪತಿಗಳ ಅಗಲಿಕೆ (ಇಬ್ಬರು ಬೇರೆಯಾಗುವುದು), ವರ್ಣಪರೀಕ್ಷೆ =ಚಾತುರ್ವರ್ಣ್ಯದ ವಿವೇಚನೆ—ಬಣ್ಣಗಳ ವಿವೇಚನೆ, ಕನಕ= ಚಿನ್ನ, ಮಿತ್ರದ್ವೇಷ= ಸ್ನೇಹಿತರಲ್ಲಿ ದ್ವೇಷ, ಸೂರ್ಯನಲ್ಲಿ ದ್ವೇಷ.

೧೬. ಭೀಕರ ಶೂಲೋದ್ದಾರಿತಾಂಧಾಸುರನ್=ಭಯಂಕರವಾದ ತ್ರಿಶೂಲದಿಂದ ಅಂಧಕಾಸುರನನ್ನು ಸಂಹರಿಸಿದವನು, ಅಗತನಯಾ .... ಜೂಟಂ = ಪಾರ್ವತಿಯ ಕಾಲಂದಿಗೆಯ ಶಬ್ದದಿಂದ ಮರ್ದಿಸಲ್ಪಟ್ಟುದು, ಗಿರಿಶ= ಈಶ್ವರ.

ವ॥ ನೃಗ....ಪ್ರತಿಮನುಂ = ಪ್ರಸಿದ್ಧರಾದ ಹಿಂದಿನ ಷೋಡಷ ರಾಜರುಗಳಿಗೆ ಸಮಾನನಾದವನು, ನಿಜಭುಜಾರ್ಜಿತ ಭೂಮಂಡಲನುಂ=ತನ್ನ ತೋಳ ಬಲದಿಂದಲೇ ಭೂಮಂಡಲವನ್ನು ಸಂಪಾದಿಸಿದವನು, ಶಕ್ತಿತ್ರಯ=ಪ್ರಭುಶಕ್ತಿ, ಮಂತ್ರಿಶಕ್ತಿ ಮತ್ತು ಉತ್ಸಾಹ ಶಕ್ತಿಗಳೆಂಬ ಮೂರು ಶಕ್ತಿಗಳು, ಅಧಿಗತ=ಸ್ವಾಧೀನಪಡಿಸಿಕೊಂಡಿರುವ> ಹೊಂದಿರುವ, ಸಪ್ತತಂತುಪೂತ=ಯಜ್ಞದಿಂದ ಪವಿತ್ರೀಕೃತವಾದ, ಉಪಶಮಿತ= ಅಡಗಿಸಲ್ಪಟ್ಟ, ಉಪಪ್ಲವ=ಬಾಧೆ>ಕಷ್ಟ, ಮಕರಧ್ವಜ=ಮನ್ಮಥ, ಸದಾಸನ್ನ ವಿಗ್ರಹ =ಸತ್ಪುರುಷರಿಂದ ಕೂಡಿದ ಶರೀರವುಳ್ಳವನು, ಸದಾ+ಅಸನ್ನ ವಿಗ್ರಹ=ಸರ್ವದಾ ಯುದ್ಧಮಾಡುವುದರಲ್ಲಿ ಆಸಕ್ತನಾಗಿರುವವನು, ಸುಮಿತ್ರೋಪೇತಂ=ಸುಮಿತ್ರೆಯೊಡನೆ ಕೂಡಿರುವವನು, ಒಳ್ಳೆಯ ಸ್ನೇಹಿತರಿಂದ ಕೂಡಿರುವವನು, ಕ್ಷಮಾಗುರು=ಭೂಭಾರವನ್ನು ಹೊತ್ತಿರುವವನು, ಉಪಶಾಂತಿಯುಳ್ಳವನು, ವಂಶ=ಕುಲ, ಬಿದಿರು,

೧೭. ಏಳಿಸಿ=ತಿರಸ್ಕರಿಸಿ,

೧೮. ಆದಮೆ=ವಿಶೇಷವಾಗಿ, ದೋಷಾವಿಳ=ದೋಷದಿಂದ ತುಂಬಿರುವುದು.

೧೯. ಪತಿಯಗಲ್ದ = ಗಂಡನಗಲ್ಕೆಯಿಂದುಂಟಾದ, ವೇಗದಿ = ಭರದಿಂದ, ಅಗ್ಗಲಿಸಲ್=ಹೆಚ್ಚಾಗಲು.

೨೦. ದಿನಪೇಂದು—ಸೂರ್ಯಚಂದ್ರ, ಪ್ರಚಯ+ಅದ್ರಿಯಿಂದೆ=ಉದಯಪರ್ವತದಿಂದ ಅಂದರೆ ಉದಯಪರ್ವತ ಮೊದಲಾಗಿ ಸೇತುವೂ ಮಂದರ ಶೈಲವೂ ಗಂಧಮಾದನ ಪರ್ವತವೂ ಮೇರೆಯಾದ+ಭೂಮಂಡಲವನ್ನು ವಹಿಸಿದನೆಂಬುದಭಿಪ್ರಾಯ,ರಾಮಕ್ರಮ =ರಾಮನ ಪಾದ, ಅಂಕ=ಗುರುತು, ನಿಕಾಯ=ಸಮೂಹ, ಅಂಚಿತ=ಗುರುತು ಮಾಡಲ್ಪಟ್ಟ, ಕೇಯೂರದ್ವಯೋದ್ಭಾಸ್ವ=ಎರಡು ತೋಳುಬಳೆಗಳಿಂದ ಉಜ್ವ

ಲ್ಪಟ್ಟ, ಚಂಕನತ್=ಹೊಳೆಯುತ್ತಿರುವ.

೨೧. ಸುಧಾಸಿಂಧು=ಅಮೃತಸಮುದ್ರ.

೨೨. ವನನಿಧಿಪರೀತ=ಸಮುದ್ರದಿಂದ ಸುತ್ತುವರಿಯಲ್ಪಟ್ಟ, ಚೀರ್ದಪಳೆಂಬಿನೆಗಂ=ಹೆದರುತ್ತಾಳೆಯೋ ಎನ್ನುವಹಾಗೆ, ಪ್ರತಾಪ=ಪರಾಕ್ರಮವೆಂಬ ಬಿಸಿಲು.

ವ|| ವಿಪಕ್ಷತೆ=ಪಕ್ಷವನ್ನು ಬಿಡುವುದು, ರಕ್ಕೆಯಿಲ್ಲದಿರುವುದು; ಪರತ್ವಂ=ಪ್ರತಿಪಕ್ಷವನ್ನು ಸೇರುವುದು, ಎದುರಿಗಿರುವುದು; ಇದಿರಪ್ಪುದು=ಪ್ರತಿಭಟಿಸುವುದು, ಪ್ರತಿಬಿಂಬಿಸುವುದು; ದುರ್ಗಾಶ್ರಯಂ=ಕೋಟೆಯನ್ನು ಆಶ್ರಯಿಸಿರುವವನು, ದುರ್ಗಾದೇವಿಯನ್ನು ಆಶ್ರಯಿಸಿರುವುದು. ಶೂಲಪಾಣಿ=ಈಶ್ವರ, ಶೂಲವನ್ನು ಪಾಣಿಯಲ್ಲಿ ಉಳ್ಳವವನು ಯಾವನೋ ಅವನು ಶೂಲಪಾಣಿ, ಉದ್ವೃತ್ತತೆ=ದಾರಿ ಬಿಟ್ಟು ನಡೆಯುವುದು, ಎತ್ತರವಾಗಿರುವಿಕೆ; ದುಶ್ಯಾಸನಾಪರಾಧಂ=ಕೆಟ್ಟಕಾನೂನನ್ನು |ಅನುಸರಿಸಿರುವುದಕ್ಕೆ ಆಗುವ ಶಿಕ್ಷೆ, ದುರ್ಯೋಧನನಾದ ತಮ್ಮನಾದ ದುಶ್ಯಾಸನನ ತಪ್ಪು, ದಂಡಗ್ರಹಣಂ=ತಪ್ಪಿಗಾಗಿ ದಂಡವನ್ನು ವಸೂಲ್ಮಾಡುವುದು, ದೊಣ್ಣೆಯನ್ನು ಹಿಡಿದುಕೊಳ್ಳುವುದು, ವಕ್ರತೆ=ಋಜುವಿಲ್ಲದಿರುವಿಕೆ, ಬಗ್ಗಿರುವುದು, ಕುಚಪತ್ರ=ಕುಚಗಳ ಮೇಲೆ ಅಲಂಕಾರಕ್ಕೆ ಬರೆದಿರುವ ರೇಖೆ, ಬಂಧನಂ=ಸೆರೆಯಲ್ಲಿಡುವುದು, ಕಟ್ಟುವುದು, ತುಲಾರೋಹಣಂ=ತಪ್ಪನ್ನು ನಿರ್ಧಾರಮಾಡುವುದಕ್ಕಾಗಿ ತೂಕಮಾಡುವುದು, ತುಲಾಲಗ್ನವನ್ನು ಸೇರುವುದು. ಆಯತಿಭಂಗ=ಯೋಗಸಾಧನೆಗೆ ಅಡ್ಡಿ, ವಿಸ್ತಾರವಾಗಿರುವುದನ್ನು ಮಡಿಸುವುದು, ಮಲಿನಾಂಬರ = ಕೊಳೆಯಬಟ್ಟೆ, ಮೋಡ ಮುಸುಕಿರುವ ಆಕಾಶ, ಜಲದಾಗಮ = ಮಳೆಗಾಲ, ತಾರಕೋದ್ಧರಣಂ = ಕಣ್ಣುಗುಳ್ಳೆಗಳನ್ನು ಮೇಲಕ್ಕೆತ್ತಿ ಕೋಪಿಸಿಕೊಳ್ಳುವುದು, ತಾರಕಾಸುರನನ್ನು ಮೇಲಕ್ಕೆತ್ತುವುದು, ಶೂನ್ಯಗೃಹದರ್ಶನ=ಹಾಳುಮನೆಯನ್ನು ನೋಡುವುದು, ಪಗಡೆಯಕಾಯಿ ಇಲ್ಲದ ಮನೆ. ನೆತ್ತ=ಪಗಡೆಯಾಟ.

೨೩. ನೀತಿಪ್ರಯೋಗ=ರಾಜನೀತಿಯನ್ನು ಉಪಯೋಗಿಸುವುದು, ನಿಶಿತಮತಿ=ಹರಿತವಾದ ಬುದ್ಧಿಯುಳ್ಳವನು, ತ್ರಿವರ್ಗ+ಉಪೇತಂ=ಧರ್ಮ, ಅರ್ಥ, ಕಾಮಗಳಿಂದ ಕೂಡಿರುವವನು, ಷಾಡ್ಗುಣ್ಯ=ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮತ್ತು ಸಮಾಶ್ರಯಗಳಿಂದ ಕೂಡಿರುವುದು ಅಥವಾ ಐಶ್ವರ್ಯ, ಜ್ಞಾನ, ಯಶಸ್, ಶ್ರೀ ವೈರಾಗ್ಯ ಮತ್ತು ಧರ್ಮಗಳಿಂದ ಕೂಡಿದ.

೨೪. ಕುಶಿಕತನಯ=ವಿಶ್ವಾಮಿತ್ರ, ವೈಮಾನಿಕನಾಯಕ ಇಂದ್ರ.

೨೫. ಶಾತಶಸ್ತ್ರ = ಹರಿತವಾದ ಆಯುಧ, ಅಂಸಪೀಠ = ಹೆಗಲೆಂಬ ಆಸನ, ಗಾನ=ಗಹನ, ಕಾರ್ಯ.

೨೬. ದರಹಾಸಚಂದನರಸಾಭಿಷವಂ=ಮುಗುಳ್ನಗೆಯೆಂಬ ಶ್ರೀಗಂಧದ ಅಭಿಷೇಕ, ಪಟವಾಸರೇಣು=ಧೂಪದಪುಡಿ,

೨೭. ಸುರತ....ಪತ್ರಂ = ಸುರತೋದಕ ಬಿಂದುವಿನಿಂದ ಅಳಿಸಿಹೋಗಿರುವ (ಅಲಂಕಾರಕ್ಕಾಗಿ ಬರೆದಿರುವ) ಕಸ್ತೂರಿಯ ರೇಖೆ. ಗದ...ಬಿಂದು=ಸ್ಪಷ್ಟವಾಗಿ ಕಚ್ಚಲ್ಪಟ

ತುಟಿ. ಕಚಾಕರ್ಷಣ = ಕೂದಲನ್ನು ಸೆಳೆಯುವುದು. ಪ್ರೇಮ....ಲೇಖಾ=ಪ್ರಣಯ ಕೋಪದಿಂದ ಒದೆದಾಗ (ಅಂಟಿಕೊಂಡ) ಕಾಲಿನ ಅರಗಿನ ರೇಖೆಯನ್ನುಳ್ಳ,

೨೮. ವಿಗಳತ್ = ಬಿಡಲ್ಪಟ್ಟಂಥ, ಕಾಶ್ಮೀರಧಾರಾ = ಶ್ರೀಗಂಧದ ಪ್ರವಾಹ, ಮನ್ಮಥಂ....ಪೋಲ್=ಮನ್ಮಥನಿಂದ ಬಿಡಲ್ಪಟ್ಟ ಚಿನ್ನದ ಬಾಣಗಳ ಸಮೂಹದ ಹಾಗೆ, ಚಂದನ....ತನು = ಗಂಧೋದಕದ ಹನಿಗಳಿಂದ ಪ್ರಕಾಶಮಾನವಾಗಿ ಕಸ್ತೂರಿಯ ವಾಸನೆಯ ಆಧಿಕ್ಯದಿಂದ ಮಿಂಚುತ್ತಿರುವ ಶರೀರವುಳ್ಳವನು, ಹೇಮಶೃಂಗ = ಚಿನ್ನದ ಕೊಳವೆ.

೨೯. ಜಲಕ್ರೀಡೆಯೊಳ್ ಕಾಮಿನೀ ಪರಿವೃತಂ ಸರೋಜಾಕರಂಗಳಂ ಲಲಾನಾ ....ಯುಗಳಂ, ನೈತಂಬವಿಕ್ಷೋಭಸಂಚಳಂ, ಉಚ್ಚ....ನೋಜ್ವಳಂ ಉದಂಚತ್.... ಳಾವಿಳಂ ಚಕೀರ್ಣ ಶಬಳಂ, ಮಾಳ್ಪಂ ಎಂಬುದು ಅನ್ವಯ. ಸಿಕ್ತ=ಅಂಟಿಕೊಂಡಿರುವ, ಪ್ರಸೂನಶಬಳಂ=ವಿವಿಧ ವರ್ಣಗಳ ಹೂವು.

೩೦. ಕೂರ್ತವೋಲ್=ಪ್ರೀತಿಸಿದ ಹಾಗೆ. ಕುಱುಪುವೇಟ್ಟು=ಸಂಕೇತಸ್ಥಾನ ವನ್ನು ಸೂಚಿಸಿ, ಒರ್ಮೊದಲ್ = ಪ್ರಾರಂಭದಲ್ಲಿ, ಸೋಲೆ=ಸೋತಹೋಗುವ ಹಾಗೆ. ಪೊಯ್ಪಡೆವಂ= ಪೆಟ್ಟು ತಿನ್ನುವವನು.

ವ || ಕನಕ ಕವಾಟವಾತಾಯನ=ಚಿನ್ನದ ಬಾಗಿಲು ಮತ್ತು ಕಿಟಕಿ, ಅಭಿಮತಂ ಅವಿರುದ್ಧಂ=ಇಷ್ಟವಾಗಿರುವುದು ವಿರುದ್ಧವಲ್ಲದುದು.

೩೧. ಕೃತಾರ್ಥರೆನಲ್ =ಕೃತಕೃತ್ಯರೆಂದು ಹೇಳುತ್ತಿರಲು, ವಿಡಂಬನ=ಹಾಸ್ಯ.

೩೨. ಎನಿತೊಳವು=ಎಷ್ಟಿವೆಯೋ.

೩೩. ಸಂದಿರ್ದುಂ+ಅಂದು+ಅಂಥನಂತಿರೆ. ವಿಶ್ವಂಭರೆ=ಭೂಮಿ

ವ || ಅಂತಃಪುರಪ್ರಧಾನೆ=ರಾಣೀವಾಸದ ಮುಖ್ಯಸ್ಥಳು (ಮಹಾರಾಣಿ)

೩೪. ಪಡಿಯಱಿಕೆ=ಬಾಗಿಲುಕಾಯುವುದು. ಅಡಪ=ತಾಂಬೂಲದ ಚೀಲ, ಪಡಿಗ=ಮುಖಪ್ರಕ್ಷಾಳನ ಪಾತ್ರೆ, ಅಣಂ=ಸ್ವಲ್ಪವೂ

ವ || ಆಶ್ವಾಸ್ಯಮಾನೆ=ಸಮಾಧಾನ ಪಡಿಸಲ್ಪಡುತ್ತಿರುವವಳು, ಆದ್ರೀಕೃತ= ಒದ್ದೆಯಾಗಿ ಮಾಡಲ್ಪಟ್ಟ, ಪರ್ಯಂಕ=ಹಾಸಿಗೆ. ಪ್ರತ್ಯುತ್ಥಾನೆ=ಎದುರಾಗಿ ಎದ್ದವಳು, ಕುಟಿಲಾಳಕಿ=ಕೊಂಕಿದ ಮುಂಗುರುಳುಳ್ಳವಳು.

೩೫. ಸಿಂಪು = ಚಿಪ್ಪು, ಸುಪಾಣಿಯಾಗಿ = ಮಿಂಚುತ್ತಿರುವ, ನಿರಂಜನ= ಕಾಡಿಗೆಯಿಲ್ಲದ, ಅಕ್ಷಿಪುಟಾಂತರ=ಕಣ್ಣಿನ (ರೆಪ್ಪೆಗಳ) ಒಳಭಾಗ.

೩೬. ಒಂದಿತಿಲ್ಲ=ಕೂಡಿಲ್ಲ.

೩೮. ಉಡೆನೂಲ್=ಒಡ್ಯಾಣ (ಉಡೆದಾರ), ಇಂದು+ಏಂ ಕಾರಣಂ, ಕಟ್ಟದು =ಕಟ್ಟಲ್ಪಟ್ಟಿಲ್ಲ.

೪೦. ಕರ್ಣಪೂರಮಾದತ್ತು=ಕರ್ಣಾಭರಣವಾಗಿದೆ. ಏಕೆ ಕಯ್ಯನ್ನು ಕಿವಿ ಯಾಭರಣದಂತೆ ಕೆನ್ನೆಯ ಮೇಲೆ ಇಟ್ಟುಕೊಂಡಿದ್ದೀಯೆ.

೪೪. ಎನ್ನೊಳ್....ಕಾಣೆಂ=ನನ್ನಿಂದ ತಪ್ಪಾದುದನ್ನು ನಾನು ಎಂದೂ ಕಾಣೆ, ಅಱಿದಪೆನಿಲ್ಲ=ತಿಳಿದಿಲ್ಲ.

ವ|| ಸಂತತಸನ್ನಿಹಿತೆ=ಯಾವಾಗಲೂ ಹತ್ತಿರುವವಳು.

೪೫. ನೆಗೞ್ತಿ=ಕಾರ್ಯ.

೪೬. ಅನುವಿಸಿ=ಸಮಾಧಾನಪಡಿಸಿ, ಮಾನಿನಿಯ ಪರಿಜನಂ ನೆಗೞ್ವುದು.

ವ|| ಪುನ್ನಾಮ್ನೋ....ಪುತ್ರ=ಪುಂ ಎಂಬ ಹೆಸರುಳ್ಳ ನರಕದಿಂದ ರಕ್ಷಿಸುವವನಾದುದರಿಂದ ಪುತ್ರನೆನ್ನಿಸಿಕೊಳ್ಳುತ್ತಾನೆ. ಅಪುತ್ರಾಣಾಂ....ಶುಭಃ=ಮಕ್ಕಳಿಲ್ಲದವರಿಗೆ ಗತಿಯಿಲ್ಲ. ಶುಭಲೋಕಗಳಲ್ಲಿ ವಾಸವೂ ಇಲ್ಲ.

೪೭. ಅಂತಸ್ಸಂತಾಪ=ಒಳ ದುಃಖ,

೪೮. ಇಲ್ಲಿಂದಿತ್ತಿಲ್ ದೇವರ್ ಬಲ್ಲಿರ್=ಇಲ್ಲಿಂದ ಮುಂದಕ್ಕೆ ಮಾಡಬೇಕಾದುದನ್ನು ಸ್ವಾಮಿಯೇ ತಿಳಿದಿದ್ದೀರಿ.

೪೯. ಪರಿಷ್ವಂಗ=ಅಪ್ಪಿಕೊಳ್ಳುವುದು, ಅಮೃತಾಸ್ವಾದ=ಅಮೃತವನ್ನು ರುಚಿನೋಡುವುದು, ಅೞುತ್ತಿರ್ದಳಕ್ಕುಮೆ=ಅಳುತ್ತಿರಬಹುದೇ.

೫೦. ಪರಿಚರ್ಯೆ=ಸೇವೆ, ಆದೃತೆ=ಆಸಕ್ತಿ, ಪಡೆಯಲಾಱದು=ಪಡೆಯುವುದಕ್ಕೆ ಅಸಾಧ್ಯವಾದುದು.

೫೧. ಶರನಿಧಿ = ಸಮುದ್ರ, ಮಂದರಧರಬಾಹುಗಳ್ = ವಿಷ್ಣುವಿನಂತಿರುವ ತೋಳುಗಳನ್ನುಳ್ಳವರು.

ವ|| ವಿಶ್ವಾನಂದಭರನ್=ಪ್ರಪಂಚದ ಸಂತೋಷಕ್ಕೆ ನೆಲೆಯಾಗಿರುವವನು.

೫೩. ಉದಯಮಾಗಲ್ ಸಮನಿಸೆ=ಹುಟ್ಟುವುದಕ್ಕೆ ಸಿದ್ಧನಾಗಲು.

೫೪. ಒದವು=ಪ್ರಾಪ್ತಿ, ಉಂಟಾಗುವಿಕೆ, ಪೂರ್ಣಪಾತ್ರ=ಉಡುಗೊರೆ, ಎಳೆಕುಳಿಕೊಳ್=ತೆಗೆದುಕೊಳ್ಳುವುದಕ್ಕೆ ಆತುರಪಡು, ಸೈಪು=ಅದೃಷ್ಟ.

೫೫. ಅಳುಂಬಂ = ಅಧಿಕವಾಗಿ, ಇಟ್ಟಳಂ = ಮನೋಹರವಾಗಿ, ಉತ್ಸಂಗನಿಷಣ್ಣಂ=(ತೊಡ) ಮಡಲಿನಲ್ಲಿಡಲ್ಪಟ್ಟು, ಹರಿದ್ರಾಂಶುಕಾಲಿಂಗಾತಾಂಗಂ=ಹಳದಿಯ ಬಟ್ಟೆಯಿಂದ ಸುತ್ತುವರಿಯಲ್ಪಟ್ಟ ಅಂಗವುಳ್ಳವನಾಗಿ.

೫೬. ಪನೆ=ಹಲ್ಲು. ರಕ್ಕೆವಣಿ=ರಕ್ಷಾಮಣಿ, ವಿಸ್ಫಾರ=ಅರಳಿರುವ, ತೂಗುಂದೊಟ್ಟಿಲ್=ತೂಗುತ್ತಿರುವ ತೊಟ್ಟಿಲು, ಪಟ್ಟ=ಮಲಗಿರುವ(ಪಡುಧಾತುವಿನ ಭೂತಕಾಲ)

೫೮. ಸಂಗಡಿಸಿದ = ಒಟ್ಟುಗೂಡಿದ, ತೊಂಗಲ್, ಜಾನುಚಂಕ್ರಮಣ= ಮಂಡಿಗಾಲು ನಡೆ> ಅಂಬಗಾಲು ನಡೆ, ಹರ್ಮ್ಯಾಂಗಣ=ಅರಮನೆಯ ಒಳ ಹಜಾರ,

೫೯. ಮಂಜೀರನಾದ=ಕಾಲಂದುಗೆಯ ಶಬ್ದ, ಬೆ+ಬೆನ್ನೊಳು = ಬೆಂಬೆನ್ನೊಳ್, ಹಿಂದೆ ಹಿಂದೆ, ಪೋಪ, ಒಡರಿಪ ಎಂಬುದು ಕೃದಂತಗಳು, ಮುದ್ದು ಎಂಬ ಕರ್ತೃವಿಗೆ ವಿಶೇಷಣಗಳು, ಶಾಬ = ಮರಿ, ಚಂದ್ರೋಪಳಭಿತ್ತಿ = ಚಂದ್ರಕಾಂತಶಿಲೆಯಿಂದ ಮಾಡಿದ ಗೋಡೆ, ಒಡರಿಪ =ಉಂಟುಮಾಡುವ.

೬೦. ಅಂಗುಲಿ + ಅಂಕುಶ > ಬೆರಳೆಂಬ ಅಂಕುಶ, ಕರ್ಷಣ = ಚುಚ್ಚುವಿಕೆ ಕಯ್ಯಂ = ಸೊಂಡಿಲನ್ನು (ಕಯ್ಯನ್ನು) ಗಂಡೋಚ್ಚಲ....ಧ್ವಾನದಿಂ=ಮುಖದಿಂದ ಹೊರಡುವ ಡಿಂಡಿಮ ವಾದ್ಯದ ಧ್ವನಿಯ ಹಾಗಿರುವ ಧ್ವನಿಯಿಂದ.

೬೧. ತಳರಡಿ = ತಪ್ಪು ಹೆಜ್ಜೆ, ಕೌತುಕ ಚಳನಯನದೆ = ಕುತೂಹಲದಿಂದ ಚಂಚಲವಾಗಿರುವ ಕಣ್ಣುಗಳಿಂದ.

೬೧. ಪೊರೆವ + ಆಳ್ದನೆ=ಸಂರಕ್ಷಿಸುವ ಒಡೆಯನೆ, ಮರಲ್ದು=ಪುನಃ ಪುನಃ ಬಾರ+ಎಲೆ ತಂದೆ, ಇಲ್ಲಿ ಬರ್‌ಧಾತುವಿಗೆ ಸಂಬೋಧನೆಯಲ್ಲಿ ಧಾತುವಿನ ಕಡೆಗೆ ಅತ್ವ ಬಂದಿದೆ. ಶ. ಮ ೧೨೫-೨೩೮ ನೋಡಿ.

ವ॥ ಅಪನೋದ ನಿಪುಣ=ಹೋಗಲಾಡಿಸುವುದರಲ್ಲಿ ಸಮರ್ಥವಾದ, ಪತ್ತು ವಿಟ್ಟು=ಬಿಟ್ಟು (ಪತ್ತುವಿಡು, ಧಾತುವಿನ ಭೂತರೂಪ)

೬೪. ಮಿಸಿಸಲ್=ಸ್ನಾನಮಾಡಿಸಲಾಗಿ, ಇಲ್ಲಿ ಮೀ ಧಾತುವಿಗೆ ಪ್ರೇರಕಾರ್ಥ ದಲ್ಲಿ ಇಸು ಪ್ರತ್ಯಯಪರವಾಗಿರುವುದರಿಂದ ಧಾತುವಿನ ಕಡೆಯ ದೀರ್ಘಕ್ಕೆ ಇಸಾದೇಶ ಬಂದಿದೆ. ಶ ಶಾ. ಸೂ ೫೪೨. ಸವತ್ಸಧೇನು=ಕರುವಿನೊಂದಿಗಿರುವ ಹಸು,

೬೫. ನಿಲೆಬೇವ=ನಿಂತು ಉರಿಯುವ, ಉಪೋಷಿತ=ಆಹಾರವಿಲ್ಲದ, ಕುಶೋಪ ಧಾನ=ಧರ್ಭೆಯ ತಲೆಗಿಂಬು

೬೬. ಚತುಷ್ಪಥಸ್ನಾನ=ನಾಲ್ಕನೆಯದಿನದ ಸ್ನಾನ,

೬೭. ಬಲವರ್ಪಳ್=ಪ್ರದಕ್ಷಣ ಮಾಡುತ್ತಾಳೆ, (ಬಲವರು ಧಾತು) ಬಲಿಭುಕ್ =ಕಾಗೆ ಗೂಗೆಗಳು (ಬಲಿಯನ್ನು ತಿನ್ನುವವು) ಹ್ರದ=ಮಡು, ಆಳವಾದ ನೀರಿರುವ ಸ್ಥಳ,

೬೮. ಸಮಸ್ತ....ಅನೀಕಮಂ=ಎಲ್ಲಾ ಶಕುನ ವಿಷಯಕವಾದ ಜ್ಞಾನರಾಶಿ,

೬೯. ಕರಿಣಿಯ ಸೃಕ್ವ=ಹೆಣ್ಣಾನೆಯ ಸೊಂಡಿಲು, ನನಸು=ಪ್ರತ್ಯಕ್ಷ

೭೧. ಶ್ರೀ ಮಂಡನ—ಗಾತ್ರನಂ=ಸಂಪತ್ಸಮೇತನಾದ ರಾಜಮಾರ್ಗೋಚಿತ ವಾದ (ರಾಜಲಕ್ಷಣಗಳಿಂದ....ಕೂಡಿದ) ಶರೀರವುಳ್ಳವನಾದ

೭೨. ಪ್ರೋತ್ಫುಲ್ಲ=ಚೆನ್ನಾಗಿ ಅರಳಿರುವ, ಅಂಕತಳ=ಮಡಿಲು,

ವ॥ ಅವಿತಥ=ಸುಳ್ಳಲ್ಲದುವು

೭೩. ಕಮಲೋದ್ಗಮ=ತಾವರೆಯ ಹುಟ್ಟು,

೩೪. ಅವಿಚ್ಛಿನ್ನ=ಏಕಪ್ರಕಾರವಾದುದು, ಒಡಕಿಲ್ಲದಿರುವುದು, ದಿಙ್ನಾಗ= ದಿಗ್ಗಜ, ದಿಙ್ನಾಗದಂತೆ ಅವಿಚ್ಛಿನ್ನಂ,

೭೫. ಕುಮುದ=ಕನ್ನೈದಿಲೆ, ಪ್ರಪಂಚದ ಸಂತೋಷ (ಕು+ಮುದ) ಅವಭಾಸಿ= ಅರಳಿಸುವ.

೭೬. ಮಣಿದರ್ಪಣ ಶ್ರೀ = ರತ್ನಗನ್ನಡಿಯ ಕಾಂತಿ, ಸಂಕ್ರಾಂತ = ಕೂಡಿ ಕೊಂಡಿರುವ.

೭೭. ಕಾದಿಂಬಿನಿ=ಮೇಘಮಾಲೆ. ಪುಟವೇಱು=ವೃದ್ಧಿಹೊಂದು

೭೮. ಒಲವರ=ಪ್ರೀತಿ, ಎಳೆವಸಿಱ್=ಎಳಿಯಗರ್ಭ. ಆಗುಳಿಕೆ=ಆಕಳಿಕೆ

೭೯. ಪಯೋಧರ ಮುಖ=ಮೊಲೆಯತುದಿ.

ವ|| ಇಂಗಿತ ಕುಶಲೆಯರ್=ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ತಿಳಿಯುವುದರಲ್ಲಿ ಜಾಣೆಯಾದವರು.

೮೦. ಇಂ=ಇನ್ನೂ, ಮಾಣ್ದಿರಲೇಂ=ಉದಾಸೀನವಾಗಿದ್ದರೆ ಏನು ಪ್ರಯೋಜನ, ಮಹಾಮಹತ್ತರಿ=ದಾದಿಯರಲ್ಲಿ ಮುಖ್ಯಳಾದವಳು, ಲಕ್ಷ್ಮೀಮನೋಹರ=ಶ್ರೀ ವಿಷ್ಣು, ರಾತ್ರೀಮನೋಹರ=ಚಂದ್ರ.

೮೩. ಅಪೂರ್ವಶ್ರುತವಚನಸಾರದಿಂ ಅಗೆವೋದಂತಿರ್ಪಕಂಟಕಂಗಳ್ ನೆಗೆಯಲ್ ಎಂಬುದು ಅನ್ವಯ. ಅಗೆವೋದಂತಿರ್ಪ = ಮೊಳಕೆಯಾದಂತಿರುವ, ಕಂಟಕ = ರೋಮಾಂಚ, ಸ್ಮಿತ=ನಗೆ, ಕೈಮಿಗಲ್=ಹೆಚ್ಚಾಗುತ್ತಿರಲು

೮೪. ನಿನ್ನ.... ನೆನಯಿಸಿದಪ್ಪುವು=ಚಂಚಲವಾದ ನಿನ್ನ ಕಣ್ಣುಗಳು ಕಿವಿಯ ವರೆಗೂ ಅರಳಿ ಕಿವಿಯಾಭರಣವನ್ನು ಜ್ಞಾಪಿಸುತ್ತಿದೆ. ಅಂದರೆ ಸಂತೋಷದಿಂದ ಕಣ್ಣು ಕಿವಿಯ ವರೆಗೂ, ಪ್ರಸರಿಸಿದೆ ಎಂದರ್ಥ.

೮೫. ಪವಣ್=ಪ್ರಮಾಣ>ಅಳತೆ, ಉಪಾರೂಢ ಮಹೋತ್ಸವ=ಸಂತೋಷದಿಂದ ಕೂಡಿದುದು, ಪದೆದಪುದು=ಆಶೆಪಡುತ್ತದೆ.

೮೬. ಅವಿತಥಂ=ಸುಳ್ಳಲ್ಲದುದು>ನಿಜವಾದುದು,

ವ|| ಅಂಗಚಿತ್ರ=ಉಡುಗೊರೆ,

೮೭. ಕೆತ್ತಲೊಡರ್ಚಿದತ್ತು=ಚಲಿಸುವುದಕ್ಕೆ ಪ್ರಾರಂಭಿಸಿತು, ಅಲರಲೆಪ=ಗಾಳಿಯ ಬಡಿತ,

೮೮. ಕರದೀಪಿಕಾ=ಕೈದೀವಿಗೆ, ಕಕ್ಷ್ಯಾಂತರ ತಿಮಿರ=ನಡುತೊಟ್ಟಿಯ ಮಧ್ಯವಿದ್ದ ಕತ್ತಲೆ, ನವಸುಧಾನುಲೇಪನ=ಹೊಸದಾಗಿ ಸುಣ್ಣ ಹಚ್ಚಿರುವುದು, ಅಧಿಷ್ಠಿತ=ಇಡಲ್ಪಟ್ಟ, ದ್ವಾರಪಕ್ಷ>ಪಕ್ಷದ್ವಾರಂ=ಬಾಗಿಲು, ಸಿತವಿತಾನ=ಬಿಳಿಯ ಮೇಲ್ಕಟ್ಟು ಮುಕ್ತಾಗುಣ=ಮುತ್ತಿನ ಮಾಲೆ,

೮೯. ಸತತಾಸನ್ನಸ್ಥ=ಯಾವಾಗಲೂ ಪಕ್ಕದಲ್ಲಿಯೇ ಇಡಲ್ಪಟ್ಟ, ನಿದ್ರಾಕಲಶ=ಸೂತಿಕಾಗೃಹದಲ್ಲಿ ನಿದ್ರೆಗೆ ಪ್ರತಿಭಂಗವಾಗದಿರುವುದಕ್ಕಾಗಿ ಇಟ್ಟಿರುವ ಕಲಶ, ಭೂತಿ=ವಿಭೂತಿ, ಸಿದ್ಧಾರ್ಥ=ಬಿಳಿಯ ಸಾಸವೆ, ಪ್ರವಾಳಾವಳಿ=ಚಿಗುರಿನ ಸಮೂಹ, ಅಯಃಪಿಪ್ಪಲೀಪತ್ರ = ಕರಿಯ ಅರಳಿಯ ಎಲೆ, ಪ್ರಚ್ಛದಾಚ್ಛಾದಿತಂ = ಮಗ್ಗುಲಹಾಸಿಗೆಯಿಂದ ಮುಚ್ಚಿದುದು,

೯೦. ಗರ್ಭಿತ=ಕೂಡಿದ ಪದ್ಮಭವ.... ಪದ್ಮಿನಿ=ಪದ್ಮದ ಮಧ್ಯದಲ್ಲಿರುವ ಬ್ರಹ್ಮ. ವಾರ್ಧಿವೀಚಿ=ಸಮುದ್ರದ ಅಲೆ. ಸುರದಂತಿ ಗರ್ಭಿತ ಸುರಾಪಗೆ=ಐರಾವತವನ್ನು ಒಳಗೊಂಡ ಗಂಗಾನದಿ, ನಗೋತ್ಥ=ಬೆಟ್ಟದ ಮೇಲಿರುವ,

೯೧. ವಾಮಜಾನು=ಎಡದ ಮಂಡಿ, ತರಂಗಿತಾಂಗ=ಚಂಚಲವಾದ ಶರೀರ,

೯೩. ಲಜ್ಜಾವನತಾಸ್ಯೆ=ನಾಚಿಕೆಯಿಂದ ತಗ್ಗಿಸಿದ ಮುಖವುಳ್ಳವಳು,

೯೫. ಆಂ ಇರ್ಕೆ ಇದಂ ಮಾಣ್ದೆಂ=ನಾನು ಇನ್ನು ಇದನ್ನು (ನಿನ್ನ ಪ್ರಶ್ನೆಮಾಡು ವುದನ್ನು) ಬಿಟ್ಟಿದ್ದೇನೆ. ಒಳ್ಳೆಯ ಹೊಸದಾದ ಸಂಪಗೆಯ ಕಾಂತಿಯಿಂದ ಕೂಡಿ ಕುಂಕುಮ ಕೇಸರಿಯ ಅನುಲೇಪನದಿಂದ ಕೂಡಿದ ನಿನ್ನ ಶರೀರವು ಬೆಳ್ಳಗೇಕಾಯಿತು.

೯೭. ತೆಳ್ಪಸಿಜುಮ್=ತೆಳುವಾದ ಬಸಿರು-ಹೊಟ್ಟೆ. ಬೆಳೆವಿನಂ=ಬೆಳೆಯುತ್ತಿರಲಾಗಿ, ಪಿಹಿತ=ಮುಚ್ಚಲ್ಪಟ್ಟ

೯೮. ಪೊನ್ನಮಳ್ಗೊಡೆ=ಚಿನ್ನದ ಜೋಡಿ ಕೊಡೆಗಳು. ಬಾಸೆ = ಕೂದಲ ಸಮೂಹ (ರೋಮರಾಜಿ)

೯೯. ಉಡೆನೂಲ್=ಉಡೆದಾರ (ಒಡ್ಯಾಣ) ಬಿಗಿವಿನೆಗಂ=ಬಿಗಿಯುವ ಹಾಗೆ. ಏಗೆಯಪ್ಪೆ=ಏನು ಮಾಡುತ್ತೀಯೆ.

ವ॥ ಅಂತರ್ನಿಗೂಢಹಾಸ್ಯಂ = ಹಾಸ್ಯವನ್ನು ಒಳಗೆ ಮುಚ್ಚಿಕೊಂಡಿರುವ— (ಹಾಸ್ಯಗರ್ಭಿತವಾದ)

೧೦೦. ನರ್ಮಪ್ರಿಯಾಭಿನುತಾಳಾಪ=ಹಿತವೂ ಇಷ್ಟವೂ ಆದ ಮಾತು, ನೀಡು ಮಿರ್ದು=ಬಹಳಕಾಲುದ್ದು.

ವ॥ ಸನ್ನಿಹಿತ=ಸಮೀಪದಲ್ಲಿರುವ, ದೋಹದ=ಬಯಕೆ, ಗಣಕಗಣಂ = ಜೋಯಿಸರ ಸಮೂಹ, ಪಾರು=ಎದುರುನೋಡು.

೧೦೧. ಒದವಲ್=ಉಂಟಾಗಲು, ನಿಜತೇಜಂ=ಮಿಂಚು

ವ॥ ಸರಭಸ ಪ್ರಭಾವಿತ=ವೇಗವಾಗಿ ನಡೆಯುತ್ತಿರುವ, ಕ್ಷುಣ್ಣ=ಪುಡಿಮಾಡ ಲ್ಪಟ್ಟ, ನಿಷ್ಪಿಷ್ಯಮಾಣ=ಒತ್ತಡದಿಂದ ಉಜ್ಜಲ್ಪಟ್ಟ, ವಿಷ್ಫಾರ್ಯಮಾಣ=ಪ್ರಕಾಶಿಸು ತ್ತಿರುವ, ಪೂರ್ಣಪಾತ್ರ=ಸಂತೋಷಕಾಲದಲ್ಲಿ ಪರಿಜನರು ಕೊಡುವ ಉಡುಗೊರೆ. ವಿಲುಪ್ಯಮಾನ=ಅಪಹರಿಸಲ್ಪಡುತ್ತಿರುವ, ಕಹಳೆ=ಕೊಂಬು, ಪಟಹ=ದಮಟೆ, ತೆಕ್ಕನೆ ತೀವು=ಸಂಪೂರ್ಣವಾಗಿ ತುಂಬು,

೧೦೨. ನೆಲೆವೆರ್ಚೆ,=ನೆಲೆಯಂ ಪೆರ್ಚೆ > ಎಲ್ಲೆಯನ್ನು ಮೀರಲು, ಘೂರ್ಣಿಸು =ಶಬ್ದಮಾಡು.

೧೦೩. ಉತ್ಸುಕ ಹೃದಯಂ=ಕುತೂಹಲದಿಂದ ಕೂಡಿದವನು. ಪುತ್ರಿಕಾ = ಬೊಂಬೆ, ಕಾಂಚನಮಯ=ಚಿನ್ನದಿಂದ ಮಾಡಲ್ಪಟ್ಟ, ಮುಸಲ=ಒನಕೆ, ಹಲ= ನೇಗಿಲು, ದೂರ್ವಾಪ್ರವಾಳ=ಗರಿಕೆಯ ಚಿಗುರು, ವಂದನಮಾಲಾ=ತೋರಣ. ವರಾ ಟಕ ಪ್ರಕರ=ಕವಡೆಯ ರಾಶಿ, ಕಾರ್ಪಾಸಕುಸುಮ=ಹತ್ತಿಯ ಹೂವು, ಗೌರಸಿದ್ಧಾರ್ಥ =ಬಿಳಿಯ ಸಾಸವೆ, ಮೃಣ್ಮಯ=ಮಣ್ಣಿನಿಂದ ಮಾಡಲ್ಪಟ್ಟ, ಘಟಿಕಾಕದಂಬ=ಗಡಿಗೆ ಗಳರಾಶಿ, ಪಂಚರಾಗ=ಅಯ್ದು ಬಣ್ಣ, ವರ್ಧಮಾನಕ=ತಟ್ಟೆ ಅಥವಾ ಮುಚ್ಚಳ ಪುರಂಧ್ರಿ=ದಾದಿ, ಗುಗ್ಗುಳ=ಒಂದು ಜಾತಿಯ ಧೂಪಸಾಮಗ್ರಿ, ಫಣಿಕಂಚುಕ=

ಹಾವಿನ ಪೊರೆ, ವಿಷಾಣರೇಣು=ದಂತದ ಪುಡಿ, ಅವನಿವೃಂದಾರಕರ್=ಭೂಮಿಯ ದೇವತೆಗಳು>ಬ್ರಾಹ್ಮಣರು. ಧಾತ್ರಿ=ದಾದಿ, ಶುದ್ಧಾಂತ=ಅಂತಃಪುರ, ಉತ್ಪಾತ=ಒರೆಯಿಂದ ಬಿಚ್ಚಿರುವ, ಅಸಿಲತಾ=ಕತ್ತಿ, ಪರಿಕ್ಷಾಮ=ಕೃಶಳಾದ, ಈ ಗದ್ಯದಲ್ಲಿ ಪ್ರಸವಗೃಹವರ್ಣನೆ ಬಹು ಸ್ಪಷ್ಟವಾಗಿದೆ.

೧೦೪. ಅರಲ್ಕೆ=ಅರಳಿಕೆ,

೧೦೫. ಜಿತಕುಮಾರಂ=ಷಣ್ಮುಖ (ಕುಮಾರಸ್ವಾಮಿ) ನನ್ನೂ ಮೀರಿಸಿದವನು,

೧೦೬. ಮಹನೀಯ ಕ್ಷುಣ್ಣ=ಮಹನೀಯರಿಂದ ಅವಲಂಬಿತವಾದ (ರಾಜ ಯೋಗ್ಯವಾದ)

೧೦೮. ಚಕ್ರವರ್ತಿ ಚಿಹ್ನೋತ್ಕರ=ಚಕ್ರವರ್ತಿ ಲಕ್ಷಣದ ಮೇಲ್ಮೆ, ಪೆಱತಾವುದು =ಇನ್ನೂ ಹೇಳುವುದೇನಿದೆ, ಉನ್ನತಿಕೆ=ಶ್ರೇಷ್ಠತ್ವ,

೧೦೯. ಊರ್ಣೆ=ಚಕ್ರವರ್ತಿ ಲಕ್ಷಣವನ್ನು ಸೂಚಿಸುವ ಮುಖರೇಖೆ, ತುಱುಗೆಮೆಗಣ್ ಬೆಳಗು=ಒತ್ತಾಗಿರುವ ರೆಪ್ಪೆಗಳುಳ್ಳ ಕಣ್ಣಿನ ಬೆಳಕು,

೧೧೦. ಸೌರಭಂ=ವಾಸನೆ, ಬರಿಪೀರುತಿರ್ಪುದು=ಪೂರ್ಣವಾಗಿ ಹೀರುತ್ತಿದೆ.

೧೧೨. ಶತಪತ್ರ=ಕಮಲ, ಪರಿಸ್ಫುಟ=ಸ್ಫುಟವಾಗಿ, ಸ್ಪಷ್ಟವಾಗಿ, ಮೆಲ್ಪು=ಮೃದು, ಚುಂಬನೋಚಿತಂ + ಇಂತಿದು ಚರಣಯುಗಂ=ಚುಂಬನ ಯೋಗ್ಯವಾದ ಈ ಕಾಲುಗಳು. ೧೦೯ ರಿಂದ ೧೧೨ ರ ವರೆಗೆ ರಾಜಲಕ್ಷಣ ವಿವರಣೆಯಿದೆ.

೧೧೩. ನಂದನರುದಿತಂ=ಮಗುವಿನ ಅಳುವಿಕೆ.

೧೧೪. ದೈವಮಿದಿರ್ಚಿ ಬಂದುದು=ಅದೃಷ್ಟವೇ ಎದುರಾಗಿ ಬಂದಿತು.

ವ॥ ಮಚ್ಚುಗೊಟ್ಟು=ಬಹುಮಾನವನ್ನು ಕೊಟ್ಟು, ಕ್ವಣಿತ=ಶಬ್ದ ಮಾಡಲ್ಪಟ್ಟ, ಅಂಗದ=ತೋಳಿನ ಬಳೆ, ಆಸ್ಫಾಲಿತ=ತಗಲುತ್ತಿರುವ>ಬಡಿಯುತ್ತಿರುವ, ಚಿಕುರ=ಗಲ್ಲ. ಪಿಷ್ಟಾತಕ=ಗಂಧದ ಪುಡಿ, ಪ್ರನೃತ್ತ=ವಿಶೇಷವಾಗಿ ಕುಣಿಯುತ್ತಿರು ಖಂಜ=ಕುಂಟ. ಜರತ್=ವೃದ್ಧನಾದ, ವೈಕಕ್ಷಕ=ಎದೆಯ ಮೇಲೆ ಧರಿಸುವ ಹೂವಿನ ದಂಡೆ. ಒಸಗೆ ಮರುಳ್+ಕೊಂಡು=ಸಂತೋಷದಿಂದ ಉನ್ಮತ್ತತೆಯನ್ನು ಹೊಂದಿ.

೧೧೬. ಅಟ್ಟಿವಟ್ಟು=ಆಶೆಯಿಂದ ಕೂಡಿ, ನೆಗಟ್ಟಿದಂ=ಮಾಡಿದನು.

೧೧೮. ಮನುಮಾರ್ಗ=ಶಾಸ್ತ್ರರೀತಿ

ವ॥ ಏಟ್ಗೆವಡೆದ=ಅಭಿವೃದ್ಧಿಯನ್ನು ಹೊಂದಿದ, ಪಾಡಿವ=ಪಾಡ್ಯ>ಪ್ರಥಮೆ, ಚೂಡಾಕರಣ=ಜುಟ್ಟು ಬಿಡಿಸುವುದು. ಶೈಶವ=ಬಾಲ್ಯ, ಪತ್ತುವಿಡು=ಕಳೆ. ಅಧಿಗಮನ=ಸಂಪಾದನೆ.

೧೨೧. ಶ್ರಮ=ಅಭ್ಯಾಸ, ಮಹಾಪ್ರಾಣತೆ=ವಿಶೇಷ ಶಕ್ತಿ,

೧೨೨. ವ್ಯಾಳೇಭ=ಮದ್ದಾನೆ,

೧೨೩. ತಳ್ಪೊಯ್ದು=ಪ್ರತಿಬಿಂಬಿಸಿ,

೧೨೪. ಸಹಪಾಂಸು ಕ್ರೀಡೆ=ಜೊತೆಯಲ್ಲಿ ಆಡುವ ಮಣ್ಣು (ಧೂಳಿ) ನಾಟ.

ಅಪ್ಪುಗೆಯ್ದು=ಆಕರ್ಷಿಸಿ>ಆಲಿಂಗನಮಾಡಿಕೊಂಡು,

೧೨೫. ಬಿಡದೆ=ಎಡಬಿಡದೆ>ಏಕ ಪ್ರಕಾರವಾಗಿ, ಪದಪಿಂದ=ಪ್ರೀತಿಯಿಂದ

೧೨೬. ಇನೋದಯ=ಸೂರ್ಯೋದಯ, ಅಮೃತಾಂಶು ಸಮುದ್ಗಮಂ=ಬೆಳದಿಂಗಳ ಕೂಡಿವಿಕೆ, ಪ್ರಸೂನ ವಿಭವಂ=ಹೂವಿನ ವೈಭವ, ಕಲಾಪವರ್ಣ=ಗರಿಯ ಬಣ್ಣ, ಅಭಿರಾಮ=ಮನೋಹರ,

೧೨೭. ಅವಸರ=ಅವಕಾಶ, ಪೊರ್ದಲ್ ಮದನನುದ್ಯತನಾದಂ=ಮನ್ಮಥನು ಸೇರಲು ಸಿದ್ಧನಾದನು. ತನುವಾದುದು=ಕೃಶವಾಯಿತು,

ಚಂದ್ರಾಪೀಡನ ಜೈತ್ರಯಾತ್ರೆ

ವ॥ ಉಪಾರೂಢ=ಉತ್ಪನ್ನವಾದ, >ಅಭಿವೃದ್ಧಿ ಹೊಂದಿದ, ನಿಕೇತನ=ಮನೆ>ಮಂದಿರ, ದೌವಾರಿಕ=ಬಾಗಿಲು ಕಾಯುವವನು,

೧. ತಾಯ್ವಿರ್=ತಾಯಂದಿರು (ಅಂತಃಪುರ ಸ್ತ್ರೀಯರು) ನಿರಿಕ್ಷಿಸ....ಳಾದಪರ್=ನೋಡುವುದಕ್ಕೆ ಅಪೇಕ್ಷೆಯುಳ್ಳವರಾಗಿದ್ದಾರೆ, ಪರ್ವ=ಹಬ್ಬ,

೨. ಅನಿಲಗರುಡಜವಂ=ವಾಯು ಮತ್ತು ಗರುಡನ ವೇಗವುಳ್ಳದ್ದು. ಅಯೋನಿಸಂಭವಂ=ಸ್ತ್ರೀ ಸಂಬಂಧವಿಲ್ಲದೆ ಹುಟ್ಟಿದುದು, ಒಲ್ಪೈಸಿದಂ=ಒಪ್ಪಿಸಿದನು.

ವ॥ ಕೋವಿದ=ವಿದ್ವಾಂಸ>ಪಂಡಿತ, ಪ್ರಣಾಮಲಾಲಸರ್=ನಮಸ್ಕಾರ ಮಾಡುವುದರಲ್ಲಿ ಆಸಕ್ತರಾದವರು, ಪಾರ್ದಿರ್ಪರ್=ಕಾದಿದ್ದಾರೆ (ಎದುರು ನೋಡುತ್ತಿದ್ದಾರೆ) ಅಭಿನವ .. ಧ್ವಾನ=ಹೊಸ ಗುಡುಗಿನ ಶಬ್ದ, ಕಟಕ=ಕಾಲು ಬಳೆ (ಕಾಲ್ಕಡಗ) ಖಲೀನ=ಕಡಿವಾಣ, ಕೀಲಿನೇಣ್=ಕಡಿವಾಣದ ಹಗ್ಗ, ಮಹೋ....ಪ್ರಮಾಣಂ=ಬಹು ದೊಡ್ಡ ಅಳತೆಯ ದೇಹವನ್ನುಳ್ಳ, ಪಾಱ=ಮೇಲಕ್ಕೆ ಹಾರಿ, ಖುರ....ರಜಂ=ಗೊರಸಿನ ಬಡಿತದಿಂದ ಎದ್ದ ಭೂಮಿಯ ಧೂಳು,

೫. ಘೋಣವಿವರ=ಕುದುರೆಯ ಮೂಗಿನ ಹೊಳ್ಳೆ, ಕಿಳಿರಬ್ಬರದಿಂ=ಹೇಷಾರವದ ಆರ್ಭಟದಿಂದ, ತರ್ಜಿಪೋಲ್=ಬೆದರಿಸುವ ಹಾಗೆ,

೬. ಪಕ್ಕರೆ=ಪಕ್ಷರಕ್ಕೆ>ಮೇಲು ಹೊದಿಕೆ>ಜೀನು, ಕರಿಕಳಭ=ಆನೆಯ ಮರಿ,

೭. ಅಮರ್ದಿನಮುಕ್ಕುಳ್=ಅಮೃತವನ್ನು ಉಗುಳುವುದು. ಖಲೀನ....ಜಲ=ಕಡಿವಾಣದಿಂದ ಜಗುಳುತ್ತಿದ್ದ ಜೊಲ್ಲು,

೮. ಮೌಕ್ತಿಕಪ್ರಕರ=ಮುತ್ತಿನ ರಾಶಿ, ಕಡುಪು=(ಕ್ರೌರ್ಯ) ವೇಗ, ಹರಿ=ಕುದುರೆ.

೯. ನೇರ್ಪನಾಳ್ದಂತೆ=ಅಂದವನ್ನು ಪಡೆದಂತೆ, ಅಗಲಿತಾದಂತೆ=ವಿಸ್ತಾರವಾದ ಹಾಗೆ, ನೂಲ್ವಿಡಿದೆತ್ತೆಂಬಂತೆ=ಸೂತ್ರ ಹಿಡಿದು ಸಮಮಾಡಿದ ಹಾಗೆ, ಪಾಶ್ಚಾತ್ಯದೆ=ಹಿಂಭಾಗದಿಂದ, ಸವಡಿಸಿತೆಂಬಂತೆ=ದ್ವಿಗುಣಿತವಾದಂತೆ, ಉದ್ರಿಗ್ರೀವದಿಂ=ಎತ್ತರವಾದ

ಕತ್ತಿನಿಂದ, ಪರ್ವುಗೆವೆತ್ತಂತೆ=ವಿಸ್ತೀರ್ಣವನ್ನು ಪಡೆದ ಹಾಗೆ, ಪಸರಿಪ್ಪಂತೆ=ಪ್ರಸರಿಸುವ ಹಾಗೆ,

೧೦. ಆ ಇಂದ್ರಂ ಪದಪಿಂ ಉಚ್ಚೈಶ್ರವಮನೇ ಪಿರಿದುಂ ಎಂದುಂ ನೋಡುತ್ತಮಿರ್ಕೆ=ಆ ಇಂದ್ರನ ಆ ಉಚ್ಚೈಶ್ರವವನ್ನೇ ಬಲು ದೊಡ್ಡದೆಂದು ತಿಳಿದುಕೊಂಡು ನೋಡುತ್ತಿರಲಿ ಎಂದು, ಇಂದ್ರಚಾಪ....ಭಾಸುರಂ=ಕಾಮನ ಬಿಲ್ಲಿನ ಕಾಂತಿಯಷ್ಟು ಕಾಂತಿಯುಳ್ಳದ್ದು, ಉಲ್ಲೋಲ=ದೊಡ್ಡ ಅಲೆ, ಜನಪಂಗೆ=ತಂದೆಯಾದ ತಾರಾಪೀಡನಿಗೆ, ವಿಸ್ಮಯಮೊದವುವಿನಂ=ಆಶ್ಚರ್ಯವುಂಟಾಗುತ್ತಿರಲು.

೧೧. ಅಜಿತಂ=ವಿಷ್ಣು, ಈಹರಿಯಂ....ದಿರ್ಕುಮೆ=ಆ ವಿಷ್ಣುವೂ ಈ ಕುದುರೆಯನ್ನು ತಿಳಿಯದೇ ಇದ್ದಿರಬಹುದು.

೧೨. ಭುವನತ್ರಯ ದುರ್ಲಭಂ=ಮೂರು ಲೋಕಗಳಲ್ಲೂ ಸಿಕ್ಕದಿರುವುದು, ಭುವನದೊಳಿಂತಕ್ಕುಮೆ=ಲೋಕದಲ್ಲಿ ಹೀಗುಂಟೆ, ವಿಭವಕ್ಕಂ+ಇದಗ್ಗಳಂ.

೧೩. ಮಹಾಪ್ರಾಣತೆ=ದೊಡ್ಡ ಆಕಾರ, ಒದವಿದ=ಉಂಟಾದ, ದೇವತಾತ್ಮ =ದೇವತಾಸ್ವರೂಪಿ.

ವ|| ರೂಪಿಂದಚ್ಚರಿಯಪ್ಪ=ಆಶ್ಚರ್ಯಕರವಾದ ರೂಪಿನಿಂದ ಕೂಡಿ ಅಪ್ಸರೆಯಾದ, ಗೋಳಿಗೆ=(ಘೋಟಿಕಾ) ಹೆಣ್ಣು ಕುದುರೆ, ಪರಿಹೃತಪ್ರಭಾವರ್=ಪ್ರಭಾವವನ್ನುಳಿದವರು, ಕೇಳ್ದುದಿಲ್ಲಕ್ಕುಮೋ=ಕೇಳಿಲ್ಲವೆ?

೧೪. ಉದಿತಾರ್ಕಪ್ರಭಂ=ಬಾಲ ಸೂರ್ಯನ ತೇಜಸ್ಸನ್ನುಳ್ಳವನು.

೧೫. ಆಮಂತ್ರಣಂಗೆಯ್ವುದುಂ=ಕರೆಯಲಾಗಿ, ಕೇಕರಾಲೋಕ=ಕಡೆಗಣ್ಣಿನ ನೋಟ. ದಕ್ಷಿಣಖುರ=ಬಲಗಾಲಿನ ಗೊರಸು, ಬೆರಂಟಿತ್ತು=ಕೆರೆಯಿತು.

೧೬. ದತ್ತಾಭ್ಯನುಜ್ಞಾತನಾದಂತೆ=ಕೊಡಲ್ಪಟ್ಟ ಅನುಜ್ಞೆಯನುಳ್ಳವನ ಹಾಗೆ.

ವ|| ಪ್ರಾದೇಶಮಾತ್ರಂ=ಚೋಟಿನಷ್ಟು ಉದ್ದವುಳ್ಳದ್ದು (ಹೆಬ್ಬೆಟ್ಟಿನ ತುದಿಯಿಂದ ತೋರು ಬೆರಳಿನ ತುದಿಯವರೆಗಿನ ಉದ್ದ)

೧೭. ಪಳಂಚಿ=ತಗಲಿ, ಇಟುಸಿ=ತಿರಸ್ಕರಿಸಿ

೧೮. ಫೇನ....ಸೈನ್ಯ=ನೊರೆಯ ಸಮೂಹದಿಂದ ಬಿಳುಪಾಗಿಸಲ್ಪಟ್ಟ ಕುದುರೆಯ ಗುಂಪಿನಿಂದ ಕೂಡಿದ ಸೈನ್ಯ,

ವ|| ಅಹಮಹಮಿಕೆ=ನಾನು ಮುಂದು ತಾನು ಮುಂದು ಎಂಬ ಭಾವನೆ.

೧೯. ಕೆನ್ನಿಱಿಮುಗಿಲೊಳ್=ಕೆಂಪಾದ ಪದರ ಪದರವಾದ ಮೋಡದಲ್ಲಿ,

೨೦. ಇದು ಶ್ವೇತಚ್ಛತ್ರಿಯ ವರ್ಣನೆ. ಉತ್ಪ್ರೇಕ್ಷಾಲಂಕಾರ. ಇದು ಮನೋಹರವಾದ ಲಕ್ಷ್ಮೀನಿವಾಸವಾದ ಕಮಲೋದಯವೊ, ರಾಜರುಗಳ ದೃಷ್ಟಿಕುಮುದವಿಕಾಸನೆಂಬ ಚಂದ್ರಬಿಂಬೋದಯವೋ ಭೂಭಾರವನ್ನು ಧರಿಸಿರುವ ಆದಿಶೇಷನ ಹೆಡೆಗಳ ಸಮೂಹವೋ ಎಂಬಂತೆ ಬಿಳಿಯ ಕೊಡೆ ಹಿಡಿಯಲ್ಪಟ್ಟಿತು. ಮಣಿಮಯದಭ್ರ ಶುಭ್ರಾತಪತ್ರಂ=ರತ್ನ ಖಚಿತವಾದ ಆಕಾಶದ ಬಿಳಿಯ ಮೋಡದಷ್ಟು ಶುಭ್ರವಾದ ಕೊಡೆ.

೨೧. ಸಿತಾತಪತ್ರಂ=ಶ್ವೇತಛತ್ರಿ,

೨೨. ಚಮರೀಜಕಾಂತೆಯರ್=ಚಾಮರವನ್ನು ಬೀಸುವ ಸ್ತ್ರೀಯರು, ಲಾವಣ್ಯ ರಸದೊಳ್=ಲಾವಣ್ಯ (ಮೈಹೊಳಪು)ವೆಂಬ ನೀರಿನಲ್ಲಿ

ವ॥ ಪಜಿ=ದಮಟೆ, ಪದಿರಪಜಿ=ವಿವಿಧ ಶಬ್ದಗಳನ್ನುಂಟುಮಾಡುವ ಚರ್ಮವಾದ್ಯ. ಸನ್ನೆಗಾಳೆ=ಸಂಜ್ಞಾ ಕಹಳೆ

೨೪. ನಾನಾಕ್ಷ್ಮಾಧರ ಕ್ಷೋಭಮುಣ್ಮಿದ ರತ್ನಾಕರ ಲಕ್ಷ್ಮಿವೋಲ್=ಅನೇಕ ಪರ್ವತಗಳಿಂದ ಕಲಕಲ್ಪಟ್ಟ ಸಮುದ್ರ ಕಾಂತಿಯ ಹಾಗೆ

೨೫. ಶರದಭ್ರ=ಶರತ್ಕಾಲದ ಮೋಡ, ಉದ್ಗತ.... ಚಲದಿಂ=ನಾನಾ ಬಾವುಟ ಗಳ ಬಟ್ಟೆಯ ಅಂಚುಗಳ ಸಮೂಹದಿಂದ, ಶೋಣೋಪಲರುಚಿ=ಕೆಂಪುಕಲ್ಲಿನ ಕಾಂತಿ,

ವ॥ ಕಮನೀಯ=ಮನೋಹರವಾದ,

೨೬. ಹಾರಾಂಶ=ಹಾರದ ಕಾಂತಿ, ಅಂಶುಕ=ಬಟ್ಟೆ,

ವ॥ ಅಸಮಾಪ್ತಪ್ರಸಾಧನೆಯರ್=ಆಭರಣದ ಅಲಂಕಾರ ಇನ್ನೂ ಮುಗಿಯ ದಿರುವವರು.

೨೭. ಉಡೆ=ಸೀರೆ, ನೂಲ್=ಒಡ್ಯಾಣ. ಪರೆಯಲ್=ಹರಡಿ ಕೊಳ್ಳಲು, ಅಕ್ಷಾವಳಿ=ಜಪಮಾಲಿಕೆ, ತುರಿಪ=ಜಾಗ್ರತೆ,

೨೮. ಎರ್ದೆಡವಕೆಯಂ+ಬಾಜಿಸು = ಡವಕೆವಾಜಿಸು = ಎದೆಯೆಂಬ ಡವಕೆ ವಾದ್ಯವನ್ನು ಬಾಜಿಸು, ಭಂಗಂಬೆತ್ತು=ವ್ಯತ್ಯಸ್ತವಾಗಿ.

೨೯. ಮುಂದಿನ ಭಾಗವು ರಗಳೆಯ ಛಂದಸ್ಸಿಗೆ ಸೇರಿದುದು-ಪಾದಸಂಖ್ಯಾ ನಿಯಮವಿಲ್ಲದುದಕ್ಕೆ ರಗಳೆಯೆಂದು ಹೆಸರು. ಇದು ಮಾತ್ರ ಛಂದಸ್ಸು, ಇದರಲ್ಲಿ ಮೂರು ಭೇಧಗಳಿವೆ. ಉತ್ಸಾಹ, ಮಂದಾನಿಲ, ಲಲಿತ ಎಂಬುದೇ ಅವು. ಇವುಗಳಲ್ಲಿ ಒಂದೊಂದು ಸಾಲಿನಲ್ಲಿಯೂ ಕ್ರಮವಾಗಿ, ೩, ೪, ೫ ಮಾತ್ರೆಗಳ ನಾಲ್ಕು ಗಣಗಳಿರು ತ್ತವೆ. ಪ್ರಸಕ್ತಭಾಗದ ಒಂದೊಂದು ಪಂಕ್ತಿಯಲ್ಲಿಯೂ ನಾಲ್ಕು ಮಾತ್ರೆಯ ನಾಲ್ಕು ಗಣ ಗಳಿರುತ್ತವೆ. ಸಾಮಾನ್ಯವಾಗಿ ಎರಡೆರಡು ಸಾಲಿಗೆ ಅಂತ್ಯಾಕ್ಷರ ಪ್ರಾಸವಿರುತ್ತದೆ.

ಪಾರ್=ನಿರೀಕ್ಷಿಸು, ಸಾವಗಿಸು=ಸರಿಪಡಿಸು, ಕಾಂಚೀದಾಮ=ನಡು ಕಟ್ಟು, ಸಿಚಯಂ=ಮೇಲು ಹೊದಿಕೆ. ದಶನಪ್ರಭೆ=ಹಲ್ಲಿನ ಕಾಂತಿ, ರಮ್ಯ=ರಮ್ಯ ವಸುಂಧರೆ=ಭೂಮಿ (ಚಿನ್ನವನ್ನು ಧರಿಸಿರುವುದು), ಅಭ್ಯಸೂಯ=ಇತರರ ಗುಣವೃದ್ಧಿ ಯಲ್ಲಿ ದೋಷವನ್ನು ಎಣಿಸುವ ಬುದ್ಧಿ, ಈರ್ಷ್ಯೆ=ಅಸಹನೆ, ಸ್ಪೃಹೆ=ಸ್ನೇಹ, ರಸಾನು ಮೇಯ=ಊಹಿಸಲ್ಪಟ್ಟ ರಸಗಳನ್ನುಳ್ಳ, ಆಳಾಪ ಕಳಾಪ=ಮಾತಿನ ಗುಂಪು,

೩೦. ಈಕ್ಷಣೋತ್ಕರಪುಟ=ದೃಷ್ಟಿ ಸಂಪುಟ,

೩೧. ಮಣಿದರ್ಪಣ=ರತ್ನಗನ್ನಡಿ, ಅಂಜನ....ರಂಜಿತ=ನೀಲ ಪರ್ವತಗಳ ಸಾಲನ್ನೇ ಮಲಿನಗೊಳಿಸುವ ಆನೆಗಳ ಸಮೂಹಗಳಿಂದ ಮನೋಹರವಾಗಿರುವ. ನಿಕ್ಷಿಪ್ತ ಪ್ರಕೋಷ್ಠಂ=ಇಡಲ್ಪಟ್ಟ ಮುಂಗಯ್ಯುಳ್ಳವನು, ಉಪದಿಶ್ಯಮಾನಮಾರ್ಗಂ=ತೋರಿಸ

ಲ್ಪಟ್ಟ ದಾರಿಯುಳ್ಳವನು. ಕಕ್ಷ್ಯ=ಹಂತ, ಭಾಗ, ತೊಟ್ಟಿ,

೩೨. ವಾತಾಯನ=ಕಿಟಕಿ, ಗವಾಕ್ಷ, ಕರುಮಾಡ=ಉಪ್ಪರಿಗೆಯಮನೆ, ಬಳ್ಳಿಮಾಡ=ಸಣ್ಣ ಸಣ್ಣ ಉಪ್ಪರಿಗೆಯ ಮನೆ.

೩೪. ಪುಗುತಂದಂ=ಪ್ರವೇಶ ಮಾಡಿದನು,

೩೫. ಸಂವೀಜನ=ಚೆನ್ನಾಗಿ ಬೀಸುವಿಕೆ–ಸ್ತ್ರೀಯರು ಬೀಸುತ್ತಿದ್ದ ಚಾಮರಗಳ ಸಮೂಹದಿಂದ ಪ್ರಕಾಶಮಾನವಾದವನೂ, ಶ್ರೇಷ್ಠವಾದ ಹಂಸದಷ್ಟು ಉಜ್ವಲವಾದ ನವಿರಾದ ಮಗ್ಗುಲು ಹಾಸಿಗೆಯಿಂದ ಆವೃತವಾದ ಹಾಸಿಗೆಯಿಂದ ಅಲಂಕೃತನಾದವನೂ ಚಂಚಲವಾದ ಅಲೆಗಳಿಂದ ಕೂಡಿದ ದೇವಗಂಗಾನದಿಯಲ್ಲಿ ಐರಾವತವು ನೀರಾಟವಾಡುತ್ತಿರುವ ಹಾಗಿರುವವನೂ ವಿಶೇಷ ಬಾಹುಬಲದಿಂದ ಭರಿತವಾದ ರಾಜ ಸಮೂಹದಿಂದ ಸುತ್ತುವರಿಯಲ್ಪಟ್ಟವನೂ ಆದ ಚಕ್ರವರ್ತಿಯು ವಿಶೇಷ ಆಕರ್ಷಕವಾಗಿದ್ದನು.

ವ || ಅವನಿತಲನಿಹಿತ ಚೂಡಾಮಣಿಯಾಗಿ=ನೆಲದಲ್ಲಿ ತಲೆಯನ್ನೂರಿ

೩೬. ರೋಮೋದ್ಗಮ=ರೋಮಾಂಚ, ತಳ್ಕೈಸು=ಆಲಿಂಗನಮಾಡು, ಅಪ್ಪಿಕೊಳ್ಳು, ತಾತಪಾದಾಂಬುರುಹಕ್ಕಾನಮ್ರನಾದಂ = ತಂದೆಯ ಪಾದಕಮಲೆಗಳಿಗೆ ನಮಸ್ಕಾರ ಮಾಡಿದನು.

ವ || ಪ್ರಸಾದಿತಾಂಬರಾಂಚಲ=ಹರಡಿದ ಬಟ್ಟೆಯ ಕೊನೆ, ಪಟವಾಸ = ಕಿರುವಂಗಿ ಅಥವಾ ಸುಗಂಧದಪುಡಿ, ತಾಳವೃಂತ=ಬೀಸಣಿಗೆ, ಭೃಂಗಾರು=ಒಂದು ರೀತಿಯ ಚಿನ್ನದ ಬಟ್ಟಲು, ಭರಣಿ, ಪರಿವ್ರಾಜಕ=ಸಂನ್ಯಾಸಿ, ಉಪಾಸ್ಯಮಾನೆ=ಸೇವಿಸಲ್ಪಡುವವಳು.

೪೦. ವ || ಗೆಂಟು=ಸಮೀಪ, ದೂರ ಎಂಬ ಎರಡರ್ಥವೂ ಉಂಟು.

೪೧. ನಲವರಕೆ=ಪ್ರೀತಿ, ವಧೂಜನದೊಡಗೂಡಿ=ವಿವಾಹಿತರಾಗಿ, ಮದುವೆಯಾಗಿ, ಆರೆ=ತೃಪ್ತಿಯಾಗುವವರೆಗೆ.

೪೪. ವ || ಆಬದ್ಧ....ರಂಜಿತಮುಮಂ = ಕಟ್ಟಲ್ಪಟ್ಟ ಚಂದನಮಾಲೆಗಳಿಂದ ರಂಜಿತವಾಗಿರುವುದೂ, ಉದ್ಗತ....ಸಂಕುಳಮುಮಂ = ಎತ್ತಿ ಕಟ್ಟದ ಸಾವಿರಾರು ಬಿಳಿಯ ಬಾವುಟಗಳ ಸಮೂಹವನ್ನುಳ್ಳದೂ, ಅಭ್ಯಾಹತ....ಪೂರಿತಮುಂ=ಬಾಜಿಸಲ್ಪಟ್ಟ ಮಂಗಳವಾದ್ಯ ಧ್ವನಿಗಳಿಂದ ತುಂಬಿದುದೂ, ಮಾಡಲ್ಪಟ್ಟ ಸಮಸ್ತ ಗೃಹಪ್ರವೇಶ ಕರ್ಮವನ್ನುಳ್ಳದೂ, ಆದ ತನ್ನ ಮನೆಯನ್ನು, ನರೇಂದ್ರಚಕ್ರ=ರಾಜಮಂಡಲ, ತೀರ್ಚಿ=ಮುಗಿಸಿ.

೪೫. ಕೈಸಾರ್ದುದು=ಅಧೀನವಾಯಿತು. ಶಯ್ಯಾಭವನ=ಮಲಗುವ ಮನೆ.

ವ || ತುರಂಗ ರತ್ನ=ಶ್ರೇಷ್ಠವಾದ ಕುದುರೆ.

೪೬. ದಿನಲಕ್ಷ್ಮೀಕಾಂತೆ=ದಿವಸಲಕ್ಷ್ಮಿಯು, ಗಹನರಂಗ=ಆಕಾಶಪ್ರದೇಶ, ವಾರುಣೀಸೇವೆಗೆ = ವರುಣ (ಪಶ್ಚಿಮ) ದಿಕ್ಕನ್ನು ಸೇರುವುದಕ್ಕೆ, ಮದ್ಯಪಾನಕ್ಕೆ, ಮಂಜೀರಕ=ಕಾಲಂದಿಗೆ, ನಿಜಪ್ರದ್ಯೋತದಿಂ ತೀವಿ=ತನ್ನ ಕಾಂತಿಯಿಂದ (ಮಧ್ಯಭಾಗ

ವನ್ನು) ತುಂಬಿ, ಇನಬಿಂಬಂ=ಸೂರ್ಯಬಿಂಬಂ, ಮುಕ್ತ ಪಾದಾವಲಂಬಂ = ಸೂರ್ಯನ ಕಿರಣ (ಪಾದ)ದ ಆಶ್ರಯವನ್ನು ಬಿಟ್ಟಿದ್ದಂಥ (ಕಾಂತಿಹೀನವಾದ)

೪೭. ರಾಗರುಚಿರದಿವಸಾಲೋಕಂ = ಸಂಧ್ಯಾರಾಗದಿಂದ ಮನೋಹರವಾದ ಹಗಲಿನ ಪ್ರಕಾಶ.

೪೮. ಕಾಲಪಾಶ = ಯಮನ ಹಗ್ಗ, ರಥಾಂಗ = ಚಕ್ರವಾಕ, ವಿಹ್ವಲಿತ= ದುಃಖಿತವಾದ.

೪೯. ಕರಪುಟ=ಕಿರಣಗಳೆಂಬ ಬೊಗಸೆ, ಮುಗುಳ್ಚು=ವಾಂತಿಮಾಡು,

೫೧. ಇನಿಯನ್ + ಎನಿಪ + ಇನಂ, ಅಗಲಲುಂ=ಅಗಲಿದೊಡನೆಯೆ, ಅನಿತ ಱೊಳಂ=ಅಷ್ಟರಲ್ಲಿಯೆ, ಮಧುಕರ=ದುಂಬಿ, ಗಾವಿಲ=ಮೂಢ, ಬುದ್ಧಿ ಹೀನ,

ವ|| ಪಂಕಿಲತೆ=ಕೆಸರು, ಒಳ್ಪಿತು+ಆರ=ಒಳ್ಳೆಯ ಹಾರ, ಇಲ್ಲಿ ಗುಣವಾಚಕದ ಉಪಾಂತ್ಯಸ್ವರದೊಡನೆ ಅಂತ್ಯಾಕ್ಷರಕ್ಕೆ ಲೋಪ, ಶ.ದ. ಸೂ ೧೭೭ ನೋಡು, ರವಿ.... ಗಳಂತೆ = ಸೂರ್ಯನ ವಿರಹದಿಂದ ದುಃಖಿತವಾದ ಕಮಲನಿಯ ವಿನೋದಕ್ಕೋಸ್ಕರ ಬಂದಿರುವ ಬಾಲಸೂರ್ಯನಂತೆ, ದೀರ್ಘಿಕೆ=ಕೊಳ, ಯಾಮಿಕ=ಸರದಿಯ ಕಾವಲುಗಾರ, ದೀಪಿಕಾಲೋಕ=ದೀಪಗಳ ಕಾಂತಿ.

೫೨. ಉತ್ಕಂಠನಾಗಿ ತಲೆದೋರ್ಪ=ತಲೆಯನ್ನು ಎತ್ತಿಕೊಂಡು ಕಾಣುತ್ತಿರುವ

೫೩. ಆಗಿದು=ಹೆದರಿ, ಕಾಂಚನಾ....ವಿಸ್ತಾರವಂ=ಚಿನ್ನದ ಗಣಿಯ ಧೂಳನ್ನು ಹರಡುವ ಹಾಗೆ.

೫೪. ರಣತ್=ಶಬ್ದಮಾಡುತ್ತಿರುವ, ಕೂಜತ್=ಶಬ್ದಮಾಡುತ್ತಿರುವ, ಕೂಗುತ್ತಿರುವ.

೫೫. ಅಸಿಯುಗುರ್ಗಳ್ = ತೆಳುವಾದ ಉಗುರುಗಳು, ಅಗ್ಗಲಿಸುವ = ಹೆಚ್ಚು ತ್ತಿರುವ.

೫೭. ಪೆಱಗೆ=ಹಿಂಭಾಗದಲ್ಲಿ.

೫೮. ಅಲ್ಕಱಿಂ ನಡಪಿದಳ್=ಪ್ರೀತಿಯಿಂದ ಸಾಕಿದಳು.

೫೯. ಪರಮರಹಸ್ಯ ಭೂಮಿ=ವಿಶೇಷವಾದ ರಹಸ್ಯಕ್ಕೆ ಪಾತ್ರಳು-ನಂಬಿಕೆಗೆ ಅರ್ಹಳು.

೬೦. ಪರಿಜನ ಸಾಮಾನ್ಯದೆ ಪರೀಕ್ಷಿಸಲ್ವೇಡ=ಸಾಮಾನ್ಯ ಪರಿಜನರಂತೆ ಇವ ಳನ್ನು ಗಣಿಸಬೇಡ—ಪರೀಕ್ಷಿಸಬೇಡ,

ವ|| ವಿಸ್ಮಯಾಕ್ಷಿಪ್ತ ಚಿತ್ತ = ಆಶ್ಚರ್ಯದಿಂದ ಕೂಡಿದ ಮನಸ್ಸು, ಅಭಿನವ ಸಮುಪಜಾತ ಸೇವಾರಸದಿ=ಹೊಸದಾಗಿ ಉಂಟಾದ ಸೇವಾರಸದಿಂದ,

೬೧. ಯುವರಾಜಪಟ್ಟ ಬಂಧೋತ್ಸವ=ಯುವರಾಜ ಪಟ್ಟಾಭಿಷೇಕ,

ವ|| ಗೃಹ ಮಹತ್ತರ=ಮನೆವಾಳ್ತಿಯ ಯಜಮಾನ, ಸಮಕಟ್ಟು=ಸಿದ್ಧಪ ಡಿಸು.

೬೨. ವಿನಯಾರ್ಣವ=ವಿನಯಸಮುದ್ರ, ವಿಶದದಶನದ್ಯುತಿ=ವಿಸ್ತಾರವಾದ ಹಲ್ಲಿನಕಾಂತಿ,

ವ|| ವಿದಿತವೇದಿತವ್ಯ=ತಿಳಿಯಬೇಕಾದುದನ್ನು ತಿಳಿದವನು, ಅಧೀತ=ಸಕಲ ಶಾಸ್ತ್ರ=ಸಕಲ ಶಾಸ್ತ್ರಗಳನ್ನು ತಿಳಿದುಕೊಂಡಿರುವವನು.

೬೩. ಎಗೆಯ್ದುಂ=ಏನು ಮಾಡಿಯೂ, ಮಾಯ್ದ=ಮತ್ತವಾದ, ಕೆಟ್ಟ, ಇಡಿದತಮಂ=ತುಂಬಿರುವ ಕತ್ತಲೆ. ದಲ್=ಅಲ್ಲವೆ.

೬೪. ಸಿರಿಯೆಂಬ ಸೊರ್ಕು=ಐಶ್ವರ್ಯವೆಂಬ ಅಹಂಕಾರವು, ಪರಿಣಾಮದಿ=ಕೊನೆಯಲ್ಲಿ, ಮುಪ್ಪಿನಲ್ಲಿ, ಅಂಜನಂಗಳಿಂ=ಯಾವ ಲೇಪನದಿಂದಲೂ, ಎಂತುಂ ಪರಿಹರಿಸಲರಿದೆನಿಪ್ಪುದು=ಹೇಗೂ ಪರಿಹಾರ ಮಾಡುವುದಕ್ಕಾಗುವುದಿಲ್ಲವೆನಿಸಿಕೊಳ್ಳುತ್ತದೆ. ಅಪರಂ+ಐಶ್ವರ್ಯಪ್ರಭೂತ ತಿಮಿರಾಂಧತ್ವಂ=ಮತ್ತೊಂದಾದ ಐಶ್ವರ್ಯ ಜನಿತವಾದ ಅಜ್ಞಾನವೆಂಬ ಕುರುಡುತನವು. (ಅಜ್ಞಾನಾಂಧಕಾರ)

೬೫. ತೀವ್ರಮಪ್ಪ ದಾಹಜ್ವರಂ ಶಿಶಿರೋಪಚಾರದಿಂ ವಶಮಲ್ಲದು-ಅವಿನಯನಿಯತಂ ಇಂದ್ರಿಯದಿಶಾಗಜಪ್ರಕರಂ ಎಂದುಂ ಅಂಕುಶಸಾಧ್ಯಮಲ್ಲದು.

೬೬. ವಿಷಮವಿಷಂಗಳ್ಗಂ=ಕಠಿನವಾದ ವಿಷಗಳಿಗೂ, ಪ್ರತಿವಿಷಮೆನಿಸುವ=ಪರಿಹಾರಕ ವಿಷವೆನಿಸುವ, ಮಂತ್ರನಿಚಯದೊಳಂ=ಮಂತ್ರ ಸಮೂಹದಿಂದಲೂ, ಇಂತು=ಇಂತಹ ವಿಷಯ ವಿಷಾಸ್ವಾದ ಮೋಹಮಂ-ಮಾಣಿಸಲ್=ಹೋಗಲಾಡಿಸುವುದಕ್ಕೆ, ನಿರ್ವಿಷಯಂ=ಪ್ರಕ್ಷುಂದನಾದಿ ವಿಷಯಾನುಭವವಿಲ್ಲದೆ, ಎಂದುಂ=ಯಾವಾಗಲೂ, ಆರ್ಗಂ=ಯಾರಿಗಾಗಲಿ, ವಿಷಯಮೆ=ಸಾಧ್ಯವೆ?

೬೭. ಅರಸಾಗಲೊಡಂ=ದೊರೆತನ ಬಂದ ಕೂಡಲೆ, ರಾಜ್ಯ.... ನಿದ್ರೆಯಂ=ರಾಜ್ಯಸುಖವೆಂಬುದೇ ಒಂದು ಸನ್ನಿಪಾತ-ಅದರಿಂದುಟಾದ ನಿದ್ರೆ, ಮರವಟ್ಟು=ಸ್ತಬ್ಧರಾಗಿ (ಎಲ್ಲವನ್ನೂ ಮರೆತವರಾಗಿ), ಎಚ್ಚಱುವರಲ್ಲ=ಜಾಗರೂಕರಾಗಿರುವುದಿಲ್ಲ.

೬೮. ಉಪಾರ್ಜಿಸಿಟ್ಟ=ಸಂಪಾದಿಸಿ ಮಡಗಿರುವ, ಪೆಱಂಗೆ+ಇದು+ಇಲ್ಲ ಎನಿಪ್ಪ=ಇತರರಿಗೆ ಇದು ಇಲ್ಲ>(ನನಗೇ ವಿಶೇಷವಾಗಿರುವುದು), ಹಾನಿಯ ಬಳ್ಳಿವಳ್ಳಿ=ಕೇಡಿನ ಪರಂಪರೆ, ಉಳ್ಳವಿನೀತಿಗೆಲ್ಲಂ+ಇದಾಯತನಂ=ಇರುವ ಎಲ್ಲ ದುರ್ನೀತಿಗಳಿಗೂ ಇದು ಮನೆ=ಆವಾಸಸ್ಥಳ.

೬೯. ತನ್ನಿಚ್ಛೆಗೆ=ತನ್ನ ಇಷ್ಟಾನುಸಾರ, ಪ್ರಕೃತಿ=ಸಹಜ ಸ್ವರೂಪ, ರಜಂ ಬೊರೆದು=ರಜೋಗುಣವನ್ನುಂಟುಮಾಡಿ>ದುರ್ಗುಣವನ್ನು ತುಂಬಿ, ಸುಟ್ಟುರೆತೆರಳ್ಚಿ=ಸುಂಟರು ಗಾಳಿಯಂತೆ ತಿರುಗಿಸಿ

೭೦. ಕಷಾಯಿತಾಸ್ಯಂ=ದೋಷಯುಕ್ತವಾದ ಬಾಯುಳ್ಳವನು, ಕಷಾಯಿತಾತ್ಮ=ದೋಷದಿಂದ ಕೂಡಿದ ಸ್ವಭಾವವುಳ್ಳವನು.

೭೧. ಮೆಯ್ದೆಗೆಯಲ್ಕೆ ಬಾರದಂತೆ=ಹಿಂಜರಿಯುವುದಕ್ಕೆ>ದೂರವಿರುವುದಕ್ಕೆ ಆಗದವು, ತೆಗೆದು=ಸೆಳೆದುಕೊಂಡು ಹೋಗಿ

೭೨. ಎಱಗಿ=ಪ್ರವರ್ತಿಸಿ, ಬಿಡದಂತೆ ಪತ್ತುವ ಮಱುಕಂ=ಬಿಡದಂತೆ ಅಂಟಿಕೊಂಡಿರುವ ಮೋಹವು, ದಿಙ್ಮೋಹದಂದದಿಂ=ದಿಗ್ಭ್ರಮೆಯ ಹಾಗೆ, ದೆಸೆಗೆಡಿಸದಿರದು=ಗತಿಗೆಡಸದೆ ಇರುವುದಿಲ್ಲ.

ವ॥ ನಿನ್ನೊಂದಿಗರೆ ಭಾಜನರಪ್ಪರ್=ನಿನ್ನಂತವರು ಭಾಗಿಗಳಾಗುತ್ತಾರೆ.

೭೩. ವಿಲಸತ್+ಶಿಷ್ಟೋಪದೇಶ ಗುಣನಿವಹಂಗಳ್ = ಪ್ರಕಾಶಮಾನವಾದ ಸತ್ಪುರುಷರಿಂದ ಉಪದೇಶಿಸಲ್ಪಡುವ ಗುಣಸಮೂಹಗಳು.

೭೪. ಅಚ್ಛಸಲಿಲ = ನಿರ್ಮಲ (ಶುದ್ಧ) ವಾದ ನೀರು, ಭವ್ಯೇತರನಪ್ಪನ=ಭವ್ಯಸಲ್ಲದವನ>ಯೋಗ್ಯನಲ್ಲದವನ>ನೀಚನಾದವನ, ಕರ್ಣಶೂಲೆ=ಕಿವಿಯ ಬೇನೆ.

೭೫. ಅನ್ವಯ=ವಂಶ, ಕುಲ, ಶ್ರುತ=ವಿದ್ಯೆ, ಅಂತುಟೆವಲಂ=ಹಾಗೆಯೇ ಸರಿ. ಶಿಶಿರೈಕ ನಿಧಾನಂ=ತಂಪಿಗೆ ಮುಖ್ಯ ಆವಾಸಸ್ಥಾನ, ತತ್ಪ್ರಶಮ+ಏಕಕಾರಣಂ=ಅದನ್ನೂ (ಬಡಬಾನಲನನ್ನು) ಆರಿಸುವುದಕ್ಕಿರುವ ಒಂದೇ ಸಾಧನ, ವನನಿಧಿ=ಸಮುದ್ರ, ಉರಿಯದಿರ್ಪುದೇ=ಸುಡದೆ ಇರುತ್ತದೆಯೇ ?

೭೬. ಮಾರ್ದನಿ = ಪ್ರತಿಧ್ವನಿ, ಅನುವದಿಸಿ = ಅನುಗುಣವಾಗಿ (ಹೊಂದಿಕೊಂಡು) ಮಾತನಾಡಿ, ಮಾರ್ಕೊಂಡು = ಪ್ರತಿಭಟಿಸಿ, ಮಾಣಿಪ = ತಪ್ಪಿಸುವ (ದುರ್ಮಾರ್ಗವನ್ನು) ಎಲ್ಲಿಯಾನುಮಿರ್ಪರೇ=ಎಲ್ಲಾದರೂ ಇದ್ದಾರೆಯೆ ?

೭೭. ಅಲರಂಬು=ಪುಷ್ಪಬಾಣ, ತೀವುತಿರ್ದೊಡಂ=ತುಂಬುತ್ತಿದ್ದರೂ, ಭಿನ್ನಭಾಂಡ=ತೂತಿ (ರಂಧ್ರ)ನಿಂದ ಕೂಡಿದ ಮಡಿಕೆ (ಪಾತ್ರೆ)

೭೮. ಸಿಡಿಲೇಟಿಗ್ಗಿಯೆರ್ದು = ಸಿಡಿಲಿನ ಆರ್ಭಟದಂತೆ ಎದುರು ಬಿದ್ದು, ಎಟ್ದಿ>ಎರ್ದು. ಮೆಯ್ಮಱುಗಿ=ಮನಸ್ಸಿನಲ್ಲಿಯೇ ದುಃಖಪಟ್ಟು, ಗಜನಿಮೀಲನ=ಆನೆಯು ಕಣ್ಣುಮುಚ್ಚಿರುವ ಹಾಗೆ (ಉದಾಸೀನದಿಂದ) ಅವಧೀರಿಸುತ್ತೆ=ತಿರಸ್ಕರಿಸುತ್ತ, ತಮ್ಮಱಿತ=ಅವರ ಜ್ಞಾನ (ಉಪದೇಶ), ಮಮ್ಮಲಂ ಮಱುಗಿಪರಲ್ತೆ=ವಿಶೇಷವಾಗಿ ದುಃಖಿಸುತ್ತಾರಲ್ಲವೆ, ಮಾಯ್ದು=ನೀಚರಾದ.

೭೯. ಭಟಖಡ್ಗಮಂಡಲೋತ್ಪಲವನದೊಳ್ ತಿರುಪಾಱಿಡಿಯಂ = ಯೋಧರ ಕತ್ತಿಯಸಮೂಹವೆಂಬ ಕನ್ನೈದಲೆಯ ವನದಲ್ಲಿ ಓಡಾಡುತ್ತಿರುವ ದುಂಬಿಯನ್ನು, ಮುನ್ನಮೇ=ಮೊದಲೇ, ಶುಭಕಾಮಂ=ಒಳ್ಳೆಯದಾಗಬೇಕಂದು ಆಶಿಪಡುವವನು.

೮೦. ಸುರೆ=ಮದ್ಯ, ಹೆಂಡ, ಸುರೋರ್ವೀರುಹಕಿಸಲಯ=ಕಲ್ಪವೃಕ್ಷದ ಚಿಗುರು, ಕೌಸ್ತುಭಪ್ರಸ್ತರ = ವಿಷ್ಣುವಿನ ಎದೆಯಲ್ಲಿರುವ ಕೌಸ್ತುಭಮಣಿಯ ಹರಡುವಿಕೆಯಿಂದ, ನೈಷ್ಠುರ್ಯ=ಕಠಿಣತೆ, ಮುಗ್ಧದೋಷಾಕರ=ಬಾಲಚಂದ್ರ, ದುಶ್ಚ್ಯವನನಹಯ = ಇಂದ್ರನ ಕುದುರೆಯಾದ ಉಚ್ಚೈಶ್ರವಸ್. ನೀರಾಕರ=ಸಮುದ್ರ, ಸಹಭವರ್ = ಜೊತೆಯಲ್ಲಿ ಹುಟ್ಟಿದವರು.

೮೧. ಬಹುಸಂಸ್ಕಾರ=ವಿಶೇಷ ಅನುಭವ, ಓರಂತಿರೆ=ಒಂದೇಸಮನಾಗಿ,

೮೨. ಬಾರ್ತೆಗೆಯ್ಯಳ್=ಲಕ್ಷ್ಯಮಾಡುವುದಿಲ್ಲ. ಬಿಪ್ಪಂಡಿಪಳ್ = ದೂಷಿಸು

ತ್ತಾಳೆ. ಎಳಸಳ್ = ಲಕ್ಷ್ಯಮಾಡುವುದಿಲ್ಲ. ಸಂಗತಿ = ಸ್ನೇಹ, ಸುಂದರತರವಪು = ಬಹುಸುಂದರವಾದ ಶರೀರ>ಶರೀರ ಸೌಂದರ್ಯ, ಗಾಂಪ = ಮೂಢ, ಅಜ್ಞ,

೮೩. ಅಕ್ಕರ-ಇದು ವೃತ್ತದ ಹೆಸರು. ಅಚ್ಚಕನ್ನಡ ದೇಶೀಯ ಸಮವೃತ್ತ. ಇದು ಅಂಶಗಣಕ್ಕೆ ಸೇರಿದುದು. ಅಂದರೆ ಮೊದಲನೆಯ ಅಕ್ಷರ ಒಂದು ಗುರು ಅಥವಾ ಅದಕ್ಕೆ ಸಮನಾದ ಎರಡು ಲಘುಗಳನ್ನು ಹೊಂದಿ, ಮುಂದೆ ಒಂದು ಅಕ್ಷರವನ್ನು ಸೇರಿಸಿಕೊಂಡು ಬ್ರಹ್ಮವೆಂಬುದಾಗಿಯೂ ಎರಡು ಅಕ್ಷರಗಳನ್ನು ಸೇರಿಸಿಕೊಂಡು ವಿಷ್ಣುವೆಂದೂ ಮೂರು ಅಕ್ಷರಗಳನ್ನು ಸೇರಿಸಿಕೊಂಡು ರುದ್ರಗಣವೆಂಡೂ ಮೂರು ಭೇದಗಳಿಂದ ಕೂಡಿದೆ. ಈ ಗಣಗಳ ಸಂಯೋಜನೆಯಿಂದ ಕಿರಿಯಕ್ಕರ, ಎಡೆಯಕ್ಕರ ನಡುವಕ್ಕರ ದೊರೆಯಕ್ಕರ ಮತ್ತು ಪಿರಿಯಕ್ಕರ ಎಂಬ ಅಯ್ದು ಬಗೆಯ ಅಕ್ಕರಗಳಾಗುತ್ತವೆ. ಈಗ ಪ್ರಸಕ್ತ ಇಲ್ಲಿ ಉಪಯುಕ್ತವಾಗಿರುವುದು ಪಿರಿಯಕ್ಕರ. ಇದರ ಒಂದೊಂದು ಸಾಲಿನಲ್ಲಿಯೂ ಮೊದಲು ಒಂದು ಬ್ರಹ್ಮಗಣ ಮುಂದೆ ಅಯ್ದು ವಿಷ್ಣುಗಣ ಕೊನೆಯಲ್ಲಿ ಒಂದು ರುದ್ರಗಣವೂ ಒಟ್ಟು ಏಳು ಗಣಗಳಿರುತ್ತವೆ. ಯಾವುದಾದರೂ ಪಂಕ್ತಿಯಲ್ಲಿ ಕೆಲವು ಮಾತ್ರೆಗಳು ಹೆಚ್ಚು ಕಡಿಮೆಯಾದರೆ ಅದನ್ನು ಹಿಗ್ಗಿಸಿ ಕುಗ್ಗಿಸಿ ಸರಿಮಾಡಿಕೊಳ್ಳಬಹುದು. ಅಭಿಜಾತನ್ = ಒಳ್ಳೆಯ ಕುಲದಲ್ಲಿ ಹುಟ್ಟಿದವನು. ಗಟಿಪ = ಹರಟೆ ಹೊಡೆಯುವವನು. ಇಟಿಪಳ್ = ಹೀಯಾಳಿಸುತ್ತಾಳೆ, ಇಂದಿರೆ = ಲಕ್ಷ್ಮಿ.

ವ|| ಪಯೋರಾಶಿ = ಸಮುದ್ರ-ನೀರಿನ ಸಮೂಹ, ತೃಷ್ಣಾಕರಿ = ದಾಹ, ಆಶೆಗೆ, ಆವಾಸಸ್ಥಾನ, ವಿಪಾಕೆ = ಕೆಟ್ಟುದನ್ನು ಪ್ರೇರೇಪಿಸುವವಳು

೮೪. ಕಜ್ಜಳೋಪಮ = ಕಾಡಿಗೆಗೆ ಸಮಾನವಾದ, ಕರ್ಮಭ್ರಾಂತಿ = ಮಾಡಬೇಕಾದ ಕೆಲಸವೋ ಅಲ್ಲವೋ ಎನ್ನುವ ಸಂದೇಹ.

೮೫. ಮೃಗಪ್ರಕರ = ಜಿಂಕೆಯ ಗುಂಪು. ಗೋವಿಯದನಿ = ಕೊಳಲಿನ ಶಬ್ದ. ವಿಶೇಷ ವಿಷಯ :—ಬೇಟೆಗಾರರು ಜಿಂಕೆಗಳನ್ನು ಹಿಡಿಯುವುದಕ್ಕೆ ಕೊಳಲಿನ ಶಬ್ದವನ್ನು ಉಪಯೋಗಿಸುತ್ತಾರೆ. ಜಿಂಕೆಗೆ ಸಂಗೀತ ಕಂಡರೆ ಬಹಳ ಆಸೆ. ಮೃಗಗಳಿರುವ ಪೊದರುಗಳ ಹತ್ತಿರ ಬೇಡರು ಮರೆಯಾಗಿ ನಿಂತು ಕೊಳಲುವಾದ ಮಾಡುತ್ತಿದ್ದರೆ ಜಿಂಕೆಯು ಆ ಧ್ವನಿಯಿಂದ ಆಕರ್ಷಿಸಲ್ಪಟ್ಟು ತದೇಕಧ್ಯಾನದಿಂದ ಅದನ್ನು ಕೇಳುತ್ತಾ ನಿಂತು ಮೆಲುಕಾಡುವುದನ್ನು ನಿಲ್ಲಿಸುತ್ತದೆ. ಕೆಲಕಾಲ ಮೆಲುಕು ನಿಲ್ಲಿಸುವುದರಿಂದ ಹೊಟ್ಟೆ ಊದಿಕೊಂಡು ಸತ್ತುಹೋಗುತ್ತದೆ. ಆದುದರಿಂದ ಜಿಂಕೆಗೆ ಕೊಳಲಿನ ಶಬ್ದಮಾರಕವಾಗುತ್ತದೆ. ಇಲ್ಲಿ ಗೋವಿಯದನಿ ಮೃಗಕ್ಕೆ ಆಕರ್ಷಕವಾದುದು ಎಂಬುದನ್ನು ಕವಿಯು ಸೂಚಿಸಿದ್ದಾನೆ.

೮೬. ತಿಮಿರಪಟಲತತಿ = ಕತ್ತಲೆಯ ಪದರಗಳ ಸಮೂಹ, ಆಶೀವಿಷ = ಹಾವು, ಚಿತ್ರಗತೆ = ಚಿತ್ರದಲ್ಲಿ ಬರೆಯಲ್ಪಟ್ಟವಳು. ಕರುವಿಟ್ಟೊಡಂ = ಎರಕ ಹೊಯ್ದಿದ್ದರೂ ಕಂಡರಸು = ಕೊರೆಯುವುದು.

೮೭. ಕರ್ಚಿತ್ತು = ತೊಳೆಯುತ್ತದೆ. ಕ್ಷಾಂತ = ದಯೆ, ಸಮ್ಮಾರ್ಜನಿ = ಕಸಪೊರಕೆ, ವಿಪ್ರವರ್ಗಾಸ್ಪದ = ಬ್ರಾಹ್ಮಣರ ಸಮೂಹಕ್ಕೆ ಆಸನವಾದ

೮೮. ಆಲೋಕನ=ನೋಡುವುದು,

೮೯. ಪಡೆವಳ್ಳರ್=ಸೇನಾಧಿಪತಿಗಳು, ನಾಳ್ಗಡಿ=ದೇಶದ ಎಲ್ಲೆ, ಜಡಿವರ್=ಬೆದರಿಸುವರ್.

೯೦. ಒಳ್ನುಡಿ=ಒಳ್ಳೆಯಮಾತು, ಬಿಡೆಬಿಡಿಸುವಂತೆ=ಸಂಪೂರ್ಣವಾಗಿ ಬಿಡಿಸುವಂತೆ, ವೈಜಯಂತಿ=ಪತಾಕೆ, ಬಾವುಟ, ಎಡೆವರಿಯದೆ=ತಡೆಯಿಲ್ಲದೆ.

೯೧. ತಲೆವಟ್ಟಿರ್ದ=ಆಸಕ್ತವಾಗಿರುವ, ಶತಸಹಸ್ರಸಂಖ್ಯೆಯಿಂ=ಲಕ್ಷ ಸಂಖ್ಯೆಯಿಂದ. ಅಲೆಯದೆ=ಹಿಂಸೆ ಮಾಡದೆ, ಮಾಯ್ದು=ನೀಚವಾದ.

೯೨. ನೋಡೆ = ಯೋಚಿಸುವುದಾದರೆ, ಒಂದೆನುನಂ ನೂಱುನೂರ್ಭಾಸಿರ ಮಾಯ್ತು ಎಂಬುದು ಅನ್ವಯ, ಕನಲ್ಚಿ=ರೇಗಿಸಿ, ತನ್ನಿಚ್ಚೆಗೆ=ತನ್ನಿಷ್ಟಕ್ಕನುಗುಣವಾಗಿ

೯೩. ಪೆಳವು ಗೊಂಡರಂತೆ=ಹೆಳವರಾದ ಹಾಗೆ,

೯೪. ಎನಿಪರವೋಲ್=ಎನ್ನಿಸಿಕೊಳ್ಳುವವರಹಾಗೆ, ಕಾಣಲ್ಕೆ+ಆಱರಲ್ತೆ=ಅಸಮರ್ಥರಲ್ಲವೆ ?

೯೫. ವಿಷವಿಪಾಕ=ಕೆಟ್ಟ ಪ್ರಭಾವ. ಬಸ=ವಶ,

೯೬. ಗರ=ಗ್ರಹ. ಗಾಳಿ=ದೆವ್ವ, ಬನ್ನ=ಭಗ್ನ, ಮೆಯ್ಯಱಿಯರ್=ಪ್ರಜ್ಞಾಶೂನ್ಯರಾಗುತ್ತಾರೆ.

೯೭. ಅಕಾಲಫಲಕುಸುಮ ದವೋಲ್=ಕಾಲವಲ್ಲದ ಕಾಲದಲ್ಲಿ ಬರುವ ಹಣ್ಣು ಹೂವುಗಳ ಹಾಗೆ.

ವ॥ ಆಮಿಷ=ಮಾಂಸ, ಕಳ್=ಹೆಂಡ, ಕುಲವಧೂತ್ಯಾಗ=ಒಳ್ಳೆಯ ವಂಶದ ಹುಡುಗಿಯನ್ನು ಬಿಡುವುದು ಕಲಿವುದೇ=ಕೂಡುವುದೆ, ಬಂಟುತನ=ಶೌರ್ಯ,

೯೯. ತೋಲಮಱೆ=ಚರ್ಮದದಟಿ, ದೇವರೆಂ=ದೇವರಾಗಿದ್ದೇವೆ. ಇಲ್ಲಿ ದೇವರ್ ಎಂಬ ನಾಮವಾಚಕದ ಮೇಲೆ ಎನ್, ಎಂಬ ಆಖ್ಯಾತಪ್ರತ್ಯಯ ಒಂದು ವಿಶೇಷಣವಾಗಿದೆ

೧೦೦. ಮೊದಲೊಳ್=ಪ್ರಾರಂಭದಲ್ಲಿ, ತಮ್ಮನೆ ನೋಡಲ್=ಅವರನ್ನು ದರ್ಶನಮಾಡಲು, ಇತ್ತಪದದೊಳೆ=ಹಾಗೆ ನೋಡುವುದಕ್ಕೆ ಅವಕಾಶಕೊಟ್ಟ ಮಾತ್ರದಿಂದಲೆ, ಕೈಕೊಂಡವರ್=ತಾವು ಅನುಗ್ರಹಿಸಿದಂತೆ ಭಾವಿಸುವರು, ಹಾಗೆ ತಾವು ನೋಡಿದ ಮಾತ್ರದಿಂದಲೇ ಉಪಕಾರವನ್ನು ಮೆಱೆದವರಂತೆ ಭಾವಿಸುವರು, ಮಾತಾಡುವ ಅನುಗ್ರಹಮಾಡಿದರೆ ಅರ್ಧ ರಾಜ್ಯದ ವೈಭವವನ್ನು ದಾನ ಮಾಡಿದಂತೆ ತಿಳಿಯುವರು, ಆಜ್ಞೆಮಾಡಿದರೆ ಕುಶಲ ಪ್ರಶ್ನೆ ಮಾಡಿದರೆ ವರವನ್ನು ಕೊಟ್ಟ ಹಾಗೆ ಯೋಚಿಸುವರು, ಒಂದು ವೇಳೆ ಪ್ರೀತಿಯಿಂದ ಮುಟ್ಟಿದರೆ ಅವರನ್ನು ರಕ್ಷಿಸಿದಂತೆಯೇ ತಿಳಿಯುವರು.

೧೦೧. ರಾಜರಾದವರು ತಮ್ಮ ಗರ್ವದಿಂದ ಗುರುಗಳಿಗೆ ನಮಸ್ಕಾರ ಮಾಡುತ್ತಾರೆಯೇ, ದೇವರನ್ನು ಪೂಜಿಸುತ್ತಾರೆಯೇ ? ಬ್ರಾಹ್ಮಣರನ್ನು ತಿಳಿದು ಆದರಿಸುತ್ತಾರೆಯೇ ಪೂಜ್ಯರನ್ನು ಮನ್ನಣೆಯಿಂದ ಮನ್ನಿಸುತ್ತಾರೆಯೇ ?

೧೦೨. ಕಯ್ಮಱಿದು=ಆಶ್ಚರ್ಯಪಟ್ಟು, ಏಱಿಸಿ=ಆರೋಪಿಸಿ, ಪೊಚ್ಚಱಿ ಸುತ್ತ=ಉಬ್ಬಿಸುತ್ತ, ಷಿದ್ಗರ್=ವಿಟರು, ನೀಚರು,

೧೦೩. ಅವರನೆ=ಆ ನೀಚರನ್ನೆ, ಸಾರಿರಿಪರ್=ಸಮೀಪದಲ್ಲಿರಿಸಿಕೊಳ್ಳುತ್ತಾರೆ ಕೂಟಂ=ಸ್ನೇಹ

ವ|| ನೃಶಂಸ=ಕ್ರೂರಕರ್ಮಿ, ಉಪಾಂಶುವಧೆ=ರಹಸ್ಯವಾದ ಕೊಲೆ, ಅಭಿಚಾರ =ಶೂನ್ಯ ಮತ್ತು ಮಾಟ ಮೊದಲಾದುವು, ಪರದಾರಾಭಿಗಮನನ್=ಮತ್ತೊಬ್ಬನ ಹೆಂಡತಿಯಲ್ಲಿ ಹೋಗುವವನು, ವಿಶ್ವಾಸಭೂಮಿ=ನಂಬಿಕೆಗೆ ಪಾತ್ರ, ಸ್ನೇಹಾರ್ದ್ರ= ಸ್ನೇಹದಿಂದ ಒದ್ದೆಯಾಗಿರುವ, ಕಿಳ್ತುಕಳೆಯಿಸುವ=ಪದಚ್ಯುತಿ ಮಾಡಿಸುವ, ಅಧಿಕಾರ ದಿಂದ ತೆಗೆಯಿಸುವ, ದಾರುಣ=ಕಠಿಣ, ಭಯಂಕರ,

೧೦೪. ಬೆಸನಂಗಳ್=ವ್ಯಸನಗಳು, ತನುವಿಚ್ಚೆಗೊಯ್ವುವು=ಶರೀರದ ವಿಷಯ ಭೋಗಗಳ ಕಡೆ ಸೆಳೆಯುವುವು, ಚಟೂರಿಸದಂತೆ=ಮೋಸ ಮಾಡದ ಹಾಗೆ, ಕಾಮಿನೀ ತತಿ=ಸ್ತ್ರೀಸಮೂಹ, ವಿಲಾಸಾಪಾಂಗ=ಮೋಹದ ಕಡೆಗಣ್ಣು, ಪ್ರತಾರಿಸು=ಮೋಸ ಮಾಡು.

ವ|| ಧೌರೇಯ=ಭಾರವನ್ನು ವಹಿಸಿರುವವನು, ವಸುಂಧರೆ=ಭೂಮಿ (ಚಿನ್ನ ವನ್ನು ಧರಿಸಿರುವವಳು)

೧೦೫. ಅನುಜೀವಿಗಳ್=ಪರಿವಾರದವರು, ಉಬ್ಬೆಗ=ಉದ್ವೇಗ (ಸಂ)

ವ|| ಪ್ರಕ್ಷಾಳಿತನ್=ತೊಳೆಯಲ್ಪಟ್ಟವನು. ಪಟ್ಟವಣೆ=ಸಿಂಹಾಸನ>ರಾಜ ಪೀಠ, ಜಾಗರ=ಮಂಗಳಾರ್ಥವಾದ ಪೈರು, ಬಾಸಣಿಸು=ಮುಚ್ಚು, ಶಾತಕುಂಭ= ಚಿನ್ನ, ಮೌಹೂರ್ತಿಕಪ್ರಕರ=ಜೋಯಿಸರ ಗುಂಪು,

೧೦೬. ಪಾರ್ದಿರ್ಪುದುಂ=ನಿರೀಕ್ಷಿಸುತ್ತಿರಲು,

೧೦೭. ಅಂಭೋಧಿತೀರ್ಥ=ಸಮುದ್ರದ ನೀರು. ಆಪಗಾವಾರಿ=ನದೀ ನೀರು,

೧೦೮. ದಾಂಗುಡಿ=ದಾಟುವಕುಡಿ, ದಾಂಗುಡಿವಿಡುವ=ಹಬ್ಬುತ್ತಿರುವ, ನಿಲು ಕಿದಳ್=ಸೇರಿದಳು.

೧೦೯. ಸುಲಿಪಲ್=ಶುಭ್ರವಾದ ಹಲ್ಲು, ಲಂಬಣ=ಹಾರ, ಅವತಂಸ=ಆಭ ರಣ, ಅಮರಲ್ಕೆ=ಹೊಂದಿಕೊಳ್ಳಲಾಗಿ,

೧೧೦. ಉರ್ವೀಪತಿ....ರಾಜಹಂಸ=ಭೂಮಂಡಲದ ರಾಜರುಗಳೆಂಬ ಸರೋ ವರದ ಶ್ರೇಷ್ಠವಾದ ಹಂಸ.

ವ|| ನಿವೇದಕ=ಸೂಚನೆಮಾಡುವ,

೧೧೧. ಚಲದ್ದಂಡ=ನೀಳವಾಗಿರುವ ಮಿಂಚು. ವರಾಹಘೋಣ=ಹಂದಿಯ ಕತ್ತು, ಉಣ್ಮಿತ್ತು=ಹಬ್ಬಿತು, ಹೆಚ್ಚಾಯಿತು.

೧೧೨. ರಿಪುವಸುಧಾದಿಪಪ್ರತತಿ=ಶತ್ರುರಾಜಮಂಡಳ

ವ|| ಲಾಜಾವರ್ಷ=ಅರಳಿನ ಮಳೆ,

೧೧೩. ಅಂಬುದಾಳಿ=ಮೋಡಗಳರಾಶಿ, ಸಂ ಆಧ್ಯಾಸಿತ=ಚೆನ್ನಾಗಿ ಆಶ್ರಯಿಸಲ್ಪಟ್ಟ. ಪಿಡಿ=ಹೆಣ್ಣಾನೆ, ಅಂತರಾಸನ+ಹಿಂದಿರುವ ಮತ್ತೊಂದು ಪೀಠ,

೧೧೪. ಧವಳಾತಪತ್ರ=ಶ್ವೇತಚ್ಛತ್ರಿ,

೧೧೫. ಪ್ರತಾಪಾನಲ ಬಹಳ ಶಿಖಾಜಾಲವೋ=ಯಶಸ್ಸೆಂಬ ದೊಡ್ಡ ಬೆಂಕಿಯ ಕುಡಿಯ ರಾಶಿಯೋ, ವೈರಿನಾಶ....ದಾಹವೋ=ಶತ್ರುಗಳ ನಾಶದಿಂದ ಎದ್ದ ಎಲ್ಲ ದಿಕ್ಕಿನಲ್ಲಿಯೂ ಹಬ್ಬಿರುವ ಉರಿಯೋ, ರಾಗಾತ್ಮಿಕೆ=ಕೆಂಪು ಶರೀರವುಳ್ಳವಳು,

ವ|| ಅಹಮುಹಮಿಕೆ=ನಾನು ಮುಂದು ತಾನು ಮುಂದು ಎಂಬ ಉತ್ಸಾಹ, ಮಕುಟಮಣಿಗಣದ್ಯೋತಿ=ಕಿರೀಟದಲ್ಲಿರುವ ರತ್ನಸಮೂಹದ ಕಾಂತಿ. ಪ್ರಣಾಮಲಾಲಸರ್=ನಮಸ್ಕಾರಮಾಡಬೇಕೆಂಬ ಆಸೆಯುಳ್ಳವರು.

೧೧೬. ಕೆಂಗದಿರ್ಗಳಿಸಕ=ಕೆಂಪು ಕಿರಣಗಳ ಕಾರ್ಯ (ಪ್ರಕಾಶ) ಮಸುಳಿಸು=ಮಾಸುವ ಹಾಗೆ ಮಾಡು,

ವ|| ಪೆಱಗೆ=ಹಿಂಭಾಗದಲ್ಲಿ, ಬಧಿರಿತದಿಗಂತರಾಳ=ಕಿವುಡಾಗಿ ಮಾಡಲ್ಪಟ್ಟ ದಿಕ್ಕುಗಳ ಒಳಭಾಗ.

೧೧೭. ಬಾಂದೊರೆಯೊಳ್ಪೊನಲ್ = ಆಕಾಶಗಂಗೆಯ ಒಳ್ಳೆಯ ಪ್ರವಾಹ, ಮಂಡಳಿಸಿದ=ಸುತ್ತಿಕೊಂಡಿರುವ, ಧಾರೆ=ಜಲಧಾರೆ, ಸಿಂಧುರ=ಚಂದ್ರ,ಪಜ್ಜಳಿಸು=ಪ್ರಜ್ವಳಿಸು, ಗಂಧಸಿಂಧುರ=ಮದ್ದಾನೆ.

೧೧೮. ತೆಱಂಬೊಳೆ=ಚೆನ್ನಾಗಿ ಪ್ರಕಾಶಿಸು, ವೈಶಂಪಾಯನಂ ಮತ್ತು ನರಪತಿ ಸಹಸ್ರಂ ಎಂಬುದು ಅನ್ವಯ,

ವ|| ಪೆಳಱ=ಭಯಪಟ್ಟು, ಬೃಂಹಿತ=ಆನೆಯ ಕೂಗು, ಪಾಂಚಜನ್ಯ=ಶಂಖ

೧೨೧. ರಲ್ಲಕಾಭ=ಉಣ್ಣೆಯ ಬಣ್ಣ, ಉಸ್ಪ್ರಸಟಾವಭಾಸಿ=ಒಂಟೆಯ ಕೇಸರದ ಕಾಂತಿ, ಜರತ್ಕಪಿಕೇಸರಜಾಲ=ಮುದಿಕಪಿಯ ಕೂದಲ ರಾಶಿ,

೧೨೨. ಕ್ಷೀರೋದಫೇನಮಾಲಾಗೌರ=ಕ್ಷೀರಸಮುದ್ರದ ನೊರೆಯ ಸಮೂಹದ ಬಿಳುಪು,

ವ|| ಪಾಂಸುಪಟಲ = ಧೂಳಿನ ರಾಶಿ, ಕರಿಕರಾಗ್ರಶೀಕರಾಸಾರ = ಆನೆಯ ಸೊಂಡಿಲಿನ ತುದಿಯ ತುಂತುರು ಸಮೂಹ, ದಾನಧಾರೆ=ಮದೋದಕ, ಲಾಲಾಜಲ=ಜೊಲ್ಲು, ಪರಿಪಡಲ್=ಬೀಳಲು, ಅಳವಿಗಱದ=ಅಳತೆಯನ್ನು ಮೀರಿದ, ವಿಸ್ಮಯಂಬೆತ್ತು=ಆಶ್ಚರ್ಯವನ್ನು ಹೊಂದಿ.

೧೨೩. ಆಟಿಸು=ಅಪೇಕ್ಷಿಸು,

೧೨೪. ಮಣಿಯದ=ಬಗ್ಗದ, ನಮಸ್ಕಾರಮಾಡದ, ಅಬ್ಜಕುಟ್ಮಲ=ಕಮಲದ ಮೊಗ್ಗು. ಸಾಣೆಯನಿಕ್ಕು=ಉಜ್ಜು,

೧೨೫. ಕುಂಡಲಿಪ=ಆದಿಶೇಷ,

೧೨೬. ಉತ್ಪಲಬಾಂಧವ=ಚಂದ್ರ.

೧೨೭. ಸಮುಚ್ಛ್ರಿತ=ಎತ್ತಿಕಟ್ಟಲ್ಪಟ್ಟ, ಅರಸುಗಜ್ಜ=ರಾಜಕಾರ್ಯ, ಎಡೆವಟ್ಟಿರ್ದ=ಸಮೀಪದಲ್ಲಿಯೇ ಮಲಗಿದ್ದ,

೧೨೮. ನಿವ್ವ=ಹಳ್ಳ, ತೆಮರು=ದಿಣ್ಣೆ, ಮಹೀಭೃನ್ಮಹೇಂದ್ರಂ=ಚಕ್ರವರ್ತಿ.

೧೨೯. ನಾಡರ್ನೇರ್ಪ ನಿರವಿಸಿ=ದೇಶಕ್ಷೇಮವನ್ನುಂಟುಮಾಡಿ.

೧೩೦. ಬಲವಂದು=ಪ್ರದಕ್ಷಿಣೆ ಮಾಡಿ, ಪೊಂದಿಸಿ=ಕೊಂದು,

೧೩೧. ಆಸತ್ತ=ಬಳಲಿದ (ಆಸಱು-ಧಾತು)

ಮಹಾಶ್ವೇತೆಯ ಸಂದರ್ಶನ

೧. ಸಮನಿಸಲ್=ಉಂಟಾಗಲು

ವ || ಸಮುಪಜಾತ = ಉಂಟಾದ, ವಿಸ್ಮಯಾಕ್ಷಿಪ್ತಚಿತ್ತ = ಆಶ್ಚರ್ಯದಿಂದ ಕೂಡಿದ ಮನಸ್ಸು

೨. ಬಗೆಯಿಂ=ಮನಸ್ಸಿನಿಂದ, ಭೋಂಕನೆ ಬಂದು=ಥಟ್ಟನೆ ಬಂದು

೩. ಪಿಡಿದಪನೀಗಳ್=ಈಗ ಹಿಡಿಯುತ್ತಾನೆ, ಆ ಪಿಡಿಯಲೆಯ್ದಿದನ್=ಇದೋ ಹಿಡಿಯಲು ಹೋದನು, ಆ ಪಿಡಿದಪ್ಪನ್=ಇದೋ ಹಿಡಿಯುತ್ತಾನೆ. ಆ ಪಿಡಿದನ=ಇದೋ ಹಿಡಿದುಬಿಟ್ಟನು. ಬೞಿಸಂದು=ಸಮೀಪಕ್ಕೆ ಬಂದು, ಪರಿಗ್ರಹ=ಪರಿವಾರ, ಕಡುಪು=ವೇಗ,

೪. ಮಡದಲಿ=ಕಾಲಿನಿಂದ ಅದು+ಇರ್ಮಡಿ=ಎರಡರಷ್ಟು ಮೂರ್ಮಡಿ,=ಮೂರರಷ್ಟು ಗಡಪ=ವೇಗ, ಶೀಘ್ರ, ತುರಂಗವದನರ್=ಕುದುರೆಯ ಮುಖದವರು=ಕಿನ್ನರರು, ಬೆಂಬೞಿ=ಹಿಂಭಾಗ,

೫. ಬೆನ್ನೊಳ್ ಪರಿದು=ಹಿಂದೆ ಓಡಿ, ಎಟ್ಟಿಟ್ಟ=ಅನುಸರಿಸಿ, (ಹಿಂಬಾಲಿಸಿ) ಅಸ್ಖಲಿತಂ=ತಡೆಯಿಲ್ಲದೆ, ಮುಗ್ಗರಿಸದೆ,

೬. ನಿರರ್ಥಕ=ಪ್ರಯೋಜನವಿಲ್ಲದೆ, ಕೋಟಲೆಗೊಳ್ಳು=ಆಯಾಸಪಡು, ತಗುಳುತ್ತೆ=ಅನುಸರಿಸಿ ಓಡುತ್ತ,

೭. ಏನಾನೊಂದನೆ=ಯಾವುದೋ ಒಂದನ್ನು, ಏನೋ ಕೌತುಕದಿಂದ ಬಂದೆಂ=ಏನೋ ಆಶ್ಚರ್ಯದಿಂದ ಬಂದೆ, ದುರ್ಮೋಹದುದ್ಯೋಗಂ=ಕೆಟ್ಟ ಆಸೆಯ ಕಾರ್ಯ, ಏನಾನೊಂದನೊಡರ್ಚಿತು=ಏನೋ ಒಂದನ್ನು ಉಂಟುಮಾಡಿತು. ತದ್ವೇಗದಿಂ=ಆ ಕಳವಳದಿಂದ, ವಿಸ್ಮಯಧ್ಯಾನಾಧೀನಮನಸ್ಕಂ=ಆಶ್ಚರ್ಯದ ಚಿಂತೆಗೆ ಒಳಪಟ್ಟ (ಅಧೀನವಾದ) ಮನಸ್ಸಿನಿಂದ ಕೂಡಿದವನು ಇನಿಸುಬೇಗಂ=ಸ್ವಲ್ಪಹೊತ್ತು,

೮. ಜವಮುಳ್ಳದರಿಂ=ವೇಗದಿಂದ ಕೂಡಿದ್ದುದರಿಂದ, ಹರಿ=ಕುದುರೆ, ಎನಿತಂತರಮಂ=ಎಷ್ಟು ದೂರವನ್ನು, ಎಡೆವರಿಗುಮೋ=ಮಧ್ಯೆಹೊಂದಿತೋ. (ವಿಚ್ಛಿತ್ತಿಯನ್ನು ಹೊಂದಿತೊ) ಚೆಚ್ಚರ=ಕುತೂಹಲ, ಬೇಗ,

೯. ತಿಂತಿಣಿ=ಸಮೂಹ, ತುರಗಾತಿವೇಗ=ಕುದುರೆಯ ಹೆಚ್ಚಿನ ವೇಗ,

ಅಱಿಯಲೆ ಬಂದುದಿಲ್ಲ=ತಿಳಿದು ಬರಲಿಲ್ಲ. ಮಗುೞ್ವಿಂದಂ=ಹಿಂತಿರುಗಿ ಬರುವ ರೀತಿ, ಸುೞಿವನಿಲ್ಲ=ಕಾಣಿಸಿಕೊಳ್ಳುವವನಿಲ್ಲ, ಸರಂದೋಱುವನ್ನಂ=ಧ್ವನಿಯನ್ನು ತೋರಿಸುವಂಥವನು, ಏತೆಱದೊಳಂ=ಯಾವ ರೀತಿಯಿಂದಲೋ

೧೦. ಸೀಮೆ=ಎಲ್ಲೆ.

೧೧. ಅಣಮಿಲ್ಲ=ಸ್ವಲ್ಪವೂ ಇಲ್ಲ, ತಂತಮ್ಮ ಮಾಡಿದುದಂ=ತಾವು ತಾವು ಮಾಡಿದುದನ್ನು, ತಂತಮ್ಮ ಎಂಬಲ್ಲಿ ವೀಪ್ಸಾರ್ಥದಲ್ಲಿ ದ್ವಿರುಕ್ತಿ ಬಂದಿರುವುದರಿಂದ ಪೂರ್ವಪದದ ಕಡೆಯ ವಿಭಕ್ತಿಗೆ ಲೋಪ. ಶ.ಶಾ ಸೂ ೩೯೭, ಮಾಡಿದುದಂ ಎಂಬ ಕೃದ್ಯೋಗದಿಂದ ತತ್ಕರ್ತರ್ಥದಲ್ಲಿ ತಮ್ಮ ಎಂದು ಷಷ್ಠೀವಿಭಕ್ತಿಯು ಶಶಾ ಸೂ ೨೨೬. ಅಣಮಿಲ್ಲಂ=ಸ್ವಲ್ಪವೂ ಇಲ್ಲ. ತಾಮುಣವೇೞ್ಕುಂ=ತಾನು ಉಣ್ಣಲೇ ಬೇಕು, ಮಗುೞ್ಚಿದಂ=ಹಿಂತಿರುಗಿಸಿದನು.

೧೨. ದಿನಲಕ್ಷ್ಮೀರಸನ್ಯೈಕ ಮಧ್ಯಮಣಿಯಾದಂ ಭಾಸ್ಕರಂ = ದಿನಲಕ್ಷ್ಮಿಯ ನಡುಕಟ್ಟಿನ ಮಧ್ಯಭಾಗದ ಮಣಿಯಾದ, ಅಂದರೆ ಸೂರ್ಯನು ನಡುನೆತ್ತಿಗೇರಿದನು> ಮಧ್ಯಾಹ್ನವಾಯಿತು. ಶ್ರಾಂತಿ=ಶ್ರಮ, ನೀರ್ದಾಣ=ನೀರಿರುವ ಸ್ಥಳ, ವಾರಿನಿವಾಸ =ನೀರುನಿಲ್ಲುವ ಸ್ಥಳ, ನೋೞ್ಪುಂ=ನೋಡುತ್ತಾನೆ.

೧೩. ತೆಗೆದು+ಒಟ್ಟಿಕೊಂಡ—ಶೇಖರಿಸಿ ಮೇಲೆ ಹಾಕಿಕೊಂಡಿದ್ದ (ಶಿಶಿರೋಪಚಾರಕ್ಕಾಗಿ) ಕುಮುದ+ಅಂಬೋಜಾತ+ಕಲ್ಹಾರಕುಸುಮ+ಕುಟ್ಮಲ=ಮೊಗ್ಗು, ಶಾಲೂಕ=ಕಮಲದ ಬೇರು, ತಾವರೆಯ ಗೆಡ್ಡೆ, ಮೃಣಾಳ=ತಾವರೆಯ ದಂಟು, ಇಡುತ್ತ=ಕಿತ್ತುಬಿಸಾಡುತ್ತ, ಈಡಾಡುತ್ತಂ=ದೂರದೂರಕ್ಕೆ ಎಸೆಯುತ್ತ. ಪಾದಪಂ =ಮರ, ಪುಷ್ಪಸ್ತಬಕ=ಹೂವಿನ ಗೊಂಚಲು, ತೀಡು=ಬೀಸು. ಸುಗಂಧ ಬಹುಳಂ =ಹೆಚ್ಚಿನ ವಾಸನೆಯಿಂದ ಕೂಡಿದ.

ವ|| ಸುರಭಿ....ಮಾನ=ವಾಸನಾಯುಕ್ತವಾದ ಗಾಳಿಯಿಂದ ಸೂಚಿಸಲ್ಪಟ್ಟ, ಗಜಯೂಥಮಾರ್ಗಂ=ಆನೆಯ ಗುಂಪುಗಳು ಹೋಗುವ ದಾರಿ.

೧೪. ಗಿರಿಶಾದ್ರೀಂದ್ರ=ಶ್ರೇಷ್ಠವಾದ ಈಶ್ವರನ ಕೈಲಾಸಪರ್ವತ, ಪೂರ್ವೋತ್ತರ ದಿಶೆ=ಈಶಾನ್ಯ ದಿಕ್ಕು, ಕಾರಿರುಳ್=ಕಪ್ಪಗಿರುವ, ಅಥವಾ ಕಾರ್ಗಾಲದ ರಾತ್ರಿ ಕೞಿಂಗಿದ=ಕಪ್ಪಾದ, ತರುಷಂಡ=ಮರಗಳ ಗುಂಪು.

೧೫. ಕುಮುದರಜಂ=ಕನ್ನೈದಿಲೆಯ ಪರಾಗ, ಧೂಳು, ಪೊಗೆದು=ವೃದ್ಧಿಯಾಗಿ, ವಾಃಕಣಜಾಲ=ನೀರಿನ ಹನಿಯ ಸಮೂಹ, ಬಭ್ರಮತ್=ಸುತ್ತುತ್ತಿರುವ, ಅಮರ್ದು+ಒಸೆದು+ಅಪ್ಪಿಕೊಂಡು=ಪ್ರೀತಿಯಿಂದ ಗಾಢಾಲಿಂಗನವನ್ನು ಮಾಡಿಕೊಂಡು.

೧೬. ತಾರಾಗಂ = ಕೈಲಾಸಪರ್ವತ, ಕಣ್ಣಿಡೆ = ದೃಷ್ಟಿಸಿ ನೋಡಲಾಗಿ, ರುದ್ರಾಟ್ಟಹಾಸಂ=ಈಶ್ವರನ ಮುಗುಳ್ನಗೆ, ಚಂದ್ರಾತಪಂ=ಬೆಳುದಿಂಗಳು, ಅಮೃತ ರಸಾಕಾರಂ=ಅಮೃತದ ನೀರಿನ ಆಕಾರ, ಹೈಮಾಜಲಂ=ಹಿಮವತ್ಪರ್ವತದ ನೀರು,

ಮಣಿಮುಕುರ=ರತ್ನಗನ್ನಡಿ.

೧೭. ಚಂದ್ರಕಾಂತಮಣಿ ಭೂಗೃಹಂ=ಚಂದ್ರಕಾಂತ ರತ್ನದಿಂದ ಮಾಡಿದ ನೆಲಮಾಳಿಗೆ, ಘೂರ್ಣಿತಾರ್ಣವ ಪ್ರಸವ=ಅಲೆಯುತ್ತಿರುವ ಸಮುದ್ರದ ಪ್ರಸವ, ಪುಣ್ಯ ಸಂಚಯ=ಪುಣ್ಯಸಮೂಹ, ರಸಮಯಮಾದುದು=ನೀರಿನಿಂದ ತುಂಬಿಹೋಯ್ತು

ವ॥ ತೆಕ್ಕನೆತೀವು=ಇದ್ದಕ್ಕಿದ್ದ ಹಾಗೆ ತುಂಬು, ರಿಕ್ತ ಮಾಗು=ಬಡವಾಗು.

೧೮. ಅಳಿದೆರೆ=ದುಂಬಿಗಳಸಾಲು, ಸಣ್ಣ ಸಣ್ಣ ಅಲೆ, ಶೈಲಗ್ರಹನಿಕಾಯ= ಪರ್ವತಗಳೆಂಬ ಗ್ರಹಗಳ ಸಮೂಹ,

೧೯. ತಡಿವಿಡಿದು = ದಡವನ್ನನುಸರಿಸಿ, ಮರ್ವುಪರ್ವಿ=ಕತ್ತಲೆಯು ಹರಡಿ, ಕರ್ಮಡು=ಕಪ್ಪಾದ ಮಡು, ಮಾರ್ತೊಳಗು=ಎದುರಾಗಿ ಬೆಳಗು>ಪ್ರತಿಬಿಂಬಿಸು, ಪೊಣರ್ವಕ್ಕಿ=ಜೊತೆಯಹಕ್ಕಿ, ಚಕ್ರವಾಕ,

೨೧. ಜಲೇಶಹಂಸಮುಖದಾರಿತ = ನೀರಿನಲ್ಲಿರುವ ಹಂಸದ ಮುಖದಿಂದ ಸೀಳಲ್ಪಟ್ಟ, ದಿಶೇಭಜರ್ಝರಿತ ನೀಲನಿರೇಜ = ದಿಗ್ಗಜಗಳಿಂದ ತುಳಿಯಲ್ಪಟ್ಟ ಕನ್ನೈದಿಲೆ, ವೃಷಾಂಕ ಪುಂಗವ=ಶ್ರೇಷ್ಠವಾದ ಎತ್ತು, ವಿಘಟ್ಟಿತೋತ್ತೀರಂ=ತಗಲ ಲ್ಪಟ್ಟ ದೀರ್ಘವಾದ ದಡ, ಕೃತಾಂತಸ್ಸೈರಿಭ=ಯಮನ ಕೋಣ.

೨೨. ವಿಜೃಂಭೋದ್ಧುರ=ಆಕಳಿಕೆಯಿಂದ ಕೂಡಿದ, ಪುಂಡರಿಕ ಸಂಕುಳಂ= ಹುಲಿಯ ಗುಂಪನ್ನುಳ್ಳದ್ದು, ಉರಗಾನ್ವಯ=ಹಾವಿನ ಕುಲ,

೨೩. ಅಗೇಂದ್ರ=ಪರ್ವತ ಶ್ರೇಷ್ಠವಾದ ಮಂದರಪರ್ವತ, ನೀಲಕಂಠ ಪೀತ= ಈಶ್ವರನಿಂದ ಕುಡಿಯಲ್ಪಟ್ಟ, ಅನಂಗ ಕೇತನ=ಕಾಮನಧ್ವಜ, ಮಲಯಾದ್ರಿ ನಿಕುಂಜ ದೇಶ=ಮಲಯಪರ್ವತದ ತಪ್ಪಲುಪ್ರದೇಶ—ಹಾಗೆಯೇ ನಿಲಕಂಠ=ನವಿಲು, ವಿಷ= ನೀರು, ಅಂಘ್ರಿ=ಪಾದ, ಅನಿಮೇಷಕೂರ್ಮಲಲಿತಂ=ಮತ್ಸ್ಯ ಮತ್ತು ಕೂರ್ಮರೇಖೆ ಗಳಿಂದ ಮನೋಹರವಾದುದು.

೨೪. ಅವುವುಱದೆಡೆಗಳ್... ಬಿಡಂ=ಈಸರೋವರವನ್ನು ಬಿಟ್ಟು ಮತ್ತಾವ ಮನೋಹರ ಪ್ರದೇಶವಿದೆ ಎಂದು ಈಶ್ವರನು ಕೈಲಾಸಾವಾಸವನ್ನು ಬಿಡುವುದಿಲ್ಲ,

೨೫. ಅಳವಱಯದೆ= (ನನ್ನ) ಶಕ್ತಿಯನ್ನು ತಿಳಿಯದೆಯೇ

ವ॥ ಉಮಾವಲ್ಲಭ....ಮುದ್ರಾಂಕಿತಮುಂ = ಈಶ್ವರನ ಪಾದಕಮಲದಿಂದ ಗುರುತು ಮಾಡಲ್ಪಟ್ಟದು, ದಿವಿಜ....ಸಿಕ್ತಮುಂ = ಐರಾವತದ ಮದೋದಕದಿಂದ ಚೆಲ್ಲಲ್ಪಟ್ಟದೂ, ಭಗವತೀ ಸಿಂಹಾವತರಣ ಮಾರ್ಗ=ಗೌರೀದೇವಿಯು ಸಿಂಹದಿಂದ ಇಳಿಯುವದಾರಿಯುಳ್ಳದೂ, ಪಲ್ಲಣ=ಜೀನು,

೨೬. ಮಹಿತಳ ಲುಠಿತೋತ್ಥಿತಂ=ಭೂಮಿಯಲ್ಲಿ ಬಿದ್ದು ಹೊರಳಿ ಎದ್ದುದು, ಕುದುರೆಗಳಿಗೆ ಭೂಮಿಯಲ್ಲಿ ಬಿದ್ದು ಸ್ವಲ್ಪ ಹೊರಳಿದರೆ ಆಯಾಸ ಪರಿಹಾರವಾಗುತ್ತದೆ. ಅದರಂತೆ ಇಲ್ಲಿ ಆ ಕುದುರೆಯು ನೆಲದಲ್ಲಿ ಬಿದ್ದುಹೊರಳಿ ಎದ್ದಮೇಲೆ—ಅಂದರೆ ಶ್ರಮಪರಿಹಾರವಾದಮೇಲೆ, ಗೃಹೀತಕತಿಪಯತೃಣಾಂಕುರಗ್ರಾಸಂ = ಸ್ವಲ್ಪ ಎಳೆಯ

ಗರಿಕೆಯನ್ನು ತಿಂದಮೇಲೆ. ಪೀತಾಂಬುವನ್=ನೀರು, ಕುಡಿದಿದ್ದುದನ್ನು, ಆಸನ್ನ ವಿಟಪಿ=ಹತ್ತಿರದಮರ, ನಿಯಮಿಸಿದಂ=ಕಟ್ಟಿಹಾಕಿದನು.

೨೭. ಕನಕಮಯ ಶೃಂಖಲೆ=ಚಿನ್ನದ ಸರಪಳಿ, ಶಾದ್ವಲತೃಣ=ಎಳೆಯ ಗರಿಕೆಯ ಹುಲ್ಲು, ಸಾರ್ಚು=ಅಡುಕು,

ವ|| ವಿಬುಧ ಕಮಳಾಕರ ರಾಜಹಂಸರ್=ವಿದ್ವಾಂಸರೆಂಬ ಸರೋವರಕ್ಕೆ ರಾಜಹಂಸದ ಹಾಗೆ ಇರುವವನು. ಚಾತಕನಂತೆ=ಚಾತಕಪಕ್ಷಿಯಂತೆ, ಕೃತಜಲಾಹಾರ ನಾಗಿ=ನೀರು ಕುಡಿದು ಆಹಾರವನ್ನು ತಿಂದು.

೨೮. ಹಂಸದ ಇಂಪಾದ ಧ್ವನಿಯಿಂದಲೂ ಶೈತ್ಯದಿಂದಲೂ, ಸೌಂದರು ದಿಂದಲೂ, ರುಚಿಯಿಂದಲೂ,ತಾವರೆಯ ಗಂಧದಿಂದಲೂ ಈ ಸರೋವರವು ಪಂಚೇಂದ್ರಿಯ್ಯ ಸುಖವನ್ನುಂಟುಮಾಡುತ್ತಿದೆ.

೨೯. ಇಂದೂಪಲ=ಚಂದ್ರಕಾಂತಶಿಲೆ. ಸಾರ್ದು=ಸೇರಿ, ಮೇಲುದಂ ಉಂಡೆ ಸುತ್ತಿ=ಉತ್ತರೀಯವನ್ನು ಉಂಡೆಯಾಗಿಸುತ್ತಿ. ಪಟ್ಟಿರ್ದಂ=ಮಲಗಿದ್ದನು.

೩೦. ಮುರಿದ ಕೊರಲ್=ಕೊಂಕಿದಕತ್ತು, ಕಡೆಲಾಯ....ಗಱುಂಕೆ=ಬಾಯ ಕಡೆಯಿಂದ ಹರಿದು ಬರುತ್ತಿರುವ ಜೊಲ್ಲಿನಲ್ಲಿ ಸೇರಿಕೊಂಡು ಬರುತ್ತಿರುವ ಹಸುರಾದ ಗರಿಕೆಯಹುಲ್ಲು.

೩೧. ಪೆಣ್ದುಂಬಿಯಗಾವರಂಬೊರೆದು=ಹೆಣ್ಣುದುಂಬಿಯ ಗೀತದೊಡಗೂಡಿ, ಒಂದೋಜೆಯೊಳ್‌ಸಂದ=ಒಂದೇವಿಧವಾಗಿ ಸೇರಿರುವ, ಕಾಕಲಿ=ಸಣ್ಣಧ್ವನಿ, ವಿಪಂಚೀ ನಾದಂ=ವೀಣೆಯಧ್ವನಿ, ಪಳಂಚಲೆವುತ್ತಿರ್ದಪುದು=ಬಂದು ತಾಗುತ್ತಿದೆ.

೩೨. ಗೇಯುದ ದನಿ=ಸಂಗೀತಧ್ವನಿ, ಗೇಯಮಾರ್ಗ=ಗಾನದಿಂದ ಸೂಚಿಸ ಲ್ಪಟ್ಟ ದಾರಿ.

ವ|| ಉಪಾಂತಪರ್ವತ=ಹತ್ತಿರದಲ್ಲಿರುವ ಬೆಟ್ಟ, ವಿಕೀರ್ಯಮಾಣ=ಚೆಲ್ಲ ಲ್ಪಟ್ಟ, ಕನಕಕೇತಕೀವ್ರಜ=ಚಿನ್ನದ ಕೇದಗೇಹೂಗಳರಾಶಿ. ಸಹಕಾರ=ಮಾವಿನಗಿಡ, ಮಧುವ್ರತ=ದುಂಬಿ, ಕಪೋತ ಪೋತ ಪಾತಿತ=ಪಾರಿವಾಳದ ಮರಿಗಳಿಂದ ಬೀಳಿ ಸಲ್ಪಟ್ಟ, ದಾಡಿಮೀನೀಡಂ=ದಾಳಂಬಿಯ ಗೂಡು, ಸಾಮಜ=ಆನೆ, ಪಿನದ್ಧ=ಲೂಟಿ ಮಾಡಲ್ಪಟ್ಟ, ಹರಿದ್ವಿತಾನ=ಹಳದಿಯ ಬಾವುಟ, ಲತಾಪ್ರತಾನ=ಬಳ್ಳಿಯರಾಶಿ, ಸೌರ ಭಾಕೃಷ್ಟ=ವಾಸನೆಯಿಂದ ಆಕರ್ಷಿಸಲ್ಪಟ್ಟ, ತರಂಗಿಣಿ=ನದಿ, ಶೂಲಪಾಣಿ ದೇವಾ ಯತನಂ=ಈಶ್ವರನ ದೇವಾಲಯ, ಅನತಿದೂರ=ದೂರವಲ್ಲದ=ಸಮೀಪದಲ್ಲಿರುವ.

೩೩. ಹರಹಾಸಾವಯವ=ಈಶ್ವರನ ನಗುವಿನಿಂದ ಕೂಡಿದ ಶರೀರ, ಚತು ರ್ವಕ್ತ್ರಸುಂದರಂ=ನಾಲ್ಕು ಮುಖದಲ್ಲಿಯೂ ಸುಂದರವಾಗಿರುವುದು. ಮೌಕ್ತಿಕಶಿಲಾ ಲಿಂಗ=ಮುತ್ತಿನ ಶಿಲೆಯ ಲಿಂಗ.

೩೭. ಅಮೃತಾಂಭೋರಾಶಿಪೂರಪ್ರತಿಮ = ಅಮೃತ ಸಮುದ್ರದ ಪ್ರವಾಹಕ್ಕೆ ಸಮಾನವಾದ, ತಪಸ್ಸಂಚಯ=ತಪಸ್ಸಿನ ರಾಶಿ, ತಾರಾಚಳಮಂ=ಕೈಲಾಸಪರ್ವತ

ವನ್ನು, ನುಣ್ಚಿಪಂತೆ=ನುಣುಪು ಮಾಡುವ ಹಾಗೆ, ಅಸದಳಂ=ಅಧಿಕವಾಗಿ, ಹೆಚ್ಚಾಗಿ, ಅತನುಹರನನ್=ಮೂರ್ತಿರಹಿತವಾದ ಮನ್ಮಥನನ್ನು ಕೊಂದ ಈಶ್ವರನನ್ನು (ಲಿಂಗವನ್ನು)

೩೭. ಪಳುಕಿನನಿಲಯ=ಸ್ಫಟಿಕದ ಮಂದಿರ, ಅಮೃತಾಬ್ಧಿಜಲ=ಕ್ಷೀರಸಮುದ್ರದ ನೀರು, ಅಭ್ರಕಪಟಲ=ಕಾಗೆಯ ಬಂಗಾರದ ಪದರ.

೩೮. ಧವಳಗುಣದೆ=ಬಿಳಿಯ ಗುಣದಿಂದಲೇ, ನಿರ್ಮಿಸಿದನಾಗವೇಟ್ಕುಂ= ನಿರ್ಮಿಸಿದ್ದಿರಬೇಕು.

೪೦. ಹರಹಾಸದ್ಯುತಿ=ಈಶ್ವರನ ನಗುವಿನ ಕಾಂತಿ, ವಿರಂಚಿಖ್ಯಾತಿ=ಬ್ರಹ್ಮನ ಕೀರ್ತಿ, ತ್ರಯೀವಧು=ವೇದಾಧಿದೇವತೆ,

೪೧. ಬೀಜರುಚಿರಕಳೆ=ಬೀಜದ ಮನೋಹರವಾದ ಕಾಂತಿ, ಶೇಷದೇಹರುಚಿ =ಆದಿಶೇಷನ ದೇಹದ ಕಾಂತಿ,

೪೪. ತೆಗೆದರೋ=ಮಾಡಿದರೋ, ನವಮೌಕ್ತಿಕ=ಹೊಸ ಮುತ್ತು, ಮೃಣಾಳ =ತಾವರೆಯ ದಂಟು, ಕುಂಚಿಗೆ=ಕುಂಚ, ಕರ್ಚಿ=ತೊಳೆದು, ಪಾರದಂದೊಡೆದರೋ =ಪಾದರಸವನ್ನು ಲೇಪನ ಮಾಡಿದರೋ, ಕರಮೆ=ವಿಶೇಷವಾಗಿ,

೪೫. ರಜತಾಭ್ರಕದ್ರುತಿ = ಬಿಳಿಯ ಕಾಗೆಬಂಗಾರದ ರಸ, ಅಭಿಷವ= ಅಭಿಷೇಕ, ಪುತ್ಥಳಿಕೆ=ಬೊಂಬೆ,

೪೬. ತೆಗೆದ=ಆರಿಸಿಕೊಂಡ, ಮಡಲ್ತು=ಹೆಚ್ಚಿ, ಪ್ರಸರಿಸಿ, ಮೃಗಾಂಕಮೌಳಿ = ಈಶ್ವರ, ಭಸ್ಮರೇಣು=ವಿಭೂತಿಯ ಧೂಳು, ವಾಃಕಣ=ನೀರಿನ ಹನಿ, ಪೆಗಲ್ವರಂ =ಹೆಗಲಿನವರೆಗೆ,

೪೭. ಉತ್ತಮಾಂಗ=ತಲೆ, ಪಾದಾಯುಗ್ಮ=ಪಾದಗಳ ಜೊತೆ, ಭವಸನ್ನಿಧಿ =ಈಶ್ವರನ ಸಮೀಪ,

೪೮. ತಾರಾಚೂರ್ಣ = ಮುತ್ತಿನಹುಡಿ, ಹೇಮಾಚಳ ಮೇಖಳೆ = ಹಿಮ ವತ್ಪರ್ವತದ ತಪ್ಪಲು,

೪೯. ಸಿರಿ=ಕಾಂತಿ, ಹೊಳಪು, ಪುಂಡರೀಕ=ತಾವರೆ,

೫೦. ಒಸರ್ವಂತೆ=ಜಿನುಗುತ್ತಿರುವಹಾಗೆ, ಮನೋಮಣಿದೀಪ್ತಿ=ಮನಸ್ಸೆಂಬ ರತ್ನದ ಕಾಂತಿ, ವರ್ಣ ಸಮೂಹ=ಅಕ್ಷರಗಳಗುಂಪು, ಒತ್ತುಗೊಂಡು=ಒಂದಾಗಿ ಸೇರಿ >ಹೊಂದಿಕೊಂಡು, ಒಸೆದು=ಪ್ರೀತಿಸಿ, ಬಗೆಗೆ=ಮನಸ್ಸಿಗೆ,

೫೩. ಒಳ್ಗದಿರ್ಗಳ್=ಒಳ್ಳೆಯ ಕಿರಣಗಳು, ಎಳಸಿದವು=ಆಶ್ರಯಿಸಿದುವು.

೫೪. ಲೋಹಿತ=ಕೆಂಪು, ದುಗುಲ=ದುಕೂಲ>ರೇಷ್ಮೆಯ ಬಟ್ಟೆ.

ವ॥ ಧ್ರುವಪ್ರತಿಬದ್ಧಮಂ=ಧ್ರುವವೆಂಬ ತಾಳದಿಂದ ಕೂಡಿದುದು, ಧ್ರುವ ನಕ್ಷತ್ರದಿಂದ, ಪ್ರತಿಬದ್ಧ=ಕೂಡಿದುದು, ಯುಕ್ತವಾದುದು. ಘೂರ್ಣಿತ=ತಿರುಗಿಸ ಲ್ಪಟ್ಟ, ಶಬ್ದಮಾಡಲ್ಪಟ್ಟ, ಮಂದ್ರ=ತಗ್ಗಿದ. ತಾರ=ಎತ್ತರವಾದ ಧ್ವನಿಯುಳ್ಳ, ಕರಿಯ ಗುಡ್ಡೆಯುಳ್ಳ, ಭಾವನಾ=ಶಬ್ದವ್ಯಾಪಾರದಿಂದ, ಕರ್ಮಪ್ರವರ್ತನೆಯಿಂದ, ಅನುಬದ್ಧ

ಸಂಗತವಾದ.

೫೫. ಪಳುಕಿನ ಭಿತ್ತಿ=ಸ್ಫಟಿಕದ ಗೋಡೆ, ಮೂರ್ತೊಳಗುವ=ಪ್ರತಿಬಿಂಬಿಸುವ

೫೭. ದಿವಜತೆಯಿಂ=ದೇವತೆಯಾದುದರಿಂದ, ದಿವಸಂಗಳ ಪವಣ್=ವಯಸ್ಸಿನ ಅಳತೆ,

೫೮. ಊರ್ಜಿತಮತಿ=ಚುರುಕಾದ ಬುದ್ಧಿ, ಪಾಶುಪತವ್ರತೆ=ಈಶ್ವರ ಭಕ್ತಿಯುಳ್ಳವಳು

೫೯. ಸರೋರುಹಷಂಡ=ಸರೋವರ,

೬೦. ಭವಾದ್ರಿ=ಕೈಲಾಸ ಪರ್ವತ. ತೊಟ್ಟನೆಕೊಳೆ=ಥಟ್ಟನೆ ಗ್ರಹಿಸುವಷ್ಟರಲ್ಲಿಯೇ, ಸತಿ ನೀಂ ಆರ್ಗೆ=ಸತಿಯೇ ನೀನಾರಿಗೆ ಹುಟ್ಟಿದವಳು>ಯಾರ ಮಗಳು, ಉಬ್ಬೆಗ=ಉದ್ವೇಗ>ಚಿಂತೆ,

ವ॥ ನೆಮ್ಮಿ=ಒರಗಿಕೊಂಡು, ಗೀತಾವಸಾನ=ಹಾಡಿನ ಕೊನೆ, ಪಾರುತ್ತಿರ್ದುದು=ನಿರೀಕ್ಷಿಸುತ್ತಿದ್ದು,

೬೧. ವಲ್ಲಕೀಗೇಯ=ವೀಣಾಧ್ವನಿ, ಮಾಣಲ್ಕೆ=ನಿಲ್ಲಲಾಗಿ, ಮಧುಕರಸ್ವನಂ=ದುಂಬಿಯ ಧ್ವನಿ,

ವ॥ ತ್ರೈಲೋಕ್ಯರಕ್ಷಾಮಣಿ=ಮೂರು ಲೋಕವನ್ನೂ ರಕ್ಷಿಸುವವರಲ್ಲಿ ಅಗ್ರೇಸರನಾದವನು.

೬೨. ಒಸೆದಾಶ್ವಾಸಿಸುವಂತೆ=ಪ್ರೀತಿಯಿಂದ ಆಶೀರ್ವಾದ ಮಾಡುವ ಹಾಗೆ, ಅಚ್ಚತೀರ್ಥ ಸಮೂಹಾಂಬುಗಳಿಂದಂ=ಪರಿಶುದ್ಧವಾದ ಪುಣ್ಯ ತೀರ್ಥಗಳ ಸಮೂಹದಿಂದ, ಪೂತತ್ವಮಂ=ಪವಿತ್ರತೆಯನ್ನು, ಪಸರಿಪ್ಪಂತೆ=ಪ್ರಸರಿಸುವ ಹಾಗೆ, ಪದಪಿನಿಂದೆ=ಸಂತೋಷದಿಂದ, ದೃಕ್ತೃಪ್ತಿ=ನೋಟದ ತೃಪ್ತಿ, ನೇತ್ರಾನಂದ,

೬೩. ಮದ್ಭೂಮಿ=ನನ್ನ ಈ ಪ್ರದೇಶ, ಅಭ್ಯಾಗತ=ಕರೆಯದೆ ತಾನಾಗಿ ಬಂದಿರುವವನು,

೬೪. ನಿರ್ಝರಾಸ್ಫಾಲನ=ಕಾಡನದಿಯ ಬಡಿತ, ಶೀಕರ ಪ್ರಸರ=ತುಂತುರು ಹನಿಯ ಹರಡುವಿಕೆ. ಬೃಹತ್+ಗುಹಾಂಗಣಂ=ದೊಡ್ಡ ಗುಹೆಯ ಒಳಭಾಗ,

೬೫. ಸುರಭೂಜವಲ್ಕವಸನದ್ವಯಂ = ಕಲ್ಪವೃಕ್ಷದ ನಾರಿನಿಂದ ಮಾಡಿದ ಒಂದು ಜೊತೆ ವಸ್ತ್ರ. ನೇಲಿದುದು=ನೇತುಹಾಕಿರುವುದು, ಜೋಗಿವಟ್ಟಗೆ=ಯೋಗಪಟ್ಟಿಕೆ. ನಿತಂಬಿನಿ=ಸ್ತ್ರೀ,

೬೬. ರಕ್ಷಾಂಕಿತತನು=ವಿಭೂತಿಯಿಂದ ಲೇಪಿಸಲ್ಪಟ್ಟ ಶರೀರವುಳ್ಳ ಆ ತಪಸ್ವಿನಿ ತೀವಿದತ್ತು=ತುಂಬಿ ಹೋಯಿತು.

೬೭. ಬಗೆದಂದಪೆ೯=ಮನಸ್ಸು ಮಾಡುತ್ತಿದ್ದೇನೆ. ಗಟಿಪಲ್=ಹರಟುವುದಕ್ಕೆ, ಬಗೆದಪು೯ದು=ಮನಸ್ಸು ಮಾಡುವುದು.

೬೮. ಕೌತಕಾವಹಂ=ಕುತೂಹಲವನ್ನುಂಟುಮಾಡುವುದು, ಅದಱಿಂ+ಇನ್

+ಬೆಸಗೊಳಲ್ಕೆ=ಆದುದರಿಂದ ಇನ್ನು ಮೇಲೆ ಪ್ರಶ್ನೆಮಾಡುವುದಕ್ಕೆ, ಅನುಗೆಯ್ಯುತ್ತಿರ್ದ ಪುದು=ಸಿದ್ಧವಾಗುತ್ತಿದೆ.

೬೯. ಸುರ....ಅಲಂಕರಿಸಿತೋ=ಸುರಮುನಿಸಿದ್ಧಖೇಚರ ವಂಶಗಳಲ್ಲಿ ಯಾವ ಕುಲದಲ್ಲಿ ಹುಟ್ಟಿದೆ. ಪಂಚಭೂತಮಯ=ಪೃಥಿವಿ, ಅಪ್, ತೇಜಸ್ಸು, ವಾಯು, ಆಕಾಶ ಎಂಬ ಅಯ್ದು ಪದಾರ್ಥಗಳಿಂದ ಕೂಡಿರುವುದು. ಪೊದಲ್ದು+ಇಡಿದ=ಒತ್ತಾಗಿ ವ್ಯಾಪ್ತ ವಾಗಿರತಕ್ಕ, ಬಿಡದೆ+ಒರ್ವಳಿರ್ಪುದೇಂ=ಏಕಾಕಿಯಾಗಿರುವುದಕ್ಕೆ ಕಾರಣವೇನು ?

೭೦. ಮಿಳಿರ್ವ=ಹೊಳೆಯುತ್ತಿರುವ, ಗಂಡಮಂಡಲ=ಕೆನ್ನೆ, ಇರದುಣ್ಮೆ= ಒಂದೇ ಸಮನೆ ಹೆಚ್ಚುತ್ತಿರಲು, ಶಬ್ದಮಣಮಿಲ್ಲದೆ=ಸ್ವಲ್ಪವೂ ಸದ್ದೇ ಇಲ್ಲದೆ> ಮೌನವಾಗಿ, ಕಣ್ಮುಗಳ್ದಳ್=ಕಣ್ಣನ್ನು ಮುಚ್ಚಿದಳು. ಅಗ್ಗಳಿಪ ಅಳವಿಂದೆ=ಹೆಚ್ಚಾದ ಅಳುವಿನಿಂದ ಕೂಡಿ, ಅಂದರೆ ಕಣ್ಣನ್ನು ಮುಚ್ಚಿಕೊಂಡು ಅತ್ತಳು ಎಂದು ಅಭಿಪ್ರಾಯ. ಅಳ್ ಎಂಬ ಧಾತುವಿಗೆ ಭಾವಾರ್ಥದ ವು ಪ್ರತ್ಯಯವು ಪರವಾದ್ದರಿಂದ ಧಾತುವಿನ ಕಡೆಯ ಅಕ್ಷರಕ್ಕೆ ಅಕಾರಾದೇಶವು ಬಂದು ಅಳವು ಎಂದಾಗಿದೆ, ಶ.ಮ.ಸು ೨೦೦.

೭೧. ಕಲ್ಪಾಂತದ ಬಱಿಸಿಡಲ್ ತಾಂ ಎಯ್ತಂದು ರಸೆಯಂ ತಾಂಕಿ ಪೊಯ್ಯಲ್ ಎಂದನ್ವಯ. ಮುಗ್ಗಲಿಸಲ್=ಕಡಿಮೆ ಮಾಡುವುದಕ್ಕೆ, ಇಕ ಆರ್ಪರ್=ಇನ್ನು ಶಕ್ತ ರಾಗುತ್ತಾರೆ, ಎತ್ತಿತ್ತಲೀಗಳ್ ಬೆಸಗೊಂಡೆಂ=ನಾನು ಈಗ ಏಕೆ ಪ್ರಶ್ನೆ ಮಾಡಿದೆ, ಉಮ್ಮಳಿಸಿ=ದುಃಖಪಟ್ಟು, ವ್ಯಗ್ರನಾದಂ=ಕಳವಳಕ್ಕೊಳಗಾದನು.

ವ॥ ಮುಖಪ್ರಕ್ಷಾಳನ=ಮುಖವನ್ನು ತೊಳೆದುಕೊಳ್ಳುವುದು, ಅಂಜಳಿ= ಬೊಗಸೆ, ಅವಧಾರಿಸುವುದು=ಒಪ್ಪಿಸಿಕೊಳ್ಳಬೇಕು, ಭೂಪನಿಳಿಂಪ=ರಾಜಶ್ರೇಷ್ಠ, ಉಪರೋಧಿಸುತ್ತ=ಬಲಾತ್ಕಾರಮಾಡುತ್ತ.

೭೨. ಬಾಷ್ಪಾಂಬುಪೂರ್ಣಲೋಚನ=ನೀರಿನಿಂದ ತುಂಬಿದ ಕಣ್ಣು, ತತ್+ ಜಳ=ಆ ನೀರು, ವಲ್ಕಾಂಚಲ=ನಾರುಮಡಿಯ ಸೆರಗು,

೭೩. ಉರಗಮುಖೋಗ್ರದಂಷ್ಟ್ರಸಹಜಾತೆ=ಹಾವಿನ ಬಾಯಿನಲ್ಲಿರುವ ಭಯಂ ಕರವಾದ ಹಲ್ಲಿನೊಡನೆ ಹುಟ್ಟಿದವಳು (ಅಂದರೆ ಅಷ್ಟು ಕ್ರೂರಿ ಎಂದಭಿಪ್ರಾಯ), ಕಾಲ ಪಾಶ ನಿಷ್ಠುರತರರೂಪೆ=ಯಮನಪಾಶಕ್ಕಿಂತ ಕಠಿನವಾದ ಆಕಾರವನ್ನುಳ್ಳವಳು, ಸಹಜ ಶಾಕಿನಿ=ಸ್ವಭಾವವಾಗಿ ಶಾಕಿನಿಯೆಂಬ ರಾಕ್ಷಸಿಯಾಗಿರುವವಳು, ಅಪಾರ ಘೋರ ದುರಿತಾರ್ಣವಜಾತೆ=ಎಲ್ಲೆಯಿಲ್ಲದ ಭಯಂಕರವಾದ ಪಾಪ ಸಮುದ್ರದಲ್ಲಿ ಹುಟ್ಟಿದವಳು, ಆತ್ಮವಲ್ಲಭಾಂತಂತೆ=ತನ್ನ ಸ್ವಂತ ಗಂಡನನ್ನು ದೂರ ಮಾಡಿದವಳು (ಬಿಡಲ್ಪಟ್ಟವಳು) ಬೆಸಗೊಳ್ವುದೆ=ಪ್ರಶ್ನೆ ಮಾಡಬಹುದೇ ? ಪೇೞಲ್ಬಪೆ=ಹೇಳಬಲ್ಲೆನೆ ?

೭೪. ಗತಭಾಗ್ಯೆ=ಅದೃಷ್ಟಹೀನೆ, ಪತಿ ದುಃಖ ಭಾಜನೆ=ಪತಿ ದುಃಖಕ್ಕೆ ಭಾಗಿ ಯಾದವಳು, ಕೌತುಕಮೆಂಬೆಯಪ್ಪೊಡೆ = ಕುತೂಹಲವನ್ನುಂಟುಮಾಡುವುದೆಂದು ನೀನು ಹೇಳುವುದಾದರೆ, ಉಸಿರ್ದಪೆ=ಹೇಳುತ್ತೇನೆ.

ಮಹಾಶ್ವೇತೆಯ ವೃತ್ತಾಂತ

೧. ತ್ರಿದಿವ=ಸ್ವರ್ಗ, ಅಚ್ಚರಸಿಯರ್=ಅಪ್ಸರಸ್ತ್ರೀಯರು, ವಿದಿತಂ=ಪ್ರಸಿದ್ಧ, ಪೆಸರಿಂ ಬೇಱೆಬೇಱೆನೆ ಪದಿನಾಲ್ಕು ವಂಶಗಳ ಉದಿಸಿದುವು ಎಂಬುದನ್ವಯ.

೨. ಎಲರ್=ವಾಯು, ಹರಿಯಿಂ=ಸೂರ್ಯನಿಂದ, ಅಮರ್ದಿಂ=ಅಮೃತದಿಂದ,

ವ || ಪದಿನೈವರಿಂ=ಹದಿನೈದು ಜನಕ್ಕಿಂತ.

೩. ಅಱುವರಿಂಪಿರಿಯಂ=ಆರು ಮಂದಿಗಿಂತ ಹಿರಿಯ,

೪. ಚಿತ್ರರಥಾನನಪುಂಡರೀಕಹಂಸಂ=ಚಿತ್ರರಥನ ಮುಖ ಕಮಲಕ್ಕೆ ಸೂರ್ಯನೋಪಾದಿಯಲ್ಲಿರುವ ಹಂಸಂ=ಸೂರ್ಯ, ಹಂಸಂ=ಹಂಸನೆಂಬುವನು. ಅರಿಷ್ಟೆಗೆ ಉದಯಿಸಿದಂ.

೫. ಆತ್ತಯಶರ್=ಯಶಸ್ಸಿನಿಂದ ಕೂಡಿದವರು, ಆ ತಮ್ಮುತ್ರೀರ್ವರ್=ಆ ತಾವಿಬ್ಬರೂ, ತಮ್ಮುತ್ರೀರ್ವರೆಂಬಲ್ಲಿ ತಮ್ಮ ಎಂಬ ಶಬ್ದಕ್ಕೆ ಸ್ವರಾದಿಯಾದ ಸಂಖ್ಯಾವಾಚಕಶಬ್ದವು ಪರದಲ್ಲಿರುವುದರಿಂದ ನಡುವೆ ಉತ್ ಎಂಬ ಆಗಮವು ಬಂದಿರುವುದು. ಶ.ಮ.ಸೂ ೧೪೮

ವ || ಸೋಮಮಯೂಖಸಂಭವೆಯರ್=ಚಂದ್ರಕಿರಣದಿಂದ ಹುಟ್ಟಿದವರು.

೬. ಕಮನೀಯ ಕಲಾಕಲಾಪ ಲಾವಣ್ಯ ಝರೀ ಸಮುದಿತೆ=ಮನೋಹರವಾದ ಕಲೆಗಳ ಸಮೂಹ ಸೌಂದರ್ಯವೆಂಬ ಪ್ರವಾಹದಲ್ಲಿ ಹುಟ್ಟಿದವಳು. ಅಮೃತಾಂಶುನಿಭಾಸ್ಯೆಂ=ಚಂದ್ರನಂತೆ ಮುಖವುಳ್ಳವಳು.

೭. ಇಂಗಡಲಿಂಗಮರನದೀಸಂಗಂ=ಕ್ಷೀರ ಸಮುದ್ರಕ್ಕೆ ದೇವ ಗಂಗಾನದಿಯು ಸೇರುವಿಕೆ.

೮. ಸಮಸತ್ವಮನ=ಸಮಾನವಾದ ಸ್ಥಿತಿಯುಳ್ಳ ಮನಸ್ಸು, ಅಥವಾ ಸಮಾನವಾದ ಸತ್ವ ಗುಣದಿಂದ ಕೂಡಿದ ಮನಸ್ಸು, ಸಮವಯೋಯೋಗಂ-ಸಮಸಂದತ್ತು=ಸಮಾನ ವಯಸ್ಸಿನ ಕೂಡುವಿಕೆ ಉಂಟಾಯಿತು.

೯. ನಿರ್ಭಾಗ್ಯನಿವಾಸೆಯೆಂ = ದೌರ್ಭಾಗ್ಯಕ್ಕೆ ಆವಾಸಸ್ಥಾನಳಾದವಳು ; ಹಿಂದೆಯೆ ತಿಳಿಸಿರುವಂತೆ ನಾಮಪದಕ್ಕೆ ಆಖ್ಯಾತಪ್ರತ್ಯಯ ಪರವಾಗಿದೆ-ಓರ್ವ+ಎ+ಎನ್+ಎ=ಓರ್ವನೆ ಶಮ ಸೂ ೯೯, ೨೧೯, ೨೧೯. ತಾತಂ=ತಂದೆ.

ವ|| ಅನಪತ್ಯರ್=ಮಕ್ಕಳಿಲ್ಲದವರು, ಪುತ್ರನಿಂದಗ್ಗಳಂ=ಮಗನಿಗಿಂತ ಹೆಚ್ಚಾಗಿ, ನಡಪುತ್ತಮಿರೆ=ಸಾಕುತ್ತಿರಲು, ಅವಿದಿತ ಸ್ನೇಹ ಶೋಕಾಯಾಸಂ=ಸ್ನೇಹ, ಶೋಕ ಆಯಾಸ ಎಂಬುದರ ಅರಿವೇ ಇಲ್ಲದ, ಶೈಶವಂ=ಬಾಲ್ಯ, ಪತ್ತುವಿಡುವುದುಂ=ಬಿಟ್ಟು ಹೋಗಲಾಗಿ >ಕಳೆದುಹೋಗಲಾಗಿ.

೧೦. ವಸಂತಮಾಸ=ಚೈತ್ರಮಾಸ, ವಸಂತಮನಾಂತ=ಕೆಂಪು ಬಣ್ಣವನ್ನು ಹೊಂದಿದ, ಕುಜಾತಪಲ್ಲವ ಪ್ರಸರ=ಮರಗಳ ಚಿಗುರಿನ ಸಮೂಹ, ಅನುಕ್ರಮದಿಂ=ಕ್ರಮವಾಗಿ, ಮತ್+ಅಂಗದೊಳ್=ನನ್ನ ಶರೀರದಲ್ಲಿ ವಿಜೃಂಭಿಸಿದುದು=ಅಭಿವೃದ್ಧಿ

ಯಾಯಿತು.

೧೧. ಸ್ಮರರಾಗ=ಮನ್ಮಥ ಸಂಬಂಧವಾದ ಮೋಹ, ಅದರಿಂದುಂಟಾದ ಅಂಧತಮ =ಕುರುಡು, ಅಸತೀ ಕೇಳಿ=ಜಾರೆಯರ ಆಟ, ವಿಹಾರ, ಪುಷ್ಪ....ರಕ್ತಾಂಬುಗಳ್= ಪುಷ್ಪಬಾಣನಾದ ಮನ್ಮಥ ಬಿಲ್ಲಿನ ಹೆದೆಯನ್ನು ಟಂಕಾರ ಮಾಡುವ ಶಬ್ದದಿಂದ ಸೀಳಿ ಹೋದ ದಾರಿಹೋಕರ ಎದೆಯ ರಕ್ತಧಾರೆಯು, ಮಾರ್ಗಾಂತರದೊಳ್=ಮಾರ್ಗ ಮಧ್ಯದಲ್ಲಿ, ಕೂಡೆ ಸೂಸುತ್ತಿರಲ್=ವಿಶೇಷವಾಗಿ ಚೆಲ್ಲುತ್ತಿರಲು, ಶಿಶಿರನೃಪೋದ್ಯತ್ +ಕೃತಾಂತಂ=ಶಿಶಿರ ಋತುವೆಂಬ ರಾಜನಿಗೆ ಪ್ರಬಲ ಯಮನೋಪಾದಿಯಲ್ಲಿರುವ, ವಸಂತಂ ಬಂದುದು.

ವ॥ ಉಳ್ಳಲರ್ದ=ಅರ್ಘ ಅರಳಿರುವ, ಶಿಖರಿ ರಾಜನಂದಿನಿ=ಶಿಖರವುಳ್ಳದ್ದು ಶಿಖರಿ=ಪರ್ವತ-ಅವುಗಳ ರಾಜ ಹಿಮವಂತ-ಅವನ ನಂದಿನಿ ಪಾರ್ವತಿ, ಮೃಡ= ಈಶ್ವರ, ಪಡಿವರಿಜು=ಪ್ರತಿಕೃತಿ > ಪ್ರತಿಮೆ. ಕುಂಬಿಟ್ಟು=ನಮಸ್ಕರಿಸಿ,

೧೨. ಮದಭೃಂಗ....ವಿತಾನಂ = ಮದಿಸಿರುವ ದುಂಬಿಗಳಿಂದ ಕೆದರಲ್ಪಟ್ಟ ಹೂವಿನ ರಾಶಿಯಿಂದ ರಮ್ಯವಾದ ಲತೆಗಳ ಸಮೂಹ, ಪಿಕತುಂಡ....ಸಾಲಂ=ಕೋಗಿ ಲೆಯ ಕೊಕ್ಕಿನಿಂದ ಕತ್ತರಿಸಿಲ್ಪಟ್ಟುದರಿಂದ ತೊಟ್ಟಿಕ್ಕುತ್ತಿರುವ ರಸಕೋಶದಿಂದ ಕೂಡಿದ ಮಾವಿನ ಸಮೂಹ, ಶಿಖಿನಾದ .. ರಾಜಿ=ನವಿಲಿನ ಧ್ವನಿಗೆ ಹೆದರಿ ಬಿಟ್ಟುಹೋದ ಸರ್ಪ ಗಳಿಂದ ಕೂಡಿದ ಶ್ರೀಗಂಧದ ಮರದ ಸಮೂಹ, ಒದವಿದ ರಾಗ=ಉಂಟಾದ ಪ್ರೀತಿ, ಅಭೀಕ್ಷಿಸುತ=ನೋಡುತ್ತ

೧೩. ಉಱಿದಲರ್ಗಳ ಪರಿಮಳಮಂ—ಇಳಿಕೈದು = ಉದಾಸೀನ ಮಾಡಿ, ಘ್ರಾಣೈಕತರ್ಪಣಂ=ವಾಸನೆ ನೋಡುವುದರಲ್ಲಿಯೇ ತೃಪ್ತಿ ಹೊಂದುತ್ತಿರುವ, ವನಾನಿಳ ನೀತಂ=ಕಾಡಿನ ಗಾಳಿಯಿಂದ ಸೆಳೆಯಲ್ಪಟ್ಟ,

ವ ॥ ಅನಾಘ್ರಾತಪೂರ್ವಂ=ಹಿಂದೆ ಎಂದೂ ವಾಸನೆ ನೋಡದ,

೧೪. ಅರಸಂಚೆ=ರಾಜಹಂಸ, ನೇವುರದಿಂಚರ=ನೂಪುರದ ಇಂಪಾದ ಧ್ವನಿ.

೧೫. ಗಿರಿಶನಯನಾನಲಾರ್ಚಿ=ಈಶ್ವರನ ಕಣ್ಣಿನ ಬೆಂಕಿಯ ಜ್ವಾಲೆ, ದಂದುಗಂ ಮಿಗೆ=ದುಃಖವು ಹೆಚ್ಚಲು, ರಮ್ಯಗಾತ್ರ=ಮನೋಹರವಾದ ಶರೀರ-ಆಕಾರ.

೧೬. ಐಸಿರಿ=ಐಶ್ವರ್ಯ, ಗಿರಿಶ ಶಿರಶ್ಶೇಖರೇಂದು=ಈಶ್ವರನ ತಲೆಯಲ್ಲಿರುವ ಚಂದ್ರ.

೧೭. ಜ್ವಲನದನಲ ಶಿಖಾಂತರದೊಳ್=ಉರಿಯುತ್ತಿರುವ ಬೆಂಕಿಯ ಜ್ವಾಲೆಯ ಮಧ್ಯದಲ್ಲಿ, ತಟಿಲ್ಲತೆ=ಮಿಂಚು, ಉಷ್ಣಕರಮಂಡಳ=ಸೂರ್ಯಮಂಡಳ,

೧೮. ಸೊಡರಂ ಪರ್ಚಿಸಿದಂತಿರೆ=ದೀಪವನ್ನು ಹತ್ತಿಸಿದ ಹಾಗೆ, ಕಡು+ ಕಪಿಲ=ಕಡುಗವಿಲ=ವಿಶೇಷವಾದ ಹಳದಿಯ ಬಣ್ಣ,

೧೯. ತೊಯ್ದನೆನೆ=ಸಿರುವ>ಒದ್ದೆಮಾಡಿರುವ, ನೇತ್ರಸೂತ್ರ=ವಸ್ತ್ರದ ಬತ್ತಿ

೨೦. ಭಸ್ಮದಿನೆಸೆಯಲ್ = ವಿಭೂತಿಯಿಂದ ಪ್ರಕಾಶಮಾನವಾಗಿರಲು, ಪುಱಿ

ಲ್ಗಟ್ಟಿದ=ಮರಳು ರಾಶಿ ಮಾಡಿದ, ಇನಿಸನ್+ಅನುಕರಿಸಿರ್ದಂ=ಇಷ್ಟು (ಸ್ವಲ್ಪ) ಅನುಕರಿಸಿದ್ದನು.

೨೧. ವನಹರಿಣಕುಲಂ=ಕಾಡಜಿಂಕೆಯ ಸಮೂಹ, ಶೋಭಾಸಂವಿಭಾಗಮಂ ಮನೋಹರತ್ವವನ್ನು, ಲೋಚನಮಾಲೆ=ಜನಗಳ ದೃಷ್ಟಿ ಸಮೂಹ,

೨೨. ಪುಗಲ್=ಪ್ರವೇಶಿಸುವುದಕ್ಕೆ, ಪಡೆಯದೆ=ಅಪೇಕ್ಷೆ ಪಡದೆ, ಪಕ್ವಬಿಂಬ ಚ್ಛವಿ=ಹಣ್ಣಾದ ಬಿಂಬ ಫಲದ ಕಾಂತಿ, ಮಾರ್ಕೊಳ್ವುದು=ಪ್ರತಿಭಟಿಸುತ್ತಿದೆ. ತೊಂಡೆಯ ಹಣ್ಣಿನ ಕಾಂತಿಗಿಂತಲೂ ಅತಿಶಯವಾದ ಕಾಂತಿಯುಳ್ಳದ್ದೆಂದಭಿಪ್ರಾಯ. ಅಧರಮಣಿ =ರತ್ನದಂತಿರುವ ತುಟಿ.

೨೪. ಚಾಪಗುಣ=ಬಿಲ್ಲಿನ ಹಗ್ಗ.

೨೫. ಮನೋಜವಿನಾಶದಿನಲ್ವಿ=ಮನ್ಮಥನ ಸಾವಿಗಾಗಿ ಅಳುತ್ತಿರುವ, ತನ್ಮ ನೋಹರಿ=ಅವನ ಹೆಂಡತಿಯಾದ ರತಿ,

೨೬. ತರಂಗಿಣಿ=ನದಿ, ಸುರಚಿತ=ಮನೋಹರವಾದ

೨೭. ಇಂಬಾಗಿರೆ=ಮನೋಹರವಾಗಿರಲು, ಬಾ೯+ತೊಜಿ, ಅಲುಂಬಿದ= ತೊಳೆದ–ಶುದ್ಧಿ ಮಾಡಿದ, ಜರತ್+ಚಕೋರಲೋಚನ=ಮುದಿಯಾದ ಚಕೋರ ಪಕ್ಷಿಯ ಕಣ್ಣು.

ವ॥ ಸಂಕೇತನಿಕೇತನ=ಏಕಾಂತಗೃಹ (ರಹಸ್ಯವಾದ ಮನೆ)

೨೮. ಅರ್ತಿಯೊಳ್ =(ಆಟ್ರ್ತಿಯೊಳ್) ಪ್ರೀತಿಯಿಂದ, ಬಿಡೆನೋಡಿದೆಂ= ದೃಷ್ಟಿಸಿ ನೋಡಿದೆನು.

೨೯. ಘರ್ಮಬಿಂದು=ಬಿಸಿಯಾದ ಹನಿ,

೩೦. ಗುಂಜತ್ =ಧ್ವನಿ ಮಾಡುತ್ತಿರುವ, ಮದಾಳಿಮಾಲಾಮಂಜರಿ = ಮಂಜರಿಯಂತೆ ಗುಂಡಾಗಿರುವ ಮದಸಿದ ದುಂಬಿಗಳ ಸಮೂಹ. ಸೌರಭ=ವಾಸನೆ, ಸುಮನೋ ಮಂಜರಿ=ಹೂವಿನ ಗೊಂಚಲು,

೩೧. ಸಿರಿ=ಲಕ್ಷ್ಮಿ. ಕಣ್ಗಳ ಪರ್ವಂ=ಕಣ್ಣುಗಳಿಗೆ ಹಬ್ಬ (ಸಂತೋಷವನ್ನುಂಟು ಮಾಡುವುದು) ಸಮೆದ=ಮಾಡಿದ, ಅಬ್ಜಜಂ=ಬ್ರಹ್ಮನು, ಮನೋಹರಮೆನೆ ಮಾಡಿದ ಈಮೊಗದ, ಪೋಲ್ವೆಗೆ=ಹೋಲಿಕೆಗಾಗಿ ಮುನ್ ನೆಗಟಲ್ ತಗುಳ್ಚಿ=ಮಾಡು ವುದಕ್ಕೆ ಪ್ರಾರಂಭಮಾಡಿ, ಬಿತ್ತರಿಸಿದನ್=ಅಭ್ಯಾಸ ಮಾಡಿಕೊಂಡನು. ಅಲ್ಲದೆ=ಹೀಗಿ ಲ್ಲದಿದ್ದರೆ, ಇಂತು=ಹೀಗೆ, ಸಮವಸ್ತುಗಳಂ ಸಮೆವಂತು=ಸಮಾನ ವಸ್ತುಗಳನ್ನು ಸೃಷ್ಟಿ ಸುವಷ್ಟು, ಗಾಂಪನೇ=ಮೂಢನೆ, ಅಂದರೆ ಒಂದೇ ರೀತಿಯ ಪದಾರ್ಥಗಳನ್ನು ಮಾಡ ಬೇಕಾದ ಆವಶ್ಯಕತೆಯಿರಲಿಲ್ಲ. ಇವನ ಮುಖವನ್ನು ಮಾಡುವುದಕ್ಕಾಗಿ ಅದನ್ನು ಮಾದರಿಗಾಗಿ ಮಾಡಿಕೊಂಡನು. ಇವನ ಮುಖವು ಅವೆಲ್ಲವುಗಳಿಗಿಂತ ಸುಂದರವಾಗಿದೆ ಎಂದಭಿಪ್ರಾಯ.

೩೨. ಸುಷುಮ್ನೆ=ಸುಷುಮ್ನೆಯೆಂಬ ಹೆಸರುಳ್ಳ ಕಿರಣದಿಂದ ಕೃಷ್ಣ ಪಕ್ಷದಲ್ಲಿ

ಚಂದ್ರನ ಕಲಾಸಮೂಹಗಳನ್ನು ಸೂರ್ಯನು ಕುಡುಯುತ್ತಾನೆಂಬುದು ಅಸತ್ಯ, ಆ ಪ್ರಭಾ ಸಮೂಹವೆಲ್ಲ ಈ ಶರೀರದಲ್ಲಿ ಪ್ರವೇಶ ಮಾಡುತ್ತದೆ ಎಂಬುದು ತಪ್ಪದು (ಸತ್ಯ). ಹಾಗಿಲ್ಲದಿದ್ದ ಪಕ್ಷದಲ್ಲಿ ಈ ಸುಂದರ ಶರೀರ ಈ ತಪಸ್ಸಿನಲ್ಲಿ ಇಂತಹ ಕಾಂತಿಯನ್ನು ಹೊಂದುತ್ತದೆಯೇ? ಅಂಶುಮಾಲಿ=ಸೂರ್ಯ, ಈಂಟುವಂ = ಕುಡಿಯುತ್ತಾನೆ. ಅಪ್ಪೈಕಯಿಸ್ =ಆಲಿಂಗನ ಮಾಡು, ಕೂಡಿಕೊಳ್,

ವ|| ರೂಪೈಕಪಕ್ಷಪಾತ=ಸೌಂದರ್ಯದಲ್ಲಿಯೇ ಒಲವನ್ನು ಪಡೆದಿರುವುದು.

೩೩. ಭಾವೋದ್ಭವ=ಮನ್ಮಥ, ನವಕುಸುಮಾಸವ=ಹೊಸ ಹೂವಿನ ರಸ, ಅಳಿನಿ=ಹೆಣ್ಣು ದುಂಬಿ.

ವ|| ಉಸಿರೊಡನೆ=ಉಸಿರಾಡುವುದರ ಜೊತೆಯಲ್ಲಿಯೇ, ಎವೆಯಿಕ್ಕುವುದುಂ =ರಪ್ಪೆಬಡಿಯುವುದನ್ನೂ ಮಱೆದು=ಮರೆತು (ಸ್ತಬ್ಧಳಾಗಿ) ಪರಿದುಪತ್ತಲಪ್ಪಳಿಸಿ= ಮೇಲೆ ಬೀಳುವುದಕ್ಕೆ ಆತುರಪಟ್ಟು, ಕೊಂಕಿ=ಅಡ್ಡ ದಾರಿಗೆ ಹೋಗಿ, ಬರೆಪೀರ್ವಂತೆ= ವಿಶೇಷವಾಗಿ ಕುಡಿಯುವ ಹಾಗೆ, ತನ್ಮಯಮಾಗಲೊಡರಿಪೆನ್=ಆತನಲ್ಲಿಯೇ ಒಂದಾಗಿ ಸೇರಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ, ಅಲೆದಪಂ = ಹಿಂಸಿಸುತ್ತಿದ್ದಾನೆ, ಎಡೆಗುಡು= ಅವಕಾಶವನ್ನು ಕೊಡು, ಅಳುಪಂ=ಪ್ರೀತಿಯನ್ನು >ಆಸರೆಯನ್ನು, ಮಱವಟ್ಟರಂತೆ= ಜ್ಞಾನಶೂನ್ಯರಾದವರಹಾಗೆ, ಪಿಡಿಕೆವೆತ್ತರ್=ಹಿಡಿಯಲ್ಪಟ್ಟವರು, (ಮಾಟಮಾಯಗಳಿಂದ)

೩೪. ಪೂಗಣೆ=ಪುಷ್ಪಬಾಣ, ಘರ್ಮವಾರಿ=ಬಿಸಿನೀರು, ಪಕ್ಕುಗೊಡು= ಭಾಗಿಯಾಗು, ಆಶ್ರಯ ಕೊಡು;

೩೫. ಮುನ್ನ ಅವನಱಿಯದನಳೆಂ=ಮೊದಲು ಅದನ್ನು ತಿಳಿಯದವಳಾಗಿದ್ದ ನಾನು, ಅಭಿನವಸಾಧ್ವಸಂ=ಹೊಸದಾದ ಭಯದಿಂದ ಕೂಡಿದ ಸಂಭ್ರಮವು, ಅಳ್ಕಿ= ಹೆದರಿ, ತಳವೆಳಗಾದೆಂ=ತಲ್ಲಣಿಸಿ ಹೋದೆನು.

೩೬. ನಿಯತೇಂದ್ರಿಯನ್ = ಇಂದ್ರಿಯ ಸಂಯಮವುಳ್ಳವನು. (ಇಂದ್ರಿಯವನ್ನು ತಡೆದು ಹತೋಟಿಯಲ್ಲಿಟ್ಟಿರುವವನು.

೩೭. ಕೂರ್ತಂಗನೆಯರ್=ಪ್ರೀತಿಮಾಡಿದ ಸ್ತ್ರೀಯರು, ಪತ್ತುವರ್=ಮೇಲೆ ಬೀಳುವರು, ಎಂಗುವೋ=ಎನ್ನುತ್ತಾನೆಯೋ, ಆವತೆಱದೊಳಂ ನಿಲೆಪಿಡಿಯಲ್ ಎಂತು ಆರ್ತಪೆನಿಲ್ಲ=ಚಿತ್ತಸ್ಥೈರ್ಯವನ್ನು ಹೊಂದಲು ಯಾವ ರೀತಿಯಲ್ಲಿಯೂ ಸಮರ್ಥಳಾಗಲಿಲ್ಲ.

೩೮. ಅನೇಕ ಸ್ತ್ರೀಯರು ಪ್ರೀತಿಮಾಡಿ ಹೋಗಿರುವರೂ ಉಂಟು. ಹೇಗೂ ಪ್ರಿಯರಲ್ಲಿ ಮೋಹವು ಹೆಚ್ಚಾಗಲು ಲಜ್ಜೆಗೆಟ್ಟವರೂ ಉಂಟು. ಆದರೆ ನನ್ನ ಹಾಗೆ ರೂಪನ್ನು ಕಂಡೊಡನೆಯೇ ಇದ್ದಕ್ಕಿದ್ದ ಹಾಗೆ ಲಜ್ಜೆಗೆಟ್ಟು, ಅರಿವುಗೆಟ್ಟು, ದಿಗ್ಭ್ರಾಂತರಾಗಿ ಎದೆಗೆಟ್ಟವರಾರೆಂದು ನಾನೇ ನನ್ನಲ್ಲಿಯೇ ಔತ್ಸುಕ್ಯವನ್ನು ಹೊಂದಿದೆನು.

೩೯. ಎನ್ನೆವರಂ=ಎಲ್ಲಿಯವರೆಗೆ, ಸಚೇತನೆಯಿಂ=ನನ್ನ ಬುದ್ಧಿಯು ನನ್ನ ಹತೋ

ಟೆಯಲ್ಲಿರುವವಳಾಗಿದ್ದೆನೆಯೋ, ಲಘುವಾಗದಿರ್ಪೆನೋ=ಆತ್ಮ ಗೌರವವನ್ನು ಬಿಟ್ಟಿರುವುದಿಲ್ಲವೋ, ಕಜ್ಜಂ=ಕಾರ್ಯಂ,

ವ॥ ಅವಜ್ಞೆಗೆಯ್ಯಲಾಗದು=ಉದಾಸೀನ ಮಾಡಬಾರದು.

೪೦. ತೆಱಂಬೊಳೆಯೆ=ವಿಶೇಷವಾಗಿ ಪ್ರಕಾಶಿಸುತ್ತಿರಲು, ಪಲ್ಲವಕರ್ಣಪೂರ ಮಂಜುಳ ಮಣಿಕುಂಡಲಂ=ಚಿಗುರಿನಿಂದ ಮಾಡಿದ ಮನೋಹರವಾದ ಕಿವಿಯಾಭರಣವು

೪೧. ಅನಿವಾರ್ಯಂಗಳ್=ತಡೆಯುವುದಕ್ಕಾಗದುದು, ಮದಪ್ರದನ್=ಮದವನ್ನುಂಟು ಮಾಡುವವನು>ದಾನ ಮಾಡುವವನು.

೪೨. ರೋಮೋದ್ಗಮಂ=ಪುಳುಕಾಂಕುರ, ಕೂದಲು ಎದ್ದು ನಿಲ್ಲುವುದು. ಇಱಿಅಱಿದಪುದು=ಇನ್ನು ನಾಶವಾಗುತ್ತದೆ,

೪೩. ವಸಂತ ಕುಸುಮಮಂಜರಿ=ವಸಂತಕಾಲದ ಹೂವಿನ ಗೊಂಚಲು, ಕೊನರ್ತ=ಮೊಳಕೆಹೊಂದಿದ, ಅಂಕುರವಾದ,

೪೪. ಅಡರೆ ನೋಡುತ್ತಿರ್ಪುದುಂ=ದುರದುರನೆ ದೃಷ್ಟಿಸಿ ನೋಡುತ್ತಿರಲು, ಕಣ್ಗ ಬೆಳ್ಪಿನ ಅಗುರ್ವು=ಕಣ್ಣಿನ ಕಾಂತಿಯ ಆಧಿಕ್ಯವು. ಕುಮುದಷಂಡಂ=ಕನ್ನೈದಿಲೆಯ ಸಮೂಹ, ಅಚ್ಛೋದಸರೋಂಬುವಂ ಬಿಟ್ಟು ನಭೋಭಾಗಮುಂ ತಳ್ತುತ್ತು ಎಂಬಿನಂ ದಿಶಾಚಕ್ರಮುಂ ಪಸರಿಸಿತ್ತು ಎಂದನ್ವಯ. ವ॥ ನರ್ತನಕ್ಕೆ+ಓಜನಪ್ಪ=ಕುಣಿತಕ್ಕೆ ಉಪಾಧ್ಯಾಯನಾದ, ಉಪಾಧ್ಯಾಯ>ಉವಜ್ಝ>ಉವಜ=ಓಜ=ಆಚಾರ್ಯ, ಅಮರ್ದನುಗುಳ್ವಂತೆ=ಅಮೃತವರ್ಷ ಮಾಡುವ ಹಾಗೆ, ಗೆಯ್ವಂದಮುಂ=ಮಾಡುವ ರೀತಿಯನ್ನು, ಒಸೆದು=ಪ್ರವಿಸಿ, ಸಂಚಲಿಸುವ ಅಂಗಮುಂ, ಸಂಚಾರ ಮಾಡುವ ರೀತಿಯು, ಪೊಡರ್ಪನಪ್ಪುಕೆಯ್ಯದೆ=ಚಲಿಸದೆ, ಇಟಿಯೆ=ದೃಷ್ಟಿಪಾತವುಂಟಾಗಲು, ಪೂದಳೆದುದೆನಿಪ=ಹೂವನ್ನು ಧರಿಸಿತು ಎನ್ನಿಸಿಕೊಳ್ಳುವ, ತೂಕಡನೊಳಕೊಂಡಂತೆ = ನಿದ್ರೆಯಿಂದ ಕೂಡಿದಂತೆ, ಅವಸರಂ ಬಡೆದು = ಅವಕಾಶವನ್ನು ಹೊಂದಿ, ಎಯ್ದೆವಂದು=ಸಮೀಪಕ್ಕೆ ಬಂದು

೪೫. ಆರ್ಗೀತನ್=ಈತನು ಯಾರ ಮಗನು, ಜವ್ವನಿಗತವಸಿ=ಯುವಕತಪಸ್ವಿ, ಅವತಂಸ=ಆಭರಣ, ಅಂಘ್ರಿಪ=ಮರ, ಅಂಘ್ರಿ=ಕಾಲಿನಿಂದ, ಬೇರಿನಿಂದ ಪ=ನೀರನ್ನು ಕುಡಿಯುವುದು, ಅನುಚರಮುನಿ=ಅನುಸರಿಸುತ್ತಿದ್ದ ಋಷಿ,

೪೬. ಉದ್ದೆಸ=ಉದ್ದೇಶ, ಉದ್ಯತನಾದಂ=ಪ್ರಾರಂಭಮಾಡಿದನು,

ವ॥ ವಿದಿತನಿರವದ್ಯವಿದ್ಯಾಕಲಾಪ = ದೋಷರಹಿತನಾದ ವಿದ್ಯಾಸಂಪನ್ನನೆಂದು ಪ್ರಸಿದ್ಧನಾದ,

೪೮. ಭಾಸುರವಿಸ್ತೀರ್ಣಸಿತಾಬ್ಜ=ಪ್ರಕಾಶಮಾನವೂ ವಿಸ್ತಾರವೂ ಆದ ಬಿಳಿಯ ಕಮಲ, ಪದ್ಮಸದ್ಮ=ಸರೋವರ,

೪೯. ನಿಜಾಸನಪುಂಡರೀಕ=ತನ್ನ ಆಸನವಾಗಿದ್ದ ಕಮಲ, ಗಾಡಿ=ಸೌಂದರ

೫೦. ದಿವ=ಸ್ವರ್ಗ,

೫೧. ಕುಸುಮ ವಿಭೂಷಣ=ಹೂವಿನ ಒಡವೆ, ನವಪ್ರಸವಾಸವಪಾನಮತ್ತೆ= ಹೊಸ ಹೂವಿನ ರಸವನ್ನು ಕುಡಿದಿರುವುದರಿಂದ ಮದಿಸಿರುವವಳಾದ,

ವ॥ ಭುವನತ್ರಯಾಭಿರಾಮಂ=ಮೂರು ಲೋಕಕ್ಕೂ ಮನೋಹರವಾಗಿರುವ ಅವತಂಸ=ಆಭರಣ, ತೊಡರ್ಚಿ=ಸಿಕ್ಕಿಸಿ, ಹಸಿತಾಧರ ಕಪೋಲತಲಂ=ಹುಸಿನಗೆ ಯಿಂದ ಕೂಡಿದ ತುಟಿ ಮತ್ತು ಕೆನ್ನೆಯನ್ನುಳ್ಳವನು.

೫೨. ಎಳಸುತ್ತಿರ್ದಪೆ=ಆಶೆಪಡುತ್ತಿದ್ದೀಯೆ, ಸಂಚಳಿಸುತ್ತಂ=ಕಳೆಯುತ್ತ, ತಾರಕೋಜ್ವಳ = ನಕ್ಷತ್ರದಷ್ಟು ಕಾಂತಿಯುತವಾದ, ಅತಿ+ಔತ್ಸುಕ್ಯ = ವಿಶೇಷ ಉತ್ಸಾಹ.

೫೩. ಪೋದತ್ತು=ಹೋಗಿಬಿಟ್ಟಿತು. (ಜಾರಿಬಿದ್ದಿತು) ನಾಣ್+ಬೆರಸು= ನಾಚಿಕೆಯಿಂದ ಕೂಡಿ.

೫೪. ತಳೆವಂತಿರೆ=ಧರಿಸುವಹಾಗಿರಲು, ತಟ್ಟು=ಆಲಿಂಗನ (ಸಂಬಂಧ)

ವ॥ ವ್ಯತಿರೇಕ=ಸಂದರ್ಭ, ಛತ್ರದಾರಿಣಿ=ಕೊಡೆಯನ್ನು ಹಿಡಿಯುವವಳು.

೫೫. ಮೊಗನುಜ್ಜನ=ಮುಖವನ್ನು ತೊಳೆದುಕೊಳ್ಳುವುದು. ನಡೆಗೊಳಲಿರ್ದ ಪರ್=ನಡೆಯುವವರಾಗಿದ್ದಾರೆ (ಹಿಂತಿರುಗವವರರಿದ್ದಾರೆ) ಇಚ್ಛೆ>ಇಚ್ಚೆ = ಅಭಿ ಪ್ರಾಯ, ಅಣಂ=ಸ್ವಲ್ಪವೂ, ಪೊಸತಪ್ಪುದು=ಹೊಸದಾಗಿರುವುದು, ಪಿಡಿ=ಹೆಣ್ಣು ಆನೆ, ಅಂಕುಶಮಿಟ್ಟುಮರಳ್ಚುವಂದದಿಂ=ಅಂಕುಶದಿಂದ ತಿವಿದು ಹಿಂತಿರುಗಿಸುವ ಹಾಗೆ.

೫೬. ಕೀಲಿಸು=ಬಂಧಿಸು, ಗಂಟುಹಾಕು, ಅೞ್ದಿತ್ತೊ=ಮುಳುಗಿದೆಯೋ ಪೊಲ್ದತ್ತೊ=ಹೊಲೆಯಲ್ಪಟ್ಟಿದೆಯೊ, ತೆಗೆದೆ....ಮುದ್ವೇಗದಿಂ=ಹೇಗೋ ದುಃಖದಿಂದ ಅಲ್ಲಿಂದ ಮುಂದೆ ನಡೆದನು.

ವ॥ ಧೈರ್ಯಸ್ಖಲನಧೈ=ೖರ್ಯದ ಜಾರುವಿಕೆ,

೫೭. ನಿಕೃಷ್ಟಜನೋಚಿತಮಾರ್ಗಂ=ನೀಚ ಜನರಿಗೆ ಯೋಗ್ಯವಾದ ದಾರಿ ಸ್ಥೈರಣೆಗೆಟ್ಟು=ಸಮಾಧಾನವನ್ನು ಹೋಗಲಾಡಿಸಿಕೊಂಡು, ಅಱಿವೆತ್ತ ಪೊದುದು= ಜ್ಞಾನವೆಲ್ಲಿಗೆ ಹೋಯ್ತು, ಎರ್ದೆಗೆಟ್ಟು=ಉತ್ಸಾಹಶೂನ್ಯವಾಗಿ, ಡಾವರ=ಬಾಧೆ,

೫೮. ಎಲ್ಲಿತ್ತೊಧೈರ್ಯಂ=ಧೈರ್ಯವೆಲ್ಲಿ ಹೋಯಿತೊ, ಉಪಶಮ=ದಯೆ, ದಾಕ್ಷಿಣ್ಯ, ಉಪಭೋಗರಾಗವಿಷಯದ್ವೇಷಂ=ಸೌಖ್ಯಾಭಿಲಾಷೆಯ ವಿಷಯದಲ್ಲಿದ್ದ ದ್ವೇಷ.

೫೯. ಸಮುದಯ=ರಾಶಿ, ಸಮೂಹ, ಯವ್ವನಾನುಶಾಸನ=ಯುವಕನಿಗ ಬೇಕಾದ ಸಂಯಮ.

೬೦. ವಿಷಯಾಸಕ್ತತೆ=ಸೌಖ್ಯಾಭಿಲಾಷೆ, ನಿನ್ನನ್ನರಂ=ನಿನ್ನಂತಹವರನ್ನು

೬೧. ಮುಂದೆ+ಅಂತೊಯ್ಯಲ್=ನಿನ್ನೆದುರಿಗೆ ಹಾಗೆ ತೆಗೆದುಕೊಂಡುಹೋಗಲು

೬೩. ಭೀಷಣಭ್ರುಕುಟಿ=ಭಯಂಕರವಾದ ಹುಬ್ಬು, ಚುಂಬನಾಭಿ....ತಾಧ ರನ್=ಮುತ್ತಿಡಬೇಕೆಂಬ ಆಸೆಯಿಂದ ಅದುರುತ್ತಿದ್ದ ತುಟಿಯನ್ನುಳ್ಳವನು

೬೪. ಜಪದಮಣಿಯೆಗೆತ್ತು = ಜಪದಮಣಿಯೆಂದು ಭ್ರಾಂತಿಗೊಂಡು.

ವ॥ ಮಕರಧ್ವಜ = ಮನ್ಮಥ, ಲಾಸ್ಯಲೀಲಾ = ನಾಟ್ಯಲೀಲೆ, ಏಕಾವಳಿ = ಮುತ್ತಿನ ಸರ. ಮನ್ಮುಖಾಸಕ್ತದೃಷ್ಟಿಯಿಂ = ನನ್ನ ಮುಖದಲ್ಲಿಯೇನೆಟ್ಟ ದೃಷ್ಟಿಯಿಂದ ಮೆಯ್ಯಱಿಯದೆ = ತನ್ನನ್ನು ತಾನೆ ತಿಳಿದುಕೊಳ್ಳದೆ.

೬೫. ಅಳವಿಲ್ಲದೆ = ಅಳತೆಯಿಲ್ಲದೆ, ಇದಿರೇಱುವವೋಲ್ = ಎದುರುಗಡೆ ಹತ್ತಿ ಹೋಗುವಹಾಗೆ.

ವ॥ ತದ್ವಿಯೋಗ = ಅವನ ಅಗಲಿಕೆ,

೬೬. ವ॥ ಕನ್ಯಾಂತಃಪುರಪ್ರಾಸಾದ = ಕನ್ನಿಕಾಸ್ತ್ರೀಯರು ವಾಸಮಾಡುವ ಉಪ್ಪರಿಗೆ, ತದೀಯ....ಮುಖಿಯೆನಾಗಿ = ಆ ರತ್ನಖಚಿತವಾದ ಕಿಟಕಿಯಲ್ಲಿಯೇ ಇಡಲ್ಪಟ್ಟ ಮುಖವುಳ್ಳವಳಾಗಿ.

೬೯. ಪೀಯೂಷಪಯೋಧಿಪೂರಲಹರೀಸಂತಾನದಿಂ = ಅಮೃತ ಸಮುದ್ರದ ಪ್ರವಾಹದ ಸಮೂಹದಿಂದ, ಪಸದನಂಗೊಂಡಿರ್ದುದೋ = ಪ್ರಸಾಧನಗೊಳ್ಳಲ್ಪಟ್ಟಿತೋ >ಅಲಂಕರಿಸಲ್ಪಟ್ಟಿತೋ. ನಟ್ಟಾಲಿಬೀಱ್ವಿನ್ನೆಗಂ = ನಟ್ಟ ದೃಷ್ಟಿ ಸೋತುಹೋಗುವವರೆಗೂ

೭೦. ಎಲರುಮನ್ = ಗಾಳಿಯನ್ನು, ಎಸೆವ = ವಾಸನೆಯನ್ನು ಬೀರುತ್ತಿರುವ ಎಸೆವ = ಮನೋಹರವಾಗಿರುವ, ವಿಹಗನಿನಾದ = ಪಕ್ಷಿಗಳ ಶಬ್ದ, ವಾರ್ತೆಗೇಳಲ್ ಒಡರಿಸಿದೆಂ = ಸಮಾಚಾರವನ್ನು ಕೇಳಲು ಪ್ರಾರಂಭಿಸಿದೆನು.

ವ॥ ಕೈಕೊಂಡುದಱಿಂ = ಅಂಗೀಕಾರ ಮಾಡಿದುದರಿಂದ, ಅಗ್ರಾಮ್ಯತೆ = ನಾಗರಿಕತೆ, ಅವತಂಸ = ಆಭರಣ, ಇರವು = ಸ್ಥಿತಿ, ಸೌಭಾಗ್ಯನಿಧಿ = ಅದೃಷ್ಟಶಾಲಿ, ತಗುಳ್ಚಿದ = ಧರಿಸಿರುವ, ರಕ್ಷಾವಳಿಯಂ = ಯಂತ್ರದ ಸರವನ್ನು, ರಹಸ್ಯಾಲಾಪ = ಕಿವಿ ಮಾತು, ಪೆಱಗೆ = ಹಿಂದೆ, ಕಿಱಿದುಬೇಗಂ = ಸ್ವಲ್ಪಕಾಲ.

೭೧. ತಳ್ತಿಡಿದ = ಒತ್ತಾಗಿ ಸೇರಿಕೊಂಡಿರುವ, ಲತಾಪ್ರತಾನ = ಬಳ್ಳಿಗಳ ಸಮೂಹ, ಮೇಲ್ವೊಡಂಬಡೆ = ನಯದಿಂದ ಕೂಡಿ, ಭವತ್ಪ್ರಪಂಚ = ನಿನ್ನ ವಿಷಯ.

೭೨. ಈ ಕನ್ನೆಯಾರ್ಗೆ — ಈ ಕನ್ಯೆಯು ಯಾರ ಮಗಳು, ನೆಗೞ್ತೆವೆತ್ತಳ್ = ಪ್ರಸಿದ್ಧಿಯನ್ನು ಪಡೆದಳು.

೭೩. ಎಳವಿಯೊಳಂ = ಬಾಲ್ಯದಲ್ಲಿಯೂ, ಭವತ್ಸ್ವರೂಪ = ನಿನ್ನ ಆಕಾರ,

೭೪. ಬೆಸಸುವುದಂತಿರ್ಕೆಮ = ಹೇಳು (ಆಜ್ಞೆಮಾಡು) ವುದು ಹಾಗಿರಲಿ, ಅಪ್ರತಿಮಪ್ರಭಾವರ್ ಭವದ್ವಿಧರ್ = ಹೋಲಿಕೆಯಿಲ್ಲದ ಪ್ರಭಾವದಿಂದ ಕೂಡಿದ ನಿಮ್ಮಂತಹವರು, ಮದ್ವಿಧರನ್ ಈಕ್ಷಿಸುವರೆ = ನನ್ನಂತಹವರನ್ನು ನೋಡುವುದರಿಂದಲೇ, ಎನ್ನವೋಲ್ ಆದವೆನೋಂತವಳಾವಳು = ನನ್ನಷ್ಟು ಅದೃಷ್ಟ (ವ್ರತ ಮಾಡಿದವಳು) ಶಾಲಿಯಾದವಳಾವಳು. ನನ್ನಿಯಂ ನುಡಿಯೆ = ಸತ್ಯವಾಗಿ ಹೇಳುವುದಾದರೆ.

೭೫. ಅಳುರ್ತುರ್ದ=ಆವರಿಸಿ, ಪಲ್ಲವ=ಚಿಗುರು, ಹಿಳಿದು=ಹಿಂಡಿ, ನಿರ್ಮಲೋಪಲತಲ=ಶುದ್ಧವಾದ ಕಲ್ಲಿನ ಪ್ರದೇಶ, ಉತ್ತರಿಯ ವಲ್ಕಲವಸನೈಕದೇಶ=ಮೇಲು ಹೊದಿಕೆಯ, ನಾರುಮಡಿ ವಸ್ತ್ರದ ಒಂದು ಭಾಗ.

೭೬. ಏಕಾಂತದೊಳ್=ಗುಟ್ಟಾಗಿ, ಅಪ್ರಾಕಟವದನ್=ರಹಸ್ಯವಾದ ಅದನ್ನು, ಅಡಪದೊಳಗಣಿಂ=ಚೀಲ (ತಾಂಬೂಲ)ದೊಳಗಿನಿಂದ,

೭೭. ಅದು ಆತನ ವಾರ್ತೆ=ಆ ತರಳಿಕೆಯು ಹೇಳಿದ ಆ ಪುಂಡರೀಕನ ಸಮಾಚಾರ, ಶಬ್ದಾತ್ಮಕವಾಗಿಯುಂ=ಬರಿಯ ಶಬ್ದ (ಮಾತಿನ)ದ ರೂಪದಲ್ಲಿದ್ದರೂ, ಅಂತರ್ಗತ=ಒಳಗೆ (ದೇಹವನ್ನು) ಪ್ರವೇಶಿಸಿದ, ಸ್ಪರ್ಶ ಸೌಖ್ಯದವೊಲ್ ಮಾಡುತ=ಮುಟ್ಟುವುದರಿಂದ (ಆಲಿಂಗನ ಮಾಡಿಕೊಳ್ಳುವುದರಿಂದ) ಉಂಟಾಗುವ ಸೌಖ್ಯವನ್ನುಂಟು ಮಾಡುತ್ತ, ಕಿವಿವೊಕ್ಕುಂ=ಕಿವಿಯನ್ನು ಪ್ರವೇಶಿಸಿದರೂ, ಅಂತೆ ಮೆಯ್ಯೊಳ್ ಎಯ್ದೆ ಪೊಕ್ಕುದಂ=ಹಾಗೆಯೆ ಶರೀರವನ್ನೇ ಸಂಪೂರ್ಣವಾಗಿ ಪ್ರವೇಶಿಸಿದುದನ್ನು, ಮೆಯ್ಯರಿಯದಂತೆ=ಶರೀರ ಸ್ಮರಣೆಯಿಲ್ಲದಂತೆ

ವ|| ನಿಮಿರ್ಚಿನೋಟ್ಪಿನ್ನೆಗಂ=ಬಿಚ್ಚಿ ನೋಡಲಾಗಿ.

೭೮. ಬಿಸಸಿತಯಾ ವಿಪ್ರಲೋಭ್ಯಮಾನೋ ಮಾನಸಜನ್ಮಾಹಂಸ ಇವ ಮುಕ್ತಾಲತೆಯಾ ದರ್ಶಿತಾಶೋಮೇ ಮಾನಸಜನ್ಮಾ ತ್ವಯಾ ದೂರಂ ನೀತಃ ಎಂಬುದು ಅನ್ವಯ. ಮುಕ್ತಾಲತಯಾ = ಮುತ್ತಿನಹಾರದಿಂದ, ಬಿಸಸಿತಯಾ = ಬಿಳಿಯ ಕಮಲದಿಂದ, ವಿಪ್ರಲೋಭ್ಯಮಾನ=ಆಶೆದೋರಿಸಲ್ಪಟ್ಟ, ದರ್ಶಿತಾಶಃ ಎಂದರೂ ಅದೇ ಅರ್ಥ, ಮಾನವಜನ್ಮಾ=ಮಾನಸಸರೋವರದಲ್ಲಿ ಹುಟ್ಟಿದುದು (ಹಂಸ ಮತ್ತು ಅವಳ ಅಭಿಮಾನ) ತ್ವಯಾನೀತಃ=ನಿನ್ನಿಂದ ಸೆಳೆಯಲ್ಪಟ್ಟಿತು.

೭೯. ಮಾನಸಸಂಭವ=ಮನಸ್ಸಿನಲ್ಲಿ ಹುಟ್ಟಿದುದು, ಕಟ್ಟುಯರ್ದ=ವಿಶೇಷವಾಗಿ ಸೆಳೆದಿದ್ದೀಯೆ.

ವ|| ಆರ್ಯೆ = ಆರ್ಯಾವೃತ್ತದಲ್ಲಿ ರಚಿಸಿದ ಶ್ಲೋಕ.

೮೦. ಈ ಪದ್ಯದಲ್ಲಿ ಮೊದಲೊಳ್ ಎಂಬುದು ಎಲ್ಲದಕ್ಕೂ ಅನ್ವಯ, ಅಂದರೆ ಪುಂಡರೀಕನ ಆರ್ಯೆಯನ್ನು ಭಾವಿಸಿದಾಗ ನನಗೆ ಮೊದಲೇ ಸೊಕ್ಕಿದವನಿಗೆ ಮಧ್ಯಪಾನ ಮಾಡಿದಂತೆಯೂ ಮೊದಲೇ ವಿಷದಿಂದ ಹೆದರಿದವನಿಗೆ ದುರ್ನಿದ್ರೆಯು ಮಡಿದಂತೆಯೂ, ಮೊದಲೇ ಕುರುಡಾದವನಿಗೆ ಕತ್ತಲು ವ್ಯಾಪಿಸಿದಂತೆಯೂ, ಮೊದಲೇ ಮಾರ್ಗ ತಪ್ಪಿದವನಿಗೆ ದಿಗ್ಭ್ರಮೆಯುಂಟಾದಂತೆಯೂ, ಮೊದಲೇ ಪಿಶಾಚಗ್ರಸ್ತನಾದವನಿಗೆ ದುರಾವೇಶವು ತಲೆದೋರಿದಂತೆಯೂ ಮೊದಲೇ ಧಾರ್ಮಿಕನಲ್ಲದವನಿಗೆ ದುರ್ಬೋಧನೆಯುಂಟಾದಂತೆಯೂ, ಮೊದಲೆ ತತ್ವಮೂಢನಾದವನಿಗೆ ಮಾಯದ ಕುಂಚವನ್ನು ಬೀಸಿದ ಹಾಗೆಯೂ ಆಯಿತು ಎಂಬುದು ಅಭಿಪ್ರಾಯ.

೮೧. ಅಮರ್ದಂ ಪೀರ್ದಳೋ = ಅಮೃತಪಾನ ಮಾಡಿದಳೋ, ಸಮಸಂದಿರ್ದುದೋ = ಉಂಟಾಗಿದೆಯೊ, ನಾಕಲೋಕ = ಸ್ವರ್ಗಲೋಕ, ದೈವ = ಅದೃಷ್ಟ,

ನೆಲಸಿತೋ=ಸ್ಥಿರವಾಗಿ ನಿಂತಿತೋ

೮೨. ಪರೆದಿರ್ಪ=ಕೆದರಿದ್ದ, ಪಲ್ಲಟಿಸಿತು=ವ್ಯತ್ಯಾಸವಾಯಿತು.

೮೩. ಕಣ್ಬರಿವು=ಕಣ್ಣಿನ ಓಟ, ಎಂತೆಂತು=ಹೇಗೆ ಹೇಗೆ, ಅಂದರೆ ನನ್ನನ್ನು ಎಷ್ಟು ದೂರದವರೆಗೆ ನೋಡಿದನು, ಎಮ್ಮಯ ಬೞಿಯಂ ಎನಿತಂತರಮಂ ಬರುತಲಿರ್ದಂ =ನಮ್ಮ ಹಿಂದೆ ಎಷ್ಟು ದೂರದವರೆಗೆ ಬರುತ್ತಲಿದ್ದಾನೆ.

೮೫. ಪರ್ಚುಗೊಂಡಂತಿರೆ=ಹಚ್ಚಿಗೊಂಡಹಾಗೆ,

೮೬. ಮಧುಕರವೃಂದ = ದುಂಬಿಯ ಸಮೂಹ, ಎರ್ದೆಕತ್ತಲಸಿದಂದಮಂ= ಅಜ್ಞಾನಾಂಧಕಾರವನ್ನು ಹೊಂದಿದ ರೀತಿಯನ್ನು.

೮೭. ರಥಾಂಗಯುಗಳಂಗಳ್=ಚಕ್ರವಾಕ ಯುಗ್ಮಗಳು, ಎರಡುಂ=ಪುಂಸ್ತ್ರೀಗಳೆರಡೂ, ಬಾಲಮೃಣಾಳವನು = ಎಳೆಯ ತಾವರೆದಂಟನ್ನು, ಮರಳ್ದು=ಭ್ರಮಿಸಿ, ಒಂದನೆ ಕರ್ಚಿ, ತದ್ವಿವರದಿಂ = ಆ ಮೃಣಾಳ ರಂಧ್ರದಿಂದ, ಬರೆಪೀರ್ವವೋಲ್= ವಿಶೇಷವಾಗಿ ಪಾನ ಮಾಡುವ ಹಾಗೆ, ಒಂದಱಚಿತ್ತಮಂ = ಒಂದರ ಮನಸ್ಸನ್ನು ಮತ್ತೊಂದು ತೆಗೆದುಕೊಂಡು, ವಿಯೋಗದಿಂದಾದ=ಅಗಲಿಕೆಯಿಂದುಂಟಾದ, ಆದೊಂದು ಕಿಚ್ಚು=ವಿರಹಜ್ವಾಲೆಯು, ಅಂದು=ಆ ರಾತ್ರಿಯ ಕಾಲದಲ್ಲಿ, ಆಳುರಲ್ಕೆ=ಆವರಿಸುತ್ತಿರಲು, ಅನಂಗತಾಪದಿಂ ಕೂಡಿ=ಮನ್ಮಥ ತಾಪದಿಂದ ಕೂಡಿ, ಅಗಲ್ಪುವು=ಬೇರೆಯಾದುವು.

೮೯. ಭೂಭೃನ್ನಿಳಯ=ಅರಮನೆ, ಕುಮರವೆಸರ್ಗೇಳ್ವುದುಂ = ಕುಮಾರನ ಹೆಸರನ್ನು ಕೇಳಿದೊಡನೆ, ಆತನೆಗೆತ್ತು=ಅವನೆಂದೇ (ಪುಂಡರೀಕನೆಂದೇ) ಭ್ರಮಿಸಿ, ಇರ್ದಂತಿರ್ದುಂ=ಇದ್ದಹಾಗೆಯೇ ಇದ್ದರೂ, ಬಾಗಿಲೊಳ್ ಬಂದು ಇರ್ದಂತಿರೆ=ಬಾಗಿಲಿನಲ್ಲಿ ಬಂದು ಇದ್ದ ಹಾಗೆ, ಆದೆಂ=ಆದೆನು.

೯೦. ಜರಾನಿರ್ಮಳನೆನಿಸಿದ =ವೃದ್ಧಾಪ್ಯದಿಂದ ಬೆಳ್ಳಗಾಗಿದ್ದ, ಸೌವಿದಲ್ಲ= ಕಂಚುಕಿ,

೯೧. ಕರ್ಚಿ=ತೊಳೆದು, ಇರ್ಪು=ಶೈತ್ಯ, ತೇವ, ಒದ್ದೆ, ಅಂಶುಕ=ಬಟ್ಟೆ.

೯೨. ವ|| ಮುನಿ ಶಂಕರಾ=ಮುನೀಶ್ವರಾ.

೯೩. ಪೊಡರ್ದಪುದಿಲ್ಲಕ್ಕುಂ=ಚಲಿಸುವುದಿಲ್ಲ. ಬಿಕ್ಕೆ=ಗೆಡ್ಡೆ,

೯೪. ರಾಗಿಗಳ=ಪ್ರೀತಿಪಾತ್ರರಾದವರ, ನಿಕೃಷ್ಟ ಚೇಷ್ಟೆಗನುಗೆಯ್ದಪೆಂ=ನೀಚ ಕಾರ್ಯವನ್ನು >ನಡತೆಯನ್ನು ನಿವೇದಿಸಲಿ (ತಿಳಿಯಪಡಿಸಲಿ). ಸುಕೃತಕ್ಕೆ = ಸದ್ಗತಿಗೆ, ಉಪಾಯವೊ=ಸಾಧನವೊ.

೯೫. ಪೇೞಲೆವೇಡಿದಪ್ಪುದು=ಹೇಳಿಯೇ ತೀರಬೇಕು. ಶರಣ್ ಪೆಱತಿಲ್ಲ=ಅನ್ಯಥಾಗತಿಯಿಲ್ಲ, ಕೇವಲಂ=ಎಲ್ಲ ರೀತಿಯಿಂದಲೂ, ಎನ್ನ ಅಸುವಂ ಬಿಟ್ಟು=ನನ್ನ ಪ್ರಾಣವನ್ನು ಬಿಟ್ಟಾದರೂ, ಸಹಾಯನ ಜೀವನಮಂ ಪಾಲಿಸವೇೞ್ಕುಂ, ಲಜ್ಜೆಯಂ ಪಾಲಿಸದೆ =ನಾಚಿಕೆಪಡದೆ, ಉತ್ಸವಲೋಲಲೋಚನೆ=ಉತ್ಸಾಹದಿಂದ ಕೂಡಿದ ಚಂಚಲದೃಷ್ಟಿ

ಯುಳ್ಳವಳೇ,

೯೬. ಬಿಡೆನುಡಿದು=ಕಠಿಣವಾಗಿ ಮಾತನಾಡಿ, ಮುನಿಪನ ಬಿಟ್ಟು ಎಂಬುದು ಅನ್ವಯ,

ವ॥ ವ್ಯಗ್ರಮನನಾಗಿ=ಚಿಂತೆಯಿಂದ ಕೂಡಿದ ಮನಸ್ಸುಳ್ಳವನಾಗಿ

೯೭. ಅಂಗಭವ = ಮನ್ಮಥ, ಗೋರಿಗೊಂಡೆರಳೆವೋಲಾಗಿ=ಸೆಳೆಯಲ್ಪಟ್ಟ (ಕಾಮಬಾಧೆಯಿಂದ) ಜಿಂಕೆಯ ಹಾಗೆ, ನೆಯ್ಗರೆದನೋ=ಮರೆಯಾದನೋ (ಅವಿತು ಕೊಂಡನೊ)

ವ॥ ವಿಕಲ್ಪಿಸುತ್ತಮಿರ್ದು=ಸಂದೇಹಪಡುತ್ತಿದ್ದು.

೯೮. ಕಿಱಿದೊಂದುಪೊೞ್ತು=ಅಲ್ಪಕಾಲವೂ, ಅಗಲ್ದಿರಲಱಿಯದನಂ=ಬಿಟ್ಟಿರಲು ತಿಳಿಯದವನನ್ನು, ಕ್ಷಣಂ ಅಗಲ್ದು ನಿಲಲಾಱದೆ ಮಗುೞ್ಚಿ ಮನದೊಳೆ ಚಿಂತಿಸಿದೆಂ.

೯೯. ಸಿಗ್ಗಿನಿಂ=ನಾಚಿಕೆಯಿಂದ, ಎತ್ತಪೊಲ್ಲದನಾಚರಿಸುಗುಮೊ=ಕೆಟ್ಟದನ್ನು (ಮಾಡಬಾರದುದನು) ಎಲ್ಲಿ ಮಾಡಿಬಿಡುತ್ತಾನೆಯೋ, ಒಡರ್ಚರ್=ಮಾಡುವುದಿಲ್ಲ.

೧೦೦. ಅರಣ್ಯದೊಳ್ ಒರ್ವನನ್ ಇರಿಪುದಯುಕ್ತಂ,

ವ॥ ವನನಿರಂತರತೆಯಿಂ=ಕಾಡು ಒತ್ತಾಗಿ ಬೆಳೆದುದರಿಂದ, ಪರಭೃತ=ಕೋಗಿಲೆ. ಮಯೂರ=ನವಿಲು, ಉತ್ಸೃಷ್ಟ ಸಕಲವ್ಯಾಪಾರನಂ=ಎಲ್ಲ ಕೆಲಸವನ್ನು ಬಿಟ್ಟವನೂ, ವಿಗತನಿಮೇಷ=ರೆಪ್ಪೆ ಬಡಿಯದವನು (ತೆರೆದಿರುವ ಕಣ್ಣುಳ್ಳವನೂ), ಬರೆದನಂತೆಯೂ=ಚಿತ್ರದಲ್ಲಿ ಬರೆದಿರುವವನಂತೆಯೂ, ಕಂಡರಿಸದವನಂತೆಯೂ = ಕೊರೆಯಲ್ಪಟ್ಟವನಂತೆಯೂ, ಮಱವಟ್ಟನಂತೆಯೂ = ಸ್ತಬ್ಧನಾದಂತೆಯೂ, ಯೋಗಸಮಾಧಿಸ್ಥಿತನಾದಂತೆಯೂ=ಯೋಗಸಮಾಧಿಯಲ್ಲಿರುವವನಂತೆಯೂ, ಉಪರತವಶನಾದಂತೆಯುಂ= ಮರಣಕ್ಕಧೀನನಾದಂತೆಯೂ

೧೦೧. ಹೃದಯದಲ್ಲಿದ್ದ ವಲ್ಲಭೆಯನ್ನು ನೋಡಬೇಕೆಂದು ಒಳಕ್ಕೆ ಪ್ರವೇಶಿಸಿ ಶರೀರವನ್ನು ಆವರಿಸಿದ ಕಾಮಾಗ್ನಿಗೆ ಇದ್ದಕ್ಕಿದ್ದ ಹಾಗೆ ಅಧೀನವಾಗಿ ಅದೃಶ್ಯವಾಯಿತೋ ಎನ್ನುವಹಾಗೆ ಕಲಕಿಹೋದ ಮನಸ್ಸೆಂಬ ಸಮುದ್ರದಲ್ಲಿ ಚಲನ ಮಾಡುವುದಕ್ಕೆ ಸ್ವಲ್ಪವೂ ಸಾಧ್ಯವಿಲ್ಲದಿದ್ದರೂ ಆ ಮುನೀಂದ್ರನ ಸಮಸ್ತ ಇಂದ್ರಿಯಗಳೂ ಶರೀರದಲ್ಲಿ ಅಡಗಿಹೋಗಿದ್ದುವು.

೧೦೨. ಅಳುರ್ವ=ಸುಡುತ್ತಿರುವ, ಮನೋಜಾನಳ ಧೂಮಸ್ತೋಮ=ಕಾಮಾಗ್ನಿಯ ಹೊಗೆಯ ಸಮೂಹ, ಎವೆದುಱುಗಲ್=ಒತ್ತಾದ ಕಣ್ಣಿನರೆಪ್ಪೆ,

೧೦೩. ಉಣ್ಕಿ ಪೊಣ್ಕಿದ = ಹೆಚ್ಚಾಗೆ ವ್ಯಾಪಿಸಿದ, ಅಧರಾಂಶು=ತುಟಿಯ ಕಾಂತಿ, ಬಿಸುಸುಯ್ಗಳಿಂ=ಬಿಸಿಯಾದ ಗಾಳಿಯಿಂದ,

೧೦೪. ಒದವಿದ... ಳಕ್ಕಿರ್ದ=ಉಂಟಾದ ದುಃಖ ಭಾರದಿಂದ ಕೆನ್ನೆಯ ಮೇಲಿಟ್ಟಿರ್ದ, ಕರನಖರುಚಿ=ಕಯ್ಯುಗುರಿನ ಕಾಂತಿ,

೧೦೫. ಸಂಕ್ರಮಿಸಿ ಪೋಗದ=ಕೂಡಿಕೊಂಡಿದ್ದು ಹೋಗದಂತಹ, ಸ್ಮರಮಂತ್ರ

=ಕಾಮಮಂತ್ರ, ಅಸಿತೋತ್ಪಳ=ಕನ್ನೈದಿಲೆ, ಕರ್ಣಪೂರ=ಕಿವಿಯಾಭರಣ,

೧೦೬. ವಿರಹಜ್ವರ=ಅಗಲಿಕೆಯ ಕಾವು, ಪುಳುಕೋತ್ಕರ = ರೋಮಾಂಚ, ಪುಂಖ=ಬಾಣದ ಗರಿ,

೧೦೭. ದಕ್ಷಿಣಕರಸ್ಪರ್ಶ=ಬಲಗೈಯಿಂದ ಮುಟ್ಟುವುದು. ಅಂಗಜಪತಾಕೆ=ಮನ್ಮಥನ ಬಾವುಟ, ಕಣ್ಗೊಳಿಸಿದುದು=ಮನೋಹರವಾಯಿತು. ದಕ್ಷಿಣಕರಸ್ಪರ್ಶನದಿಂ ಪುಳಕಂಗಳ್ ಒಗೆದುವೆನೆ ಕೆದಱುವ ನುಣ್ಬೆಳಗಿಂ ಮುಕ್ತಾವಳಿ ಕಣ್ಗೊಳಿಸಿದುದು ಎಂದು ಅನ್ವಯ.

೧೦೮. ಕಾಯ್ದ ಪುಣುಂಬುಗಳಂ=ಕೆಂಪಗೆ ಕಾಯ್ದಿರುವ ಬಾಣಗಳನ್ನು-ಕುಸುಮಾಸ್ತ್ರನಿಸುತವಿರ್ದಪನ್ ; ಮೇಲೆ=ತನ್ನ ಮೇಲೆ, ಉಗುತಿರ್ದುವು=ಸುರಿಯತ್ತಿದ್ದವು

ವ ॥ ಮದನವಶೀಕರಣ ಚೂರ್ಣ=ಮದನನ್ನು ವಶಮಾಡಿಕೊಳ್ಳುವುದಕ್ಕಾಗಿ ಉಪಯೋಗಿಸುವ ಚೂರ್ಣ, ಕುಸುಮರೇಣು = ಹೂವಿನ ಧೂಳು, ಆತ್ಮರಾಗ= ತನ್ನ ಪ್ರೀತಿ, ಸಂಕ್ರಮಿಸುವಂತೆ = ಸೇರಿಸುವಂತೆ, ಪುಷ್ಪಸ್ತಬಕಶೀಕರ = ಹೂವಿನ ಗೊಂಚಲಿನಿಂದ ಬೀಳುವ ಹನಿ, ಅತಿ ಬಹಳ....ಝುಂಕಾರಂಗಳೊಳ್=ಅತ್ಯಧಿಕವಾದ ವನಗಂಧದಿಂದ ಮದಿಸಿರುವ ದುಂಬಿಯ ಝುಂಕಾರದಲ್ಲಿ, ಪೊರೆದ=ಸೇರಿಕೊಂಡಿರುವ, ಜನ್ಮಾಂತರೋಪಗತನ್=ಬೇರೆಯ ಜನ್ಮವನ್ನು ಹೊಂದಿದವನು,

೧೦೯. ಜ್ಞಾನನಿಧಿ ಸೂರೆವೋದಪುದು=ಜ್ಞಾನದ ಗಣಿಯೇ ಕೊಳ್ಳೆಯಾಗುತ್ತಿದೆ.

೧೧೦. ಇಂತಿರೆ ಎಟಿಿದು ಪೊಸಗುಮೇ=ಹೀಗೆ ಸೆಳೆದು ಹೊಸಗಬಹುದೆ ?

೧೧೧. ಪೊರೆಯೊಳ್=ಸಮೀಪದಲ್ಲಿ, ಎಳವಿ=ಸವಂ, ಇರ್ಪಿರವಿನಪರಿ=ಇರುವ ಸ್ಥಿತಿಯರೀತಿ.

ವ ॥ ಬೆಚ್ಚಿದಂತಿರ್ದ=ಬೆಸಗೆ ಹಾಕಿದಂತೆ ಸೇರಿಕೊಂಡಿದ್ದ,

೧೧೨. ಬಸವಿಲ್ಲದಲ್ತು=(ತಡೆದುಕೊಳ್ಳುವುದಕ್ಕೆ) ವಶವಿಲ್ಲದೆ (ಸಾಧ್ಯವಿಲ್ಲದೆ) ಅತ್ತು; ಕೆಂಪೊಡರಿಸೆ=ಕೆಂಪು ಬಣ್ಣವುಂಟಾಗಿರಲು, ಬಾಷ್ಪಸಲಿಲಂ, ತೀವಿರೆ, ಅಚ್ಛಾಂಬುಗಳಿಂ....ದೆಸಳಂ=ಸ್ವಚ್ಛವಾದ ನೀರಿನಿಂದ ಮುಸುಕಿದ ಕೆಂಪು ಕಮಲದ ದಳವನ್ನು, ಪೋಲ್ತು ಎಸೆವ ಕಣ್ಗಳಿಂದೀಕ್ಷಿಸಿದಂ.

೧೧೩. ಶೀರ್ಯಮಾಣ ವಿರಳಾಕ್ಷರದಿಂ=

೧೧೪. ಇನಿತನೆ ಬೆಸಗೊಂಡಪೆಂ=ಇಷ್ಟು ಮಾತ್ರವನ್ನು ಪ್ರಶ್ನೆ ಮಾಡುತ್ತೇನೆ. ಧರ್ಮಶಾಸ್ತ್ರ ಸಂಜನಿತ ರಹಸ್ಯಮೋ=ಧರ್ಮಶಾಸ್ತ್ರದಿಂದುಂಟಾದ ರಹಸ್ಯ ಜ್ಞಾನವೋ, ಯಮಮೋ = ಅಷ್ಟಾಂಗಗಳಲ್ಲಿ ಒಂದಾದ ವ್ರತವೋ, ಪೆಱತೇನ್ = ಮತ್ತೇನು ? ಅಪವರ್ಗ = ಮೋಕ್ಷ, ಅಣಂ = ಸ್ವಲ್ಪವೂ, ಅಱಿವೆತ್ತಪೋದುದು = ನಿನ್ನ ಬುದ್ಧಿ (ಜ್ಞಾನ) ಎಲ್ಲಿ ಹೋಯಿತು, ಎಯ್ದಲಕ್ಕುಮೇ=ಹೊಂದಬಹುದೇ ?

೧೧೫. ಅಗರುವ=ಸುಗಂಧವನ್ನು ಬೀರುವ, ಅಸಿತಾಹಿ=ಕೃಷ್ಣಸರ್ಪ, ಸಾರ್ವ= ಪ್ರವೇಶಿಸುವ (ಕೈನೀಡುವ), ನೆಯ್ದಲೊಳ್ಮುಗುಳಿನಮಾಲೆ=ಕನ್ನೈದಿಲಪುಷ್ಪದ ಒಳ್ಳೆಯ

ಮೊಗ್ಗಿನ ಮಾಲೆ, ಅಸಿಯನಪ್ಪುವ=ಕತ್ತಿಯನ್ನು ಆಲಂಗನಮಾಡಿಕೊಳ್ಳುವ, ನೆಗಪುವ =ಎತ್ತುವ, ವಿಷವಲ್ಲಿ=ವಿಷದ ಬಳ್ಳಿ, ಎಗ್ಗ=ಮೂಢ, ದಡ್ಡ, ಕೆಮ್ಮನೆ=ಸುಮ್ಮನೆ >ನಿಷ್ಕಾರಣವಾಗಿ, ಅಸದ್ವಿಷಯ ಸೌಖ್ಯದೊಳ್=ಒಳ್ಳೆಯದಲ್ಲದ ಇಂದ್ರಿಯ ಸೌಖ್ಯ ದಲ್ಲಿ, ತಕ್ಕುದೇ=ಯೋಗ್ಯವೇ ?

ವ|| ಅತಿ ಬಹುಳರಜ=ವಿಶೇಷವಾದ ಧೂಳು, ಉನ್ಮಾರ್ಗ=ದಾರಿ ತಪ್ಪಿ ನಡೆಯುವುದು, ನಿಯಾಮಿಸದೆಯುಂ=ಎಲ್ಲೆಯಲ್ಲಿರಿಸದೆಯೂ, ನಿವರ್ತಿಸಲ್ವೇಟ್ಕುಂ= ತ್ಯಾಗಮಾಡಬೇಕು, ದೂರಮಾಡಬೇಕು, ಬಿಡಿಸಬೇಕು, ಎಂಬುದುಂ=ಎಂಬ ಮಾತನ್ನು ಆಕ್ಷೇಪಂ ಗೆಯ್ದು=ಆಕ್ಷೇಪಿಸಿ, ಎಮೆದುಱುಗಲಿ....ಬಸಿಯುತ್ತ=ಒತ್ತಾದ ಕಣ್ಣುರೆಪ್ಪೆ ಗಳಿಂದ ಇಳಿದು ಬರುತ್ತಿರುವ ದಪ್ಪವಾದ ಕಣ್ಣೀರಿನ ಹನಿಗಳನ್ನು ಸುರಿಸುತ್ತ,

೧೧೬. ಅಪರಿಮಿತೋಕ್ತಿಯೊಳೇಂ=ಎಲ್ಲೆಯಿಲ್ಲದ (ವಿಶೇಷವಾದ) ಮಾತು ಗಳಿಂದೇನು ಪ್ರಯೋಜನ, ಸತ್ವಪರೀತನೆ=ಸತ್ವಗುಣದಿಂದ ಕೂಡಿದ ಕಪಿಂಜಲನೇ, ಮದನದಾವ....ನಿನ್ನನ್=ನಿನ್ನನ್ನು ಮನ್ಮಥನ ಕಾಡುಗಿಚ್ಚು ಆವರಿಸಿಲ್ಲ. ಆದರಿಂದ ಉಪದೇಶ ಮಾಡುತ್ತಿರುವುದು,

೧೧೭. ಪೊಲ್ಲದಿದೊಳ್ಳಿತು=ಇದು ಕೆಟ್ಟದ್ದು ಇದು ಒಳ್ಳೆಯದು—ಎಂದಱು ವಂ, ಆತಂ ಕೇಳ್ವಂ ಸದ್ಭಾವಂಬೆತ್ತನಿನ್ನುಪದೇಶಮಂ, ಎನ್ನಂದಿಗಂ=ನನ್ನ ಹಾಗಿರು ವವನು.

೧೧೮. ನಿನ್ನನ್ನರಾರ್ ಬಂಧುಗಳ್=ನಿನ್ನಂತಹ ಬಂಧುಗಳುಯಾರು ಇದ್ದಾರೆ. ನೀಂಪೊಱಗಾಗ=ನಿನ್ನನ್ನು ಬಿಟ್ಟು, ಎನ್ನಂ ಈ ಮಾರ್ಗದಿಂದಂ=ಎನ್ನನ್ನು ಈ ದುರ್ಮಾರ್ಗದಿಂದ ಬಿಡಿಸಿ, ನಿಯಮಿಸುವರಾರ್=ಮಿತಿಯಲ್ಲಿರಿಸುವವರಾರು? ಎನ್ನ ನಾಂ ....ಅಪ್ಪೆನಿಲ್ಲ=ನನ್ನನ್ನು ನಾನು ಸಮಾಧಾನಪಡಿಸಿಕೊಳ್ಳಲು ಸರ್ವಥಾಶಕ್ತನಾಗಿಲ್ಲ. ಈತೆಱನಂಕಂಡಿರ್ದುಂ=ಈ ರೀತಿಯನ್ನು ತಿಳಿದಿದ್ದೂ, ಈಎಡೆಗಿದುಚಿತವೆಂಬಂತುಟಂ= ಈ ಸನ್ನಿವೇಶಕ್ಕೆ ಇದು ಯೋಗ್ಯವಾದುದೆಂಬುದನ್ನು,

ವ|| ಕಲ್ಪಾಂತೋದಿತದ್ವಾದಶ ದಿನಕರ ಕಿರಣಾತಪತೀವ್ರಮಪ್ಪ=ಪ್ರಳಯ ಕಾಲದಲ್ಲಿ ಹುಟ್ಟುವ ದ್ವಾದಶಾದಿತ್ಯರ ಕಿರಣಗಳಿಂದ ಕೂಡಿದ ಬಿಸಿಲಿನಷ್ಟು ಭಯಂಕರ ವಾದ, ಮದನ ಸಂತಾಪಕ್ಕೆ=ಮನ್ಮಥನ ಬೇಗೆಗೆ, ಉಪಶಮನ+ಉಪಾಯಮಂ= ಹೋಗಲಾಡಿಸುವ=(ಆರಿಸುವ) ಸಾಧನವನ್ನು, ಅಂ ಪ್ರಾಣಬೆರಸೆನಿತುಬೇಗಮಿರ್ಪೆನ್ =ನಾನು ಎಲ್ಲಿಯವರೆಗೆ ಪ್ರಾಣದಿಂದ ಕೂಡಿರುತ್ತೇನೆಯೊ, ಅನ್ನೆವರಂ=ಅಲ್ಲಿಯವರೆಗೆ

೧೧೯. ಅಡುವಂತಾದಪುದು=ಬೇಯಿಸಿದಂತಾಗುತ್ತಿದೆ (ಅಡು=ಅಡಿಗೆಮಾಡು) ಏವೆನ್=ಏನು ಮಾಡಲಿ, ಬೇವಂತುಟಾದಪುದು=ಬೇಯುವ ಹಾಗಾಗುತ್ತಿದೆ, ಓರಂತು =ಒಂದೇ ಸಮನಾಗಿ, ಮಾಣಿಸಲ್ಕಾರ್ಪೆ....ಮಾಣಿಪುದು=ತಪ್ಪಿಸಲು ಶಕ್ತನಾದರೆ ತಪ್ಪಿಸುವುದು. ಮಾಣ್ದಿಂ=ನಿಲ್ಲಿಸಿದನು.

೧೨೦. ಅನುನಯದಿಂ=ಸಮಾಧಾನದಿಂದ,

ವ॥ ಉಪದೇಶಕ್ಕೆಡೆಯಿಲ್ಲದೆ=ಉಪದೇಶಕ್ಕೆ (ಒಳ್ಳೆಯ ಮಾತುಗಳನ್ನಾಡುವುದಕ್ಕೆ) ಅವಕಾಶವಿಲ್ಲದೆ, ಜಲಲವಲಾಂಛಿತಂಗಳಪ್ಪ=ನೀರಿನ ಹನಿಗಳಿಂದ ಗುರುತುಮಾಡಲ್ಪಟ್ಟಿರುವ, ನಳಿನೀದಳ=ಕಮಲದ ಎಲೆ, ಪರಾಗಪರಿಮಳ ಮನೋಹರಂಗಳಪ್ಪ=ಪರಾಗ (ಹೂವಿನ ಧೂಳು)ಗಳ ಸುವಾಸನೆಯಿಂದ ಮನೋಹರವಾಗಿರುವ, ಅನಲ್ಪತಲ್ಪ=ಅಲ್ಪವಲ್ಲದ ಹಾಸಿಗೆ (ಅಂದರೆ ಉತ್ತಮವಾದ ಹಾಸಿಗೆ), ನಿಸರ್ಗ ಪರಿಮಳ=ಸಹಜವಾದ ವಾಸನೆ, ಹಿಮದಂತೆ=ಮಂಜಿನಹಾಗೆ ಕುಳಿರ್ಕೊಳ್ಳುವ=ಶೈತ್ಯ > ತಂಪನ್ನುಂಟು ಮಾಡುತ್ತಿರುವ, ಲಲಾಟಂಮೊದಲಾಗಿ ಚರಣತಳಂಬರಂಅಂಗಚರ್ಚೆಯನೆಡವಿಡೆದೊಡರ್ಚಿಯುಂ=ಮುಖದಿಂದ ಕಾಲಿನವರೆಗೆ ಒಂದೇ ಸಮನಾಗಿ ಲೇಪನಮಾಡಿಯೂ, ಅಭ್ಯರ್ಣಪಾದಪಸ್ಫುಟಿತ=ಸಮೀಪದಲ್ಲಿದ್ದ ಮರದಿಂದ ಸುಲಿಯಲಟ್ಟು, ಸ್ವೇದಪ್ರತೀಕಾರ=ಬೆವರನ್ನು ತಡೆಯುವದಕ್ಕ ಮಾಡಬೇಕಾದ ಕಾರ್ಯ. ಬಿಜ್ಜಣಿಗೆ=ಬೀಸಣಿಗೆ, ಶಿಶಿರೋಪಚಾರ=ತಂಪನ್ನುಂಟುಮಾಡುವ ಕಾರ್ಯ, ಉದ್ದೀಪನಪಿಂಡ=ಹೆಚ್ಚಿಸುವ ಗುಳಿಗೆ

೧೨೧. ಗಂಧರ್ವರಾಜನ ಮಗಳೆಂಬ ಪ್ರಸಿದ್ಧಿಯನ್ನು ಪಡೆದ ಸ್ತ್ರೀರತ್ನವೆನಿಸಿಕೊಂಡಿರುವ ಬಹು ಚತುರಳಾದ ಮಹಾಶ್ವೇತೆಯೆಲ್ಲಿ? ಕಾಡಿನಲ್ಲಿಯೇ ಯಾವಾಗಲೂ ವಾಸಮಾಡುವ ಮನೋಭಾವಮುಳ್ಳ ಜಿಂಕೆಯ ಮರಿಯಹಾಗೆ ಮುಗ್ಧನಾಗಿರುವ ಈತನೆಲ್ಲಿ ಎಂಬುದನ್ನು ನೋಡದೆ ಪುಷ್ಪಚಾಪನಾದ ಮನ್ಮಥನು ವಿರಹಸಂತಾಪವನ್ನು ಏತಕ್ಕೆ ಮಾಡಿದನೊ?

ವ॥ ಎಡೆಯೊಳ್=ವಿಷಯದಲ್ಲಿ; ಎರ್ದೆಗೆಟ್ಟು=ದಯಾಶೂನ್ಯನಾಗಿ, ಅವಜ್ಞೆಯಿಂದ=ಅಲಕ್ಷ್ಯದಿಂದ, ಎಸಗಿದಪಂ=ಮಾಡುತ್ತಾನೆ. ವಿಷಮಾಸ್ತ್ರ=ವಿಷಮಸಂಖ್ಯೆಯ ಬಾಣವುಳ್ಳವನು, ಪಂಚಬಾಣ, ಮನ್ಮಥ.

೧೨೨. ನೆರವು=ಸಹಾಯ, ವಿಕಲ್ಪಿಸಿದೆಂ=ಯೋಚಿಸಿದೆನು.

೧೨೩. ಪೊಲ್ಲದಿನ್ನೊಳ್ಳಿತೆಂಬುದ್ದೇಶಮಂ ಮಾಣ್ದು=ಕೆಟ್ಟದ್ದು ಒಳ್ಳೆಯದು ಎಂಬ ಉದ್ದೇಶಗಳನ್ನು ಬಿಟ್ಟು, ಸುಹೃತ್ಪ್ರಾಣ=ಸ್ನೇಹಿತನ ಪ್ರಾಣ. ಆಕೆಯಂ ತರ್ಪುದನುಬಿಯೆ ಬೇಱೊಂದುಪಾಯಂ ಬಱಿಕ್ಕಿಲ್ಲ=ಅವಳನ್ನು ತರುವುದನ್ನು ಬಿಟ್ಟು ಬೇರೊಂದುಪಾಯವಿಲ್ಲ.

೧೨೪. ಕೇಣದಿಂ=ಮುನಿಕುಮಾರನೆಂಬಭಿಮಾನದಿಂದ, ಪೆಂಡಿರ್ ಎಂಬ ಒಂದು ಮಾತಂ ಬಾಯ್ದೆಱೆಯಲ್ ನಾಣ್ಚುವಂ ಎಂಬುದು ಅನ್ವಯ. ಅಟ್ಕಱು=ಭಯ.

೧೨೫. ಕೃತ್ಯಮದಲ್ಲದಿರ್ದೊಡಂ=ಅದು ಮಾಡಬಾರದ ಕೆಲಸವಾಗಿದ್ದರೂ, ಕುತ್ಸಿತವೃತ್ತಿ=ಕೆಟ್ಟಕೆಲಸ, ಬೇಡ+ಎಂದೆಂಗುಮೋ=ಬೇಡವೆಂದು ಹೇಳುತ್ತಾನೆಯೋ, ಲಬ್ಧಚೇತನನ್=ಬುದ್ಧಿ ಬಂದವನು. ಲಬ್ಧಚೇತನನ್ ಇವಂ ಇದು ಕುತ್ಸಿತವೃತ್ತಿ ಕಷ್ಟಂ, ಬೇಡ ಎಂದೆಂಗುಮೊ ಎಂಬುದು ಅನ್ವಯ, ಮಹೋತ್ಕಟತ್ವದಿಂ=ಬಹಳ ವೇಗದಿಂದ ಆತನ ಪಕ್ಕದಿಂ....ನೆವಯಾಡಿ ಬಂದೆಂ.

೧೨೬. ಇದು ನನ್ನ ಸ್ನೇಹಿತನ ಅವಸ್ಥೆ, ಅವನ ವಿರಹಸಂತಾಪ ಪರಿಹಾರಕ್ಕೆ,

ನಾನು ಬಂದಿರುವುದಕ್ಕೆ ಉತ್ತಮ ವಂಶದಲ್ಲಿ ಹುಟ್ಟಿದ ನಿನಗೆ ಯೋಗ್ಯವಾದುದನ್ನು ನೀನೇ ಬಲ್ಲೆ.

೧೨೭. ಅದನ್ನು ಕೇಳಿ ಸುಖಾಮೃತ ಸಮುದ್ರದಲ್ಲಿ ಮುಳಿಗಿದ ಹಾಗೂ, ಸಂಪೂರ್ಣಾನುಕೂಲದಿಂದ ಉಂಟಾದ ಪ್ರೇಮವನ್ನು ಪಡೆದ ಹಾಗೂ ಸಂತೋಷಸಮೂಹವನ್ನು ಹೊಂದಿದವಳ ಹಾಗೂ ಪೂರ್ಣವಾಗಿ ಮನೋರಥ ಸಿದ್ಧಿಯಾದವಳ ಹಾಗೂ ನಾನು ಆದೆನು.

ವ|| ಅಂತತೀಂದ್ರಿಯಸೌಖ್ಯಪರಮಕೋಟಿಯನೆಯ್ದಿ = ಹಾಗೆ ಇಂದ್ರಿಯಾತೀತವಾದ ಸೌಖ್ಯಪರಂಪರೆಯನ್ನು ಪಡೆದು (ಪರಮಕೋಟಿ=ಕೋಟಿಯನ್ನು ಮೀರಿದುದು) ನಾಣೆಱಕದಿಂ=ಲಜ್ಜೆಯಿಂದ ಕೂಡಿದ ಪ್ರೀತಿಯಿಂದ, ಇಸಿತುಬೇಗಂ=ಸ್ವಲ್ಪ ಕಾಲ, ಎಮೆಯಂ.... ಜಲಬಿಂದುಗಳ್ = ರೆಪ್ಪೆಯನ್ನೂ ಕೆನ್ನೆಯನ್ನೂ ಮುಟ್ಟದೆ ಒಂದರ ಹಿಂದೆ ಸಾಂದ್ರವಾಗಿ ಗುಡುಗುಡನೆ ಸುರಿವ ಆನಂದಬಾಷ್ಪದ ಹನಿಗಳು,

೧೨೮. ಎನಗೆಂತಂತಿರೆ=ನನಗೆ ಹೇಗೋ ಹಾಗೆ, ತನ್ನನುಕೂಲತ್ವಮಂ=ನನ್ನ ಅನುಕೂಲ್ಯವನ್ನು, ಒಂದು ಮೆಯ್ಯೊಳ್=ಒಂದು ರೀತಿಯಿಂದ, ಆತನೆ ತಾಂ ಮುಂ ಇನಿತೊಂದವಸ್ಥೆಗೊಳಗಾಗಲ್=ನನಗಿಂತ ಮೊದಲು ಅವನೇ (ಪುಂಡರೀಕನೆ) ಈ ವಿರಹಾವಸ್ಥೆಗೆ ಒಳಗಾಗುವ ಹಾಗೆ ಮಾಡಲು

೧೨೯. ವದನದೊಳ್ = (ಮುಖದಲ್ಲಿ) ಬಾಯಿನಲ್ಲಿ, ಅನೃತ ಭಾಷೆ=ಸುಳ್ಳು ಮಾತು. ಇರ್ಪನ್ನೆವರಂ = ಇರುವಷ್ಟರಲ್ಲಿ,

ವ|| ಅಸ್ವಸ್ಥಶರೀರಿಣಿ=ಸ್ವಸ್ಥ (ಆರೋಗ್ಯ)ವಲ್ಲದ ಶರೀರವುಳ್ಳವಳು. ಸ್ವಸ್ಥ ಎಂದರೆ ಯಾವಾಗಲೂ ಇರಬೇಕಾದ ಸ್ಥಿತಿ ಅಂದರೆ ಆರೋಗ್ಯ), ನೆರವಿ ಕವಿತರ್ಪುದು= ಗುಂಪು ಬಂದು ಕೂಡುತ್ತದೆ.

೧೩೦. ನೇಸರ್ಪಡುತಂದುದು = ಸೂರ್ಯಾಸ್ತಮಾನವಾಯಿತು. ಪಿಡಿವುದು=ಸಂರಕ್ಷಿಸಬೇಕು.

ವ|| ಸಹವಾಸಿಗಳು=ಆಶ್ರಿತರು-ಪರಿಜನರು.

೧೩೧. ಬಾಡಿದಮುಖವುಳ್ಳ ತಾಯಿಯು ಎಷ್ಟು ಹೊತ್ತು ಮನೆಗೆ ಹೋದಳು, ಅವಳೇನು ಹೇಳಿದಳು ಏನು ಮಾಡಿದಳು, ಏನಾಯ್ತು ಎಂಬುದನ್ನು ಉತ್ಸಾಹಶೂನ್ಯಳಾದುದರಿಂದ ತಿಳಿಯಲಿಲ್ಲ.

ವ|| ಅಂಭೋಜಿನೀ ಜೀವಿತೇಶ್ವರಂ=ಸೂರ್ಯ, ಪಾತಾಳಪಂಕಕಲುಷಿತ= ಪಾತಾಳಲೋಕದ ಕೆಸರಿನಿಂದ ಕೊಳೆಯಾಗಿ ಮಾಡಲ್ಪಟ್ಟ, ಕಿಂಕರ್ತವ್ಯತಾಮೂಢೆ=ಏನು ಮಾಡಬೇಕೆಂಬ ಜ್ಞಾನವಿಲ್ಲದವಳು, ಒಳಕೆಯ್ಯಲ್=ಆವರಿಸಿಕೊಳ್ಳುವುದಕ್ಕೆ, ಇಡಿದು= ವ್ಯಾಪಿಸಿ, ಅಡಕೆಗೊಂಡು=ಮೇಲೆಬಿದ್ದು

೧೩೨. ವ|| ಇತರ ಕನ್ಯೆಯಂತೆ=ಸಾಮಾನ್ಯ ಕನ್ಯೆಯರ ಹಾಗೆ, ಒಕ್ಕು= ಬಿಟ್ಟು-ದೂರಮಾಡಿ

೧೩೩. ಗುರುಜನಮೀಯದೆಯುಂ = ಹಿರಿಯರು ಕನ್ಯಾದಾನ ಮಾಡದೆಯೇ, ಮುನ್ = ಅದಕ್ಕೆ ಮೊದಲೇ, ಎರೆವಾತನನ್ = ಅಪೇಕ್ಷಿಸುವವನನ್ನು, ಎಯ್ದಿ = ಸೇರಿ, ಎಯ್ದೆಯಪ್ಪೊಡೆ = ಸುಮಂಗಲಿಯಾದರೆ, ವಿವಾಹಿತಳಾದರೆ, ಪರಿಭಾವಿಸಲ್ = ಯೋಚಿಸುವುದಾದರೆ, ಇದು = ಹೀಗೆ ಮಾಡುವುದು (ಅಂದರೆ ಗುರುಹಿರಿಯರ ಅಪ್ಪಣೆಯಿಲ್ಲದೆ ವಿವಾಹಿತಳಾಗುವ ದೋಷ) ಅಪರಿಹಾರ್ಯಂ = ತಪ್ಪಿಸುವುದಕ್ಕಾಗದುದು. ಆದುದರಿಂದ ಮರಣವೇ ಶರಣು.

೧೩೪. ಮನೆಗೆ ಬರಲ್ = ನನ್ನ ಮನೆಗೆ ಬಂದರೂ, ಅದಱಿಂದಂ = ಪ್ರತ್ಯುತ್ತರವನ್ನು ಕೊಡದೇ ಹೋದುದಕ್ಕಿಂತಲೂ, ಇರ್ = ಬೇರೆ, ಪ್ರಣಯ ಭಂಗಮಾವುದೋ = ಪ್ರೇಮ ಭಂಗ ಯಾವುದಿದೆ. ಅತ್ತಲ್ ಓಪನುಂ ಸಾಗುಂ = ಆಕಡೆ ಒಡೆಯನಾದ ಪುಂಡರೀಕನೂ ಸಾಯುತ್ತಾನೆ. ಅಂತಱಿಂ = ಆದ ಕಾರಣದಿಂದ, ಕಳೆಗುಂ = ಪರಿಹಾರವಾಗುತ್ತದೆ. ಇಲ್ಲಿ ಸಾ ಕಳೆ ಎಂಬ ಧಾತುಗಳ ಮೇಲೆ ಭವಿಷ್ಯದಾಖ್ಯಾತ ಪ್ರತ್ಯಯಗಳಿಗೆ ಗುಮಾದೇಶ ಬಂದಿದೆ ಶ. ದ. ಸೂ ೨೨೭.

೧೩೫. ಕೋಪಿಸಿಕೊಂಡು ಚಂದ್ರನೆಂಬ ಸಿಂಹವು ಕತ್ತಲೆಯೆಂಬ ಆನೆಯ ಕುಂಭಸ್ಥಳವನ್ನು ಒತ್ತಿ ಸೀಳಲಾಗಿ ಅಲ್ಲಿಂದ ಮುತ್ತಿನ ರಾಶಿಗಳು ಮೇಲಕ್ಕೆ ಹಾರಿದವೊ ಎನ್ನುವ ಹಾಗೆ ಅತಿ ಪರಿಶುದ್ಧವೂ ಚಂಚಲವೂ ಆದ ನಕ್ಷತ್ರ ಸಮೂಹವು ಕಾಣಿಸಿಕೊಂಡವು. ಇದು ಉತ್ಪ್ರೇಕ್ಷಾಲಂಕಾರ.

೧೩೬. ಇಂದ್ರದಿಕ್ = ಪೂರ್ವದಿಕ್ಕು.

೧೩೭. ಭೂಮಿಯನ್ನು ನೋಡಬೇಕೆಂದು ಪಾತಾಳಲೋಕದಿಂದ ಮೇಲಕ್ಕೆ ಬಂದ ನಾಗರಾಜನ ಹೆಡೆಯಲ್ಲಿರುವ ಕೆಂಪು ಬಣ್ಣದ ಕಿರಣಗಳಿಂದ ಕೂಡಿದ ರತ್ನಮಂಡಲದ ಹಾಗೆ ಚಂದ್ರಬಿಂಬವು ಪ್ರಕಾಶಿಸಿತು. ಉತ್ಪ್ರೇಕ್ಷಾಲಂಕಾರ.

೧೩೮. ಪತಿಯು ಅನ್ಯಾಂಗನಾಸಕ್ತನಾದನೆಂದು ರೋಹಿಣಿಯು ಸ್ಪರ್ದೆಯಿಂದ ಕೋಪಗೊಂಡು ಚಂದ್ರನನ್ನು ಕಾಲಿನಿಂದ ಒದೆಯಲು ಆ ಕಾಲಿಗೆ ಲೇಪಿಸಿಕೊಂಡಿದ್ದ ಅರಗಿನ ಬಣ್ಣವು ಅವನ ಶರೀರವನ್ನೆಲ್ಲಾ ಆಕ್ರಮಿಸಿದೆಯೋ ಅಥವಾ ಘೋರವಾದ ಸಮುದ್ರದಲ್ಲಿರುವ ಹವಳದ ಕಿರಣಗಳು ವ್ಯಾಪ್ತವಾಗಿದೆಯೋ ಅಥವಾ ಪೂರ್ವದಿಕ್ಪರ್ವತವೆಂಬ ಸಿಂಹವು ಹೊಡೆಯಲಾಗಿ ಚಂದ್ರಬಿಂಬದಲ್ಲಿದ್ದ ಜಿಂಕೆಯು ನೊಂದಿತೋ ಎನ್ನುವ ಹಾಗೆ ಆಗ ಚಂದ್ರಬಿಂಬವು ಕೆಂಪು ಕಾಂತಿಯಿಂದ ಕಣ್ಣಿಗೆ ಸುಂದರವಾಗಿ ಕಂಡಿತು— ಇದು ಉತ್ಪ್ರೇಕ್ಷಾಲಂಕಾರ.

ವ॥ ರಜನಿಕರ = ಚಂದ್ರ, ಅತ್ಯುಜ್ವಲ = ಬಹಳ ಪ್ರಕಾಶಮಾನವಾದ, ಮದನಾನಲ ಜ್ವಾಲಾ ಕಲಾಪೆಯಾಗಿಯುಂ = ಕಾಮಾಗ್ನಿ ಜ್ವಾಲೆಯ ಸಮೂಹದಿಂದ ಕೂಡಿದವಳೂ, ಅಂಧಕಾರಹೃದಯೆಯುಂ = ಕತ್ತಲೆಯಿಂದ ಕೂಡಿದ ಹೃದಯವುಳ್ಳವಳೂ

೧೩೯. ಚಂದ್ರಹತಕ = ಕೊಲೆಗಡುಕನಾದ ಚಂದ್ರ

೧೪೦. ಕೊಂಡುದು = ಆವರಿಸಿತು ಅಗ್ಗಲಸಿದ್ದೈಕಿಲವಂಗೆ = ಹೆಚ್ಚಾದ ಶೀತವುಳ್ಳ

ವನಿಗೆ, ನಂಜುಪುಗುಳುರ್ಬಿದವಂಗೆ=ವಿಷದ ಗುಳ್ಳೆಯೆದ್ದವನಿಗೆ, ಅಸಿತಾಹಿದಂತ=ಕೃಷ್ಣಸರ್ಪನ ಹಲ್ಲು,

ವ॥ ಚಂದನದ ಚರ್ಚೆ=ಅರೆದಿರುವ ಶ್ರೀಗಂಧ.

೧೪೧. ವ॥ ಚಂದನಪಂಕಾರ್ದ್ರ=ಶ್ರೀಗಂಧದ ಕೆಸರಿನಿಂದ ಒದ್ದೆಯಾಗಿದ್ದ.

೧೪೨. ಎನಿತಂ ನೋಡುತಮಿರ್ಪೆ=ಇನ್ನೆಷ್ಟು ಕಾಲ ನೋಡುತ್ತಿರುವೆ.

೧೪೩. ಉಯ್ವೊಡೆ ಏೞ್ ಪೋಪಂ=ಕರೆದುಕೊಂಡು ಹೋಗುವುದಾದರೆ ಏಳು ಹೋಗೋಣ.

೧೪೪. ದುರ್ನಿಮಿತ್ತಸೂಚಕಂ=ಕೆಟ್ಟ ಫಲವನ್ನು ಸೂಚಿಸತಕ್ಕಂಥದು, ಕೆತ್ತಲ್=ಹಾರುವುದಕ್ಕೆ, ಮೊದಲಿಕ್ಕಿತು=ಮೊದಲಾಯಿತು.

೧೪೫. ತ್ರಿಭುವನಪ್ರಾಸಾದ ರಮ್ಯಪ್ರಣಾಳದವೋಲ್=ಮೂರು ಲೋಕವೆಂಬ ಅರಮನೆಯ ರಮ್ಯವಾದ ಕಾಲುವೆ (ಪ್ರವಾಹ)ಯೋ ಎನ್ನುವ ಹಾಗೆ.

೧೪೬. ಶ್ರವಣನತ....ಪರಿಮಳಕ್ಕೆ=ಕಿವಿಯಲ್ಲಿ ಬಗ್ಗಿರುವ ಪಾರಿಜಾತದ ಹೂವಿನ ಗೊಂಚಲಿನಿಂದ ಹುಟ್ಟಿದ ವಾಸನೆಗೆ; ಇಲ್ಲಿ ಶ್ರವಣಗತ ಎಂದು ಪಾಠವಿರಬಹುದೇನೋ ? ಆಗ ಕಿವಿಯನ್ನು ಸೇರಿರುವ ಎಂದು ಅರ್ಥವಾಗುತ್ತದೆ. ನಂದನಭೃಂಗೀನಿವಹಂ=ತೋಟದಲ್ಲಿದ್ದ ದುಂಬಿಗಳ ಸಮೂಹ

ವ॥ ಪಕ್ಷದ್ವಾರ=ಪಕ್ಕದ ಬಾಗಿಲು,

೧೪೭. ಸರಭಸ=ರಭಸದಿಂದಕೂಡಿ, ಏಱಿಸಿದ ಬಿಲ್ವೆರೆಸು=ಹಗ್ಗವನ್ನು ಕಟ್ಟಿ ಸಿದ್ಧಪಡಿಸಿದ ಬಿಲ್ಲಿನಿಂದ ಕೂಡಿ, ಮದಿಂದ್ರಿಯವರ್ಗಂ=ನನ್ನ ಇಂದ್ರಿಯಗಳ ಸಮೂಹವು, ಮುಂದೆ ಪರಿಯೆ—ನಿಜಕರೋತ್ಕರದಿಂ=ತನ್ನ ಶ್ರೇಷ್ಠವಾದ ಕೈ (ಕಿರಣ)ಗಳಿಂದ, ಇಂ+ಪರಿಜನಂ+ಏವುದು=ಇದಕ್ಕಿಂತಲೂ ಸೇವಕನಜನವು ಮತ್ತೇನನ್ನು ಮಾಡಬಹುದು, ಪರಿಗ್ರಹಂ ಇಂತುಟೆದಲ್=ಪರಿಜನವು ಹೀಗಿರುವುದೇ ಸರಿಯಲ್ಲವೆ ?

೧೪೮. ಓವದೆ=ರಕ್ಷಿಸದೆ, ಕರಕಚಗ್ರಹಂಗೆಯ್ದು=ಕಿರಣಗಳೆಂಬ ಕಯ್ಯಿಂದ ಮುಡಿಯನ್ನು ಹಿಡಿದು, ಇದಿರ್ ತರ್ಕುಮೆಏಂ=ಎದುರಾಗಿ ತರುತ್ತಾನೆಯೇ ಏನು ?

೧೪೯. ಕಾದಲ=ಪ್ರಿಯ, ಮನ್ಮಥಶರವಿಹ್ವಲಿತನವೊಲ್=ಮನ್ಮಥನ ಬಾಣದಿಂದ ಚಕಿತನಾದವನ ಹಾಗೆ, ನೋಡ=ನೋಡು, ನೆಗಱ್ತ್ತಿರ್ದಪನಲ್ತೆ=ಮಾಡುತ್ತಿದ್ದಾನಲ್ಲವೆ. ನೋಡ ಎಂಬಲ್ಲಿ ನೋಡು ಧಾತುವಿನಮೇಲೆ ಆಶೀರಾದ್ಯರ್ಥದಲ್ಲಿ ಅಯ್ ಎಂಬ ಆಖ್ಯಾತಪ್ರತ್ಯಯಕ್ಕೆ ಅಕಾರದೇಶ ಬಂದಿದೆ. ಶ. ದ ಸೂ ೪೬೮.

೧೫೦. ಪ್ರತಿಬಿಂಬವ್ಯಾಜದಿಂ=ನೆರಳಿನ ನೆಪದಿಂದ, ಉದ್ಯತ್ಕಾಂತಿ=ಉತ್ಕೃಷ್ಟವಾದ ಕಾಂತಿ, ಚಂಚತ್=ಹೊಳೆಯುತ್ತಿರುವ, ನಖಗತ=ಉಗುರುಗಳಲ್ಲಿ ಪ್ರತಿಬಿಂಬಿಸಿದ, ತನು=ಶರೀರವುಳ್ಳ ಚಂದ್ರನು, ಕಾಲಂಪತ್ತಿ ಬಿಳ್ದಿರ್ಪಂ ಎಂತುಂಬಿಡಂ ಎಂಬುದು ಅನ್ವಯ.

ವ॥ ಪಳುಕಿನಪಾಸರೆ=ಸ್ಫಟಿಕದ ಹಾಸುಗಲ್ಲು.

೧೫೧. ಕೆತ್ತಿದತ್ತು=ಹಾರಿದೆ. ಒಡರ್ಚಲಿರ್ದುದೋ—ಉಂಟುಮಾಡುವುದರಲ್ಲಿ ದೆಯೋ, ಪನ್ನನೆಪಾಱಲ್=ಇದ್ದಕ್ಕಿದ್ದ ಹಾಗೆ ಹಾರಿಹೋಗುವಹಾಗೆ, ಪುರುಷಪ್ರಲಾಪ ರುದಿತಸ್ವನಂ=ಗಂಡಸು ಪ್ರಲಾಪಮಾಡಿಕೊಂಡು ಅಳುವ ಶಬ್ದ.

೧೫೨. ನಿಸ್ತ್ರಿಂಶಂ = ಕರುಣವಿಲ್ಲದವನು, ಪೊಲ್ಲದು = ಅಯೋಗ್ಯವಾದುದು, ಬಗೆದುದಂ ಕೂಡಿತೇ=ಇಷ್ಟಾರ್ಥ ಪೂರ್ಣವಾಯಿತೆ,

೧೫೩. ಧರ್ಮಮೆ ಭುವನಾಂತರದೊಳ್ ನಿನ್ನಂ ಕೈಕೊಳ್ವರಾರೋ, ಎಂಬುದು ಅನ್ವಯ. ರಂಡೆ=ವಿಧವೆ.

೧೫೪. ಪರಿಚಯಮಿಲ್ಲ=ಪರಿಚಯವಿಲ್ಲವೆ? ಕಂಡಱಿಯೆಯೋ=ಕಂಡಿಲ್ಲವೋ ತೊಟ್ಟನೆಲಂತುಪೋಪರೆ=ಆಕಸ್ಮಿಕವಾಗಿ ಹೀಗೆ ಬಿಟ್ಟು ಹೋಗುತ್ತಾರೆಯೆ? ಪಾೞ್ನು ಸಗಿರ್ದಪುದು=ಶೂನ್ಯವಾಗಿ ಕಾಣುತ್ತಿದೆ.

೧೫೫. ಉಸಿರದೆ ನೀನಿರಲ್=ನೀನು ಮಾತನಾಡದೆ ಇದ್ದರೆ, ಇನಿಸೆಟ್ದು=ಸ್ವಲ್ಪ ಎದ್ದು, ಕೂರ್ಮೆ=ಪ್ರೀತಿ, ಸ್ನೇಹ,

೧೫೬. ಎರ್ದೆಗೆಟ್ಟು=ಧೈರ್ಯಕೆಟ್ಟು, ಮೆಯ್ಮಱುಗಿ=ವ್ಯಸನಗೊಂಡು, ಅಗುರ್ವು =ಆಧಿಕ್ಯ, ಮೇಲುದರೊಳ್‌ಗುಲ್ಮುಲತಾಳಿಗಳ್ ತೊಡರಲ್=ಉತ್ತರೀಯದಲ್ಲಿ ಗಿಡಬ ಳ್ಳಿಗಳು ಸಿಕ್ಕಿಕೊಳ್ಳುತ್ತಿರಲು, ಒರ್ವಂ ನೂಂಕಿಕೊಂಡೊಯ್ವಮಾರ್ಗದಿಂ = ಒಬ್ಬನು ತಳ್ಳಿಕೊಂಡು ಹೋಗುತ್ತಿರುವ ದಾರಿಯಲ್ಲಿ, ಹಾಹಾಕ್ರಂದನಂ = ಅಯ್ಯೋಅಯ್ಯೋ ಎಂದು ಅಳುವುದು.

೧೫೭. ಪೊಳೆವೆಳೆ....ವಸೆಯಮೇಲೆ=ಹೊಳೆಯುತ್ತಿರುವ ಎಳೆಯದಾದ ಚಿಗುರು ದಳಗಳೊಡನೆ ಕೂಡಿದ ತಂಪಾದ ಅರಳಿದ ಹೂವಿನದಳದ ಹಾಸಿಗೆಯ ಮೇಲೆ; ಒಱಗಿರ್ದಂ=ಮಲಗಿದ್ದನು.

೧೫೮. ಸೀರ್ಪನಿಗಳ ತುಱುಗಲ್=ಶೈತ್ಯದಿಂದ ಕೂಡಿದ ಸಣ್ಣಹನಿಗಳ ಗುಂಪು, ಕುಳಿರ್ವ....ವಸೆಯಮೇಲೆ=ತಣ್ಣಗಿರುವ ಅರಳಿದ ಹೂವಿನದಳದ ಹಾಸಿಗೆಯ ಮೇಲೆ.

೧೫೯. ಅಳ್ಕಿ=ಹೆದರಿ, ಬೆಂಗುಡೆ=ಬೆನ್ನನ್ನು ಒಡ್ಡಲು, ಕದಿರ್+ತುಱುಗಲ್ =ಕಿರಣಗಳ ಸಮೂಹವು, ಮೊಳೆದುವು=ಮೂಡಿದುವು. ಮದನಶಿಖಿ=ಕಾಮಾಗ್ನಿ, ವಿಹ್ವಳ=ಕಲಕಲ್ಪಟ್ಟ (ಬಾಧಿತವಾದ), ಹೃದಯನ್ಯಸ್ತ=ಎದೆಯಲ್ಲಿ ಇಡಲ್ಪಟ್ಟ, ನಖ ದೀಧಿತಿ=ಉಗುರಿನ ಕಾಂತಿ.

೧೫೯. ಪದೆದು=ಆಶೆಪಟ್ಟು, ಮಟ್ಗಿಸೆ=ಕಡಿಮೆ ಮಾಡಿಕೊಳ್ಳುವುದಕ್ಕಾಗಿ

೧೬೦. ಅಪರಜನಂ=ಬೇರೆಯವರು.

೧೬೧. ಅಸುಗಳ್ = ಪ್ರಾಣಗಳು, ಮದನವ್ಯಥಾ=ಮನ್ಮಥನ ವ್ಯಥೆಯಿಂದ, ಆಯಾಸನ=ಆಯಾಸಪಡಿಸುವ ವಿಷಯದಲ್ಲಿ, ಬಂಧನಂ=ಕಟ್ಟುಗಳು, ತನ್ನಿಂತಾಂ= ಪುಂಡರೀಕನು ತನ್ನಷ್ಟಕ್ಕೆತಾನೆ. ನಿಶ್ಚೇತನಸೌಖ್ಯಂ=ಚಲನೆಯೇ ಇಲ್ಲದ ಜಡಸೌಖ್ಯ ವನ್ನು.

೧೬೨. ಪ್ರೀಣತ್ ಪ್ರಾಣಮನ್ = ಪ್ರೀತಿಪಾತ್ರವಾದ ಪ್ರಾಣವನ್ನು, ಮಚ್ಚುಗೊಟ್ಟವೋಲ್ = ಪ್ರೀತಿಯ ಬಹುಮಾನವನ್ನು ಕೊಟ್ಟಂತೆ.

ವ॥ ಅನಂಗರಚಿತ = ಮನ್ಮಥತಾಪಶಮನಕ್ಕೋಸ್ಕರ ಮಾಡಲ್ಪಟ್ಟ, ಚಂದನಲಲಾಟಕ = ಚಂದನ ತಿಲಕವೆಂಬ, ತ್ರಿಪುಂಡ್ರನುಂ = ತ್ರಿಪುಂಡ್ರ (ಮೂರುರೇಖೆ)ವನ್ನುಳ್ಳವನೂ, ಸರಸ....ಪೀತನಂ = ರಸಯುಕ್ತವಾದ ಕಮಲದ ಸೂತ್ರದಿಂದ ಮಾಡಲ್ಪಟ್ಟ ಜನಿವಾರವನ್ನುಳ್ಳವನೂ. ಅಂಸಾ....ಉತ್ತರೀಯನುಂ = ಹೆಗಲಿನಲ್ಲಿ ಇಡಲ್ಪಟ್ಟ ಎಳೆಯ ಬಾಳೆಯ ಎಲೆಯ ಹೊದಿಕೆಯುಳ್ಳವನೂ, ಅವಿರಳ....ಪಾಂಡುರನುಂ = ಸಾಂದ್ರವಾದ ಪಚ್ಚಕರ್ಪೂರಪರಾಗದ ಧೂಳಿನಿಂದ ಬೆಳುಪಾಗಿ ತೋರುವವನೂ, ಆಬದ್ಧ....ಪ್ರತಿಸರನುಂ = ರಕ್ಷಾರ್ಥವಾಗಿ ತಾವರೆಯ ದಂಟಿನಿಂದ ಮಾಡಿದ ಕಂಕಣಗಳನ್ನು ಕಟ್ಟಿಕೊಂಡವನೂ, ಮತ್ಸಮಾಗಮಮಂತ್ರ = ನನ್ನನ್ನು ಪಡೆಯುವುದಕ್ಕೆ ಸಾಧನವಾದ ಮಂತ್ರ.

೧೬೩. ಕಂತುಶರ ಭೇದದ ವೇದನೆ = ಮನ್ಮಥ ಬಾಣದಿಂದ ಸೀಳ್ದು ಗಾಯಗೊಂಡ ನೋವು. ಪೆಱಗೆ + ಇಂ + ನೆತ್ತರ್ ಸುರಿದಪುದು = ಅದರ ಹಿಂದೆ ಇನ್ನು ರಕ್ತವು ಸುರಿಯುತ್ತದೆ. ಕೆಂಪು ಪರೆದಿರೆ ಮುಳಿದು ಈಕ್ಷಿಪಂದದಿಂ ಕಣ್ ಅರೆಮುಗುಳಿರ್ದುವು; ಬೞಿಸಲಲ್ = ಹತ್ತಿರ ಹೋಗುವುದಕ್ಕೂ, ನಡೆನೋಡಲ್ = ನಿಂತು ನಿಧಾನವಾಗಿ ನೋಡಲು, ಆರ್ತೆನಿಲ್ಲ = ಶಕ್ತಳಾಗಲಿಲ್ಲ. ಅಲಂಪನೊಳಕೊಂಡಬಲಿಂ = ಪ್ರೀತಿಪೂರ್ಣವಾದ ದುಃಖದಿಂದ.

೧೬೪. ಬಾಯ್ದೆಱೆ = ತುಟಿಗಳು, ರಜನಿಕರಾಂಶುಪ್ರಸರಂ = ಚಂದ್ರಕಿರಣದ ಸಮೂಹ, ದಂತದ್ಯುತಿ = ಹಲ್ಲಿನ ಕಾಂತಿ.

೧೬೫. ಪಾಶ = ಹಗ್ಗ, ಬಳಸಿ-ಸುತ್ತಿ, ಮುಱುಗಿಸಿ = ಕೆಡಿಸಿ.

೧೬೬. ಪೋಗಲಾಗ = ಹೋಗಕೂಡದು, ಮಾಣಿಪವೋಲ್ = ತಡೆಯುವ ಹಾಗೆ, ಆಗ ಎಂಬಲ್ಲಿ ಆಗು ಧಾತುವಿನ ಮೇಲೆ ಅನರ್ಹಾರ್ಥದಲ್ಲಿ—ನಿಷೇಧಾರ್ಥದಲ್ಲಿ—ಅಪ್ರತ್ಯಯ ಬಂದಿದೆ. ಶ. ಶಾ ಸೂ ೫೮೪. ಸುಮನೋಬಾಣಾಗ್ನಿಸ್ಫುರಿತ ಹೃದಯದೊಳ್ = ಕಾಮಾಗ್ನಿಯಿಂದ ಪ್ರಕಾಶಮಾನವಾದ ಎದೆಯಮೇಲೆ.

೧೬೭. ಒಸರ್ದಪುದು = ಜಿನುಗುತ್ತಿದೆ. ಮಿಂಚುಗುರ = ಹೊಳೆಯುವ ಉಗುರಿನ. ಮರಲ್ದ = ತಿರುಗಿಸಿದ, ಮರೆಮಾಡಿದ.

೧೬೮. ಅಸು ಎಂತುಪೋದುದು = ಪ್ರಾಣವು ಯಾವ ಮಾರ್ಗವಾಗಿ ಹೋಯಿತು. ನಿಮಿರ್ದ = ಮೇಲಕ್ಕೆ ನೀಡಿದ > ಉದ್ದವಾದ,

೧೬೯. ಘಟಿಲನೆ ಬರ್ಪೆನ್ನಂ ಕಂಡು = ಥಟಕ್ಕನೆ ಬಂದ ನನ್ನನ್ನು ನೋಡಿ, ಅೞಲ್ ಇರ್ಮಡಿಯಾಗೆ = ದುಃಖವು ಎರಡರಷ್ಟಾಗಲು, ಕೆಳೆಯನ ಕೊರಲ ಪತ್ತಿ = ಸ್ನೇಹಿತನ ಕತ್ತನ್ನು ಆಲಿಂಗಿಸಿ. ಅಬ್ರಹ್ಮಣ್ಯ = ವಿಪತ್ತೊದಗಿದಾಗ ಬ್ರಾಹ್ಮಣರು ಕೂಗಿಕೊಳ್ಳುವ ಶಬ್ದ, ಬಿಡೆಪುಯ್ಯಲ್ಚಲ್ = ವಿಶೇಷವಾಗಿ ಗೋಳಾಡಲು.

ವ॥ ನಿಷ್ಪಾಪನ್ = ಪಾಪರಹಿತನಾದ, ಮಹಾಹತಕಿ = ದೊಡ್ಡ ಕೊಲೆಮಾಡಿ

ದವಳು, ಮಂದಭಾಗ್ಯೆಯೆಂ=ಅದೃಷ್ಟಹೀನಳಾಗಿದ್ದಂಥ, ಪಾತಾಳತಲವಿವರ=ಪಾತಾಳ ಸ್ಥಳದ ಬಿರುಕು-ಅಥವಾ ರಂಧ್ರ

೧೭೦. ಏನೇನನೊಡರ್ಚಿದೆಂ=ಏನೇನನ್ನು ಮಾಡಿದೆನು. ಆನಾರ್ಗೆ=ನಾನು ಯಾರ ಮಗಳು, ಅರ್ಱ ಅಱಿಯೆಂ=ನಾನು ತಿಳಿಯಲಿಲ್ಲ.

೧೭೧. ಅಱಲಸೈರಣೆ=ದುಃಖವನ್ನು ಸಹಿಸಿಕೊಳ್ಳುವಿಕೆ, ಕಡುಪು = ಕ್ರೌರ್ಯ, ನಟ್ಟಲೆವಸಮಾಸ್ತ್ರ ವಕ್ರತೆಯೋ=ನೇರವಾಗಿ ಹಿಂಸಿಸುವ ಮನ್ಮಥನ ವಕ್ರಸ್ವಭಾವವೋ, ಅಗ್ಗಲಿಸಿಯೆ=ಸ್ಥಿರವಾಗಿಯೆ,

೧೭೨. ಬಿಡೆಸುಡೆ=ವಿಶೇಷವಾಗಿ ಸುಡಲು,

ವ || ಅದವಱಲ್=ದುಃಖ.

೧೭೪. ಸಕ್ಕಿ=ಸಾಕ್ಷಿ, ಇವಳ್ಗೆ=ಈ ನನಗೆ, ವಿರಹದಿಂ ಪಗಲ್‌ಯುಗಕೋಟಿವೊಲಾದುದು ಎಂಬುದಂ ಬೆಸಗೊಳ್.

೧೭೬. ಜೀವಮನೇನಿನಿಸು ಪಿಡಿಯಲಾರ್ತೆಯುಮಿಲ್ಲ=ಜೀವವನ್ನು ಸ್ವಲ್ಪ ತಡೆದು ನಿಲ್ಲಿಸಲು ಶಕ್ತನಾಗಲಿಲ್ಲ.

ವ || ಎತ್ತವೇಟ್ಕುಂ=ಎತ್ತಬೇಕು>ಬದುಕಿಸಬೇಕು. ಮಂದ್ಯೆಸಿ=ಒತ್ತಾಗಿ ಸೇರಿ, ಪಗಿಲ್ತು=ಜಿಗುಟಾಗಿ, ಬೆಳ್ಕರಿಸಿ=ಬಿಳುಪಾಗಿ, ಮಳಯಜ....ಕುಂಠಿತ=ಶ್ರೀಗಂಧದ ನೀರಿನಲ್ಲಿ ತೋಯಲ್ಪಟ್ಟ ಕಮಲದೆಲೆಯಿಂದ ಮುಚ್ಚಲ್ಪಟ್ಟ, ಎಳವಿ=ಸವರಿ, ಉಪಾಲಂಭನಂಯಾಡಿ=ಬಯ್ದು, ಎಡೆಯುಡುಗದೆ=ಅವಿಚ್ಛಿನ್ನವಾಗಿ, ಸಂಭೂತೆ=ಜನ್ಮಭೂಮಿ,

೧೭೮. ಚೆಚ್ಚರದಿಂ=ಬೇಗನೆ, ಪಾಂಗು=ರೀತಿ, ನಾಂದ=ಒದ್ದೆಯಾದ, ನಯದೆ =ನಿಧಾನವಾಗಿ.

೧೭೯. ಇನಿವಿರಿದು=ಇಷ್ಟು ದೊಡ್ಡದಾದುದು. ಮಾಣ್ಗೆ = ನಿಲ್ಲಲಿ,

೧೮೦. ನಿಲೆಪಿಡಿಯಸುಸಂತತಿಯಂ=ಪ್ರಾಣಗಳ ಸಮೂಹವನ್ನು ನಿಲ್ಲುವಹಾಗೆ ಹಿಡಿದುಕೊ, ಇರ್ವ=ಈ ಪ್ರಾಣಗಳನ್ನು, ಸ್ಮರಣ....ಲಾಗದು=ನೆನಪಿನ ದುಃಖವೆಂಬ ಬೆಂಕಿಗೆ ಕಟ್ಟಿಗೆಯಾಗುವಂತೆ (ಆಹುತಿಯಾಗುವಹಾಗೆ) ಮಾಡಬಾರದು. ಉಗೆ=ಬೀಳುತ್ತಿರಲು>ಸುರಿಯುತ್ತಿರಲು,

೧೮೧. ಕೊಲುತಮಿರ್ಪಂತಕಂ ಎನ್ನಂ ನೋಡಲುಂ ಪೇಸಿದಂ ಎಂದಂದು ಮತ್ತಂ ಸಾವುಮೆಲ್ಲಿರ್ಪುದು=ಕೊಲ್ಲತಕ್ಕ ಯಮನೇ ನನ್ನನ್ನು ನೋಡಲು ಅಸಹ್ಯಪಟ್ಟನು ಎಂದು ಹೇಳುವಾಗ ಇನ್ನು ಸಾವು ಎಲ್ಲಿಂದ ಬಂದೀತು. ನಿಸ್ತ್ರಪಾಗ್ರೇಸರೆಯು=ಲಜ್ಜಾಶೂನ್ಯರಾದವರಲ್ಲಿ ಮುಖ್ಯಳಾದ ನನ್ನ, ಒಡನುಡಿವಲ್ಲಿಂದಂ=ಸಂಗಡ ಮಾತನಾಡುವುದಕ್ಕಿಂತ —ಕಷ್ಟಮುಂಟೆ.

೧೮೨ ಆ ವಜ್ರಪಾತದಿಂ ಮೇಲೆ=ಆ ವಜ್ರಪಾತಕ್ಕೆ ಸಮಾನವಾದ ಪುಂಡರೀಕನ ಮರಣಾನಂತರ, ಇನ್ನಾವಂಗಂ ಪೇೞಲುಂ ಕೇಳಲುಮಱಿದು ಎಂಬುದು ಅನ್ವಯ,

ಒಂದು=ಒಂದುಕಾರ್ಯವು

೧೮೩ ಕೋಟಲೆಗಳ=ಕಷ್ಟಗಳ, ಬಾಟಿಸ್ರ್ಮದಲೆನಿಸಿದ = ಮೂಲಭೂತವಾದ, ಬಾರ್ತೆಗೆಟ್ಟ=ಅಗಣ್ಯವಾದ, ವರ್ಣಿಸಲಾಗದ, ಕೃತಮಱಿಯದ=ಉಪಕಾರಸ್ಮರಣೆಯಿಲ್ಲದ, ಮಾಯದ=ಅಯೋಗ್ಯವಾದ>ನೀಚವಾದ.

ವ|| ಅವಸ್ಥಾಂತರ=ಸನ್ನಿವೇಶದ ಮಧ್ಯೆ.

೧೮೪ ಇಱ ಎನಸು=ಇನ್ನೂ ಎಷ್ಟು, ಸಂಗಡಿಸು+ಇಂಧನಂಗಳಂ=ಕಟ್ಟಿಗೆಯನ್ನು ರಾಶಿಹಾಕು, ಒಡವೋಗವೇಟ್ಕುಂ=ಜೊತೆಯಲ್ಲಿಯೇ ಹೋಗಬೇಕು. ಒರ್ವೆಯೆ=ಇದ್ದಕ್ಕಿದ್ದಹಾಗೆ, ಅಮರ್ತ್ಯಮಾರ್ಗ=ಆಕಾಶಮಾರ್ಗ(ಮರ್ತ್ಯ=ಭೂಮಿ—ಅದಲ್ಲದುದು)

ವ|| ಕೇಯೂರಕೋಟಿ ಲಗ್ನ=ಅನೇಕ ತೋಳುಬಳೆಗಳೊಡನೆ ಕೂಡಿಕೊಂಡಿರುವ, ಪವನತರಳತರ=ಗಾಳಿಯಿಂದ ವಿಶೇಷವಾಗಿ ಚಲಿಸುತ್ತಿರುವ, ಉತ್ತರೀಯಾಂಶುಕ=ಮೇಲುಹೊದಿಕೆಯ ಬಟ್ಟೆ, ಕಾಮಿನೀ....ದೇಶನುಂ = ಸ್ತ್ರೀಯರಸ್ತನಪ್ರದೇಶದಲ್ಲಿ ಅಲಂಕಾರಕ್ಕಾಗಿ ಬರೆದಿರುವ ಕುಂಕುಮಪತ್ರಲತೆಗಳಿಂದ ಗುರುತುಮಾಡಲ್ಪಟ್ಟ ಭುಜಪ್ರದೇಶವುಳ್ಳವನೂ (ಅವರ ಅನವರತ ಆಲಿಂಗನದಿಂದ), ಉಭಯ....ಮಂಡಲನುಂ=ಎರಡುಕಿವಿಗಳಲ್ಲಿಯೂ ಜೋಲಾಡುತ್ತಿರುವ ಮಕರಕುಂಡಲ (ಕಿವಿಯಾಭರಣ)ಗಳ ರತ್ನಕಾಂತಿಯಿಂದ ಕೆಂಪಾಗಿಸಲ್ಪಟ್ಟ ಕೆನ್ನೆಯನ್ನುಳ್ಳವನೂ, ದುಕೂಲ....ಉಷ್ಣೀಷನುಂ=ಚಿಗುರಿನಂತೆ ತೆಳುವಾದ ರೇಷ್ಮೆಯಬಟ್ಟೆಯ ರುಮಾಲನ್ನು ಧರಿಸಿರುವವನೂ, ಕುಮುದಧವಳದೇಹನುಂ=ಕನ್ನೈದಿಲೆಯಷ್ಟು ಬೆಳ್ಳಗಿರುವ ದೇಹವುಳ್ಳವನೂ.

೧೮೫ ತನಿಗಂಪನಾಳ್ದ=ಹೆಚ್ಚಿನವಾಸನೆಯಿಂದ ಕೂಡಿದ, ಕಡುದಣ್ಪು=ವಿಶೇಷವಾದ ತಂಪು, ದಿವಿಜೇಭಕರಾನುಕಾರಿ=ಐರಾವತದ ಸೊಂಡಲಿಗೆ ಸಮಾನವಾದ

ವ|| ಮೃಣಾಲಕೋಮಲ=ತಾವರೆಯದಂಟಿನಂತೆ ಮೃದುವಾದ, ಉಪರತನಾದ=ಮಲಗಿದ್ದ

೧೮೬ ಬಗೆಗೆಟ್ಟು=ಬುದ್ಧಿಹೀನಳಾಗಿ, ಮಗುೞ್ಚಿಯುಂ=ಪುನಃ ವ|| ವ್ಯತಿಕರ=ಸಂದರ್ಭ, ಉನ್ಮುಖನಾಗಿ=ಮೇಲೆನೋಡುತ್ತ.

೧೮೭ ಪೆಱಗನೆ=ಹಿಂದೆಯೇ, ಒಗೆದಂ=ಹಾರಿದನು (ಹೊರಟುಹೋದನು)

ವ|| ನೋಡೆನೋಡೆ=ನೋಡುತ್ತಿದ್ದ ಹಾಗೆಯೇ, ಪೋಗಿಂಗೆ=ಹೊರಟುಹೋದುದಕ್ಕೆ, ಕಿಂಕರ್ತವ್ಯತಾಮೂಢೆ=ಏನುಮಾಡಬೇಕೆಂಬುದನ್ನು ತಿಳಿಯದವಳು.

೧೮೮ ಅಳ್ಕಿನಿಂ=ಭಯದಿಂದ, ಅಪ್ಪುಕೆಯ್ದು=ಅಂಗೀಕರಿಸಿ, ಪದೆದು=ಪ್ರೀತಿಸಿ

೧೮೯ ಇನ್ನರ=ಇಂತಹವರ, ನನ್ನಿ=ಸತ್ಯ, ಇನ್ನರ ಎಂಬಲ್ಲಿ ಇಂತಪ್ಪ ಎಂಬ ಪ್ರಕಾರವಾಚಕದ ಮೇಲೆ ಇನ್ನಾದೇಶ ಬಂದಿದೆ. ಶ. ಮ ಸೂ ೧೬೦, ಕೇಳ=ಕೇಳು ಎಂಬುದಕ್ಕೆ ಮಧ್ಯಮಪುರುಷದ ಏಕವಚನದಲ್ಲಿ ಕೊನೆಗೆ ಅಕಾರಾದೇಶ ಬಂದು ಕೇಳ ಎಂದಾಗಿದೆ. ಶ.ಮ.ಸೂ ೧೨೫.

೧೯೦ ಇಂ ಪಡೆದಟ್ಟಲೆಂದು=ಇನ್ನೂ ಉಂಟುಮಾಡಿ ಕಳುಹಿಸಬೇಕೆಂದು, ವಿಗತಾಸು=ಪ್ರಾಣವಿಲ್ಲದವನು (ಸತ್ತುಹೋಗಿರುವವನು), ಮರಣವ್ಯವಸಾಯಮಂ ಮಾಣ್ಪುದರ್ಕೆ ಇದಱಿಂದ ನಿನ್ನುಮಂ ಈಗಳ್ ಅಱಿಸಿದನ್=ಸಾಯುವ ಪ್ರಯತ್ನವನ್ನು ತಪ್ಪಿಸುವುದಕ್ಕೆ ನಿನ್ನನ್ನು ಇದರಿಂದ ತಡೆಗಟ್ಟಿದನು, ಇದುನನ್ನಿಯಪ್ಪುದಲ್ತೆನ್ನದೆ ಪೇಱತೇಂ=ಇದು ಸತ್ಯವಲ್ಲದೆ ಮತ್ತೇನು.

೧೯೧ ನಿಸದಂ=ನಿಶ್ಚಯ.

೧೯೨ ಪಿರಿದು+ಇದಿಂತುಟು=ಬಹುಶಃ ಇದು ಹೀಗೆಯೇ ಸರಿ. ತೃಷ್ಣೆ=ಆಶೆ, ಉಕ್ಕೆವ=ಉತ್ಸಾಹ, ಮೋಸ, ಸಾಜದಿಂ=ಸಹಜವಾಗಿಯೇ, ಓಸರಿಸದೆ=ವ್ಯತ್ಯಾಸವಾಗದೆ, ಸಾಯದೆ, ಪಾತಕಿಯೆ=ಪಾತಕಿಯಾಗಿದ್ದೇನೆ.

ವ॥ ಪೊರಳುತವೆ=ಹೊರಳಾಡುತ್ತ, ಪರೆದ=ಕೆದರಿದ, ಪಗಿಲ್ತು=ಜಿಗುಟಾಗಿ, ಪತ್ತಿದ=ಅಂಟಿಕೊಂಡ, ಆಕ್ರಂದನ=ಅಳುವಿಕೆ ಪ್ರತಿಮೆ=ಸಮಾನವಾದ, ಯುಗಸಹಸ್ರಾಯಮಾನವಾಗೆ=ಸಾವಿರಯುಗದಂತೆ ತೋರಲು

೧೯೩ ಮೆಯ್ವೆಱು=ಶರೀರಾವಲಂಬನದಿಂದ, ತನ್ನ ಶರೀರದಮೇಲೆ ಒರಗಿಸಿಕೊಂಡು, ನೀರಿಱು=ಸ್ನಾನಮಾಡು,

ವ॥ ಮದೀಯಮಂದ ಭಾಗ್ಯತೆಯುಮಂ=ನನ್ನ ಅದೃಷ್ಟಹೀನತ್ವವನ್ನೂ, ದಾರುಣತೆ=ಕಾಠಿಣ್ಯ, ದುಸ್ಸಹತೆ=ಸಹಿಸಲಾಗದಿರುವಿಕೆ, ಪದಾರ್ಥದ+ಅನಿತ್ಯತೆ=ವಸ್ತುಗಳ ಅಶಾಶ್ವತ ಸ್ವಭಾವ.

೧೯೪ ಅಸದ್ವಿಷಯದತ್ತಲೆ=ಕೆಟ್ಟ ವಿಷಯಗಳ ಕಡೆಗೆ, ನಿರುದ್ಧೇಂದ್ರಿಯೆಯಾಗಿ=ಇಂದ್ರಿಯವನ್ನು ಹತೋಟಿಯಲ್ಲಿಟ್ಟುಕೊಳ್ಳುವಳಾಗಿ (ಇಂದ್ರಿಯಸಂಯಮವುಳ್ಳವಳಾಗಿ) ಪತ್ತುವಿಟ್ಟು=ದೂರಮಾಡಿ, ಏವರ್=ಏನುಮಾಡಬಲ್ಲರು, ಅನಾಥೆಯೆಂ=ಒಡೆಯನಿಲ್ಲದವಳಾಗಿದ್ದೇನೆ. ಸ್ಥಾಣು=ಈಶ್ವರ.

೧೯೫ ಸಾಂತ್ವನವಚನ=ಸಮಾಧಾನದಮಾತು,

೧೯೬ ಎರವುಗೊಂಡು=ಪ್ರಾರ್ಥಿಸಿ, ಪೋ ಬಾರಳ್=ಛೀ ಬರುವುದಿಲ್ಲ.

೧೯೭ ಕ್ಷಪಯಿಸಿರ್ಪೆ=ದಂಡಿಸುತ್ತಿದ್ದೇನೆ > ಕರಗಿಸುತ್ತಿದ್ದೇನೆ

೧೯೮ ನಿಸ್ತ್ರಪೆ=ಲಜ್ಜೆಯಿಲ್ಲದವಳು, ನಿಸ್ತ್ರಿಂಶಿ=ದಯಾಶೂನ್ಯಳು.

೨೦೦ ಪೊರೆಯಿಂದ=ಪದರದಿಂದ, ಹೊದಿಕೆಯಿಂದ

೨೦೧ ಹೃತಹೃದಯ=ಆಕರ್ಷಿಸಲ್ಪಟ್ಟ ಮನಸ್ಸು.

೨೦೨ ಇನಿಸು+ಒಗೆತರ್ಪ+ಕಣ್ಬನಿಗಳಿಂದಮೆ=ಹೀಗೆ ಸುರಿಯುತ್ತಿರುವ ಕಣ್ಣೀರಿನಿಂದಲೇ, ಅಪಾರಭವ ಭೋಗ=ಎಲ್ಲೆಯಿಲ್ಲದ ಸಂಸಾರಸುಖ, ಪತ್ತುವಿಟ್ಟು=ಬಿಟ್ಟು, ದೂರಮಾಡಿ, ನಟ್ಟುನಿಂದು=ಸ್ಥಿರವಾಗಿ ನಿಂತು, ಕಱುತ್ತು=ದಂಡಿಸಿ

೨೦೩ ಅಟಲನಳವಿ=ದುಃಖದಪ್ರಮಾಣ, ದುಃಖೋದ್ವೇಗ, ಮಟ್ಗಿಸು=ಕಡಿಮೆಮಾಡು, ಉತ್ತವಳಿಕೆ=ಅವಿವೇಕ,

೨೦೪ ಅವರವಗರ್ಗದ ಕರ್ಮಫಲವಿಸ್ಪಡೆ=ಅವರವರಿಗುಂಟಾದ ಕರ್ಮಫಲ ದಿಂದ ಅವರವರಿರುವ ಸ್ಥಳ-ಬೇಱೆ; ಮೇಲೆ ಕೊಡುವರ್ + ಒಡಸತ್ತವರ್ + ಎಂಬುದು ಕೂಡದು=ಅವರಮರಣಾನಂತರ ಉಳಿದವರುಸತ್ತರೆ ಅವರನ್ನು ಕೂಡುತ್ತಾರೆ ಎಂಬುದು ಸರಿಯಲ್ಲ. ಜಲಾಂಜಲಿಪ್ರಭೃತಿ=ತರ್ಪಣವೇ ಮೊದಲಾದ

೨೦೬ ಅನಾಶ್ವಾಸಿಸಿದನಿತಱಿಂ ಒಳೇನು=ನಾನು ಸಮಾಧಾನ ಮಾಡುವುದ ರಿಂದೇನು ವಿಶೇಷ, ತದ್ವಿಧರ=ಅಂತಹವರ, ಅವಿತಥಂ=ಸುಳ್ಳು,

೨೦೮ ಪ್ರವೃತ್ತಿ=ಸಮಾಚಾರ, > ವೃತ್ತಾಂತ,

ವ॥ ವಿಲಂಬಿ=ಹೋಗು, ನಡೆ,

೨೧೦ ಕರ್ಚಿ—ತೊಳೆದು, ತೀರ್ಚಿ=ಮುಗಿಸಿ, ಭಸ್ಮಶಯ್ಯೆ=ಬೂದಿಯ ಹಾಸಿಗೆ.

ವ॥ ಆತ್ಮೀಯ ಪ್ರಕಲ್ಪಿತ ಲತಾಪಲ್ಲವಶಯನದೊಳ್=ತಾನೇ ರಚಿಸಿಕೊಂಡ ಲತೆಗಳ ಚಿಗುರಿನ ಹಾಸಿಗೆಯಲ್ಲಿ. ಮನೋಭವವಿಜೃಂಭಿತ=ಮನ್ಮಥನ ಚೇಷ್ಟೆ. ವಿಸ್ಮಯಾಕ್ಷಿಪ್ತ=ಆಶ್ಚರ್ಯದಿಂದ ಕೂಡಿದ.

ಕಾದಂಬರಿಯ ಪ್ರಥಮ ಸಂದರ್ಶನ

೨. ಅಪ್ರಾಕೃತ....ಮನೋರಥ=ಹಿಂದೆ ಎಂದೂ ಇಲ್ಲದ-ಅಭೂತಪೂರ್ವವಾದ —ತನ್ನ ವೈಭವದಿಂದ ವಿದ್ವಾಂಸರ ಇಷ್ಟಾರ್ಥವನ್ನು ಪೂರ್ಣಗೊಳಿಸಿದ.

೬. ಚೆಚ್ಚರಂ=ಹಠಾತ್ತನೆ-ಇದ್ದಕ್ಕಿದ್ದ ಹಾಗೆ

ವ॥ ಉಪಾರೂಢಯವ್ವನ=ಯವ್ವನದಿಂದ ತುಂಬಿದ, ಪ್ರಾಪ್ತವಯಸ್ಕಳಾದ.

೭. ವ್ಯತಿಕರ=ಸಂದರ್ಭ.

೮. ಇಱ ಎನ್ನ ಜೀವಂಬೆರಸಾನಿಂತಿರ್ಪುದಂ ತಾಂ ಬಯಸುವ ಬಗೆಯೆಂತೆಂದೊಡೆ (ತಾಂ) ಗುರುಗಳ್ ತಾವೇನನೊಂದಂ ಬೆಸಸಿದರದನೇ ಕೊಳ್ವದು=ನಾನು ಬದುಕಲಿ ಎಂಬ ಅಪೇಕ್ಷೆ ಇದ್ದರೆ ನಿಮ್ಮ ತಾಯ್ತಂದೆಗಳು ಏನು ಹೇಳುತ್ತಾರೋ ಅದರಂತೆ ಕೇಳ್ವುದು. ಸೌವಿದಲ್ಲ=ಕನ್ಯಾಂತಪುರ ರಕ್ಷಕ, (ಕಂಚುಕಿ)

೯. ಅವಿರಳ=ಸಾಂದ್ರವಾದ, ಭಸ್ಮಧವಳ=ವಿಭೂತಿಯ ಬಿಳುಪು, ಅಗಜಾ ರಾಮಾ=ಪಾರ್ವತಿಯೆಂಬ ಸ್ತ್ರೀ

೧೦. ವ॥ ಕೃತಪ್ರಾಭಾತಿಕ ನಿಯಮಂ = ಪ್ರಾತಃಕಾಲದ ನಿಯಮವನ್ನು ಮುಗಿಸಿದ, ಅಘಮರ್ಷಣವಿಧಿ=ಸ್ನಾನನಿಯಮ, ಪರ್ಯುಕ್ಷಿತ=ಹೆಳೆಯದಾದ (ಎಂಜ ಲಾದ), ವಿಭಕ್ತಮಧ್ಯಾಕಾರನುಂ=ವಿಭಾಗಿಸಲ್ಪಟ್ಟ ನಡುವಿನ ಆಕಾರವುಳ್ಳವನು > ಸಣ್ಣ ನಡುವುಳ್ಳವನು, ಚಾಮೀಕರ ಶೃಂಖಲ=ಚಿನ್ನದ ಸರಪಣಿ, (ಹಾರ)ಪ್ರೇಂಖತ್=ಜೋಲಾ ಡುತ್ತಿದ್ದ > ಕುಣಿದಾಡುತ್ತಿದ್ದ, ವಾಮಪ್ರಕೋಷ್ಠ=ಎಡಭಾಗದ ಮುಂಗೈ, ಡೋಲಾ ಯಮಾನ=ತೂಗಾಡುತ್ತಿದ್ದ, ಮಾಣಿಕ್ಯವಲಯ=ಮಾಣಿಕ್ಯದ ಬಳೆ, ವಿಕೀರ್ಯ

ಮಾಣ=ನಾನಾಕಡೆ ಹರಿಡಿದ್ದ, ಇಂದ್ರಚಾಪಪ್ರಭಾಜಾಲ=ಕಾಮನ ಬಿಲ್ಲಿನ ಕಾಂತಿಯ ಸಮೂಹ, ಅಗ್ರಾಮ್ಯಾಕೃತಿ=ಹಳ್ಳಿಯವನಂತಿಲ್ಲದ (ನಾಗರಿಕನಂತಿರುವ) ಆಕಾರ, ನಿಬಿಡ ನಿಯಮಿತ ಕಕ್ಷ್ಯಾಬಂಧ=ಬಿಗಿಯಾಗಿ ಕಟ್ಟಿದ ನಡುಕಟ್ಟು, ದುಕೂಲಪಲ್ಲವ=ಮುಂಜೆರಗು, ದೂರಾವನತೋತ್ತಮಾಂಗರಾಗಿ=ದೂರದಿಂದಲೇ ನಮಸ್ಕಾರಮಾಡಿ.

೧೨. ಆನಟ್ಟಿದುದಂ=ನಾನು ಹೇಳಿಕಳುಹಿಸಿದುದನ್ನು, ಒಡಂಬಡಿಸಿದೋ= ಒಪ್ಪಿಸಿದೆಯಾ,

೧೩. ತಮ್ಮ ಮನಮಂ ತಾಂ ನೋಡಲೆಂ=ತಮ್ಮ ಮನಸ್ಸನ್ನು ತಾವು ಪರೀಕ್ಷಿಸಿ ಪ್ರಯೋಜನವೇನು? ಅಕ್ಕಂ=ಮಹಾಶ್ವೇತೆಯು, ಆಂ ದುಃಖದೆ ತಪಂಗೆಯ್ಯುತ್ತಿರಲ್‌ತಾಂ ನಾನು (ಕಾದಂಬರಿಯು) ಮನದೊಳ್ ಸುಖದಿಂದಿರ್ದಪೆನೆ ಎಂಬ ಉದ್ವೇಗದಿಂದ ಇನಿತೊಂದಂ ನುಡಿದಟ್ಟಿದಳ್, ಪಿರಿದುಂ+ಉಂತೇನ್, ಅಟ್ಟಲೇಂ ತಕ್ಕುದೋ ಎಂಬುದು ಅನ್ವಯ,

೧೪. ಇದೆ, ಸಾರೆ=ಸಮೀಪದಲ್ಲಿಯೇ, ಒಡಸುಂದು=ಜೊತೆಗೆ ಬಂದು, ನಿಜದಿಂದ ಸ್ವಸ್ಥೆ=ಸಹಜವಾಗಿಯೇ ಮನೋವಿಕಾರವುಳ್ಳವುಳು, ಇಂದು ಭವದ್ವಿಲೋಕನಸುಖಂ ಗಂಧರ್ವ ಲೋಕದೊಳ್ ಅಕ್ಕೆ=ಈದಿನ ಗಂಧರ್ವಲೋಕದಲ್ಲಿ ನಿನ್ನ ಸಂದರ್ಶನ ಸೌಖ್ಯ ಎಲ್ಲರಿಗೂ ಉಂಟಾಗಲಿ.

೧೮. ವ|| ಉಪದಿಶ್ಯಮಾನ=ತೋರಿಸಲ್ಪಟ್ಟ

೧೯. ನಿಷ್ಪೂರುಷಜೀವಲೋಕ=ಗಂಡಸರೇ ಇಲ್ಲಿಲ್ಲದ ಜೀವಲೋಕ, ಪದ್ಮೋದ್ಭವಂ=ಬ್ರಹ್ಮನು ಸ್ವರ್ಗಕ್ಕೆಂದು ಪದಪಿನಿಂ ಸುದತೀರತ್ನ ಸಮೂಹಮಂ ಬೈಚಿಟ್ಟ ಭಂಡಾರಮುಪ್ಪುದು, ಎಂದನ್ವಯ.

೨೦. ಸಿಂಪಿಸು=ಚೆಲ್ಲು, ಪ್ರೋಕ್ಷಣಮಾಡು. ಪೆರ್ವೊನಲ್=ಮಹಾಪ್ರವಾಹ, ವದನದ್ಯುತಿ=ಮುಖದ ಕಾಂತಿ-ಇಂದು ಬಿಂಬವೃಷ್ಟಿ=ಚಂದ್ರ ಬಿಂಬದ ಮಳೆ, ಅಪಾಂಗವಿಕ್ಷೇಪ=ಕಡೆಗಣ್ಣನ್ನು ಹಾರಿಸುವುದು, ಭ್ರೂಲತಾವಿಭ್ರಮ=ಹುಬ್ಬು ಹಾರಿಸುವಿಕೆ, ಕಾಮುಕಾರ್ಮುಕವಿಸರಂ=ಕಾಮನಬಾಣ ಸಮೂಹ, ಕೇಶಕಲಾಪ=ಕೂದಲಿನ ರಾಶಿ, ಸುರಭಿನಿಶ್ವಾಸ=ವಾಸನಾಯುಕ್ತವಾದ(ಹೊರಗೆ ಬಿಟ್ಟ) ಗಾಳಿ,

೨೧. ಗೃಹಮಯೂರ=ಮನೆಯಲ್ಲಿ ಸಾಕಿದ ನವಿಲು.

೨೨. ಕರ್ಣಾವತಂಸಂ=ಕಿವಿಯ ಆಭರಣ, ಅಲತಗೆ=ಅರಗು,

೨೩. ಅಂಗರಾಗಂ=ಅಲಂಕಾರಕ್ಕಾಗಿ ಉಪಯೋಗಿಸುವ ಬಣ್ಣ, ಪುಷ್ಪದಾಮ =ಹೂವಿನಮಾಲೆ, ಬಿಣ್ಣಿತು=ಕಠಿಣ.

೨೪. ಕಲಲ್=ಅಭ್ಯಾಸ ಮಾಡುವುದಕ್ಕೆ, ಅತಿಕೌತುಕದಿಂದಲರ್ಗಟ್ಟುವರ್ ಎಂಬುದು ಅಂತಿರ್ಕೆ, ಸೇದೆಪಡೆವರ್=ಶ್ರಮಪಡುತ್ತಾರೆ, ಆಯಾಸಪಡುತ್ತಾರೆ

ವ|| ಆಲವಾಲ=ಗಿಡಗಳ ಪಾತಿ, ಕನಕದೀರ್ಘಿಕೆ=ಚಿನ್ನದ ಕೊಳ, ರಘಂಪಾಳ =ಮುಸುಕು, ಹೊದಿಕೆ, ಮರೀಚ ಪಲ್ಲವ=ಮೆಣಸಿನ ಚಿಗುರು.

೨೬. ಮಲಂಗಿ=ಒರಗಿಕೊಂಡು.

೨೮. ವ|| ಪರಿಹಾಸ ಜಲ್ಪಿತ = ಹಾಸ್ಯದ ಹರಟೆ, ದುರ್ದಿನ=ಮಳೆಗಾಲ, ಸಿಂಧುಧಾರಾ=ಪುಷ್ಪರಸದ ಧಾರೆ,

೨೯. ಪ್ರಭಾಪೂರ = ಕಾಂತಿಯ ಪ್ರವಾಹ, ಇದಿರೀಸುವಂತೆ = ಎದುರಾಗಿ ಈಜುವನಂತೆ.

೩೦. ರಾಮಾಭಿರಾಮಂ=ಸ್ತ್ರೀಯರಿಂದ ಮನೋಹರವಾದುದು, ಪ್ರೇಂಖಿತ= ಹರಡಲ್ಪಟ್ಟ, ರಥ್ಯಾಮಂಡನಂ = ಮಾರ್ಗಾಲಂಕಾರಗಳನ್ನುಳ್ಳ, ರತ್ನಾತಪ=ರತ್ನದ ಕಾಂತಿ.

೩೧. ಸೊಗಸಾದ ಉತ್ಪ್ರೇಕ್ಷಾಲಂಕಾರ ! ಮಹಾವರಹನ ಎತ್ತರವಾದ ದಾಡೆ ಯನ್ನು ಒರಗಿಕೊಂಡು ಭೂದೇವಿ ನಿಂತಿದ್ದಳೋ ಎನ್ನುವ ಹಾಗೆ ಕರಿಯ ಬಟ್ಟೆಯಿಂದ ಮುಚ್ಚಿದ್ದ ಹಾಸಿಗೆಯ ಮಧ್ಯದಲ್ಲಿ ದಿಂಬೊಂದನ್ನು ಒರಗಿಕೊಂಡು ಕುಳಿತಿದ್ದ ಕೋಮಲೆ ಯಾದ ಕಾದಂಬರಿ ದೇವಿಯನ್ನು ಅರಸನು ಕಂಡನು.

೩೬. ಪರೆದ ಪೀಲಿಯ ಕಣ್ಣಿಂ = ಹರಡಿರುವ ನವಿಲುಗರಿಯ ಕಣ್ಣುಗಳಿಂದ, ಮಾಡನೆ=ಉಪ್ಪರಿಗೆಯೆ.

೩೭. ವಿದ್ರುಮರಸತರಂಗಿಣಿ=ಹವಳದ ರಸದ ನದಿ.

೩೯. ರಾಗಪಾಟಲಿತ = ಕೆಂಪು ಬಣ್ಣದಿಂದ ಕೆಂಪಾದ, ನಿರ್ಗಳಿತ =ಬಿಡ ಲ್ಪಟ್ಟಂಥ, ಮಯೂಖಾಳಿ = ಕಿರಣಗಳ ಸಮೂಹ,

೪೦. ಬಾಸಣಿಸು=ಮುಚ್ಚು.

೪೧. ಕಾಂಚಿ=ನಡುಪಟ್ಟಿ

೪೨. ಎಡೆಗಿಱು=ಮಧ್ಯ ಅಡ್ಡಲಾಗಿ ಆವರಿಸು, ಇಕ್ಕಟ್ಟಾಗಿ ಸೇರು,

೪೪. ವಿಜಯಪ್ರಶಸ್ತಿ ವರ್ಣಾವಳಿ = ಮೇಲ್ಮೆಯನ್ನು ಸೂಚಿಸತಕ್ಕ ಅಕ್ಷರ ಸಮೂಹ, ರೋಮರಾಜಿ=ಕೂದಲ ಸಮೂಹ,

೫೪. ಪ್ರತಿಬಿಂಬಕದಂಬಕ=ಪ್ರತಿಬಿಂಬದ ಸಮೂಹ.

೫೫. ಲೀಲಾಸ್ಮಿತ=ಹುಸಿನಗೆ, ಮಂದಹಾಸ,

೫೮. ಬಟ್ಟು=ಗುಂಡಾದ ಸಣ್ಣಕಲ್ಲು, ತಿಱುಕಲ್=ಹಣ್ಣಿಕಲ್ಲು,

೬೦. ಎಂತು ಸಂಗಳಿಸಿತು=ಹೇಗೆ ಉಂಟಾಯಿತು,

೬೧. ನೋಂಪಿ = ಪುಣ್ಯ, ಅದೃಷ್ಟ, ಮದಿಂದ್ರಚಯಮಂ = ನನ್ನ ಎಲ್ಲ ಇಂದ್ರಿಯಗಳನ್ನು ಅಂದರೆ ಕಿವಿ, ಮೂಗು, ನಾಲಗೆ, ಚರ್ಮ ಮೊದಲಾದ ಪಂಚೇಂದ್ರಿಯ ಗಳನ್ನು, ಎಲ್ಲವೂ ಕಣ್ಣೇ ಆಗಿದ್ದರೆ ಅವಳ ರೂಪವನ್ನು ಪೂರ್ಣವಾಗಿ ನೋಡಿ ಅನುಭವಿಸ ಬಹುದಾಗಿತ್ತು ಎಂಬುದು ಭಾವ.

೬೨. ಸಮೆದ = ಮಾಡಿದ = ನಿರ್ಮಿಸಿದ, ಅಬ್ಜೋದ್ಭವ.... ಖೇದದಿಂ= ಬ್ರಹ್ಮನ ಕಯ್ಯ ತಗಲುವಿಕೆಯಿಂದುಂಟಾದ ಕಷ್ಟದಿಂದ (ದುಃಖ), ಆದಂ=ವಿಶೇಷವಾಗಿ

೬೩. ಒರ್ಮೊದಲ್=ಏಕಕಾಲದಲ್ಲಿ, ಸಮದಿಟ್ಟಿ=ಸಮಾನದೃಷ್ಟಿ. ಏಕಕಾಲ ದಲ್ಲಿ ಇಬ್ಬರೂ ಒಬ್ಬರನ್ನೊಬ್ಬರು ನೋಡಿದರು ಎಂದರ್ಥ.

೬೪. ಪುಳುಕಾಂಕುರ=ರೋಮಾಂಚ, ಎರಡನೆಯ ಸೂಟಿ=ಎರಡನೆಯಸಲ

ವ॥ ಬಿಂದುಬಿಡುವ=ತೊಟ್ಟಿಕ್ಕುತ್ತಿರುವ, ಬೆಮರಂ—ಇದಿರೆಟ್ದು ಬಟಲ್ಕೆಗೆ= ಇದಿರಾಗಿ ಎದ್ದ ಆಯಾಸಕ್ಕೆ, ಏಱಿಸಿ=ಆರೋಪಮಾಡಿ, ದಡದಡಿಸೆ=ನಡುಗಲು, ಕಡಲುಲಿ=ಸಮುದ್ರದ ಶಬ್ದ, ಕಳಲುಲಿ=ನೂಪುರದ ಶಬ್ದ, ಅಯಶ=ಅಪಯಶಸ್ಸು, ಮೇಲುದು=ಸೆರಗು, ನಿಮಿತ್ತತೆ=ಕಾರಣ, ಒಡರ್ಚು=ಉಂಟುಮಾಡು, ಅಂತಃಪ್ರವಿಷ್ಟ ಒಳಗೆ ಪ್ರವೇಶಮಾಡಿರುವ, ಕಡುಪಾರ್ವ=ವಿಶೇಷವಾಗಿ ಹಾರುತ್ತಿರುವ, ಕುಚಯುಗ್ಮಾಚ್ಛಾದನ=ಎರಡು ಮೊಲೆಗಳನ್ನು ಮುಚ್ಚಿಕೊಳ್ಳುವುದು. ಇಸೆ=ಬಾಣ ಪ್ರಯೋಗ ಮಾಡಲು ಸೀತ್ಕಾರ=ಕಾಮೋದ್ರೇಕದಲ್ಲುಂಟಾಗುವ ಶಬ್ದ, ನೆಲನುಗ್ಗಡಿಪ=ಪಾದಾವ ಧಾನವನ್ನು ಹೇಳುತ್ತಿರುವ, ಪಡಿಯರತಿ=ಪ್ರತೀಹಾರಿ, ಮದನವಿಕೃತಿ=ಕಾಮವಿಕಾರ.

೬೬. ಹೃದಯಾಂತರ್ಲಗ್ನೆ=ಎದೆಯ ಒಳಭಾಗದಲ್ಲಿ ಸೇರಿಕೊಂಡಿರುವವಳು.

ವ॥ ಕತಿಪಯ=ಕೆಲವು. ಮಱೆಯಾದತ್ತು=ಕಾಮಕೇಳಿಗೆ ಸಹಾಯಕವಾದ ತೆರೆಯಾಯಿತು.

ವ॥ ತುರಗಖುರಮುಖೋಲ್ಲೇಖ=ಕುದುರೆಯ ಗೊರಸಿನ ಮುಂಭಾಗದ ಗೆರೆ, ಚತುಸ್ಸಮುದ್ರ ಮುದ್ರ=ನಾಲ್ಕು ಸಮುದ್ರಗಳ ಒಡೆಯ, ಕ್ಷಪಿತ=ನಾಶಪಡಿಸಿದ, ನಿಜ....ಪೀಡನ್=ತನ್ನ ತೋಳೆಂಬ ಶಿಲಾಸ್ತಂಭದಿಂದ ಸಮಸ್ತ ಭೂಮಂಡಲದ ಶ್ರಮವನ್ನು ನಿವಾರಿಸಿದವನು, ಪರಿತ್ಯಕ್ತ ಸಕಲಸಂಗೆ=ಸಕಲ ಸಂಗವನ್ನು ಬಿಟ್ಟವಳು. ನಿರ್ನಿಮಿತ್ತ ಮಿತ್ರ=ಅಕಾರಣ ಸ್ನೇಹಿತ.

೬೮. ವಿದಗ್ಧವೃತ್ತಿ=ಪಾಂಡಿತ್ಯಸ್ವಭಾವ, ಅಸದಳಮಲ್ತೆ=ಅಸಾಧ್ಯವಲ್ಲವೇ?

ವ॥ ವಸುಂಧರೆಯ ಸದ್ಭರ್ತೃತಾಸುಖ=ಭೂಮಿಯು ಒಳ್ಳೆಯ ಪತಿಯನ್ನು ಪಡೆದುದರಿಂದುಂಟಾದ ಸೌಖ್ಯ, ಕಲಾಕಲಾಪಕದ ಮೇಳಾಪ=ಎಲ್ಲ ಕಲೆಗಳ ಒಟ್ಟುಗೂಡವಿಕೆ.

೭೦. ಸೇದೆ=ಶ್ರಮ, ಸ್ನೇಹನಿರ್ಭರ=ಅತ್ಯತಿಶಯವಾದ ಸ್ನೇಹ-ಪ್ರೀತಿ, ಅವಳು ಕರಿಗುಡ್ಡೆಯನ್ನು ಒಂದು ಕಡೆಗೆ ಮಾಡಿಕೊಂಡು ನಿಡು ದೃಷ್ಟಿಯಿಂದ ಏಕ ಪ್ರಕಾರವಾಗಿ ಚಂದ್ರಾಪೀಡನನ್ನು ನೋಡುತ್ತಿದ್ದುದರಿಂದ ಕಣ್ಣಿಗೆ ಉಂಟಾದ ಶ್ರಮದ ಹನಿಗಳೋ ಎಂಬಂತೆ ಆನಂದಬಾಷ್ಪಗಳು ಸುರಿದುವು. ಎಂಬುದು ಭಾವ–ಉತ್ಪ್ರೇಕ್ಷಾಲಂಕಾರ.

೭೧. ಬರತೆಗೆದಳೋ=ಸೆಳೆದುಕೊಂಡಳೋ,

೭೨. ಮಧುಕರ=ದುಂಬಿ,

ವ॥ ಧವಳಾಂಶುಕ ಪ್ರಚ್ಛದಪ್ರಚ್ಛನ್ನ = ಬಿಳಿಯ ಬಟ್ಟೆಯಿಂದ ಚೆನ್ನಾಗಿ ಮುಚ್ಚಿರತಕ್ಕ, ನಿಜಪರ್ಯಂಕ=ತನ್ನ ಹಾಸಿಗೆ, ಕಣ್ಣಱಿದು=ಕಣ್ಣ ಸನ್ನೆಗಳನ್ನು ತಿಳಿದು

೭೩. ಕರ್ಚಿಸಿದಳ್=ತೊಳೆಸಿದಳು.

೭೪. ಅಂಸ=ಹೆಗಲು, ಷಟ್ಚರಣವ್ಯಾಲೋಲ=ದುಂಬಿಗಳಿಂದ ಚಲಿಸಲ್ಪಟ್ಟ, ಓಸರಿಸುತ್ತ=ತಿದ್ದಿ ಸರಿಪಡಿಸುತ್ತ, ಭವ್ಯಮೆ=ಕ್ಷೇಮವೇ,

೭೫. ಸೇವಂ=ಕ್ಷೇಮ.

ವ|| ಆರೋಪಿತಚಾಪ=ಹೆದೆಯೇರಿಸಿದ್ದ. ಪಕ್ಕುಮಾಡಿದ=ಭಾಗಮಾಡಿದ್ದ >ಅಧೀನ ಮಾಡಿದ್ದ, ಅಪಾಂಗವಿಕ್ಷೇಪ=ಕಡೆಗಣ್ಣಿನ ನೋಟ, ತರಳತರ=ಅತಿ ಚಂಚಲ, ತಾರಶಾರೋದರ>ಕರೀಗುಡ್ಡೆಯನ್ನೂ ಶಬಲವರ್ಣದಿಂದ ಕೂಡಿದ ಮಧ್ಯ ಪ್ರದೇಶವನ್ನು ಉಳ್ಳ,

೭೬. ಸಾಲಭಂಜಿಕೆ=ಸಾಲಾಗಿರುವ ಬೊಂಬೆಗಳು, ಬೆಮರ್ತ=ಬೆವರಿದ

೭೭. ಅಭಿನವಾಗತಂ = ಹೊಸದಾಗಿ ಬಂದಿರುವವನು. ಆರಾಧ್ಯನೆ ದಲ್= ಪೂಜ್ಯನೇ ಆಗಿದ್ದಾನೆ,

೭೮. ತಾಂಬೂಲಮಿಳಿತ=ವೀಳೆಯದೆಲೆಯಿಂದ ಕೂಡಿರುವ,

ವ|| ವಿಜಯಗಜ....ರಂಜಿಪಂತೆ=ತನ್ನ ಜಯಶಾಲಿಯಾದ ಆನೆಯ ಕುಂಭ ಸ್ಥಳದ ಮೇಲೆ ಸಂತೋಷಕ್ಕಾಗಿ ಹೊಡೆದಾಗ ಅಂಟಿಕೊಂಡ ಮದೋದಕದ ಪುಡಿಯಿಂದ ಪ್ರಕಾಶಮಾನವಾದಹಾಗೆ, ಮುಂದುಱಿವರಿವಂತೆ=ಮುನ್ನುಗ್ಗುವಹಾಗೆ, ಅಂಗುಳಿ= ಕೈಬೆರಳು.

೮೦. ತೋರ್ಕೆಗೊಟ್ಟಂ=ತೋರಿಸಿಕೊಟ್ಟಿದ್ದಾನೆ, ಕೈನೀರಾಗಿರಲ್=ದಾನಜಲ ವಾಗಿರಲು,

೮೧. ಸುರುಳಿನೆ=ಗುಂಡಾಗಿ, ವಿದ್ರುಮಾಂಕುರ=ಹವಳದ ಮೊಳಕೆ, ಶಾಡ್ವ ಲಿತ=ಹಸುರಾಗಿ ಮಾಡಲ್ಪಟ್ಟ.

೮೨. ಸಾರಿಕೆ=ಹೆಣ್ಣುಗಿಳಿ.

೮೩. ಅಳೀಕಸೊಬಗು = ನಿಜವಲ್ಲದ-ಸಹಜವಲ್ಲದ ಮೋಸದ ಸೌಂದರ್ಯ, ಕೂರ್ತಂದದಿಂ=ಪ್ರೀತಿಸಿರುವಹಾಗೆ, ಪತ್ತಿಸಲೆಂದು=ನನ್ನನ್ನು ಸೇರಿಸಿಕೊಳ್ಳಬೇಕೆಂದು, ಆಲಿಸಿ=ಅಪೇಕ್ಷಿಸಿ, ಬೂತಾಳಂ=ಬೂಟಾಟಿಕೆ. ಬನ್ನ = ಭಗ್ನ>ಕಷ್ಟ.

೮೪. ಆಯಿರ್ಪುದು=ಅಲ್ಲಿರುವ ಆ ಗಿಳಿಯು, ಪರಿಹಾಸನೆಂಬುದು=ಪರಿಹಾಸ ನೆಂದು ಕರೆಯಲ್ಪಡುವುದು

೮೫. ಪುರುಡು=ಅಸೂಯೆ, ಕಿನಿಸಿ = ಕೋಪಿಸಿಕೊಂಡು, ಕಡುಪಿನಿಂದ= ಕ್ರೌರ್ಯದಿಂದ, ನದುಗಿದಪುದು=ಮುಖ ತಿರುಗಿಸುತ್ತಿದೆ, ಪ್ರಸನ್ನವಾಗುತ್ತಿಲ್ಲ ; ತಿಳಿಪಿ ದೊಡಂ=ಸಮಾಧಾನಪಡಿಸಿದರೂ,

೮೬. ಪರಿದತ್ತು=ಹರಡಿಕೊಂಡಿತು,>ಪ್ರಕಟವಾಯಿತು.

೮೭. ದೇವಿಯರ್=ಕಾದಂಬರಿ ದೇವಿಯು, ಬಾವಿಸರೆನೆ=ಆ ಗಿಳಿಯನ್ನು ತಡೆ ಯುವುದಿಲ್ಲ ಎನ್ನಲು, ಉಪೇಕ್ಷೆಯಾಗಲೆವೇಱ್ಕುಂ=ಕಾದಂಬರೀದೇವಿಗೆ ಉದಾಸೀನ ವುಂಟಾಗಿರಬೇಕು.

೮೮. ಲೋಲಂಗೆ = ಕಾಮುಕನಾದ ಈವಿಹಗಂಗೆ=ಈ ಪಕ್ಷಿಗೆ, ಈವುದೇ= ಕೊಡಬಹುದೇ, ಕೂರಳಾಗಲೇ ವೇಟ್ಕುಂ=ಪ್ರೀತಿಯಿಲ್ಲದವಳೇ ಆಗಿರಬೇಕು.

೮೯. ಇನ್ನಂ+ಅಪ್ಪ>ಇನ್ನವಪ್ಪ = ಇಂತಹ, ಬನ್ನವಂ=ಅವಮಾನವನ್ನು, ಪೆಱತಾದೊಡೆ=ಬೇರೆ ಪಕ್ಷಿಯಾಗಿದ್ದರೆ, ಕಿಚ್ಚುವೊಗಲ್ = ಅಗ್ನಿಪ್ರವೇಶಮಾಡಲು, ಅಣ್ಮದೆ=ಸಮರ್ಥವಾಗುತ್ತಿರಲಿಲ್ಲವೆ ? ನಂಜದಿನಲ್ಕೆ=ವಿಷಪಾನ ಮಾಡುವುದಕ್ಕೆ, ಒಡರ್ಚದಿರ್ಕುಮೆ = ಪ್ರಯತ್ನ ಪಡುತ್ತಿರಲಿಲ್ಲವೆ ?

೯೦. ಇಂತಪ್ಪಪರಾಧಂಗೆಯ್ದು=ಇಂತಹ ತಪ್ಪನ್ನು ಮಾಡಿಯುಂ, ಈಶುಕಂ ತಾನಲ್ಲದವೊಲ್ = ಈ ಗಿಳಿ ತಾನಪರಾಧಿಯಲ್ಲದಂತೆ, ಎಸೆವುದು, ಈ ಶುಕನೊಳ್, ತೊಡರ್ದು= ಸೇರಿಕೊಂಡು, ನಿಂದುದಪ್ಪೊಡೆ=ಈಸಾರಿಕೆ ಸೇರಿ ನಿಂತರೆ, ಈಸಾರಿಕೆಯುಂ ಕಾದಂಬರಿದೇವಿ, ತೊರೆಯದೆ ನಿಲಿಸಲಕ್ಕುಮೆ= ನಿಲ್ಲಿಸಲು ಸಾಧ್ಯವಾಗುತ್ತದೆಯೆ ?

೯೧. ಒಳದೊರ್ಡೆ=ಹೆರಟಿದರೆ, ಮುಳಿವ=ಕೋಪಿಸಿಕೊಳ್ಳುವ, ತಿಳಿವ=ಪ್ರಸನ್ನಳಾಗುವ, ಎಡೆಯುಮುಂ=ಸಮಯವನ್ನುಕೂಡ, ಬಲ್ಲಳ್. ವಕ್ರಭಣಿತೆ = ಅಡ್ಡಮಾತು,

ವ॥ ಉತ್ಕಂಠಿತರ್=ಆಶೆಯುಳ್ಳವರು, ಇಕ್ಕೆದಾಣ= ಇರುವ ಸ್ಥಳ>ಬಿಡಾರ,

೯೨. ಭವನ್ಮನೋಜ್ಞಂ=ಅವರಿಗೆ ಹಿತವಾಗಿರುವುದು. ಅವನಮುಸ್ಸಿಗೊಪ್ಪಿದುದು.

ವ॥ ಪ್ರತೀಹಾರಿಪ್ರೇಕ್ಷಿತರ್=ಪ್ರತೀಹಾರಿಯಿಂದ ಕಳುಹಿಸಲ್ಪಟ್ಟವರು, ದುರೋದರ=ಜೂಜು, ತರ್ಜಿತೆ = ಹೆದರಿಸಲ್ಪಟ್ಟವಳು, ಉಪಾಲಂಭನಂಗೆಯ್ = ಆಕ್ಷೇಪ ಮಾಡು. ಗರ್ಹಿಪಂತೆಯುಂ=ಬಯ್ಯುತ್ತಿರುವಂತೆಯೂ. ಆಭಿಜಾತ್ಯ=ಸತ್ಕುಲ ಪ್ರಸೂತತೆ, ಅನುಶಾಸಿಪಂತೆ = ಸಮಾಧಾನ ಮಾಡುವಂತೆಯೂ, (ಸಹಾನುಭೂತಿಯನ್ನು ತೋರಿಸುವಂತೆಯೂ)

೯೩. ಇನಿಸು ಅಳ್ಕಿನೆ=ಸ್ವಲ್ಪವೂ ಹೆದರಲಿಲ್ಲವಲ್ಲ. ಲಜ್ಜೆಗಾಯನೆ=ಲಜ್ಜೆಯನ್ನು ಕಾಪಾಡಿಕೊಳ್ಳಲಿಲ್ಲವಲ್ಲ, ಬೆಳ್ಕಱಿನೆ=ಭಯಪಡಲಿಲ್ಲವಲ್ಲ. ವಿಭ್ರಮ=ಬುದ್ಧಿಮೋಸ.

೯೪. ಮದೀಯ ಧೈರ್ಯಚ್ಯುತಿಯುಂ ಕಿಱುಗೂಸುಗಳಂ ಮೊದಲಾಗಿ ಅಱಿದಪರೆನೆ ಮದನಹತಕನಿಂ ನೆಱೆ ಮುನ್ನುಱಿವೋದಕ್ಕಂ ಅಱಿಯುಳಿ ಎಂಬುದು ಅನ್ವಯ, ನೆಱನುಱಿವೋದ=ವಿಶೇಷ ಹಿಂಸಿತಳಾದ.

೯೫. ಏನಂ+ಎಂಬರೊ = ಏನೆಂಬರೊ, ಏನಂ+ಗೆಯ್ದಪೆಂ=ಏಗೆಯ್ದಪೆಂ. ಇವು ಕ್ರಿಯಾಸಮಾಸ. ಇಲ್ಲ ಪೂರ್ವಾಂತ್ಯಕ್ಕೆ ಲೋಪವಿಕಲ್ಪ. ಶ. ಮ. ದ. ಸೂ ೧೭೭

೯೬. ಪೂಣ್ದಿರ್ದೆನ್ = ಪ್ರತಿಜ್ಞೆಮಾಡಿದ್ದೆನು. ವಿಪ್ರಲಂಭಂ=ವಿರಹ.

೯೭. ಸಾಣ್ಗೆಡುವಿನಂ=ನಾಚಿಕೆ ಕೆಡುವಹಾಗೆ, ವಿಡಂಬಿಸು=ಹಾಸ್ಯಮಾಡು

೯೮. ಒಪ್ಪುಗೊಟ್ಟನೋ = ಕಾಣಿಕೆಯಾಗಿ ಕೊಟ್ಟನೊ, ಗುಣಪಣ=ಗುಣವೆಂಬ ಮಾರಿಕೆಯ ಪದಾರ್ಥ, ಮಾಱುವೋದೆನೊ=ಮಾರಲ್ಪಟ್ಟೆನೋ, ರಾಗೋದಯಂ =ಪ್ರೀತಿಯ ಹುಟ್ಟುವಿಕೆಯು, ಓವದೆ=ನನ್ನನ್ನು ರಕ್ಷಿಸದೆ, ತೊಳ್ತುಗೊಟ್ಟೆತ್ತೊ ಏಂ=

ಅದಕ್ಕೆ ಆಳಾಗಿ ಮಾಡಿಬಿಟ್ಟಿತೋ ಏನು ?

೯೯. ಸಂತಾಪದ ಒದುವು=ದುಃಖಪ್ರಾಪ್ತಿ.

ವ|| ಅಭಿಹಿತೆ = ಎಚ್ಚರಿಸಲ್ಪಟ್ಟವಳು, ನಿರ್ಭರ್ತ್ಸಿತೆ = ಬಯ್ಯಲ್ಪಟ್ಟವಳು. ಮಣಿಮಯ ಗವಾಕ್ಷನಿಕ್ಷಿಪ್ತಮುಖಿ =ರತ್ನ ಖಚಿತವಾದ ಕಿಟಕಿಯಲ್ಲಿಯೇ ಇಡಲ್ಪಟ್ಟ ಮುಖವುಳ್ಳವಳು.

೧೦೦. ವ್ಯವಧಾನ=ತಡೆಯುವುದು, ಉಮ್ಮಳಿಸು=ದುಃಖಪಡು,

೧೦೧. ಚಿತ್ರತೂಲಿಕೆ=ಬಣ್ಣದ ಕಡ್ಡಿ (ಬ್ರಷ್), ಪಿದ್ಧಂಬರೆದಳ್ =ರೂಪು ಆಕೃತಿಯನ್ನು ಬರೆದಳು.

೧೦೨. ಈಯೆಡೆಗೆ=ಈ ಕಾರ್ಯಕ್ಕೆ, ಎಡೆಯಾಡುವ ಬೆಸ=ಹೋಗಿ ಬರುವಕಾರ್ಯ

೧೦೪. ಎಡೆಯಱಿದು=ಆವಶ್ಯಕತೆಯನ್ನು ತಿಳಿದು, ಅಡಿಕಿಲ್ಗೊಂಡ=ಒಂದರ ಮೇಲೊಂದು ಅಡಕಿದ್ದಂಥ, (ಪೇರಿಸಿದಂಥ) ಕೌಳುಡೆ=ತಲೆಗಿಂಬು, ದಿಂಬು,

೧೦೫. ಪುಷ್ಪರಜ=ಹೂವಿನಧೂಳು, ಪೊರೆದಂತಿರೆ=ತುಂಬಿರುವ ಹಾಗಿರಲು, ರಾಗವಗ್ಗಲಿಸೆ=ಪ್ರೀತಿಯು ಹೆಚ್ಚುತ್ತಿರಲು, ನಯನತ್ರಿಭಾಗ=ಕಡೆಗಣ್ಣು, ಕುಸಿಕುಸಿದು =ಕಣ್ಣನ್ನು ಮುಚ್ಚಿಮುಚ್ಚಿ, ಪಲ್ಲವ=ಸೆರಗು.

ವ|| ಮಱಿದುಂಬಿಯ ಬಂಬಲಿ....ಮಿರ್ದಳ್ =ತನ್ನ ಮುಖಕ್ಕೆ ಱಗುತ್ತಿರ್ದ ದುಂಬಿಯ ರಾಶಿಯಿಂದ ತನ್ನ ಮುಖದ ಬೆವರನ್ನು ಹೊಂಗೆಯ ಚಿಗುರಿನಿಂದ ಬೀಸುತ್ತಿದ್ದಳೋ ಎನ್ನುವ ಹಾಗಿದ್ದಳು

೧೦೬. ಸ್ನೇಹದ ಲವಂ ಮದ್ಯವ್ಯನೋದ್ಯನ್ನದದೊಳ್ ಉಪಕಾಂತಃ ಪಾತಿಪೋಲ್ ಎನಸುಂ ಪರ್ವಿ ತೋಱುತ್ತಿರ್ದಪುದು ಎಂಬುದು ಅನ್ವಯ. ಅಂದರೆ ಕಾದಂಬರಿಯೊಡನೆ ನನಗೆ ಉಂಟಾದ ಸ್ನೇಹದಲೇಶವು ನೀರಿನಲ್ಲಿ ಬಿದ್ದ ತೈಲ ಬಿಂದುವಿನಂತೆ ವಿಸ್ತಾರವಾಗಿ ಹರಡಿ ಕಾಣಿಸುತ್ತಿದೆ. ತತ್ಕಾಂಕ್ಷೆ=ಅವಳ ವಿಷಯವಾದ ಆಸೆ.

೧೦೭. ಕಿಱುವಾನಿಸರ್ಕಳ್=ಸಾಮಾನ್ಯ ಮನುಷ್ಯರು, (ಸಣ್ಣ ಮನುಷ್ಯರು)

೧೦೮. ಅಪ್ರಾರ್ಥಿತಂ=ಕೇಳದೆಯೇ,

೧೦೯. ಏಸಾಡೆ=ಹೊಡೆಯುತ್ತಿರಲು. ತಾರನಗೇಂದ್ರ=ಕೈಲಾಸಪರ್ವತ,

೧೧೧. ನೀಲಾಂಬರಚ್ಛದೆ=ಕರಿಯ ಬಟ್ಟೆಯಿಂದ ಮುಚ್ಚಲ್ಪಟ್ಟವಳು. ಅಭಿಸಾರಣ=ಪ್ರಿಯನನ್ನು ಹುಡುಕಿಕೊಂಡು ಹೋಗುವಿಕೆ.

೧೧೨. ಮುಯ್ಪು=ಭುಜ,

೧೧೪. ಪೊೞ್ತಿನಪವಣಂ=ಹೊತ್ತಿನ ಪ್ರಮಾಣವನ್ನು

ವ|| ಅನುರೋಧ=ಬಲಾತ್ಕಾರ,

೧೧೫. ಹರಿಣೀ=ಹೆಣ್ಣು ಜಿಂಕೆಗಳ, ರೋಮಂಥಫೇನ=ಮೆಲುಕಾಡುವಾಗ ಬರುವ ನೊರೆ, ಪ್ರಸೃತ=ಸುರಿಯುತ್ತಿರುವ, ಕಣಲವ=ಬಿಂದುಗಳ, ಆಸಾರದಿಂ=ಮಳೆಯಿಂದ, ಸಾಂದು=ಒದ್ದೆಯಾಗಿ, ಯೋಷಿತ್+ಚರಣ=ಸ್ತ್ರೀಯರ ಕಾಲು, ಪುಷ್ಪೋ

ತ್ಕರ ರೇಣುಸ್ತೋಮ=ಹೆಚ್ಚಾದ ಹೂವುಗಳ ಪರಾಗದ ಸಮೂಹ, ಮಾಂಕರಿಸಲ್= ತಿರಸ್ಕರಿಸುವುದಕ್ಕೆ, ಸಾಲ್ದಿರ್ದ=ಸಮರ್ಥವಾಗಿದ್ದ, ಹಾರೀತಕ=ಹಸುರಾದ,

೧೧೬. ಬಿಸನಾಳಜಾಲಕ=ತಾವರೆಯ ದಂಟಿನ ಬಲೆ, ಪೀರ್ದುದು=ಕುಡಿದು ಬಿಟ್ಟಿತು. ಅಂದರೆ ಬೆಳ್ವೆಳಗು ತನ್ನ ಬಿಳುಪಿನಿಂದ ಬಿಸಿಲನ್ನು ಮುಚ್ಚಿಬಿಟ್ಟಿತು ಎಂದು ಭಾವ. ಪಯ : ಪ್ರಸರಾಪೂರದೆ=ಹಾಲಿನ ವಿಸ್ತಾರವಾದ ಪ್ರವಾಹದಿಂದ, ತೇಂಕಿದತ್ತು= ತೇಲಿಸಲ್ಪಟ್ಟಿತು. ಚಂದನಾಸಾರ=ಶ್ರೀಗಂಧದ ಮಳೆ. ರೋದೋಂತ=ಭೂಮ್ಯಂತರಿಕ್ಷ,

೧೧೭. ಪರಿಭಾವಿಸಲಾರ್ಗಂ ಅರಿದಾಯ್ತು = ಯೋಚಿಸುವುದಕ್ಕೆ ಯಾರಿಗೂ ಸಾಧ್ಯವಾಗಲಿಲ್ಲ, ಒರ್ಮೊದಲೆ = ಇದ್ದಕ್ಕಿದ್ದಹಾಗೆ. ಸುರಸಿಂಧು=ದೇವಗಂಗಾನದಿ, ಶೀಕರನಿಕರ=ಹನಿಗಳ ಸಮೂಹ,

೧೧೮. ಬೆಳದಿಂಗಳ ಒಳ್ಮುರುಟು=ಬೆಳದಿಂಗಳ ಚೂರು,>ಶಕಲ, ಶಾರದ=ಶರತ್ಕಾಲದ ಮೇಘ.

೧೧೯. ಧವಳಿಮ=ಬಿಳಿಯ ಬಣ್ಣ.

೧೨೦. ಮುಟ್ಟಿಲ್=ಬೀಳಲು,

೧೨೧. ಪೆಂಪಿನ ಬಿಣ್ಪಿಂಗೆ=ಗೌರವಾತಿಶಯಕ್ಕೆ. ಮರುಳ್ಗೊಳಸರ್=ಹುಚ್ಚರಾಗುವುದಿಲ್ಲ. (ಆಕರ್ಷಿತರಾಗುವುದಿಲ್ಲ), ಆಳ್ತನದೊಳ್=ಸೇವಾವೃತ್ತಿಯಲ್ಲಿ,

೧೨೨. ಏನಂ ಮಾಡುವೆಂ ಅವೆಲ್ಲಂ ಅವಿನಯಮೆಂಬಂತೆ ತೋಱುತಿರ್ದುವುವೀಗಳ್ ಎಂಬುದು ಅನ್ವಯ.

೧೨೩. ಇಱುಕೆಗೆಯ್ವಂದಂ = ತಿರಸ್ಕರಿಸುವರೀತಿ, ಅಹಂಕಾರ = ಪ್ರಭುತ್ವಾಹಂಕಾರ, ಸ್ತವಂಗೆಯ್ವುದು=ಸ್ತೋತ್ರ ಮಾಡುವುದು. ಎಮಗೆ ಗೌರವಂದಲ್=ನಮ್ಮ ಯೋಗ್ಯತೆಗೆ ಮೀರಿದ್ದಲ್ಲವೇ ? ಧಾರ್ಷ್ಟ್ಯಂ=ಸಲಿಗೆ (ಧೈರ್ಯದಿಂದುಂಟಾದ) ಚಾಪಲಂ= ಮನಶ್ಚಾಂಚಲ್ಯ. ಉಪಕರಣಂ=ಉಪಕಾರ, ಅನಾತ್ಮಜ್ಞತ್ವಂ=ತನ್ನನ್ನು ತಿಳಿಯದಿರುವಿಕೆ.

೧೨೪. ಒಪ್ಪುಗೊಂಡ=ಮೆಚ್ಚಿ ಸ್ವೀಕರಿಸಿದ, ಪ್ರತಿಪಾದ್ಯಮಪ್ಪುದು=ಕೊಡತಕ್ಕದ್ದು, ಏತಱಿಂದ=ಯಾವ ಪ್ರತ್ಯುಪಕಾರದಿಂದ, ನೀಗಿದಪೆನೋ=ಕಳೆಯುತ್ತೇನೆಯೋ ?

೧೨೫. ಜೀವಿತಮುಂ=ಪ್ರಾಣವನ್ನು ತನ್ನುಮಂ=ತನ್ನನ್ನೂ, ತೊಳ್ತುತನಮುಂ =ಸೇವಾವೃತ್ತಿಯನ್ನು, ಕೊಂಡುಂ = ಅಂಗೀಕರಿಸಿಯೂ, ನೆಱೆಯಳ್ =.ತೃಪ್ತಳಾಗಳು, ಸುಜನರ್ಗೆ+ಇರ್ದ+ನಿನ್ನಗೆ=ಸತ್ಪುರುಷರಾದ ನಿನ್ನಂಥವರಿಗೆ,

೧೨೮. ಸುಧಾಸೂತಿ=ಚಂದ್ರ,

೧೩೦. ಕಲ್ಲಮುಱು=ಕಲ್ಲಿನ ಚೂರು>ಮುರುಕು, ತಾನಾಗಿ+ಉರದೊಳ್= ತನ್ನಷ್ಟಕ್ಕೆ ತಾನೆ ಎದೆಯಲ್ಲಿ,

ವ॥ ನಿರ್ವಿರ್ಕೆ=ಆಧಿಕ್ಯ, ಭಗ್ನಪ್ರಣಯೆ=ಭಂಗವಾದ ಪ್ರೀತಿಯುಳ್ಳವಳು,

ತನ್ನಂ ಬಿಡುವಳು=ಆತ್ಮನಾಶಮಾಡಿಕೊಳ್ಳುತ್ತಾಳೆ (ಪ್ರಾಣವನ್ನು ಬಿಡುತ್ತಾಳೆ)

೧೩೧. ಇರಸಲ್ಲದು=ಇರಲು ಸಾಧ್ಯವಿಲ್ಲ.

೧೩೨. ಎನುಗೆ ಕಯ್ಕೊಳಿಸಲ್ ನೀಂ ಬಲ್ಲೆ=ನಮ್ಮನ್ನು ಒಪ್ಪಿಸುವುದರಲ್ಲಿ ನೀನು ನಿಪುಣೆ, ಮಾತಾಡಸಲ್ಲ ಎಂಬವೋಲ್=ಪ್ರತಿಮಾತಾಡುವುದು ಯೋಗ್ಯವಲ್ಲವೆನ್ನುವ ಹಾಗೆ, ವಾಕ್ಕೌಶಲ್ಯಗುಣಮುಂ=ಮಾತಿನ ಚಾತುರ್ಯಗಣವನ್ನು, ನಿಮ್ಮ ಸೌಜನ್ಯ ಜಾಲಂ=ನಿಮ್ಮ ಒಳ್ಳೆಯತನವೆಂಬ ಬಲೆಯು, ಎನ್ನಂಪುದಿದಿರ್ದತ್ತು=ನನ್ನನ್ನು ಆವ ರಿಸಿಕೊಂಡಿದೆ. ಆ೯+ಇ೯+ಎನಗೊಡೆಯನೆ=ಇನ್ನುಮೇಲೆ ನನಗೆ ಸ್ವಾತ್ರಂತ್ಯವುಂಟೆ, ಚಿತ್ತಕ್ಕೆವಂದಂತುಟಿಮಾಟ್ಪುದು=ನಿಮ್ಮ ಮನಸ್ಸಿಗೆ ಬಂದಹಾಗೆ ಮಾಡಿಕೊಳ್ಳತಕ್ಕದ್ದು, ಗುಣಪಣ=ಗುಣವೆಂಬ ದ್ರವ್ಯ (ಹಣ),

೧೩೪. ಮುಯ್ಪಿಂಗೆ=ಭುಜದ ಮೆಲ್ಭಾಗಕ್ಕೆ, ಕಣ್ಣಾಲಿಬೀಟಿ=ಕಣ್ಣು ಸೋಲು ವವರೆಗೂ,

೧೩೫. ಗೋತ್ರಸ್ಖಲನೆ=ಹೆಸರಿನ ಬದಲಾವಣೆ,

೧೩೬. ಸೋವುತ=ಅಟ್ಟುತ್ತ,

೧೩೯. ಸುಟ್ಟುಂಬೆಯಿಂದಂ = ಬೆರಳುಗಳಿಂದ, ಉತ್ಕಲಿಕೆ = ಅಭಿಪ್ರಾಯ, ಆಕಾಂಕ್ಷೆ,

೧೪೧. ಉಡೆನೂಲ್=ನಡುಪಟ್ಟಿ>ಒಡ್ಯಾಣ, ಮೇಗಾಲ್ ತುಡುಗೆಯಕುಸುರಿ =ಕಾಲುಸರದ ಗೆಜ್ಜೆ. ಮಿಡುಕಲ್ ಪಡೆಯದೆ=ಅಳ್ಳಾಡುವುದಕ್ಕೂ ಆಗದೆ

೧೪೨. ಒಳಮುಯ್ಪಿನಮಾಲೆ=ಭುಜದ ಒಳಭಾಗದ ಮಾಲೆ, ವಳಿತ್ರಯಂ ಕಿಡು ವಿನೆಗಂ ತೆಱಂದಿರಿದು=ನೀಡಿ ನೋಡುವುದರಿಂದ ತ್ರಿವಳಿಗಳು ಕಾಣನಂತೆ ಅವಕಾಶವನ್ನು ಮಾಡಿಕೊಂಡು ಅಂದರೆ ಬಹು ಆಸಕ್ತಿಯಿಂದ ಶರೀರವನ್ನು ನೀಡಿ ನೋಡುತ್ತ.

೧೪೩. ಪುಂಡರೀಕ=ಕಮಲ, ವಿಲಕ್ಷಸ್ಮಿತಾಲೋಕ=ವಿಚಿತ್ರವಾದ ಹುಸಿನಗೆಯ ನೋಟ, ನಾನಾರಸಂ ಕಣ್ಗೊಳಿಪನ್ನಂ=ಶೃಂಗಾರಾದಿ ವಿವಿಧರಸಗಳು ಮನೋಹರ ವಾಗಿ ಪ್ರಕಟವಾಗುವಹಾಗೆ

೧೪೪. ರಾಜೀವಜೀವಿತೇಶ್ವರಂ=ಕಮಲಗಳಪತಿಯಾದ ಸೂರ್ಯ.

೧೪೫. ವ|| ದೀಧಿತಿ=ಕಿರಣ,

೧೪೭. ಅಗ್ಗಲಿಪರಾಗಸಾಗರಂ = ಹೆಚ್ಚುತ್ತಿರುವ ಪ್ರೇಮ ಸಮುದ್ರ, ಸಾಂದ್ರ ಸಂಧ್ಯಾರಾಗಂ=ಒತ್ತಾದ ಸಂಜೆಗೆಂಪು.

೧೪೮. ಮುಗ್ಗಿದ=ಸುಟ್ಟು ಹೋದ

೧೪೯. ಒಟ್ಟಿಕೊಳ್ವ=ತಲೆಯಮೇಲೆ ಸುರಿದುಕೊಳ್ಳುವ, ಕರಪುಷ್ಕರಶೀಕರ=ಕೈ ಯಂತಿರುವ ಸೊಂಡಿಲಿನ ಸಣ್ಣಹನಿ, ಧವಳತಾರಾನಿಕರ=ಬೆಳ್ಳಗಿರುವ ನಕ್ಷತ್ರ ಸಮೂಹ.

೧೫೦. ರಜನಿನಾಥ=ರಾತ್ರಿಯಪತಿ (ಚಂದ್ರ) ವಿಭಾವರಿ=ರಾತ್ರಿ, ಕುಮುದಿನಿ ಬಾಂಧವ=ಚಂದ್ರ, ದಂತಪತ್ರ=ದಂತದೋಲೆ

೧೫೧. ತೆಗೆದುದೋ=ಮಾಡಲ್ಪಟ್ಟಿತೋ,

ವ|| ನಡಪಾಡುತಿರ್ಪುದುಂ=ಸಂಚಾರಮಾಡುತ್ತಿರಲು,

೧೫೨. ನೀರ್ವಿಜ್ಜಣಿಗೆ=ನೀರಿನಲ್ಲಿ ಅದ್ದಿದ ಬೀಸಣಿಗೆ, ಕಣ್ಗೆಯ್ಯೆ=ನಿದ್ರೆಮಾಡುತ್ತಿರಲು, ದಳ....ಗಂಧೋದ್ಗಾರಿ=ಅರಳಿರುವ ಕನ್ನೈದಿಲೆಯ ಮನೋಹರವಾದ ವಾಸನೆಯನ್ನು ಬೀರುತ್ತಿರುವ, ಉಪಧಾನ=ತಲೆದಿಂಬು, ಪಡುಶಿಲೆ=ಮಲಗುವಶಿಲಾಮಂಚ,

ವ|| ಇತರೆಯಂತೆ=ಸಾಮಾನ್ಯ ಸ್ತ್ರೀಯ ಹಾಗೆ, ಅಪನೀತ=ಬಿಡಲ್ಪಟ್ಟ,

೧೫೩. ಕೇದಗೆಯೋಲೆ=ತಾಳೆ ಗರಿಯಿಂದ ಮಾಡಲ್ಪಟ್ಟ ಓಲೆ, ಎಳೆವೆಳ್ಪಿಸುತ್ತಿದಂತೆ=ಬಾಲಚಂದ್ರನನ್ನೇ ಸುರುಳಿ ಮಾಡಿದಹಾಗೆ

೧೫೪. ಆವ ಭಂಗಿಯಿಂ=ಯಾವ ರೀತಿಯಿಂದಲೂ,

೧೫೫. ನೀವು ಐಶ್ವರ್ಯವಂತರು ಎಂಬ ಗರ್ವವನ್ನೂ ನಿಮ್ಮ ಸದ್ಗುಣವನ್ನೂ ಪ್ರಕಾಶಪಡಿಸುತ್ತಿದ್ದೀರಲ್ಲವೆ.

೧೫೬. ಮನಸ್ಸಿನಲ್ಲಿ ಸ್ವಲ್ಪವೂ ದಾಕ್ಷಿಣ್ಯವನ್ನಿಡದೆ ನಾನು ನಿಮ್ಮ ಆಳು ಎಂದು ಹೇಳಿದುದರಿಂದಲೇ ನಾನು ಧನ್ಯನಾಗುತ್ತೇನೆ. ಹೀಗಿರುವಲ್ಲಿ ನಮ್ಮ ಆಶ್ರಿತರಲ್ಲಿ ನೀವೂ ಸೇರಿ ಬದುಕಿಕೊ ಎಂದು ಆಜ್ಞೆ ಮಾಡುವ ಬದಲು ಇಷ್ಟು ಆದರವೇಕೆ?

೧೫೭. ಪರರ್ಗುಪಕರಿಪೆಡೆಗಳ್ಗೆ=ಪರೋಪಕಾರ ಮಾಡುವ ಕಾಲದಲ್ಲಿ, ಉಪಕರಣಂ=ಸಾಧನವಾದ, ತನುಜೀವಿತಮೆರಡುಂ=ಶರೀರ ಮತ್ತು ಪ್ರಾಣ ಇವೆರಡೂ, ಈ ಬರವಿಂಗೆ=ಈ ನಿನ್ನ ಆಗಮನಕ್ಕೆ, ಪಾವುಡಂ=ಉಡುಗೆರೆಯು. ಎನಲ್ ಎನಗೆ ಲಜ್ಜೆಯಾದಪುದು. ಅಂದರೆ ಬರವಿಗೆ ಈ ನನ್ನ ಶರೀರ ಪ್ರಾಣಗಳೆರಡನ್ನು ಕಾಣಿಕೆಯಾಗಿ ಕೊಟ್ಟರೂ ಸಾಲದು ಎಂಬುದು ಅಭಿಪ್ರಾಯ.

೧೫೮. ನಾನು ನನ್ನ ಶರೀರ, ನನ್ನ ಜೀವ, ನನ್ನ ಅವಯವ–ಇವೆಲ್ಲವೂ ಇವೆ. ಇವುಗಳಲ್ಲಿ ಯಾವುದನ್ನು ದೇವಿಯರು ಮೆಚ್ಚಿ ಅಂಗೀಕರಿಸುತ್ತೀರೋ ಅವೇ ಧನ್ಯವೆಂದು ನಾನು ಭಾವಿಸುತ್ತೇನೆ.

ವ|| ಕೀಳ್ಪಟ್ಟು ನುಡಿಯೆ=ಕೀಳಾಗಿ ಭಾವಿಸಿ ಮಾತನಾಡಿದರೆ,

೧೫೯. ವ|| ಕೃತಪ್ರಸ್ತಾವೆಯಾಗಿ=ಅವಕಾಶ ಮಾಡಿಕೊಂಡು,

೧೬೦. ಎನ್ನಂ=ಹೇಗಿದ್ದಾನೆ. ಎಂತುಟು=ಹೇಗಿದೆ, ಎನಿತು=ಎಷ್ಟುದೂರ.

ವ|| ಪಿರಿದು ಬೇಗಮಿರ್ದು=ದೀರ್ಘಕಾಲವಿದ್ದು. ಸಾರೆ=ಸಮೀಪದಲ್ಲಿ,

೧೬೧. ಪಕ್ಕೆಸಾರ್ವಂತಿರೆ=ಹಾಸಿಗೆಯನ್ನು ಸೇರುವಹಾಗೆ, ಅಪರವೇಲಾವನಮುಂ=ಪಶ್ಚಿಮ ಸಮುದ್ರವನ್ನು

೧೬೨. ನಿಸ್ತೇಜನ=ಕಾಂತಿಹೀನತೆ, ತನುವಾಗು=ಕೃಶವಾಗು, ಸಣ್ಣನಾಗು

೧೬೩. ಕುಮುದಿನೀವಿಸ್ತಾರಂ=ಕನ್ನೈದಿಲೆಯ ವೈಭವ.

೧೬೪. ತಣ್ಣೆಲರ್=ತಂಪಾದ ಗಾಳಿಯು, ಮಧುಸಖನ=ಮನ್ಮಥನ, ಸುಯ್ಯೆಲರ್ವೊಲ್=ನಿಟ್ಟುಸಿರಿನಂತೆ, ಅಲರ್ಗಂಪಂ ಪೊತ್ತು=ಹೂವಿನ ವಾಸನೆಯನ್ನು ಧರಿಸಿ

ನೆಗೆದು=ಮೇಲಕ್ಕೆದ್ದು ತೀಡಿತ್ತು=ಬೀಸಿತು.

೧೬೫. ಚಕ್ರವಾಕ ಚಕ್ರೇಶ್ವರ=ಸೂರ್ಯ.

ವ|| ಉಪ್ಪವಡಿಸಿದಳ್ ಇಲ್ಲೆಂಬುದುಂ=ಎದ್ದಳೋ ಇಲ್ಲವೋ ಎಂಬುದನ್ನು, ಪರಿವ್ರಾಜಿಕಾ ಸಮಾಜಂ=ಸಂನ್ಯಾಸಿನಿಯರ ಸಮೂಹ, ಅಭ್ಯರ್ಹಿತರ್=ಸಮೀಪ ವರ್ತಿಗಳು,

೧೬೭. ಬಂಚಂಗಳಿಂದ=ವೇಣುವಾದ್ಯಗಳಿಂದ (ಕೊಳಲು), ಒತ್ತುತ್ತಿರೆ=ವಾದಿಸು ತ್ತಿರಲು, ನಾರದತನಯೆ=ವೀಣೆ. ಉಪೇತ=ಕೂಡಿಕೊಂಡಿರುವುದು,

೧೬೮. ಶಿರೀಷಮಂಜರಿ=ಬಾಗೆಯ ಹೂವಿನ ಗೊಂಚಲು, ಬಲವರು=ಪ್ರದಕ್ಷಿಣೆ ಮಾಡು, ಪಾವಸೆ=ಪಾಚಿ,

೧೬೯. ಸುಲಿಪಲ್ಲು=ಶುಭ್ರವಾದ ಹಲ್ಲು, ನುಣ್ಬೆಳಗೆಳಸಿದ=ನಿರ್ಮಲವಾದಕಾಂತಿ ಯಿಂದ ಕೂಡಿದ, ಕೃಷ್ಣಿಕೆ=ಕಪ್ಪುಬಣ್ಣ,

೧೭೦. ನಾಂದನಾಗಿ=ತೊಯ್ದುಹೋಗಿರುವುದರಿಂದ,

೧೭೩. ಸ್ವಾಧೀನವೆನಿಪ=ಚಂದ್ರಾಪೀಡನಿಗೆ ಅಧೀನವೆನಿಸಿಕೊಂಡಿರುವ, ಪರಿಜನ ದೊಳ್=ಸೇವಕಜನವಾದ ನನ್ನ ವಿಷಯದಲ್ಲಿ, ತಮಗೆ=ನಿಮಗೆ, ಇಂ=ಇನ್ನು, ಪೆಱ ತೇಂ=ಬೇರೆಯೇನುಂಟು, ಅಂದರೆ ನಾನು ಚಂದ್ರಾಪೀಡನ ಸೇವಕಳಾಗಿ ಆತನ ಆಜ್ಞೆ ಯಂತೆ ನಡೆಯತಕ್ಕಳಾಗಿರುವಲ್ಲಿ ನೀವು ನನ್ನನ್ನು ಹೇಳತಕ್ಕದ್ದೇನಿದೆ. ಎನ್ನಮನದೊಳ್ ಆಂ ಬೇಱೆಂಬಳಲ್ಲ=ಬೇಧವನ್ನು ಎಣಿಸತಕ್ಕವಳಲ್ಲ. ಅಂದರೆ ಚಂದ್ರಾಪೀಡ ಬೇರೆ ನಾನು ಬೇರೆ ಎಂದು ಎಣಿಸತಕ್ಕವಳಲ್ಲ. ಅದಱಿಂ=ಆದ ಕಾರಣ, ಇದಂ=ಈ ಮಾತನ್ನು, ತಾಂ=ತಾವು, ಆರ್ಗೆ ಪೇಳ್ದಪಿರೌ=ಯಾರಿಗೆ ಹೇಳುತ್ತೀರಿ.

೧೭೪. ಎನ್ನಂ ಪರಿಜನದೊಳಗೊರ್ವನೆಂದು ಪರಿಭಾವಿಪುದು=ನಿಮ್ಮ ಆಶ್ರಿತವರ್ಗ ದಲ್ಲಿ ನಾನೂ ಒಬ್ಬನೆಂದು ನನ್ನನ್ನು ಪರಿಗಣಿಸತಕ್ಕದ್ದು.

೧೭೫. ಬರಸೆಗೆದುದೋ=ಆಕರ್ಷಿಸಿತೋ.

ವ|| ಮಗುಳ್ಚಿ=ಹಿಂದಕ್ಕೆ ಕಳುಹಿಸಿ, ಸಾರ್ಚಿದ=ಸಮೀಪದಲ್ಲಿರಿಸಿದ,

೧೭೬. ಅಗಲಲಸತ್ಯಮೆಂದು=ಬಿಟ್ಟಿರಲು ಸಾಧ್ಯವಿಲ್ಲವೆಂದು, ಪೆಱಗೆಬಱಿಸಲ್ವಳೆ =ಹಿಂದೆ ಸಂಗಡಲೇ ಬರುತ್ತಿದ್ದಾಳೆಯೆ? ಈ ತಗೆವೊಡೆ=ಇದೋ ನನ್ನನ್ನು ತಡೆಯುವು ವುದಕ್ಕೆ, ಮುಂದೆ ಬಂದಳ್. ಚಿತ್ತದುತ್ಕಲಿಕೆಯಿಂ=ಮನಸ್ಸಿನ ಕುತೂಹಲದಿಂದ, ನಭಕೆ =ಆಕಾಶಕ್ಕೆ, ಈ ನೆಗೆತಂದಳ್=ಇದೊ ಹಾರಿಬಂದಳು. ಆಗಳುಂ=ಯಾವಾಗಲೂ ಮೊಗಮನ್ನೆನೋಡಲೆಂದು ಉರದೊಳ್, ಈ ನೆಲಸಿರ್ದಪಳ್ = ಇದೊ ನೆಲಸಿದ್ದಾಳೆ ಎನ್ನುತ್ತ ಮೃಗಶಿಶುನೇತ್ರೆಯುಂ ನೃಪರೂಪ ಚಂದ್ರಮಂ ಭಾವಿಸಿದಂ.

ವ|| ಸ್ಕಂಧಾವಾರ=ಪಾಳಯ

೧೭೭. ರಣರಣಕ=ಮನ್ಮಥನಿಂದ, ವಿಕಲ=ಖಿನ್ನವಾದ, ಹೃದಯದಿಂ=ಮನ ಸ್ಸಿನಿಂದ

ಕಾದಂಬರಿಯ ದ್ವಿತೀಯದರ್ಶನ

೧. ಕೈಗಣ್ಮೆ=ಹೆಚ್ಚುತ್ತಿರಲು,

೨. ಒಸರ್ದಪುದು....ರಸವೆನೆ=ಮಾತಿನಲ್ಲಿ ಪ್ರೀತಿಯ ರಸ ತೊಟ್ಟಿಕ್ಕುತ್ತಿದೆ.

೩. ವ॥ ಇರ್ಪುವೊರೆದ=ದ್ರವದಿಂದ ಕೂಡಿದ, ದುಗುಲದ ಬಾಸಣಿಗೆ=ದುಕೂಲದ ಗೌನು (ಹೊದಿಕೆ) ಸಿರಿಕಂಡದುರಳಿ=ಶ್ರೀಗಂಧದ ಕೆಸರು, ಅವಿನ್ನಾಣ=ಅಭಿಜ್ಞಾನ,>ಸೂಚಕ>ಗುರುತು, ಪಾಲಡಿಕೆ=ಹಸಿಯ ಅಡಿಕೆ. ಪಳುಕು=ಚೂರು, ಕಾದಂಬರಿಯ ಚೂಡಾಮಣಿಮರೀಚಿರಂಜಿತಾಂಜಲಿ ಸಮಭ್ಯರ್ಚನ=ಕಾದಂಬರಿಯ ಚೂಡಾಮಣಿಯ ಕಾಂತಿಯಿಂದ ಮನೋಹರವಾದ ನಮಸ್ಕಾರ>ತಲೆಯಮೇಲೆ ಕೈಯಿಟ್ಟು ಮಾಡಿದ ನಮಸ್ಕಾರ,

೪. ಹಿಮಕರಮಯಮೆನಿಸಿದ=ತಂಪಾದ, ನಿಜಗುಣವ್ರಜವೆ=ನಿನ್ನ ಗುಣ ಸಮೂಹವೆ, ತನ್ನಗಲ್ಕೆಯೊಳ್=ನಿನ್ನ ವಿಯೋಗದಿಂದ, ಉಷ್ಣಾಂಶುಮಯಮೆನಿಸಿದ ಪುವು=ತೀಕ್ಷ್ಣ ಕಿರಣಗಳೆನಿಸಿಕೊಳ್ಳುವುವು, ಮುನ್ನಮೆ ಕಾಣದಿರ್ಪುದು=ಮೊದಲೇ ನೋಡದಿರುವುದು, ಸುಖವಲ್ತೆ=ಸುಖಕರವಲ್ಲವೆ, ಅಂದರೆ ನಿನ್ನನ್ನು ಮೊದಲೇ ನೋಡದೇ ಇದ್ದಿದ್ದರೆ ಈ ವಿರಹ ವ್ಯಥೆಯೇ ಇರುತ್ತಿರಲಿಲ್ಲ ಎಂದು ಭಾವ.

೫. ಈ ನಾಂ ಬಿಡದೆ=ಈ ನಾನು ಸಹಿತವಾಗಿ, ಜನಂ=ಗಂಧರ್ವಲೋಕದ ಜನವು, ನಿನ್ನಿನದಿವಸಮಂ ಬಯಸುತಿರ್ದಪುದು=ನಿನ್ನ ದರ್ಶನ ಸುಖವನ್ನುಂಟುಮಾಡಿದ ನಿನ್ನೆಯ ದಿವಸದಂಥ ದಿವಸವನ್ನು ಅಪೇಕ್ಷಿಸುತ್ತಿದೆ.

ವ॥ ಮದುವೆಗಳುಪಿದ=ಮದುವೆ ಮುಗಿದ,

೬. ಆಂ ಎಲ್ಲಂದದೊಳಂ=ನಾನು ಎಲ್ಲ ರೀತಿಯಲ್ಲಿಯೂ, ಪರಿಹೃತಸಮಸ್ತ ಸಂಗೆಯೆಂ=ಬಿಡಲ್ಪಟ್ಟ ಸರ್ವಸಂಗವುಳ್ಳವಳು, ಎನ್ನೀಹೃದಯಂ=ಅಂಥ ನನ್ನ ಹೃದಯವೂ ಕೂಡ ಅಕಾರಣ ಪಕ್ಷಪಾತಿಯೆನಿಸಿದ ನಿನ್ನಂ ನೋಡಲ್ ಬಯಸಿದಪುದು.

೭. ಮತ್ಸಖಿಗೆ ತನು ಬಸಮಲ್ತು=ನನ್ನ ಸಖಿಯಾದ ಕಾದಂಬರಿಗೆ ವಿರಹದಿಂದ ತನ್ನ ಶರೀರವು ಅವಳ ಅಧೀನದಲ್ಲಿಲ್ಲ, ಒರ್ಮೆ ಬಂದು ಎನಗೆ ಮಾಳ್ಪುದು ಪೆರ್ಮೆಯಂ=ಒಂದು ಸಲ ಬಂದು ನನಗೆ ಗೌರವವನ್ನುಂಟುಮಾಡಬೇಕು. ನಿಮ್ಮ ನಣ್ಪಿನಿಂ ಜನಿಯಿಸಿದೀ ಕದರ್ಥನೆಗೆ ಸೈರಿಪುದು=ನಿಮ್ಮ ಸ್ನೇಹದಿಂದಲೇ ಉಂಟಾದ ನನ್ನ ಹರಟೆಗೆ ಸೈರಿಸಬೇಕು, ಇಲ್ಲಿಗೆ....ನಿರ್ಮಳತ್ವದಿಂ=ಇಲ್ಲಿಗೆ ಬರಬೇಕೆಂದು ಹೇಳುವ (ಅಜ್ಞೆಮಾಡುವ) ಈ ದರ್ಪವೂ ತಮ್ಮ ನಿರ್ಮಳತ್ವದಿಂದಲೇ ಉಂಟಾದುದು.

ವ॥ ಗಂಧಮಾದನನಾಗೇಂದ್ರ = ಗಂಧಮಾದನವೆಂಬ ಶ್ರೇಷ್ಠವಾದ ಆನೆ. ವಲ್ಲಭವಾಜಿ=ಶ್ರೇಷ್ಠವಾದ ಕುದುರೆ, ಖುರಮಣಿಕ=ಕುದುರೆಯ ಕಾಲನ್ನು ಕಟ್ಟುವುದಕ್ಕಿರುವ ಗೂಟ,

೧೫. ತನ್ನ ರಹಸ್ಯವನ್ನು ತನ್ನ ನೆಟಲು ಎಲ್ಲಿ ಕೇಳಿ ಬಿಡುತ್ತದೆಯೋ ಎಂಬ ಶಂಕೆಯಿಂದ ಅದನ್ನು ಅಳಿಸುತ್ತಿದ್ದಾಳೆಯೋ ಎಂಬಂತೆ ರತ್ನಕುಟ್ಟಿಮ ಪ್ರದೇಶವನ್ನು

ಕಾಲಿನ ಹೆಬ್ಬೆರಳಿನಿಂದ ನೂಕುತ್ತಿದ್ದಳು.

೧೬. ವನದೇವತಾ ಶ್ರವಣಶಂಕಿತೆ = ವನದೇವತೆಗಳಿಲ್ಲಿ ತನ್ನ ರಹಸ್ಯವನ್ನು ಕೇಳಿ ಬಿಡುತ್ತಾರೆಯೋ ಎಂಬ ಸಂದೇಹದಿಂದ ಕೂಡಿದವಳು.

೧೯ ಲಜ್ಜೆಯುಜ್ಜುಗ=ನಾಚಿಕೆಯ ವ್ಯಾಪಾರ<ಕಾರ್ಯ, ಅವಳಲ್ಲಿ ಉಂಟಾದ ಲಜ್ಜೆಯೇ ಲಜ್ಜಾಕಾರ್ಯವನ್ನು ಅಭ್ಯಾಸಮಾಡಿಸಿತು, ಬಾಲಭಾವವೇ ಬಾಲ್ಯೋದಯವನ್ನು ಉಂಟುಮಾಡಿತು. ವಿಷಾದವೇ ವಿಷಾದೋದ್ರೇಕವನ್ನೂ ಭೀತಿಭಾವವೇ ಭೀತಿಕ್ರಮವನ್ನೂ ವಿಳಾಸವೇ ವಿಳಾಸೋಲ್ಲಾಸವನ್ನೂ ಮುಗ್ಧಭಾವವೇ ಮುಗ್ಧತ್ವ ಮಹತ್ವವನ್ನೂ ಅವಳಿಂದ ಕಲಿತಂತಾಯಿತು.

೨೧. ನಸುಗೆತ್ತಲ್=ಸ್ವಲ್ಪ ಚಲಿಸಲು, ನಿಶ್ವಾಸವೆಂಬ ದುಂಬಿಯ ಸಮೂಹಕ್ಕೆ ತನ್ನ ರಹಸ್ಯವನ್ನು ತಿಳಿಸುತ್ತಿದ್ದಾಳೆಯೋ ಎನ್ನುವಂತೆ ಹೇಳುವುದಕ್ಕೆ ಪ್ರಾರಂಭಮಾಡಿದಳು. ಎಂತೆಂತಾನುಂ=ಹೇಗೋ ಹೇಗೊ>ಅತಿ ಪ್ರಯಾಸದಿಂದ,

೨೨. ವಲ್ಲಭತೆಯೆಡೆಯೊಳ್ = ಯಾಜಮಾನ್ಯ ದೃಷ್ಟಿಯಿಂದ = ಪ್ರೀತಿಯ ದೃಷ್ಟಿಯಿಂದ

೨೩. ಪರಿಭವ=ಸೋಲು=ಅವಮಾನ, ಅಸುವಂ ತನುವಿಂದೆ ಪತ್ತುವಿಡಿಸುವೆಂ =ಪ್ರಾಣವನ್ನು ಶರೀರದಿಂದ ಬೇರೆ ಮಾಡುತ್ತೇನೆ=ಪ್ರಾಣತ್ಯಾಗಮಾಡುತ್ತೇನೆ.

೨೬. ಬಿಸತಂತುವಿನೊಳ್ ದೊರೆಯೆನಿಪ=ಕಮಲದದಾರಕ್ಕೆ (ದಂಟಿನೊಳಗಿರುವ ಸೂಕ್ಷ್ಮತಂತು) ಸಮಾನವಾದ, ಎಳಮನದೆನ್ನಂ=ಕೋಮಲವಾದ ಮನಸ್ಸುಳ್ಳ ನನ್ನನ್ನು

೨೭. ನೃಪನೆಸಕಂ=ಚಂದ್ರಾಪೀಡನ ಕಾರ್ಯವು, ಇೞ ಎನ್ನಂ ನಿತ್ತರಿಸಲ್ಕೆ ಕುಡದು=ಇನ್ನು ನನ್ನನ್ನು ಕಡೆಹಾಯಿಸಲು ಸಾಧ್ಯವಿಲ್ಲ. ಅಂದರೆ ನೃಪವಿಯೋಗದಿಂದ ಮರಣವು ತಪ್ಪದು, ಮರುವುಟ್ಟಿನೊಳಂ=ಜನ್ಮಾಂತರದಲ್ಲಿಯೂ, ಕೂಟ=ಸಹವಾಸವು, ಎನಗೆ ಅಕ್ಕೆ. ಎನ್ನತಪ್ಪಿಂಗೆ = ಚಂದ್ರಾಪೀಡನಲ್ಲಿ ಪ್ರೀತಿಮಾಡಿದ ನನ್ನ ತಪ್ಪಿಗಾಗಿ, ಸತ್ತು ಶುದ್ಧೆಯೆಂ+ಅಪ್ಪೆಂ=ನಿರ್ದೋಷಿಯಾದವಳಾಗುತ್ತೇನೆ.

ವ|| ಮಾಣ್ಬುದುಂ=ಸುಮ್ಮನಾಗಲು, ಭೀತಿಯೆಂ=ಭಯದಿಂದ ಕೂಡಿದವಳಾಗಿ,

೨೮. ಕಡುಗೂರ್ತವೋಲ್=ವಿಶೇಷ ಪ್ರೀತಿಸಿದ ಹಾಗೆ,

೨೯. ಶ್ವಸಿತಾನೀಕಗಳಿಂದಃ=ನಿಶ್ವಾಸದ ಗಾಳಿಯ ಸಮೂಹದಿಂದ, ಏನೆಂ ಎಂತಾಂ ನಿಯಮಿಸಿದಪೆ౯, ಆ ಧೂರ್ತನಂ=ಏನುಮಾಡಲಿ, ಆದುಷ್ಟನನ್ನು ಹೇಗೆ ಎಲ್ಲೆಯಲ್ಲಿಡಲಿ.

ವ|| ಇಕ್ಕುವಟ್ಟಳ್=ಅಧೀನಳಾಗಿದ್ದಾಳೆ

೩೦. ವ|| ನೀನೆಂಬ=ನೀನು ಹೇಳುತ್ತಿರುವ, ತನುವಿಲ್ಲದನಲಂ=ಶರೀರವಿಲ್ಲದ ಬೆಂಕಿ.

೩೧. ಅಗ್ಗಲಿಪಪಾಂಡುಚ್ಛಾಯೆಯಂ=ಅತ್ಯಧಿಕವಾದ ಬಿಳಿಯ ಬಣ್ಣವನ್ನು, ಅಂತು ಇಂತು ಉಂತು ಎನಲ್ ಬರ್ಕುಮೆ=ಹಾಗೆ, ಹೀಗೆ ಬೇರೆ ರೀತಿ ಎನ್ನಲು ಬರುತ್ತದೆಯೇ

೩೨. ಪದ್ಮಗರ್ಭ=ಬ್ರಹ್ಮ,

ವ|| ಕಾಯ್ಪಂತೋಱಿ = ಬೇಗೆಯನ್ನುಂಟುಮಾಡಿ,

೩೩. ತಳ್ವಿಲ್ಲದೆ=ಸಾವಕಾಶವಿಲ್ಲದೆ

೧೨. ವ|| ತಿರೋಹಿತದರ್ಶನಪ್ಪುದುಂ=ಮರೆಯಾಗಲು, ದುಗ್ಧೋದಧಿಧವಳಂ =ಕ್ಷೀರಸಮುದ್ರದಷ್ಟು ಬಿಳುಪಾದ

೧೩. ಕೋಮಲೆ ನೀಂ ಅಲರೆಡಪಿದಪ್ಪೆ=ಕೋಮಲೆಯೇ ನೀನು ಹೂವನ್ನು ಎಡವುತ್ತೀಯೆ

ವ|| ಕೇಗು=ಕೇಕಾರವ,

೧೫. ವ|| ದಾಹಜ್ವರ=ತಾಪಜ್ವರ,

೧೭. ಪಸಲೆಗವಿದುದು=ಹಸಿರಾಯಿತು. ಪೊದಯಿಸಿರ್ದ=ಹೊದಿಸಿದ್ದ,

೧೯. ಜಲಶ್ರೀಸಮಾಜಂ=ಜಲಲಕ್ಷ್ಮೀಸಮೂಹವು,

೨೦. ಸೂಸುಕ=ಕುಚ್ಚು, ಸಿಂಧುವಾರ=ಲಕ್ಕಿಯ ಹೂವು, ಗ್ರಥಿತ=ಕಟ್ಟಲ್ಪಟ್ಟ, ಸುಂದರವಂದನಮಾಲಿಕಾ=ಸೊಗಸಾದ ತೋರಣ, ವೃತಂ=ಆವರಣವು, ಚೆಲ್ವುವೆತ್ತುದು.

ವ|| ಇರ್ತಡಿವಿಡಿದು=ಎರಡು ಪಕ್ಕಗಳನ್ನು ಅನುಸರಿಸಿ, ಇಟ್ಟಳಂ=ಒತ್ತಾಗಿ, ಪಸೆ=ಹಾಸಿಗೆ, ಸಿಂಪಣಿಗೆಗೊಟ್ಟು= ಚಿಮುಕಿಸಿ, ಭೃಂಗ=ಅಭ್ರಕ, ಕಾಗೆ ಬಂಗಾರ, ಕಾವಣ=ಪರ್ಣಶಾಲೆ, ಮುಗಿಲ್ಗಡವಿನ = ಮೇಘೋದಯದಿಂದ ಪುಷ್ಪಿತವಾಗುವ ಕಡಹದ ಮರದ, ಅಲರಧೂಳಿ=ಹೂವಿನಪರಾಗ, ಪೊರೆದು=ಕೂಡಿಕೊಂಡು

೨೧. ದಂಡತೋರಣಕ=(ಬಾವಿಯ) ರಾಟೆ ಹಾಕುವುದಕ್ಕಿರುವ ಚೌಕಟ್ಟು, ಪರಿದೋಣಿ=ನೀರು ಹರಿಯುವ ದೋಣಿ, ಆಲಿಸಿದ=ಜೋಡಿಸಿದ, ಮಾಲೆ ಗುಂಡಿಗೆ ಮಾಲಾಕಾರವಾಗಿ ಜೋಡಿಸಲ್ಪಟ್ಟ ಗಡಿಗೆ, ರಾಟಳ=ರಾಟವಾಳ, ರಾಟೆ.

ವ|| ಬಲಾಕೆ=ಬೆಳ್ಳಕ್ಕಿ, ದುರ್ದಿನ=ಮೇಘಾವೃತವಾಗಿ ಸೂರ್ಯ ಕಾಣಿಸದ ದಿನ, ಬಿದಿರೆ=ಕೊಡವಲು, ಅಲರುಯ್ಯಲೆ=ಹೂವಿನ ಉಯ್ಯಾಲೆ, ಪತ್ರಶಕುನಿ=ಎಲೆಯಿಂದ ಕೂಡಿದ ಹಕ್ಕಿ, ತಿರುಳೆಲೆ=ಸುಳಿಯೆಲೆ.

೨೨. ಇಕ್ಕೆವನೆ=ವಾಸಸ್ಥಳ, ಬಿಟ್ಟುಬೀಡು=ತಂಗುವ ಸ್ಥಳ, ಎಱೆವಟ್ಟು= ಆಶ್ರಯಸ್ಥಾನ,

೨೩. ಉಡುಪವಿರಹ = ಚಂದ್ರನ ಅಗಲಿಕೆ, ಅಳುರಲ್ಕೆ=ಆವರಿಸಿಕೊಳ್ಳಲು, ಮುಗ್ಗಿಸಲ್=ಕಡಿಮೆ ಮಾಡಿಕೊಳ್ಳುವುದಕ್ಕೆ.

ವ|| ಕಡವಿನಲರ್=ಕದಂಬ ಪುಷ್ಪ, ಪಲ್ ಪಱಿಗುಟ್ಟಿದಪುವು = ಹಲ್ಲಿನಿಂದ

ವಾದ್ಯವನ್ನು ಮಾಡುತ್ತಿವೆ ಅಂದರೆ ಚಳಿಯಿಂದ ಹಲ್ಲು ಒಂದಕ್ಕೊಂದು ತಗುಲಲು ವಾದ್ಯದಂತಾಯಿತು ಎಂಬುದಭಿಪ್ರಾಯ, ಕರಿಯದಡ್ಡಿ=ಕರಿಯ ಹಚ್ಚಡ, ಪಿಡಿಕೈಸ ಲಪ್ಪ=ಹಿಡಿಯಿಂದ ಉಂಡೆ ಕಟ್ಟುವುದಕ್ಕೆ ಆಗುವ

೨೭. ಪರಿಕಣು=ಕಾಲುವೆ, ಪೊಸವಂದರ=ಹೊಸ ಚಪ್ಪರ.

೩೩. ಉದಯಂ ಗೆಯ್ವಂದು=ಉದಿಯಿಸುವ ಕಾಲದಲ್ಲಿ, ಎನ್ನಕೊಂದೆ=ನನ್ನನ್ನು ನೀನು ನಿಶ್ಚಯವಾಗಿ ಕೊಲ್ಲುತ್ತೀಯೆ. (ಆದುದರಿಂದ ನೀನು ಉದಯಿಸಲೇ ಬೇಡ ಎಂದು) ಎರ್ದೆಯಂಟೆ=ಹೃದಯಕ್ಕೆ ಅಂಟಿಸಿಕೊಂಡು, ಇಂದುವಿಂ=ಚಂದ್ರನಿಂದ, ಸೂರಿಳಿಡಿಸುವ=ಆಣೆಯಿಡಿಸುತ್ತಿದ್ದಾಳೋ ಎಂಬಂತೆ. ಉರದೊಳ್ ಮುಕುರಂದಳಿದೊತಿರ್ದಳ್ ಎಂದನ್ವಯ.

೩೪. ವ|| ಗೆಂಟನೊಳೆ=ದೂರದಲ್ಲಿಯೇ. ನವಗ್ರಾಹಕರಣಿಯಂದದಿಂ=ಹೊಸದಾಗಿ ಹಿಡಿದ ಹೆಣ್ಣಾನೆಯಂತೆ, ಊರುಸ್ತಂಭವಿಧೃತೆ=ನಡೆಯುವುದಕ್ಕಾಗದಂತೆ ತೊಡೆಯನ್ನು ಕಟ್ಟಿಕೊಂಡವಳು.

೩೫. ಮುರಿದೇಳ್ವೆಡೆಯೊಳ್=ತಿರುಗಿ ಏಳುವಾಗ, ಗತರೋಮರಾಜಿತಾಮ್ರತ್ರಿವಳಿಯೊಳ್—ಒಳ್ದಿರಿಗೊಳಲ್ಕೆ=ವಕ್ರವಾಗಿ ಕೆದರಿಕೊಳ್ಳಲು, ಪಿಂಡಿಪಿಳಿದಂ=ಹಿಂಡಿ ನಿಸ್ಸಾರ ಮಾಡಿದನು.

೩೬. ಮಣಿಬದ್ಧಾವನೀಭಾಗ=ರತ್ನಗಳು ಹೊತಿರುವ ಭೂಭಾಗ, ಅಲರ್ವಸೆ =ಪುಷ್ಪಶಯ್ಯೆ.

ವ|| ಲಲಾಟಿಕಾ ಚಂದನಭರದಿಂ = ಮುಖದಲ್ಲಿ ಲೇಪನ ಮಾಡಿಕೊಂಡಿದ್ದ ಶ್ರೀಗಂಧದ ಭಾರದಿಂದ, ಕಿಂಚಿದವನತಮುಖಿ=ಸ್ವಲ್ಪ ಬಗ್ಗಿದ ಮುಖವುಳ್ಳವಳಾಗಿ.

೩೭. ಯುವರಾಜನಿಜಪ್ರತಿಬಿಂಬಂ ಇಲ್ಲಿ (ಕಪೋಲದಲ್ಲಿ) ಬಂದೆಳಸಿದುದಪ್ಪೊಡಂ ಎನ್ನಯ ಜೀವನಂ ಸಫಲಂ, ಅವತಂಸಪುಷ್ಪರಜ=ಅಲಂಕಾರಕ್ಕಾಗಿ ಧರಿಸಿದ್ದ ಹೂವಿನ ಪರಾಗ.

೩೮. ಪರಮಪ್ರಸಾದಭಾಗಿನಿ=ವಿಶೇಷ ಪ್ರೀತಿಗೆ ಪಾತ್ರಳಾದವಳು.

೪೦. ಅಲಂಪಿನೊಳ್=ಪ್ರೀತಿಯಿಂದ,

೪೧. ಧುರ್ವಿದಗ್ಧಂ=ಮೂಢವಾದ, ಎನ್ನಮನಂ ಎಂತುಂ ನಂಬಿದುದಿಲ್ಲ. ಅಂಇಂ ನಿಪುಣವಚನದಿಂ ಕಾಮಿನಿಯುಂ ತಿಳಿವೆಂ.

೪೩. ಅನುಕಂಪಮಾನಂ=ಅನುಸರಿಸಿ ನಡುಗುವ>ದಯಾಪೂರ್ಣವಾದ.

೪೪. ಪ್ರಸಾಧನ=ಆಭರಣ,

ವ|| ಅವ್ಯಕ್ತವ್ಯವಹಾರ=ಸ್ಪಷ್ಟವಲ್ಲದ ನಡತೆ>ಮಾತು, ಶಾಲೀನತೆ= ಅಧೈರ್ಯ.

೪೭. ಧೀರತ್ವದ=ಧೈರ್ಯದ, ಅನಾರತ ಸಂಗತಿ = ಎಡಬಿಡದ ಸಂಬಂಧವು, ಧೀರ=ಎಲೈ ಧೀರನೆ, ತ್ವತ್ = ನಿನ್ನ, ಅನಾರತ ಸಂಗತಿ = ಎಡಬಿಡದ ಸಂಬಂಧವು

ಒಂದೇ=ಮುಖ್ಯವಾಗಿ, ಜೀವಾಧಾರಂ=ಪ್ರಾಣಾಧಾರವು.

೫೦. ವ॥ ಶಿಖಂಡಶೇಖರ=ಚಂಡಿಕೆಯ (ತಲೆಯ ಕೂದಲು) ತುದಿ.

೫೧. ತಮ್ಮ ವತ್ಸಲತೆಯಂ = ದೇವಿಯಾದ ಕಾದಂಬರಿಯ ವಾತ್ಸಲ್ಯವನ್ನು ನೆನೆಯದೆ, ಒಳ್ಪಂ=ಸೌಜನ್ಯವನ್ನು, ಪರಿಭಾವಿಸದೆ=ಯೋಚಿಸದೆ, ಅಕ್ಕಱಂ=ಪ್ರೀತಿಯನ್ನು, ಮನದೊಳ್ ಅಣಂ ವಿಚಾರಿಸದೆ=ಮನಸ್ಸಿನಲ್ಲಿ ಸ್ವಲ್ಪವೂ ವಿಚಾರಮಾಡದೆ, ನಿಸ್ಪೃಹಾತ್ಮಕಂ=ದಾಕ್ಷಿಣ್ಯಶೂನ್ಯನು, ಎಂಬ=ಎನಿಸಿಕೊಳ್ಳುವ, ಅಳೀಕಭಕ್ತನುಂ=ಕಪಟ ಭಕ್ತನು, ಉಪಚಾರಶೀಲನೂ=ಕಪಟೋಪಚಾರ ಸ್ವಭಾವವುಳ್ಳವನೂ, ಎನಿಪ್ಪೆನೆಗಂ = ಎನ್ನಿಸಿಕೊಳ್ಳುತ್ತಿರುವಾಗ, ನುಡಿಯೊಂದು ಮಾಟವೊಂದು ಎನಿಸಿದ = ಮಾತೊಂದು ಕಾರ್ಯವೊಂದು ಎನ್ನಿಸಿಕೊಂಡಿರುವ, ಮಾನವಂಗೆ=ಮನುಷ್ಯನಾದ ನನಗೆ ದೇವಿ ಏಕೆ ಹಸಾದನುಂ ಮಾಡಿದಳ್.

೫೪. ಕೈವಾರ = ಸ್ತೋತ್ರ, ಪಾಂಥ = ದಾರಿಹೋಕ, ಆವೊಳ್ಪಪ್ಪೊಡಂ=ಆ ಒಳ್ಳೆಯತನವಾದರೂ, ಈ ಮರ್ತ್ಯನೊಳೆಂತು=ಈಮನುಷ್ಯನಲ್ಲಿ ಎಲ್ಲಿ ಬಂತು,

೫೫. ಮೀಱಲಂಗಮೆ=ಮೀರುವುದು ಸರಿಯೆ, ಸಲ್ಗೆಮ = ಸಲ್ಲಲಿ,

೫೬. ಖುರನಿರ್ಭಿಣ್ಣಮಹೀತಲಂ = ಗೊರಸಿನಿಂದ ಸೀಳಲ್ಪಟ್ಟ ಭೂಭಾಗ, ಸ್ಫುರಿತಾಂತಧ್ವಜ=ಚಲಿಸುತ್ತಿರುವ ಮುಂಭಾಗದ ಧ್ವಜವುಳ್ಳ, ಸಂವಾಹವಾಜಿ=ಏರುವಕುದುರೆ (ಸವಾರಿಕುದುರೆ)

ಚಂದ್ರಾಪೀಡನ ಪುನರಾಗಮನ

ವ॥ ಮೊದಲೊಳ್=ಬುಡದಲ್ಲಿ, ಮಿಳಿಸುತ್ತಿಂಗಗ್ಗಳ ಮಾಡಿ=ಚರ್ಮದಿಂದ ಮಾಡಿದ ಹಗ್ಗದ ಅಳತೆಯನ್ನೂ ಮೀರಿ, ಅಡೆಗೆಡೆದ=ಅಡ್ಡಲಾಗಿ ಬಿದ್ದಿರುವ, ಕೊಂಕುವೆತ್ತ=ವಕ್ರವಾಗಿರುವ, ಕಂಡರಿಸಿದ=ಕೊರೆದಿರುವ, ಕರಂಜ=ಹೊಂಗೆ, ಬಟ್ಟೆವೋಪರ್=ಮಾರ್ಗಸ್ಥರು, ಬಾಡುಂದಳಿರ್=ಬಾಡಿದ ಚಿಗುರು, ಎಲೆಗೊಳೆಯ ನೀರ್ಗಳ್=ಎಲೆಗಳಿಂದ ಕೊಳೆತ ನೀರು, ತೃಣಪುಲಿ=ಹುಲ್ಲಿನ ಕಂತೆ, ಪಟಿವಾಪಿಗೆ=ಹಳೆಯ ಬಾವಿ, ಪುದುವು=ಸಮೂಹ, ಅಱಲ್ಗೊಂಡು=ಬಾಯಾರಿ, ಅಱುಂಬನೀರ=ಚಿಲುಮೆಯ ನೀರಿನ, ಬಗರಗೆ=ಭಾವಿ,

೨. ವ॥ ಮುರಿಗೇಶ=ಗುಂಗುರು ಕೂದಲು, ಕರ್ಬೊನ್=ಕಬ್ಬಿಣ, ಅಗುರ್ವಿಸುವ=ಭಯಂಕರವಾಗಿ ಕಾಣುವ, ಚಂದನ ಚರ್ಚೆ=ಶ್ರೀಗಂಧದ ಕೆಸರು, ಎಮ್ಮೆವೋರಿ=ಕೋಣ, ಅರಿದಿಕ್ಕಿದ=ಕತ್ತರಿಸಿ ಹಾಕಿದ್ದ, ಪಂದಲೆ=ಹಸಿಯ ತಲೆ, ಅನೋಕಹ=ಮರ, ಕಿಶೋರಕೇಸರಿ=ಸಿಂಹದ ಮರಿ,

೩. ನಸುಗಂದಿದರ್=ಸ್ವಲ್ಪ ಮಾಸಿದ್ದ,

ಲಲಿತರಗಳೆ:—ಕರಿಗೊರಡು=ಸುಟ್ಟು ಕರಿಕಾದ ಮರದ ಮೋಟು. ಉಡು=ಉಡುಗಳು, ಅಡರ್ದವು=ಹತ್ತಿದುವು. ಸೆರೆಗಾಲ್=ನರಗಳಿಂದ ಕೂಡಿದ ಕಾಲು. ದಡ್ಡುಗಟ್ಟಿದ=

ಜಡ್ಡುಗಟ್ಟಿರುವ, ಕುಮತಿಸಿದ್ಧಾಂಜನ=ಬುದ್ಧಿಹೀನನು ಕೊಟ್ಟ ಸಿದ್ಧಾಂಜನ, ಡೋಣಿವೋಗಿರ್ದ=ಹರಿದುಹೋಗಿದ್ದ, ಸೆರೆದೆಗೆಯೆ=ನರ ಸೆಳೆದುಕೊಂಡಿರಲು, ಪೊಲ್ಲಿರ್ದ=ಹೊಲಿದಿದ್ದ, (ಚಂಡಿಕಾನುಗ್ರಹಾರ್ಥವಾಗಿ ಕೈಗೆ ಸೂಜಿಗಳನ್ನು ಚುಚ್ಚಿಕೊಂಡಿದ್ದರೆಂಬುದಭಿಪ್ರಾಯ) ಅಧ್ವಗ=ದಾರಿಹೋಕ, ಬಿಕ್ಕರಿನವೋಲ್=ಸೊಳ್ಳೆಯಂತೆ, ತುರಗಬ್ರಹ್ಮಚರ್ಯತೆ=ಕುದುರೆಯಂತೆ ನಿರ್ಬಂಧದಲ್ಲಿಡಲ್ಪಟ್ಟ ಬ್ರಹ್ಮಚರ್ಯ, ಪೋರ್ದು=ಹೊಡೆದಾಡಿ ಬಾದುಗೆಯ್ದು=ಜಗಳವಾಡಿ, ಕಡುಪು=ಕ್ರೌರ್ಯ, ಧಾಮಂಗಳಿಂ=ಕಾಂತಿಯಿಂದ, ಸೊಡರ್ವಾವು=ದೀಪದ ಹಾವು, ಬಭ್ರುರೋಚಿ=ಹೊಂಬಣ್ಣದ ಕಾಂತಿ, ಐಣನಿಕರ=ಜಿಂಕೆಯ ಸಮೂಹ,

೫. ತವಂಗ=ಪೀಠ,

೬. ಪಾಲಮುನ್ನೀರ್=ಕ್ಷೀರ ಸಮುದ್ರ,

೧೧. ಅರೆದುಱಗಿರ್ದ=ಅರ್ಧತುಂಬಿದ್ದ, ಇಡುವು=ಇಕ್ಕಟ್ಟು=ಮಧ್ಯಪ್ರದೇಶ, ಕಣ್ಗೆಯ್ದಿರೆ=ಮಲಗಿರಲು,

೧೨. ಪದಪು=ಪ್ರೀತಿ,

೧೩. ನನ್ನನ್ನೇ ಪೂರ್ಣವಾಗಿ ಆಶ್ರಯಿಸಿ ಕಾಲಕಳೆದಳು ಎಂಬುದು ಅಭಿಪ್ರಾಯ.

೩೪. ಕಣ್ಣಲಾಗೆನೆ = ಕ್ಷಣಮಾತ್ರದಲ್ಲಿ, ಪದವೆತ್ತ=ಅವಕಾಶವನ್ನು ಪಡೆದ, ಅನುರಾಗ ವಿಭ್ರಮಂ=ಪ್ರೀತಿಯ ವೈಭವ,

ವ|| ಪ್ರಾಗಲ್ಭ್ಯಂ=ಧೈರ್ಯ.

೩೫. ಬಂಧಕೀಧಾರ್ಷ್ಟ್ಯಂ=ವೇಶ್ಯೆಯ ಧೈರ್ಯ.

ವ|| ಅಖಿಲಜನಾವಿಭಾವ್ಯನಾಗಿ ಯಾರಿಗೂ ಕಾಣಿಸಿಕೊಳ್ಳದೆ, ವಿರಹಮರಣಭಯಹರಣ=ಅಗಲಿಕೆಯಿಂದುಂಟಾದ ಮರಣ ಭಯವನ್ನು ಹೋಗಲಾಡಿಸುವವನು,

೩೬. ಬರವಂ+ಪಾರದೆ-ಬರಪಾರದೆ=ಆತನ ಬರವನ್ನು ನಿರೀಕ್ಷಿಸದೆ, ದೂದವಿಯರಂ ಹರಿಸದೆ=ದೂತಿಯರನ್ನು ಕಳುಹಿಸದೆ, ಓಸರಿಸದೆ=ಹಿಂಜರಿಯದೆ,

೩೭. ಅವ್ರಣ=ಗಾಯವಿಲ್ಲದ, ನಾಣ್ಗೆಪಕ್ಕಾಗಿಸದೆ=ಲಜ್ಜೆಗೆ ಗುರಿಮಾಡದೆ. ಅಳಕೆ=ಮುಂಗುರುಳು

೩೮. ವ|| ನಿಜನಿಯೋಗಶೂನ್ಯಾರ್ಥಮಾಗಿ=ತಮ್ಮ ಊಳಿಗವನ್ನು ನಿಲ್ಲಿಸಬಾರದೆಂದು

೩೯. ಆತನುಶರಸಂತತಿಯಿಂ ಪುದಿದವೊಲಿರ್ದಳ್ ಅಂತೆ ಮುಗುಳೇಱದ ಚಂಪಕಲತೆವೊಲಿರ್ದಳ್.

೪೦. ಸನ್ನಿಧಮಾದಂತೆ=ಹತ್ತಿರವಿರುವ ಹಾಗೆಯೇ,

ವ|| ತೋರಸೀರ್ಪನಿಯ ಸರಿಯೊಳಂ=ದಪ್ಪವಾದ ನೀರಿನ ಹನಿಯ ಧಾರೆಯಿಂದಲೂ, ನಂದನ=ನಂದನವನದ, ಹರಿಚಂದನ = ಶ್ರೀಗಂಧದ ಚ್ಛಟಾ=ಧಾರೆಗಳ, ಘುರಣದೊಳಂ=ಸೇಚನೆ (ಚಿಮುಕಿಸುವುದು) ಯಿಂದಲೂ, ಎಡೆವರಿಯದೆ = ವಿಚ್ಛಿತ್ತಿ

ಯಿಲ್ಲದೆ, ಪುಡಿಗುಟ್ಟಿದ = ಚೂರ್ಣಮಾಡಿದ, ಮುತ್ತಿನಮುಟಲ್ಗಿದಱಿದ=ಮುತ್ತಿನ ಮರಳನ್ನು ಹರಡಿದ, ಕುಟ್ಟಿಮದೊಳಂ = ಭೂಪ್ರದೇಶದಲ್ಲಿಯೂ, ವಾರಿಧಾರೆಗಳಿಂ ಎಂತೆಂತುತಳ್ಪೊಯ್ವುದು ಅಂತಂತು ಅಗ್ಗಳಂ ಉರಿವುದು = ಜಲಯಂತ್ರಗಳಿಂದ ಎಷ್ಟೆಷ್ಟು ನೀರ ಹೊಡೆಯಲ್ಪಡುವುದೋ ಅಷ್ಟಷ್ಟು ಉರಿ ಹೆಚ್ಚುತ್ತಿರುವುದು.

೪೧. ಅಳಱುತ್ತವಿಸರ್ಪ = ವ್ಯಾಪಿಸುತ್ತಿರುವ, ಅಗ್ನಿಶೌಚವಸ್ತ್ರ = ಉಬ್ಬೆಗೆಹಾಕಿದ ಬಟ್ಟೆ.

೪೨. ವ॥ ಬೇವಸಂಬಡುತಿರ್ದಳ್ = ವ್ಯಥೆಪಡುತ್ತಿದ್ದಳು.

೪೩. ಮಂದೈಸಿ = ಸಾಂದ್ರವಾಗಿ, ಅಗಿದು = ಹೆದರಿ,

೪೪. ಕಂಟಕಶಯನವ್ರತಾಚರಣ = ಮುಳ್ಳಿನ ಹಾಸಿಗೆಯಮೇಲೆ ಮಲಗಿ ವ್ರತ ಮಾಡುವುದು.

೪೫. ಬಿದಿರ್ವಳ್ = ಕೊಡಹುವಳು, ಜೋವೇಱಿದ = ಬೆಂಡಾದ

ವ॥ ರಣರಣಕವ್ಯಥಾ = ಮನ್ಮಥ ವ್ಯಥೆಯ ನಿವಾರಣೆಗೋಸ್ಕರ, ಪಲ್ಲವಭಂಗಂ = ಚಿಗುರನ್ನು ಕೊಯ್ಯುವುದು, ಪೂವಾಸಿಗೆ = ಹೂವಿನ ಹಾಸಿಗೆಗೆ, ತಿಱುವರ್ = ಕುಯ್ಯುತ್ತಿದ್ದಾರೆ. ತಳಿರ್ಪೇಱಿದ = ಚಿಗುರಿನಿಂದ ಕೂಡಿರುವ, ಚಪ್ಪರಿಸುವಂತೆ = ಹೆದರಿಸುವಹಾಗೆ ಬೆಗಡುಗೊಂಬಳ್ = ಹೆದರುವಳು, ಸಹಕಾರಭೂರುಹ = ಮಾವಿನಮರ, ಜಡಿಪ = ತರ್ಜನೆ,

೪೬. ನಿಶೀಥಿನೀ = ರಾತ್ರಿ, ವಿಕಚೋತ್ಪಲಪತ್ರನೇತ್ರೆ = ಅರಳಿದ ಕನ್ನೈದಿಲೆಯದಳದಂತೆ ಇರುವ ಕಣ್ಣುಳ್ಳವಳು.

೪೭. ಪಱಿವಱಿಯಾಗು = ಬೇರೆಬೇರೆ ರೀತಿಯಾಗು.

೪೯. ಆಲೇಖ್ಯ = ಬರೆಯಲ್ಪಟ್ಟಿರುವುದು, ಚಿಂತಾರತಕ್ಕಾಟಿಸಿ = ಸಂಕಲ್ಪಸಮಾಗಮಕ್ಕೆ ಆತುರಪಟ್ಟು.

ವ॥ ನಳಿನಿ = ಕಮಲ, ಶೀತಕರ = ಚಂದ್ರ, ಕಮಲನಿಕರಸ್ಖಲಿತಪಾದ = ತಾವರೆ ಹೂವುಗಳನ್ನು ಎಡವಿದ ಕಿರಣವುಳ್ಳವಳು, ಕಂದಳಿಕೆ = ಬಾಳೆ.

೫೦. ಸೋನ್ಮಾದ = ಹುಚ್ಚಿನಿಂದ ಕೂಡಿದ, ಸಪ್ರಸಾದ = ಅನುಗ್ರಹಪೂರ್ವಕ, ಸನಿರ್ವೇದ = ಖೇದ ಸಹಿತವಾದ, ಸೋಪಾಲಂಭ = ತಿರಸ್ಕಾರಸಹಿತವಾದ, ಸಾವಷ್ಟಂಭ = ಆಶ್ರಯಪೂರ್ವಕ, ಸಾಭ್ಯುಪಗಮ = ಒಡಂಬಡಿಕೆಯಿಂದ, ಸಾಭ್ಯರ್ಥನ = ಪ್ರಾರ್ಥನಾ ಸಹಿತ, ದುಃಶ್ರವ = ಕೇಳುವುದಕ್ಕಾಗದ, ನಿಸರ್ಗ ಧೀರಪ್ರಕೃತಿ = ಸಹಜವಾದ ಧೈರ್ಯ ಸ್ವಭಾವ, ಪರ್ಯಾಕುಲ = ಕಲಕಿದ ಮನಸುಳ್ಳ.

೫೧. ಇನಿತು + ಪಿರಿದು > ಇನಿವಿರಿದು = ಇಷ್ಟು ದೊಡ್ಡದು.

ವ॥ ಶಲಾಕಾಕೀಲಿತ = ಸರಳಿನಿಂದ ಕೆದಕಲ್ಪಟ್ಟ.

೫೨. ತನಿಗೆತ್ತಲ್ = ವಿಶೇಷವಾಗಿ ನಡುಗಲು.

೫೪. ದುರ್ನಿವಾರ್ಯ ವಿರಹವೇದನೋನ್ಮಥ್ಯಮಾನಸಾಕುಲಮಪ್ಪ = ನಿವಾರಿಸು

ವುದಕ್ಕಾಗದ ವಿರಹವೇದನೆಯಿಂದ ಕಲಕಲ್ಪಟ್ಟ ಮನಸ್ಸಿನ ಚಿಂತೆಯಿಂದ ಕೂಡಿದ,

೫೭. ಕಾಮೋನ್ಮುಕ್ತ .... ಹತಿಯಿಂ=ಕಾಮನಿಂದ ಬಿಡಲ್ಪಟ್ಟ ಸಂಮೋಹನ ಬಾಣದ ಪೆಟ್ಟಿನಿಂದ.

ವ|| ಮಾನ ಕನಕಾಚಲಂ=ಆತ್ಮಾಭಿಮಾನದಲ್ಲಿ ಮೇರುಪರ್ವತದಂತಿರುವ ಚಂದ್ರಾಪೀಡ.

೫೮. ಮರ್ಯಾದೆ=ಎಲ್ಲೆ, ಗಾಂಭೀರ್ಯ>ಗೌರವ.

೫೯. ತೆರೆದೊಂಗಲ್ =ಅಲೆಗಳ ಸಮೂಹ, ಪೊರೆದಿರ್ದ=ಕೂಡಿಕೊಂಡಿದ್ದ, ಇರ್ಪುವೆತ್ತ=ದ್ರವವಿಶಿಷ್ಟವಾದ, ಎಳವುಳಿಲ್ದಾಣಂ = ಕೋಮಲವಾದ ಮರಳಗಡ್ಡೆ.

ವ|| ಊರುದಘ್ನ=ತೊಡೆಯ ವರೆಗಿರುವ,

೬೦. ಜವವಳಿಯದೆ=ಅತಿವೇಗವಾಗಿ, ಪೀಲಿದಟ್=ನವಿಲುಗರಿಯ ಛತ್ರಿ, ಅವಿಭಾವ್ಯ=ಗುರುತುಹಿಡಿಯುವುದಕ್ಕಾಗದವನು.

೬೧. ಪದಂಪು=ಪ್ರೀತಿ,

೬೨. ಬರ್ಪವಸರದೊಳ್ ಒಂದು ಸಂದೇಶಂ ನಿರವಿಸಿದುದುಂಟೆ ಎಂಬುದು ಅನ್ವಯ.

೬೩. ಅರ್ದಿತಳಾದಂತೆ=ದುಃಖದಿಂದ ಕೂಡಿದವಳ ಹಾಗೆ.

೬೪. ಭವದ್ವಿಧರ್ =ನಿಮ್ಮಂಥವರು. ನಿರರ್ಥಕರ್ =ಅಪ್ರಯೋಜಕರು, ಅಶ್ರುಪಿಹಿತ=ಕಣ್ಣೀರಿನಿಂದ ಮುಚ್ಚಲ್ಪಟ್ಟ

೬೫. ವ|| ನಿಶ್ಚೇತನಮಪ್ಪ=ಜಡವಾದ, ಚಂದ್ರಕಾಂತದ ಪಾಷಾಣಕ್ಕೆ=ಚಂದ್ರಕಾಂತ ಶಿಲೆಗೆ, ಆರ್ದ್ರಭಾವೋಪಗಮನಂ=ಆರ್ದ್ರಭಾವವನ್ನು ಪಡೆಯುವುದು, ಆಯತ್ತವಲ್ಲದೆ=ಅಧೀನವಾಗಿರುವುದೇ ಹೊರತು, ತತ್ಕರಾಕರ್ಷಣಂ=ಆ ಚಂದ್ರನ ಕಿರಣಗಳನ್ನು ಆಕರ್ಷಣಮಾಡುವುದು, ದೊರಕೊಳದು ಅಂದರೆ ಜಡವಾದ ಪಾಷಾಣವೂ ಕೂಡ ತನಗೆ ಪ್ರಿಯವಾದ ಚಂದ್ರನನ್ನು ಕರದಿಂದ ಆಕರ್ಷಿಸಲಿಲ್ಲವೆಂದಾಗ ವಿವೇಕಿಯಾದ ಕಾದಂಬರಿಯು ನಾಚಿಕೆಯನ್ನು ತೊರೆದು ಸಕೃತ್ಪರಿಚಿತನಾದ ನನ್ನನ್ನು ಹೇಗೆ ಬರಮಾಡಿಕೊಂಡಾಳು ಎಂಬುದು ಅಭಿಪ್ರಾಯ; ಕುಮುದಾಕರಕ್ಕೆ = ಕುಮುದಗಳ ಸಮೂಹಕ್ಕೆ, ಉನ್ಮುಖತೆ = ಚಂದ್ರಾಭಿಮುಖತ್ವವು, ರಜನಿಯ ಕಯ್ಯೆಡೆ ವಲಂ= ರಾತ್ರಿಯ ಅಧೀನವಾಗಿರುತ್ತದೆ. ಅಂದರೆ ಕಾದಂಬರಿಯ ಕೋರಿಕೆಯು ಅಸ್ತುರ ಸಹಾಯವಿಲ್ಲದೆ ನೆರವೇರದು ಎಂಬುದು ಅಭಿಪ್ರಾಯ.

೬೭. ಬಟಿಂಸಲಲ್=ಹಿಂದೆ ಹೋಗುವುದು.

೬೮. ಕಾಯೆಂ=ಕಾವನ್ನುಂಟುಮಾಡುವುದಿಲ್ಲ>ನೋಯಿಸುವುದಿಲ್ಲ, ಕಾಯ್ದಪೊನ್ನೀರ್=ಕಾಸಿದ ಚಿನ್ನದ ನೀರು, ಕವಿಲ್ ಕೆಂಪು=ಕಪಿಲವರ್ಣದ ಕೆಂಪು, ಅಹಿಮರುಚಿ=ತೀಕ್ಷ್ಣಕಿರಣ, ತಿಗ್ಮರುಜ್ಮಾಲಿ ಬಿಂಬಂ=ಸೂರ್ಯಬಿಂಬ.

ವ|| ಸಾರಂಗಪಟ್ಟೆ=ಕೆಂಪುಬಟ್ಟೆ, ಗಂಧರ್ವರಾಜನಂದನಾಭೀಕ್ಷಣಕ್ಕೆ=ಕಾದಂ

ಬರಿಯ ದರ್ಶನಕ್ಕೆ,

೭೯. ಅಭಿಷವವಿಧಿ=ಅಭಿಷೇಕವಿಧಿ, (ಕಾರ್ಯ) ಚಂದ್ರಿಕಾವಾರಿ=ಬೆಳುದಿಂಗಳ ನೀರು, ದಂತಪತ್ರ=ದಂತದ ಓಲೆ

೭೧. ಮನದನ್ನರ್=ಪ್ರೀತಿಪಾತ್ರರಾದವರು, ನಿಲೆಪಿಡಿವ=ನಿಲ್ಲಿಸಿಕೊಳ್ಳುವ> ಬದುಕುವ

೭೨. ಸಂವರಿಸಲ್=ಸಮಾಧಾನಮಾಡಲ್, ನಿತ್ತರಿಸರ್=ನಿರ್ವಹಿಸುತ್ತಾರೆ,

ವ|| ಬವಸೆ=ವ್ಯವಸಾಯ.

೭೪. ವ|| ಕರತಳವರ್ತಿಯಾದುದು=ಹಸ್ತಗತವಾಯಿತು, ಕೇಯೂರಕವಪ್ಮ=ತೋಳಬಳೆಯಿಂದ ಅಲಂಕೃತನಾದ ಚಂದ್ರಾಪೀಡ.

೭೭. ಬೀಳುಕ್ಕೊಳಿಪ ಒಂದು ಭವತ್ಪ್ರಸಾದಮಂ ಪದೆದಾಸೆಗೆಯ್ವುದು=ನನ್ನನ್ನು ಕಳುಹಿಸಿಕೊಡುವ ನಿಮ್ಮ ಅನುಗ್ರಹವನ್ನು ಆಸೆಪಡುತ್ತದೆ. ಅಂದರೆ ನನ್ನನ್ನು ಕಳುಹಿಸಿಕೊಡುವ ಅನುಗ್ರಹವನ್ನು ಮಾಡಬೇಕು.

೭೯. ಇವಳ್ ಪಸಾಯಿತೆ ಮನೋಹರಿಗೆ=ಕಾದಂಬರಿಗೆ ಇವಳು ಪ್ರೀತಿ ಪಾತ್ರಳು.

೮೦. ಆಜ್ಞಾಕ್ಷರಮನೆ ಬೆಸಗೊಳ್ವೆಂ=ಅಪ್ಪಣೆಯನ್ನೇ ನಿರೀಕ್ಷಿಸುತ್ತಿದ್ದೇನೆ.

೮೨. ಅಳೀಕ ಲಜ್ಜೆಯಿನೇಂ=ಕಪಟಲಜ್ಜೆಯಿಂದೇನು ಪ್ರಯೋಜನ.

೮೪. ತದ್ಗುಣೋತ್ಕರಮಂ (ಮತ್) ದೋಷೋತ್ಕರಂ ಏರ್ವಟ್ಟಿತ್ತು ಎಂಬುದನ್ವಯಂ--ಇವಳ ಗುಣರಾಶಿಯನ್ನು ನನ್ನ ದೋಷರಾಶಿಯು ಮೀರಿಸಿತು ಎಂಬುದು ಭಾವ.

೮೫. ನನ್ನಲ್ಲಿ ಯಾವ ಗುಣಲೇಶವಿದೆಯೆಂದು ನನ್ನನ್ನು ಪರಿಗ್ರಹಿಸು ಎಂದು ಕೇಳಲಿ; ಆವಳು ತಾನೆ ನನ್ನನ್ನು ಆದೇನೆಂದು ಅಂಗೀಕರಿಸುವಳು.

೮೬. ಪ್ರತಾರಿಸಿದವಂ=ವಂಚಿಸಿದವನು.

ವ|| ಅಕಾಲೋಪಸರ್ಪಣಕೋಪ=ಆ ಕಾಲದಲ್ಲಿ ಅನುಸರಿಸಿ ಬರುವ ಕೋಪ.

೮೮. ಅಳುಂಬ=ಅಸಾಧ್ಯವಾದುದು. ಅನ್ಯರ ಪೇಟ್ವಿಯದೆಂಬ ಬಟ್ಟೆ=ಬೇರೆಯವರು ಹೇಳಿದ ಮಾರ್ಗ.

೮೯. ವಲ್ಲಭತರ=ಅತಿಪ್ರಿಯವಾದುದು.

೯೦. ವಪುರಾಲೇಖ್ಯ=ಶರೀರವೆಂಬ ಭಾವಚಿತ್ರದ, ಪ್ರಭಾ=ಕಾಂತಿಯನ್ನು, ಉನ್ಮೀಲನ=ಪ್ರಕಾಶನಮಾಡುವ, ಅಂಜನ ರುಗ್ಲೇಖೆ=ನೀಲವರ್ಣದ ಜೀವರೇಖೆ,

ವ|| ಅಂತರವಾಗಿರ್ಪುದು=ತಡೆಯಾಗಿದೆ. ಉತ್ಥಿತನಾಗಿ=ಮೇಲಕ್ಕೆದ್ದು.

೯೩. ವಧೂವಿಲೋಕನ ಸುಖಕ್ಕೆಂದುಂ ಪದೆಯುತ್ತಿರ್ದೆ=ಸೊಸೆಯ ಮುಖಾವಲೋಕನ ಸುಖಕ್ಕೆ ಯಾವಾಗಲೂ ಆಸೆಪಡುತ್ತಿದ್ದೆ. ಕುಮಾರ ವದನ ಶ್ಮಶ್ರೂದ್ಗಮಂ ವಿವಾಹೋತ್ಸವಕ್ಕೆ ಆಗ್ರಹಮಂ ಮಾಡಿದಪ್ಪುದು=ಕುಮಾರನ ಮುಖದ ಮೀಸೆಯ ವೈಭವವು ವಿವಾಹವನ್ನೇಕೆ ಮಾಡಲಿಲ್ಲವೆಂದಾಕ್ಷೇಪಿಸುತ್ತಿದೆ. ಕೂರ್ಪುದಿಲ್ಲಾಗದೆ=ಪ್ರೀತಿಸುವುದಿಲ್ಲವೆಂದಾಗುವುದಿಲ್ಲವೆ?

ವ॥ ಪ್ರತ್ಯುದ್ಗಮನ=ಹಿಂತಿರುಗುವಿಕೆ, ಯಾಮಿನೀಯಾಮದ್ವಯ=ರಾತ್ರಿಯ ಎರಡು ಜಾವ.

೯೫. ಮೇಗೆನಿಸಿರ್ದ = ಉತ್ತಮವೆನಿಸಿಕೊಂಡಿರುವ, ರೋದಸೀ ಭಾಗ= ಭೂಮ್ಯಂತರಿಕ್ಷಗಳ ಭಾಗ, ತಗುಳೆ=ಆಕ್ರಮಿಸುತ್ತಿರಲು.

೯೭. ರಥ್ಯೆ=ರಾಜಮಾರ್ಗ, ಓಳಿವೆಳ್ಪು=ಸಾಂದ್ರವಾದ ಬೆಳುಪು.

೯೮. ಪಱಿಗಲ್=ಹರಿಗೋಲು, ದೋಣಿ,

೯೯. ಉತ್ತಾರರಾಗಂ=ಗಟ್ಟಿಯಾದ ಶಬ್ದವುಳ್ಳ, ತ್ರಿಭುವನಭವನೋದ್ಭೇದಿ= ಮೂರು ಲೋಕಗಳೆಂಬ ಭವನಗಳನ್ನು ಭೇದಿಸತಕ್ಕ

೧೦೦. ಜಟಲಿತ ತನು=ವ್ಯಾಪ್ತವಾದ ಶರೀರವುಳ್ಳ,

ವ॥ ಪಲ್ಲಟಿಸಿದ=ಜೀನುಹಾಕಿದ, ಗೃಹೀತ ಸಮಾಯೋಗನಾಗಿ=ಗಂಧಮಾಲ್ಯಾದಿಗಳನ್ನು ಪರಿಗ್ರಹಿಸಿದವನಾಗಿ,

೧೦೧. ತಿಲಕಿತ ಭುವನ=ಭೂಮಿಗೆ ಶ್ರೇಷ್ಠನಾದ ಚಂದ್ರಾಪೀಡ,

ವ॥ ತ್ರಸ್ತ ಹಂಸಸಾರ್ಥೋತ್ಪಲವ್ಯತಿಕರ=ಬೆದರಿದ ಹಂಸ ಮತ್ತು ಕನ್ನೈದಿಲೆಯ ಮೊಗ್ಗುಗಳಿಂದ ಕೂಡಿದ (ಅಸ್ತವ್ಯಸ್ತವಾಗಿ ಬೆರಸಿಕೊಂಡಿದ್ದ)

೧೦೩. ರಜನೀತಿರಸ್ಕರಣಿ = ರಾತ್ರಿಯೆಂಬ ತೆರೆ, ವ॥ ಗವ್ಯೂತಿ=ಒಂದು ಅಳತೆ.

೧೦೬. ವಿಹತ ಯೂಥಪತಿಯಪ್ಪ ಕರಿ ಕಳಭದಂತೆ=ಸಲಗವನ್ನು ಕಳೆದುಕೊಂಡ ಆನೆಯ ಮರಿಯಂತೆ.

೧೧೨. ಕರುವಿಟ್ಟರೊ=ಎರಕಹೊಯ್ದರೊ,

೧೧೩. ಇಕ್ಕುವಟ್ಟನವೋಲ್ = ಪ್ರತಿಹತನಾದಂತೆ > ಹೊಡೆಯಲ್ಪಟ್ಟವನ ಹಾಗೆ. ನಿಷ್ಪಂದ=ಚಲಿಸದಿರುವ, ವ॥ ಅನುವಿಸಲ್ = ಸಮಾಧಾನಪಡಿಸಲು, ಬೆಟ್ಟವೆಟ್ಟರಾಗಿ ಪಱಿಸಡೆ=ಚೆಲ್ಲಾಪಿಲ್ಲಿಯಾಗಿ ಓಡಿಹೋಗುವ ಹಾಗೆ

೧೧೮. ಪಱಿಪಟ್ಟುದನ್=ಹರಿದು ಹೋದುದನ್ನು

೧೨೦. ಪುರುಷಾರ್ಥ ತ್ರಿತಯ=ಧರ್ಮ, ಅರ್ಥ, ಕಾಮ, ವ॥ ಬಲಕೆಯ್ದು= ದೃಢಪಡಿಸಿಕೊಂಡು,

೧೨೨. ವ॥ ಪ್ರತ್ಯಾನಯನ=ಹಿಂದಕ್ಕೆ ಕರೆದು ತರುವುದು.

೧೨೩. ಬಾಳದ ಬೇರು=ಲಾಮಂಚದ ಬೇರು, ಕೇರ್ಗಳ್=ತಡಿಕೆಗಳು

೧೨೫. ದಿನಾಬ್ಧಿಯಂ=ಹಗಲೆಂಬ ಸಮುದ್ರವನ್ನು ಧೈರ್ಯಮೆಂಬ ಭೈತ್ರದಿಂ= ಹಡಗಿನಿಂದ, ತರಿಯಿಸಿದಂ=ದಾಟಿದನು.

೧೩೪. ಮೆಯ್ವಟಿಯಿಂದಮೆ=ಸಲುಗೆಯಿಂದಲೆ,

೧೩೮. ಮುಂತಿದಂ = ಈ ಅಪರಾಧವನ್ನು, ತೊಟ್ಟನೆಲ್ = ಅಕಾರಣವಾಗಿ ಪೆಸರ್ಪುದೇ=ದೂಷಿಸುವುದೇ.

ಆರಮೆ=ವಿಶೇಷವಾಗಿ, ತಮ್ಮಾರಾಧ್ಯರೆ=ತಮಗೆ ಪೂಜ್ಯರಾದವರೆ,

೧೪೩. ಎತ್ತರಿಸಂ=ಉದ್ಧಾರವಾಗುವುದಿಲ್ಲ. ಎರಡಿಲ್ಲದೆ=ಸಂದೇಹವಿಲ್ಲದೆ> ಇವಂ ಇರ್ ವಿಜಾತಿ ಪುಟ್ಟದೆ ಮಾಣಂ = ತಿರ್ಯಗ್ಜಾತಿಯಲ್ಲಿ ಹುಟ್ಟದೆ ತಪ್ಪುವುದಿಲ್ಲ.

೧೪೪. ಆವಿಳಮೆನಿಸಿರ್ಪುದು = ಕಲುಷಿತವಾಗಿರುತ್ತದೆ.

೧೪೭. ಪರ್ಚಿ=ಗುಟ್ಟಾಗಿ ಹೇಳಿ.

೧೫೦. ವ|| ಲಬ್ಧಗಮನಾಭ್ಯನುಜ್ಞನಾಗಿ = ಹೊರಡಲುಒಪ್ಪಿಗೆಯನ್ನು ಪಡೆದು,

೧೫೩. ವ|| ರಯಾನುಗಾಮಿ = ವೇಗವನ್ನನುಸರಿಸಿ ಓಡುವ,

೧೫೬. ಅಲಂಪಳಿಯಾಗೆ= ಪ್ರೀತಿ ಹೆಚ್ಚಾಗಲು,

೧೫೮. ಬಾಯ್ವಾಯೊಳಿತ್ತು = ಬಾಯಲ್ಲಿ ಬಾಯಿಮಡಗಿ ಕೊಟ್ಟು.

ಚಂದ್ರಾಪೀಡನ ಪ್ರಾಣ ವಿಯೋಗ

ವ|| ಅಕೃತ ಪರಿಲಂಬನಾಗಿ = ಕಾಲ ವಿಳಂಬಮಾಡದವನಾಗಿ.

೬. ನಾಣ್ಪೊಡರೆ= ಲಜ್ಜೆಯು ಹೆಚ್ಚಲು.

೧೩. ಕಾಲಾಯಸಗೃಹವರಣಂ= ಕಬ್ಬಿಣದ ಮನೆಯೊಳಗೆ ಸೇರುವಿಕೆ. ಅವಮೆ= ಅಮಾವಾಸ್ಯೆ,

೧೫. ಶಾಲೂರಸಂಘಂ = ಕಪ್ಪೆಗಳ ಸಮೂಹ, ಪೂರವಾರಂ = ಪ್ರವಾಹಗಳ ಸಮೂಹ, ಬಿಗುರ್ವಂತೆ=ಭಯಪಡುವ ಹಾಗೆ, ರುತ=ಶಬ್ದ,

೧೫. ನುಣ್ಪಸಲೆಯೊಳ್ = ಎಳೆಯ ಗಱಿಕೆಯಿರುವ ಸ್ಥಳದಲ್ಲಿ, ಯಥಾಸಾರ ನಿಪಾತಂ = ಧಾರಾಸಂಪಾತವನ್ನನುಸರಿಸಿ, ಧಾರಾರವಂ=ಜಲಧಾರೆಯ ಸದ್ದು.

೧೯. ವ|| ಯಥಾಸ್ಥಿತ ಪರ್ಯಾಣಕ = ಮೊದಲ ಹಾಗೆಯೇ ಜೀನಿನಿಂದ ಕೂಡಿದ್ದ,

೨೨. ಅದುಃಖ ಶ್ರವಣಾರ್ಹನಂ=ದುಃಖವನ್ನು ಕೇಳುವುದಕ್ಕೂ ಅರ್ಹನಲ್ಲದ, ಅತ್ರಪಾಕ್ಕೆ=ದಯಾಶೂನ್ಯಳು. ದುಶ್ರವ = ಕೇಳಬಾರದು.

ವ|| ತೊಡರ್ಪು=ಸಂಬಂಧ.

೨೬. ಸೀರ್ಪುಲ್ಲೆಸೆವನ್ನಂ = ಒಂದು ಸಣ್ಣ ಹುಲ್ಲಿಗೆ ಸಮಾನವಾಗುವಂತೆ ಶೋಭಿಸಿ> ಕಾಂತಿಯುಕ್ತವನ್ನಾಗಿ ಮಾಡಿ,

೨೭. ಅದ್ವಯ ಮಪ್ರತರ್ಕ್ಯಂ=ಎರಡನೆಯದಿಲ್ಲದುದೂ ಊಹಿಸುವುದಕ್ಕಾಗದುದೂ.

೨೯. ವ|| ಅಪೇತಕೌತುಕೆ=ಕುತೂಹಲ ರಹಿತಳು, ಅಪಗತಸುಖ = ಸುಖ ವಿಹೀನಳು

೩೨. ಕಣ್ಬೊಲದೊಳ್=ಕಣ್ಣೆದುರಿಗೆ,

೩೫. ಸಮೀಹಿತಂ=ಮನೋರಥ> ಇಷ್ಟಾರ್ಥ,

ವ|| ದುರ್ಜೀವಿಕಾಗೃಹೀತೆಯಂ = ಕೆಟ್ಟ ಪ್ರಾಣಗಳನ್ನು ಧರಿಸಿರುವವಳನ್ನು,

ಅಲಜಾಲ=ಮಿಥ್ಯಾಭಿಲಾಷೆ>ನಿಜವಾಗದ ಆಸೆ, ವಶ್ಯವ್ಯತಿಕರಣ=ವಶ್ಯಮಂತ್ರ ಪ್ರಯೋಗ, ಮಧ್ಯಶಿಲಾತಲಕಟ್ಟಲೆಂದು ಕಟ್ಟುಗಳಂತೆ = ಮಲಗಿದ್ದ ನನ್ನನ್ನು ಕಟ್ಟಿ ಹಾಕಲು ಕಟ್ಟಿದ ದಿಗ್ಬಂಧನದ ಕಟ್ಟುಗಳಂತೆ, ನೀರ್ಗೊಟ್ಟಪನೆಂಬಂತೆ = ತರ್ಪಣ ಮಾಡಿಕೊಳ್ಳುತ್ತಿರುವ ಹಾಗೆ, ಇದಿರಮನಮೇನೆಂದಱಿಯದೆ=ಪರರ ಮನಸ್ಸೇಥಾದ್ದೆಂಬು ದನ್ನು ತಿಳಿಯದೆ, ಎನ್ನ ಕೈವಿಡಿಯಲೆಂದು ಮಿಂದನೆಂಬಂತೆ=ನನ್ನ ಪ್ರಾಣಿಗ್ರಹಣಮಾಡ ಬೇಕೆಂದು ಮಂಗಳಸ್ನಾನ ಮಾಡಿದವನಂತೆ

೩೭. ಇವನೆನ್ನ ಕಯ್ಯಲೊಳಂ ಬಂದು ಮುಟ್ಟಲೊಡಂ ಅಸುವಂ ಸತ್ತುವಿಡ ಲ್ವೇಟ್ಟುಂ ಎಂಬುದು ಅನ್ವಯ.

೪೧. ಅಂತಾಗೆ=ಹಾಗೆ ನಿನ್ನ ಶರೀರವು ಪಂಚಭೂತಮಯವಾಗಿದ್ದ ಪಕ್ಷದಲ್ಲಿ

೪೩. ನಿಜಾಘದುರ್ವಹ ಪರಿಪಾಕದಿಂ=ಸಹಿಸಲಸಾಧ್ಯವಾದ ತನ್ನ ಪಾಪದ ಫಲ ವಾಗಿ; ಪೊಂದಿದಂ=ಸತ್ತನು.

೪೫. ವ|| ಉದಧಿ ವೇಲೆ=ಸಮುದ್ರದ ಅಲೆ.

೪೬. ಸಾರ್ತಂದವಂ ಕಾಲ್ವಿಡಿದೊಡಮೊಸೆಯೆಂ = ಹತ್ತಿರ ಬಂದು ಕಾಲುಕಟ್ಟಿ ಕೊಂಡರೂ ಅವನನ್ನು ಪ್ರೀತಿಸುವುದಿಲ್ಲ.

೪೭. ಅಂತರ್ಮನ್ಯುಭಾರಾತಿ ಮಂಥರೆ = ಒಳದುಃಖದ ಭಾರದಿಂದ ವಿಶೇಷ ಜಡಗಳಾದ>ಕುಗ್ಗಿ ಹೋಗಿದ್ದ,

೫೧. ಸಾವೆಮ=ಸತ್ತುಹೋಗಲಿ>ಸಾಯಲಿ. ನೀನೆನಗೆ ಕೂರ್ಪುದು ನಿಕ್ಕುವ ಮಾದೊಡೆ=ನೀನು ನನ್ನನ್ನು ಪ್ರೀತಿಸುವುದು ನಿಜವಾದರೆ,

೫೯. ಉತ್ಪುಂಜ್ಯಮಾನ ಪುಲಕಸೀಕರೆಯುಂ = ಒತ್ತಾಗಿ ರಾಶಿಮಾಡಲ್ಪಟ್ಟ ಬೆವರಿನ ಸಮೂಹವುಳ್ಳವಳೂ. ಅಸಮಸಾಧ್ವಸೋತ್ಕಂಪಮಾನಾಂಗಿಯೂ=ಹೋಲಿಸು ವುದಕ್ಕಾಗದಷ್ಟು ಭಯದಿಂದ ನಡುಗುತ್ತಿರುವವಳೂ, ಅಮಂದಬಾಷ್ಪವೇಗ ಪ್ರಕ್ಷಾಳಿತ ವದನೆಯುಂ=ಅತ್ಯಧಿಕವಾದ ಕಣ್ಣೀರಿನ ವೇಗದಿಂದ ತೊಳೆಯಲ್ಪಟ್ಟ ಮುಖವುಳ್ಳವಳೂ,

೬೦. ಅಮೃತಾಸಾರ=ಅಮೃತದ ಮಳೆ. ಸುಧಾಂಶುಮಯೂಖೋಜ್ವಲಂ= ಚಂದ್ರನ ಕಿರಣದಷ್ಟು ಉಜ್ವಲವಾದ ಕಾಂತಿಯುಳ್ಳದು, ಹೈಮ ಪ್ರಭಾಮಂಡಳಂ= ಹಿಮದಷ್ಟು ಬೆಳ್ಳಗಿರುವ ಕಾಂತಿಯ ಸಮೂಹ,

೬೨. ವ|| ಮಂದೀಕೃತ ಮರಣವ್ಯತಿಕರರ್=ಸಾಯಬೇಕೆಂದಿದ್ದ ಕಾರ್ಯವನ್ನು ತಡೆದಿರುವರು

೬೮. ವ|| ಅಸ್ಮನ್ಮಯೂಖ ಸಂಭವೆಯರ್=ನನ್ನ ಕಿರಣಗಳಿಂದಲೇ ಹುಟ್ಟಿದವರು, ಅಪಗತಾಮರ್ಷಣ=ಅಸೂಯಾರಹಿತನಾಗಿ,

೬೯. ವ|| ವಯಸ್ಯಶೋಕಾಂಧನೆಂ = ಸ್ನೇಹಿತನ ದುಃಖದಿಂದ ಕುರುಡನಾಗಿ ದ್ದೇನೆ. ಮಜ್ಜನ್ಮೆಯ್ಗೆಸಲ್ವಸಮಯದೊಳ್ = ಪುನರ್ಜನ್ಮ ತಾಳುವಾಗ,

೭೦. ವ|| ಕುವಲಾಯಾನಂದಕರನ್ = ಭೂಮಿಗೆ ಸಂತೋಷವನ್ನುಂಟು

ಮಾಡುವವನು.

೭೧. ವ|| ಜನ್ಮಾಂತರಾವಿಸ್ಮೃತಮದನುರಾಗ = ಬೇರೆ ಜನ್ಮದಲ್ಲಿಯೂ ನನ್ನ ಪ್ರೀತಿಯನ್ನು ಮರೆಯದವನೇ, ಮತ್ಪ್ರತಿಬದ್ಧಜಿವಿತ=ನನ್ನಲ್ಲಿಯೇ ಕೇಂದ್ರೀಕರಿಸಿದ ಜೀವನವುಳ್ಳವನೇ.

೭೩. ವ|| ಅಭಿಲಕ್ಷಿತಸಿದ್ಧಿ=ಇಷ್ಟಾರ್ಥಸಿದ್ಧಿ, ಅನುಬಂಧಿಸುವುದು=ಮುಂದು ವರಿಸುವುದು

೭೫. ಕರಣೀಯ=ಮಾಡಬೇಕಾದುದು,

೭೬. ಸನ್ನಿದಮುಪ್ಪುದು = ಸಮೀಪವಾಗುವುದು,

೭೮. ವ|| ಅವಹಿತ ಉತ್ಪಕ್ಷ್ಮ ನಿಭೃತದೃಷ್ಟಿ=ತೆರೆದ ರೆಪ್ಪೆಗಳಿಂದ ಸ್ಥಿರವಾಗಿ ಇಡಲ್ಪಟ್ಟ ದೃಷ್ಟಿ>ಅಂದರೆ ಕಣ್ಣು ಮುಚ್ಚದೆ ನೆಟ್ಟದೃಷ್ಟಿಯಿಂದ ನೋಡುತ್ತಿರುವ

೮೦. ವಿವಿಧ ವೈಪಥ ಪಾಂಸುಗಳಿಂದ = ನಾನಾ ರೀತಿಯ ಅರಣ್ಯಮಾರ್ಗದ ಧೂಳಿನಿಂದ, ಸೀಟಿದ ತಲೆ=ಕೆದರಿದ ಕೂದಲು, ಮಲಿನ ಮಾದಪಟಚ್ಚರಮುಂ=ಕೊಳೆ ಯಾದ ಬಟ್ಟೆಯೂ, ಬೇವಸದ ಬೀಡು = ದುಃಖಕ್ಕೆ ಆಕರ, ಎಂಬುದಂ ನೆಗಟ್ಟಿಲ್ ಲೇಖವಾಹನಿಕರಂ ಬರೆ ಕಂಡನಿಳಾಧಿನಾಯಕಂ.

೮೪. ಮಗನಾದನೆನಿಸ್ಪವರ್ಗೀ ನೆಗಟ್ತೆ=ಮಗನಿಂದ ಆಗತಕ್ಕ ಪ್ರಯೋಜನ ವನ್ನು ಪಡೆಯುವವರಿಗೆ ಈ ನಡತೆ. ಅಂದರೆ ಅವರ ಹಾನಿವೃದ್ಧಿಗಳನ್ನು ವಿಚಾರಿಸುವುದ ರಿಂದಾಗುವ ಸುಖದುಃಖಗಳು ನನಗೇಕೆ—ಸಾವನ್ನೆಗಂ = ನಾನು ಸಾಯುವುದರೊಳಗೆ ಸುಹೃದ್ದು: ಖಾಪನೋದನಾರ್ಥಂ=ಸ್ನೇಹಿತನ ದುಃಖವನ್ನು ಕಳೆಯುವುದಕ್ಕಾಗಿ.

೮೬. ಉಗ್ರವಿಷ ಪ್ರಸುಪ್ತನ್=ಘೋರವಾದ ವಿಷದಿಂದ ಮಲಗಿದ್ದವನು, ಧ್ಯಾನ ದಿಂದ ಯಾವುದು ಬೇಕಾದರೂ ಸಾಧ್ಯವಾಗಬಹುದೆಂಬುದು ಭಾವ,

೮೭. ಇಲ್ಲಿಯ ಪೂರ್ವಕಥೆಗಳನ್ನು ತಿಳಿಯಿರಿ.

ನಹುಷ ಅಜಗರನಾದುದು :— ಈತನು ಚಂದ್ರವಂಶದ ದೊರೆ. ಊರ್ವಶೀ ಪುರೂರವರ ಮಗನಾದ ಆಯುರಾಜನಿಂದ ಸ್ವರ್ಭಾನುವೆಂಬುವಳಲ್ಲಿ ಜನಿಸಿದವನು. ಈತ ವಿರಜೆಯೆಂಬುವಳನ್ನು ಮದುವೆಯಾಗಿದ್ದ. ಈತನಿಗೆ ಯತಿ, ಯಯಾತಿ, ಸಂಯಾತಿ, ಅಯತಿ, ಆಯತಿ ಎಂಬ ಆರುಮಕ್ಕಳಿದ್ದರು. ಇಂದ್ರನು ವೃತ್ರಾಸುರ ವಧೆಯಿಂದುಂಟಾದ ಬ್ರಹ್ಮಹತ್ಯಾದೋಷವನ್ನು ನೀಗುವುದಕ್ಕಾಗಿ ತನ್ನ ಪದವಿಯನ್ನು ತ್ಯಜಿಸಿ ಎಲ್ಲಿಯೋ ಹೋದನು. ಆಗ ದೇವತೆಗಳೆಲ್ಲರೂ ಬ್ರಹ್ಮನ ಹತ್ತಿರಕ್ಕೆ ಹೋಗಿ ದೇವಲೋಕಕ್ಕೆ ಅಧಿ ಪತಿಯೇ ಇಲ್ಲವೆಂದು ಹೇಳಿದಾಗ ಚತುರ್ಮುಖನು ಭೂಲೋಕದಲ್ಲಿರುವ ನಹುಷನನ್ನು ಆ ಸ್ಥಾನದಲ್ಲಿಟ್ಟುಕೊಳ್ಳಿರೆಂದು ಹೇಳಿದನು. ಅವರ ಬಲಾತ್ಕಾರದಿಂದ ನಹುಷನು ಇಂದ್ರ ಪದವಿಯನ್ನು ಸ್ವೀಕರಿಸಿದನು. ಇಷ್ಟರಲ್ಲಿ ಇಂದ್ರನು ವಿಷ್ಣುವಿನ ಸೂಚನೆಯಂತೆ ಅಶ್ವ ಮೇಧ ಯಾಗವನ್ನು ಮಾಡಿ ಆತ್ಮಾಹತ್ಯಾದೋಷವನ್ನು ನೀಗಿಕೊಂಡು ದೇವರಾಜಪಟ್ಟಕ್ಕೆ ಯೋಗ್ಯನಾದನು. ಈ ವೇಳೆಗೆ ಸರಿಯಾಗಿ ನಹುಷನು ಇಂದ್ರನ ರಾಣಿಯಾದ ಶಚೀದೇವಿ

ಯನ್ನು ಕೂಡಬೇಕೆಂಬ ದುರಭಿಲಾಷೆಯಿಂದ ಅವಳಿಗೆ ಹೇಳಿ ಕಳುಹಿಸಿದನು. ಅವಳು ಸ್ವಲ್ಪ ಯೋಚಿಸಿ ನೀನು ಅಪೂರ್ವವಾದ ವಾಹನದಲ್ಲಿ ಬಂದರೆ ನಾನು ನಿನ್ನ ವಶವರ್ತಿಯಾಗುತ್ತೇನೆಂದು ಹೇಳಿ ಕಳುಹಿಸಿದಳು. ನಹುಷನು ಸಪ್ತರ್ಷಿಗಳನ್ನು ವಾಹಕರನ್ನಾಗಿ ಮಾಡಿಕೊಂಡು ಪಲ್ಲಕಿಯಲ್ಲಿ ಕುಳಿತು ಶಚಿಯಲ್ಲಿಗೆ ಹೊರಟನು. ಸಪ್ತರ್ಷಿಗಳೊಂದಿಗೆ ಅಗಸ್ತ್ಯರೂ ಪಲ್ಲಕ್ಕಿಯನ್ನು ಹೊರುತ್ತಿದ್ದರು. ನಹುಷನು ಶಚಿಯನ್ನು ಕೂಡಬೇಕೆಂಬ ಆತುರದಲ್ಲಿ 'ಸರ್ಪ ಸರ್ಪ' (ಬೇಗ ನಡೆ ಬೇಗ ನಡೆ) ಎಂದು ಹೇಳುತ್ತ ಅಗಸ್ತ್ಯನ ತಲೆಯಮೇಲೆ ಕಾಲಿಟ್ಟು ಒದ್ದನು. ಕುಪಿತನಾದ ಅಗಸ್ತ್ಯನು 'ಸರ್ಪೋಭವ' (ಹಾವಿನ ರೂಪನನ್ನು ಧರಿಸು) ಎಂದು ಶಾಪವಿತ್ತ. ಕೂಡಲೆ ನಹುಷ ದೊಡ್ಡ ಸರ್ಪ (ಅಜಗರ) ನಾಗಿ ಕೆಳಕ್ಕೆ ಬಿದ್ದ.

ವಸಿಷ್ಠನ ಶಾಪದಿಂದೆ ಅಷ್ಟವಸುಗಳ್ತೆ ಶಂತನು ತನುಜಾತೆ ಸಾರ್ದುದು :—

ಧರ್ಮಪ್ರಜಾಪತಿಯಿಂದ ದಕ್ಷಪುತ್ರಿಯಾದ ವಸುವೆಂಬುವಳಲ್ಲಿ ಧರ, ಧ್ರುವ, ಸೋಮ, ಅಹ, ಅನಿಲ, ಪ್ರತ್ಯೂಷ ಪ್ರಭಾಸರೆಂಬುದಾಗಿ ಎಂಟುಮಂದಿ ವಸುಗಳು ಜನಿಸಿದರು. ಒಮ್ಮೆ ಇವರೆಂಟುಮಂದಿಯೂ ತಮ್ಮ ಮಡದಿಯರೊಂದಿಗೆ ಸಂಚರಿಸುತ್ತ, ವಸಿಷ್ಠ ಋಷಿಯ ಆಶ್ರಮದ ಬಳಿ ನಂದಿನೀ ಧೇನುವನ್ನು ಕಂಡು ಅಪಹರಿಸತೊಡಗಿ ಭೂಲೋಕದಲ್ಲಿ ಜನಿಸುವಂತೆ ಶಾಪವನ್ನು ಪಡೆದರು. ಆಗ ಶಂತನು ಚಕ್ರವರ್ತಿಯ ಹೆಂಡತಿಯಾಗಿದ್ದ ಗಂಗೆಯಲ್ಲಿ ಮನುಷ್ಯರಾಗಿ ಜನಿಸಿದರು. ಹಿರಿಯನಾದ ಆಪನೆಂಬುವನು ಮೂಲಕಾರಣವಾದುದರಿಂದ ಭೀಷ್ಮಾಚಾರ್ಯನಾಗಿ ಜನಿಸಿ ಬಹುಕಾಲ ಬದುಕಿದ್ದನು. ಮಿಕ್ಕ ಏಳುಮಂದಿಯೂ ಹುಟ್ಟಿದೊಡನೆಯೇ ಸತ್ತು ತಮ್ಮ ಹಿಂದಿನ ದೇಹವನ್ನು ಪಡೆದರು.

ಶುಕ್ರ ಶಾಪದಿಂದೆ ದೊರೆಕೊಂಡುದಲ್ಲವೆ ಯಯಾತಿಗೆ ಯವ್ವನದೊಳ್ ಜರಾಗಮಂ :—

ಯಯಾತಿ ಚಂದ್ರವಂಶದ ನಹುಷನಿಂದ ಪಿತೃಕನ್ಯೆಯಾದ ವಿರಜೆಯೆಂಬಾಕೆಯಲ್ಲಿ ಜನಿಸಿದವನು. ಈತನು ಶುಕ್ರಾಚಾರ್ಯನ ಮಗಳಾದ ದೇವಯಾನಿಯನ್ನೂ ವೃಷಪರ್ವ ರಾಜನಾದ ಶರ್ಮಿಷ್ಠೆಯನ್ನೂ ಶುಕ್ರಾಚಾರ್ಯನ ಆಜ್ಞೆಯಂತೆ ಸ್ವೀಕರಿಸಿದ. ದೇವಯಾನಿಯು ರಾಣಿಯಾಗಿರಬೇಕೆಂತಲೂ ಶರ್ಮಿಷ್ಠಳು ದಾಸಿಯಾಗಿರಬೇಕೆಂತಲೂ ಒಪ್ಪಂದವಾಗಿತ್ತು. ಆದರೆ ಒಂದುದಿನ ಬೇಟೆಯ ಕಾಲದಲ್ಲಿ ಯಯಾತಿಯು ಶರ್ಮಿಷ್ಠಳ ರೂಪಸೌಂದರ್ಯಗಳಿಂದ ಆಕರ್ಷಿಸಲ್ಪಟ್ಟವನಾಗಿ ಅವಳೊಡನೆ ಕೂಡಿ ಇಬ್ಬರು ಮಕ್ಕಳುಗಳನ್ನು ಪಡೆದನು. ಈ ವಿಷಯವು ಮಗಳಾದ ದೇವಯಾನಿಯ ಮೂಲಕ ಶುಕ್ರಾಚಾರ್ಯನಿಗೆ ತಿಳಿಯಿತು. ಕ್ರುದ್ಧನಾದ ಆತನು ಯಯಾತಿಗೆ ಆಜ್ಞಾಭಂಗ ಮಾಡಿದುದಕ್ಕಾಗಿ ತಕ್ಷಣ ಮುಪ್ಪಿದಗುವಂತೆ ಶಾಪವಿತ್ತನು. ತಕ್ಷಣ ಯಯಾತಿಯು ತನ್ನ ಯವ್ವನವನ್ನು ಕಳೆದುಕೊಂಡು ಜರೆಯನ್ನು ಹೊಂದಿದನು.

೬೯. ಕಿಱುಕುಳನೇ = ಕಡಿಮೆಯಾದವನೇ.

೯೨. ಪ್ರತ್ಯುದ್ಭವ=ಪುನಃ ಹುಟ್ಟುವುದು,

೯೩. ಸ್ವೈಪು=ಅದೃಷ್ಟ,

೯೬. ಇರ್ಕೆ ಜೀವಿತ ಸಂಧಾರಣಕ್ಕೆ=ಇನ್ನು ಮೇಲೆ ಪ್ರಾಣವನ್ನು ಧರಿಸಿರುವುದಕ್ಕೆ ಗಮನನೊಂದೆ ಪೊಳಗಾಗಿರೆ=ನಾವು ಅಲ್ಲಿಗೆ ಹೋಗುವುದೊಂದೇ ಉಳಿದಿರಲಾಗಿ

೯೭. ವ|| ಗೃಹರಕ್ಷಕವರ್ಜವಾಗಿ=ಕಾವಲುಗಾರರನ್ನುಳಿದು, ಶೀಘ್ರಗಮನ ವಿಘಾತಹೇತು = ಬೇಗ ಹೋಗುವುದಕ್ಕೆ ಅಡಚಣೆಯನ್ನುಂಟುಮಾಡುವ ಕಾರಣ. ಇರಿಸಲ್ವೇಡಿರ್ದರಂ=ಹಿಂದೆ ಇರಿಸಬೇಕಾದವರನ್ನು

೯೮. ವ|| ವಿಕಲ್ಪಶತಡೋಲಾಧಿರೂಢನಾಗಿ=ನೂರಾರು ಸಂದೇಹಗಳ ಉಯ್ಯಾಲೆಯಲ್ಲಿ ಸೇರಿ

೯೯. ವ|| ಎರ್ದೆಪಡಿದೆಱೆದಂತಾಗೆ=ಎದೆಯ ಬಾಗಿಲು ತೆಗೆದ ಹಾಗಾಗಲು.

೧೦೧. ವ|| ಸಮುಪಜಾತ ಪ್ರತ್ಯಾಶೆ=ಮಗನು ಬದುಕುತ್ತಾನೆಂಬ ಆಶೆಯು ಹುಟ್ಟಿದ್ದ>ಹೊಂದಿದ್ದ,

೧೦೩. ವ|| ಲೆಪ್ಪ=ಮೇಣ.

೧೦೬. ಕೇಸಡಿ=ಕೆಂಪಗಿರುವ ಪಾದ, ಆಕ್ರಂದ=ಅಳುವಿಕೆ,

ವ|| ಪ್ರಜಾಪೀಡಾಪಹರಣಕ್ಷಮ=ಪ್ರಜೆಗಳ ದುಃಖಗಳನ್ನು ಹೋಗಲಾಡಿಸುವ ಶಕ್ತಿಯುಳ್ಳ ವ|| ಅಂತರಿತನಿಜಪೀಡಂ=ತನ್ನ ದುಃಖವನ್ನು ಅಡಗಿಸಿಕೊಂಡ,

೧೦೭. ವ|| ತ್ವದಾತ್ಮಜಾತ ಜೀವಿತಪ್ರಲಬ್ಧಭ್ಯುದಯ ಮಹೋತ್ಸವೆ=ನಿನ್ನ ಮಗನು ಜೀವಂತನಾಗುವುದರಿಂದ ಉಂಟಾಗುವ ಅಭಿವೃದ್ಧಿಯನ್ನೇ ಮಹಾಸಂತೋಷವನ್ನಾಗಿ ಉಳ್ಳ

೧೦೮. ಮನ್ಯು=ದುಃಖ,

೧೦೯. ಮದನ್ವಯ ಜೀವ ಪ್ರತಿಲಂಭನಹೇತು = ನನ್ನ ವಂಶದ ಜೀವನಕ್ಕೆ ಆಶ್ರಯ ಕಾರಣಳಾದ>ಜೀವನಾಧಾರವಾದ,

೧೧೧. ಪ್ರತಿಪತ್ತಿ ಮೂಢೆ=ಜ್ಞಾನಶೂನ್ಯೆ, ನಿಚ್ಚೈದೆ=ನಿತ್ಯ ಸುಮಂಗಲಿ,

೧೧೨. ರುದ್ಧದೊಳ್=ನಾವು ಸಮೀಪದಲ್ಲಿರುವುದರಿಂದುಂಟಾದ ನಿರೋಧದಿಂದ ವಧು=ಕಾದಂಬರಿಯ. ಅಮೃತ ಮೂರ್ತಿಯೆ=ಅಮೃತ ಮೂರ್ತಿ ಸ್ವರೂಪಳಾದ ಕಾದಂಬರಿಯೇ,

೧೧೩. ಮಚ್ಚಿತ್ತದೊಳ್ ತಾಳ್ದಿದುದಂ=ನನ್ನ ಮನಸ್ಸಿನಲ್ಲಿ ಧರಿಸಿರುವುದನ್ನು

ಚಂದ್ರಾಪೀಡ ಕಾದಂಬರಿಯರ ಪುನಸ್ಸಮಾಗಮ

೧. ಮಂದಸ್ಮಿತಾಸ್ಯರ್=ಹುಸಿನಗೆಯಿಂದ ಕೂಡಿದ ಮುಖವುಳ್ಳವರು.

೨. ಆವೊಂ=ಯಾವ ಪುಂಡರೀಕನು,

೩. ನಿಜಾವಿನಯ ಶ್ರವಣಲಜ್ಜ=ನನ್ನ ಅವಿನಯದ ವಿಷಯವಾಗಿ ಕೇಳಿಮದ

ರಿಂದುಂಟಾದ ನಾಚಿಕೆ

೫. ಜಾತಿಸ್ಮರತೆ ವಿರಕ್ತಿಗೆ ಹೇತುವೆನುತಿರ್ಪರ್=ಪೂರ್ವ ಜನ್ಮಸ್ಮರಣೆ ವೈರಾಗ್ಯಕ್ಕೆ ಕಾರಣವೆಂದು ಹೇಳುತ್ತಾರೆ.

ವ॥ ಮದ್ವಿಪತ್ತಿಶ್ರವಣಮಾತ್ರದಿಂ=ನನ್ನ ನಾಶದ ವಿಷಯವನ್ನು ಕೇಳಿದ ಮಾತ್ರದಿಂದಲೇ

೬. ತರಳತೆ=ಚಾಂಚಲ್ಯ,

೭. ತನುವಿಂದಂ....ನೆಲೆವಿಡಿಯದಣಂಬಾರದೆಂಬನ್ನೆಗಂ=ಶರೀರದಿಂದ ಜೀವವು ಹೋಗಲಾಗಿ ಅದನ್ನು ತಡೆದು ನಿಲ್ಲಿಸಿಕೊಳ್ಳಲಾಗುವುದಿಲ್ಲ ಎನ್ನುವಾಗ. ತನ್ಮುನಿಗೆ=ಆ ಋಷಿಯಾದ ಪುಂಡರೀಕನಿಗೆ, ಅಂತಪ್ಪೊಂದು ಕಾಮಾತುರತೆ = ಅಂಥಾದ್ದೊಂದು ಕಾಮಾತುರತ್ವವು ಏತಱಿಂ ಸಮನಿಸಿತ್ತು. ನಾಕಸಂಭೂತ=ಸ್ವರ್ಗದಲ್ಲಿ ಹುಟ್ಟಿದವನು.

೮. ಕಾಮದ ಮೋಹದ ಮೊದಲ್=ಕಾಮಮೋಹಗಳ ಉತ್ಪತ್ತಿ ಸ್ಥಾನ,

೯. ಓದಿತು=ಓದಲ್ಪಟ್ಟಿತು > ಉಕ್ತವಾಗಿದೆ, ಯಾದೃಶೋಜಗತಿಜಾಯತೆ ಪುನಸ್ತಾದೃಶೋಭವತಿ=ಜಗತ್ತಿನಲ್ಲಿ ಯಾವ ರೀತಿ ಹುಟ್ಟುತ್ತದೋ ಪುನಃ ಆ ರೀತಿಯಾಗುತ್ತದೆ.

೧೦. ಆಯುರವಸಾನದೊಳ್=ಆಯುಸ್ಸಿನ ಕೊನೆಯಲ್ಲಿ, ಅಕ್ಷಯಾಯುಷ್ಯೋನ್ನತಿಯಂ=ನಾಶವಾಗದ ಆಯುಸ್ಸಿನ ವೈಭವವನ್ನು ಅಂದರೆ ಚಿರಾಯುಷ್ಯವನ್ನು,

೧೧. ಸರ್ವಾಕ್ಷಮಮೆನಿಪುದಱಿಕೊಳ್=ಯಾವ ಕಾರ್ಯಕ್ಕೂ ಅಸಮರ್ಥವಾದ, ಸಾರ್ಗುಂ=ಪಡೆಯುತ್ತದೆ. ಮುಕ್ತತಂದ್ರ=ಬೇಸರಿಕೆಯಿಲ್ಲದ,ಶ್ರಮರಹಿತನಾದ,

೧೩. ಗರಿಷ್ಠ=ಶ್ರೇಷ್ಠ,

ವ॥ ಕಂಟಕಿತಕಾಯರ್=ರೋಮಾಂಚಿತ ಶರೀರವುಳ್ಳವರು,

೧೫. ಮಾನುಷ್ಯಮಂ=ಮನುಷ್ಯ ಜನ್ಮವನ್ನು, ಪಡೆಯಲ್ಬಾರದು=ಪಡೆಯುವುದಕ್ಕೆ ಸಾಧ್ಯವಿಲ್ಲ. ಪಡೆಯಲ್‌ಬರ್ಕುಂ=ಪಡೆಯುವುದಕ್ಕೆ ಸಾಧ್ಯವಾದೀತು.

೧೭. ಪರ್ಣಕುಟೀರಾಂತರಮಂ=ಪರ್ಣಶಾಲೆಯ ಒಳಭಾಗವನ್ನು,

೧೮. ವ॥ ಉತ್ಪನ್ನಪಕ್ಷನಾದಂತೆ = ಹೊಸದಾಗಿ ಗರಿ ಮೂಡಿದ ಹಾಗೆ, ತಾತಪಾದ=ಪೂಜ್ಯನಾದ ತಂದೆ,

೧೯. ಪರಿಪಟ್ಟು=ಓಡಿಬಂದು

೨೦. ಸೇದೆವಟ್ಟಂಗಮಂ=ಬಳಲಿದ ಶರೀರವನ್ನು

೨೧. ಕಿಱಿಳನಂತಿರಲ್=ಸಾಮಾನ್ಯ ಮನುಷ್ಯನ ಹಾಗಿರಲು,

೨೨. ಸಂಸಾರದ ತೊಡರಂ ಪಱಿದೈ = ಸಂಸಾರದ ಕಟ್ಟನ್ನು ಹರಿದು ಹಾಕಿದ್ದೀಯೆ.

೨೪. ನಮುಗಾದಂದಮಂ = ನಮುಗಾದವಸ್ಥೆಯನ್ನು, ದಿವ್ಯಚಕ್ಷು=ಎಲ್ಲವನು ಒಳಗಣ್ಣಿನಿಂದ ನೋಡುವ ತ್ರಿಕಾಲಜ್ಞಾನ.

೨೫. ಸೆಡೆವೈ=ಹೆದರುತ್ತೀಯೆ, ಆಯುಷ್ಕಾಮಯಜ್ಞ=ಆಯುಸ್ಸು ಹೆಚ್ಚುವ ಉದ್ದೇಶದಿಂದ ಮಾಡುವ ಯಜ್ಞ.

೨೭. ವ|| ಪೊಟ್ಟರೆ=ಹೊತ್ತಾರೆ>ಪ್ರಾತಃಕಾಲ,

೨೮. ಅನೂನ ಹರ್ಷವನುತಾಳುತ ಪೋಗು=ಕಡಿಮೆಯಿಲ್ಲದ (ಸಂಪೂರ್ಣ) ಸಂತೋಷವನ್ನು ಹೊಂದುತ್ತ ಹೋಗು.

೨೯. ಸ್ವಸ್ತಿವಾದ=ಆಶೀರ್ವಾದ (ಒಳ್ಳೆಯ ಮಾತು)

೩೦. ದಂತುರವಾದ=ಕೆದರಿದ,

ವ|| ಕುದುರೆವರಿಜು=ಕುದುರೆಯ ಆಕೃತಿ, ನೆತ್ತರುಗುವ=ರಕ್ತ ಸುರಿಯುತ್ತಿರುವ, ಏರ್ಗಳಂ=ಗಾಯಗಳನ್ನು, ಚಮ್ಮಟಿಗೆಗುತ್ತು=ಚಾವಟಿಯ ಪೆಟ್ಟು, ದಡ್ಡು=ಜಿಡ್ಡು, ತೊವಲ್ಪೊರಜೆ=ಚರ್ಮದಹಗ್ಗ.

೩೨. ಕ್ಷಮನಾದೆಂ=ಶಕ್ತನಾಗಿದ್ದೇನೆ.

೩೪. ವ|| ನೇಣ್ಬಲೆ=ಹಗ್ಗದ ಬಲೆ, ಕೇವಲ ಕಾಲಾಯಸ ಪರಮಾಣುಗಳಿಂ=ಬರೀ ಕಬ್ಬಿಣದ ಪರಮಾಣುಗಳಿಂದಲೇ

೪೦. ವ|| ಬೆಟ್ಟವೆಟ್ಟನೆ=ಕಠಿಣವಾಗಿ

೪೧. ವ|| ಜೀರ್ಣವಾಗುರಾಗ್ರಥನವ್ಯಗ್ರರ್=ಹರಿದು ಹೋದ ಬಲೆಯನ್ನು ಕಟ್ಟಿ ಸರಿ ಮಾಡುವುದರಲ್ಲಿ ಆಸಕ್ತರಾದ, ಕೌಲೇಯಕ=ನಾಯಿ, ಕಿಱುಕವ್ವರೆಗೊಳ್ವ=ಸ್ವಲ್ಪ ಹೊಗೆಯಾಡುತ್ತಿರುವ, ಕೌಱವೊಗೆಯಿಂ=ಕೆಟ್ಟವಾಸನೆಯುಳ್ಳ ಹೊಗೆಯಿಂದ, ಬೇಡವಟ್ಟ=ಕಿರಾತರ ನಿವಾಸಸ್ಥಾನ.

೪೩. ತಕ್ಕುದಲ್ತು=ಯೋಗ್ಯವಲ್ಲ, ಪೊಲೆವಟ್ಟು=ಹೊಲೆಯರ ಬೀಡು,

೪೪. ವ|| ರೋಮಂಬೊರೆದ = ಕೂದಲು ಅಂಟಿಕೊಂಡಿದ್ದ, ಪಂದೊವಲ=ಹಸಿಯ ಚರ್ಮದ, ತಗೆ=ತಡೆ, ಪಡಿಯಂ ಕೆತ್ತಿ=ಬಾಗಿಲನ್ನು ಮುಚ್ಚಿ, ಪಡಿಕೆ=ಹಾಸಿಗೆ,

೪೯. ಪಕ್ಕಣ=ಶಬರರ ನಿವಾಸ.

೫೮. ವ|| ಜಿಱೂಬ್ಬು=ಹಿಳುಕು, ಆಲಿಗೋಡುವ=ಶೈತ್ಯವನ್ನುಂಟುಮಾಡುವ

೫೯. ಮಹಾತ್ಮನಾಂ ಕಿಂ ನದೇಯಂ=ಮಹಾತ್ಮರಿಂದ ಕೊಡದಿರುವುದು ಯಾವುದಿದೆ.

೭೨. ಪರಿರಂಭಣ=ಆಲಿಂಗನ,

೮೭. ವ|| ಅಭಿವಾಂಛಿತ ಪ್ರಾಣೇಶ್ವರಪ್ರಾಪ್ತಿ=ತಾನು ಇಷ್ಟಪಟ್ಟ ಪತಿಯನ್ನು ಪಡೆಯುವಿಕೆ.

೯೫. ಸಂಗತಿವೆತ್ತು=ಕೂಡಿಕೊಂಡು, ತ್ರಿಲೋಕೀಸಹಚರಿ=ಮೂರು ಲೋಕಗಳಲ್ಲಿಯೂ ಸಂಚರಿಸುವವಳು.

೯೭. ಕಾಳಿಂಗಾಭಿದೇಯಪ್ರವಿದತಂ=ಕಾಳಿಂಗವೆಂಬ ಹೆಸರಿನಿಂದ ಪ್ರಖ್ಯಾತವಾದುದು. ಅತ್ಯುತ್ಸವದಿಂ ಇತ್ತಂ ವಿದ್ವತ್ಸಭಾಮಂಡಲಿ ತಣಿವಿನೆಗಂ ಭೋಜರಾಜಕ್ಷಿತೀ

ಶಂ=ವಿದ್ವತ್ಸಭಾಮಂಡಲಿ ತೃಪ್ತಿಪಡುವವರೆಗೆ ಅಶ್ವದಾನವನ್ನು ಭೋಜರಾಜ ಮಾಡಿದನು. ಈ ರಾಜನಾರೆಂಬುದು ತಿಳಿದಿಲ್ಲ.

೯೭. ಕೃತಿಪಂ=ಕೃತಿಗೆ ಒಡೆಯ> ಕವಿ >ಕೃತಿಕಾರ, ಇನನಟುಗೆವರಂ=ಸೂರ್ಯ ನಾಶವಾಗುವವರೆಗೆ.

೯೮. ಈ ಪದ್ಯದಲ್ಲಿ ನಾಗವರ್ಮನ ಕಾದಂಬರಿಯ ಶ್ರೇಷ್ಠತೆಯ ವರ್ಣನೆಯೊಂದಿಗೆ ಗ್ರಂಥ ಸಮಾಪ್ತಿಯಾಗಿದೆ.

ಕರ್ಣಾಟಕ ಕಾದಂಬರೀ ದರ್ಪಣ ಮುಗಿದುದು

ಕರ್ಣಾಟಕ ಕಾದಂಬರಿಯ ಪದ್ಯಗಳ ಅಕಾರಾದಿ

೧, ೧೪೯, ೩೧	ಬಸವೞಿದು ಕಣ್ಣನೀರಿಂ	ಪೂ ೧೮೧, ೪೩
೯, ೧೦೭, ೨೮೨	ಬಸುಱೊಳ್ಪಂದಂ ನವ್ಮೊಂ	ಉ ೬೭೭, ೩೮೩
೮, ೧೨೩, ೨೪೫	ಬಳಸಿದ ಬಚ್ಚಲಿಂ ಮಲಯಜದ್ರವದಿಂ	ಉ ೪೫೮, ೩೩೦
೫, ೧೬೫, ೧೫೧	ಬಳಸಿ ನಿಜಕಿರಣಪಾಶದೆ	ಪೂ ೯೧೪, ೧೯೫
೧, ೨೧೫, ೪೪	ಬಳಸಿಯೆ ನೋಡುತಿರ್ಪ ಹರಿಣಂಗಳ	ಪೂ ೨೫೭, ೫೯
೧, ೬೯, ೧೪	ಬಳಸಿರ್ದಭ್ರಾಳಿಯಿಂದಂ ತುಹಿನಗಿರಿ	ಪೂ ೮೦, ೧೮
೧, ೧೭೦, ೩೫	ಬಳಿದು ಪೊಱಮುಯ್ವುವರೆಗಂ	ಪೂ ೨೦೩, ೪೮
೧೦, ೧೯, ೨೮೭	ಬೞಲಿ ಪೆಗಲಿಂ ಚಂಚದ್ವಲ್ಕಾಂಚಲಂ	ಉ ೭೧೫, ೩೯೧
೫, ೨೧೦, ೧೬೦	ಬೞಿಕೆ ಪದಮಂ ಕಮಂಡಲು	ಪೂ ೯೬೯, ೨೦೭
೧, ೩, ೧	ಬಾಣಂ ವಲ್ಲಭನಕ್ಕುಮೆಂದು ಪಡೆದಾ	ಪೂ ೩, ೨
೨, ೬೨, ೬೦	ಬಾರೆಲೆ ತಂದೆ ಬಾರರಸ ಬಾ ಪೊಱವಾಟ್ದನೆ	ಪೂ ೩೬೧, ೮೦
೧, ೬೧, ೧೨	ಬಿಗಿದೊಗೆದಪ್ಪಿತೋರ್ಪ ಕುಚಮಂಡಳಮಂ	ಪೂ ೬೧, ೧೭
೬, ೪೨, ೧೬೯	ಬಿಡದಡರಿ ಕೊರ್ಬಿ ಕುಚಯುಗ	ಉ ೯, ೨೨೦
೯, ೧೦೬, ೨೮೧	ಬಿಡದಾಲಿಂಗಿಸಿ ಪುತ್ರನಂ ಪಡೆದು	ಉ ೬೭೫, ೩೮೨
೯, ೪೮, ೨೬೬	ಬಿಡು ನಿಜಮನ್ಯುಬಾಷ್ಪಭರಮಂ	ಉ ೫೮೭, ೩೬೧
೧೦, ೨೫, ೨೮೯	ಬಿಡು ನೀನಂಜಿಕೆಯಂ ಕಪಿಂಜಲಕ	ಉ ೭೨೪, ೩೯೨
೩, ೯೦, ೯೩	ಬಿಡೆ ಬಿಡಿಸುವಂತೆ ನೃಪರೊ	ಪೂ ೫೫೭, ೧೨೨
೫, ೧೪೪, ೧೪೭	ಬಿದಿ ಮತ್ತೇನನಿದಂ ತೋ	ಪೂ ೮೮೮, ೧೯೦
೧೦, ೬೫, ೨೯೮	ಬಿರಯಿಗಳಂ ಬೆರ್ಚಿಸಲಿದೆ	ಉ ೭೮೨,
೯, ೫, ೨೫೫	ಬಿಸಿನೀಪತ್ರಂಗಳಂ ಭೋಂಕನೆ ತೊಲಗಿಸಿ	ಉ ೫೧೬, ೩೪೩
೭, ೧೭, ೨೦೨	ಬಿಸಿಲೆಲ್ಲ ಪಸಲೆಗವಿದುದು	ಉ ೨೦೯, ೨೬೪
೬, ೧೧೬, ೧೮೫	ಬಿಸಿಲೆಲ್ಲಂ ಬಿಸನಾಳಜಾಲಕದಿನಾಗಳ್	ಉ ೧೦೩, ೨೪೨
೧, ೧೦೭, ೨೩	ಬಿಸಿಲೆಸಕದಿಂದ ಕೊರಗಿದ	ಪೂ ೧೩೦, ೩೧
೧, ೧೬೧, ೩೫	ಬಿಸುಟೆಂ ಸಮಸ್ತ ವಿಷಯದ	ಪೂ ೨೦೪, ೪೮
೨, ೧೭, ೫೧	ಬಿಸುಟು ಸರೋಜಿನಿಗಳನೇ	ಪೂ ೩೦೮, ೬೯
೩ ,೧೦೩, ೯೮	ಬಿಳಿಯ ಮುಗುಳ್ಗಳಂ ಸುರಿವ ಕಲ್ಪ	ಪೂ ೫೮೯, ೧೨೯
೧, ೪೨, ೮	ಬೆಟ್ಟತಿದು ನಾಡೆಯುಂ ಮಣಿ	ಪೂ ೪೫, ೧೦
೬, ೭೯, ೧೭೭	ಬೆಮರಿಂ ಮುಳುಗಿದಪೆಂ ಸಂ	ಉ ೫೭, ೨೩೦
೬, ೧೦೧, ೧೮೨	ಬೆರಲ ಬೆಮರಿಂದೆ ನಾಂದಪು	ಉ ೮೫, ೨೩೭
೧, ೧೫೩, ೩೨	ಬೆಱೆತುೞಿದೆನಾಗಿಯುಂ ತನು	ಪೂ ೧೮೫, ೪೪
೨, ೬೮, ೬೧	ಬೆಸಗೊಳ್ವಳ್ ಋಷಿಸಂಘಮೆಂನಯ	ಪೂ ೩೬೮, ೮೧
೫,೪೫, ೧೨೭	ಬೆಸಗೊಳ್ವುದಱಿಂದಿದನು	ಪೂ ೭೬೧, ೧೬೩

೧,೩೬, ೭	ಮುಸುಕಿದ ಮೆಯ್ಯಿಂ ಗುಲ್ಫಾ	ಪೂ	೩೯, ೯
೫, ೧೩೫, ೧೪೫	ಮುಳಿದು ತಿಮಿರೇಭಕುಂಭ	ಪೂ	೮೯೭, ೧೮೭
೬, ೧೪೫, ೧೯೦	ಮುಟ್ಟುಗದು ಗಡಿನ್ನುಮೆನುತಂ	ಉ	೧೩೯, ೨೪೯
೧, ೯೪, ೧೯	ಮೃಗಯಾನಿತಾಂತಹತಿಯಿಂ	ಪೂ	೧೧೨, ೨೬
೨, ೩೯, ೫೬	ಮೃಗಲಾಂಛನಮಂಡಳದೊ	ಪೂ	೩೩೫, ೭೪
೪, ೬೧, ೧೧೪	ಮೃದುಮಧುರವಲ್ಲಕೀಗೇ	ಪೂ	೬೮೭, ೧೪೮
೮, ೪೨, ೨೨೩	ಮೆಲ್ಲಿದುವಪ್ಪ ವಾರಿಕಣಜಾಲದೆ	ಉ	೩೨೮, ೨೯೫
೮, ೯೫, ೨೩೮	ಮೇಗೆನಿಸಿರ್ದದೊಂದು ಸಕಲಗ್ರಹ	ಉ	೪೧೯, ೩೧೯
೩, ೯, ೭೫	ಮೊಗದಿಂದಂ ನೇರ್ಪನಾಳ್ದಂತುರದಿ	ಪೂ	೪೫೬, ೧೦೦
೫, ೨೩, ೨೧೨	ಮೊಗಮೀಸೆ ಬಾರದಿರ್ದಂ	ಪೂ	೭೩೪, ೧೫೬
೬, ೪೫, ೧೭೦	ಮೊಗಸಿದಪುದೆತ್ತಲುಂ	ಉ	೧೨, ೨೨೧
೮, ೫೮, ೨೨೭	ಮೊದಲಿಂ ಗಂಭೀರಭಾವಂ ತನಗೆ	ಉ	೩೫೪, ೩೦೨
೬, ೯೨, ೧೮೦	ಮೊದಲೀಯರಸನನಾಂ ಕಾ	ಉ	೭೪, ೨೩೪
೫, ೨೦೧, ೧೫೮	ಮೊದಲೊಳ್ಗೌರವಮಂ ಮಾ	ಪೂ	೯೫೯, ೨೦೫
೮, ೬೭, ೨೩೧	ಮೊದಲೊಳ್ ತತ್ಕಿನ್ನರದ್ವಂದ್ವದ	ಉ	೩೭೨, ೩೦೭
೩, ೧೧೦, ೯೫	ಮೊದಲೊಳ್ ತಮ್ಮನೆ ನೋಡಲಿತ್ತ	ಪೂ	೫೬೯, ೧೨೪
೧, ೧, ೧೬೧	ಮೊದಲೊಳ್ನಿನಗಾಂ ಪೇೞ್ದಿಮ್ಮ	ಪೂ	೯೨, ೨೦೭
೧೦, ೨೨, ೨೮೮	ಮೊದಲೊಳ್ಪೊಱಿದ್ದೈ ಸಂಸಾ	ಉ	೭೧೯, ೩೯೨
೨, ೧೧೭, ೭೧	ಮೊದಲೊಳ್ಬಂದಳ್ಕಱಿಂದೀ	ಪೂ	೪೩೧, ೯೫
೩, ೮೭, ೯೨	ಮೊದಲೊಳ್ ರಾಜ್ಯಾಭಿಷೇಕಪ್ರಬಲ	ಪೂ	೫೫೪, ೧೨೧
೫, ೨೦, ೧೨೧	ಮೊದಲೊಳ್ ವಾಗ್ದೇವಿಯನೊಲಿ	ಪೂ	೭೩೧, ೧೫೬
೬, ೧೨೩, ೧೮೭	ಮೊದಲೊಳ್ಸಂಭಾಷಣಂಗೆಯ್ವುದೆ ವಲಂ	ಉ	೧೧೨, ೨೪೪
೫, ೮೦, ೧೩೩	ಮೊದಲೊಳ್ಸೊಕ್ಕಿದನಂಗೆ ಕಳ್	ಪೂ	೮೦೩, ೧೭೧
೫, ೧೫೧, ೧೪೮	ಮೊದಲೊಳೆ ಕೆತ್ತಿದತ್ತು ಬಲಗಣ್	ಪೂ	೮೯೯, ೧೯೨
೮, ೧೩, ೨೩೫	ಮೊದಲೊಳೆ ಬಂದು ಕಾಣಲೊಡನಂತಿರೆ	ಉ	೪೦೦, ೩೧೪
೧, ೧೯೧, ೪೦	ಯತಿಗಳನನೇಕರಂ ತ	ಪೂ	೨೩೩, ೫೫
೧, ೨೧೧, ೪೩	ಯತಿಪತಿತಪಃಪ್ರಭಾವೋ	ಪೂ	೨೫೩, ೫೯
೭, ೩೧, ೨೦೫	ಯುವತಿ ಹಿಮೋಮಲಪ್ರತಿಮೆಯಂ	ಉ	೨೨೭, ೨೬೮
೮, ೫೦, ೨೨೫	ಯುವತೀರತ್ನಕ್ಕೆ ನಿನ್ನಾಕೃತಿಯೊಳೆ ಸತತಂ	ಉ	೩೪೧, ೨೯೯
೮, ೧೫೨, ೨೫೧	ಯುವರಾಜಂಗಲ್ಲದೆ ಮಗ	ಉ	೪೯೮, ೩೩೯
೭, ೫೦, ೨೦೯	ಯುವರಾಜನೃಪಂ ನಯವಿನ	ಉ	೨೫೭, ೨೭೪
೩, ೬೧, ೮೭	ಯುವರಾಜಪಟ್ಟಬಂಧೋ	ಪೂ	೫೨೫, ೧೧೫

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
೨೯	೧೨	ಪಿಂಛಾಪತ್ರನುಂ	ಪಿಂಛಾತಪತ್ರನುಂ
೪೨	೨	ನೆಯ್ದುನೆಂಬಿನೆಗಂ	ನೆಯ್ದುವಿಂಬೆನೆಗಂ
೫೨	೨೫	ಆಯುುತಿಭಂಗಂ	ಆಯತಿ ಭಂಗಂ
೫೭	೪	ಅಱದಪೆನಿಲೀಗಳಂ	ಅಱದಪೆನಿಲ್ಲೀಗಳಂ
೭೦	೨೭	ಮೆಂದೆಕೊಂಡಂ	ಮೆಂದೆಳಕೊಂಡಂ
೭೧	೭	ಪಿಷ್ಟಾತಪಾಂಸು	ಪಿಷ್ಟಾತಕಪಾಂಸು
೭೫	೨೪	ಬಂದುದಿಂದ್ರಾಯುುಧ್ವಾಶಂ	ಬಂದುದಿಂದ್ರಾಯುುಧಾಶ್ವಂ
೮೨	೨೦	ತಾಂಬಾರಾಚಲವು	ತಾಂಬರಾಂಚಲವು
೧೦೩	೨	ಮುಮುನೇಜ	ಮುಮುನೇಜಿ
೧೪೩	೧೭	ಕಿನ್ನದ್ವಯ	ಕಿನ್ನರ ದ್ವಯ
೧೨೫	೧೭	ತೇಜಿಂಬೊಳೆಯೆ	ತೆಜಿಂಬೊಳೆಯೆ
೧೩೩	೫	ವ್ಕಲವಸನ್ಯೆ	ಲ್ಕಲವಸನ್ಯೆ
೧೩೪	೧	ಪುಣ್ಯೊದಯಂ	ಪುಣ್ಯೋದಯಂ
೧೩೯	೧೦	ಕೈಕೊಂಡತೆಯುಂ	ಕೈಕೊಂಡಂತೆಯುಂ
೧೪೭	೧೧	ಚಂದನದಣ್ಪುನಿಂ	ಚಂದನದಣ್ಪೆನಿಂ
೧೪೮	೧೫	ಬೆಳರ್ಪಿ	ಬೆಳರ್ಪ
೧೪೯	೧೩	ನಾಡುತಿರ್ಪೆ ನೀ	ನಾಡುತಿರ್ಪೆನೀ
೧೫೦	೧೯	ದಳೋತ್ತರಿಯನುಂ	ದಳೋತ್ತರೀಯನುಂ
೧೫೧	೫	ನಿಜಕಿರಿಣ	ನಿಜಕಿರಣ
೧೫೨	೬	ಸುಣ್ಪನೆಂಬಟಿಲ	ಸುಣ್ಪೆನೆಂಬಟಿಲ
,,	,,	ಸ್ಯೆರುಣೆಯೋ	ಸ್ಯೆರಣೆಯೋ
೧೫೯	೧	ಫಲಮಿರ್ಪಡೆ	ಫಲಮಿರ್ಪೆಡೆ
,,	೧೭	ನಿರ್ಝುವಾರಿಯಂ	ನಿರ್ಝುರವಾರಿಯಂ
೧೬೧	೨೩	ವೃತ್ತಾತಮಂ	ವೃತ್ತಾಂತಮಂ
೧೮೧	೧೯	ಭೋಕೆನಲೆ	ಭೋಂಕೆನಲೆ
೧೮೩	೨೦	ಪ್ರಾರ್ಥಿಮಾ	ಪ್ರಾರ್ಥಿತಮಾ
೧೮೪	೧೬	ಮುುಯ್ಯಿನ	ಮುುಯ್ವಿನ
೧೮೭	೨೨	ಕಾರಕಣೆ	ಕಾರಕೆಣೆ
೧೮೯	೧೯	ದಪ್ಪಳನೆ	ದಪ್ಪಳೆನೆ
೧೯೫	೨೨	ದಾನಮುನಲಂಕರಿಸಿ	ದಾಸನಮುನಲಂಕರಿಸಿ
೨೧೧	೨೧	ಕಾಣಲಾತ್ತಾಗಳ್	ಕಾಣಲಾದತ್ತಾಗಳ್
೨೧೮	೧	ಬಿನ್ನವಂ	ಬಿನ್ನಪಂ

ಪುಟ	ಪಂಕ್ತಿ	ತಪ್ಪು	ಒಪ್ಪು
೨೨೧	೭	ನಪ್ಪುಕೆಯು	ನಪ್ಪುಕೆಯ್ದು
೨೪೨	೨೭	ಷೇಯಿಮೆಂಬಿನೆಗಂ	ಪೇೞಿಯೆಂಬಿನೆಗಂ
೨೪೫	೯	೨೨೨	೧೨೨
೨೫೨	೧೮	ಕೆನಲೇನಾನವ	ಕೆನಲೇನಾಸುವ
೨೫೯	೧೩	ನಿವೇಶಿತು	ನಿವೇಶಿತ
೨೬೪	೯	ಮಯೂಖರಿಂದೆ	ಮಯೂಖದಿಂದೆ
೨೬೫	೧೮	ಚಂದ್ರಾಕನಾ	ಚಂದ್ರಾಂಕನಾ
೨೬೯	೨೦	ಪುಂಡರೀಕೋಜ್ಬಲ	ಪುಂಡರೀಕೋಜ್ವಲ
೨೭೧	೧೫	ಮುಗುಟ್ದ	ಮುಗುೞ್ದ
೨೭೪	೩೦	ಸೀರದವಪ್ಪ	ನೀರದವಪ್ಪ
೨೭೮	೨೧	ಪಡೆದಾ	ಪದೆದಾ
೨೭೯	೧	ಉೞಿದುವವೇನುಂ	ಉೞಿದುವುವೇನುಂ
೨೭೯	೨೨	ಚಂದ್ರಾಪೀಡಂ	ಚಂದ್ರಾಪೀಡ
೨೮೧	೨೦	ಕಾಲ್ವೆಱಗು	ಕಾಲ್ಗೆಱಗು
೨೮೪	೭	ಶ್ರಿಶ್ವೇತಕೇತು	ಶ್ರೀಶ್ವೇತಕೇತು
೨೯೪	೧	ಗಿಳಿಯಿಂದು	ಗಿಳಿಯೆಂದು
,,	೨	ದೊಡೆಮೆಂತುಂ	ದೊಡಮೆಂತುಂ
,,	೭	ಮಿಱಿದಂತಾ	ಮೀಱಿದಂತಾ
೩೦೧	೧೨	ಸುಹೃತ್ಸ್ನಹದಿಂ	ಸುಹೃತ್ಸ್ನೇಹದಿಂ
೩೦೨	೨೪	ಸುಖೋತ್ಸಲ	ಸುಖೋತ್ಸಲ್ಲ
೩೦೩	೩	ನೆಗಟ್ಚಿ	ನೆಗೞ್ಚಿ
೩೦೬	೪	೮೮	೯೮
೩೩೬	೧೯	ಕಪ್ಪ	ಕಷ್ಟ
೩೫೭	೩೧	ವಸುಧಾದಿಪ	ವಸುಧಾಧಿಪ